# ಕ್ರಿಸ್ತನ ಜೀವಿತ

## ಭಾಗ–1



# ಕ್ರಿಸ್ತನ ಜೀವಿತ

## ಪಾಸ್ಟರ್ ರಸಲ್ಲರ ಲೇಖನಿಯಿಂದ ಬಂದ
## ಕ್ರಿಸ್ತನ ಜೀವನ ಚರಿತ್ರೆ

ಸತ್ಯವೇದ ವಿದ್ಯಾರ್ಥಿಗಳ
ಒಂದು ಪ್ರಕಟಣೆ

For Private Circulation Only

NOT FOR SALE




Jesus Loves
Ministry

For free indepth Bible study contact

#1 BETHESDA, 1st floor, Janani Enclave, 1st cross, survey no 108/3,
Karivobanahalli, Andrahalli main road, Bangalore 560091

8867768876 rajudawn1874@gmail.com

Available Languages : Kannada, English, Hindi, Tamil and Telugu

# ಮುನ್ನುಡಿ

ಯೇಸುವು ತನ್ನ ಹಿಂಬಾಲಕರಾಗಬೇಕೆಂದು ತನ್ನ ಮೊದಲ ಶಿಷ್ಯರನ್ನು ಕರೆದಾಗ ಅವರು ತಮ್ಮ ಜೀವಿತದಲ್ಲಿ ಒಂದು ಆಶ್ಚರ್ಯಕರವಾದ ಬದಲಾವಣೆಗಳ ಅನುಭವ ಪಡೆಯಬೇಕಿತ್ತು. ವೈಯಕ್ತಿಕವಾದ ಯಜ್ಞಾರ್ಪಣೆಯ ಜೀವಿತವನ್ನು ನಡೆಸುವುದಕ್ಕಾಗಿ ಅವರು ತಮ್ಮ ಮೀನುಗಾರರ ಹಾಗೂ ಸುಂಕದವರ ವೃತ್ತಿಯನ್ನು ತ್ಯಜಿಸಬೇಕಾಯಿತು. ಗುರುವಿನ ಪಾದದ ಬಳಿಯಲ್ಲಿ ಕುಳಿತು ಆತನಿಂದಲೇ ನೇರವಾಗಿ ಕಲಿತುಕೊಳ್ಳುವುದು ಅವರಿಗೆ ಒಂದು ಅದ್ಭುತವಾದ ಅನುಭವವಾಗಿರಬೇಕು. ಅಪೋಸ್ತಲರು ಆದಿ ಕ್ರೈಸ್ತ ಸಭೆಯ ನಾಯಕರುಗಳಾಗಿ ಬೆಳೆಯುತ್ತಿರಲು, ಆತನ ವಿಶೇಷ ವರ್ತನೆಗಳು ಹಾಗೂ ಆತನು ಜನರೊಂದಿಗೆ ನಡಕೊಳ್ಳುವ ವಿಧಾನಗಳು ಅವರಿಗೆ ಒಂದು ಮಾದರಿಯಾದವು. ಯೇಸುವಿನ ಮಾತನ್ನು ಕೇಳುವುದು ಮಾತ್ರವಲ್ಲದೆ ಆತನು ನಡೆಸಿದ ತನ್ನ ಪ್ರತಿಷ್ಠಾರ್ಪಿತವಾದ ಜೀವನದ ರೀತಿಗಳಿಗೆ ಸಾಕ್ಷಿಗಳಾಗುವುದು ಸಹ ಅವರಿಗೆ ಮುಖ್ಯವಾಗಿತ್ತು. ಆತನ ಮಾತಿನ ಸ್ವರಶೈಲಿಯು ಸಹ ಅವರ ಹೃದಯ ಮತ್ತು ಮನಸ್ಸಿನ ಮೇಲೆ ಮಹತ್ತರವಾದ ಪರಿಣಾಮ ಬೀರಿರಬೇಕು.

ಯೇಸುವಿನೊಂದಿಗೆ ಜೀವಿಸುತ್ತಿದ್ದವರಿಗೆ ಆತನ ಜೀವಿತವು ಪರಿಣಾಮ ಬೀರಿದ್ದಂತೆ ತಮಗೂ ಪರಿಣಾಮ ಬೀರಬಹುದೆಂದು ಈ ದಿನದಲ್ಲಿ ಯಾರಾದರೂ ಒಬ್ಬರು ನಿರೀಕ್ಷಿಸಬಹುದಾದರೂ ಹೇಗೆ? ನಮಗೆ ಕೇವಲ ಆತನು ಹೇಗೆ ರೋಗಿಗಳು ಹಾಗೂ ಬಡವರೊಂದಿಗೆ ಮೃದುವಾದ ರೀತಿಯಲ್ಲಿ ಬಳಕೆಯಾಗಿದ್ದನೆಂಬುದನ್ನು ವರ್ಣಿಸುವ ಮಾತುಗಳನ್ನು ಓದಲು ಮಾತ್ರ ಸಾಧ್ಯ. ಆದರೆ ಪ್ರತಿಯೊಂದು ಘಟನೆಗಳು ನಡೆದಾಗ ಅದರ ಸುತ್ತಲಿದ್ದ ವಾತಾವರಣ ಮತ್ತು ಅಲ್ಲಿನ ನಿರ್ಧಿಷ್ಟ ಸಂದರ್ಭಗಳ ವಿವರಣೆಗಳನ್ನು ನಾವು ಪಡೆಯದೆ ಹೋಗುತ್ತೇವೆ. ಅತ್ಯುತ್ತಮ–ವೆಂದರೆ, ನಮಗೆ ದೊರಕಿರುವ ವಿಷಯಗಳು ಪರೋಕ್ಷವಾಗಿ ಬಂದಿರುವಂತವುಗಳು. ಇದರ ಪರಿಣಾಮವಾಗಿ ಕರ್ತನ ಕಡೆಗೆ ಭಕ್ತಿ ತೋರಲು ಮತ್ತು ಆತನ ನಿಮಿತ್ತ ತ್ಯಾಗಗಳನ್ನು ಮಾಡಲು ಈಗಿನ ನವ್ಯಕಾಲದ ಕ್ರೈಸ್ತನಿಗೆ ಕಷ್ಟಕರವಾಗಿ ತೋರಬಹುದು. ಆದರೆ ಸುವಾರ್ತಾ ಯುಗದ ಅಂತ್ಯದಲ್ಲಿರುವ ನಾವು ನಮ್ಮ ರಕ್ಷಕನನ್ನು ತಿಳಿದು ಆತನನ್ನು ಅರಿತುಕೊಳ್ಳಲು ಸಾಧ್ಯವಾದಷ್ಟೂ ಉತ್ತಮ ಪ್ರಯತ್ನವನ್ನು ಮಾಡುತ್ತಿದ್ದೇವೆ. ಕರ್ತನು ತನ್ನ ಭಕ್ತರಿಗಾಗಿ ವಿಶೇಷ ಏರ್ಪಾಟುಗಳನ್ನು ಮಾಡಿರುವುದಕ್ಕಾಗಿ ಆತನಿಗೆ ಹೃದಯ ಪೂರ್ವಕವಾಗಿ ಅಭಾರಿಗಳಾಗಿದ್ದೇವೆ. ಪುನರಾಗಮಿಸಿರುವ ನಮ್ಮ ಕರ್ತನು ಆ ವಿವೇಕಿಯೂ ನಂಬಿಗಸ್ತನೂ ಆದ ಸೇವಕನ ಲೇಖನಿಯ ಮೂಲಕ ಪ್ರವಾಹ –ದೋಪಾದಿಯಲ್ಲಿ ಸತ್ಯವನ್ನು ಬಿಡುಗಡೆ ಮಾಡಿದ್ದಾನೆ. ಯೇಸುವಿನ ಬಗ್ಗೆ ಪ್ರತ್ಯಕ್ಷವಾದ ತಿಳುವಳಿಕೆ ನಮಗೆ ಇಲ್ಲದಿದ್ದರೂ. ಆತನ ವಿಮೋಚನಾ ಕಾರ್ಯಗಳ ವಿಷಯವಾಗಿ ಆಳವಾದ ಪರಿಜ್ಞಾನವನ್ನು ಹೊಂದುವುದರ ಮೂಲಕ ನಮಗಾದ ನಷ್ಟವು ಹೆಚ್ಚಿನ ರೀತಿಯಲ್ಲಿ ಸರಿದೂಗಲ್ಪಟ್ಟಿದೆ. ಈ ಪರಿಜ್ಞಾನವು ಬಹು ನಂಬಿಗಸ್ತರಾಗಿ ಸೇವೆ ಮಾಡಿದ ಆದಿ ಕ್ರೈಸ್ತರ ತ್ಯಾಗಮಯ ಜೀವಿತದ ಶೈಲಿಯಲ್ಲಿ ನಡೆಸಲು ನಮ್ಮನ್ನು ಚೈತನ್ಯಗೊಳಿಸಬೇಕು.

ನಾವು ದೇವರ ಯೋಜನೆಯನ್ನು ಹೆಚ್ಚು ಕೂಲಂಕುಷ–ವಾಗಿ ಅರಿಯಲು ಪ್ರಯತ್ನಿಸುವಾಗ ನಮಗೆ ತಿಳಿದುಬಂದದ್ದೇ–ನೆಂದರೆ, ಯೇಸುವಿನ ಜೀವಿತದ ಅಧ್ಯಯನವು ಇಲ್ಲದೆ ದೇವರ ವಿಷಯದ ಅರ್ಥಪೂರ್ಣ ಪರಿಜ್ಞಾನ ಸಂಪೂರ್ಣವಾಗುವುದಿಲ್ಲ–ವೆಂಬುದು. ಈ ಕಾರಣದಿಂದಾಗಿ ನಮ್ಮಲ್ಲಿ ಪ್ರತಿಯೊಬ್ಬರೂ ಆತನ ಜೀವಿತದ ಪ್ರತಿಯೊಂದು ಸಂಗತಿಗಳ ಬಗ್ಗೆ ಆಮೂಲಾಗ್ರವಾಗಿ ಪರಿಚಿತರಾಗಿರುವುದು ಅವರಿಗೆ ವಿವೇಕಕರ. ಅಪೋಸ್ತಲನು ಸಭೆಗೆ ಬುದ್ಧಿಮಾತಾಗಿ ಹೇಳಿರುವುದು – "ನೀವು ಮನಗುಂದಿದವರಾಗಿ ಬೇಸರಗೊಳ್ಳದಂತೆ ಆತನನ್ನು ಆಲೋಚಿಸಿರಿ. ಆತನು ಪಾಪಿಗಳಿಂದ ಎಷ್ಟೋ ವಿರೋಧವನ್ನು ಸಹಿಸಿಕೊಂಡನು." ನಮ್ಮ ಕರ್ತನ ವಿಷಯವಾಗಿ ಈ ವಿಧವಾದ ಪರಿಗಣನೆಗಿಂತ ನಮ್ಮ ಜೀವಿತಕ್ಕೆ ಇನ್ನೂ ಹೆಚ್ಚು ಘನವಾದ ಅಧ್ಯಯನ ಹಾಗೂ ಕಾರ್ಯರೂಪ ಮಾರ್ಗದರ್ಶಿಯು ಬೇರೊಂದಿಲ್ಲ. ನಾವು ಹೇಗೆ ಜೀವಿಸಬೇಕು, ಹೇಗೆ ಸೇವೆ ಮಾಡಬೇಕು, ಹೇಗೆ ದೇವರ ಹೋಲಿಕೆಯ ಗುಣಗಳನ್ನು ನಮ್ಮಲ್ಲಿ ವೃದ್ಧಿಗೊಳಿಸಬಹುದೆಂಬು–ದನ್ನು ಆತನು ನಮಗೆ ಬೋಧಿಸಿದ್ದಾನೆ.

ಮುಂದಿನ ಪುಟಗಳಲ್ಲಿ "ಸುವಾರ್ತೆಗಳಲ್ಲಿರುವ ಸಾಮರಸ್ಯವನ್ನು ನೀವು ನೋಡುವಿರಿ, ಅದು ನಾಲ್ಕು ಸುವಾರ್ತೆಗಳಲ್ಲಿರುವ ಕಾಲಾನುಕ್ರಮದ ವಿವರಗಳು. ಈ ಕ್ರಮವನ್ನೇ ಅನುಸರಿಸಿ ನಾವು ಇದಕ್ಕೆ ಹೊಂದಿಕೊಂಡಂತೆ ಲೇಖನವನ್ನು ಪ್ರಸ್ತುತಪಡಿಸುತ್ತಿದ್ದೇವೆ. ಹೀಗೆ ಪ್ರಕಟಿಸಿರುವ ಈ ಲೇಖನಗಳನ್ನು ಪರಿಶೀಲಿಸುವಾಗ ಸತ್ಯವೇದದ ಪ್ರತಿಯೊಂದು ವಾಕ್ಯಭಾಗಗಳ ವಿಷಯವಾದ ಲೇಖನಗಳು ಇಲ್ಲದಿರುವುದನ್ನು ನೀವು ಗಮನಿಸಿ. ಆದಾಗ್ಯೂ ಈ ವಾಕ್ಯ ಭಾಗಗಳನ್ನು ದಾಟಿಹೋಗದಂತೆಯೂ, ಎಕ್ಸ್‌ಪಾಂಡೆಡ್ ಬಿಬ್ಲಿಕಲ್ ಕಾಮೆಂಟರಿ ಎಂಬ ಗ್ರಂಥವನ್ನಾಗಲಿ ಇಲ್ಲವೇ ಅಧಿಕ ಉಪಯುಕ್ತವಾದ ಗ್ರಂಥ ಮೂಲಗಳನ್ನು ಬಳಸಬೇಕೆಂಬುದಾಗಿಯೂ ಸಹೋದರರನ್ನು ನಾವು ಪ್ರೇರೇಪಿಸುತ್ತೇವೆ. ಇದರ ಜೊತೆಯಲ್ಲಿ ಈ ಪುಸ್ತಕದೊಂದಿಗೆ ಒಂದು ಸೀಡಿ ಸೇರಿಸಿದ್ದೇವೆ. ಈ ಸೀಡಿಯಲ್ಲಿ "ಅಡೋಬ್ ಪೀಡಿಎಫ್ ಫೈಲ್" ಮತ್ತು "ಮೈಕ್ರೋಸಾಫ್ಟ್ ವರ್ಡ್ ಫೈಲ್‌ಗಳಿದ್ದು, ಇವುಗಳು ಈ ಪುಸ್ತಕದ ಎಲ್ಲಾ ಲೇಖನಗಳನ್ನು ಒಳಗೊಂಡಿರುತ್ತದೆ. ಲ್ಯಾಪ್‌ಟಾಪ್ ಕಂಪ್ಯೂಟರ್‌ನ್ನು ಬಳಸಲು ಇಚ್ಛಿಸುವವರಿಗೆ ಇದು ಸಹಾಯಕಾರಿ. ವೈಯಕ್ತಿಕ ಅಧ್ಯಯನಕ್ಕೆ ಒಂದು ಲೇಖನವನ್ನು ಸಹ ಪ್ರಿಂಟ್ ತೆಗೆದುಕೊಂಡು ಅದಕ್ಕೆ ಸಿದ್ಧತೆ ಮಾಡಿಕೊಳ್ಳಬಹುದು. ಯಾವ ವಿಧದಲ್ಲಿಯೂ ಈ ಸೀಡಿ ಉಪಯೋಗ ಮಾಡ ಬಯಸಿದರೂ ಅದು ಉಪಯುಕ್ತವಾಗಿ ಪರಿಣಮಿಸುವುದೆಂದು ನಮ್ಮ ನಿರೀಕ್ಷೆ.

ಕ್ರಿಸ್ತನಲ್ಲಿ ನಿಮ್ಮ ಸಹೋದರರು,

ಚಿಕಾಗೋ ಸತ್ಯವೇದ ವಿಧ್ಯಾರ್ಥಿಗಳು,
ಪುಸ್ತಕ ಮರುಪ್ರಕಾಶನ ಸಮಿತಿ – 2007

# ಅನುವಾದಕರ ನುಡಿ

ಕ್ರಿಸ್ತನ ಜೀವಿದ ವಿಷಯವಾಗಿ ಪಾಸ್ಟರ್ ರಸಲ್ಲರು ಬರೆದ ಲೇಖನಗಳನ್ನು ಸಂಗ್ರಹಿಸಿ 'ಲೈಫ್ ಆಫ್ ಕ್ರೈಸ್ಟ್' ಎಂಬ ಗ್ರಂಥವನ್ನು ಶಿಕಾಗೋ ಸತ್ಯವೇದ ವಿಧ್ಯಾರ್ಥಿಗಳ ಮರು-ಪ್ರಕಾಶನ ಸಮಿತಿಯು ಪ್ರಕಟಮಾಡಿದ್ದು ಅದನ್ನು ಸತ್ಯವೇದ ವಿಧ್ಯಾರ್ಥಿಗಳು ಎಲ್ಲೆಡೆ ಆಸಕ್ತಿಯಿಂದ ಅಧ್ಯಯನ ಮಾಡುತ್ತಿರುವುದು ಸಂತೋಷಕರವಾದ ವಿಷಯ. ಈ ಗ್ರಂಥವನ್ನು ಕನ್ನಡ ಭಾಷೆಗೆ ಅನುವಾದಿಸಿ ಅದನ್ನು ಕೇವಲ ಕನ್ನಡ ಮಾತ್ರ ತಿಳಿದಿರುವ ಸಹೋದರರಿಗೆ ಒದಗಿಸಿಕೊಡುವುದು ಬಹು ದಿನಗಳಿಂದ ಇದ್ದ ಬಯಕೆ. ಈ ಗ್ರಂಥವು ಸುಮಾರು 580 ಪುಟಗಳಷ್ಟಿದ್ದು ಅದರ ಪೂರ್ಣ ಅನುವಾದವು 2-3 ವರುಷಗಳು ತೆಗೆದುಕೊಳ್ಳುವ ಸಂಭವವಿರುವುದರಿಂದಲೂ ಹಾಗೂ ವರುಷವರುಷಕ್ಕೆ ಅನುವಾದಗೊಂಡ ಪಾಠಗಳನ್ನು ಸಹೋದರರ ಪ್ರಯೋಜನಾರ್ಥ ಭಾಗಭಾಗವಾಗಿ ಪ್ರಕಟಿಸುವುದು ಉಚಿತವೆಂದು ತೋರಿದ್ದರಿಂದಲೂ ಮೊದಲನೆಯ ಭಾಗವಾಗಿ ಈ ಗ್ರಂಥವನ್ನು ಪ್ರಕಟ ಮಾಡಲಾಗುತ್ತಿದೆ. ಹಾಗೂ ಈ ಗ್ರಂಥದ ಪಿ.ಡಿ.ಎಫ್. ರೂಪದ ಪ್ರತಿಯನ್ನು www.dawnbiblestudents.com ನಲ್ಲಿಯೂ ಸಹ ಪ್ರಕಟಿಸಲಾಗಿದೆ.

ಈ ಗ್ರಂಥದ ಪೂರ್ಣ ಪ್ರಕಟನೆಯ ಮುನ್ನ ಈ ಮೊದಲನೆಯ ಭಾಗವನ್ನು ಕರಡು ಪ್ರತಿಯಾಗಿ ಈ ವಿಷಯಗಳನ್ನು ಬೋಧಿಸುವವರ ಹಾಗು ಇದನ್ನು ವೈಯುಕ್ತಿಕವಾಗಿ ಅಧ್ಯಯನ ಮಾಡುವವರ ಪ್ರಯೋಜನಾರ್ಥವಾಗಿ ಬಿಡುಗಡೆ ಮಾಡಲಾಗುತ್ತಿದೆ. ಈ ಗ್ರಂಥದ ವಿಷಯಗಳನ್ನು ಬೋಧಿಸಿದವರೂ ಹಾಗೂ ಅಧ್ಯಯನ ಮಾಡಿದವರು ಇದರಲ್ಲಿ ಕಂಡುಬಂದ ಲೋಪದೋಷಗಳನ್ನು ತಿಳಿಸಿದ್ದಲ್ಲಿ ಅಲ್ಲದೆ ಉತ್ತಮ ಅನುವಾದಕ್ಕೆ ಸಲಹೆ ಮಾಡಿದಲ್ಲಿ ಅವರಿಗೆ ಬಹು ಅಭಾರಿ. ಪೂರ್ಣ ಗ್ರಂಥದ ಪ್ರಕಟನೆ ಮಾಡುವಾಗ ಅವುಗಳನ್ನು ಪರಿಗಣಿಸಲಾಗುವುದು.

ಈ ಗ್ರಂಥದ ಮೊದಲನೆಯ ಭಾಗದ ಅನುವಾದ ಕಾರ್ಯಕ್ಕೆ ಎಲ್ಲಾ ವಿಧವಾದ ಅನುಕೂಲ ಆಶೀರ್ವಾದಗಳನ್ನು ನೀಡಿದ ಪರಲೋಕದ ನಮ್ಮ ತಂದೆ ದೇವರಾದ ಯೆಹೋವನಿಗೆ ನಮ್ಮ ರಕ್ಷಕನಾದ ಯೇಸುಕ್ರಿಸ್ತನ ಮೂಲಕ ಮೊದಲನೆಯದಾಗಿ ಸ್ತೋತ್ರೆ. ಹಾಗೂ ಶ್ರಮವಹಿಸಿ ಮುದ್ರಣಕ್ಕೆ ಸಿದ್ಧಮಾಡಿಕೊಟ್ಟ ಸಹೋದರರಾದ ನಂಜಪ್ಪನವರಿಗೂ ಹಾಗು ಇದರ ಮುದ್ರಣದ ಜವಾಬ್ದಾರಿ ಹೊತ್ತ ಪ್ರಿಂಟ್ ಎಕ್ಸ್‌ಪ್ರೆಸ್ ಸಂಸ್ಥೆಗೆ ಮತ್ತು ಅದರ ಮಾಲೀಕರಿಗೆ ಮಾತ್ರವಲ್ಲದೆ ಇದಕ್ಕೆ ಪ್ರಾರ್ಥನಾಪೂರ್ವಕವಾಗಿ ಪ್ರೋತ್ಸಾಹಿಸಿದವರೆಲ್ಲರಿಗೂ ಅನುವಾದಕರು ಬಹು ಅಭಾರಿ.

ಈ ಗ್ರಂಥವನ್ನು ಓದಿ ಅಧ್ಯಯನ ಮಾಡಿ ಇದರಲ್ಲಿರುವುದನ್ನು ಅಭ್ಯಾಸಿಸಿ ಕ್ರಿಸ್ತನ ವಿಷಯವಾಗಿ ಪೂರ್ಣವಾದ ತಿಳಿವಳಿಕೆಯನ್ನು ಹೊಂದಿ ಅನುದಿನವೂ ಆತನ ಸಾರೂಪ್ಯಕ್ಕೆ ಸಾಗುತ್ತಾ ಅಂತ್ಯದಲ್ಲಿ ಕ್ರಿಸ್ತನಲ್ಲಿರುವ ಜೀವಾಶೀರ್ವಾದಗಳಿಗೆ ಭಾಧ್ಯರಾಗಿ ಪರಲೋಕದ ತಮ್ಮ ತಂದೆ ದೇವರಿಗೆ ತಮ್ಮ ರಕ್ಷಕನ ಮೂಲಕವಾಗಿ ಮಹಿಮೆಯುಂಟಾಗುವ ಹಾಗೆ ನಡೆಯಲೆಂಬ ಪ್ರಾರ್ಥನೆಯೊಡನೆ ಇದನ್ನು

ಕ್ರಿಸ್ತನ ಸೇವೆಯಲ್ಲಿ ತಮ್ಮ ಸಹೋದರ
**ಜೆ. ಜಯಪ್ರಸಾದ್**

# ವಿಷಯ ಸೂಚಿ


ಮುನ್ನುಡಿ ........................................ iii


ಅನುವಾದಕರ ನುಡಿ ........................................ iv

ಸತ್ಯವೇದದ ದಾಖಲೆಗಳ ಪ್ರಕಾರವಾಗಿರುವ ಕ್ರಿಸ್ತನ ಜೀವಿತದ ಘಟನೆಗಳ ಕಾಲಾನುಕ್ರಮ ದಾಖಲೆ............ 1

ಯೇಸುವಿನ ಸೇವಾಕಾರ್ಯಗಳಿಗೂ ಮೊದಲಿನ ಕಾಲಗಳು ........................................ 12

ಯೇಸುವಿನ ಸೇವಾಕಾರ್ಯಗಳ ಪ್ರಾರಂಭ ........................................ 64

ಗಲಿಲಾಯದಲ್ಲಿ ನಡೆದ ಯೇಸುವಿನ ಮಹತ್ತರವಾದ ಸೇವಾಕಾರ್ಯಗಳು ........................................ 122



**ಮೂಡಣ ಪಂಡಿತರು ನಕ್ಷತ್ರದ ಮೂಲಕ ನಡೆಸಲ್ಪಟ್ಟದ್ದು**

"ಅವರು ಅರಸನ ಮಾತನ್ನು ಕೇಳಿ ಹೊರಟಾಗ ಮೂಡಣದೇಶದಲ್ಲಿ ಕಂಡ ನಕ್ಷತ್ರವು
ಅವರ ಮುಂದೆ ಮುಂದೆ ನಡೆದು ಕೂಸು ಇದ್ದ ಸ್ಥಳದ ಮೇಲೆ ಬಂದು ನಿಂತಿತು". (ಮತ್ತಾಯ 2:9)

# ಸತ್ಯವೇದಾನುಸಾರ ಕಾಲಾನುಕ್ರಮವಾಗಿ ನಡೆದ ಕ್ರಿಸ್ತನ ಜೀವಿತದ ಘಟನೆಗಳು

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಪೂ. 3 | ಯೆರೂಸಲೇಮ್ ದೇವಾಲಯ | ಜೆಕರ್ಯನಿಗೆ ಸ್ನಾನಿಕನಾದ ಯೋಹಾನನ ಜನನವನ್ನು ಮುಂತಿಳಿಸಿದುದು | | | 1:5–25 | |
| ಕ್ರಿ.ಪೂ. 2 | ನಜರೇತ್; ಯೂದಾಯ | ಮರಿಯಳಿಗೆ ಯೇಸುವಿನ ಜನನವನ್ನು ಮುಂತಿಳಿಸಿದ್ದುದು; ಆಕೆ ಎಲಿಜಬೇತಳನ್ನು ಸಂಧಿಸಿದ್ದು | | | 1:26–56 | |
| ಕ್ರಿ.ಪೂ. 2 ಅಕ್ಟೋಬರ್ | ಬೆತ್ಲೆಹೇಮ್ | ಅಬ್ರಹಾಮನ ಮತ್ತು ದಾವೀದನ ಸಂತತಿಯಾಗಿ (ತನ್ನ ಮೂಲಕವೇ ಸಮಸ್ತವೂ ಉಂಟಾಗಿರುವ ವಾಕ್ಯವೆಂಬುವವನಾದ) ಯೇಸುವಿನ ಜನನ | 1:1–25 | | 2:1–7 | 1:1–5, 9–14 |
| | ಬೆತ್ಲೆಹೇಮ್ ಸಮೀಪ | ದೇವದೂತನು ಶುಭಸಮಾಚಾರವನ್ನು ಸಾರಿದುದು. ಕುರುಬರು ಮಗುವನ್ನು ಭೇಟಿಮಾಡಿದುದು | | | 2:8–20 | |
| | ಬೆತ್ಲೆಹೇಮ್, ಯೆರೂಸಲೇಮ್ | (ಎಂಟನೇ ದಿನದಲ್ಲಿ) ಯೇಸುವಿಗೆ ಸುನ್ನತಿಯಾದದ್ದು, (40ನೇ ದಿನದಲ್ಲಿ) ದೇವಾಲಯದಲ್ಲಿ ಅರ್ಪಿಸಿದುದು | | | 2:21–39 | |
| ಕ್ರಿ.ಪೂ. 1 ಅಥವಾ ಕ್ರಿ.ಶ. 1 | ಯೆರೂಸಲೇಮ್, ಬೆತ್ಲೆಹೇಮ್ ನಜರೇತ್ | ಜೋಯಿಸರು, ಐಗುಪ್ತಕ್ಕೆ ಓಡಿಹೋಗುವಿಕೆ, ಮಕ್ಕಳು ಕೊಲ್ಲಲ್ಪಟ್ಟದ್ದು. ಯೇಸುವು ಹಿಂದಿರುಗಿದ್ದು | 2:1–23 | | 2:39,40 | |
| ಕ್ರಿ.ಶ. 12 | ಯೆರೂಸಲೇಮ್ | ಪಸ್ಕ ಹಬ್ಬದಲ್ಲಿ ಹನ್ನೆರಡು ವರುಷದವನಾದ ಯೇಸು, ಮನೆಗೆ ಹೋದದ್ದು | | | 2:41–52 | |
| ಕ್ರಿ.ಶ.29ರ ಚೈತ್ರ ಮಾಸ | ಅರಣ್ಯ ಪ್ರದೇಶ, ಯೋರ್ದಾನ್ | ಸ್ನಾನೀಕನಾದ ಯೋಹಾನನ ಸೇವಾಕಾರ್ಯ | 3:1–12 | 1:1–8 | 4:1–18 | 1:6–8; 15:28 |
| ಕ್ರಿ. ಶ. 29 ಹಿಮಕಾಲ | ಯೋರ್ದಾನ್ ನದಿ | ದಾವೀದನ ವಂಶದಲ್ಲಿ ಮನುಷ್ಯನಾದರೂ ದೇವರ ಮಗನಾಗಿ ಪ್ರಕಟಮಾಡಲ್ಪಟ್ಟ ಯೇಸುವಿನ ದೀಕ್ಷಾಸ್ನಾನ ಮತ್ತು ಅಭಿಷೇಕ | 3:13–17 | 1:9–11 | 3:21–28 | 1:32–34 |
| | ಯೂದಾಯದ ಅರಣ್ಯ ಪ್ರದೇಶ | ಯೇಸುವಿನ ಉಪವಾಸ ಮತ್ತು ಶೋಧನೆ | 4:1–11 | 1:12,13 | 4:1–13 | |

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| | ಯೋರ್ದಾನ್ ಆಚೆಯಲ್ಲಿರುವ ಬೇಥಾನ್ಯ | ಯೇಸುವಿನ ವಿಷಯವಾಗಿ ಸ್ನಾನಿಕನಾದ ಯೋಹಾನನ ಸಾಕ್ಷಿ | | | | 1:15, 29–34 |
| | ಮೇಲಿನ ಯೋರ್ದಾನ್ ನದಿ ಕಣಿವೆ | ಯೇಸುವಿನ ಮೊದಲ ಶಿಷ್ಯರು | | | | 1:35–51 |
| | ಗಲಿಲಾಯದ ಕಾನಾ ಕಪೆರ್ನೌಮ್ | ಯೇಸುವಿನ ಮೊದಲ ಅದ್ಭುತ ಕಾರ್ಯ ಕಪೆರ್ನೌಮಿಗೆ ಭೇಟಿ | | | | 2:1–12 |
| ಕ್ರಿ.ಶ. 30 ಪಸ್ಕ | ಯೆರೂಸಲೇಮ್ | ಪಸ್ಕದ ಆಚರಣೆ, ಮಾರುವವರನ್ನು ದೇವಾಲಯದಿಂದ ಹೊರಡಿಸಿದುದು | | | | 2:13–25 |
| | ಯೆರೂಸಲೇಮ್ | ನಿಕೋದೇಮನೊಂದಿಗೆ ಯೇಸುವಿನ ಸಂಭಾಷಣೆ | | | | 3:22–36 |
| | ಯುದಾಯ ಐನೋನ್ | ಯೇಸುವಿನ ಶಿಷ್ಯರಿಂದ ಸ್ನಾನದೀಕ್ಷೆ ಯೋಹಾನನು ಕಡಿಮೆಯಾಗಬೇಕು | | | | 3:22–36 |
| | ತಿಬೇರಿಯ | ಯೋಹಾನನು ಸೆರೆಯಾದದ್ದು; ಯೇಸು ಗಲಿಲಾಯಕ್ಕೆ ಹೊರಟಿದುದು | 4:12; 14:3–5 | 1:14 6:17–20 | 3:19, 20 4:14 | 4:1–3 |
| | ಸಮಾರ್ಯದ ಸುಖರ್ | ಗಲಿಲಾಯಕ್ಕೆ ಹಾದು ಹೋಗುವಲ್ಲಿ ಸಮಾರ್ಯದವರಿಗೆ ಬೋಧಿಸಿದುದು | | | | 4:4–43 |
| ಕ್ರಿ.ಶ. 30 | ಗಲಿಲಾಯ | "ಪರಲೋಕ ರಾಜ್ಯವು ಸಮೀಪವಾಯಿತು" ಎಂದು ಮೊದಲು ಸಾರಿದುದು | 4:17 | 1:14, 15 | 4:14, 15 | 4:44,45 |
| | ನಜರೇತ್, ಕಾನಾ, ಕಪೆರ್ನೌಮ್ | ಬಾಲಕನನ್ನು ಸ್ವಸ್ಥ ಮಾಡಿದುದು, ತನ್ನ ಕಾರ್ಯಭಾರದ ವಿಷಯವನ್ನು ಓದಿದುದು, ತಿರಸ್ಕರಿಸಲ್ಪಟ್ಟದ್ದು ಕಪೆರ್ನೌಮಿಗೆ ಸ್ಥಳಾಂತರ | 4:13–16 | | 4:16–31 | 4:46–54 |
| | ಗಲಿಲಾಯ ಸಮುದ್ರ, ಕಪೆರ್ನೌಮ್ ಹತ್ತಿರ | ಸೀಮೋನ ಪೇತ್ರ ಮತ್ತು ಅಂದ್ರೇಯ, ಯಾಕೋಬ ಮತ್ತು ಯೋಹಾನರಿಗೆ ಕರೆ | 4:18–22 | 1:16–20 | 5:1–11 | |
| | ಕಪೆರ್ನೌಮ್ | ದೆವ್ವ ಹಿಡಿದವನನ್ನು ಸ್ವಸ್ಥ ಮಾಡಿದುದು ಪೇತ್ರನ ಅತ್ತೆ ಹಾಗೂ ಇತರ ಹಲವರನ್ನು ಸಹ | 8:14–17 | 1:21–34 | 4:31–41 | |

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| | ಗಲಿಲಾಯ | ಈಚೆಗೆ ಕರೆದ ನಾಲ್ವರೊಂದಿಗೆ ಗಲಿಲಾಯದಲ್ಲಿ ಮೊದಲ ಸಂಚಾರ | 4:23–25 | 1:35–39 | 4:42–43 | |
| | ಗಲಿಲಾಯ | ಕುಷ್ಠರೋಗಿಯನ್ನು ಸ್ವಸ್ಥ ಮಾಡಿದ್ದು ಮಹಾ ಸಮೂಹ ಯೇಸುವಿನ ಬಳಿಗೆ ಬಂದದ್ದು | 8:1–4 | 1:40–45 | 5:12–16 | |
| | ಕಪೆರ್ನೌಮ್ | ಪಾರ್ಶ್ವವಾಯು ರೋಗಿಯನ್ನು ಸ್ವಸ್ಥ ಮಾಡಿದುದು | 9:1–8 | 2:1–12 | 5:17–26 | |
| | ಕಪೆರ್ನೌಮ್<br>ಯೂದಾಯ | ಮತ್ತಾಯನಿಗೆ ಕರೆ, ಸುಂಕದ-ವರೊಂದಿಗೆ ಔತಣ<br>ಯೂದಾಯದ ಸಭಾಮಂದಿರಗಳಲ್ಲಿ ಬೋಧನೆ | 9:9–17 | 2:13–22 | 5:27–39 | 4:44 |
| ಕ್ರಿ. ಶ. 31 ಪಸ್ಕ | ಯೆರೂಸಲೇಮ್ | ಹಬ್ಬದಲ್ಲಿ ಭಾಗವಹಿಸುವಿಕೆ ಮನುಷ್ಯನನ್ನು ಸ್ವಸ್ಥ ಮಾಡಿದುದು ಫರಿಸಾಯರನ್ನು ಗದರಿಸಿದುದು. | | | | 5:1–47 |
| | ಯೆರೂಸಲೇಮ್ ನಿಂದ ಹಿಂದಿರುಗುವಿಕೆ(?) | ಶಿಷ್ಯರು ಸಬ್ಬತ್ ದಿನದಲ್ಲಿ ಹಸಿರು ತೆನೆಗಳನ್ನು ಮುರಿದುಕೊಂಡದ್ದು | 12:1–8 | 2:23–28 | 6:1–5 | |
| | ಗಲಿಲಾಯ: ಗಲಿಲಾಯ ಸಮುದ್ರ | ಕೈಯನ್ನು ಸ್ವಸ್ಥ ಮಾಡಿದುದು ಸಮುದ್ರದ ದಡಕ್ಕೆ ನಿರ್ಗಮಿಸಿದುದು, ಸ್ವಸ್ಥ ಮಾಡಿದುದು | 12:9–21 | 3:1–12 | 6:1–5 | |
| | ಕಪೆರ್ನೌಮ್ ಹತ್ತಿರದ ಬೆಟ್ಟ | ಹನ್ನೆರಡು ಮಂದಿ ಅಪೋಸ್ತಲರು ಆರಿಸಲ್ಪಟ್ಟಿದ್ದು | | 3:13–19 | 6:12–16 | |
| | ಕಪೆರ್ನೌಮ್ ಹತ್ತಿರ | ಪರ್ವತ ಪ್ರಸಂಗ | 5:1–7:29 | | 6:17–49 | |
| | ಕಪೆರ್ನೌಮ್ | ಶತಾಧಿಪತಿಯ ಆಳನ್ನು ಸ್ವಸ್ಥ ಮಾಡಿದುದು | 8:5–13 | | 7:1–10 | |
| | ನಾಯಿನ್ | ವಿಧವೆಯ ಮಗನನ್ನು ಎಬ್ಬಿಸಿದುದು | | | 7:11–17 | |
| | ಗಲಿಲಾಯ | ಸೆರೆಮನೆಯಿಂದ ಯೋಹಾನನು ಯೇಸುವಿನ ಬಳಿಗೆ ಶಿಷ್ಯರನ್ನು ಕಳುಹಿಸಿದುದು | 11:2–19 | | 7:18–35 | |

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| | ಗಲಿಲಾಯ | ಪಟ್ಟಣಗಳನ್ನು ಗದರಿಸಿದುದು ಮಕ್ಕಳಿಗೆ ಪ್ರಕಟವಾಗುವುದು ಮೃದುವಾದ ನೊಗವು | 11:20–30 | | | |
| | ಗಲಿಲಾಯ | ದುರಾಚಾರಿಯಾದ ಹೆಂಗಸು ಪಾದಗಳಿಗೆ ತೈಲ ಹಚ್ಚಿದುದು | | | 7:36–50 | |
| | ಗಲಿಲಾಯ | ಹನ್ನೆರಡು ಮಂದಿಯೊಂದಿಗೆ ಗಲಿಲಾಯದ ಎರಡನೇ ಸುವಾರ್ತಾ ಪ್ರಯಾಣ | | | 8:1–3 | |
| | ಗಲಿಲಾಯ | ದೆವ್ವ ಹಿಡಿದವರನ್ನು ಸ್ವಸ್ಥ ಮಾಡಿದುದು. ಬೆಲ್ಜೆಬೂಲನ ಸಹಾಯದಿಂದ ಸ್ವಸ್ಥ ಮಾಡಿದ ಆರೋಪ | 12:22–37 | 3:19–30 | | |
| | ಗಲಿಲಾಯ | ಫರಿಸಾಯರು ಶಾಸ್ತ್ರಿಗಳು ಆಕಾಶದಲ್ಲಿ ಒಂದು ಸೂಚನೆಯನ್ನು ಕೇಳಿದ್ದು | 12:38–45 | | | |
| | ಗಲಿಲಾಯ | ಕ್ರಿಸ್ತನ ಶಿಷ್ಯರೂ ಆತನ ಸಮೀಪ–ಬಂಧುಗಳೂ | 12:46–50 | 3:31–36 | 8:19–21 | |
| | ಗಲಿಲಾಯ | ಬಿತ್ತುವವನ ದೃಷ್ಟಾಂತ, ಕಳೆಗಳು, ಇತರ ವಿವರಣೆಗಳು | 13:1–53 | 4:1–34 | 8:4–18 | |
| ಕ್ರಿ.ಶ. 31 | ಗಲಿಲಾಯ ಸಮುದ್ರ | ಸಮುದ್ರ ದಾಟುವಾಗ ಬಿರುಗಾಳಿಯನ್ನು ನಿಲ್ಲಿಸಿದುದು | 8:18, 23–27 | 4:35–41 | 8:22–25 | |
| | ಗದಾರ, ಗಲಿಲಾಯ ಸಮುದ್ರದ ಆಗ್ನೇಯ ಭಾಗ | ದೆವ್ವ ಹಿಡಿದ ಇಬ್ಬರನ್ನು ಸ್ವಸ್ಥ ಮಾಡಿದುದು, ಹಂದಿಗಳಲ್ಲಿ ದೆವ್ವಗಳು ಸೇರಿದುದು | 8:28–34 | 4:35–41 | 8:22–25 | |
| | ಬಹುಶಃ ಕಪೆರ್ನೌಮ್ | ಯಾಯೀರನ ಮಗಳನ್ನು ಎಬ್ಬಿಸಿದುದು, ಸ್ತ್ರೀ ಸ್ವಸ್ಥವಾದುದು | 9:18–26 | 5:21–43 | 8:40–56 | |
| | ಕಪೆರ್ನೌಮ್(?) | ಇಬ್ಬರು ಕುರುಡರನ್ನು ಸ್ವಸ್ಥ ಮಾಡಿದುದು, ದೆವ್ವ ಹಿಡಿದ ಕಿವುಡ ಮೂಗನನ್ನು ಸ್ವಸ್ಥ ಮಾಡಿದುದು | 9:27–34 | | | |
| | ನಜರೇತ್ | ಆತನು ಬೆಳೆದ ನಗರವನ್ನು ಪುನಃ ಭೇಟಿ ಮಾಡಿದುದು ಮತ್ತೆ ತಿರಸ್ಕೃತನಾದುದು | 13:54–58 | 6:1–6 | | |

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| | ಗಲಿಲಾಯ | ಗಲಿಲಾಯದಲ್ಲಿ ಮೂರನೇ ಪ್ರಯಾಣ ಅಪೊಸ್ತಲರನ್ನು ಕಳುಹಿಸುವ ಮೂಲಕ ವಿಸ್ತೃತವಾದದ್ದು | 9:35–11:1 | 6:6–13 | 9:1–6 | |
| | ತಿಬೇರಿಯ | ಸ್ನಾನಿಕನಾದ ಯೋಹಾನನ ತಲೆ ಹೊಯಿಸಿದುದು, ಹೆರೋದನ ಕಪಟದ ಕಣ್ಣೀರು | 14:1–12 | 6:14–29 | 9:7–9 | |
| ಕ್ರಿ.ಶ.32, ಪಸ್ಕ ಹಬ್ಬದ ಸಮೀಪದ ಸಮಯ | ಕಪೆರ್ನೌಮ್ (?) ಗಲಿಲಾಯ ಸಮುದ್ರದ ಈಶಾನ್ಯ ಭಾಗ | ಅಪೋಸ್ತಲರು ಸುವಾರ್ತಾ ಪ್ರಯಾಣದಿಂದ ಹಿಂದಿರುಗಿದುದು, 5000 ಜನರಿಗೆ ಆಹಾರ ನೀಡಿದುದು | 14:13–21 | 6:30–44 | 9:10–17 | 6:1–13 |
| | ಗಲಿಲಾಯ ಸಮುದ್ರದ ಈಶಾನ್ಯ ಭಾಗ ಗೆನ್ನೆಜರೇತ್ | ಯೇಸುವನ್ನು ರಾಜನನ್ನಾಗಿ ಮಾಡುವ ಪ್ರಯತ್ನ, ಸಮುದ್ರದ ಮೇಲೆ ನಡೆದದ್ದು, ಸ್ವಸ್ಥಪಡಿಸುವಿಕೆ | 14:22–36 | 6:45–56 | | 6:14–21 |
| | ಕಪೆರ್ನೌಮ್ | ಜೀವ ಕೊಡುವ ರೊಟ್ಟಿಯಾಗಿ ಗುರುತು ಮಾಡಿಕೊಂಡದ್ದು, ಹಲವು ಶಿಷ್ಯರು ಹಿಂಜರಿದದ್ದು | | | | 6:22–71 |
| ಕ್ರಿ. ಶ. 32, ಪಸ್ಕದ ನಂತರ | ಬಹುಶಃ ಕಪೆರ್ನೌಮ್ | ದೇವರ ವಾಕ್ಯವನ್ನು ಸಂಪ್ರದಾಯದ ನಿಮಿತ್ತ ನಿರರ್ಥಕ ಮಾಡಿದುದು | 15:1–20 | 7:1–23 | | 7:1 |
| | ಫೊಯಿನಿಕೆ ದೆಕಪೋಲಿ | ತೂರ್ ಪಟ್ಟಣದ ಸಮೀಪ, ಸೀದೋನ್, ನಂತರ ದೆಕಪೋಲಿ, 4000 ಜನರಿಗೆ ಊಟ | 15:21–36 | 7:24 8:9 | | |
| | ಮಗದಾನ | ಫರಿಸಾಯರು ಸದ್ದುಕಾಯರು ಮತ್ತೆ ಸೂಚಕಕಾರ್ಯ ಅಪೇಕ್ಷಿಸಿದುದು | 15:39 16:4 | 8:10–12 | | |
| | ಗಲಿಲಾಯ ಸಮುದ್ರದ ಈಶಾನ್ಯ ಭಾಗ ಬೇತ್ಸಾಯಿದ | ಫರಿಸಾಯರ ಹುಳೀಹಿಟ್ಟಿನ ಬಗ್ಗೆ ಎಚ್ಚರಿಕೆ, ಕುರುಡನನ್ನು ಸ್ವಸ್ಥ ಮಾಡಿದುದು | 16:5–12 | 8:13–26 | | |
| | ಕೈಸರೆಯದ ಫಿಲಿಪ್ಪಿ ಪಟ್ಟಣ | ಯೇಸುಕ್ರಿಸ್ತನಾಗಿ, (ತನ್ನ) ಮರಣ ಪುನರುತ್ಥಾನಗಳನ್ನು ಮುಂದಾಗಿ ಹೇಳಿದುದು | 16:13–28 | 8:27 9:1 | 9:18–27 | |
| | ಬಹುಶಃ ಹೆರ್ಮೋನ್ ಪರ್ವತ | ಪೇತ್ರ, ಯಾಕೋಬ ಮತ್ತು ಯೋಹಾನರ ಎದುರಿನಲ್ಲಿ(ಯೇಸು) ಪ್ರಕಾಶ ರೂಪ ಧರಿಸಿದುದು | 17:1–13 | 9:2–13 | 9:28–36 | |

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| | ಕೈಸರೆಯದ ಫಿಲಿಪ್ಪಿ ಪಟ್ಟಣ | ಶಿಷ್ಯರು ಸ್ವಸ್ಥ ಮಾಡಲಾಗದ ದೆವ್ವ ಹಿಡಿದವನನ್ನು ಸ್ವಸ್ಥಪಡಿಸಿದುದು | 17:14–20 | 9:14–29 | 9:37–43 | |
| | ಗಲಿಲಾಯ | ತನ್ನ ಮರಣ ಪುನರುತ್ಥಾನಗಳನ್ನು ಮತ್ತೆ ಮುಂದಾಗಿ ಹೇಳಿದುದು | 17:22–23 | 9:30–32 | 9:43–45 | |
| | ಕಪೆರ್ನೌಮ್ | ತೆರಿಗೆ ಹಣವನ್ನು ಅದ್ಭುತವಾಗಿ ಕೊಟ್ಟದ್ದು | 17:24–27 | | | |
| | ಕಪೆರ್ನೌಮ್ | ದೇವರ ರಾಜ್ಯದಲ್ಲಿ ಹೆಚ್ಚಿನವನು, ದೋಷಗಳನ್ನು ಸರಿಪಡಿಸಿದುದು, ಕರುಣೆ | 18:1–35 | 9:33–50 | 9:46–50 | |
| | ಗಲಿಲಾಯ, ಸಮಾರ್ಯ | ಪರ್ಣಶಾಲೆಗಳ ಹಬ್ಬಕ್ಕೆ ಗಲಿಲಾಯದಿಂದ ಹೊರಟುದುದು ಸೇವೆಗಾಗಿ ಎಲ್ಲವನ್ನೂ ಬದಿಗೆ ಹಾಕಿದುದು | 8:19–22 | | 9:51–62 | 7:2–10 |
| ಕ್ರಿ.ಶ. 32 | ಯೆರೂಸಲೇಮ್ | ಪರ್ಣಶಾಲೆಗಳ ಹಬ್ಬದಲ್ಲಿ ಯೇಸುವಿನಿಂದ ಸಾರ್ವಜನಿಕರಿಗೆ ಬೋಧನೆ | | | | 7:11–53 |
| | ಯೆರೂಸಲೇಮ್ | ಹಬ್ಬದ ನಂತರದ ಬೋಧನೆ ಕುರುಡನನ್ನು ಸ್ವಸ್ಥಪಡಿಸುವಿಕೆ | | | | 8:12 – 9:41 |
| | ಬಹುಶಃ ಯೂದಾಯ | 70 ಮಂದಿಯನ್ನು ಸುವಾರ್ತೆ ಸಾರಲು ಕಳುಹಿಸುವಿಕೆ, ಅವರು ಹಿಂದಿರುಗಿ ಬಂದುದದು, ಪ್ರಯಾಣದ ವರಧಿ | | | 10:1–24 | |
| | ಯೂದಾಯದ ಬೇಥಾನ್ಯ | ಕರುಣೆಯುಳ್ಳ ಸಮಾರ್ಯದವನ ಸಾಮ್ಯ ಹೇಳಿದುದು, ಮಾರ್ಥ ಮತ್ತು ಮರಿಯಳ ಮನೆ | | | 10:25–42 | |
| | ಬಹುಶಃ ಯೂದಾಯ | ಮತ್ತೆ ಮಾದರಿ ಪ್ರಾರ್ಥನೆಯ ಕಲಿಸುವಿಕೆ, ಎಡಬಿಡದೆ ಬೇಡುವುದು | | | 11:1–3 | |
| | ಬಹುಶಃ ಯೂದಾಯ | ಸುಳ್ಳು ಆರೋಪವನ್ನು ಅಲ್ಲಗಳೆದುದು ಸಂತತಿ ಖಂಡನೆಯಾಗಿರುವುದನ್ನು ತೋರಿಸಿದುದು | | | 11:14–36 | |
| | ಬಹುಶಃ ಯೂದಾಯ | ಫರಿಸಾಯನು ನೀಡಿದ ಔತಣ, ಯೇಸು ಕಪಟವನ್ನು ಖಂಡಿಸಿದುದು | | | 11:37–54 | |
| | ಬಹುಶಃ ಯೂದಾಯ | ದೇವರ ಪರಿಪಾಲನೆಯ ಬಗ್ಗೆ ಪ್ರಸಂಗ, ನಂಬಿಗಸ್ತನಾದ ಮನೇವಾರ್ತೆಯವನು | | | 12:1–59 | |

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| | ಬಹುಶಃ ಯೂದಾಯ | ಸಬ್ಬತ್ ದಿನದಲ್ಲಿ ಕುಂಟಿಯಾದ ಮಹಿಳೆಯನ್ನು ಸ್ವಸ್ಥ ಮಾಡಿದುದು | | | 13:1–21 | |
| | ಯೆರೂಸಲೇಮ್ | ದೇವಾಲಯದ ಪ್ರತಿಷ್ಠೆಯ ಹಬ್ಬದಲ್ಲಿ ಯೇಸು, ಒಳ್ಳೆಯ ಕುರುಬ | | | | 10:1–39 |
| | ಯೋರ್ದಾನ್ ಹೊಳೆಯ ಆಚೆಯ ಪ್ರದೇಶ | ಹಲವರು ಯೇಸುವಿನಲ್ಲಿ ನಂಬಿಕೆ ಇಟ್ಟಿದುದು | | | | 10:40–42 |
| | (ಯೋರ್ದಾನ್ ಹೊಳೆಯ ಆಚೆಯ) ಪೆರೀಯಾ | ಪಟ್ಟಣಗಳಲ್ಲಿ ಹಳ್ಳಿಗಳಲ್ಲಿ ಬೋಧಿಸಿದುದು, ಯೆರೂಸಲೇಮಿನ ಕಡೆ ಪ್ರಯಾಣ | | | 13:22 | |
| | ಪೆರೀಯಾ | ದೇವರ ರಾಜ್ಯಕ್ಕೆ ಪ್ರವೇಶ, ಹೆರೋದನ ಬೆದರಿಕೆ, ಮನೆ ಹಾಳಾದುದು | | | 13:23–35 | |
| | ಬಹುಶಃ ಪೆರೀಯಾ | ಒಬ್ಬ ಫರಿಸಾಯನ ಮನೆಯಿಂದ ಪಾಠ | | | 14:1–24 | |
| | ಬಹುಶಃ ಪೆರೀಯಾ | ಶಿಷ್ಯರಾಗುವುದರ (ಕಷ್ಟನಷ್ಟಗಳ) ಲೆಕ್ಕಾಚಾರ ಹಾಕುವಿಕೆ | | | 14:25–35 | |
| | ಬಹುಶಃ ಪೆರೀಯಾ | ಕಳೆದು ಹೋದ ಕುರಿ, ಕಳೆದುಹೋದ ನಾಣ್ಯ ಕೆಟ್ಟುಹೋದ ಮಗನ ದೃಷ್ಟಾಂತ | | | 15:1–35 | |
| | ಬಹುಶಃ ಪೆರೀಯಾ | ಕಳ್ಳ ಮನೆವಾರ್ತೆಯವನ ಸಾಮ್ಯ ಶ್ರೀಮಂತ ಹಾಗೂ ಬಡ ಲಾಜರನ ದೃಷ್ಟಾಂತ | | | 16:1–31 | |
| | ಬಹುಶಃ ಪೆರೀಯಾ | ಕ್ಷಮಿಸುವಿಕೆ ಹಾಗೂ ನಂಬಿಕೆ, ಅಪ್ರಯೋಜಕರಾದ ಕೆಲಸಗಾರರು | | | 17:1–10 | |
| | ಬೇಥಾನ್ಯ | ಯೇಸು ಸತ್ತುಹೋದ ಲಾಜರನನ್ನು ಮರಣದಿಂದ ಎಬ್ಬಿಸಿದುದು | | | | 11:1–46 |
| | ಯೆರೂಸಲೇಮ್ ಎಫ್ರಾಯೀಮ್ | ಯೇಸುವಿನ ವಿರುದ್ಧವಾಗಿ ಕಾಯಿಫನ ಆಲೋಚನೆ, ಯೇಸು ಹಿಂದೆಗೆದುದು | | | | 11:47–54 |
| | ಸಮಾರ್ಯ, ಗಲಿಲಾಯ | ಸಮಾರ್ಯದ ಮೂಲಕ ಗಲಿಲಾಯಕ್ಕೆ ಹಾದು ಹೋಗುವಾಗ ಸ್ವಸ್ಥ ಮಾಡಿದುದು ಮತ್ತು ಬೋಧಿಸಿದುದು | | | 17:11–37 | |
| | ಸಮಾರ್ಯ ಇಲ್ಲವೇ ಗಲಿಲಾಯ | ನ್ಯಾಯ ಬೇಡುವ ವಿಧವೆಯ ದೃಷ್ಟಾಂತ ಫರಿಸಾಯರು ಮತ್ತು ಸುಂಕದವರು | | | 18:1–14 | |

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| | ಪೆರೀಯ | ಪೆರೀಯ ಪ್ರಾಂತ್ಯವನ್ನು ಸುತ್ತಾಡಿದುದು ವಿವಾಹ ವಿಚ್ಛೇದನದ ಬಗ್ಗೆ ಬೋಧನೆ | 19:1–12 | 10:1–12 | | |
| | ಪೆರೀಯ | ಮಕ್ಕಳನ್ನು ಅಂಗೀಕರಿಸಿ ಆಶೀರ್ವದಿಸಿದುದು | 19:1–12 | 10:13–16 | 18:15–17 | |
| | ಪೆರೀಯ | ಶ್ರೀಮಂತ ಯುವಕ; ದ್ರಾಕ್ಷೇತೋಟದಲ್ಲಿ ಪರಿಶ್ರಮ | 19:16 20:16 | 10:17–31 | 18:18–30 | |
| | ಬಹುಶಃ ಪೆರೀಯ | ಯೇಸುವು ತನ್ನ ಮರಣ ಪುನರುತ್ಥಾನವನ್ನು ಮೂರನೇ ಸಾರಿ ಮುಂತಿಳಿಸಿದುದು | 20:17–19 | 10:32–34 | 18:31–34 | |
| | ಬಹುಶಃ ಪೆರೀಯ | ಯಾಕೋಬ ಯೋಹಾನರು ದೇವರ ರಾಜ್ಯದಲ್ಲಿ ಕುಳಿತುಕೊಳ್ಳುವ ಬಗ್ಗೆ ವಿನಂತಿ | 20:20–28 | 10:35–45 | | |
| | ಯೆರಿಕೋ | ಯೆರಿಕೋವನ್ನು ಹಾದು ಹೋದದ್ದು ಇಬ್ಬರು ಕುರುಡರನ್ನು ಸ್ವಸ್ಥ ಮಾಡಿದುದು. ಜೆಕ್ಕಾಯನ ಮನೆಗೆ ಬೇಟಿ, ಮೊಹರಿಗಳ ಸಾಮ್ಯ | 20:29–34 | 10:46–52 | 18:35 – 19:28 | |
| ಕ್ರಿ.ಶ. 33 ನಿಸ್ಸಾನ್ 8 | ಬೇಥಾನ್ಯ | ಪಸ್ಕಕ್ಕೆ ಅರು ದಿನಗಳ ಮೊದಲು ಬೇಥಾನ್ಯಕ್ಕೆ ಬಂದದ್ದು | | | | 11:55 12:1 |
| ನಿಸ್ಸಾನ್ 9 | ಬೇಥಾನ್ಯ | ಕುಷ್ಠರೋಗಿಯಾದ ಸೀಮೋನನ ಮನೆಯಲ್ಲಿ ಔತಣ, ಮರಿಯಳು ಯೇಸುವಿಗೆ ತೈಲಾಭಿಷೇಕ ಮಾಡಿದ್ದು ಯೆಹೂದ್ಯರು ಯೇಸುವನ್ನು ಮತ್ತು ಲಾಜರನನ್ನು ನೋಡಬೇಕೆಂದು ಬಂದದ್ದು | 26:6–13 | 14:3–9 | | 12:2–11 |
| | ಬೇಥಾನ್ಯ ಯೆರೂಸಲೇಮ್ | ಕ್ರಿಸ್ತನು ಯೆರೂಸಲೇಮನ್ನು ರಾಜನಂತೆ ಪ್ರವೇಶಿಸಿದುದು | 21:1–11 14–17 | 11:1–11 | 19:29–44 | 12:12–19 |
| | ಬೇಥಾನ್ಯ ಯೆರೂಸಲೇಮ್ | ಫಲವಿಲ್ಲದ ಅಂಜೂರದ ಮರಕ್ಕೆ ಶಾಪ, ದೇವಾಲಯವನ್ನು ಎರಡನೆಯ ಸಾರಿ ಶುಚಿ ಮಾಡಿದ್ದು | 21:18, 19, 12, 13 | 11:12–17 | 19:45–46 | |
| | ಯೆರೂಸಲೇಮ್ | ಮಹಾ ಯಾಜಕರು ಮತ್ತು ಶಾಸ್ತ್ರಿಗಳು ಯೇಸುವಿನ ನಾಶಕ್ಕೆ ಸಂಚು ಮಾಡಿದ್ದು | | 11:18–19 | 19:47–48 | |
| | ಯೆರೂಸಲೇಮ್ | ಗ್ರೀಕರೊಂದಿಗೆ ಸಂವಾದ, ಯೆಹೂದ್ಯ ಅಪನಂಬಿಕೆ | | | | 12:20–50 |

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ನಿಸಾನ್ 11 | ಬೇಥಾನ್ಯ ಯೆರೂಸಲೇಮ್ | ಗೊಡ್ಡು ಅಂಜೂರದ ಮರವು ಒಣಗಿಹೋದದ್ದು | 21:19–22 | 11:20–25 | | |
| | ಯೆರೂಸಲೇಮ್ ದೇವಾಲಯ | ಕ್ರಿಸ್ತನ ಅಧಿಕಾರವನ್ನು ಪ್ರಶ್ನಿಸಿದುದು ಇಬ್ಬರು ಮಕ್ಕಳ ದೃಷ್ಟಾಂತ | 21:23–32 | 11:27–33 | 20:1–8 | |
| | ಯೆರೂಸಲೇಮ್ ದೇವಾಲಯ | ಕೆಟ್ಟ ಒಕ್ಕಲಿಗರ ದೃಷ್ಟಾಂತ ಮದುವೆಯ ಔತಣ | 21:33 – 22:14 | 12:1–12 | 20:9–19 | |
| | ಯೆರೂಸಲೇಮ್ ದೇವಾಲಯ | ತೆರಿಗೆಯ ವಿಷಯದಲ್ಲಿ ಬಂದ ಪ್ರಶ್ನೆ, ಪುನರುತ್ಥಾನ, ಆಜ್ಞೆ | 22:41–46 | 12:13–34 | 20:20–40 | |
| | ಯೆರೂಸಲೇಮ್ ದೇವಾಲಯ | ಯೇಸುವು ಮೆಸ್ಸೀಯನ ಸಂತಾನದ ವಿಷಯದಲ್ಲಿ ಪ್ರಶ್ನೆಗೆ ಉತ್ತರವಿಲ್ಲದ ಹಾಗೆ ಮಾಡಿದುದು | 22:41–46 | 12:35–37 | 20:40–41 | |
| | ಯೆರೂಸಲೇಮ್ ದೇವಾಲಯ | ಫರಿಸಾಯರು ಶಾಸ್ತ್ರಿಗಳ ಕಪಟದ ತೀವ್ರವಾದ ಖಂಡನೆ | 23:1–39 | 12:38–40 | 20:45–47 | |
| | ಯೆರೂಸಲೇಮ್ ದೇವಾಲಯ | ವಿದವೆಯ ದುಗ್ಗಾಣಿ | | 12:41–44 | 21:1–4 | |
| | ಒಲಿವ ಮರಗಳ ಗುಡ್ಡ | ಯೆರೂಸಲೇಮಿನ ನಾಶನವನ್ನು ಮುಂದಾಗಿ ಹೇಳಿದುದು, ಯೇಸುವಿನ ಪ್ರತ್ಯಕ್ಷತೆ, ಯುಗಾಂತ್ಯ | 24:1–51 | 13:1–37 | 21:5–38 | |
| | ಒಲಿವ ಮರಗಳ ಗುಡ್ಡ | ಹತ್ತು ಮಂದಿ ಕನ್ಯೆಯರ, ತಲಾಂತುಗಳು, ಕುರಿ ಮತ್ತು ಆಡುಗಳ ದೃಷ್ಟಾಂತ | 25:1–46 | | | |
| ನಿಸಾನ್ 12 | ಯೆರೂಸಲೇಮ್ | ಧಾರ್ಮಿಕ ನಾಯಕರುಗಳು ಯೇಸುವಿನ ಮರಣಕ್ಕೆ ಸಂಚು ಮಾಡಿದುದು | 26:1–5 | 14:1, 2 | 22:1, 2 | |
| | ಯೆರೂಸಲೇಮ್ | ಯೇಸುವನ್ನು ಹಿಡುಕೊಡಲು ಯಾಜಕರೊಡನೆ ಯೂದನ ಚೌಕಾಶಿ | 26:17–19 | 14:10–11 | 22:3–6 | |
| ನಿಸಾನ್ 13 | ಯೆರೂಸಲೇಮ್ | ಪಸ್ಕದ ಸೌರಣೆ | 26:17–19 | 14:12–16 | 22:7–13 | |
| ನಿಸಾನ್ 14 | ಯೆರೂಸಲೇಮ್ | 12ಮಂದಿ ಜೊತೆಯಲ್ಲಿ ಪಸ್ಕದ ಬೋಜನ | 26:20–21 | 14:17–18 | 22:14–18 | |
| | ಯೆರೂಸಲೇಮ್ | ಯೇಸು ಅಪೋಸ್ತಲರ ಕಾಲು ತೊಳೆದದ್ದು | | | | 13:1–20 |
| | ಯೆರೂಸಲೇಮ್ | ಯೂದನು ದ್ರೋಹಿಯೆಂದು ಗುರುತು ಹಚ್ಚಿದುದು ಮತ್ತು ಆತನನ್ನು ಹೊರಗೆ ಕಳುಹಿಸಿದುದು | 26:21–25 | 14:18–21 | 22:21–23 | 13:21–30 |

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| | ಯೆರೂಸಲೇಮ್ | ಹನ್ನೊಂದು ಮಂದಿಯೊಂದಿಗೆ ಸ್ಮರಣ ಭೋಜನ ಏರ್ಪಡಿಸಿದುದು | 26:26–29 | 14:22–25 | 22:19,20, 24–30 | (1ಕೊರಿ. 11:23–25) |
| | ಯೆರೂಸಲೇಮ್ | ಪೇತ್ರನು ಅಲ್ಲಗಳೆದುದು, ಶಿಷ್ಯರು ಚದುರಿಸಲ್ಪಡುವುದನ್ನು ಮುಂತಿಳಿಸಿದುದು | 26:31–35 | 14:37–31 | 22:31–38 | 13:31–38 |
| | ಯೆರೂಸಲೇಮ್ | ಸಹಾಯಕನು, ಪರಸ್ಪರ ಪ್ರೀತಿ, ಶ್ರಮಸಂಕಟಗಳು, ಯೇಸುವಿನ ಪ್ರಾರ್ಥನೆ | | | | 14:1 – 17:26 |
| | ಗೆತ್ಸೆಮನೆ | ತೋಟದಲ್ಲಿ ವ್ಯಥೆ, ಯೇಸುವನ್ನು ಹಿಡುಕೊಟ್ಟುದುದು ಮತ್ತು ಬಂಧನ | 26:30, 36–56 | 14:26, 32–52 | 22:39–53 | 18:1–12 |
| | ಯೆರೂಸಲೇಮ್ | ಅನ್ನನು ಕಾಯಫನು ಸನ್ಹದ್ರೀನ್ ಇವರಿಂದ ವಿಚಾರಣೆ, ಪೇತ್ರನು ಅಲ್ಲಗಳೆದುದು | 26:57–27:1 | 14:53–15:1 | 22:54–57 | 18:13–27 |
| | ಯೆರೂಸಲೇಮ್ | ಹಿಡಿದುಕೊಟ್ಟ ಯೂದನು ನೇಣು ಹಾಕಿಕೊಂಡದ್ದು | 27:3–10 | | (ಅ.ಕೃ 1:18–19) | |
| | ಯೆರೂಸಲೇಮ್ | ಪಿಲಾತನ, ಹೆರೋದನ ಮತ್ತು ಪಿಲಾತನ ಎದುರಿನಲ್ಲಿ | 27:2–11–14 | 15:1–5 | 23:1–12 | 18:28–38 |
| | ಯೆರೂಸಲೇಮ್ | ಪಿಲಾತನು ಯೇಸುವಿನ ಬಿಡುಗಡೆಗೆ ಪ್ರಯತ್ನಿಸಿದ ನಂತರ ಮರಣಕ್ಕೆ ಒಪ್ಪಿಸಿದುದು | 27:15–30 | 15:6–19 | 23:13–15 | 18:39–19:16 |
| ಮಧ್ಯಾಹ್ನ 3 ಗಂಟೆ | ಗೋಲ್ಗೊಥ ಯೆರೂಸಲೇಮ್ | ಶಿಲುಬೆಯಲ್ಲಿ ಯೇಸುವಿನ ಮರಣ ಅಲ್ಲಿ ನಡೆದ ಸಂಗತಿಗಳು | 27:31–56 | 15:20–41 | 23:26–49 | 19:16–30 |
| | ಯೆರೂಸಲೇಮ್ | ಯೇಸುವಿನ ದೇಹವನ್ನು ಶಿಲುಬೆಯಿಂದ ಇಳಿಸಿ ಹೂಣಿಟ್ಟಿದ್ದು | 27:57–61 | 15:42–47 | 23:50–56 | 19:31–42 |
| ನಿಸಾನ್ 15 | ಯೆರೂಸಲೇಮ್ | ಯಾಜಕರು ಮತ್ತು ಫರಿಸಾಯರು ಸಮಾಧಿಗೆ ಕಾವಲುಗಾರರನ್ನು ಪಡಕೊಂಡಿದುದು | 27:62–66 | | | |
| ನಿಸಾನ್ 16 | ಯೆರೂಸಲೇಮ್ ಹತ್ತಿರ | ಯೇಸುವಿನ ಪುನರುತ್ಥಾನ, ಮತ್ತು ಆ ದಿನದ ಘಟನೆಗಳು | 28:1–15 | 16:1–8 | 24:1–49 | 20:1–25 |
| | ಯೆರೂಸಲೇಮ್, ಗಲಿಲಾಯ | ಯೇಸುಕ್ರಿಸ್ತನ ಆನಂತರದಲ್ಲಿನ ಕಾಣಿಸಿಕೊಳ್ಳುವಿಕೆ | 28:16–20 | (1ಕೊರಿಂಥ 15:5–7) | (ಅ.ಕೃ. 1:3–8) | 20:26 – 21:25 |
| ಐಯ್ಯರ್ 25 | ಬೇಥಾನ್ಯದ ಹತ್ತಿರ, ಒಲಿವ ಮರಗಳ ಗುಡ್ಡ | ಪುನರುತ್ಥಾನದ ನಂತರ ನಾಲ್ವತ್ತನೆ ದಿನದಲ್ಲಿ ಯೇಸುವಿನ ದಿವಾರೋಹಣ | (ಅ.ಕೃ. 1:9–12) | | 24:50–53 | |



**ಧರ್ಮೋಪದೇಶಕರೊಂದಿಗೆ ಯೇಸು**

"ಆತನು ಅವರಿಗೆ – ನೀವು ನನ್ನನ್ನು ಹುಡುಕಿದ್ದೇನು? ನಾನು ನನ್ನ ತಂದೆಯ ಮನೆಯಲ್ಲಿ ಇರಬೇಕಾದದ್ದು ನಿಮಗೆ ತಿಳಿಯಲಿಲ್ಲವೇ? ಎಂದು ಉತ್ತರ ಕೊಟ್ಟನು" (ಲೂಕ – 2:49)

# ಯೇಸುವಿನ ಸೇವಾಕಾರ್ಯಗಳಿಗೂ ಮೊದಲಿನ ಕಾಲಗಳು

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ. ಪೂ. 3 | ಯೆರೂಸಲೇಮ್ ದೇವಾಲಯ | ಸ್ನಾನಿಕನಾದ ಯೋಹಾನನ ಜನನವನ್ನು ಜೆಕರ್ಯನಿಗೆ ಮುಂತಿಳಿಸಿದುದು | | | 1:5–25 | |
| ಕ್ರಿ. ಪೂ. 2 | ನಜರೇತ್ ಯೂದಾಯ | ಯೆಸುವಿನ ಜನನವನ್ನು ಮರಿಯಳಿಗೆ ಮುಂತಿಳಿಸಿದುದು ಆಕೆ ಎಲಿಜಬೆತಳನ್ನು ಭೇಟಿಮಾಡಿದ್ದು | | | 1:25–56 | |
| ಕ್ರಿ. ಪೂ. 2 | ಯೂದಾಯದ ಮಲೆನಾಡು | ಸ್ನಾನಿಕನಾದ ಯೋಹಾನನ ಜನನ ನಂತರದ ಆತನ ಅರಣ್ಯದಲ್ಲಿನ ಜೀವಿತ | | | 1:57–80 | |
| ಕ್ರಿ. ಪೂ. 2 ಅಕ್ಟೋಬರ್ | ಬೆತ್ಲೆಹೇಮ್ | ಅಬ್ರಹಾಮನ ಮತ್ತು ದಾವೀದನ ಸಂತತಿಯಾಗಿ (ತನ್ನ ಮೂಲಕವೇ ಸಮಸ್ತವೂ ಉಂಟಾಗಿರುವ ವಾಕ್ಯವೆಂಬುವವನಾದ) ಯೇಸುವಿನ ಜನನ | 1:1–25 | | 2:1–7 | 1:1–5 – 9–14 |
| | ಬೆತ್ಲೆಹೇಮ್ ಸಮೀಪ | ದೇವ ದೂತರು ಶುಭ ಸಮಾಚಾರವನ್ನು ಪ್ರಕಟಿಸಿದ್ದುದು ಕುರುಬರು ಮಗುವನ್ನು ಭೇಟಿ ಮಾಡಿದ್ದುದು | | | 2:8–20 | |
| | ಬೆತ್ಲೆಹೇಮ್ ಯೆರೂಸಲೇಮ್ | (ಎಂಟನೇ ದಿನದಲ್ಲಿ) ಯೇಸುವಿಗೆ ಸುನ್ನತಿಯಾದದ್ದು. (ನಾಲ್ವತ್ತನೇ ದಿನದಲ್ಲಿ) ದೇವಾಲಯದಲ್ಲಿ ಅರ್ಪಿಸಿದುದು. | | | 2:21–39 | |
| ಕ್ರಿ. ಪೂ. 1 ಅಥವಾ ಕ್ರಿ. ಶ. 1 | ಯೆರೂಸಲೇಮ್ ಬೆತ್ಲೇಹೇಮ್ ನಜರೇತ್ | ಜೋಯಿಸರು, ಐಗುಪ್ತಕ್ಕೆ ಓಡಿಹೋದುದು. ಮಕ್ಕಳು ಕೊಲ್ಲಲ್ಪಟ್ಟದ್ದು, ಯೇಸುವು ಹಿಂದಿರುಗಿದುದು | 2:1–23 | | 2:39–40 | |
| ಕ್ರಿ. ಶ. 12 | ಯೆರೂಸಲೇಮ್ | ಪಸ್ಕದಲ್ಲಿ ಹನ್ನೆರಡು ವರುಷದ ಯೇಸು ಮನೆಗೆ ಹೋದುದು | | | 2:41–52 | |
| ಕ್ರಿ.ಶ. 29 ಚೈತ್ರಕಾಲ | ಅರಣ್ಯ, ಯೋರ್ದಾನ್ | ಸ್ನಾನಿಕನಾದ ಯೋಹಾನನ ಸೇವಾಕಾರ್ಯ | 3:1–12 | 1:1–8 | 3:1–18 | 1:6–8, 15, 28 |

## ಲೂಕ 1:5–25

ಯೂದಾಯದ ಅರಸನಾದ ಹೆರೋದನ ಕಾಲದಲ್ಲಿ ಅಬೀಯನ ವರ್ಗಕ್ಕೆ ಸೇರಿದ ಜಕರೀಯನೆಂಬ ಒಬ್ಬ ಯಾಜಕ–ನಿದ್ದನು. ಅವನ ಹೆಂಡತಿಯು ಆರೋನನ ವಂಶದವಳು. ಆಕೆಯ ಹೆಸರು ಎಲಿಜಬೆತ್. ಅವರಿಬ್ಬರೂ ಕರ್ತನ ಎಲ್ಲಾ ಆಜ್ಞೆಗಳನ್ನೂ ನೇಮನಿಷ್ಠೆಗಳನ್ನೂ ಕೈಕೊಂಡು ತಪ್ಪಿಲ್ಲದೆ ನಡೆದುಕೊಳ್ಳುತ್ತಾ ದೇವರ ದೃಷ್ಟಿಯಲ್ಲಿ ನೀತಿವಂತರಾಗಿದ್ದರು. ಆದರೆ ಎಲಿಜಬೇತಳು ಬಂಜೆಯಾದುದರಿಂದ ಅವರಿಗೆ ಮಕ್ಕಳಿರಲಿಲ್ಲ; ಇದಲ್ಲದೆ ಅವರಿಬ್ಬರೂ ದಿನ ಹೋದವರಾಗಿದ್ದರು.

ಹೀಗಿರಲಾಗಿ ಜಕರೀಯನ ವರ್ಗದ ಸರದಿ ಬಂದಾಗ ಅವನು ದೇವರ ಸನ್ನಿಧಿಯಲ್ಲಿ ಯಾಜಕ ಧರ್ಮವನ್ನು ನಡೆಸುತ್ತಿರಲು ದೇವಾಲಯದೊಳಕ್ಕೆ ಹೋಗಿ ಧೂಪವನ್ನರ್ಪಿಸು–ವುದು ಯಾಜಕರ ಮರ್ಯಾದೆಯ ಪ್ರಕಾರ ಅವನ ಪಾಲಿಗೆ ಬಂದಿತು. ಧೂಪವನ್ನು ಅರ್ಪಿಸುವ ಹೊತ್ತಿನಲ್ಲಿ ಜನರ ಗುಂಪೆಲ್ಲಾ ಹೊರಗೆ ನಿಂತು ದೇವರನ್ನು ಪ್ರಾರ್ಥಿಸುತ್ತಿರಲಾಗಿ ಕರ್ತನ ದೂತನು ಧೂಪಪೀಠದ ಬಲಗಡೆಯಲ್ಲಿ ನಿಂತುಕೊಂಡವನಾಗಿ ಅವನಿಗೆ ಕಾಣಿಸಿಕೊಂಡನು. ಜಕರೀಯನು ಅವನನ್ನು ಕಂಡು ತತ್ತರಗೊಂಡು ಭಯಹಿಡಿದವನಾದನು. ಆದರೆ ಆ ದೂತನು ಅವನಿಗೆ – ಜಕರೀಯಾ, ಭಯಪಡಬೇಡ; ನಿನ್ನ ವಿಜ್ಞಾಪನೆ ದೇವರಿಗೆ ಮುಟ್ಟಿತು; ನಿನ್ನ ಹೆಂಡತಿಯಾದ ಎಲಿಜಬೇತಳು ನಿನಗೆ ಒಬ್ಬ ಮಗನನ್ನು ಹೆರುವಳು. ನೀನು ಅವನಿಗೆ ಯೋಹಾನನೆಂದು ಹೆಸರಿಡಬೇಕು. ನಿನಗೆ ಸಂತೋಷವೂ ಉಲ್ಲಾಸವೂ ಉಂಟಾಗುವುದು; ಮತ್ತು ಅವನು ಹುಟ್ಟಿದ್ದಕ್ಕೆ ಬಹು ಜನರು ಸಂತೋಷಪಡುವರು. ಅವನು ಕರ್ತನ ದೃಷ್ಟಿಯಲ್ಲಿ ಮಹಾಪುರುಷನಾಗಿರುವನು, ದ್ರಾಕ್ಷಾರಸ ವನ್ನಾಗಲಿ, ಮದ್ಯವನ್ನಾಗಲಿ ಕುಡಿಯದವನಾಗಿರುವನು, ಅವನು ಹುಟ್ಟಿದಂದಿನಿಂದಲೂ ಪವಿತ್ರಾತ್ಮಭರಿತನಾಗಿರುವನು. ಇಸ್ರಾಯೇಲ್ಯರಲ್ಲಿ ಅನೇಕರನ್ನು ಅವರ ದೇವರಾಗಿರುವ ಕರ್ತನ ಕಡೆಗೆ ತಿರುಗಿಸುವನು. ಅವನು ಆತನ ಮುಂದೆ ಹೋಗಿ ಎಲೀಯನ ಗುಣಶಕ್ತಿಗಳಿಂದ ಕೂಡಿದವನಾಗಿ ತಂದೆಗಳ ಹೃದಯವನ್ನು ಮಕ್ಕಳ ಕಡೆಗೂ ಹಟಹಿಡಿದವರನ್ನು ನೀತಿವಂತರ ಜ್ಞಾನದ ಕಡೆಗೂ ತಿರುಗಿಸಿ, ಸಿದ್ಧವಾದ ಜನವನ್ನು ಕರ್ತನಿಗೆ ಒದಗಿಸುವನು ಎಂದು ಹೇಳಿದನು. ಜಕರೀಯನು ಆ ದೂತನಿಗೆ – ಇದನ್ನು ನಾನು ಯಾತರಿಂದ ತಿಳುಕೊಳ್ಳಲಿ? ನಾನು ಮುದುಕನು, ನನ್ನ ಹೆಂಡತಿಯೂ ದಿನ ಹೋದವಳು ಎಂದು ಹೇಳಿದ್ದಕ್ಕೆ ಆ ದೂತನು – ನಾನು ದೇವರ ಸನ್ನಿಧಿಯಲ್ಲಿ ನಿಲ್ಲುವ ಗಬ್ರಿಯೇಲನು; ನಿನ್ನ ಕೂಡ ಮಾತಾಡಿ ಈ ಶುಭ ವರ್ತಮಾನವನ್ನು ನಿನಗೆ ತಿಳಿಸುವುದಕ್ಕಾಗಿ ನಾನು ಕಳುಹಿಸಲ್ಪಟ್ಟಿದ್ದೇನೆ. ಈ ನನ್ನ ಮಾತುಗಳು ತಕ್ಕ ಸಮಯದಲ್ಲಿ ನೆರವೇರುವುದು; ಆದರೆ ನೀನು ಅದನ್ನು ನಂಬದೆ ಹೋದದ್ದರಿಂದ ಅದೆಲ್ಲಾ ಸಂಭವಿಸುವ ದಿನದ ವರೆಗೂ ಮಾತನಾಡಲಾರದೆ ಮೂಕನಾಗಿರುವಿ ಎಂದು ಅವನಿಗೆ ಉತ್ತರ ಕೊಟ್ಟನು. ಇಷ್ಟರೊಳಗೆ ಜನರು ಜಕರೀಯನ್ನು ಕಾದುಕೊಂಡಿದ್ದು ಅವನು ದೇವಾಲಯದೊಳಗೆ ತಡವಾಡಿದುದಕ್ಕೆ ಆಶ್ಚರ್ಯಪಟ್ಟರು. ಅವನು ಹೊರಗೆ ಬಂದಾಗ ಅವರ ಕೂಡ ಏನೂ ಮಾತನಾಡಲಾರದೇ ಇರಲು ಅವರು – ಇವನಿಗೆ ದೇವಾಲಯದಲ್ಲಿ ಏನೋ ದಿವ್ಯ ದರ್ಶನವಾಗಿರಬೇಕು ಎಂದು ತಿಳುಕೊಂಡರು. ಅವನು ಅವರಿಗೆ ಕೈಸನ್ನೆ ಮಾಡುತ್ತಾ ಮೂಕನಾಗಿಯೇ ಇದ್ದನು. ಅವನ ಯಾಜಕವರ್ಗದ ದಿನಗಳು ತೀರಿದ ನಂತರ ಅವನು ತನ್ನ ಮನೆಗೆ ಹೋದನು.

ಆ ದಿವಸಗಳಾದ ಮೇಲೆ ಅವನ ಹೆಂಡತಿಯಾದ ಎಲಿಜಬೇತಳು ಬಸುರಾಗಿ ಐದು ತಿಂಗಳು ಮನೆಯಲ್ಲೇ ಮರೆಯಾಗಿದ್ದು – ಕರ್ತನು ಈ ಕಾಲದಲ್ಲಿ ನನ್ನನ್ನು ಪರಾಮರಿಸಿ ನನಗೆ ಈ ರೀತಿಯಾಗಿ ಮಾಡಿ ಜನರಲ್ಲಿ ನನಗಿದ್ದ ಅವಮಾನವನ್ನು ಪರಿಹರಿಸಿದ್ದಾನಲ್ಲ ಅನ್ನುತಿದ್ದಳು.

# ಕ್ರಿಸ್ತನ ಮುಂದೂತನು

**ರೀಪ್ರಿಂಟ್ ಪುಟ 1915**

## ಲೂಕ 1:5–17

**"ಮಗುವೇ ನೀನಾದರೋ ಪರಾತ್ಪರನ ಪ್ರವಾದಿಯೆನಿಸಿಕೊಳ್ಳುವಿ**
**ನೀನು ಕರ್ತನ ಮುಂದೆ ಹೋಗಿ ಆತನ ಹಾದಿಯನ್ನು ಸಿದ್ಧ ಮಾಡುವವನಾಗಿಯೂ..."**

ಚಿರಪರಿಚಿತವಾದ ಈ ನಿರೂಪಣೆಯನ್ನು ಪರಿಗಣನೆ ಮಾಡುವಾಗ ನಾವು ನೆನಪಿಸಿಕೊಳ್ಳವುದೇನೆಂದರೆ; ತನ್ನ ಮಹತ್ವವುಳ್ಳ ಕಾರ್ಯದ ವಿವಿಧ ಭಾಗಗಳ ನಿರ್ವಹಣೆಗಾಗಿ ಆಯಲ್ಪಡುವ ತನ್ನ ಸಾಧನಗಳನ್ನು ಸಿದ್ಧ ಮಾಡುವಲ್ಲಿ ದೇವರು ತೆಗೆದುಕೊಳ್ಳುವ ವಿಶೇಷ ಜಾಗರೂಕತೆಯ ವಿಷಯ. ಅಬ್ರಹಾಮನ ಜೀವಿತವು ನಂಬಿಕೆಯ ಮತ್ತು ತಾಳ್ಮೆಯ ಒಂದು ಸುದೀರ್ಘ ಶಿಕ್ಷಣದ ಕಾಲವಾಗಿತ್ತು; ಯಾಕೆಂದರೆ ಆತನು ನಂಬಿಕೆಗೆ ಮೂಲ ಪುರುಷನೂ ದೇವರು ತೋರುವ ಪಿತೃಭಾವಕ್ಕೆ ಒಂದು ಆದರ್ಶವೂ ಆಗಿ, ಧರ್ಮಶಾಸ್ತ್ರದ ಅಡಿಯಲ್ಲಿ ಹಾಗೂ ಕೃಪೆಯ ಸಂಬಂಧದ ನೂತನ ಒಡಂಬಡಿಕೆಯಲ್ಲಿ ಬರುವ ಈ ಎರಡು ಬಗೆಯ ತನ್ನ ಮಕ್ಕಳೆಲ್ಲರಿಗೂ ಒಂದು ಒಳ್ಳೆಯ ಮಾದರಿಯಾಗಬೇಕಿತ್ತು. – ರೋಮಾ 4:11–17.

ಮೋಶೆಯು ಇಸ್ರಾಯೇಲ್ಯರಿಗೆ ನಾಯಕನೂ, ನ್ಯಾಯವಿಧಿಗಳನ್ನು ನೀಡುವವನೂ ಮತ್ತು ನ್ಯಾಯಾಧಿ–ಪತಿಯೂ ಆಗುವುದಕ್ಕೆ ವಿಶೇಷ ರೀತಿಯಲ್ಲಿ ಸಿದ್ಧ ಮಾಡಲ್ಪಟ್ಟನು. ದಾಸತ್ವದ ಹೀನಾವಸ್ಥೆಯಲ್ಲಿ ಮತ್ತು ಮರಣವಾಗಬೇಕೆಂಬ ರಾಜಾಜ್ಞೆಯಿದ್ದ ಸ್ಥಿತಿಯಲ್ಲಿ ಹುಟ್ಟಿ ದೇವಾನುಗ್ರಹದಿಂದ ರಕ್ಷಿಸಲ್ಪಟ್ಟು ರಾಜ ಕುಟುಂಬದಲ್ಲಿ ದತ್ತು ತೆಗೆಯಲ್ಪಟ್ಟು ಸಂರಕ್ಷಿಸಲ್ಪಟ್ಟನು. ಅವನು ಅಲ್ಲಿ ತನ್ನ ಮುಂದಿನ ಸೇವೆಗೆ ಅಗತ್ಯವಾದ ವಿದ್ಯಾಭ್ಯಾಸ ಪಡೆದನು. ನಂತರದಲ್ಲಿ ಮತ್ತೆ ವಿಶ್ರಾಂತಿಯಿಂದ ನಾಲ್ವತ್ತು ವರುಷಗಳ ಗೃಹಸ್ಥನ ಜೀವಿತ ನಡೆಸಿದ್ದನು. ಅಲ್ಲಿ ದೈವ ಕೃಪೆಯಿಂದ ಆತನ ಸದ್ಗುಣಗಳು ಧೃಡ ಮಾಡಲ್ಪಟ್ಟು ಮಾನಸಿಕ ಪ್ರವೃತ್ತಿಗಳು ಪರಿಶ್ರಮದ ಮೂಲಕ ಪಕ್ವಗೊಂಡವು. ಹೀಗೆ ದೇವರು ಇಸ್ರಾಯೇಲ್ಯರಿಗೆ ಒಬ್ಬ ತರಬೇತಾದ ಅನುಭವಿ ವ್ಯಕ್ತಿತ್ವವುಳ್ಳ ನಾಯಕನನ್ನು ನೀಡಿದನು. ಇದರಂತೆಯೇ ಇತರರ ವಿಷಯಗಳಲ್ಲೂ ಅವರು ಗಳಿಸಲಿರುವ ಸ್ಥಾನ ಮಾನ ನಡೆಸಲಿರುವ ಕಾರ್ಯಗಳಿಗೆ ಸೂಕ್ತವಾದ ಸಿದ್ಧತೆಗಳು ಮಾಡಲ್ಪಟ್ಟದ್ದು ಸತ್ಯವೇದದಲ್ಲಿ ಹಾಗೂ ನಂತರದ (ಕ್ರೈಸ್ತ ಸಭಾ) ಚರಿತ್ರೆಯಲ್ಲಿ ಕಂಡುಬರುವುದು ಬಹು ಗಮನಾರ್ಹ. ಸಮುವೇಲನ ವಿಷಯವನ್ನು ಗಮನಿಸಿ, ಪ್ರಾರ್ಥನಾ ಮನೋಭಾವವುಳ್ಳ ಮಗುವಾಗಿ ತನ್ನ ಬಾಲ್ಯದಿಂದಲೇ ದೇವರಿಗೆ ಅರ್ಪಿಸಿಕೊಂಡು ಏಲಿಯ ಪರಿಪಾಲನೆಯಲ್ಲಿ ದೇವರ ಸೇವೆಗೆ ತರಬೇತಾದನು; ಮತ್ತು ಪೌಲನೂ ಸಹ ಬಾಲ್ಯದಲ್ಲೇ ಕರೆಯಲ್ಪಟ್ಟು ಧರ್ಮಶಾಸ್ತ್ರದಲ್ಲಿ ಶಿಕ್ಷಣ ಪಡೆದನು. ತನಗೆ ಅರಿವಿಲ್ಲದೆಯೇ ಭಕ್ತರನ್ನು ಹಿಂಸಿಸುವಾಗಲೂ ಸಹ ದೇವರ ವಿಷಯವಾದ ಆಸಕ್ತಿಯಿಂದ ಕೂಡಿದವನಾಗಿ ತಾನು ನಿಜವಾಗಿ ದೇವರ ಸೇವೆಯನ್ನು ಮಾಡುತ್ತಿದ್ದೇನೆಂದು ನೆನಸಿದ್ದನು.

ಸ್ನಾನಿಕನಾದ ಯೋಹಾನನು ಇನ್ನೊಂದು ದೃಷ್ಟಾಂತ–ವಾಗಿದ್ದನು. ಇಂತಹ ಹಲವರ ವಿಷಯಗಳಲ್ಲಿದ್ದಂತೆ, ಸಿದ್ಧತೆಗಳು ಆತನು ಹುಟ್ಟುವುದಕ್ಕೆ ಮೊದಲೇ ಅತನ ತಂದೆ ತಾಯಿಗಳ ಹೃದಯದಲ್ಲಿ ನಡೆದವು. "ಅವರಿಬ್ಬರೂ ಕರ್ತನ ಎಲ್ಲಾ ಆಜ್ಞೆಗಳನ್ನು ನೇಮನಿಷ್ಟೆಗಳನ್ನು ಕೈಗೊಂಡು ತಪ್ಪಿಲ್ಲದೆ ನಡಕೊಳ್ಳುತ್ತಾ ದೇವರ ದೃಷ್ಟಿಯಲ್ಲಿ ನೀತಿವಂತರಾಗಿದ್ದರು". (ವಚನ 6) ಇತಿಹಾಸದ ಎಲ್ಲಾ ಪುಟಗಳಲ್ಲಿ ಪರಿಚಿತವಾಗಿರುವ ಮುಂದಿನ ಕಾಲದಲ್ಲಿನ ಮತಸುಧಾರಕರನ್ನು ಸಹ ಲಕ್ಷ್ಯಕ್ಕೆ ತೆಗೆದುಕೊಂಡು, ಅವರು ತಮಗೆ ಯಾವ ವಿಧದಲ್ಲಿಯೂ ತಿಳಿಯಲು ಸಾಧ್ಯವಾಗದ, ಬಹು ಮುಂದಿದ್ದ ಅವರ ಕಾರ್ಯಗಳಿಗೆ ದೇವಾನುಗ್ರಹದ ಮೂಲಕವಾಗಿ ಸಿದ್ಧತೆ ಹೊಂದಿದ ಬಗೆಯನ್ನು ಗುರುತಿಸಿಕೊಳ್ಳಿ. (ಕ್ರಿಸ್ತನ) ಸಾವಿರ ವರುಷದಲ್ಲಿ ನಡಿಸಲಿರುವ ಕಾರ್ಯಗಳಿಗೆ ಸುವಾರ್ತಾ ಯುಗದ ಸಭೆಯನ್ನು ದೇವರು ಹೇಗೆ ಸಿದ್ಧ ಮಾಡುತ್ತಿದ್ದಾನೆಂಬುದನ್ನೂ ಮತ್ತು ನಂಬಿಕೆಯ ಮೂಲಕ ಒಳ್ಳೆಯ ಹೆಸರನ್ನು ಸಂಪಾದಿಸಿದ ಪೂರ್ವಕಾಲದ ಯೋಗ್ಯರನ್ನು (ಕ್ರಿಸ್ತನ) ಸಾವಿರ ವರುಷದ ಭೂಲೋಕದ ರಾಜ್ಯದ ಕಾರ್ಯಗಳಿಗೆ ಸಿದ್ಧಪಡಿಸಿದನೆಂಬುದನ್ನು ಸಹ ಲಕ್ಷ್ಯಕ್ಕೆ ತೆಗೆದುಕೊಳ್ಳಿ. ಮತ್ತು ಇದೇ ರೀತಿಯಲ್ಲಿ ತಾನು ಆದುಕೊಂಡ ಸಾಧನಗಳ ಪಟ್ಟಿಯಲ್ಲಿ ಬರುವವರೆಲ್ಲರ ವಿಷಯಗಳು. ಆಯಲ್ಪಟ್ಟ ಸಾಧನಗಳಾದವರು ಯಾವಾಗಲೂ ಉದ್ದೇಶಿತ ಸೇವೆಗೆ ಸಿದ್ಧ ಮಾಡಲ್ಪಟ್ಟಿರುವ ಸಾಧನಗಳು. ಮತ್ತು ಆ ಸಿದ್ಧತೆಗಳು ಸ್ವತಃ ಸಾಧನಗಳಾದವರ ಮೂಲಕವಾಗಿರದೆ ಅವು ದೇವರಿಂದಾದವುಗಳು. ಇಲ್ಲಿ ಪ್ರತಿಯೊಬ್ಬರ ವಿಷಯಗಳಲ್ಲೂ, ಅವರು ಪೂರ್ಣಗೊಳಿಸಬೇಕಿರುವ ಉದ್ದೇಶಗಳು ಅಥವಾ ಇದಕ್ಕಾಗಿ ದೇವಾನುಗ್ರಹದ ಮೂಲಕವಾಗಿ ಉಂಟಾದ ಸನ್ನಿವೇಶಗಳ ಇಲ್ಲವೇ ಬೇಕಿರುವ ಶಿಸ್ತು ಸಂಯಮಗಳ ಪರಿಮಾಣಗಳು ಇವುಗಳ ಮಹತ್ವಗಳನ್ನು ತಿಳಿಯುವ ಮೊದಲೇ ಈ ಸಿದ್ಧತೆಗಳು ಪ್ರಾರಂಭವಾಗಿದ್ದವು ಎಂಬ ಅಂಶವು ತೋರಿಬರುತ್ತದೆ.

ತನ್ನ ಘನವಾದ ಸೇವೆಯ ಪ್ರತಿಯೊಂದು ಭಾಗಗಳಿಗೂ ದೇವರು ಬಯಸುವ ಪ್ರಮುಖ ಸಿದ್ಧತೆಗಳು ಅಂದರೆ ಅದು ದೇವರ ಮತ್ತು ಆತನ ನೀತಿ ಸತ್ಯತೆಗಳಿಗೆ ತೋರುವ ಭಕ್ತಿ ಮತ್ತು ಅಪವಿತ್ರ ಹಾಗು ಅಶುದ್ಧವಾದವುಗಳೆಲ್ಲವುಗಳನ್ನು ತಿರಸ್ಕರಿಸಿರುವ ಪವಿತ್ರವಾದ ಹೃದಯ. "ಯೆಹೋವನ ಆಲಯದ ಉಪಕರಣಗಳನ್ನು ಹೊರುವವರೆ, ನೀವು ಶುದ್ಧರಾಗಿರಿ!" ದೇವರ ಸೇವೆಯ ಕೆಲವು ಭಾಗಗಳಿವೆ, ಅದರಲ್ಲಿ ಭಾಗಿಗಳಾಗುವವರಿಗೆ ಗೌರವ ಫಲಿಸುವುದಿಲ್ಲ. ಆದರೂ ಅವು ತನ್ನ ವೈರಿಗಳ ಕೋಪವನ್ನೂ ಸಹ ತನಗೆ ಸಾಧಕವನ್ನಾಗಿ ಮಾಡಿ, ಅವರ ಕೆಡುಕುಗಳೆಲ್ಲ ತನ್ನ ಧ್ಯೇಯೋದ್ದೇಶಗಳಿಗೆ ಪ್ರಯೋಜನವಾಗು–ವಂತೆ ಮಾರ್ಪಡಿಸಿ, ದೇವರ ಜ್ಞಾನ ಶಕ್ತಿಗಳಿಗೆ ಗೌರವ ಫಲಿಸುವಂತೆ ಮಾಡುತ್ತವೆ. ದೃಷ್ಟಾಂತವಾಗಿ, ಸೈತಾನನು ಹಾಗೂ ಕೆಟ್ಟದ್ದನ್ನು ಮಾಡುವ ಇತರ ಎಲ್ಲರ ಕೆಟ್ಟ ಉಪಾಯ ಸಂಚುಗಳನ್ನೆಲ್ಲಾ ಅವರಿಗೆ ಅರಿವಿಲ್ಲದೆಯೇ ದೇವರಿಗೆ ಒಳ್ಳೆಯದಾಗುವಂತೆ ದೈವ ಬಲದ ಮೂಲಕ ಅವುಗಳು ಮಾರ್ಪಡುತ್ತವೆ. ಅದು ಕೆಲವು ಸಮಯ ದೇವರ ಮಕ್ಕಳ ಶಿಸ್ತು ಶಿಕ್ಷಣಗಳಿಗಾಗಿ ಮತ್ತು ಕೆಲವು ಸಮಯ ಪ್ರಪಂಚದ ಸಂಗತಿಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತರುವುದಕ್ಕಾಗಿ ದೇವರಿಂದ ಮಾರ್ಪಡಿಸಲಾಗುತ್ತದೆ.

ಸ್ನಾನಿಕನಾದ ಯೋಹಾನನಿಗೆ ತಾನು ಹುಟ್ಟುವ ಪೂರ್ವದಲ್ಲಿನ ಪ್ರಭಾವ ಹೇಗಿತ್ತೆಂದರೆ ಹುಟ್ಟಿದಂದಿನಿಂದ ಅವನ ಹೃದಯವು ದೇವರ ಮತ್ತು ಪರಿಶುದ್ಧತೆಯ ಕಡೆಗೆ ಒಲವು ತೋರಿತ್ತು. ಆತನ ಜೀವನದಲ್ಲಿನ ಶಿಸ್ತು ಮತ್ತು ಹೊಂದಿದ ತರಬೇತುಗಳು ಎಂಥದ್ದೆಂದರೆ, ಅವನು ಪ್ರೌಢಾವಸ್ಥೆಗೆ ಬಂದಾಗ ದೀರ್ಘಕಾಲದಿಂದ ವಾಗ್ದಾನ ಮಾಡಲ್ಪಟ್ಟ ಮೆಸ್ಸೀಯನನ್ನು ಪರಿಚಯಿಸುವ ಕಾರ್ಯಕ್ಕೆ ಸಿದ್ಧನಾಗಿದ್ದನು. ಆತನ ವಿಷಯದಲ್ಲಿ –"ಅವನು ಕರ್ತನ ದೃಷ್ಟಿಯಲ್ಲಿ ಮಹಾ ಪುರುಷನಾಗಿರುವನೆಂದು" ಮುಂತಿಳಿಸಲಾಗಿತ್ತು. ಹೌದು ಅವನು ಒಬ್ಬ ಮಹಾ ಪುರುಷನೂ, ಶ್ರೇಷ್ಠ ಬೋಧಕನೂ ಮತ್ತು ಪ್ರವಾದಿಗಳಲ್ಲಿ ಶ್ರೇಷ್ಠನೂ ಆಗಿದ್ದನು. (ಮತ್ತಾಯ 11:11) ಆದರೆ ಅವನು ಮನುಷ್ಯರ ದೃಷ್ಟಿಯಲ್ಲಿ ಶ್ರೇಷ್ಟನಾಗಿರಲಿಲ್ಲ. ಅವನು ಎಂದೂ ಹೆರೋದನ ಅರಮನೆಯಲ್ಲಿ ಅತಿಥಿಯಾಗಿರಲಿಲ್ಲ. ಆದರೆ ಆತನ ಸೆರೆಮನೆಯಲ್ಲಿ ಬಂಧಿತನಾಗಿದ್ದನು. ಅವನು ಯೆಹೂದ್ಯರ ಸಭಾ ಮಂದಿರಗಳಲ್ಲಿ ಒಬ್ಬ ವಾಗ್ಮಿಯಾಗಿ ಮಾನ್ಯತೆ ಪಡೆದಿರಲಿಲ್ಲ. ಆದರೆ "ಅಡವಿಯಲ್ಲಿ ಕೂಗುವ ಶಬ್ಧವಾಗಿದ್ದನು" ಅವನು ನೇರಳೆಯ ಮತ್ತು ಹೊಳಪು

ನಾರಿನ ಬಟ್ಟೆಗಳಿಂದ ಭೂಷಿತನಾಗಿರಲಿಲ್ಲ ಇಲ್ಲವೇ ಪ್ರತಿ ದಿನವೂ ಮೃಷ್ಟಾನ್ನ ಭೋಜನ ಮಾಡುತ್ತಿರಲಿಲ್ಲ. ಆದರೆ ಒಂಟೆಯ ಕೂದಲಿನ ಬಟ್ಟೆ ಮತ್ತು ತೊಗಲಿನ ನಡುಕಟ್ಟು ಅವನ ಉಡುಗೆಯಾಗಿದ್ದು ಮಿಡತೆ ಮತ್ತು ಕಾಡು ಜೇನೂ ಅವನ ಆಹಾರವಾಗಿದ್ದವು. ತನ್ನ ಬೋಧನೆಯಿಂದ ಸ್ವಲ್ಪಕಾಲ ಜನಸಮೂಹದಿಂದ ಆಕರ್ಷಿತನಾದರೂ ಸ್ವಲ್ಪ ಸಮಯದಲ್ಲೇ ಜನರಿಂದ ಕೈಬಿಡಲ್ಪಟ್ಟು ಹೆರೋದನಿಂದ ಬಂಧಿನಾಗಿ ಕಡೆಗೆ ಸೆರೆಮನೆಯಲ್ಲಿ ತಲೆಹೊಯ್ಯಿಸಿಕೊಂಡನು.

ಹೀಗಿದ್ದರೂ ಯೋಹಾನನು ನಿಜವಾಗಿಯೂ ಒಬ್ಬ ಮಹಾ ಪುರುಷನಾಗಿದ್ದನು. ಯಾಕೆಂದರೆ ಅವನು "ದೇವರ ದೃಷ್ಟಿಯಲ್ಲಿ ಶ್ರೇಷ್ಠನಾಗಿದ್ದನು" ತನ್ನನ್ನು ಆಳುವವನು ಪಟ್ಟಣವನ್ನು ಗೆದ್ದವನಿ–ಗಿಂತಲೂ ಬಲಿಷ್ಠ ಎಂಬ ದೇವ ವಾಕ್ಯದಲ್ಲಿರುವ ನೀತಿ ತತ್ವಗಳ ಅನುಸಾರ ಅವನು ಶ್ರೇಷ್ಠನಾಗಿದ್ದನು. ತನ್ನ ಸಹಜ ಅಭಿಲಾಷೆ ಮತ್ತು ಮಾನವಾಕಾಂಕ್ಷೆಗಳೆಲ್ಲವನ್ನೂ ತನ್ನ ದಾಯಾದಿಯಾದ ನಜರೇತಿನ ಯೇಸುವನ್ನು ಪರಿಚಯಿಸುವ ಕಾರ್ಯೋದ್ದೇಶಕ್ಕೆ ಅಧೀನ ಮಾಡಿಕೊಂಡಿದ್ದನು. ದೀನಾವಸ್ಥೆಯ ಸನ್ನಿವೇಶಗಳಲ್ಲಿ ಜನಿಸಿದವನಾದ ಮೆಸ್ಸೀಯನನ್ನು ಪರಿಚಯಿಸಿದ ಕಾರ್ಯವನ್ನು ನೆರವೇರಿಸಿದ ನಂತರ ಅನ್ಯಜನಗಳೂ ಆತನಿಗೆ ವಿಧೇಯರಾಗುವ ರೆಂದು ಆತನಿಗೆ ತಿಳಿದಿತ್ತು. (ಆದಿಕಾಂಡ 49:10) ಯೋಹಾನನಿಗೆ ಸಂಗತಿಗಳು ಈ ರೀತಿಯಲ್ಲಿ ನಡೆಯುವುದು ಮೆಚ್ಚಿಗೆಯಾಗಿದ್ದವು. ಮತ್ತು ಶರೀರ ಸಂಭಂದದ ತನ್ನ ದಾಯಾದಿಯ ಸೇವೆಯನ್ನು ಮಾಡಿ ಹೀಗೆ ತನ್ನ ವಿಷಯವಾದ ದೈವೋದ್ಧೇಶ ಹಾಗೂ ಪ್ರವಾದನೆಗಳನ್ನು ಈಡೇರಿಸುವುದರಲ್ಲಿ ತನ್ನ ಸಂತೋಷವು ಪೂರ್ಣವಾಯಿತೆಂದು ಪ್ರಕಟಮಾಡಿ ಹೇಳಿದ್ದನು. (ಯೋಹಾನ 3:29) ದೀನಾವಸ್ಥೆಯಲ್ಲಿರುವ ನಜರಾಯನು ದೇವಕುಮಾರ–ನೆಂದು ತನ್ನ ನಂಬಿಕೆಯೆಂಬ ಮನೋನೇತ್ರದಿಂದ ಗ್ರಹಿಸಿ ಜನರಿಗೆ ಹೀಗೆ ಹೇಳಿದ್ದನು – "ನನಗಿಂತ ಶಕ್ತನು ಬರುತ್ತಾನೆ, ಆತನ ಕೆರಗಳ ಬಾರನ್ನೂ ಬಿಚ್ಚುವುದಕ್ಕೂ ನಾನು ಯೋಗ್ಯನಲ್ಲ". "ಅಗೋ (ಯಜ್ಞಕ್ಕೆ) ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವನು" "ಆತನು ವೃದ್ಧಿಯಾಗಬೇಕು; ನಾನು ಕಡಿಮೆ ಯಾಗಬೇಕು". – ಲೂಕ 3:16; ಯೋಹಾನ 1:29; 3:30.

ಈ ವಿಧವಾದ ಸಾತ್ವಿಕತ್ವ, ಪೂರ್ಣ ಸ್ವಾರ್ಥತ್ಯಾಗ, ದೇವರ ನೀತಿಯುಳ್ಳ ಚಿತ್ತವನ್ನು ನೆರವೇರಿಸುವ ಈ ಏಕ ಉದ್ದೇಶಗಳೇ ಯೋಹಾನನಿಗೆ ನೈತಿಕ ಶ್ರೇಷ್ಠತೆಯನ್ನು ಉಂಟುಮಾಡಿತ್ತು. ಆತನು ಈ ಮನೋಭಾವವದಲ್ಲಿದ್ದುದರ ಕಾರಣದಿಂದಲೇ ದೇವರು ಈತನನ್ನು ಬಳಸಿಕೊಂಡದ್ದು. ಅವನು ಎಲ್ಲ ಪ್ರವಾದಿಗಳಲ್ಲಿ ಶ್ರೇಷ್ಠನಾಗಿ ಉನ್ನತವಾದ ಗೌರವ ಹೊಂದುವ ಸೌಭಾಗ್ಯ ಪಡೆದನು. ಹೀಗೆ ಅವನು ಆ ವಿಮೋಚಕನೂ ಮುಂದಿನ ಕಾಲದಲ್ಲಿನ ಸರ್ವಲೋಕದ ಅರಸನೂ ಆಗಿರುವ ಅಭಿಷಕ್ತನಾದ ದೇವ ಕುಮಾರನನ್ನು ಇಸ್ರಾಯೇಲ್ಯರಿಗೂ ಹಾಗೂ ಲೋಕಕ್ಕೂ ಪರಿಚಯಿಸಲು ಆಯ್ಕೆಯಾದನು. ಈ ರೀತಿಯಲ್ಲಿ ಆತನು ಮಹಾಪುರುಷನೂ, ನೀತಿ ಸತ್ಯತೆಗಳ ಒಬ್ಬ ಶ್ರೇಷ್ಠ ಬೋಧಕನೂ, ಪ್ರವಾದಿಗಳಲ್ಲಿ ಶ್ರೇಷ್ಠನೂ, ಭೂಲೋಕದಲ್ಲಿನ ದೇವರ ರಾಜ್ಯಕ್ಕೆ ಬಾಧ್ಯಸ್ಥರಲ್ಲಿ ಒಬ್ಬನೂ ಆದನು.

"ದೇವರ ದೃಷ್ಟಿಯಲ್ಲಿ ಶ್ರೇಷ್ಠನು" ಆಗಬೇಕೆಂದು ಬಯಸುವವರಿಗೆ ಇಲ್ಲಿರುವುದು ಎಂಥಾ ಒಂದು ಪ್ರಯೋಜನಕರ ಪಾಠ. "ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ; ಆತನು ತಕ್ಕ ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು". (1ಪೇತ್ರ 5:6) ಎಂಬ ಅಪೋಸ್ತಲನ ಬುದ್ಧಿಮಾತನ್ನು ಇದು ನಮ್ಮ ನೆನಪಿಗೆ ತರುವುದು. ಶಿಲುಬೆಗೆ ನಡೆಸುವ ಹಾದಿ, ನಿಂದನಾ ತಿರಸ್ಕಾರ ಮತ್ತು ಸ್ವಾರ್ಥ ತ್ಯಾಗಗಳಿಂದ ಕೂಡಿದ ದಾರಿಯು ಕಿರೀಟ ದೊರಕಿಸುವ ಮಾರ್ಗ. ಇದು ದೇವರಿಂದ ಬರುವ ನಿಜವಾದ ಹೊಗಳಿಕೆ ಗೌರವಗಳಿಂದ ಕೂಡಿರುವುದು. ಲೋಕದಲ್ಲಿ ಶ್ರೇಷ್ಠರೆನಿಸಿ–ಕೊಂಡು ಮೃತರಾದ ಸೀಸರುಗಳು ಹೆರೋದರುಗಳು ಅಲೆಗ್ಸಾಂಡರುಗಳು ನೆಪೋಲಿಯನ್ನರುಗಳು ಯೆಹೂದ್ಯರ ಶಾಸ್ತ್ರಿಗಳು ಫರಿಸಾಯರು, ನ್ಯಾಯಶಾಸ್ತ್ರಿಗಳು ಮತ್ತು ರಬ್ಬಿಗಳು ಇವರ ವೈಭವಗಳು ಈಗ ಎಲ್ಲಿವೆ? ಘನವಂತರಾದ ಪೋಪರು ಕಾರ್ಡಿನಲ್ಲರುಗಳು, ಬಿಷೋಪರುಗಳು, ಮತ್ತು ತಮ್ಮ ಕಾಲದಲ್ಲಿ ಮತಭ್ರಷ್ಟತೆಯನ್ನು ಹೆಮ್ಮೆಯಿಂದ ಪ್ರವರ್ಧಮಾನಕ್ಕೆ ತಂದ ಸೇವಕ ವರ್ಗದವರುಗಳು ಎಲ್ಲಿಯವರು? ಇವರೆಲ್ಲರೂ ಏನೂ ಇಲ್ಲದವರಾಗಿ (ಕ್ರಿಸ್ತನ) ಸಾವಿರ ವರುಷದ ನ್ಯಾಯವಿಚಾರಣೆಯ ಕಾಲದಲ್ಲಿ ಎದ್ದು ಬಂದು ತಮ್ಮ ಎಲ್ಲಾ ಗೌರವಗಳನ್ನು ಕಳಕೊಂಡವರಾಗಿ ಅವಮಾನ ಗೊಂದಲಗಳಿಗೆ ಗುರಿಯಾಗುವರು. ಆದರೆ ನಿಜವಾಗಿ ಶ್ರೇಷ್ಠರಾದವರು – "ದೇವರ ದೃಷ್ಟಿಯಲ್ಲಿ ಶ್ರೇಷ್ಠರಾದವರು" – ಕ್ರಿಸ್ತನು ತನ್ನ ರಾಜ್ಯದಲ್ಲಿ ಮಹಿಮೆಯಿಂದ ಪ್ರತ್ಯಕ್ಷನಾಗುವಾಗ ಇವರು ಮಾನ ಪ್ರಭಾವ ಅಧಿಕಾರಗಳನ್ನು ಪಡೆಯುವುದಕ್ಕಾಗಿ ಕಾಯ್ದಿರಿಸಲ್ಪಡುವರು.

"ನಿಮ್ಮಲ್ಲಿ ಹೆಚ್ಚಿನವನು ಚಿಕ್ಕವನಂತಾಗಬೇಕು, ಮುಖ್ಯಸ್ಥನು ಸೇವಕನಂತಾಗಬೇಕು" ಎಂಬ ಈ ಪಾಠವು ನಮ್ಮಲ್ಲಿ ಪ್ರತಿಯೊಬ್ಬನ ಹೃದಯದಲ್ಲಿ ಬಂದು ನೆಲೆಸುವಂತಾಗಲಿ. ಈಗ ತಾಳ್ಮೆಯಿಂದ ದೀನತೆಗೆ ಒಳಪಡಿಸಿಕೊಂಡವರಾಗಿ ಮುಂದಿನ ಕಾಲದಲ್ಲಿ ನಂಬಿಗಸ್ತರಾದವರಲ್ಲಿ ಪ್ರತ್ಯಕ್ಷವಾಗಲಿರುವ ಮಹಿಮೆಯನ್ನು ನಿರೀಕ್ಷಿಸಿ ಉಲ್ಲಾಸದಿಂದ ಅದಕ್ಕೆ ಕಾಯೋಣ. ಫಲಾಪೇಕ್ಷೆಗೆ ಇದು ಕಾಲವೂ ಅಲ್ಲ, ಅದಕ್ಕೆ ತಕ್ಕ ಸ್ಥಳವೂ ಅಲ್ಲ. ಆದರೆ ಇದು ಶಿಸ್ತು ಸಂಯಮಗಳನ್ನು ಪಡೆದು ಸೇವೆ ಮಾಡುವವರಾಗಿ ಗುಣಗಳಲ್ಲಿ ಅಭಿವೃದ್ಧಿಯನ್ನು ಹೊಂದುತ್ತಾ ಮುಂದೆ ದೊರೆಯಲಿರುವ ಉನ್ನತ ಪದವಿಗೆ ನಮ್ಮನ್ನು ಸಿದ್ಧ ಮಾಡಿಕೊಳ್ಳುವ ಸಮಯ. ಹೀಗೆ ನಾವು ಕಳಂಕ ಸುಕ್ಕು ಅಥವಾ ಇಂಥ ಯಾವುದೊಂದೂ ಇಲ್ಲದೆ ನಮ್ಮ ವಿಮೋಚಕನೊಂದಿಗೆ ಸಹ ಬಾಧ್ಯರಾಗುವೆವು.

ವಚನ 16 ಮತ್ತು 17ನೇ ವಾಕ್ಯ ವಿವರಣೆಗಳಿಗೆ ಸತ್ಯವೇದ ಪಾಠ ಮಾಲೆಯ 2ನೇ ಗ್ರಂಥದ 8ನೇ ಅಧ್ಯಾಯವನ್ನು ನೋಡಿ.

# ದೇವರ ರಾಜ್ಯಕ್ಕೆ ಸಿದ್ಧರಾಗುವುದು

**ರೀಪ್ರಿಂಟ್ ಪುಟ 4939**

## ಲೂಕ 1:5–23

**"ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ" – ಇಬ್ರಿಯ 11:6**

ಒಂದು ವರುಷಕ್ಕೆ ಬೇಕಾಗುವ ನಮ್ಮ ಬೆರಿಯನ್ ಪಾಠಾಧ್ಯಯದ ವಿಷಯಗಳು ಅಂತರ–ರಾಷ್ಟ್ರೀಯ ಸಮಿತಿಯಿಂದ ನಿಗಧಿತವಾಗುತ್ತವೆ. ಅದು ನಮ್ಮ ಕರ್ತನು ಲೋಕದಲ್ಲಿ ಹುಟ್ಟಿದಂದಿನಿಂದ ಪರಲೋಕಕ್ಕೇರುವ ವರೆಗಿನ ಜೀವಿತ ವಿಷಯಗಳ ಕೂಲಂಕುಷವಾದ ಪರಿಶೀಲನೆಗಳನ್ನು ಒಳಗೊಂಡಿರುತ್ತದೆ. ನಮ್ಮ ವಿಮೋಚಕನನ್ನು ಪ್ರಕಟಿಸಿದ ಮುಂದೂತನಾದ ಸ್ನಾನಿಕ ಯೋಹಾನನ ಜನನದವರೆಗಿನ ದೇವರ ನಡಾವಳಿಗಳು ಮತ್ತು ಇದರ ಸಂಬಂಧವಾದ ಆತನ ವಾಗ್ದಾನಗಳ ಪರಿಶೀಲನೆಯನ್ನು ಬಹು ಸಮಂಜಸವಾದ ರೀತಿಯಲ್ಲಿ ಪರಿಶೀಲಿಸಲು ಇಂದಿನ ಅಧ್ಯಯನವು ಕರೆನೀಡುತ್ತದೆ.

ಯೇಸುವಿನ ಜನನಕ್ಕೆ ನಾಲ್ಕು ಸಾವಿರ ವರುಷಗಳ ಹಿಂದೆ ದೇವರು ಸ್ತ್ರೀ ಸಂತತಿಯು ಘಟಸರ್ಪದ ತಲೆಯನ್ನು ಜಜ್ಜುವುದೆಂದು ಪ್ರಕಟಿಸಿದ್ದನು. ಲೋಕದಲ್ಲಿರುವ ಪಾಪ ಮತ್ತು ಅದರ ವಿನಾಶಕಾರಿ ಕೃತ್ಯಗಳು ಕ್ಲುಪ್ತಕಾಲದಲ್ಲಿ ರದ್ದುಮಾಡಲ್ಪಟ್ಟು ನಾಶ ಮಾಡಲ್ಪಡುತ್ತದೆಂದು ಈ ಒಗಟಾದ ಮಾತು ಸೂಚಿಸು – ತ್ತದೆಂದು ನಾವು ಈಗ ನೋಡುತ್ತೇವೆ. ಈ ನಿಮಿತ್ತವಾಗಿ ದೇವರ ಶಕ್ತಿಯು ಅವಿಧೇಯಳಾದ ಹವ್ವಳ ವಿಶೇಷ ಕುಮಾರನ ಮೂಲಕವಾಗಿ ಕಾರ್ಯ ನಡೆಸುತ್ತದೆ. ಈ ವಾಗ್ದಾನ ನೆರವೇರದೆ ಶತಮಾನಗಳು ಕಳೆದವು. ನಮ್ಮ ಮಾನವಕುಲವು ಬಹು ಹೀನಸ್ಥಿತಿಗೆ ಬಂದು ಅಧಿಕಧಿಕವಾಗಿ ಅಪನಂಬಿಕೆಗೆ ಜಾರಿ ಹೋಯಿತು. ಅನಂತರದಲ್ಲಿ ಸೇತನ ವಂಶದಲ್ಲಿ ಹನೋಕನು ಹುಟ್ಟಿದನು. "ಹನೋಕನು ದೇವರ ಅನ್ಯೋನ್ಯತೆಯಲ್ಲಿ ನಡೆದನು" ಮತ್ತು ದೇವರ ಪರವಾಗಿ ಮಾತನಾಡಿ ಹೆಚ್ಚಿನ ಪ್ರವಾದನೆಗಳನ್ನು ಕೊಡಲು ಬಳಸಲ್ಪಟ್ಟನು. ಆತನು ಹೇಳಿದ್ದು, "ಇಗೋ, ಕರ್ತನು ಲಕ್ಷಾಂತರ ಪರಿಶುದ್ಧದೂತರನ್ನು ಕೂಡಿಸಿಕೊಂಡು ಎಲ್ಲರಿಗೆ ನ್ಯಾಯತೀರಿಸುವುದಕ್ಕೂ.... ಬಂದನು" (ಯೂದ 15).

ದೇವರು ಲೋಕಕ್ಕೆ ಒಂದು ಹೊಸ ನ್ಯಾಯವಿಚಾರಣೆಯ ಅವಕಾಶ ನೀಡುವ ಯಾವುದೇ ಒಂದು ತನ್ನ ಕೃಪೋದ್ದೇಶವನ್ನು ಸೂಚಿಸಲು ಮತ್ತೊಂದು ಸಾವಿರ ವರುಷಗಳು ಕಳೆದವು. ಅನಂತರದಲ್ಲಿ ತನ್ನ ಸ್ನೇಹಿತನಾದ ಅಬ್ರಹಾಮನಿಗೆ ಹೆಚ್ಚು ಪೂರ್ಣವಾಗಿ ಲೋಕಕ್ಕೆ ಇನ್ನೂ ನಿರೀಕ್ಷೆಯಾಗಿರುವ ಸುವಾರ್ತೆಯು ದೇವರಿಂದ ತಿಳಿಸಲ್ಪಟ್ಟಿತ್ತು. ಭೂಲೋಕದ ಎಲ್ಲಾ ಕುಲಗಳನ್ನು ತಾನು ಆಶೀರ್ವದಿಸುವ ಮತ್ತು ಎರಡನೆಯದಾಗಿ, ಮಾನವಕುಲಕ್ಕೆ ಅಬ್ರಹಾಮನ ಸಂತತಿಯ ಮೂಲಕ ಈ ಆಶೀರ್ವಾದ ಬರುವಂತೆ ಮಾಡುವ ತನ್ನ ಉದ್ದೇಶವನ್ನು ಅಬ್ರಹಾಮನಿಗೆ ದೇವರು ಪ್ರಕಟಿಸಿದನು. "ನಿನ್ನ ಸಂತತಿಯ ಮೂಲಕ ಭೂಲೋಕದ ಎಲ್ಲಾ ಕುಲಗಳವರಿಗೂ ಆಶೀರ್ವಾದ ಉಂಟಾಗುವ..." (ಆದಿಕಾಂಡ 12:3)

ಅಬ್ರಹಾಮನಿಗೆ ಕೊಟ್ಟ ಈ ಹೇಳಿಕೆಯನ್ನು ಭಕ್ತನಾದ ಪೌಲನು ಮೊದಲನೇ ಸುವಾರ್ತಾ ಸಂದೇಶವೆಂದು ಉಚ್ಚರಿಸಿದ್ದಾನೆ. ಯಾಕೆಂದರೆ ಇತರ ಹೇಳಿಕೆಗಳಲ್ಲಿ ಮಾನವರನ್ನು ಸುಸ್ಥಿತಿಗೆ ಮರಳಿ ತರುವ ವಿಷಯವು ನಿರ್ಧಿಷ್ಟವಾಗಿಲ್ಲದೆ ಅಸ್ಪಷ್ಟ ರೂಪದಲ್ಲಿರುತ್ತಿತ್ತು. ಸ್ತ್ರೀ ಸಂತತಿಯು ವಿಶೇಷವಾಗಿ ಆಶೀರ್ವದಿಸಲ್ಪಡದೆ ಮತ್ತು ಭಕ್ತನಾದ ಹನೋಕನ ಹೇಳಿಕೆಯಲ್ಲಿ ಅಡಕವಾಗಿರುವ ಮಾನವ ಕುಲದ ನ್ಯಾಯತೀರ್ವಿಕೆಯಿಲ್ಲದೆ ಪಾಪ ಮತ್ತು ಘಟಸರ್ಪವನ್ನು ನಾಶ ಮಾಡಬಹುದಿತ್ತು. ಅದರೆ ಇದರಿಂದ ಮಾನವರಿಗೆ ಆಶೀರ್ವಾದ ಉಂಟಾಗುವುದೆಂದು ಖಚಿತವಾಗಿ ಹೇಳಲಾಗಲಿಲ್ಲ. ಹೀಗಿದ್ದರೂ ಅಬ್ರಹಾಮನಿಗೆ ನೀಡಿದ ಸಂದೇಶವು ಸುಸ್ಪಷ್ಟವಾಗಿತ್ತು. – "ನಿನ್ನ ಮೂಲಕ ಎಲ್ಲಾ ಜನಾಂಗಗಳವರಿಗೆ ಆಶೀರ್ವಾದ ಉಂಟಾಗುವುದು..." ಗಲಾತ್ಯ 3:8 ನೋಡಿ.

ದೇವರು ಬರಲಿರುವ ಆಶೀರ್ವಾದದ ವಿಷಯವಾಗಿ ಪ್ರಕಟಿಸಿರುವುದು ಮಾತ್ರವಲ್ಲದೆ ಅದಕ್ಕೆ ತನ್ನ ಆಣೆಯನ್ನು ಇಟ್ಟನೆಂದು ಭಕ್ತನಾದ ಪೌಲನು ನಮಗೆ ಜ್ಞಾಪಿಸಿದ್ದಾನೆ. ದೇವರ ಆಣೆಯು ಅಬ್ರಹಾಮನಿಗೆ ಅವಶ್ಯವಿರಲಿಲ್ಲ. ಅವನು ವಿಶ್ವಾಸದಿಂದ ಅದನ್ನು ನಂಬಿದ್ದನು. ಆದರೆ ಪೌಲನು ಹೇಳಿರುವಂತೆ ಆ ಆಣೆಯು ನಮಗೋಸ್ಕರವಾಗಿತ್ತು. ಈ ವಾಗ್ದಾನದ ನೆರವೇರಿಕೆಯು ಎಷ್ಟು ಮುಂದೂಡಲಾಗಿರುವುದೆಂದರೆ ಇದರಲ್ಲಿ ವಿಶೇಷವಾಗಿ ಆಸಕ್ತರಾದ ನಮಗೆ ದೇವರ ಕಾರ್ಯವಿಧಾನ ಬದಲಾಗಿರಬಹುದೆಂಬ ಭಯವನ್ನು ನಮ್ಮಲ್ಲಿ ಉಂಟುಮಾಡು– ವಂತಿದೆ. ಪೌಲನು ಭರವಸೆ ನೀಡಿರುವಂತೆ ಈ ಆಣೆಯು ಯಾವ ಕಾರಣಕ್ಕೆಂದರೆ "ಆಶ್ರಯವನ್ನು ಹೊಂದಬೇಕೆಂದು ಓಡಿಬಂದು ನಮ್ಮ ಮುಂದೆ ಇಟ್ಟಿರುವ ನಿರೀಕ್ಷೆಯನ್ನು ಹಿಡಿದುಕೊಂಡವರಾದ ನಮಗೆ (ಅಂದರೆ ಸಭೆಗೆ) ಎರಡು ನಿಶ್ಚಲವಾದ ಆಧಾರಗಳು (ದೇವರ ಮಾತು ಹಾಗೂ ದೇವರ ಆಣೆ) ಇರುವ ಕಾರಣ ಬಲವಾದ ಧೈರ್ಯ ಉಂಟಾಯಿತು. ಈ ಆಧಾರಗಳನ್ನು ಕೊಟ್ಟಿರುವಲ್ಲಿ ದೇವರು ಸುಳ್ಳಾಡಿರಲಾರನು. ಆ ನಿರೀಕ್ಷೆಯು (ಶುಭ ವಾರ್ತೆಯಲ್ಲಿರುವ ವಾಗ್ದಾನ) ನಮ್ಮ ಪ್ರಾಣಕ್ಕೆ ಲಂಗರದ ಹಾಗಿದ್ದು ಭರವಸಕ್ಕೆ ಯೋಗ್ಯವಾದದ್ದು ಸ್ಥಿರವಾದದ್ದೂ ಆಗಿದೆ. ಅದು ತೆರೆಯೊಳಗಣ ದೇವಸಾನಿಧ್ಯವನ್ನು ಪ್ರವೇಶಿಸುವಂಥದ್ದು. ಯೇಸು ಸದಾಕಾಲವೂ ಮೆಲ್ಕಿಜದೇಕನ ತರಹದ ಮಹಾಯಾಜಕನಾಗಿದ್ದು ನಮಗೋಸ್ಕರ ಮುಂದಾಗಿ ಹೋಗಿ ಆ ಸಾನಿಧ್ಯವನ್ನು ಪ್ರವೇಶಿಸಿದ್ದಾನೆ." (ಇಬ್ರಿಯ 6:18–20) ಹೀಗಿದ್ದಲ್ಲಿ, ಅಪೋಸ್ತಲನ ಮಾತಿನಂತೆ ಅಬ್ರಹಾಮನಿಗೆ ಮಾಡಿದ ವಾಗ್ದಾನ ಅಥವಾ ಒಡಂಬಡಿಕೆ ಈವರೆಗೂ ನೆರವೇರಲಿಲ್ಲ ಎಂದೂ ಅದು ಇನ್ನೂ ನಮ್ಮ ನಂಬಿಕೆಗೆ ಲಂಗರವಾಗಿದೆ ಎಂದೂ ನಾವು ನೋಡುತ್ತೇವೆ.

## ಅಬ್ರಹಾಮನ ಸಂತತಿಯ ಹುಡುಕುವಿಕೆ

ಇಷ್ಮಾಯೇಲಲನು ವಾಗ್ದಾನಕ್ಕೆ ಬಾಧ್ಯನಾಗಿದ್ದಿಲ್ಲ ಆದರೆ ಇಸಾಕನಾಗಿದ್ದನು; ಏಸಾವನಲ್ಲ ಆದರೆ ಯಾಕೋಬನು ಬಾಧ್ಯನಾಗಿದ್ದನು. ಕಡೆಯಲ್ಲಿ ಯಾಕೋಬನ ವಂಶದವರೆಲ್ಲೂ ಅಬ್ರಹಾಮನ ಸಂತತಿಯಾಗಿ ಅಂಗೀಕರಿಸಲ್ಪಟ್ಟಿದ್ದರು ಮತ್ತು ಅವರೆಲ್ಲರೂ ಕ್ಲುಪ್ತಕಾಲದಲ್ಲಿ ಮೋಶೆಯ ಮೂಲಕ ಮೇಘದಲ್ಲಿಯೂ ಸಮುದ್ರದಲ್ಲಿಯೂ ಸ್ನಾನದೀಕ್ಷೆ ಹೊಂದಿ ಸೀನಾಯಿ ಬೆಟ್ಟದಲ್ಲಿ ಕೊಡಲಾದ ನಿಬಂಧನೆಗಳಿಗೆ ವಿಧೇಯ–ರಾಗುವುದರ ಷರತ್ತಿನ ಮೇಲೆ ವಾಗ್ದಾನಕ್ಕೆ ಬಾಧ್ಯರಾದರು. ಧರ್ಮಶಾಸ್ತ್ರದ ಆಜ್ಞೆಗಳಿಗೆ ವಿಧೇಯರಾದಲ್ಲಿ ಅದು ಅವರಿಗೆ ನಿತ್ಯಜೀವ ದೊರಕಿಸಿ ಕೊಡುತ್ತಿತ್ತು. ತದನಂತರದಲ್ಲಿ ಇವುಗಳಿಗೆ ಮೆಚ್ಚಿಗೆಯಾಗಿ ನಡೆದವರು "ಭೂಲೋಕದ ಎಲ್ಲಾ ಕುಲಗಳ–ವರನ್ನು ಆಶೀರ್ವದಿಸುವ" ವಾಗ್ದಾನವನ್ನು ನೆರವೇರಿಸುವ ದೇವರ ಕಾರ್ಯಭಾರಿಗಳಾಗುವರು.

ಆದರೆ ಮರಣ ವಿಧಿಗೆ ಒಳಗಾಗಿ ಅಪೂರ್ಣತೆಯಲ್ಲಿದ್ದ ಮಾನವ ಕುಲದ ಉಳಿದ ಎಲ್ಲರಂತೆ ಇಸ್ರಾಯೇಲ್ಯರೂ ದೇವರ ಪರಿಪೂರ್ಣವಾದ ಆಜ್ಞೆಗಳನ್ನು ಕೈಗೊಳ್ಳಲು ಅಶಕ್ತರಾಗಿ ಉಳಿದ ಮನುಕುಲದವರಂತೆ ಮರಣ ಹೊಂದಿದರು. ಯಾಕೆಂದರೆ ಅವರು ಪಾಪಿಗಳಾಗಿದ್ದರು. ಯೇಸು ಹೇಳಿದಂತೆ "ನಿಮ್ಮಲ್ಲಿ ಒಬ್ಬನೂ ಆಜ್ಞೆಗಳಾನುಸಾರ ನಡೆಯುವುದಿಲ್ಲ". ಭಕ್ತನಾದ ಪೌಲನು ಹೇಳಿದಂತೆ "... ಯಾರಾದರೂ ನೇಮನಿಷ್ಠೆಗಳನ್ನು ಅನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡು–ವುದಿಲ್ಲ". ಹೀಗಿದ್ದರೂ ಆಜ್ಞೆಗಳಿಗೆ ವಿಧೇಯರಾಗುವ ತಮ್ಮ ಪ್ರಯತ್ನಗಳಿಂದ ಯೆಹೂದ್ಯರಿಗೆ ವಿಶೇಷ ಆಶೀರ್ವಾದಗಳು ದೊರೆತವು. ಆದರೂ ಕೆಲವರು ಇತರರಲ್ಲಿ ದೋಷಗಳನ್ನು ತೀವ್ರವಾಗಿ ಹುಡುಕುವವರಾಗಿ ಹೃದಯಪೂರ್ವಕವಾಗಿ ಪ್ರಾರ್ಥಿಸದವರಾದರು; ಇತರರು ನಿಜವಾದ ಇಸ್ರಾಯೇಲ್ಯನು ಇವನಲ್ಲಿ ಕಪಟವಿಲ್ಲ." ಎಂಬಂತಾದರು.

"ನಿಜವಾದ ಇಸ್ರಾಯೇಲ್ಯರ" ಹೃದಯಪೂರ್ವಕವಾದ ಪ್ರಮಾಣಿಕತೆಯನ್ನು ದೇವರು ಮೆಚ್ಚಿದನು ಮತ್ತು ಅವರಿಗೆ ಪಂಚಾಶತ್ತಮ ದಿನದಲ್ಲಿ ಮೋಶೆಯ ಮನೆಯಲ್ಲಿ ನಂಬಿಗಸ್ತರಾದ ಸೇವಕರಾಗಿದ್ದುದ್ದರಿಂದ ಹೊರಬಂದು ನಂಬಿಗಸ್ತ ಮಕ್ಕಳಾಗಿ ಕ್ರಿಸ್ತನ ಮನೆಯವರಾಗುವ ಸೌಭಾಗ್ಯವನ್ನು ಅನುಗ್ರಹಿಸಿದನು. (ಇಬ್ರಿಯ 2:5,6) "ಯಾರಾರು ಆತನನ್ನು (ಯೇಸುವನ್ನು) ಅಂಗೀಕರಿಸಿದರೋ... ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು" (ಯೋಹಾನ 1:12) ಯೇಸುವು ತನ್ನ ಜೀವವನ್ನು ಯಜ್ಞವನ್ನಾಗಿ ಅರ್ಪಿಸಿಕೊಂಡು ಮರಣದಿಂದ ಎಬ್ಬಿಸಲ್ಪಟ್ಟು ದೈವ ಸ್ವಭಾವ ಪಡೆದು ದೇವದೂತರುಗಳಿಗಿಂತಲೂ ಪ್ರಭುತ್ವಗಳಿಗಿಂತಲೂ ಅಧಿಕಾರಗಳಿಗಿಂತಲೂ ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟು ದೇವರ ಬಲಗಡೆಯಲ್ಲಿದ್ದು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯ ಬಯಸುವವರೆಲ್ಲರಿಗೆ ಅಂದರೆ "ನಿಜವಾದ ಇಸ್ರಾಯೇಲ್ಯರಿಗೆ" ಸಹಾಯಕನಾಗಿರಲು ದೇವರ ಕೃಪಾನುಗ್ರಹ ಸನ್ನಿಧಿಯಲ್ಲಿ ಕಾಣಿಸಿಕೊಂಡನು.

## ಇತರ ಕೃಪಾಪೂರ್ಣ ವಾಗ್ದಾನಗಳು

ದೇವರ ವಾಗ್ದಾನಗಳೆಲ್ಲವೂ ಅಬ್ರಹಾಮನ ಮತ್ತು ಆತನ ಸಂತತಿಗಾಗಿ (ಪ್ರಥಮವಾಗಿ ಆತನ ಶಾರೀರಿಕವಾದ ಸಂತತಿಗಾಗಿ) ಇದ್ದವು. ಪರಿಣಾಮವಾಗಿ ಯೆಹೂದ್ಯರ ಕಾಲದ ಉದ್ದಕ್ಕೂ ಅವರು ಜನಾಂಗವಾಗಿ ಧರ್ಮಶಾಸ್ತ್ರದ ಆಜ್ಞೆಗಳನ್ನು ಪಾಲಿಸಲು ಪರಿಶ್ರಮಿಸುತ್ತಾ ತಮ್ಮನ್ನು ಯೋಗ್ಯರಾದ ಅಬ್ರಹಾಮನ ಸಂತತಿ ಎನ್ನಿಸಿಕೊಳ್ಳಲು ಯತ್ನಿಸುವುದರಲ್ಲಿ ತಮ್ಮನ್ನೇ ತಾವು ಪ್ರಸಂಶಿಸಿಕೊಳ್ಳುತ್ತಿರುವಾಗ ದೇವರು ಅವರ ಕೂಡ ಪ್ರವಾದನೆಯ ರೂಪದಲ್ಲಿ ಮಾತನಾಡಿದನು. ಕಾಲಕ್ರಮೇಣ ಮೋಶೆಯ ಮಧ್ಯಸ್ತಿಕೆಯಲ್ಲಿ ಮಾಡಿಕೊಂಡ ಒಡಂಬಡಿಕೆಗಿಂತಲೂ ಉತ್ತಮವಾದ ಒಂದು ಹೊಸ ಒಡಂಬಡಿಕೆಯನ್ನು ಮಾಡಿಕೊಳ್ಳುವುದು ತನ್ನ ಉದ್ದೇಶವೆಂದು ಆತನು ಅವರಿಗೆ ತಿಳಿಸಿದನು. ಆ ಹೊಸ ಒಡಂಬಡಿಕೆಯ ಮೂಲಕ ಆತನು ಅವರ ಪಾಪ ಅಕ್ರಮಗಳನ್ನೆಲ್ಲಾ ಅಳಿಸಿಬಿಡುವನೆಂದು ಹೇಳಿದರೂ ಅವುಗಳು ಹೇಗೆ ಅಳಿಸಲ್ಪಡುವದೆಂದು ಆತನು ಹೇಳಲಿಲ್ಲ. ಅದು ಅವರು ವರುಷ ವರುಷವೂ ಅರ್ಪಿಸುವುದಕ್ಕಿಂತಲೂ "ಉತ್ತಮವಾದ ಯಜ್ಞಗಳ" ಮೂಲಕ ಅಳಿಸಲ್ಪಡುವವು.

ಈ ಹೊಸ ಒಡಂಬಡಿಕೆಗೆ ಮೋಶೆಗಿಂತಲೂ ಹೆಚ್ಚಿನವನಾದ ಒಬ್ಬ ಮಧ್ಯಸ್ತನಿರುವನೆಂಬ ಭರವಸೆಯನ್ನು ಅವರಿಗೆ ನೀಡಿದನು. ಈ ಮಧ್ಯಸ್ತನ ವಿಷಯವಾಗಿ ಮೋಶೆ ಪ್ರವಾದಿಸಿ ಹೀಗೆ ಹೇಳಿದನು – ದೇವರಾದ ಕರ್ತನು ನನ್ನನ್ನು ಏರ್ಪಡಿಸಿದಂತೆ ನಿಮ್ಮ ಸಹೋದರರಲ್ಲಿ ಮತ್ತೊಬ್ಬ ಪ್ರವಾದಿಯನ್ನು ನಿಮಗೆ ಏರ್ಪಡಿಸಿ ಕೊಡುವನು. ಆತನು ನಿಮಗೆ ಹೇಳುವ ಎಲ್ಲಾ ಮಾತುಗಳಿಗೆ ಕಿವಿಗೊಡಬೇಕು; ಆ ಪ್ರವಾದಿಯ ಮಾತನ್ನು ಕೇಳದಿರುವ ಪ್ರತಿಯೊಬ್ಬನು ನಮ್ಮ ಜನರೊಳಗಿಂದ ಸಂಪೂರ್ಣವಾಗಿ ನಾಶಮಾಡುವನು" ಅಪೋಸ್ತಲರ ಕೃತ್ಯಗಳು 3:23. ಆ ಶ್ರೇಷ್ಠ ಮಧ್ಯಸ್ಥನೇ ಅವರಿಗೆ ನಿಜವಾಗಿ ಸಹಾಯ ನೀಡಿ ಅವರು ದೇವರ ಆಜ್ಞೆಗಳನ್ನು ಪರಿಪೂರ್ಣವಾಗಿ ಪಾಲಿಸುವ ಸ್ಥಿತಿಗೆ ತಂದು ಭೂಲೋಕವನ್ನೆಲ್ಲಾ ಆಶೀರ್ವದಿಸುವ ಕಾರ್ಯದಲ್ಲಿ ಅವರು ದೇವರಿಂದ ಬಳಸಲ್ಪಡುವ ಹಾಗೆ ಮಾಡುವನು. ಯೆರೇಮಿಯ 31:31.

ಆ ನಂತರದಲ್ಲಿ ಇಸ್ರಾಯೇಲ್ಯರು ತಾವು ಮೆಸ್ಸೀಯನು ಅಥವಾ ದೇವರ ಅಭಿಷಕ್ತನು ಎಂದು ಕರೆಯುವ ಉತ್ತಮವಾದ ಮಧ್ಯಸ್ತನಿರುವ ಹೊಸ ಒಡಂಬಡಿಕೆಗೆ ಹೇಗೆ ಹಾತೊರೆದರು! ಆ ಮಹಿಮೆಯುಳ್ಳ ಮಧ್ಯಸ್ಥನ ಅಂದರೆ ಹೊಸ ಒಡಂಬಡಿಕೆಯ ಮಧ್ಯಸ್ಥನ ವಿಷಯವಾಗಿ ದೇವರ ಸಂದೇಶವನ್ನು ಕೇಳಿ; ಆತನು ಹೇಳಿದ್ದು "ಇಗೋ, ನನ್ನ ದೂತನನ್ನು ಕಳುಹಿಸುತ್ತೇನೆ, ಆತನು ನನ್ನ ಮುಂದೆ ದಾರಿಯನ್ನು ಸರಿಮಾಡುವನು; ನೀವು ಹಂಬಲಿಸುವ ಕರ್ತನು ತನ್ನ ಆಲಯಕ್ಕೆ ಫಕ್ಕನೆ ಬರುವನು; ಆಹಾ, ನಿಮಗೆ ಇಷ್ಟವಾದ ಒಡಂಬಡಿಕೆಯ ದೂತನು ಐತರುತ್ತಾನೆ; ಇದು ಸೇನಾಧೀಶ್ವರ ಯೆಹೋವನ ನುಡಿ. ಆತನು ಬರುವ ದಿನವನ್ನು ಯಾರು ತಾಳಾರು? ಆತನು ಕಾಣಿಸಿಕೊಳ್ಳುವಾಗ ಯಾರು ನಿಂತಾರು? ಆತನು ಅಕ್ಕಸಾಲಿಗನ ಬೆಂಕಿಗೂ ಅಗಸನ ಚೌಳಿಗೂ ಸಮಾನನಾಗಿದ್ದಾನೆ. ಬೆಳ್ಳಿಯನ್ನು ಶೋಧಿಸುವ ಅಕ್ಕಸಾಲಿಗನಂತೆ

ಕುಳಿತು ಲೇವಿ ವಂಶದವರನ್ನು ಶೋಧಿಸಿ ಬೆಳ್ಳಿ ಬಂಗಾರಗಳನ್ನೋ ಎಂಬಂತೆ ಶುದ್ಧೀಕರಿಸುವನು. ಅವರು ಸದ್ಧರ್ಮಿಗಳಾಗಿ ಯೆಹೋವನಿಗೆ ನೈವೇಧ್ಯವನ್ನು ತಂದೊಪ್ಪಿಸುವರು" ಮಲಾಕಿ 3:1–3.

ಹೀಗೆ ಇಸ್ರಾಯೇಲ್ಯರು ಮೆಸ್ಸೀಯನ ಬರುವಿಕೆಯ ವಿಷಯವಾಗಿ ಅಮೂಲ್ಯವಾದ ವಾಗ್ದಾನಗಳನ್ನು, ಮತ್ತು ಅಷ್ಟೇ ಅಲ್ಲದೆ, ಆ ಸಮಯದಲ್ಲಿ ಜೀವಿಸುತ್ತಿರುವವರಿಗೆ ವಿಶೇಷ ಪರಿಶೋಧನೆಗಳು ಕಷ್ಟಗಳು ಬರುವ ಸೂಚನೆಗಳನ್ನೂ ಪಡೆದಿದ್ದರು. ಸಹಜವಾಗಿ ಇಸ್ರಾಯೇಲ್ಯರಲ್ಲಿನ ಪ್ರತಿಯೊಬ್ಬ ತಾಯಿಯೂ ಒಂದು ಗಂಡು ಮಗುವಿಗಾಗಿ ಹಾತೊರೆಯುತ್ತಿದ್ದಳು. ಹೀಗೆ ಆಕೆ ಸರ್ಪದ ತಲೆಯನ್ನು ಜಜ್ಜುವ ಸ್ತ್ರೀ ಸಂತತಿಯನ್ನು ಮತ್ತು ಅಬ್ರಹಾಮನ ಸಂತತಿಯಲ್ಲಿನ ಒಬ್ಬ ವಿಶೇಷವಾದವನ ಮೂಲಕ, ತಿಳಿಯಲಾರದ ಒಂದು ಏರ್ಪಾಡಿನ ಮುಖಾಂತರ, ಲೇವಿಯ ಪುತ್ರರಿಗೆ, ಹಾಗೂ ಇಸ್ರಾಯೇಲ್ಯರಿಗೆ ಮಾತ್ರವಲ್ಲದೆ ಅವರ ಮೂಲಕ ಭೂಲೋಕದ ಎಲ್ಲಾ ಕುಲಗಳಿಗೆ ಒಂದು ದಿವ್ಯವಾದ ಆಶೀರ್ವಾದವು ಉಂಟಾಗಲಿರುವ ಆ ಮಗನನ್ನು ಹೆತ್ತಂತ ಗೌರವ ತನಗೆ ಲಭಿಸುವ ನಿರೀಕ್ಷೆಯಲ್ಲಿ ಇರುತ್ತಿದ್ದಳು.

ಈ ವಾಗ್ದಾನಗಳು ಸ್ನಾನಿಕನಾದ ಯೋಹಾನನ ಜನನದೆಡೆಗೆ ನಡೆಸಿ ಕೊನೆಗೊಂಡವು. ಆ ಘಟನೆಗಳಿಂದಲೇ ಇಂದಿನ ಅಧ್ಯಯನ ರಚನೆಯಾಗಿರುತ್ತದೆ. ಆತನು ಮೆಸ್ಸೀಯನು ಆಗಬೇಕಿರಲಿಲ್ಲ ಆದರೆ ಆತನನ್ನು ಪ್ರಕಟಿಸುವವನಾಗಿದ್ದನು. ಆತನು ಪವಿತ್ರಾತ್ಮನ ಮೂಲಕ ಒಂದು ಅದ್ಭುತವಾದ ರೀತಿಯಿಂದ ತಂದೆ ಇಲ್ಲದೆಯೇ ಜನ್ಮತಳೆದವನಲ್ಲ. ಆದರೆ, ನಮ್ಮ ಈ ಪಾಠವು ಸೊಗಸಾಗಿ ಹೇಳುವಂತೆ, ಒಬ್ಬ ವಿಶೇಷ ದೇವದೂತನ ಮುಖಾಂತರ ಆತನು ಪ್ರಕಟಿಸಲ್ಪಟ್ಟನು. ಜೆಕರೀಯನ ನಂಬಿಕೆ ಪರೀಕ್ಷಿಸಲ್ಪಟ್ಟಿದ್ದಾದಲ್ಲಿ – ಅದು ಆತನು ಒಂಭತ್ತು ತಿಂಗಳು ಮೂಕನಾಗಿರುವುದರ ಅನುಭವದಿಂದ ಸಹಾಯ ಹೊಂದಿ ಆ ನಂಬಿಕೆ ದೃಢಮಾಡಲ್ಪಟ್ಟದ್ದಾಗಿ ಕಂಡುಬಂತು. ಹೀಗೆ ದೇವರು ತನ್ನ ಒಬ್ಬನೇ ಕುಮಾರನನ್ನು ಮಾನವರ ವಿಮೋಚಕನಾಗುವುದಕ್ಕೆ ಕಳುಹಿಸುವ ಮೊದಲೇ ದಾರಿಯನ್ನು ಸಿದ್ಧಮಾಡಿದ್ದನು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ. ಪೂ. 2 | ನಜರೇತ್ ಯೂದಾಯ | ಯೇಸುವಿನ ಜನನವನ್ನು ಮರಿಯಳಿಗೆ ಮುಂತಿಳಿಸಿದುದು ಆಕೆ ಎಲಿಜಬೇತಳನ್ನು ಭೇಟಿಮಾಡಿದ್ದು | | | 1:26–56 | |
| | ಯೂದಾಯದ ಮಲೆನಾಡು | ಸ್ನಾನಿಕನಾದ ಯೋಹಾನನ ಜನನ, ಆನಂತರದ ಅವನ ಅರಣ್ಯ ಜೀವಿತ | | | 1:57–80 | |

## ಲೂಕ 1:26–80

ಆರನೆಯ ತಿಂಗಳಿನಲ್ಲಿ ದೇವರು ಗಬ್ರಿಯೇಲನೆಂಬ ತನ್ನ ದೂತನನ್ನು ಗಲಿಲಾಯ ಸೀಮೆಯ ನಜರೇತೆಂಬ ಊರಿಗೆ ಒಬ್ಬ ಕನ್ಯೆಯ ಬಳಿಗೆ ಕಳುಹಿಸಿದನು. ಅ ಕನ್ನೆಯ ಹೆಸರು ಮರಿಯಳು. ಆಕೆ ದಾವೀದನ ಮನೆತನದ ಯೋಸೇಫನೆಂಬ ಪುರುಷನಿಗೆ ನಿಶ್ಚಿತಾರ್ಥವಾಗಿದ್ದಳು. ಆ ದೂತನು ಆಕೆಯ ಬಳಿಗೆ ಬಂದು– ದೇವರ ದಯೆ ಹೊಂದಿದವಳೇ, ನಿನಗೆ ಶುಭವಾಗಲಿ, ಕರ್ತನು ನಿನ್ನ ಸಂಗಡ ಇದ್ದಾನೆ ಅಂದನು. ಆಕೆಯು ಆ ಮಾತಿಗೆ ತತ್ತರಿಸಿ– ಇದೆಂಥ ಆಶೀರ್ವಾದ ಎಂದು ಯೋಚಿಸುತ್ತಿರಲಾಗಿ ಆ ದೂತನು ಆಕೆಗೆ–ಮರಿಯಳೇ, ಹೆದರಬೇಡ; ನಿನಗೆ ದೇವರ ದಯೆ ದೊರಕಿತು. ಇಗೋ, ನೀನು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೆರುವಿ, ಆತನು ಮಹಾಪುರುಷನಾಗಿ ಪರಾತ್ಪರನ ಕುಮಾರನೆನಿಸಿಕೊಳ್ಳುವನು, ಇದಲ್ಲದೆ ದೇವರಾಗಿರುವ ಕರ್ತನು ಆತನ ಮೂಲಪಿತನಾದ ದಾವೀದನ ಸಿಂಹಾಸನವನ್ನು ಆತನಿಗೆ ಕೊಡುವನು. ಆತನು ಯಾಕೋಬ ವಂಶವನ್ನು ಸದಾಕಾಲ ಆಳುವನು. ಆತನ ರಾಜ್ಯಕ್ಕೆ ಅಂತ್ಯವೇ ಇಲ್ಲ ಎಂದು ಹೇಳಿದನು. ಮರಿಯಳು ಆ ದೂತನನ್ನು – ಇದು ಹೇಗಾದೀತು? ನಾನು ಪುರುಷನನ್ನು ಅರಿತವಳಲ್ಲವಲ್ಲಾ ಎಂದು ಕೇಳಿದ್ದಕ್ಕೆ ದೂತನು – ನಿನ್ನ ಮೇಲೆ ಪವಿತ್ರಾತ್ಮ ಬರುವುದು, ಪರಾತ್ಪರನ ಶಕ್ತಿಯ ನೆರಳು ನಿನ್ನ ಮೇಲೆ ಬೀಳುವುದು, ಆದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳುವದು. ಮತ್ತು ನಿನ್ನ ಬಂಧುವಾದ ಎಲಿಸಬೇತಳಿದ್ದಾಳಲ್ಲಾ ಆಕೆ ಸಹ ಮುಪ್ಪಿನವಳಾದರೂ ಗರ್ಭಿಣಿಯಾಗಿದ್ದಾಳೆ, ಆಕೆಯ ಗರ್ಭದಲ್ಲಿ ಗಂಡು ಮಗುವದೆ, ಬಂಜೆಯೆನಿಸಿಕೊಂಡಿದ್ದ ಆಕೆಗೆ ಇದೇ ಆರನೆಯ ತಿಂಗಳು. ದೇವರಿಂದ ಬರುವ ಯಾವ ಮಾತಾದರೂ ನಿಷ್ಫಲವಾಗುವುದಿಲ್ಲ ಅಂದನು. ಆಗ ಮರಿಯಳು – ಇಗೋ, ನಾನು ಕರ್ತನ ದಾಸಿ, ನಿನ್ನ ಮಾತಿನಂತೆ ನನಗಾಗಲಿ ಎಂದಳು. ಆ ಮೇಲೆ ದೂತನು

ಆಕೆಯ ಬಳಿಯಿಂದ ಹೊರಟು ಹೋದನು. ಆ ಕಾಲದಲ್ಲಿ ಮರಿಯಳು ಎದ್ದು ಅವಸರದಿಂದ ಮಲೆನಾಡಿಗೆ ಹೊರಟು ಯೆಹೂದದಲ್ಲಿರುವ ಒಂದೂರಿಗೆ ಹೋಗಿ ಜೆಕರೀಯನ ಮನೆಯನ್ನು ಸೇರಿ ಎಲಿಸಬೇತಳಿಗೆ ವಂದಿಸಿದಳು. ಎಲಿಸಬೇತಳು ಮರಿಯಳ ವಂದನೆಯನ್ನು ಕೇಳುತ್ತಲೇ ಆಕೆಯ ಗರ್ಭದಲ್ಲಿದ್ದ ಕೂಸು ಹಾರಾಡಿತು. ಮತ್ತು ಎಲಿಸಬೇತಳು ಪವಿತ್ರಾತ್ಮಭರಿತಳಾಗಿ ಮಹಾಧ್ವನಿಯಿಂದ ಕೂಗಿ – ನೀನು ಸ್ತ್ರೀಯರೊಳಗೆ ಆಶೀರ್ವಾದ ಹೊಂದಿದವಳು, ಮತ್ತು ನಿನ್ನಲ್ಲಿ ಹುಟ್ಟುವ ಕೂಸು ಆಶೀರ್ವಾದ ಹೊಂದಿದ್ದು. ನನ್ನ ಸ್ವಾಮಿಯ ತಾಯಿಯು ನನ್ನ ಬಳಿಗೆ ಬರುವಷ್ಟು ಭಾಗ್ಯ ನನಗೆ ಎಲ್ಲಿಂದಾಯಿತು? ಇಗೋ, ನಿನ್ನ ವಂದನೆಯು ನನ್ನ ಕಿವಿಗೆ ಬೀಳುತ್ತಲೇ ಕೂಸು ನನ್ನ ಗರ್ಭದಲ್ಲಿ ಉಲ್ಲಾಸದಿಂದ ಹಾರಾಡಿತು. ನಂಬಿದವಳಾದ ನೀನು ಧನ್ಯಳೇ. ಕರ್ತನು ನಿನಗೆ ಹೇಳಿದ ಮಾತುಗಳು ನೆರವೇರುವವು ಅಂದಳು. ಆಗ ಮರಿಯಳು ಹೇಳಿದ್ದೇನಂದರೆ – ನನ್ನ ಪ್ರಾಣವು ಕರ್ತನನ್ನು ಕೊಂಡಾಡುತ್ತದೆ. ನನ್ನ ಆತ್ಮವು ನನ್ನ ರಕ್ಷಕನಾದ ದೇವರ ವಿಷಯದಲ್ಲಿ ಉಲ್ಲಾಸಗೊಂಡದೆ. ಆತನು ತನ್ನ ದಾಸಿಯ ಧೀನಸ್ಥಿತಿಯ ಮೇಲೆ ಲಕ್ಷ್ಯವಿಟ್ಟಿದ್ದಾನೆ. ಇಗೋ, ಇಂದಿನಿಂದ ತಲತಲಾಂತರದವರೆಲ್ಲಾ ನನ್ನನ್ನು ಧನ್ಯಳೆಂದು ಹೊಗಳುವರು. ಶಕ್ತನಾಗಿರುವಾತನು ನನಗೆ ದೊಡ್ಡ ಉಪಕಾರಗಳನ್ನು ಮಾಡಿದ್ದಾನೆ; ಆತನ ನಾಮವು ಪರಿಶುದ್ಧವಾದದ್ದು. ಆತನಲ್ಲಿ ಭಯಭಕ್ತಿಯುಳ್ಳವರ ಮೇಲೆ ಆತನ ದಯವು ತಲತಲಾಂತರದವರೆಗೂ ಇರುವದು. ಆತನು ತನ್ನ ಭುಜಪರಾಕ್ರಮವನ್ನು ತೋರಿಸಿ ಸೊಕ್ಕಿದ ಮನಸ್ಸುಳ್ಳವರನ್ನು ಚದರಿಸಿಬಿಟ್ಟಿದ್ದಾನೆ. ಪ್ರಭುಗಳನ್ನು ಸಿಂಹಾಸನಗಳಿಂದ ದೊಬ್ಬಿ ದೀನಸ್ಥಿತಿಯವರನ್ನು ಉನ್ನತ ಸ್ಥಿತಿಗೆ ತಂದಿದ್ದಾನೆ. ಹಸಿದವರನ್ನು ಮೃಷ್ಟಾನ್ನದಿಂದ ತೃಪ್ತಿಪಡಿಸಿ ಸ್ಥಿತಿವಂತರನ್ನು ಬರಿಗೈಯಲ್ಲಿ ಕಳುಹಿಸಿಬಿಟ್ಟಿದ್ದಾನೆ. ಆತನು ನಮ್ಮ ಪೂರ್ವಿಕರಿಗೆ ಹೇಳಿದ್ದಕ್ಕೆ ಸರಿಯಾಗಿ ಅಬ್ರಹಾಮನಿಗೂ ಅವನ ವಂಶದವರಿಗೂ ಯಾವಾಗಲೂ ದಯೆ ತೋರಿಸಬೇಕೆಂಬುದನ್ನು ನೆನಸಿಕೊಂಡು ತನ್ನ ಸೇವಕನಾದ ಇಸ್ರಾಯೇಲನನ್ನು ಕೈಹಿಡಿದಿದ್ದಾನೆ ಅಂದಳು. ಮರಿಯಳು ಹೆಚ್ಚುಕಡಿಮೆ ಮೂರು ತಿಂಗಳು ಎಲಿಸಬೇತಳ ಬಳಿಯಲ್ಲಿದ್ದು ತನ್ನ ಮನೆಗೆ ಹಿಂತಿರುಗಿ ಹೋದಳು. ಎಲಿಸಬೇತಳು ದಿನತುಂಬಿ ಗಂಡು ಮಗುವನ್ನು ಹೆತ್ತಳು. ಆಕೆಯ ನೆರೆಹೊರೆಯವರು ಬಂಧು ಬಾಂಧವರು ಆಕೆಯ ಮೇಲೆ ಕರ್ತನು ತನ್ನ ದಯವನ್ನು ವಿಶೇಷವಾಗಿ ತೋರಿಸಿದ್ದಾನೆಂಬು – ದನ್ನು ಕೇಳಿ ಆಕೆಯ ಕೂಡ ಸಂತೋಷಪಟ್ಟರು.

ಎಂಟನೆಯ ದಿನದಲ್ಲಿ ಅವರು ಆ ಮಗುವಿಗೆ ಸುನ್ನತಿ ಮಾಡುವುದಕ್ಕಾಗಿ ಬಂದು ಅದಕ್ಕೆ ಜಕರೀಯನೆಂದು ತಂದೆಯ ಹೆಸರನ್ನು ಇಡಬೇಕೆಂದಿದ್ದರು. ಈ ವಿಷಯದಲ್ಲಿ ಅದರ ತಾಯಿಯೂ – ಅದು ಬೇಡ, ಯೋಹಾನನೆಂದು ಹೆಸರಿಡಬೇಕು ಅನ್ನಲು ಅವರು – ನಿನ್ನ ಬಂಧು ಬಾಂಧವರಲ್ಲಿ ಈ ಹೆಸರಿನವರು ಒಬ್ಬರಾದರೂ ಇಲ್ಲವಲ್ಲಾ ಎಂದು ಆಕೆಗೆ ಹೇಳಿ ಇದಕ್ಕೆ ಏನು ಹೆಸರಿಡಬೇಕೆಂದಿರುತ್ತೀ ಎಂಬದಾಗಿ ತಂದೆಗೆ ಸನ್ನೆಮಾಡಿದರು. ಅವನು ಒಂದು ಹಲಿಗೆಯನ್ನು ತರಿಸಿಕೊಂಡು – ಯೋಹಾನನೆಂತಲೇ ಅದರ ಹೆಸರು ಎಂದು ಬರೆದನು. ಅದಕ್ಕೆ ಎಲ್ಲರೂ ಆಶ್ಚರ್ಯಪಟ್ಟರು. ಕೂಡಲೇ ಅವನಿಗೆ ಬಾಯಿ ಬಂತು. ನಾಲಿಗೆ ಸಡಿಲವಾಯಿತು, ಅವನು ಮಾತಾಡುವ ಶಕ್ತಿಯುಳ್ಳವನಾಗಿ ದೇವರನ್ನು ಕೊಂಡಾಡಿದನು. ಇದನ್ನು ಕೇಳಿದ ನೆರೆಹೊರೆಯವರೆಲ್ಲರಿಗೂ ಹೆದರಿಕೆಯುಂಟಾಯಿತು. ಮತ್ತು ಈ ಎಲ್ಲಾ ಸಂಗತಿಗಳನ್ನು ಕುರಿತು ಯೂದಾಯದ ಮಲೆನಾಡಿನಲ್ಲೆಲ್ಲಾ ಮಾತಾಡಿಕೊಳ್ಳುತ್ತಿದ್ದರು. ಕೇಳಿದವರೆಲ್ಲರೂ ಆಹಾ, ಈ ಕೂಸು ಎಂಥವನಾಗುವನೋ ಎಂದು ಈ ಸಂಗತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡರು. ಮತ್ತು ಕರ್ತನ ಹಸ್ತವು ಅದರ ಮೇಲೆ ಇತ್ತು ಇದಲ್ಲದೆ ಆ ಮಗುವಿನ ತಂದೆಯಾದ ಜಕರೀಯನು ಪವಿತ್ರಾತ್ಮಭರಿನಾಗಿ ಪ್ರವಾದನಾ ವಚನವನ್ನು ನುಡಿದದ್ದೇನೆಂದರೆ – ಇಸ್ರಾಯೇಲ್ ಜನರ ದೇವರಾಗಿರುವ ಕರ್ತನಿಗೆ ಸ್ತೋತ್ರವು; ಆತನು ಪೂರ್ವದಲ್ಲಿದ್ದ ತನ್ನ ಶ್ರೀಪ್ರವಾದಿಗಳ ಬಾಯಿಂದ ತಾನು ಹೇಳಿದಂತೆಯೇ ತನ್ನ ಪ್ರಜೆಯನ್ನು ಪರಾಮರಿಸಿ ಅವರಿಗೆ ಬಿಡುಗಡೆಯನ್ನುಂಟು ಮಾಡಿದ್ದಾನೆ. ತನ್ನ ಸೇವಕನಾದ ದಾವೀದನ ಮನೆತನದಲ್ಲಿ ನಮಗೋಸ್ಕರ ಒಬ್ಬ ರಕ್ಷಣ ವೀರನನ್ನು ಎಬ್ಬಿಸಿದ್ದಾನೆ. ಆತನು ನಮ್ಮ ಪಿತೃಗಳಿಗೆ ದಯೆಯನ್ನು ತೋರಿಸುವವನಾಗಿಯೂ ನಮ್ಮ ಮೂಲಪಿತೃವಾದ ಅಬ್ರಹಾಮನಿಗೆ ಪ್ರಮಾಣಮಾಡಿಕೊಟ್ಟ ತನ್ನ ಪರಿಶುದ್ಧವಾದ ಒಡಂಬಡಿಕೆಯನ್ನು ನೆನಸಿಕೊಳ್ಳುವವನಾಗಿಯೂ ಇದ್ದು ನಮ್ಮ ವೈರಿಗಳಿಂದಲೂ ನಮ್ಮನ್ನು ದ್ವೇಷಿಸುವವರೆಲ್ಲರ ಕೈಯಿಂದಲೂ ನಮ್ಮನ್ನು ತಪ್ಪಿಸಿ ರಕ್ಷಿಸಿದ್ದಾನೆ. ಹೀಗೆ ನಾವು ನಮ್ಮ ವೈರಿಗಳ ಕೈಯಿಂದ ಬಿಡುಗಡೆಹೊಂದಿ ಭಯವಿಲ್ಲದವರಾಗಿದ್ದು, ನಮ್ಮ ಜೀವ ಮಾನವೆಲ್ಲಾ ನಿರ್ಮಲ ಚಿತ್ತದಿಂದಲೂ ನೀತಿಯಿಂದಲೂ ತನ್ನ ಸನ್ನಿಧಿಯಲ್ಲಿ ಸೇವೆ ಮಾಡುವಂತೆ ನಮಗೆ ಅನುಕೂಲ ಮಾಡಿದ್ದಾನೆ. ಮಗುವೇ, ನೀನಾದರೋ ಪರಾತ್ಪರನ ಪ್ರವಾದಿಯೆನಿಸಿಕೊಳ್ಳುವಿ. ನೀನು ಕರ್ತನ ಮುಂದೆ ಹೋಗಿ ಆತನ ಹಾದಿಗಳನ್ನು ಸಿದ್ಧ ಮಾಡುವವನಾಗಿಯೂ ನಮ್ಮ ದೇವರು ಅತ್ಯಂತ ಕರುಣೆಯಿಂದ ದಯಪಾಲಿಸುವ ಪಾಪ ಪರಿಹಾರವೆಂಬ ರಕ್ಷಣೆಯ ತಿಳುವಳಿಕೆಯನ್ನು ಆತನ ಪ್ರಜೆಗೆ ಕೊಡುವವನಾಗಿಯೂ ಇರುವಿ. ಆ ಕರುಣೆಯಿಂದಲೇ ನಮಗೆ ಮೇಲಿನಿಂದ ಅರುಣೋದಯವು ಉಂಟಾಗಿ ಕತ್ತಲಲ್ಲಿಯೂ ಮರಣಾಂಧಕಾರದಲ್ಲಿಯೂ ವಾಸಿಸುವವರಾದ ನಮಗೆ ಪ್ರಕಾಶಕೊಟ್ಟು ನಮ್ಮ ಕಾಲುಗಳನ್ನು ಸಮಾಧಾನದ ಮಾರ್ಗದಲ್ಲಿ ಸೇರಿಸಿ ನಡಿಸುವನು ಅಂದನು. ಆ ಬಾಲಕನು ಬೆಳೆದು ಆತ್ಮದಲ್ಲಿ ಬಲವುಳ್ಳವನಾದನು ಮತ್ತು ಜನರಿಗೆ ತನ್ನನ್ನು ತೋರ್ಪಡಿಸಿಕೊಳ್ಳುವ ದಿನದವರೆಗೆ ಅರಣ್ಯ ಪ್ರದೇಶಗಳಲ್ಲಿ ಇದ್ದನು.

# ಬಹುದೊಡ್ಡ ಪ್ರವಾದಿ

**ರೀಪ್ರಿಂಟ್ ಪುಟ 4940**

## ಲೂಕ 1:57–80

**"ಇಸ್ರಾಯೇಲ್ ಜನರ ದೇವರಾದ ಕರ್ತನಿಗೆ ಸ್ತೋತ್ರವು... ತನ್ನ ಪ್ರಜೆಯನ್ನು ಪರಾಮರಿಸಿ ಅವರಿಗೆ ಬಿಡುಗಡೆಯನ್ನು ಉಂಟು ಮಾಡಿದ್ದಾನೆ" – ಲೂಕ 1:68**

ಸ್ನಾನಿಕನಾದ ಯೋಹಾನನ ವಿಷಯವಾಗಿ ಯೇಸುವು ಪ್ರಕಟಿಸಿದ್ದು. "ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಯೋಹಾನನಿಗಿಂತ ದೊಡ್ಡವನು ಒಬ್ಬನೂ ಇಲ್ಲ; ಆದರೂ ದೇವರ ರಾಜ್ಯದಲ್ಲಿ ಚಿಕ್ಕವನು ಅವನಿಗಿಂತಲೂ ದೊಡ್ಡವನೆಂದು ನಿಮಗೆ ಹೇಳುತ್ತೇನೆ" ಲೂಕ 7:28. ಈ ಮಾತುಗಳು ನಮಗೆ ಅಮೂಲ್ಯವಾದವುಗಳು, ಯಾಕೆಂದರೆ ಇವು ಯೋಹಾನನು ಪ್ರವಾದಿಗಳಲ್ಲಿ ಕಡೆಯವನಾಗಿ ಮೆಸ್ಸೀಯನ ಬರುವಿಕೆಯನ್ನೂ ಮತ್ತು ವಿಮೋಚಕನಿಗೆ ತನ್ನ ಮಹಿಮೆಯುಳ್ಳ ರಾಜ್ಯದಲ್ಲಿ ಸಹಕಾರಿಗಳಾಗುವುದಕ್ಕಾಗಿ ಪಾಪಿಗಳೊಳಗಿಂದ ಒಂದು ನಿಷ್ಠೆಯುಳ್ಳ ವರ್ಗವನ್ನು ಆದುಕೊಳ್ಳುವ ವಿಶೇಷ ಕಾರ್ಯದ ಪ್ರಾರಂಭವಾಗುವುದನ್ನು ಸಾರುವವನಾಗಿಯೂ ಇದ್ದನು. ಯೋಹಾನನು ಆ ರಾಜ್ಯದಲ್ಲಿ ಸೇರುವ ವರ್ಗದವರಾಗುವುದಕ್ಕೆ ಸಾಧ್ಯವಿರಲಿಲ್ಲ. ವಿಮೋಚಕನು ಯಜ್ಞಾರ್ಪಿತನಾಗುವುದಕ್ಕೆ ಮತ್ತು ಕೆಲವರನ್ನು ಕ್ರಿಸ್ತನ ರಾಜ್ಯದಲ್ಲಿ ಆತನೊಂದಿಗೆ ಸಹ ಬಾಧ್ಯರಾಗುವ ಪಂಚಾಶತ್ತಮ ದಿನದ ಆಶೀರ್ವಾದವು ಬರುವುದಕ್ಕೆ ಮೊದಲೇ ಆತನ ಭವ್ಯವಾದ ಕಾರ್ಯವು ಕೊನೆಗೊಂಡಿತು. ಸ್ವತಃ ಯೋಹಾನನೇ ಇದನ್ನು ಗ್ರಹಿಸಿದ್ದನೆಂದು ಕಾಣುತ್ತದೆ. ಯಾಕೆಂದರೆ ಅವನು ಪ್ರಕಟಿಸಿದ್ದು "ಮದಲಗಿತ್ತಿಯುಳ್ಳವನೇ ಮದಲಿಂಗನು; ಆದರೂ ಮದಲಿಂಗನ ಗೆಳೆಯನು ಅವನ ಹತ್ತರ ನಿಂತುಕೊಂಡು ಅವನ ಮಾತುಗಳನ್ನು ಕೇಳಿ ಮದಲಿಂಗನ ಧ್ವನಿಗೆ ಸಂತೋಷ ಪಡುತ್ತಾನಲ್ಲವೇ." (ಯೋಹಾನ 3:29)

## ಯೋಹಾನ – "ದೇವಾನುಗ್ರಹಿತನು"

ಗಬ್ರಿಯೇಲ್ ದೂತನ ಸಂದೇಶಾನುಸಾರ ಯೋಹಾನನು ಜನಿಸಿದನು. ಎಂಟನೇ ದಿನದಲ್ಲಿ ತನಗೆ ಸುನ್ನತಿಯಾಗಿ ಹೆಸರಿಡಲ್ಪಟ್ಟನು. ಸಂಬಂಧಿಗಳು ಅವನ ತಂದೆಯ ಹೆಸರಿಡಬೇಕೆಂದು ಒತ್ತಾಯಿಸಿದರು. ಆದರೆ ತಂದೆ ತಾಯಿಯರು ಅವನಿಗೆ ಯೋಹಾನನೆಂದು ಹೆಸರಿಟ್ಟರು ಮತ್ತು ಆ ಕ್ಷಣವೇ ಜಕರೀಯನ ಮೂಕತನ ಬಿಟ್ಟುಹೋಯಿತು. ತನ್ನ ನಂಬಿಕೆ ತನಗೆ ಸಹಾಯ ಮಾಡಿತ್ತು. ಗಬ್ರಿಯೇಲನು ತಿಳಿಸಿದ ಹೆಸರನ್ನು ಕೊಡುವಲ್ಲಿ ತನಗಿದ್ದ ಸಂಶಯಗಳನ್ನೆಲ್ಲವನ್ನು ಜಯಿಸಲ್ಪಟ್ಟಿದ್ದನು. ಯೋಹಾನನೆಂಬ ಹೆಸರಿಗೆ "ದೇವಾನುಗ್ರಹಿತನು" ಎಂಬ ಮಹತ್ವವಿರುವ ಒಂದು ಸೊಗಸಾದ ಅರ್ಥವಿದೆ. ಒಬ್ಬ ಮನುಷ್ಯನಾಗಿ ಯೋಹಾನನು ವಿಶಿಷ್ಟ ರೀತಿಯಲ್ಲಿದ್ದನು. ಅಂದರೆ, ಅವನಿಗೆ ದೇವರ ದೂತನಾಗಿ ಆತನ ಅಭಿಶಕ್ತನನ್ನು ಪ್ರಕಟ ಮಾಡುವ ಹಾಗೂ ಪ್ರವಾದಿಯಾದ ಮಲಾಕಿಯು ಪ್ರಕಟಸಿರುವಂತೆ ಮೆಸ್ಸೀಯನು ಕಾಣಿಸಿಕೊಳ್ಳುವಾಗ ಬರುವ ಪರೀಕ್ಷಾರ್ಥವಾದ ಕಷ್ಟಾನುಭವಗಳಿಗೆ ಮತ್ತು ಗುಣದ ಪರೀಕ್ಷೆಗಳಿಗೆ ಜನರನ್ನು ಸಿದ್ಧಗೊಳಿಸುವುದನ್ನು ಬಿಟ್ಟರೆ ತನಗೆ ಬೇರೆ ಯಾವ ಗುರಿಯಾಗಲೀ ಉದ್ದೇಶವಾಗಲೀ ಇರಲಿಲ್ಲ. ಮೆಸ್ಸೀಯನು ಅಕ್ಕಸಾಲಿಗನಂತೆ ಕುಳಿತು ಲೇವಿ ವಂಶದವರನ್ನು ... ಶುದ್ಧೀಕರಿಸುವನು. ಅವರು ಸದ್ಧರ್ಮಿಗಳಾಗಿ ಯೆಹೋವನಿಗೆ ನೈವೇಧ್ಯವನ್ನು ತಂದೊಪ್ಪಿಸುವರು. ಇದರಂತೆ ಯೋಹಾನನು ತನ್ನ ಸೇವೆಯಲ್ಲಿ ಸಾರಿದ್ದೇನೆಂದರೆ "ದೇವರ ರಾಜ್ಯವು ಸಮೀಪವಾಯಿತು" ಸುವಾರ್ತೆಯನ್ನು ನಂಬಿ ದೇವರ ಕಡೆಗೆ ತಿರುಗಿಕೊಂಡು ಮಾನಸಾಂತರ ಹೊಂದಿ ಆ ರಾಜ್ಯ ಬಾಧ್ಯತೆಯಲ್ಲಿ ಪಾಲು ಹೊಂದಲು ಸಿದ್ಧರಾಗಿರಿ.

ಪರಿಶೋಧನೆಗಳು ಅನಿರೀಕ್ಷಿತವಾದ ರೀತಿಯಲ್ಲಿ ಬಂದಿದ್ದವು. ಮೆಸ್ಸೀಯನು ಭೂಲೋಕದಲ್ಲಿನ ಸಂಪತ್ತಿಗೆ ಬಾಧ್ಯನಾಗಿಯಾಗಲಿ ಹೆಸರುಳ್ಳವನಂತೆಯಾಗಲಿ, ಕೀರ್ತಿವಂತ ನಾಗಿಯಾಗಲಿ ಹುಟ್ಟಲಿಲ್ಲ. ಮತ್ತು ಆತನು ಪಟ್ಟ ಪಾಡುಗಳಾಗಲಿ ಮಾಡಿದ ಬೋಧನೆಗಳಾಗಲಿ ಧರ್ಮಶಾಸ್ತ್ರ ಪಂಡಿತರುಗಳು ನಿರೀಕ್ಷಿಸಿದಂತೆ ಇರಲಿಲ್ಲ. ಪಾಪಿಗಳಿಂದ ಬಂದ ವಿರೋಧಗಳು, ತನ್ನ ಕಾಲದಲ್ಲಿದ್ದ ತಪ್ಪು ತಿಳುವಳಿಕೆ ಮತ್ತು ಕಪಟಾಚರಣೆಗಳಿಗೆ ಯೇಸುವು ತೋರಿದ ವಿರೋಧಗಳು ಕೆಲವರಲ್ಲಿ ದಹಿಸುವ ಅಗ್ನಿಯಂತಿದ್ದ ಪರಿಣಾಮವಾಗಿ ಅವರಲ್ಲಿ ಶುದ್ಧೀಕರಣ ಉಂಟಾದವು. ಅವರು ತಮ್ಮನ್ನು ಸಜೀವ ಯಜ್ಞವನ್ನಾಗಿ ಸಮರ್ಪಿಸಿಕೊಂಡು ತಮ್ಮ ವಿಮೋಚಕನ ಹೆಜ್ಜೆ ಜಾಡಿನಲ್ಲಿ ನಡೆದು ನಿಜರೂಪದ ಲೇವಿಯರಾಗಿ, ಪ್ರತಿಷ್ಠಿತ ಜನರಾದರು; ಅವರಲ್ಲಿ ಹಲವರು ನಿಜರೂಪದ ಯಾಜಕರೂ ಆದರು.

## ಜಕರೀಯನ ಪ್ರವಾದನೆ

ಹಳೇ ಒಡಂಬಡಿಕೆಯ ಕಾಲದ ಪ್ರವಾದಿಗಳ ವಿಷಯದಲ್ಲಿ ಭಕ್ತನಾದ ಪೇತ್ರನು ನಿರ್ದಿಷ್ಟವಾಗಿ ನಮಗೆ ಹೇಳಿರುವನು. ಅದು "ಮನುಷ್ಯರು ಪವಿತ್ರಾತ್ಮಪ್ರೇರಿತರಾಗಿ ದೇವರಿಂದ ಹೊಂದಿದ್ದನ್ನೇ ಮಾತಾಡಿದರು." ಆತನು ತಿಳಿಸಿರುವುದೇನೆಂದರೆ, ಅವರುಗಳು ತಾವೇ ಸ್ವತಃ ಅರ್ಥಮಾಡಿಕೊಳ್ಳಲಾರದ ಕೇವಲ ಭವಿಷ್ಯವು ಪ್ರಕಟವಾಡಲಿರುವ ಆಳವೂ, ವಿಶಾಲವೂ ಆದ ಅರ್ಥವ್ಯಾಪ್ತಿಯುಳ್ಳ ಸತ್ಯಾರ್ಥಗಳನ್ನು ಬಾರಿಬಾರಿಗೂ ನುಡಿಯುತ್ತಿದ್ದರೆಂದು ಆತನು ತಿಳಿಸಿರುವನು. ಇದು ಈ ಪಾಠದಲ್ಲಿರುವ ಜಕರೀಯನ ಪ್ರವಾದನೆಯ ವಿಷಯದಲ್ಲಿ ನಿಜವಾಗಿದೆ. 68 ರಿಂದ 70ನೇ ವಚನಗಳು ಮೊದಲನೇ ಭಾಗವನ್ನು ಒಳಗೊಂಡಿದ್ದು ಅಲ್ಲಿ ಎಲ್ಲಾ ಒಳ್ಳೆಯ ದಾನಗಳೂ ಕುಂದಿಲ್ಲದ ವರಗಳ ಬುಗ್ಗೆಯೂ ಆಗಿರುವ ದೇವರ ಸ್ತುತಿಯು

ಮೊದಲು ಬರುತ್ತದೆ. ಪೂರ್ವಕಾಲದ ಕೃಪಾಪೂರ್ಣವಾದ ವಾಗ್ದಾನಗಳು ನೆರವೇರಿಸಲ್ಪಟ್ಟಿರುವುದರ ಸ್ತುತಿ ಗೌರವಗಳು ಆತನಿಗೇ ಸಲ್ಲುವಂತಾಗಬೇಕು. ಆ ವಾಗ್ದಾನಗಳ ಅನುಸಾರ "ತನ್ನ ಪ್ರಜೆಯನ್ನು ಪರಾಮರಿಸಿ ಅವರಿಗೆ ಬಿಡುಗಡೆಯನ್ನುಂಟು ಮಾಡಿದ್ದಾನೆ. ತನ್ನ ಸೇವಕನಾದ ದಾವೀದನ ಮನೆತನದಲ್ಲಿ ನಮಗೊಬ್ಬ ರಕ್ಷಣ ವೀರನನ್ನು ಎಬ್ಬಿಸಿದ್ದಾನೆ" ಸಾಧಾರಣವಾಗಿ ಇತರ ಪ್ರವಾದನೆಗಳಲ್ಲಿರುವ ರೀತಿಯಲ್ಲೇ ಇಲ್ಲಿ ಮುಂದೆ ನೆರವೇರಲಿರುವ ಪ್ರವಾದನೆಗಳು ಆಗಲೇ ನೆರವೇರಿದಂತೆ ನುಡಿಯಲಾಗಿದೆ.

ಸ್ನಾನಿಕನಾದ ಯೋಹಾನನು ಯೇಸುವಿಗಿಂತ ಆರು ತಿಂಗಳು ಮೊದಲು ಹುಟ್ಟಿರುವ ಬಗ್ಗೆ ತಿಳಿದುಬರುವುದೆಂದರೆ ಈ ಪ್ರವಾದನೆಯನ್ನು ನುಡಿಯುವ ಸಮಯದಲ್ಲಿ ಯೇಸುವಿನ ಜನನದ ಗರ್ಭಾಂಕುರ ಕ್ರಿಯೆ ಆಗಲೇ ಸಂಭವಿಸಿರುವುದು ಆಗ ತಾನೇ ಪ್ರಾರಂಭವಾಗಿದ್ದು ಆದರೆ ಇನ್ನೂ ನೆರವೇರಬೇಕಾಗಿದ್ದ ಸಂಗತಿಗಳು ಆಗಲೇ ನೆರವೇರಿದಂತೆ ಪವಿತ್ರಾತ್ಮವು ನುಡಿದಿದೆ; "ಆತನು ತನ್ನ ಪ್ರಜೆಯನ್ನು ಪರಾಮರಿಸಿ ಬಿಡುಗಡೆಯನ್ನುಂಟು ಮಾಡಿದ್ದಾನೆ". ವಿಮೋಚನೆಯೆಂಬ ಈ ಮಾತು ಸ್ನಾನ ದೀಕ್ಷೆಯಲ್ಲಿ ತನ್ನ ಜೀವವನ್ನು ಪ್ರತಿಷ್ಠೆ ಮಾಡಿಕೊಂಡು ಕಲ್ವಾರಿಯಲ್ಲಿ ಮುಕ್ತಾಯಗೊಂಡ ಆತನ ಯಜ್ಞಾರ್ಪಣೆಯಲ್ಲಿ ನೆರವೇರುವುದು ಮಾತ್ರವಲ್ಲದೆ ಮಾನವರೆಲ್ಲರನ್ನು (ಮರಣಾಧಿಕಾರದಿಂದ) ಹಿಂದಕ್ಕೆ ಪಡೆಯುವ ಸಂಪೂರ್ಣವಾದ ಕಾರ್ಯ ವ್ಯಾಪ್ತಿಯನ್ನು ಒಳಗೊಂಡಿರುವಷ್ಟು ವಿಸ್ತಾರವಾಗಿದೆ.

"ಆಯಲ್ಪಟ್ಟಿರುವ" ನಮ್ಮ ಮಾನವ ಸಂತತಿಯ ಒಂದು ಸಣ್ಣ ಭಾಗವನ್ನು ಈ ಸುವಾರ್ತಾ ಯುಗದಲ್ಲಿ (ಮರಣಾದಿ ಕಾರದಿಂದ) ಹಿಂದಕ್ಕೆ ಪಡೆಯಲಾಗುತ್ತಿದೆ; ಆದರೆ ಸತ್ಯವೇದವು ಭರವಸೆ ನೀಡುವುದು. ಕ್ರಿಸ್ತನ ಸಾವಿರ ವರುಷದ ಆಳ್ವಿಕೆಯಲ್ಲಿ ಆದಾಮನ ಮತ್ತು ಅವನ ಸಂತತಿಯವರನ್ನು ವಿಮೋಚಿಸುವ ಅಥವಾ ಮರಣಾಧಿಕಾರದಿಂದ ಹಿಂದಕ್ಕೆ ಪಡೆಯುವ ದೇವರ ಅನುಗ್ರಹದ ವಿಷಯವನ್ನು ಅವರ ತಿಳುವಳಿಕೆಗೆ ತರಲ್ಪಟ್ಟಾಗ ಅದನ್ನು ಅಂಗಿಕರಿಸುವ ಮನಸ್ಸುಳ್ಳವರೆಲ್ಲರನ್ನೂ (ಮರಣಾಧಿಕಾರ ದಿಂದ) ಹಿಂದಕ್ಕೆ ಪಡೆಯಲಾಗುವದು. ಆದುದರಿಂದ ಕವಿತಾರೂಪದ ಈ ಪ್ರವಾದನೆಯ ಮೊದಲನೇ ಚರಣ ಅಥವಾ ಭಾಗದಲ್ಲಿ ಸೂಚಿತವಾದ ಅರ್ಥವು, ಬಹುಕಾಲದ ಹಿಂದೆ ದೇವರು ವಾಗ್ದಾನ ಮಾಡಲ್ಪಟ್ಟ ದಿವ್ಯಾಶೀರ್ವಾದವು ಪ್ರಾರಂಭವಾಗುವ ಸಮಯವು ಬಂದುದಕ್ಕಾಗಿ ದೇವರಿಗೆ ಸ್ತೋತ್ರವೆನ್ನುವುದು.

## ವೈರಿಗಳಿಂದ ಬಿಡುಗಡೆ

ಕವಿತಾರೂಪದ ಈ ಪ್ರವಾದನೆಯ ಎರಡನೆಯ ಚರಣ ಅಥವಾ ಭಾಗವು ವಚನ 71ರಿಂದ 75ರ ವರೆಗಿರುತ್ತದೆ. ಅದು ದೇವಜನರನ್ನು ಅವರ ವೈರಿಗಳ ಬಲದಿಂದ ಬಿಡಿಸುವ ಸಂಬಂಧ ವಾಗಿರುತ್ತದೆ. ಇಲ್ಲಿರುವ ಒಂದು ಮುಖ್ಯ ವಿಷಯವೆಂದರೆ, ದೇವ ಜನರಲ್ಲದೆ ಮತ್ತಾರೂ ವೈರಿಗಳ ಬಲದಿಂದ ಎಂದೂ ಬಿಡಿಸಲಾಗದೆಂಬುದು ಇಲ್ಲಿ ಸೂಚಿತವಾಗಿರುವುದು. ಹೀಗಿರುವಲ್ಲಿ ದುಷ್ಟ ಕಾರ್ಯ ನಡೆಸುವ ಹಲವು ವೈರಿಗಳು ಈಗಿರುವಂತೆ ಹಿಂದೆಯೂ ಇದ್ದರು. ಅವರ ದುಷ್ಟತನ ಉದ್ದೇಶ ಪೂರ್ವಕವಾಗಿರದೆ ಅದು ಐಶ್ವರ್ಯದಿಂದ ಉಂಟಾಗುವ ಮೋಸಗಳು, ಪರಿಪೂರ್ಣತೆಯಿಂದ ಬಿದ್ದು ಹೋಗಿರುವ ತಮ್ಮ ಶರೀರದ ಬಲಹೀನತೆಗಳ ಮೂಲ, ಇಹಲೋಕಾಧಿಕಾರಿಯಾದ (ಸೈತಾನನಿಂದ) ಕುರುಡರಾಗಿ ಮಾಡಲ್ಪಟ್ಟಿರುವ ಕಾರಣಗಳಿಂದಾಗಿರುತ್ತದೆ.

ಕ್ರಿಸ್ತನ ಸಾವಿರ ವರುಷದ ಆಳ್ವಿಕೆಯಲ್ಲಿ ಕುರುಡರ ಕಣ್ಣು – ಗಳು, ಕಿವುಡಾದ ಕಿವಿಗಳೆಲ್ಲವೂ ತೆರೆಯಲ್ಪಟ್ಟು ದೇವರ ಗುಣಲಕ್ಷಣಗಳ ಮಹಿಮಾತಿಶಯ ವಿಷಯವಾದ ಪರಿಜ್ಞಾನವು ಸ್ಪಷ್ಟವಾಗಿ ಪ್ರಕಟಗೊಂಡು ಪಾಪದ ಘೋರ ಸ್ವರೂಪವು ಪೂರ್ಣವಾಗಿ ತೋರಿಬಂದಾಗ ಸೈತಾನನಿಂದ ಆತನ ಚಿತ್ತದ ಪ್ರಕಾರ ಸೆರೆಗೆ ನಡೆಸಲ್ಪಟ್ಟಿರುವವರಲ್ಲಿ ಹಲವರು ಇಮ್ಮಾನುವೇಲನ ಮುಂದೆ ಅಡ್ಡಬಿದ್ದು ದೇವರಿಗೆ ಘನವನ್ನು ಸಲ್ಲಿಸುವರು. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ಯೇಸುವು ಹೇಳಿರು– ವಂತೆ ಪ್ರತಿಷ್ಠಿತರಾದ ಆತನ ಹಿಂಬಾಲಕರು ಈಗಿನ ಕಾಲದಲ್ಲಿರುವ ಆತನ "ಚಿಕ್ಕ ಹಿಂಡು". ಆದರೆ ಅತನ ಮಹಿಮೆಯುಳ್ಳ ಆಳ್ವಿಕೆಯಲ್ಲಿ ಆತನು ಮತ್ತೊಂದು ಹಿಂಡನ್ನು ಒಟ್ಟುಗೂಡಿ ಸುವನು. ಆತನು ಹೇಳಿರುವಂತೆ, "...ಈ ಹಟ್ಟಿಗೆ ಸೇರದಿರುವ ಇನ್ನೂ ಬೇರೆ ಕುರಿಗಳು ನನಗೆ ಅವೆ, ಅವುಗಳನ್ನೂ ನಾನು ತರಬೇಕು; ಅವು ನನ್ನ ಸ್ವರಕ್ಕೆ ಕಿವಿಗೊಡುವವು; ಆಗ ಒಂದೇ ಹಿಂಡು ಆಗುವದು. ಒಬ್ಬನೇ ಕುರುಬನಿರುವನು." (ಯೋಹಾನ 10:16.)

"ಒಂದೇ ಹಿಂಡು ಮತ್ತು ಒಬ್ಬನೇ ಕುರುಬ" ಎಂಬುದು ಕುರಿಗಳೆಲ್ಲಾ ಒಂದೇ ಸ್ವಭಾವದವುಗಳೆಂಬುದನ್ನು ಸೂಚಿಸು ವುದಿಲ್ಲ. ಬದಲಾಗಿ "ಭೂಪರಲೋಕಗಳಲ್ಲಿರುವ ಸಮಸ್ತವನ್ನೂ ಕ್ರಿಸ್ತನಲ್ಲಿ (ಕುರುಬ) ಒಂದುಗೂಡಿಸುವುದು" ದೇವರ ಯೋಜನೆಯಾಗಿದೆ ಎಂದು ಅಪೋಸ್ತಲನು ಹೇಳುತ್ತಾನೆ. ಎಫೆಸ 1:10. ಈ "ಸಮಸ್ತದಲ್ಲಿ" ಮದಲಗಿತ್ತಿಯಾದ ಸಭೆ ಮುಖ್ಯವಾಗಿದ್ದು ಅದು ದಿವ್ಯ ಸ್ವಭಾವದಲ್ಲಿರುತ್ತದೆ. "ಮಹಾ ಸಮೂಹ" ಕೆರೂಬಿಯರು ಮತ್ತು ದೇವದೂತರುಗಳು ಮುಂದಿನ ಕ್ರಮದಲ್ಲಿ ಬರುವರು, ಮತ್ತು ವಿಮೋಚನೆ ಹೊಂದಿ ಸುಸ್ಥಿತಿಗೆ ಮರಳಿ ಪರಿಪೂರ್ಣತೆಗೆ ಬಂದ ಮನುಷ್ಯರು ಈ ಕ್ರಮದಲ್ಲಿ ಕಡೆಯವರಾಗಿ ದೇವರ ಹಟ್ಟಿಯಲ್ಲಿರುವರು.

ದೇವ ಜನರು ಅಂತಿಮವಾಗಿ ಬಿಡುಗಡೆ ಮಾಡಲ್ಪಡು ವುದು ಯಾವ ವೈರಿಗಳಿಂದ ಎಂಬುದನ್ನು ಭಕ್ತನಾದ ಪೌಲನು ಹೇಳುತ್ತಾನೆ. ಸೈತಾನನು ಒಬ್ಬ ವೈರಿ. ಇವನು ಒಂದು ಸಾವಿರ ವರುಷ ಬಂದನದಲ್ಲಿಡಲ್ಪಟ್ಟು ಅಂತಿಮವಾಗಿ ನಾಶ ಮಾಡಲ್ಪಡು ವನು. ಪಾಪವು ಒಂದು ವೈರಿ ಮತ್ತು ಇದು ಕ್ರಿಸ್ತನ ರಾಜ್ಯದಲ್ಲಿ ಹಂತ ಹಂತವಾಗಿ ನಿರ್ನಾಮ ಮಾಡಲಾಗುವುದು. ಹಾಗೂ ನಾವು ಓದುವುದು, "ಮರಣವು ಕಡೇ ಶತ್ರುವಾಗಿ ನಿವೃತ್ತಿ ಹೊಂದುವದು" ಅಂದರೆ ಅವುಗಳೊಂದಿಗೆ ಇದು ಸಮಾಧಿಗೆ ಸೇರುವುದು. ಆದಾಮನಿಂದ ಉಂಟಾದ ಮರಣವು ಇನ್ನು ಇರುವುದಿಲ್ಲ. ಇದರ ವಶದಲ್ಲಿ ಯಾರೂ ಇರುವುದಿಲ್ಲ. ಪುನರುತ್ಥಾನದಲ್ಲಿರುವ ಶಕ್ತಿಯ ಮೂಲಕ ಎಲ್ಲರೂ ವಿಮೋಚಿಸಲ್ಪಡುವರು. ಕೇವಲ ಯಾರೂ ಮನಃಪೂರ್ವಕವಾಗಿ ಬೇಕೆಂದು ಪಾಪ ಮಾಡುವರೋ ಅವರು ಎರಡನೆಯ ಮರಣದಲ್ಲಿ ನಾಶವಾಗುವರು; ಎರಡನೆಯ ಮರಣವು ವೈರಿಯಲ್ಲ.

## ಸಿದ್ಧತಾ ಕಾರ್ಯ

ಈ ಕವಿತಾರೂಪದ ಪ್ರವಾದನೆಯ ಮೂರನೆ ಚರಣ ಅಥವಾ ಭಾಗವು ವೈರಿಗಳೆಲ್ಲರನ್ನು ನಾಶಮಾಡುವ ಮಹಾ ಸಂಹಾರ ಕಾರ್ಯವು ಮುಕ್ತಾಯವಾಗುವುದಕ್ಕೆ ಮತ್ತು ಯೋಗ್ಯರೆಂದು ಎಣಿಸಲ್ಪಟ್ಟವರನ್ನು ದೇವರ ಮಕ್ಕಳಾಗುವ ಉನ್ನತ ಸ್ಥಿತಿಗೆ ತರುವದಕ್ಕೆ ಮೊದಲು ನಡೆಯಬೇಕಾದ ಒಂದು ಕಾರ್ಯದ ವಿಷಯವಾಗಿ ನಮಗೆ ಹೇಳುತ್ತದೆ. ಇದು ವಚನ 76 ರಿಂದ 79ರ ವರೆಗೆ ಬರೆಯಲ್ಪಟ್ಟಿದೆ. ಅದು ದೇವರ ಶ್ರೇಷ್ಠ ಸೇವಕನಾದ ಯೇಸುವು ತನ್ನ ಮಹಾ ಕಾರ್ಯವನ್ನು ಮಾಡುವುದಕ್ಕೆ ಸ್ನಾನೀಕನಾದ ಯೋಹಾನನು ಮುಂದೂತನಾಗಿ ಹೇಗೆ ದಾರಿಯನ್ನು ಸಿದ್ಧ ಮಾಡುವನೆಂದು ಹೇಳುತ್ತದೆ. ಆ ಮಹಾ ಕಾರ್ಯವು ಆಗಲೇ ದೇವಜನರಾಗಿರುವ ಸಾವಿರಾರು ಮಂದಿಗೆ ರಕ್ಷಣೆಯ ಜ್ಞಾನವನ್ನು ನೀಡಿ ಅವರಿಗೆ ಈಗಿನ (ಸುವಾರ್ತಾ) ಯುಗದಲ್ಲಿ ಉನ್ನತ ಪದವಿಗೆ ಕರೆ ಉಂಟಾಗಿರುವುದನ್ನು ತೋರಿಸಿಕೊಡಲಿರುವುದು. ಹೀಗೆ ದೇವರ ಅತಿಶಯವಾದ ಕರುಣೆಯ ಮೂಲಕ ಸಭೆಯು ಇದನ್ನು ನೋಡಿ, ಕ್ರಿಸ್ತನ ರಾಜ್ಯದಲ್ಲಿ ನೀತಿ ಸೂರ್ಯನು ಉದಯವಾಗಿ ಮಾನವರನ್ನು ಮುಸುಕಿರುವ ಅಂಧಕಾರವನ್ನು ಪರಿಹರಿಸುವ ಮೊದಲು "ಉದಯ ಸೂಚಕ ನಕ್ಷತ್ರವೂ" "ಸೂರ್ಯನೂ" ಆಗಿರುವವನ ಮೂಲಕವಾಗಿ ಇದರ ವಿಷಯವಾಗಿ ಜ್ಞಾನಪ್ರಕಾಶವನ್ನು ಹೊಂದುವರು. ಈಗಿನ ಕಾಲದಲ್ಲಿರುವ ಕಡಿಮೆ ಪ್ರಮಾಣದ ಈ ಬೆಳಕು ನಂಬುವವರ ಹೃದಯಗಳಲ್ಲಿ ಹೊಳೆದು ಅವರನ್ನು ಪರಿಶುದ್ಧರನ್ನಾಗಿಸುವ ಶಕ್ತಿಯಿಂದ ಕೂಡಿ ಅವರಲ್ಲಿ ಸತ್ಯದ ವಿಷಯವಾದ ಆಸಕ್ತಿಯೆಂಬ ಕಿಡಿಯನ್ನು ಹೊತ್ತಿಸುವುದು. ಆ ನಂತರದಲ್ಲಿ ಇವರು ಮರಣದ ಛಾಯೆಯ ಅಡಿಯಲ್ಲಿ ಕುಳಿತಿರುವವರ ಎದುರು ಪ್ರಕಾಶಿಸುವರು. ಈ ಉದಯ ನಕ್ಷತ್ರವು ಭಕ್ತರನ್ನು ನೂತನ ಕಾಲವು ಉದಯಿಸುವ ಮೊದಲು, ಇನ್ನೂ ಅವರು ಕಷ್ಟಕಾಲಗಳಲ್ಲಿರುವಾಗಲೇ ಅವರ ಹೆಜ್ಜೆಗಳನ್ನು ಸಮಾಧಾನದ ಮಾರ್ಗದಲ್ಲಿ ಸೇರಿಸುವುದು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ. ಶ. 2 ಅಕ್ಟೋಬರ್ | ಬೆತ್ಲೇಹೇಮ್ | ಯೇಸುವಿನ ಜನನ(ವಾಕ್ಯವೆಂಬುವನು; ಈತನ ಮೂಲಕವೇ ಸಮಸ್ತವೂ ಉಂಟಾದವು)ಅಬ್ರಹಾಮನ ಸಂತತಿಯೂ ಮತ್ತು ದಾವೀದನ ವಂಶದವನೂ | 1:1–25 | | 2:1–7 | 1:1–5, 9–14 |

## ಮತ್ತಾಯ 1:1–25

ಯೇಸುಕ್ರಿಸ್ತನ ವಂಶಾವಳಿಯು. ಆತನು ದಾವೀದ ವಂಶದವನು. ದಾವೀದನು ಅಬ್ರಹಾಮನ ವಂಶದವನು, ಅಬ್ರಹಾಮನು ಇಸಾಕನನ್ನು ಪಡೆದನು. ಇಸಾಕನು ಯಾಕೋಬನನ್ನು ಪಡೆದನು. ಯಾಕೋಬನು ಯೆಹೂದನನ್ನೂ ಅವನ ಅಣ್ಣ ತಮ್ಮಂದಿರನ್ನೂ ಪಡೆದನು. ಯೆಹೂದನು ತಾಮಾರಳಲ್ಲಿ ಪೆರೆಚನನ್ನೂ ಜೆರಹನನ್ನೂ ಪಡೆದನು. ಪೆರೆಚನು ಹೆಚ್ರೋನನ್ನು ಪಡೆದನು. ಹೆಚ್ರೋನನು ಆರಾಮನನ್ನು ಪಡೆದನು. ಆರಾಮನು ಅಮ್ಮೀನಾದಾಬನನ್ನು ಪಡೆದನು. ಅಮ್ಮೀನಾದಾಬನು ನಹಶೋನನನ್ನು ಪಡೆದನು. ನಜಶೋನನು ಸಲ್ಮೋನನನ್ನು ಪಡೆದನು. ಸಲ್ಮೋನನು ರಾಹಾಬಳಲ್ಲಿ ಬೋವಜನನ್ನು ಪಡೆದನು. ಬೋವಜನು ರೂತಳಲ್ಲಿ ಓಬೇದನನ್ನು ಪಡೆದನು. ಓಬೇದನು ಇಷಯನನ್ನು ಪಡೆದನು. ಇಷಯನು ಅರಸನಾದ ದಾವೀದನನ್ನು ಪಡೆದನು. ದಾವೀದನು ಊರೀಯನ ಹೆಂಡತಿಯಾಗಿದ್ದವಳಲ್ಲಿ ಸೊಲೊಮೋನನನ್ನು ಪಡೆದನು. ಸೊಲೊಮೋನನು ರೆಹಬ್ಬಾಮನನ್ನು ಪಡೆದನು. ರೆಹಬ್ಬಾಮನು ಅಬೀಯನನ್ನು ಪಡೆದನು. ಅಬೀಯನು ಆಸನನ್ನು ಪಡೆದನು. ಆಸನು ಯೆಹೋಷಾಫಾಟನನ್ನು ಪಡೆದನು. ಯೆಹೋಷಾಫಾಟನು ಯೆಹೋರಾಮನನ್ನು ಪಡೆದನು. ಯೆಹೋರಾಮನು ಉಜ್ಜೀಯನನ್ನು ಪಡೆದನು. ಉಜ್ಜೀಯನು ಯೋತಾಮನನ್ನು ಪಡೆದನು. ಯೋತಾಮನು ಆಹಾಜನನ್ನು ಪಡೆದನು. ಆಹಾಜನು ಹಿಜ್ಕೀಯನನ್ನು ಪಡೆದನು. ಹಿಜ್ಕೀಯನು ಮನಸ್ಸೆಯನ್ನು ಪಡೆದನು. ಮನಸ್ಸೆಯು ಆಮೋನನ್ನು ಪಡೆದನು. ಆಮೋನನು ಯೋಷಿಯನನ್ನು ಪಡೆದನು. ಪ್ರಜೆಯು ಬಾಬೆಲಿಗೆ ಸೆರೆಹೋದ ಸಮಯದಲ್ಲಿ ಯೋಷೀಯನು ಯೆಕೋನ್ಯನನ್ನು ಅವನ ಅಣ್ಣತಮ್ಮಂದಿರನ್ನೂ ಪಡೆದನು. ಬಾಬೆಲಿಗೆ ಸೆರೆಹೋದ ಮೇಲೆ ಯೆಕೋನ್ಯನು ಶೆಯಲ್ತಿಯೇಲನನ್ನು ಪಡೆದನು. ಶೆಯಲ್ತಿ–ಯೇಲನು ಜೆರುಬ್ಬಾಬೇಲನನ್ನು ಪಡೆದನು. ಜೆರುಬ್ಬಾಬೇಲನು ಅಬಿಹೂದನನ್ನು ಪಡೆದನು. ಅಬಿಹೂದನು ಎಲ್ಯಕೀಮನನ್ನು ಪಡೆದನು. ಎಲ್ಯಕೀಮನು ಅಜೋರನನ್ನು ಪಡೆದನು. ಅಜೋರನು ಸದೋಕನನ್ನು ಪಡೆದನು. ಸದೋಕನು ಅಖೀಮನನ್ನು ಪಡೆದನು. ಅಖೀಮನು ಎಲಿಹೂದನನ್ನು ಪಡೆದನು. ಎಲಿಹೂದನು ಎಲಿಯಾಜರನನ್ನು ಪಡೆದನು. ಎಲಿಯಾಜರನು ಮತ್ತಾನನನ್ನು ಪಡೆದನು. ಮತ್ತಾನನು ಯಾಕೋಬನನ್ನು ಪಡೆದನು. ಯಾಕೋಬನು ಮರಿಯಳ ಗಂಡನಾದ ಯೋಸೇಫನನ್ನು ಪಡೆದನು. ಈ ಮರಿಯಳಲ್ಲಿ ಕ್ರಿಸ್ತನೆಂಬ ಯೇಸು ಹುಟ್ಟಿದನು. ಹೀಗೆ ಅಬ್ರಹಾಮನಿಂದ ದಾವೀದನವರೆಗೂ ಒಟ್ಟು ಹದಿನಾಲ್ಕು ತಲೆಗಳು. ದಾವೀದ ಮೊದಲುಗೊಂಡು ಬಾಬೆಲಿಗೆ ಸೆರೆಹೋಗುವವರೆಗೂ ಹದಿನಾಲ್ಕು ತಲೆಗಳು. ಬಾಬೆಲಿಗೆ ಸೆರೆಹೋದಂದಿನಿಂದ ಕ್ರಿಸ್ತನವರೆಗೂ ಹದಿನಾಲ್ಕು ತಲೆಗಳು. ಯೇಸುಕ್ರಿಸ್ತನ ಜನನವು

ಹೇಗಾಯಿತೆಂದರೆ–ಆತನ ತಾಯಿಯಾದ ಮರಿಯಳನ್ನು ಯೋಸೇಫನಿಗೆ ನಿಶ್ಚಯ ಮಾಡಿರಲಾಗಿ ಅವರು ಕೂಡುವುದಕ್ಕಿಂತ ಮುಂಚೆ ಆಕೆಯು ಪವಿತ್ರಾತ್ಮನಿಂದ ಬಸುರಾಗಿದ್ದುದು ತಿಳಿದು ಬಂತು. ಆದರೆ ಆಕೆಯ ಗಂಡನಾದ ಯೋಸೇಫನು ಸಜ್ಜನ ನಾಗಿದ್ದು ಆಕೆಯನ್ನು ಬೈಲಿಗೆ ತರುವುದಕ್ಕೆ ಮನಸ್ಸಿಲ್ಲದೆ, ಯಾರಿಗೂ ತಿಳಿಯದಂತೆ ಆಕೆಯನ್ನು ಬಿಟ್ಟುಬಿಡಬೇಕೆಂದಿದ್ದನು. ಇವನು ಅದನ್ನು ಆಲೋಚಿಸುತ್ತಿರುವಾಗ ಕರ್ತನ ದೂತನು ಅವನಿಗೆ ಕನಸಿನಲ್ಲಿ ಕಾಣಿಸಿಕೊಂಡು – ಎಲೈ ಯೋಸೇಫನೇ, ದಾವೀದನ ವಂಶದವನೇ, ನಿನ್ನ ಹೆಂಡತಿಯಾದ ಮರಿಯಳನ್ನು ಸೇರಿಸಿ ಕೊಳ್ಳುವುದಕ್ಕೆ ಅಂಜಬೇಡ. ಆಕೆಯ ಗರ್ಭವು ಪವಿತ್ರಾತ್ಮದಿಂದಲೇ ಆದದ್ದು. ಆಕೆಯು ಒಬ್ಬ ಮಗನನ್ನು ಹಡೆಯುವಳು; ನೀನು ಆತನಿಗೆ ಯೇಸು ಎಂದು ಹೆಸರಿಡಬೇಕು. ಯಾಕಂದರೆ ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವವನು ಅಂದನು. ಕರ್ತನು ಪ್ರವಾದಿಯ ಮುಖಾಂತರ ಹೇಳಿದ ಮಾತು ನೆರವೇರುವಂತೆ ಇದೆಲ್ಲಾ ನಡೆಯಿತು; ಅ ಮಾತು ಏನೆಂದರೆ – ಇಗೋ, ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗನನ್ನು ಹಡೆಯುವಳು; ಆತನಿಗೆ ಇಮ್ಮಾನುವೇಲ್ ಎಂದು ಹೆಸರಿಡುವರು ಎಂಬುದು. ದೇವರು ನಮ್ಮ ಕೂಡ ಇದ್ದಾನೆಂದು ಈ ಹೆಸರಿನ ಅರ್ಥ. ಆಗ ಯೋಸೇಫನು ನಿದ್ದೆ ತಿಳಿದೆದ್ದು ಕರ್ತನ ದೂತನು ಅಪ್ಪಣೆಕೊಟ್ಟ ಹಾಗೆ ತನ್ನ ಹೆಂಡತಿಯನ್ನು ಸೇರಿಸಿಕೊಂಡನು. ಆದರೆ ಆಕೆಯು ಗಂಡುಮಗುವನ್ನು ಹಡೆಯುವ ತನಕ ಆಕೆಯನ್ನು ಅರಿಯಲಿಲ್ಲ. ಮಗುವಿಗೆ ಯೇಸುವೆಂದು ಹೆಸರಿಟ್ಟರು.

## ಲೂಕ 2:1–7

ಆ ಕಾಲದಲ್ಲಿ ರಾಜ್ಯವೆಲ್ಲಾ ಖಾನೇಷುಮಾರಿ ಬರೆಸಿಕೊಳ್ಳಬೇಕೆಂಬ ಆಜ್ಞೆಯು ಚಕ್ರವರ್ತಿಯಾದ ಔಗುಸ್ತನಿಂದ ಹೊರಟಿತು. ಕರೇನ್ಯನು ಸುರಿಯಕ್ಕೆ ಅಧಿಪತಿಯಾಗಿದ್ದಾಗ ಈ ಮೊದಲ ಖಾನೇಷುಮಾರಿ ನಡೆಯಿತು. ಆಗ ಎಲ್ಲರೂ ಖಾನೇಷುಮಾರಿ ಬರೆಸಿಕೊಳ್ಳುವುದಕ್ಕಾಗಿ ತಮ್ಮ ತಮ್ಮ ಊರುಗಳಿಗೆ ಹೊರಟರು. ಯೋಸೇಫನು ಸಹ ತಾನು ದಾವೀದನ ಮನೆತನದವನೂ ಗೋತ್ರದವನೂ ಆಗಿದ್ದರಿಂದ ಹೆಸರು ಬರೆಸಿಕೊಳ್ಳುವುದಕ್ಕಾಗಿ ತನಗೆ ನಿಶ್ಚಿತಾರ್ಥವಾಗಿದ್ದ ಮರಿಯಳ ಸಂಗಡ ಗಲಿಲಾಯ ಸೀಮೆಯ ನಜರೇತ್ ಎಂಬ ಊರಿನಿಂದ ಹೊರಟು ಯೂದಾಯದಲ್ಲಿರುವ ಬೆತ್ಲೆಹೇಮ್ ಎಂಬ ದಾವೀದನೂರಿಗೆ ಹೋದನು. ಆಗ ಮರಿಯಳು ಪೂರ್ಣ ಗರ್ಭಿಣಿಯಾಗಿದ್ದಳು. ಅವರು ಅಲ್ಲಿದ್ದಾಗ ಆಕೆಗೆ ದಿನತುಂಬಿತು. ಆಕೆಯು ತನ್ನ ಚೊಚ್ಚಲು ಮಗನನ್ನು ಹೆತ್ತು ಬಟ್ಟೆಯಲ್ಲಿ ಸುತ್ತಿ ಚತ್ರದಲ್ಲಿ ಅವರಿಗೆ ಸ್ಥಳವಿಲ್ಲದ ಕಾರಣ ಅವನನ್ನು ಗೋದಲಿಯಲ್ಲಿ ಮಲಗಿಸಿದಳು.

## ಯೋಹಾನ 1:1–5, 9–14

ಆದಿಯಲ್ಲಿ ವಾಕ್ಯವಿತ್ತು. ಆ ವಾಕ್ಯವು ದೇವರ ಬಳಿಯಲ್ಲಿತ್ತು. ಆ ವಾಕ್ಯವು ದೇವರಾಗಿತ್ತು, ಆ ವಾಕ್ಯವೆಂಬುವನು ಆದಿಯಲ್ಲಿ ದೇವರ ಬಳಿಯಲ್ಲಿದ್ದನು. ಆತನ ಮೂಲಕವಾಗಿ ಸಮಸ್ತವೂ ಉಂಟಾಯಿತು. ಉಂಟಾಗಿರುವ ವಸ್ತುಗಳಲ್ಲಿ ಆತನಿಲ್ಲದೆ ಒಂದಾದರೂ ಉಂಟಾಗಲಿಲ್ಲ. ಆತನಲ್ಲಿ ಜೀವವಿತ್ತು. ಆ ಜೀವವು ಮನುಷ್ಯರಿಗೆ ಬೆಳಕಾಗಿತ್ತು. ಆ ಬೆಳಕು ಕತ್ತಲೆಯಲ್ಲಿ ಪ್ರಕಾಶಿಸುತ್ತದೆ; ಕತ್ತಲು ಅದನ್ನು ಮುಸುಕಲಿಲ್ಲ. ನಿಜವಾದ ಬೆಳಕು ಲೋಕಕ್ಕೆ ಬರುವದಾಗಿತ್ತು. ಆ ಬೆಳಕೇ ಪ್ರತಿ ಮನುಷ್ಯನಿಗೂ ಬೆಳಕನ್ನು ಕೊಡುವಂಥದ್ದು. ಆತನು ಲೋಕದಲ್ಲಿ ಇದ್ದನು. ಮತ್ತು ಲೋಕವು ಆತನ ಮೂಲಕವಾಗಿ ಉಂಟಾಯಿತು. ಆದರೂ ಲೋಕವು ಆತನನ್ನು ಅರಿಯಲಿಲ್ಲ. ಆತನು ತನ್ನ ಸ್ವಾಸ್ಥ್ಯಕ್ಕೆ ಬಂದನು. ಆದರೆ ಸ್ವಂತ ಜನರು ಆತನನ್ನು ಅಂಗೀಕರಿಸಲಿಲ್ಲ. ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ, ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು. ಇವರು ರಕ್ತ ಸಂಬಂಧದಿಂದಾಗಲೀ ಕಾಮದಿಂದಾಗಲೀ ಪುರುಷಸಂಕಲ್ಪದಿಂದಾಗಲೀ ಹುಟ್ಟಿದವರಲ್ಲ. ದೇವರಿಂದಲೇ ಹುಟ್ಟಿದವರು. ಆ ವಾಕ್ಯವೆಂಬುವವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸ ಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆವು; ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು.

# “ಆ ಬೆಳಕೇ ಪ್ರತಿ ಮನುಷ್ಯನಿಗೂ ಬೆಳಕನ್ನು ಕೊಡುವಂಥದು”

**ರೀಪ್ರಿಂಟ್ ಪುಟ 2408**

## ಯೋಹಾನ 1:1–4

**"ಆತನಲ್ಲಿ ಜೀವವಿತ್ತು; ಆ ಜೀವವು ಪ್ರತಿ ಮನುಷ್ಯರಿಗೆ ಬೆಳಕಾಗಿತ್ತು." – ಯೋಹಾನ 1:4**

ನಮ್ಮ ಪಾಠವು ತಿಳಿಸುವುದೇನೆಂದರೆ, ಗತಕಾಲದ ಬಹು ಹಿಂದಕ್ಕೆ ಸರಿದು ನೋಡಿದಾಗ ಆದಿಕಾಂಡದಲ್ಲಿ ತಿಳಿಸಿರುವಂತೆ ಭೂಲೋಕದ ಸೃಷ್ಟಿಯ ಪ್ರಾರಂಭದಲ್ಲೇ ವಾಕ್ಯವೆನಿಸಿಕೊಳ್ಳುವ "ಲೋಗಾಸ್" ಎಂಬುವನು ದೇವರ ಬಳಿಯಲ್ಲಿದ್ದನು. "ವಾಕ್ಯ" ಎನ್ನುವುದು ನಮ್ಮ ಕರ್ತನಾದ ಯೇಸುವು ಮನುಷ್ಯನಾಗಿ ಬರುವುದಕ್ಕೆ ಪೂರ್ವದಲ್ಲಿದ್ದ ಸ್ಥಿತಿಗೆ ಬಹು ಒಳ್ಳೆಯ ಒಂದು ಬಿರುದು. ಅದು ಗ್ರೀಕ್ ಭಾಷೆಯಿಂದ ತರ್ಜುಮೆಗೊಂಡ ಹೆಚ್ಚು ಅಕ್ಷರಾರ್ಥದಲ್ಲಿ "ಭಾವತತ್ವ ಪ್ರದರ್ಶನ" ಎನ್ನಿಸಿಕೊಳ್ಳಬಹು ದಾದದ್ದು. ಏಕೆಂದರೆ "ಲೋಕವು ಉಂಟಾಗುವುದಕ್ಕೆ ಮೊದಲೇ ಪರಲೋಕದ ತಂದೆ ದೇವರಿಗೆ ಸಂಗಡಿಗನಾಗಿದ್ದು "ದೇವರ ಸೃಷ್ಟಿಗೆ ಮೂಲನೆಂದು" ಹೇಳಲ್ಪಟ್ಟಿರುವ ಶ್ರೇಷ್ಠನೂ ಘನವಂತನೂ ಆದವನಲ್ಲಿ ದೇವರ ಚಿತ್ತ ಮನಸ್ಸು ಉದ್ದೇಶ ಮತ್ತು ಸ್ವಭಾವ

ಇವುಗಳು ಪ್ರತಿಯೊಂದು ವಿಧದಲ್ಲೂ ಸಂಪೂರ್ಣವಾದ ರೀತಿಯಲ್ಲಿ ಪರಿಪೂರ್ಣವಾಗಿ ವ್ಯಕ್ತವಾಗಿರುವುದು. ಈ ಜ್ಯೇಷ್ಠಪುತ್ರನ ವಿಷಯವಾಗಿ ಅಪೋಸ್ತಲನು ಬರೆಯುವು ದೇನೆಂದರೆ, ಆತನು ಯೆಹೋವನ ಹೋಲಿಕೆಯಲ್ಲಿ "ದೇವರಿಗೆ ಸರಿ ಸಮಾನನಾಗಿದ್ದನು." ಫಿಲಿಪ್ಪಿ 2:6. ಆದರೂ ಅತನು ಎಂದೂ ಇದನ್ನು ತನ್ನ ಹಕ್ಕೆಂದು ಸಾಧಿಸಲಿಲ್ಲ. ನಮ್ಮ ಸಾಮಾನ್ಯ ಭಾಷಾಂತರದಲ್ಲಿ (Common Version) ತಂದೆ ದೇವರಾದ ಯೆಹೋವನಿಗೆ ತಾನು ಸಮಾನನಾಗಿರುವೆನೆಂಬ ಅಮೂಲ್ಯ ಪದವಿಯನ್ನು (ಕಸ) ಕೊಳ್ಳೆ ಎಂದು ಲೋಗಾಸನು ಎಂದೂ ಎಣಿಸಿಕೊಳ್ಳಲಿಲ್ಲವೆಂದು ಹೇಳುವಂತೆ ತೋರುತ್ತದೆ. ಅಪೋಸ್ತಲನ ಪ್ರತಿಪಾದನೆಯು ಇದಕ್ಕೆ ವಿರುದ್ಧವಾಗಿರುವುದು; ಲೋಗಾಸನು ಯೆಹೋವನಿಗೆ ಪೂರ್ಣವಾಗಿ ಅಧೀನನಾಗಿದ್ದಾನೆಂಬುದನ್ನೂ ಮತ್ತು ಈ ಅಧೀನತೆ, ವಿಧೇಯತೆ ಮತ್ತು ದೀನತೆಗಳಿಗೆ ಸಾಕ್ಷಿಯಾಗಿ ಲೋಗಾಸನು ಶರೀರಧಾರಿಯಾಗಿ "ಮನುಷ್ಯನಾದ ಕ್ರಿಸ್ತ ಯೇಸು" ಆದನೆಂದು ತೋರಿಸಿಕೊಟ್ಟಿದ್ದಾನೆ. ಹಾಗೂ ಇನ್ನೂ ಮುಂದುವರಿದು, ಇದೇ ದೀನತೆ ಮತ್ತು ತನ್ನ ತಂದೆಗೆ ತೋರಿದ ವಿಧೇಯತೆಗಳಿಗೆ ಅನುಸಾರವಾಗಿ ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯ ನಾದನು; ಈ ಕಾರಣದಿಂದ ಯೆಹೋವ ದೇವರು ಆತನನ್ನು ಪುನರುತ್ಥಾನಗೊಳಿಸಿ, ದೈವಸ್ವಭಾವವನ್ನು ಕೊಡುವುದರ ಮೂಲಕ ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ದೇವದೂತರುಗಳಿಗಿಂತಲೂ ಪ್ರಭುತ್ವಗಳಿಗಿಂತಲೂ ಅಧಿಕಾರ ಗಳಿಗಿಂತಲೂ, ಮತ್ತು ಎಲ್ಲಾ ಹೆಸರುಗಳಿಗಿಂತಲೂ ಮೇಲಾದ ಹೆಸರನ್ನು ದಯಪಾಲಿಸಿರುವನು. ಈ ಸ್ಥಾನವು ಇರುವ ಎಲ್ಲಾ ಸ್ಥಾನಗಳಿಗಿಂತಲೂ ಉನ್ನತವಾಗಿ, ಮನುಷ್ಯನಾಗಿ ಬರುವುದಕ್ಕೆ ಪೂರ್ವದಲ್ಲಿದ್ದ ಸ್ಥಿತಿಗಿಂತಲೂ ಉನ್ನತವಾಗಿ, ತನ್ನ ತಂದೆಗೆ ಎರಡನೆಯ ಸ್ಥಾನದವನಾಗಿ ಆತನ ಸಿಂಹಾಸನ ಮಹಿಮೆ ಅಧಿಕಾರ ಸ್ವಭಾವದಲ್ಲಿ ಸಹ–ಭಾಗಿಯಾದ ಸ್ಥಾನವನ್ನು ಹೊಂದಿರುತ್ತಾನೆ.

ಅಪೋಸ್ತಲನು ಹೇಳಿರುವುದು ಸಾಮಾನ್ಯ ಭಾಷಾಂತರಕ್ಕೆ (Common Version) ವಿರುದ್ಧವಾಗಿರುವುದು. "ಅತನು ದೇವಸ್ವರೂಪದಲ್ಲಿದ್ದು ತಾನು ದೇವರಂತಿರುವುದು ಒಂದು ದುರಾಕ್ರಮಿತವೆಂದು ಎಂದೂ ಎಣಿಸಲಿಲ್ಲ; ಆದರೆ ತನ್ನನ್ನು ಬರಿದು ಮಾಡಿಕೊಂಡು ದಾಸನ ರೂಪ ಧರಿಸಿಕೊಂಡನು" ಎಂದು ಎಂಫಾಟಿಕ್ ಡಯಾಗ್ಲಾಟ್ ಎಂಬ (ಹೊಸ ಒಡಂಬಡಿಕೆಯ) ಗ್ರಂಥದಲ್ಲಿ ಒಂದು ಒಳ್ಳೆಯ ಭಾಷಾಂತರ ದೊರೆಯುತ್ತದೆ. ಇದು ಹಲವಾರು ಗ್ರೀಕ್ ಭಾಷೆಯ ವಿದ್ವಾಂಸರುಗಳ ಭಾಷಾಂತರಗಳಿಗೆ ಸರಿಬೀಳುತ್ತದೆ. ಹೀಗೆ – ಕ್ಲಾರ್ಕ್ ಎಂಬುವರ ಪ್ರಕಾರ "ಯಾವಾತನು ... ಇದನ್ನು ಶ್ರದ್ಧಾ ಪೂರ್ವಕವಾಗಿ ಬಯಸುವ ಒಂದು ವಿಷಯವಲ್ಲವೆಂದು ಆಲೋಚಿಸಿದನು" ಎಂದೂ ಸಿಪ್ರಿಯನ್ ಎಂಬವರ ಪ್ರಕಾರ "ಶ್ರದ್ಧೆಯಿಂದ ಆಶಿಸಲಿಲ್ಲ" ಎಂದೂ, ವೇಕ್‌ಫೀಲ್ಡ್ ಎಂಬುವವರ ಪ್ರಕಾರ "ಅತ್ಯಾಸಕ್ತಿಯಿಂದ ಹಿಡಿದಿಟ್ಟುಕೊಳ್ಳ ಆಲೋಚನೆ ಮಾಡಲಿಲ್ಲ" ಎಂದೂ, ಸ್ಟೂವರ್ಟ್ ಎಂಬುವರ ಪ್ರಕಾರ "ಮನವಿ ಮಾಡ ಬಯಸುವ ಒಂದು ಸಂಗತಿಯೆಂದು ಭಾವಿಸಲಿಲ್ಲ" ಎಂದೂ, ಶಾರ್ಪ್ ಎಂಬುವರ ಪ್ರಕಾರ "ಮುಟ್ಟುಗೋಲು ಹಾಕಿಕೊಳ್ಳುವ ವಸ್ತು ಎಂದು ಆಲೋಚಿಸಲಿಲ್ಲ." ಎಂದೂ ನೀಲಾಂಡ್ ಎಂಬುವರ ಪ್ರಕಾರ "ಆತುರದಿಂದ ಹಿಡಿದುಕೊಳ್ಳಲು ಆಸಕ್ತನಾಗಲಿಲ್ಲ" ಎಂದೂ, ಡಿಕ್ಸನ್ ಎಂಬುವರ ಪ್ರಕಾರ "ರಭಸವಾಗಿ ಪರಿಶ್ರಮಿಸಲಿಲ್ಲ" ಎಂದೂ, ಟರ್ನ್‌ಬುಲ್ ಎಂಬುವರ ಪ್ರಕಾರ "ದುರಾಕ್ರಮಣವೆಂದು ಆಲೋಚಿಸಲಿಲ್ಲ" ಎಂದೂ, ರಿವೈಸ್ಡ್ ವರ್ಷನ್ ಭಾಷಾಂತರದಲ್ಲಿ "ದೇವರ ಸ್ವರೂಪದಲ್ಲಿದ್ದ ಯಾವಾತನು ದೇವರಿಗೆ ಸಮಾನನಾಗಿರುವುದು ವಿಶೇಷಿಸುವ ಸಂಗತಿಯಲ್ಲವೆಂದು (ಮೂಲ: ಹಿಡಿದಿಟ್ಟುಕೊಳ್ಳುವ ಸಂಗತಿಯಲ್ಲ) ಎಣಿಸಿ ತನ್ನನ್ನು ಬರಿದು ಮಾಡಿಕೊಂಡು ದಾಸನ ರೂಪವನ್ನು ತೆಗೆದುಕೊಂಡನು" ಎಂದೂ ಇವು ಹೀಗೆ ಒಳ್ಳೆಯ ಭಾಷಾಂತರಗಳಲ್ಲಿ ದೊರೆಯುತ್ತವೆ.

ಹೀಗಿರುವಲ್ಲಿ, ಆತನು ಭೂಮಿಯ ಮೇಲೆ ಇದ್ದಾಗಲಾಗಲಿ ಇಲ್ಲವೇ ಆತನು ಲೋಗಾಸ್ ಆಗಿ "ಶರೀರಧಾರಿಯಾಗಿ" ಬರುವುದಕ್ಕೆ ಮೊದಲಾಗಲೀ, ದೇವರ ಒಬ್ಬನೇ ಮಗನೂ ದೇವರ ಅತಿಪ್ರಿಯ ಮಗನೂ ಆದವನನ್ನು ಶಾಸ್ತ್ರವಚನಗಳು ಎಲ್ಲೂ ಯೆಹೋವನಿಗೆ ಸಮಾನ ಸ್ಥಾನದಲ್ಲಿರಿಸುವುದಿಲ್ಲ. ಅವು ಈಗ ನಮಗೆ ಭರವಸದಿಂದ ಹೇಳುವುದೇಂದರೆ, ದೇವಸ್ವಭಾವದಲ್ಲಿ ಪಾಲುಗಾರನಾಗಿ ಭೂಪರಲೋಕಗಳ ಎಲ್ಲಾ ಅಧಿಕಾರ ಮಹಿಮೆಗಳು ಹೊಂದಿದವನಾಗಿ ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟಿರುವ ತನ್ನ ಸ್ಥಿತಿಯಲ್ಲೂ ತಾನು ಈಗಲೂ ಲೋಗಾಸನೇ. ಕ್ರಿಸ್ತ ಯೇಸುವೇ ಆಗಿರುವನು. ಇದಕ್ಕೆ ಅನುಸಾರವಾಗಿ ನಮಗೆ ಬೋಧಿಸಲ್ಪಟ್ಟಿರುವುದು – "ಎಲ್ಲರೂ ತನಗೆ ಮಾನ ಕೊಡುವ ಪ್ರಕಾರವೇ ಮಗನಿಗೂ ಮಾನ ಕೊಡಬೇಕೆಂದು ತಂದೆ ಇಚ್ಛೈಸುತ್ತಾನೆ." ಯೋಹಾನ 5:23. ಹೀಗಿರಲು ನಮ್ಮ ಪಾಠವು – ನಮ್ಮ ವಿಮೋಚಕನು ತಾನು ಮನುಷ್ಯನಾಗುವ ಪೂರ್ವದಲ್ಲಿದ್ದ ಆತ್ಮೀಕ ಸ್ಥಿತಿಯಲ್ಲಿ ದೇವ ದೂತರಿಗಿಂತಲೂ ಮೇಲಿದ್ದು ಎಲ್ಲಾ ವಸ್ತುಗಳೂ ಆತನ ಮೂಲಕ ಉಂಟಾದವೆಂದು ಭರವಸದಿಂದ ಪರಿಚಯಿಸಿಕೊಡುತ್ತದೆ. ಅದು ಅಕ್ಷರಶಃ ಹೇಳುವುದು. "ಉಂಟಾಗಿರುವ ವಸ್ತುಗಳಲ್ಲಿ ಆತನಿಲ್ಲದೆ ಒಂದಾದರೂ ಉಂಟಾಗಲಿಲ್ಲ" ಹೀಗೆ ನಾವು ನೋಡುವುದು, ಯೆಹೋವನ ಸೃಷ್ಟಿ ಕ್ರಮದಲ್ಲಿ ಎಲ್ಲಾ ಜೀವಿಗಳಿಗಿಂತ ಲೋಗಾಸನಿಗೆ ಆಧ್ಯತೆಯಿತ್ತು – "ಎಲ್ಲಾದರಲ್ಲಿ ಪ್ರಮುಖನಾಗುವಂತೆ ಸತ್ತವರಲ್ಲಿ ಮೊದಲು ಎದ್ದು ಬಂದವನು ಆತನು" ಕೊಲೊಸ್ಸೆ 1:18.

ವಿಷಯವನ್ನು ವಿಮರ್ಶೆ ಮಾಡದಿರುವ ಸತ್ಯವೇದ ವಿದ್ಯಾರ್ಥಿಗಳ ಸಂಖ್ಯೆ ಬಹು ದೊಡ್ಡದಿರುವುದು. ಆದುದರಿಂದ ಯೋಹಾನನ ಸುವಾರ್ತೆಯ ಮೊದಲನೇ ವಚನದಲ್ಲಿ ಪ್ರಕಟಿಸಿರುವಂತೆ ತನ್ನನ್ನು ವಾಕ್ಯವನ್ನಾಗಿಯೂ ಭಾವ ಪ್ರದರ್ಶನವಾಗಿಯೂ ಸಂದೇಶವನ್ನಾಗಿಯೂ ಕಳುಹಿಸಿರುವ ಯೆಹೋವನಿಗೆ ಲೋಗಾಸನು ಪೂರ್ಣವಾಗಿ ಸಮಾನನೆಂಬ ತಪ್ಪು ಭಾವನೆಯಲ್ಲಿ ಅನೇಕರಿರುವುದು ಆಶ್ಚರ್ಯವೇನಲ್ಲ. ಆದರೂ ಇದು ಸತ್ಯವೇದದ ನಿರೂಪಣೆಗೆ ವಿರುದ್ಧವಾಗಿಯೂ ನಮ್ಮ ಕರ್ತನಾದ ಯೇಸುವು ಕೊಟ್ಟ ಸಾಕ್ಷಿಗೆ ವಿರುದ್ಧವಾಗಿಯೂ ಇರುವುದು. ಆತನು ಸ್ಪಷ್ಟವಾಗಿ ಸಾರಿಹೇಳಿರುವುದು – "ನನ್ನಷ್ಟಕ್ಕೆ ನಾನೇ ಏನೂ ಮಾಡಲಾರೆನು; ತಂದೆ ಹೇಳಿದ್ದನ್ನು ಕೇಳಿ ನ್ಯಾಯ ತೀರಿಸುತ್ತೇನೆ" ಮತ್ತೊಂದು ಸಾರಿ "... ನನ್ನ ತಂದೆಯು ನನಗಿಂತ ದೊಡ್ಡವನು" ಯೋಹಾನ 5:30; 14:28.

ಹಳೇ ಒಡಂಬಡಿಕೆಯಲ್ಲಿ ದೇವರು ಎಂದು ತರ್ಜುಮೆಗೊಂಡ ಶಬ್ದವು ಯೆಹೋವ ಎಂಬ ಪದಕ್ಕೆ ಸಮಾನನಾದದಲ್ಲವೆಂದು ಪಂಡಿತರುಗಳೆಲ್ಲರಿಗೆ ತಿಳಿದಿರುವುದು. ಆದರೂ ಇದು "ಶಕ್ತನು" ಎಂಬ ಭಾವಾರ್ಥವುಳ್ಳದ್ದಾಗಿದ್ದು, ಸರ್ವಶಕ್ತನಾದ ಯೆಹೋವನ ಜೊತೆಗೆ ಪದೇ ಪದೇ ಇತರರಿಗೂ ಉಪಯೋಗಿಸಲಾಗಿದೆ. ಇದನ್ನು ದೇವದೂತರಿಗೆ ಉಪಯೋಗಿಸ ಲಾಗಿದೆ; ವಿಶೇಷವಾದ ಮನುಷ್ಯರಿಗೆ ಉಪಯೋಗಿಸಲಾಗಿದೆ; ಸುಳ್ಳಾದ ದೇವರುಗಳಿಗೂ ಉಪಯೋಗಿಸಲಾಗಿದೆ. ಯೆಹೋವಾ ಎಂಬ ಶಬ್ದವು ಸರ್ವಶಕ್ತನ ವಿಶೇಷನಾಮ. ಈತನಿಗೆ ಇತರ ಎಲ್ಲಾ ಎಲೋಹಿಂಗಳು (ದೇವರು ಅಂದರೆ ಶಕ್ತರುಗಳು) ಅಧೀನರುಗಳು. ಹಾಗೆ ಹೊಸ ಒಡಂಬಡಿಕೆಯಲ್ಲಿ ಥಿಯೋಸ್ ಎಂಬ ಪದವು ಎಲೋಹಿಮ್ ಎಂಬುದಕ್ಕೆ ಸಮಾನವಾದದ್ದು. ಇದು ಶಕ್ತರಾಗಿರುವುದನ್ನು ಸೂಚಿಸುತ್ತದೆ. ಇದನ್ನು ಹೊಸ ಒಡಂಬಡಿಕೆಯಲ್ಲಿ ಅತಿ ಹೆಚ್ಚು ಸಾರಿ ಸ್ವತಃ ಯೆಹೋವನಿಗೆ ಹೇಳಲ್ಪಟ್ಟಿದೆ, ಆದರೆ ಕೆಲವು ಸಾರಿ ಮನುಷ್ಯರಿಗೆ ಮತ್ತು ಸುಳ್ಳಾದ ದೇವರುಗಳಿಗೆ ಹೇಳಲ್ಪಟ್ಟಿದೆ, ಮತ್ತು ಹಲವು ಸಾರಿ ನಮ್ಮ ಕರ್ತನಾದ ಯೇಸುವಿಗೆ ಹೇಳಲ್ಪಟ್ಟಿದೆ. ಯೋಹಾನನ ಸುವಾರ್ತೆಯ ಮೊದಲನೇ ವಚನವು ಸೃಷ್ಟಿಗೆ ಮೂಲನೂ (ಪ್ರಕಟಣೆ 3:14) ಯೆಹೋವನ ಒಬ್ಬನೇ ಕುಮಾರನೂ ಆದ ಲೋಗಾಸನಿಗೆ ಥಿಯೋಸ್ ಎಂಬ ಪದವನ್ನು ಉಪಯೋಗಿಸಿರುವ ಒಂದು ಗುರುತಿಸಲಾದ ಸಂದರ್ಭ. ಆದರೆ ವಿಮರ್ಶನಾತ್ಮಕನಾದ ಗ್ರೀಕ್ ಭಾಷೆಯ ವಿದ್ಯಾರ್ಥಿಗೆ ಈ ಇಬ್ಬರು ದೇವರುಗಳಿಗಿರುವ ವ್ಯತ್ಯಾಸವನ್ನು ಗಮನಿಸಿ, ಇವರಲ್ಲಿ ಒಬ್ಬನು ವಿಶೇಷ ರೀತಿಯಲ್ಲಿ ಮತ್ತೊಬ್ಬನಿಗಿಂತ ಉತ್ಕೃಷ್ಟನೆಂದು ಕಂಡುಕೊಳ್ಳುವುದರಲ್ಲಿ ಕಷ್ಟವಾಗಬಾರದು. ಯಾಕೆಂದರೆ ಗ್ರೀಕ್ ಭಾಷೆಯಲ್ಲಿ ಯೆಹೋವನನ್ನು ಹೆಸರಿಸುವಾಗ ಥಿಯೋಸ್ ಎಂಬ ಪದದ ನಿರ್ದೇಶಕ ಗುಣವಾಚಿಯನ್ನು (Definite article) ಸೇರುವುದರಲ್ಲಿಯೂ ಮತ್ತು ಲೋಗಾಸನನ್ನು ಹೆಸರಿಸುವಾಗ ಅನಿರ್ದೇಶಕ ಗುಣವಾಚಿಯನ್ನು (Indefinite article) ಸೇರಿಸಿರುವುದರಲ್ಲಿ ಈ ವ್ಯತ್ಯಾಸವನ್ನು ಸ್ಪಷ್ಟವಾಗಿ ತೋರಿಸಲಾಗಿದೆ. ಇದರ ಪರಿಣಾಮವಾಗಿ, ನಮ್ಮ ಇಂಗ್ಲೀಷ್ ಭಾಷೆಯಲ್ಲಿ ಈ ವಾಕ್ಯ ಭಾಗವನ್ನು ಹೀಗೆ ಅನುವಾದಿಸಲಾಗಿದೆ.

"ಆದಿಯಲ್ಲಿ ಲೋಗಾಸನಿದ್ದನು, ಮತ್ತು ಈ ಲೋಗಾಸನು ಆ ದೇವರ ಬಳಿಯಲ್ಲಿದ್ದನು, ಮತ್ತು ಲೋಗಾಸನು ಒಬ್ಬ ದೇವರಾಗಿದ್ದನು. ಈತನು ಆದಿಯಲ್ಲಿ ಆ ದೇವರ ಬಳಿಯಲ್ಲಿದ್ದನು".

ಈ ಅನುವಾದವನ್ನು ಯಾವ ಗ್ರೀಕ್ ಪಂಡಿತನೂ ವಿವಾದಿಸಲಾರನು; ಮತ್ತು ಇದು ತಂದೆಯ ಮತ್ತು ಮಗನ ಪ್ರಾಥಮಿಕ ಸಂಬಂಧದ ವಿಷಯವಾಗಿರುವ ಎಲ್ಲಾ ವಿವಾದವನ್ನು ಶಮನಗೊಳಿಸುತ್ತದೆ. ನಿಜವಾಗಲೂ "ತಂದೆ" ಮತ್ತು "ಮಗ" ಎಂಬುದರಲ್ಲಿ ವ್ಯಕ್ತವಾದ ಅಂಶವೆಂದರೆ, ಬೇರೊಂದೆಡೆ ಹೇಳಿರುವಂತೆ "ದೇವರಿಂದಲೇ ಹೊರಟು ಬಂದವನು" ಎಂಬ ವಿಷಯ ಅಡಕವಾಗಿರುವುದು. (ಯೋಹಾನ 8:42) ಇಲ್ಲವಾದಲ್ಲಿ ತಂದೆ ಮತ್ತು ಮಗ ಎಂಬುದರಲ್ಲಿ ಅರ್ಥವಿಲ್ಲದ್ದು. ಒಬ್ಬ ಮಗನು ಎಂದೂ ತನ್ನ ತಂದೆಯಾಗಲಾರನು, ಇಲ್ಲವೇ ಮಗನಿಗೆ ಎಂದೂ ಒಂದು ಆರಂಭವೆನ್ನುವುದು ಇರಲಿಲ್ಲ ಎಂಬುದನ್ನೂ ಪ್ರತಿಪಾದಿಸಲಾಗದು. ಯಾಕೆಂದರೆ ಮಗನು ಎನ್ನುವುದರಲ್ಲಿ ಒಂದು ಜೀವದ ಅಸ್ತಿತ್ವವು ಇರುವುದನ್ನು ಮತ್ತು ಇದು ತಂದೆ ಎಂಬ ಮೂಲದಿಂದ ಉತ್ಪತ್ತಿಯಾಗಿ ಇದಕ್ಕೆ ಒಂದು ಆರಂಭವು ಇರುವುದೆಂಬ ವಿಷಯವು ಅಡಕವಾಗಿರುವುದು. ಶಾಸ್ತ್ರದ ವಚನಗಳಿಗೆ ಸ್ವತಃ ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನ ಮಾಡಿಕೊಳ್ಳುವುದಕ್ಕೆ ಬಿಟ್ಟಾಗ ಅವುಗಳು ಸೊಗಸಾದ ರೀತಿಯಲ್ಲಿ ಸ್ಥಿರವಾದ ಅರ್ಥವುಳ್ಳದ್ದಾಗಿಯೂ ಮತ್ತು ಸಾಮರಸ್ಯದಿಂದ ಕೂಡಿ ಸಮರ್ಥನೀಯವಾಗಿಯೂ ಇರುವುದು. ಆದರೆ ಪೂರ್ವ ಕಲ್ಪಿತವಾದ ತಪ್ಪು ಬೋಧನೆಗಳಿಂದ ವಿರೂಪಗೊಳಿಸಿ ತಿರುಚಿ ದಾಗ ಸತ್ಯದ ಬೆಳಕು ಕತ್ತಲಾಗುತ್ತದೆ. ಮತ್ತು ಇದಕ್ಕೆ ಸಂಬಂಧ ಪಟ್ಟವೆಲ್ಲವುಗಳ ಮೇಲೆ ಮಾರ್ಮಿಕವೆಂದು ಲೇಪಿಸ ಲಾಗುತ್ತದೆ. ಹೀಗಿರಲು ಇದು ದೇವರ ವಿಷಯವಾದ ಮರ್ಮವಲ್ಲ ಆದರೆ "ಅಧರ್ಮಸ್ವರೂಪನು ಮಾಡುವ ಕಾರ್ಯಗಳ ಮರ್ಮಗಳು" ಮರ್ಮಾಂಧಕಾರಗಳು ಮಾರ್ಮಿಕವಾದ ತಪ್ಪುಗಳು.

"ಆತನಲ್ಲಿ ಜೀವವಿತ್ತು" ನಮ್ಮ ಕರ್ತನು ಮಾನವ ಕುಲದಿಂದ ಪ್ರತ್ಯೇಕವಾಗಿದ್ದುದ್ದನ್ನು ಹೀಗೆ ತೋರಿಸಲಾಗಿದೆ. "ಮನುಷ್ಯನಾದ ಕ್ರಿಸ್ತ ಯೇಸುವನ್ನುಳಿದು" ಬೇರೆ ಯಾರಲ್ಲಿಯೂ ಜೀವವಿರಲಿಲ್ಲ. ಯೇಸುವನ್ನು ಬಿಟ್ಟರೆ ಆದಾಮನ ಸಂತತಿಯಾಗಿರುವ ಮಾನವ ಕುಲದವರೆಲ್ಲರಲ್ಲಿಯೂ ಮರಣವು ಪ್ರದರ್ಶಿಸುತ್ತಿತ್ತು. ಆದಾಮನು ಅವಿಧೇಯನಾದ ಸಮಯದಿಂದ ಆತನ ಸಂತತಿಯ ಮೇಲೆ ಅದರ ಆಳ್ವಿಕೆ ನಡೆಯುತ್ತಿದೆ; ಹೀಗಿರಲು ಆದಾಮನಿಗೆ ತನ್ನಲ್ಲಿನ ಸ್ವಂತ ಜೀವದ ಹಕ್ಕನ್ನು ಕಳೆದುಕೊಂಡನಂತರ ತನ್ನ ಮುಂದಿನ ಪೀಳಿಗೆಗೆ ಕೇವಲ ಮರಣದ ಸ್ಥಿತಿಯನ್ನು ಹಂಚಿಕೊಳ್ಳಲು ಸಾಧ್ಯವಾಯಿತು. ಯೇಸುವಿನಲ್ಲಿದ್ದ ಈ ಜೀವವು ಪಾಪಿಗಳಿಂದ ಪ್ರತ್ಯೇಕವಾಗಿ ಪವಿತ್ರವಾದುದಾಗಿ ನಿರ್ದೋಷವೂ ನಿಷ್ಕಳಂಕವೂ ಆಗಿರುವ ಕಾರಣ ದೇವರು ಕಳುಹಿಸಿದ ಈ ರಕ್ಷಕನು ನಮ್ಮ ಸಂತತಿಯ ನಿರೀಕ್ಷೆಯೆಂಬ ಜ್ಯೋತಿಯ ಆಕರವಾದನು. ಇವನು ಮನುಷ್ಯನಾಗಿ ಬರುವ ಮೊದಲಿನ ಸ್ಥಿತಿಯಲ್ಲಾಗಲೀ ಅಥವಾ ಆತನು ಮನುಷ್ಯನಾದ ಕ್ರಿಸ್ತ ಯೇಸುವಾಗಿದ್ದಾಗ ಆಗಲಿ ಯಾವ ವಿಧದಲ್ಲಿಯಾದರೂ ತನ್ನ ಜೀವದ ಹಕ್ಕನ್ನು ಕಳೆದುಕೊಂಡಿದ್ದೇಯಾದರೆ ನಮ್ಮ ನಿರೀಕ್ಷೆಯ ಜ್ಯೋತಿ ಆರಿಹೋಗುತ್ತಿತ್ತು. ಆದರೆ ತನ್ನ ಸ್ವಾಧೀನದಲ್ಲಿನ ಜೀವದ ಹಕ್ಕನ್ನು ತಂದೆಯ ಯೋಜನಾನುಸಾರ ನಮ್ಮ ಪರವಾಗಿ ಅರ್ಪಿಸಿರುವನು. ಅದು ಆದಾಮನು ತನ್ನ ಪಾಪದ ದೆಸೆಯಿಂದ ಕಳೆದುಕೊಂಡ ಜೀವಕ್ಕೆ ಈಡು; ಆದುದರಿಂದ ಅದು ಆದಾಮನಿಗುಂಟಾದ ಮರಣ ದಂಡನೆಯಲ್ಲಿ ಪಾಲುಗಾರರಿಗೆಲ್ಲಾ ಕೊಟ್ಟಿರುವ ಈಡು.

ತನ್ನ ಅಮೂಲ್ಯ ರಕ್ತದಿಂದ ನಮ್ಮನ್ನು ಕೊಂಡು ಕೊಂಡವನಾಗಿ ಅವನು ಮಾನವರ ಲೋಕಕ್ಕೆ ಬೆಳಕನ್ನು ಕೊಡುವವನೂ ನಿರೀಕ್ಷೆಯನ್ನು ನೀಡುವವನೂ ಮಾತ್ರವಲ್ಲದೆ ಜೀವವನ್ನೂ ಸಹ ಕೊಡುವವನಾದನು. ನಾಶವಾಗುತ್ತಿರುವ ಈ ಲೋಕಕ್ಕೆ ಈ ದಿವ್ಯವಾದ ಬೆಳಕನ್ನೂ, ಜೀವವನ್ನೂ ದಯಪಾಲಿಸಿದ್ದುದ್ದಕ್ಕಾಗಿ ದೇವರಿಗೆ ಸ್ತೋತ್ರವು. ಮತ್ತು ಕೆಟ್ಟುಹೋದ ಮಾನವರ ದುರವಸ್ಥೆಯ ನಡುವೆಯಲ್ಲಿ ಅವರು

ಸಾಮಾನ್ಯವಾಗಿ ಗ್ರಹಿಸಲಾರದ ಮತ್ತು ಅರಿಯಲಾರದ ಸ್ಥಿತಿಯಲ್ಲಿ ಈ ಬೆಳಕು ಹೊಳೆಯುತ್ತಿರುವುದೆಂಬುದು ನಿಜ. ಆದಾಗ್ಯೂ ಅದು ಮನುಷ್ಯರೆಲ್ಲರಿಗೆ ಬೆಳಕು ಕೊಡುವ ನಿಜವಾದ ಬೆಳಕು (ನಿಜರೂಪದ, ವಾಸ್ತವವಾದ, ಪ್ರಾಮಾಣಿಕವಾದ, ನಕಲಿ ಅಥವಾ ಛಾಯಾ ರೂಪವಲ್ಲದ ಬೆಳಕು). ಆದುದರಿಂದ ತಾನು ಮನುಷ್ಯನಾಗಿದ್ದ ದಿನಗಳಲ್ಲಿ ಈ ನಿಜವಾದ ಬೆಳಕನ್ನು ಯೆಹೂದ್ಯರು ಗ್ರಹಿಸಿದ್ದರೆಂಬುದಾಗಲೀ ಇಲ್ಲವೇ ಅರಿತಿದ್ದರೆಂಬುದಾಗಲಿ ಪ್ರಾಮುಖ್ಯವಲ್ಲ; ಈ ದಿನಗಳಲ್ಲಿಯೂ ಸಹ ಮನುಕುಲವು ಈತನನ್ನು ಅರಿತುಕೊಂಡಿರುವುದಿಲ್ಲ. ಆದಾಗ್ಯೂ ಈತನೇ ನಿಜವಾದ ಬೆಳಕಾಗಿದ್ದು ಹಾಗೂ ತಂದೆಯು ನೇಮಿಸಿದ್ದ ಕ್ಲುಪ್ತ ಕಾಲದಲ್ಲಿ ದೇವರ ದಿವ್ಯವಾದ ಯೋಜನೆಯಲ್ಲಿ ಅದರ ಕೇಂದ್ರವ್ಯಾಪ್ತಿಯಾಗಿ, ದೇವಸ್ವರೂಪ ಅಭಿವ್ಯಕ್ತಿಯೂ ಲೋಗಾಸನೂ ಆಗಿ ಅದನ್ನು ನೆರವೇರಿಸುವವನಾಗಿ ಮನುಷ್ಯರೆಲ್ಲರಿಗೆ ಬೆಳಕು ಕೊಡುವನು. ಇಲ್ಲವೇ ಕತ್ತಲೆಯಲ್ಲಿ ಯಾರೂ ತಡಕಾಡುವುದಕ್ಕಾಗಲೀ, ಜ್ಞಾನದ ಕೊರತೆಯಿಂದ ನಿತ್ಯಜೀವವನ್ನು ಪಡೆಯುವಲ್ಲಿ ವಿಫಲರಾಗುವದಕ್ಕಾಗಲೀ ಯಾರನ್ನೂ ಬಿಡುವುದಿಲ್ಲ; ಕ್ಲುಪ್ತ ಕಾಲದಲ್ಲಿ ಕುರುಡರೆಲ್ಲರ ಕಣ್ಣುಗಳು ಕಾಣುವವು ಕಿವುಡರೆಲ್ಲರ ಕಿವಿಗಳು ತೆರೆಯಲ್ಪಡುವವು ಆಗ ಕರುಡರು ಸ್ಪಷ್ಟವಾಗಿ ದೇವರು ಎಬ್ಬಿಸಿರುವ ದಿವ್ಯ ಬೆಳಕನ್ನು ಕಾಣುವರು. ಯಾರಾರು ತನ್ನ ಮೂಲಕ ತಂದೆಯ ಬಳಿಗೆ ಬರುವರೋ ಅವರಿಗೆ ಈತನು ಪ್ರಭುವೂ ರಕ್ಷಕನೂ ಆಗಿರುವನು. – ಯೆಶಾಯ 35:5, ಯೋಹಾನ 8:12, 14:6

ನಿಜ, ಈವರೆಗೆ ಕೇವಲ ಅಲ್ಪಸಂಖ್ಯೆಯ ಜನರು ಈ ಬೆಳಕನ್ನು ನೋಡಿರುವರು, ಯಾಕೆಂದರೆ "ಕತ್ತಲು ಭೂಮಿಯನ್ನು ಆವರಿಸಿದೆ, ಕಾರ್ಗತ್ತಲು ಜನಾಂಗಗಳನ್ನು ಮುಚ್ಚಿದೆ" –ಯೆಶಾಯ 60:2. ಹೀಗಿರುವಲ್ಲಿ ನಾವು ಮಹಿಮೆಯುಳ್ಳ ಸಾವಿರ ವರುಷದ ಆಳ್ವಿಕೆಯ ದಿನಕ್ಕಾಗಿ ಕಾಯುತ್ತಿದ್ದೇವೆ. ಅಲ್ಲಿ ತಂದೆಯ ರಾಜ್ಯದಲ್ಲಿ ಈ ದೊಡ್ಡ ಬೆಳಕು, ಈ ನಿಜವಾದ ಬೆಳಕು ಸೂರ್ಯನಂತೆ ಪ್ರಕಾಶಿಸುವುದು. ಆಗ ಈ ಕತ್ತಲಿನ ಕಾಲದಲ್ಲಿ ಆಯಲ್ಪಟ್ಟು ನಯಗೊಳಿಸಲ್ಪಟ್ಟ ಆತನ ನಂಬಿಗಸ್ತರು ಆತನ ರತ್ನಗಳಾಗಿ ಆತನೊಡನೆ ಮಹಿಮೆ ಹೊಂದುವರು. ಮತ್ತು ಅಬ್ರಹಾಮನ ಸಂತತಿಯಾಗಿ ಅವರು ಮಾನವರಿಗೆ ರಕ್ಷಣೆಯ ಜ್ಞಾನವನ್ನು ಕೊಡುವುದರ ಮೂಲಕ ಆಶೀರ್ವಾದ ನೀಡಿ ಇದರೊಂದಿಗೆ ದೇವರೊಡನೆ ಸಂಧಾನವಾಗಿ ನಿತ್ಯಜೀವ ಪಡೆಯುವ ಅವಕಾಶ ನೀಡುವ ದೊಡ್ಡ ಕಾರ್ಯದಲ್ಲಿ ಆತನಿಗೆ (ಬೆಳಕಾಗಿರುವ ಕ್ರಿಸ್ತನಿಗೆ) ಸಹಕಾರಿಗಳಾಗುವರು – ಮತ್ತಾಯ 13:43; ರೋಮಾ. 8:17. ಗಲಾತ್ಯ. 3:16, 29; ಆದಿಕಾಂಡ 22:17, 18.

ಈಗಿನ ಕಾಲದಲ್ಲಿ ಈ ಬೆಳಕು ಸ್ವಲ್ಪವಾಗಿ ಪಡೆದವರಿಗೂ ಯಾವ ರಿಯಾಯಿತಿಗಳು ಇರುವುದಿಲ್ಲ. ಇದನ್ನು ನೋಡಿದ ಕಣ್ಣುಗಳೂ, ಇದರ ವಿಷಯವಾಗಿ ಕೇಳಿದ ಕಿವಿಗಳೂ ಧನ್ಯವಾದವುಗಳು; ಮತ್ತು ಅವರು ಮಹತ್ತರವಾದ ಜವಾಬ್ದಾರಿಗಳನ್ನು ಹೊಂದುವರು, ತಾವು ಪಡೆದ ಬೆಳಕಿಗೆ ಅನುಗುಣವಾಗಿ ನಡೆಯದಿದ್ದರೆ "ಪೆಟ್ಟನ್ನು" ತಿನ್ನುವರು – ಲೂಕ 12:47, 48.

ಬೆಳಕಿನ ವಿಷಯವಾಗಿ ಸಾಕ್ಷಿ ಕೊಟ್ಟ ದೂತನಿಗೂ ಮತ್ತು ಸ್ವತಃ ಬೆಳಕಿಗೂ ನಡುವೆ ಇರುವ ವ್ಯತ್ಯಾಸವನ್ನು ಅಪೋಸ್ತಲನು ಜಾಗ್ರತೆಯಿಂದ ತೋರಿಸಿಕೊಟ್ಟಿರುವನು, ಆ ನಂತರದಲ್ಲಿ (ಯೋಹಾನ 5:35) ನಮ್ಮ ಕರ್ತನು ಸ್ನಾನಿಕನಾದ ಯೋಹಾನ ನನ್ನು ಕುರಿತು ಅವನು ದೀಪದೋಪಾದಿಯಲ್ಲಿ ಪ್ರಕಾಶಿಸುವನೆಂದು ಹೇಳಿರುವನು. (ಇದನ್ನು ಬೆಳಕೆಂದು ತಪ್ಪಾಗಿ ಅನುವಾದಿಸ ಲಾಗಿದೆ) ನಮ್ಮ ಕರ್ತನನ್ನು ಬೆಳಕೆಂದು ಹೇಳುವಾಗ ಬಹು ಭಿನ್ನವಾಗಿರುವ ಒಂದು ಗ್ರೀಕ್ ಭಾಷೆಯ ಪದವನ್ನು ಉಪಯೋಗಿಸಲಾಗಿದೆ. ಆದರೆ ಕ್ರಿಸ್ತನೊಡನೆ ಆತ್ಮದಲ್ಲಿ ಪಾಲನ್ನು ಹೊಂದಿರುವ ಆತನ ದೇಹವಾದ ಸಭೆಗೂ ಗ್ರೀಕ್ ಭಾಷೆಯ "ಫೋಸ್" (phos) ಎಂಬ ಇದೇ ಶಬ್ಧವನ್ನು ಉಪಯೋಗಿಸ ಲಾಗಿದೆ. ಆಯಲ್ಪಟ್ಟಿರುವ ತನ್ನ ದೇಹದ ಅಂಗಗಳಾದ ಸಭೆಯ ಸದಸ್ಯರನ್ನು ಕುರಿತು ಹೇಳುವಾಗ ನಮ್ಮ ಕರ್ತನು – ತನ್ನ ವಿಷಯವಾಗಿ ಉಪಯೋಗಿಸಿರುವ ಈ ಶಬ್ಧವನ್ನೇ ಸಭೆಯ ವಿಷಯವಾಗಿಯೂ ಉಪಯೋಗಿಸಿ–"ನೀವು ಲೋಕಕ್ಕೆ ಬೆಳಕಾ ಗಿರುವಿರಿ" ಎಂದು ಇದನ್ನು ಸ್ಪಷ್ಟವಾಗಿ ಹೇಳಿದ್ದಾನೆ. ಈ ಮುಂದೆ ಹೇಳಿರುವ ವಾಕ್ಯಗಳಲ್ಲಿ "ಫೋಸ್" ಎಂಬ ಇದೇ ಶಬ್ಧವನ್ನು ಉಪಯೋಗಿಸಲಾಗಿದೆ. "ನಿಮ್ಮಲ್ಲಿರುವ ಬೆಳಕೇ ಕತ್ತಲಾದರೆ" "ಬೆಳಕಿನ ಮಕ್ಕಳು, ಕತ್ತಲೆಗೂ ಬೆಳಕಿಗೂ ಒಡನಾಟವೇನು?' "ಬೆಳಕಿಗೆ ಅನುಗುಣವಾದ ಆಯುಧಗಳನ್ನು ಧರಿಸಿಕೊಳ್ಳಿ" "ಈಗ ನೀವು ಕರ್ತನಲ್ಲಿದ್ದು ಬೆಳಕಾಗಿದ್ದೀರಿ", "ಬೆಳಕಿನ ಮಕ್ಕಳಂತೆ ನಡೆಯಿರಿ", "ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ" "ಆತನು ಬೆಳಕಿನಲ್ಲಿ ನಡೆದಂತೆ ನೀವು ಬೆಳಕಿನಲ್ಲಿ ನಡೆಯಿರಿ" ನಮ್ಮ ಕರ್ತನು ವಾಕ್ಯವೆಂಬ ಲೋಗಾಸನಾಗಿಯೂ, ಸ್ನಾನಿಕನಾದ ಯೋಹಾನನು ಆ ವಾಕ್ಯವಾಗಿರದೆ ಕೇವಲ "ಅಡವಿಯಲ್ಲಿ ಕೂಗುವವನ ಶಬ್ಧವಾಗಿಯೂ" ಹೇಳಲ್ಪಟ್ಟಿರುವಲ್ಲಿ, ಯೋಹಾನನಿಗೂ ಕ್ರಿಸ್ತನಿಗೂ ಇದೇ ರೀತಿಯ ವ್ಯತ್ಯಾಸವು ಇರುವುದನ್ನು ಗಮನಿಸಿ.

ಲೋಗಾಸನು ಶರೀರಧಾರಿಯಾಗಿ ಮನುಷ್ಯನಾದ ಕ್ರಿಸ್ತ ಯೇಸುವಾಗಿ ಬಂದಾಗ ತಂದೆಯಿಂದ ದೊರೆತ ತನ್ನಲ್ಲಿದ್ದ ಶಕ್ತಿಯಿಂದ ತಾನು ಉಂಟುಮಾಡಿದ ಲೋಕದಲ್ಲಿ ಇದ್ದರೂ ಆ ಲೋಕವು ಈತನನ್ನು ಅರಿಯಲಿಲ್ಲ. ತಮ್ಮ ಬಳಿಗೆ ವಿಶೇಷವಾಗಿ ಕಳುಹಿಸಲ್ಪಟ್ಟ ಆತನನ್ನು ತನ್ನ ಸ್ವಂತ ಜನರೂ ಅಂಗೀಕರಿಸಲಿಲ್ಲ. ಹೀಗಿದ್ದರೂ ಕೆಲವರು ಆತನನ್ನು ಅಂಗೀಕರಿಸಿದರು; ಹಾಗೆ ಅಂಗೀಕರಿಸಿದವರು ದೇವರ ಮಕ್ಕಳಾಗುವ ಅಧಿಕಾರವನ್ನು ಸೌಭಾಗ್ಯಗಳನ್ನು ಪಡೆದರು. ಹಿಂದೆ ಅವರಿಗೆ ಇದ್ದ ಅತಿ ಹೆಚ್ಚಿನ ಸಾಧ್ಯತೆಗಳೆಂದರೆ ಅವರು ದೇವರಿಗೆ ಸೇವಕರೂ ಸ್ನೇಹಿತರೂ ಆಗಿದ್ದುದು. ಇಲ್ಲಿ ಯೆಹೂದ್ಯರ ಸಂಬಂಧದಿಂದ ಕ್ರೈಸ್ತರ ಸಂಬಂಧದ ವಿಷಯಗಳಲ್ಲಿ ದೇವರ ಕಾರ್ಯವಿಧಾನದಲ್ಲಿ ಆಗಿರುವ ಬದಲಾವಣೆಗಳನ್ನು ನಾವು ಗಮನಿಸುತ್ತೇವೆ. ಇದು ನಮ್ಮ ಕರ್ತನು ಮಾಡಿದ ಯಾವುದೋ ಒಂದು ವಿಷಯದಿಂದ ಅಥವಾ ಅರ್ಪಣೆಯಿಂದ ಸಾಧ್ಯವಾಯಿತು. ಆತನು ಮಾಡಿದ್ದೇ– ನೆಂದರೆ, ತಾವು ಆಶ್ರಯಿಸಿದ್ದ ಧರ್ಮಶಾಸ್ತ್ರ ಸಂಬಂಧದ ಒಡಂಬಡಿಕೆಯ ಮೂಲಕವಾಗಿ ಬಂದ ದಂಡನೆಯಿಂದ ಯೆಹೂದ್ಯರನ್ನು ವಿಮೋಚಿಸಿದುದು ಮತ್ತು ಆದಾಮನ ಅವಿಧೇಯತೆಯ ಮೂಲಕವಾಗಿ ಬಂದ ಮರಣದಂಡನೆಯಿಂದ ಮಾನವರೆಲ್ಲರನ್ನು ವಿಮೋಚಿಸಿದ್ದುದು.

ದೇವರ ನ್ಯಾಯಾಸನದ ಮುಂದೆ ಈ ಈಡನ್ನು (ಕ್ರಿಸ್ತನು) ಅರ್ಪಿಸುವವರೆಗೂ ದಂಡನೆಗೆ ಗುರಿಯಾದವರನ್ನು, ಆದಾಮನು ಪ್ರಥಮವಾಗಿ ಅನುಭೋಗಿಸಿ ತಾನು ಪಾಪಿಯಾದಾಗ ತನಗೂ ತನ್ನ ಸಂತತಿಯವರಿಗೆ ಮುಟ್ಟುಗೋಲಾದ ಪುತ್ರಪದವಿಗೆ ಮರಳಿ ತರಲು ಸಾಧ್ಯವಾಗಲಾರದು. ಲೋಕದ ಪರವಾದ ದಿವ್ಯ ಬೆಳಕಿನ ಕಾರ್ಯಭಾರವು ಕೇವಲ ಮನುಷ್ಯನ ಜೀವವನ್ನು ವಿಮೋಚಿಸುವುದಲ್ಲದೆ ಆ ಪುತ್ರಪದವಿಯನ್ನು ಪಡೆಯ ಬಯಸುವವರೆಲ್ಲರಿಗೆ ಮರಳಿ ಜೀವ ಹೊಂದುವ ಪರಿಜ್ಞಾನವನ್ನು ಕೊಡುವುದಾಗಿದೆ. ಈ ಕಾರ್ಯವು ಇನ್ನೂ ನೆರವೇರಲಿಲ್ಲ. ಇಲ್ಲ, ಇದರ ಪ್ರಾರಂಭ ಇನ್ನೂ ವಿರಳವಾಗಿ ಮಂದಗತಿಯಿಂದ ಇರುವುದೆಂದು ಹೇಳಬಹುದು. ಯಾಕೆಂದರೆ ತನ್ನ ಸ್ವಜನರಲ್ಲಿ ಕೇವಲ ಅಲ್ಪಸ್ವಲ್ಪ ಉಳಿದವರು ಆ ನಿಜವಾದ ಬೆಳಕನ್ನು ಪಡೆದಿರುವರು; ಹಾಗೂ ಸಕಲ ಕುಲ ಭಾಷೆ ಜನಾಂಗದವರಲ್ಲಿ ಕೇವಲ ಒಂದು ಚಿಕ್ಕ ಹಿಂಡು ಆತನನ್ನು ಮತ್ತು ಆತನ ಮೂಲಕವಾಗಿ ಈಗ ಮನುಷ್ಯರೆಲ್ಲರಿಗೆ ನೀಡಲಾಗಿರುವ ಆಶೀರ್ವಾದವನ್ನು ಅಂಗೀಕರಿಸಿರುವರು. ಮಾನವರಲ್ಲಿ ಬಹುಮಂದಿ ಸೈತಾನನಿಂದ ಮಂಕುಮಾಡಲ್ಪಟ್ಟು ಅಪೋಸ್ತಲನು ಹೇಳಿರುವಂತೆ, ನಿಜವಾದ ಬೆಳಕನ್ನು ಪಡೆಯಲು ತಡೆಯಲ್ಪಟ್ಟಿದ್ದಾರೆ. (2 ಕೊರಿಂಥ 4:4)

ಜನಾಂಗವನ್ನು ಮುಸುಕಿರುವ ಈಗಿನ ಗಾಡಾಂಧಕಾರದ ಕತ್ತಲಿನ ಕಾಲದಲ್ಲಿ (ದೇವರಿಂದ) ಕರೆಯಲ್ಪಟ್ಟವರನ್ನು ಅಂದರೆ ಪರಲೋಕದ (ಬಾಧ್ಯತೆಗೆ) ಕರೆ ಎನಿಸಿಕೊಳ್ಳುವ "ಉನ್ನತ (ಪದವಿಯ) ಕರೆ" ಎಂದು ಸತ್ಯವೇದದಲ್ಲಿ ಹೆಸರಿಸಲಾದ ಸ್ಥಾನಕ್ಕೆ ಕರೆಯಲ್ಪಟ್ಟವರನ್ನು ಕೇವಲ ಮನುಷ್ಯನ ಸುಸ್ಥಿತಿಯ ಸ್ವಭಾವಕ್ಕೆ ಮರಳಿ ತಂದು ಅವರು ಪಾಪದ ದೆಸೆಯಿಂದ ಕಳೆದುಕೊಂಡ ಆಶೀರ್ವಾದ ಸೌಭಾಗ್ಯಗಳನ್ನು ಹಿಂದಿರುಗಿಸಿಕೊಡುವುದು ಮಾತ್ರವಲ್ಲದೆ ಅವರನ್ನು ಲೋಗಾಸನೊಂದಿಗೆ ವಿಶೇಷವಾದ ಅನ್ಯೋನ್ಯತೆಗೆ, ಅಂದರೆ ಆತನಲ್ಲಿರುವ ಬೆಳಕಿನಲ್ಲಿ ಪಾಲನ್ನು ಪಡೆದು ಆತನು ಮುಂದೆ (ಸತ್ಯದ) ಪರಿಜ್ಞಾನವನ್ನು ಕೊಟ್ಟು ಲೋಕಕ್ಕೆ ಆಶೀರ್ವಾದ ನೀಡುವ ಕಾರ್ಯದಲ್ಲಿ ಪಾಲುಗಾರರಾಗುವುದಕ್ಕೆ ಅವರು ಕರೆಯಲ್ಪಟ್ಟಿರುವರು. ಇವರು ಒಂದು ವಿಶೇಷ ಅರ್ಥದಲ್ಲಿ ದೇವರ ಮಕ್ಕಳು ಅಂದರೆ ಆದಾಮನು ತನ್ನ ಮುಗ್ಧತೆಯ ಸ್ಥಿತಿಯಲ್ಲಿದ್ದುದ್ದಕ್ಕಿಂತಲೂ ಭಿನ್ನವಾದ ಸ್ಥಿತಿಯಲ್ಲಿರುವವರು. (ಲೂಕ 3:38) ಇವರ ಸ್ಥಿತಿ ದೇವದೂತರಿಗಿಂತಲೂ ಹೆಚ್ಚಿನದಾಗಿದ್ದು, ದೇವರಿಗೆ ಭಾಧ್ಯರಾಗಿ ಲೋಗಾಸನೊಂದಿಗೆ ಸಹ ಬಾಧ್ಯರಾಗಿ ದೈವ ಸ್ವಭಾವದಲ್ಲಿ ಪಾಲುಗಾರರಾಗಿರುವ ದೇವರ ಮಕ್ಕಳೆಂಬ ಸ್ವಾಸ್ಥ್ಯವನ್ನು ಪಡೆಯುವುದಕ್ಕೆ ಆಮಂತ್ರಿತರಾಗಿರುವರು. ಇದು ದೇವದೂತರ ಮತ್ತು ಇತರ ಎಲ್ಲಾ ಸ್ವಭಾವಗಳಿಗಿಂತಲೂ ಅತ್ಯುನ್ನತ ವಾಗಿರುವುದು. –2ಪೇತ್ರ 1:4, ರೋಮಾ. 8:17.

ದೇವರ ಮಕ್ಕಳಾಗುವ ಅಧಿಕಾರವು ಅನುಗ್ರಹಿಸಲ್ಪಡು ವುದು ಪಾಪಿಗಳಿಗಲ್ಲ, ಆದರೆ ನೀತಿವಂತರೆಂಬ ನಿರ್ಣಯ ಹೊಂದಿದವರಿಗೆ. ಅವರು ಆತನ ನಾಮದ ಮೇಲೆ ನಂಬಿಕೆಯಿಟ್ಟು, ಆ ನಂಬಿಕೆಯ ಮೂಲಕ ನೀತಿ ನಿರ್ಣಯ ಹೊಂದಿರುವರು. ಇವರು ಎಂದಿನಂತೆ ಶರೀರ ಸಂಬಂಧವಾಗಿ ಹುಟ್ಟುವುದರಲ್ಲಿರುವ ಶಾರೀರ ಭಾವದವರಂತೆ ಇಲ್ಲವೇ ಶಾರೀರಿಕ ಸಂಬಂಧದ ಮಕ್ಕಳಂತೆ, ಸಾಮಾನ್ಯವಾದ ರೀತಿಯಲ್ಲಿ ಗರ್ಭ ಪಡೆಯುವುದಾಗಲೀ, ರಕ್ತ ಸಂಬಂಧದಿಂದಾಗಲೀ, ಇಲ್ಲವೇ ಮನುಷ್ಯರ ಚಿತ್ತದಿಂದಾಗಲೀ ಹುಟ್ಟಿದವರಲ್ಲ. ತಾವು ಸತ್ಯಾತ್ಮನಿಂದ ಹುಟ್ಟಿದವರಾದರೂ ಆ ಹುಟ್ಟುವಿಕೆಯು ಮಾನವರೆಂಬ ಸಾಧನಗಳಿಂದ ಸತ್ಯಬೋಧನೆ ಹೊಂದುವುದರ ಮೂಲಕ ವಾಗಿರುವುದು. ಇದು ಮಾನವರ ಚಿತ್ತದಿಂದಾಗಿರದೆ ಕೇವಲ ಅವರು ಸಹಜವಾಗಿರುವ ತಮ್ಮ ಸ್ವಂತ ಚಿತ್ತವನ್ನು ತಿರಸ್ಕರಿಸಿ, ಅಲಕ್ಷ್ಯಮಾಡಿ ಅದಕ್ಕೆ ಬದಲಾಗಿ ದೇವರ ಚಿತ್ತವನ್ನು ಅಂಗೀಕರಿಸಿದುದರ ಪ್ರಮಾಣದಲ್ಲಿರುತ್ತದೆ. ಅಪೋಸ್ತಲನಾದ ಯಾಕೋಬನು ಈ ಹುಟ್ಟುವಿಕೆಯನ್ನು (ಯಾಕೋಬ 1:18) ಹೀಗೆ ವಿವರಿಸಿ ಹೇಳಿದ್ದಾನೆ. "ಆತನು ತನ್ನ ಸುಚಿತ್ತದ ಪ್ರಕಾರ ಸತ್ಯಬೋಧನೆಯ ವಾಕ್ಯದಿಂದ ನಮ್ಮನ್ನು ಹುಟ್ಟಿಸಲಾಗಿ ನಾವು ಆತನ ಸೃಷ್ಟಿಗಳಲ್ಲಿ ಪ್ರಥಮ ಫಲದಂತಾದೆವು" ಈ "ಕ್ರಿಸ್ತ ಯೇಸುವಿನಲ್ಲಿರುವ ನೂತನ ಸೃಷ್ಟಿಗಳು" ದೇವರ ಮಕ್ಕಳೂ ಭವಿಷ್ಯದಲ್ಲಿ ಕ್ರಿಸ್ತನೊಂದಿಗೆ ಸಹಬಾಧ್ಯರೂ ಆಗಿದ್ದು (ಆತನ ಕೃಪಾವಾಕ್ಯದ ಮೂಲಕವಾಗಿ) ತಂದೆಯ ಆತ್ಮವನ್ನು ಪೂರ್ಣವಾಗಿ ಹೊಂದುವ ನಿರೀಕ್ಷೆಯಲ್ಲಿರುವವರು. ಹೀಗಾಗಿ ಅವರು ಆತನ ನಿಮಿತ್ತ ಮತ್ತು ಆತನ ಸತ್ಯವಾಕ್ಯದ ನಿಮಿತ್ತ ನಿಂದೆಯನ್ನು ಸಹಿಸಲು ಸಿದ್ಧರಿದ್ದು, ಈ ಕಾಲದ ದೇವರ ಏರ್ಪಾಡಿನಂತೆ, ಲೋಗಾಸನ ರೀತಿಯಲ್ಲಿ ತನ್ನ ಸಹೋದರರಿಗಾಗಿ ಪ್ರಾಣವನ್ನು ಕೊಡುವುದರ ಮೂಲಕ ಕ್ರಿಸ್ತನಲ್ಲಿ ತಮ್ಮನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿಕೊಳ್ಳಲು ಇಚ್ಚೆಯುಳ್ಳವರಾಗಿರುವರು. ಈ ಷರತ್ತಿನ ಮೇಲೆಯೇ ಅವರು ಕ್ರಿಸ್ತನೊಂದಿಗೆ ಬಾಧೆಯನ್ನು ತಾಳುವವರಾಗಿ ಕಡೆಯಲ್ಲಿ ತಂದೆಯು ವಾಗ್ದಾನ ಮಾಡಿರುವಂತೆ ಆ ರಾಜ್ಯದಲ್ಲಿ ಆತನೊಡನೆ ಪ್ರಭಾವ ಅಧಿಕಾರಗಳಲ್ಲಿ ಸಹ–ಬಾಧ್ಯತೆ ಹೊಂದುವ ನಿರೀಕ್ಷೆಯಲ್ಲಿರುವರು. – ರೋಮಾ. 8:17, ಯೋಹಾನ 1:11, 12.

ಹದಿನಾಲ್ಕನೇ ವಚನವು ಹಿಂದೆ ಸರಿದು ಐದನೇ ವಚನದ ದೃಷ್ಟಿಯಲ್ಲೇ ವಿಷಯವನ್ನು ತೆಗೆದುಕೊಂಡು ಅದರ ವಿವರಣೆ ಯನ್ನು ಇನ್ನೊಂದು ದೃಷ್ಟಿಯಲ್ಲಿ ಪುನರಾವರ್ತನೆ ಮಾಡಿದೆ. ಇದು ಲೋಗಾಸನು ದೇವರ ಒಬ್ಬನೇ ಕುಮಾರನಾಗಿ ಅತ್ಮರೂಪ ದಲ್ಲಿ ಬಂದು ಶಾರೀರಿಕವಾಗಿ ಮನುಷ್ಯ ದೇಹದಲ್ಲಿ ವಾಸಮಾಡಿ ಶಿಲುಬೆಗೆ ಹಾಕಲ್ಪಟ್ಟಾಗ ಆ ದೇಹದಿಂದ ಮತ್ತೆ ಬಿಡುಗಡೆ ಹೊಂದಿರುವುದನ್ನು ಸೂಚಿಸುವುದಾಗಿ ಅರ್ಥೈಸಲ್ಪಡುವ ಪುನರ್ಜನ್ಮವೆಂಬ ತತ್ವವನ್ನು ಬೋಧಿಸುವುದಿಲ್ಲ. ಲೋಗಾಸನ ಪುನರ್ಜನ್ಮದ ವಿಷಯವಾದ ಈ ಅಭಿಪ್ರಾಯವು ಬಹುತೇಕ ಸತ್ಯವೇದ ವಚನಗಳನ್ನು ಅಸಂಬದ್ಧವಾಗಿ ಮಾಡಿ ಹಲವು ಸತ್ಯವೇದ ವಿದ್ಯಾರ್ಥಿಗಳ ಮನಸ್ಸುಗಳನ್ನು ಮಸುಕುಮಾಡಿ ನಿಗೂಢಗೊಳಿಸುತ್ತದೆ. ಈ ದೃಷ್ಟಿಯಿಂದ ಅವರು ಯೋಚಿಸು ವುದೆಂದರೆ, ನಮ್ಮ ಕರ್ತನು ಒಬ್ಬ ಆತ್ಮೀಕ ಜೀವಿಯಾಗಿದ್ದು ಈ ಆತ್ಮೀಕ ಜೀವವು ಎಂದೂ ರದ್ದಾಗಿರಲಿಲ್ಲ. ಹಾಗೂ ಆತನು ಮನುಷ್ಯ ಎಂಬ ಶಬ್ದದ ಯಾವುದೇ ಅರ್ಥದಲ್ಲಿ ಮನುಷ್ಯ ಜೀವಿಯಾಗಿರಲಿಲ್ಲ. ಆದರೆ ಕೇವಲ ಮನುಷ್ಯ ರೂಪದಲ್ಲಿ ಕಾಣಿಸಿ ಕೊಂಡನಾದರೂ ನಿಜವಾಗಿ ಹಾಗೆ ಇರಲಿಲ್ಲ. ಈ ದೃಷ್ಟಿಯಿಂದ

ಹೇಳುವುದಾದರೆ ನಮ್ಮ ಕರ್ತನು ತಂದೆಗೆ ಮಾಡಿದ ಪ್ರಾರ್ಥನೆ ಅರಣ್ಯದಲ್ಲಿ ಆತನಿಗಾದ ಪರಿಶೋಧನೆ, ಆತನ ಕಣ್ಣೀರು ಸಾಯುವ ಸಮಯದಲ್ಲಿ ಮಾಡಿದ ಕೂಗು ಇವೆಲ್ಲವೂ ಬುದ್ಧಿವಂತಿಕೆಯಿಂದ ಮಾಡಿದ ನಟನೆಯಾಗಿ ಮಾಡಿದಂತಾಗಿರುತ್ತಿತ್ತು. ಯಾಕೆಂದರೆ ಈ ಸುಳ್ಳಾದ ಹೇಳಿಕಯು ಆತನನ್ನು ಮನುಷ್ಯರಿಗಿಂತಲೂ ಬಹು ಉನ್ನತ ಸ್ಥಿತಿಯಲ್ಲಿರುವಂತೆ ತೋರಿಸಿ, ಆತನನ್ನು ವಿಚಾರಣೆ ಮಾಡುವುದು ಶೋಧನೆಗೆ ಒಳಪಡಿಸುವುದು ಬಾಧೆಯನ್ನು ಅನುಭವಿಸುವಂತೆ ಮಾಡುವುದು ಸಾಧ್ಯವಾಗದೆಂಬಂತೆ ತೋರುವ ಹಾಗೆ ಮಾಡುತ್ತದೆ. ಅಷ್ಟೇ ಅಲ್ಲದೆ ಆತನು ನಿಜವಾಗಿ ಸಾಯಲಿಲ್ಲವೆಂದೂ ಆದರೆ ಸಾಯುವ ಹಾಗೆ ಕಾಣಬಂದನೆಂದೂ ಮತ್ತು ಆ ದೇಹವನ್ನು ಶಿಲುಬೆಗೆ ಹಾಕಿದ ಕ್ಷಣವೇ ಲೋಗಾಸನು ಅದರಿಂದ ಹೊರಬಂದು ಕಲ್ವಾರಿಯ ದುರಂತಕ್ಕೆ ಅದೃಶ್ಯನಾದ ಮೂಕ ವೀಕ್ಷಕನಾಗಿದ್ದ ನೆಂಬುದು ಇಲ್ಲಿ ಅಡಕವಾಗುತ್ತದೆ.

ಆದರೆ ಸಾವಿರದ ಆರುನೂರ ವರುಷಗಳ ಹಿಂದೆ ದೇವರಿಂದ ನೇಮಿಸಲ್ಪಟ್ಟು ವರುಷ ವರುಷವೂ ಅರ್ಪಣೆಯಾಗು ತ್ತಿದ್ದ ಹೋರಿಗಳ ಹೋತಗಳ ಯಜ್ಞದಲ್ಲಿ ಛಾಯೆ ಯಾಗಿದ್ದ ಆತನ (ಕ್ರಿಸ್ತನ) ಮರಣವು ಸಾಯದಿದ್ದರೂ ಸತ್ತಂತೆ ತೋರುವ ನೆಪಮಾತ್ರದ ಯಜ್ಞವಾಗಿರಲಿಲ್ಲ. ಆದಾಮನಿಗಾದ ಮರಣ ದಂಡ ನೆಯ ನ್ಯಾಯತೀರ್ಪು ನಿಜವಾದ ದಂಡನೆಯಾಗಿತ್ತು ಮತ್ತು ನಾವು ಪಾಪದಿಂದ ಬಿಡುಗಡೆ ಹೊಂದಲು ನಮ್ಮ ಕರ್ತನು ಮನುಷ್ಯನಾದ ಕ್ರಿಸ್ತ ಯೇಸುವಾಗಿ ನಮಗೋಸ್ಕರ ಕೊಟ್ಟ ಈಡುಬಲಿ ನಿಜವಾದ ಯಜ್ಞಕ್ಕಿಂತ ಏನೂ ಕಡಿಮೆಯಾಗಿರಲಿಲ್ಲ. – 1 ತಿಮೋಥೆ 2:5,6.

ಅಪೋಸ್ತಲನು ನಮಗೆ ಬರವಸೆ ನೀಡಿ ಹೇಳಿದ್ದೇನೆಂದರೆ, ಆತನು ಐಶ್ವರ್ಯವಂತನಾಗಿದ್ದು ನಮಗೋಸ್ಕರ ಬಡವನಾದನು ಆತನು ಕೆಳ ಅಂತಸ್ತಿನವನಂತೆ ಕಾಣುವ ತೋರಿಕೆಯ ಉಡುಪುಗಳನ್ನು ತೊಟ್ಟು ಕೇವಲ ಬಡವನಂತೆ ನಟಿಸಲಿಲ್ಲ. ಆದರೆ ನಿಜವಾಗಿ ಬಡವನಾಗಿ ಉನ್ನತ ಸ್ವಭಾವದ ಪ್ರಭಾವ ಮಾನಗಳನ್ನು ತೊರೆದು ದೀನನಾಗಿ ನರಭಾವವನ್ನು ತೆಗೆದುಕೊಂಡನು. ಇದು (ಪರಿಪೂರ್ಣತೆಯಿಂದ) ಬಿದ್ದುಹೋದ ಪಾಪಾಧೀನ ಸ್ವಭಾವದ ನರಭಾವವಲ್ಲ. ಆದರೆ ಪಾಪ ಮರಣಗಳ ದೆಸೆಯಿಂದ ಉಂಟಾದ ದೋಷದಿಂದ ಮುಕ್ತವಾದ ಪರಿಪೂರ್ಣತೆಯುಳ್ಳ ನರಭಾವ.

ಇದು ಸತ್ಯವೇದ ವಚನಗಳ ಪರಿಗಣನೆ ಮಾಡುತ್ತಿರುವ "ಆತನು ಶರೀರಧಾರಿಯಾಗಿ ಮಾಡಲ್ಪಟ್ಟನು". ಅಕ್ಷರಶಃ "ಆತನು ಶರೀರಧಾರಿಯಾದನು" ಎಂಬುದಕ್ಕೆ ಪೂರ್ಣವಾಗಿ ಸರಿಬೀಳು ವಂತದ್ದು. ಈ ರೀತಿಯಲ್ಲಿ ಅತಿ ದೀನಸ್ವಭಾವಕ್ಕೆ ತಗ್ಗಿಸಿಕೊಳ್ಳುವು ದನ್ನು ಬಿಟ್ಟರೆ ಆತನಿಗೆ ಮಾನವರ ಪಾಪ ಅಪರಾಧಗಳಿಗೆ ಈಡು ಬೆಲೆಯಾಗಿ ತನ್ನನ್ನು ದೇವರಿಗೆ ಅರ್ಪಿಸಿಕೊಂಡು ನಮ್ಮ ವಿಮೋಚಕನಾಗಲು ಅರ್ಹತೆ ಇರುತ್ತಿರಲಿಲ್ಲ. ಇದು ಶಾಸ್ತ್ರದಲ್ಲಿ ಬರೆದಿರುವಂತೆ, "ಮನುಷ್ಯನ ಮೂಲಕ ಮರಣವು ಉಂಟಾದ ಕಾರಣ ಮನುಷ್ಯನ ಮೂಲಕವೇ ಪುನರುತ್ಥಾನವುಂಟಾಗುವುದು" ಎಂಬಂತೆ ಆಗುವುದು. ಮರಣದಂಡನೆಯಾದುದು ಮನುಷ್ಯನಿಗೆ, ಹೀಗಾಗಿ ದೇವದೂತನ ಜೀವವಾಗಲೀ ಪ್ರಧಾನ ದೂತನ ಜೀವವಾಗಲಿ ಇಲ್ಲವೇ ಮನುಷ್ಯನ ಜೀವವಲ್ಲದೆ ಬೇರೆಯಾವ ಜೀವವೇ ಆಗಲಿ ಆದಾಮ ಮತ್ತು ಆತನ ಸಂತತಿಯನ್ನು ಮರಣ ದಂಡನೆಯಿಂದ ಬಿಡುಗಡೆ ಮಾಡುವುದಕ್ಕೆ "ಸಮವಾದ ಬೆಲೆ" ಆಗುವುದಿಲ್ಲ. ಹಾಗೆಯೇ (ಮನುಷ್ಯನಿಗಿಂತ) ಕೆಳಸ್ತರದಲ್ಲಿರುವ ಪ್ರಾಣಿಯ ಯಜ್ಞವು ಪಾಪ ನಿವಾರಣೆ ಮಾಡುವುದಿಲ್ಲ. ಯಾಕೆಂದರೆ, ಅವು ಪಾಪ ರಹಿತವಾದವುಗಳಾದರೂ ಪಾಪಿ ಯಾದ ಮನುಷ್ಯ ಸ್ವಭಾವಕ್ಕೆ ಅನುರೂಪವಾದವುಗಳಲ್ಲ. ಹೀಗಾಗಿ ಅವು ದೇವರ ನ್ಯಾಯಾಸನದ ಮುಂದೆ ಮನುಷ್ಯನಿಗೆ ಈಡು ಬೆಲೆಯಾಗಿ ಅಂಗೀಕಾರವಾಗಲು ಸಾಧ್ಯವಾಗದು. ತನ್ನ ಆತ್ಮೀಕ ಸ್ವಭಾವದಿಂದ ಮನುಷ್ಯನ ಸ್ವಭಾವಕ್ಕೆ ಮಾರ್ಪಡುವಾಗ ಲೋಗಾಸನು ಮರಣ ಹೊಂದಲಿಲ್ಲ. ಅದು ಆ ಶಬ್ದದ ಪೂರ್ಣಾರ್ಥದಲ್ಲಿ ಏನನ್ನೂ ಉಳಿಸಿಕೊಳ್ಳದೆ ಜೀವವೆಲ್ಲವನ್ನೂ ಕೊಡುವುದು ಎಂದಾಗುತ್ತದೆ. "ಆತನು ತನ್ನ ಬದುಕೆಲ್ಲವನ್ನು ಮಾರಿ" (ಮತ್ತಾಯ 13:44, 46) – ಆತನು ತನ್ನ ಜೀವವನ್ನು ಕೊಟ್ಟನು. ಅದು ಮನುಷ್ಯನಾದ ಕ್ರಿಸ್ತ ಯೇಸುವಿನ ಜೀವ. ಹಿಂದೆ ಲೋಗಾಸನಿಗಿದ್ದ ಜೀವ. "ತನ್ನ ಜೀವವನ್ನು ಧಾರೆಯೆರೆದು ಮರಣಹೊಂದಿ... ತನ್ನ ಆತ್ಮವನ್ನು ಪ್ರಾಯಶ್ಚಿತ್ತ ಯಜ್ಞವಾಗಿ ಒಪ್ಪಿಸಿ..." ಎಂಬುದರಲ್ಲಿ ಅತನ ಜೀವವು ಕೊನೆಗೊಂಡಿತು. ಪುನರುತ್ಥಾನ ಹೊಂದಿದ ಬಳಿಕ ನಮ್ಮ ಕರ್ತನು ತಾನೇ ಇದನ್ನು ಪ್ರಕಟಮಾಡಿದ್ದಾನೆ, "ನಾನು... ಸದಾ ಜೀವಿಸುವವನು ಆಗಿದ್ದೇನೆ... ಸತ್ತವನಾಗಿದ್ದೆನು, ಮತ್ತು ಇಗೋ ಯುಗಯುಗಾಂತರಗಳ ಲ್ಲಿಯೂ ಬದುಕುವವನಾಗಿದ್ದೇನೆ" "ಆತನು ಇನ್ನು ಮುಂದೆ ಸಾಯತಕ್ಕವನಲ್ಲ, ಮರಣವು ಇನ್ನು ಆತನನ್ನು ಆಳುವುದಿಲ್ಲ..." – ಯೆಶಾಯ 53:10, 12. ಪ್ರಕಟಣೆ 1:18, ರೋಮಾ. 6:9.

"ನಾವು ಆತನ ಮಹಿಮೆಯನ್ನು ನೋಡಿದೆವು", ಆತನ ವೈಭವ, ಆತನ ಪರಿಪೂರ್ಣತೆ, ಆತನ ಘನತೆ, ಇವುಗಳು ಈ ಪ್ರಪಂಚದ ದೇವರಿಂದ ಮಂಕುಮಾಡಲ್ಪಟ್ಟವರಾಗಿ ಕಾಣುವ ಕಣ್ಣುಳ್ಳವರಿಗೆ ಸ್ಪಷ್ಟವಾಗಿ ಶೋಭಿಸಿದವು. ಮನುಷ್ಯನಾದ ಕ್ರಿಸ್ತ ಯೇಸುವಿನ ಈ ನಿಜವಾದ ಮಹಿಮೆಗಳು – ಈತನು ಪಾಪಸ್ವಭಾವದವನಾದ ಆದಾಮನ ಸಂತತಿಯಲ್ಲ ಎಂಬುದಕ್ಕೆ ಪೂರ್ಣವಾಗಿ ಸಾಕ್ಷಿ ಕೊಡುತ್ತವೆ. ಹಾಗೆ ಈತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾದ ಪರಲೋಕದ ತಂದೆಯ ಏಕ ಕುಮಾರನಾಗಿದ್ದು ನಿಜವಾಗಿಯೂ ಮನುಷ್ಯರೆಲ್ಲರಿಂದಲೂ ಹೊರತಾದವನೆಂಬುದನ್ನು ರುಜುವಾತುಪಡಿಸುತ್ತದೆ. "...ಕ್ರಿಸ್ತನು ಎಂಥವನಾಗಿದ್ದಾನೋ ನಾವು ಅಂಥವರಾಗಿಯೇ ಈ ಲೋಕದಲ್ಲಿದ್ದೇವೆ." ಎಂದು ಅಪೋಸ್ತಲನು ಹೇಳುತ್ತಾನೆ. ಅದರೆ ನಾವು ಸ್ವಭಾವತಃ ಪಾಪಿಗಳಾಗಿ ಇತರರಂತೆ ದೇವರ ಕೋಪಕ್ಕೆ ಗುರಿಯಾದವರಾದರೂ ನಾವು ಕೃಪೆಯಿಂದ ನೂತನ ಸ್ವಭಾವದಲ್ಲಿ ಮತ್ತೆ ಜನಿಸಿದವರಾಗಿದ್ದೇವೆ. ನಮ್ಮ ಹೃದಯಗಳಲ್ಲಿ ಕೆಲಸ ಮಾಡುತ್ತಿರುವ ದೇವರ ಈ ಕೃಪೆಯು ನಮಗೆ ಜ್ಞಾನ ಪ್ರಕಾಶ ನೀಡಿ ಶುದ್ಧೀಕರಿಸಿ ಪವಿತ್ರರನ್ನಾಗಿ ಮಾಡಿ, ಏನಿಲ್ಲವೆಂದರೂ ಕ್ರಮೇಣ ನಮ್ಮನ್ನು ಮಾರ್ಪಡಿಸಿ ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಸಾಗಿಸುತ್ತಾ ನಮ್ಮ ವಿಮೋಚಕನೂ ಕರ್ತನೂ ಆದ ದೇವರ ಪ್ರಿಯ ಕುಮಾರನ ಸಾರೂಪ್ಯಕ್ಕೆ ಹೆಚ್ಚೆಚ್ಚಾಗಿ ನಡೆಸಬೇಕು. ತಂದೆ ದೇವರೊಂದಿಗೆ ಆತನಿಗೆ ಕೃತಜ್ಞತಾ ಸ್ತುತಿಗಳು ಈಗಲೂ ಮತ್ತು ಯಾವಾಗಲೂ ಇರಲಿ. ಯಾಕೆಂದರೆ "ಅತ್ಯಂತ ವಿಶೇಷವಾದ ರಕ್ಷಣೆ... ಮೊದಲು ನಮ್ಮ ಕರ್ತನಿಂದ ಹೇಳಲ್ಪಟ್ಟಿತು. ಆತನಿಂದ ಕೇಳಿದವರು ಇದನ್ನು ನಮಗೆ ಸ್ಥಿರಪಡಿಸಿದರು". – ಇಬ್ರಿಯ 2:3.

# "ಆ ವಾಕ್ಯವೆಂಬುವನು ಶರೀರಧಾರಿಯಾದುದು"

**ರೀಪ್ರಿಂಟ್ ಪುಟ 2555**

## ಲೂಕ 2:1–6

**"... ನೀನು ಆತನಿಗೆ ಯೇಸು ಎಂದು ಹೆಸರಿಡಬೇಕು; ಯಾಕೆಂದರೆ ಅತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವನು...." – ಮತ್ತಾಯ 1:21**

ಯೇಸು ಎನ್ನುವುದು 1900ನೇ ವರುಷದ ಅಂತರರಾಷ್ಟ್ರೀಯ ಭಾನುವಾರ ಶಾಲೆಯ ಪಾಠದ ವಿಷಯ. ಇದು ಬಹು ಪ್ರಯೋಜನಕಾರಿಯಾದ ಅಧ್ಯಯನವಾಗಬೇಕು. ಯಾಕೆಂದರೆ ದೇವರ ವಾಕ್ಯದ ಬೆಳಕಿನಲ್ಲಿ ಹೆಚ್ಚು ನಿಕಟವಾಗಿ ನಮ್ಮ ವಿಮೋಚಕನನ್ನು ತಿಳಿದುಕೊಂಡಷ್ಟೂ ಅಷ್ಟು ಹೆಚ್ಚಾಗಿ ಆತನನ್ನು ಮೆಚ್ಚುವವರಾಗಿ ಪ್ರೀತಿಸಿ ಆತನ ಪ್ರತಿರೂಪಿಗಳಾಗ ಬಯಸುತ್ತೇವೆ. ಆತನ ಜೀವಿತದ ವಿಷಯವನ್ನು ಉಳಿದು ಬೇರೆ ಯಾರ ಜೀವಿತದ ವಿಷಯವೂ ಇಷ್ಟು ಸತತವಾದ ಸೂಕ್ಷ್ಮ ವಿಮರ್ಶೆಗೆ ಒಳಗಾಗಿರುವುದಿಲ್ಲ. ಇನ್ನೂ ಇವುಗಳಲ್ಲಿ ಆತನ ನೈತಿಕ ಘನತೆ ಮತ್ತು ಗುಣವಿಶೇಷತೆಯ ವಿಷಯವಾದ ಹೊಸ ಹೊಸ ಅಂಶಗಳು ನಿರಂತರವಾಗಿ ಬಹಿರಂಗವಾಗುತ್ತಲಿವೆ. ಇತರ ಯಾರ ಜೀವಿತದ ಈ ರೀತಿಯ ಅಧ್ಯಯಗಳು ಮತ್ತು ವಿಮರ್ಶೆಗಳು ಅವರ ಬಲಹೀನತೆ, ಪಾಪದ ಸ್ವಭಾವಗಳು ಮತ್ತು ಅಪಕೀರ್ತಿ ತರುವ ಅವರ ಕಲೆಗಳ ಭಾಗವನ್ನು ಹೊರಗೆಡಹುತ್ತವೆ.

ನಾಲ್ಕು (ಸುವಾರ್ತೆಯ) ದಾಖಲೆಗಳಲ್ಲಿ ಕೇವಲ ಯೋಹಾನನು ನಮ್ಮ ಕರ್ತನ ಹುಟ್ಟುವಳಿಯು ಪರಲೋಕದ ಮೂಲವೆಂಬ ಸುಳಿವನ್ನು ನೀಡಲು ಯತ್ನಿಸುವವನಾಗಿ ಆತನು ಶರೀರಧಾರಿಯಾಗುವುದಕ್ಕೆ ಮೊದಲು (ಪರಲೋಕದ) ತಂದೆಯೊಂದಿಗೆ ಆತನ ಮಹಿಮೆಯಲ್ಲಿ ಪಾಲುಗಾರನಾಗಿದ್ದ ಒಬ್ಬ ಆತ್ಮೀಕ ಜೀವಿಯಾಗಿ (ತಂದೆ) ದೇವರೊಂದಿಗೆ ತಾನೂ ಒಬ್ಬ ದೇವರಾಗಿದ್ದನೆಂದು ತೋರಿಸಿಕೊಟ್ಟಿದ್ದಾನೆ. ಆದರೆ ಎಲ್ಲಾ ಸೌವಾರ್ತಿಕರು ಆತನು "ಶರೀರಧಾರಿಯಾದನೆಂದು" ಸ್ಪಷ್ಟವಾಗಿ ತಮ್ಮ ವಿವರಣೆಗಳಲ್ಲಿ ತಿಳಿಸಿದ್ದಾರೆ. ಆತನು ಆತ್ಮೀಕ ಜೀವದಲ್ಲಿದ್ದು ಮನುಷ್ಯರಿಗೆ ಕಾಣಿಸಿಕೊಳ್ಳುವಾಗ ಶರೀರವನ್ನು ಧರಿಸುತ್ತಿದ್ದ ನೆಂದಲ್ಲ. ಆದರೆ ಹೇಗೆ ವಿವರಿಸಿದ್ದಾಗ್ಯೂ ಆ ಆತ್ಮೀಕ ಜೀವಿಯಾದ ಲೋಗಾಸನ ಜೀವಸತ್ವವು ಮನುಷ್ಯ ಜೀವಿಯ ಜೀವಸತ್ವವಾಗಿ ಸ್ತ್ರೀಯಲ್ಲಿ ಹುಟ್ಟಿಬಂದು ಧರ್ಮಶಾಸ್ತ್ರದ ಅಧೀನದಲ್ಲಿದ್ದು ಯೆಹೂದ್ಯರ ಜೀವಿತದ ಎಲ್ಲಾ ಸನ್ನಿವೇಶಗಳು ಹಾಗೂ ಸ್ಥಿತಿಗತಿಗಳಿಗೆ ಒಳಗಾದದ್ದಾಗಿತ್ತು. ಮತ್ತಾಯನು ಯೋಸೇಫನ ವಂಶಾವಳಿಯ ಸುಳಿವು ನೀಡಿದ್ದಾನೆ. ಆದಾಗ್ಯೂ ಯೇಸುವು ಯೋಸೇಫನ (ಶಾರೀರಿಕವಾದ) ಮಗನಲ್ಲವೆಂಬುದನ್ನೂ ಅತನು ತನ್ನ ಮಗನಾಗಿ ಅಂಗೀಕರಿಸಲ್ಪಟ್ಟು ಯುಕ್ತವಾದ ರೀತಿಯಲ್ಲಿ ಆತನಿಗೆ ಬಾಧ್ಯನಾದನೆಂಬುದನ್ನೂ ಸ್ಪಷ್ಟವಾಗಿ ವಿವರಿಸಿ ಹೇಳಿದ್ದಾನೆ. ಲೂಕನು ಮರಿಯಳ ವಂಶಾವಳಿಯನ್ನು ತೋರಿಸಿ ಕೊಟ್ಟು; ಆ ಮೂಲಕ ನಮ್ಮ ಕರ್ತನು ಶಾರೀರಿಕ ರೀತಿಯಲ್ಲಿ ನಮ್ಮ ಮಾನವ ಕುಲಕ್ಕೆ ನಿಜವಾಗಿಯೂ ಸಂಬಂಧಿಸಿದ ವನೆಂದೂ ಮತ್ತು ನಾತಾನನ ಗೋತ್ರದ ಮೂಲಕ ರಾಜಮನೆತನವಾದ ದಾವೀದನ ಸಂತಾನದವನೆಂದೂ ತೋರಿಸಿಕೊಟ್ಟಿದ್ದಾನೆ.

ನಮ್ಮ ಕರ್ತನು ಹುಟ್ಟಿದ ಕಾಲವು ಹಲವು ವಿಧದಲ್ಲಿ ಶುಭಸೂಚಕ. ಮತ್ತು ಪ್ರಪಂಚದ ಆಗಿನ ವಿದ್ಯಮಾನಗಳನ್ನು ಸ್ವತಃ ದೈವಜ್ಞಾನದ ಮೂಲಕವಾಗಿ ಈ ಒಂದು ಮುಖ್ಯವಾದ ಘಟನೆಗೆ ಸಿದ್ಧಪಡಿಸಲಾಗಿತ್ತೆಂಬುದು ಬಹು ಸ್ಪಷ್ಟ. ಅವು ಯಾವುವೆಂದರೆ:

(1) ನೆಬೂಕದ್ನೆಚ್ಚರನಿಂದ ಪ್ರಾರಂಭವಾದ ಲೋಕವನ್ನೆಲ್ಲಾ ಜಯಿಸುವ ಮನೋಭಾವವು ಒಂದು ಅರ್ಥದಲ್ಲಿ ಮಾನವ ಜನಾಂಗದವರನ್ನೆಲ್ಲಾ ಸಂಪರ್ಕಕ್ಕೆ ಬಂದು ಒಬ್ಬರಿಗೊಬ್ಬರು ಹತ್ತಿರವಾಗಿ ತಮ್ಮ ಆಲೋಚನೆಗಳಲ್ಲಿ ವಿಶಾಲ ಭಾವದವರಾಗಲು ಅನುಕೂಲಕರವಾಯಿತು.

(2) ಈ ಕಾರ್ಯನೀತಿಯು ಜನರನ್ನು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಸ್ಥಳಾಂತರ ಮಾಡಿ ಅವರನ್ನು ಹೀಗೆ ತಮ್ಮ ರಾಷ್ಟ್ರೀಯತೆಗಳನ್ನು ತೊರೆದು ಹೆಚ್ಚು ವಿಶ್ವವ್ಯಾಪಿಯಾದ ಉಧಾರ ಭಾವವುಳ್ಳವರಾಗುವಂತೆ ಪರಿಣಮಿಸಿತು.

(3) ಇಸ್ರಾಯೇಲ್ ಮತ್ತು ಯೆಹೂದ ದೇಶದವರು ಬಾಬೇಲ್ ದೇಶಕ್ಕೆ ಸೆರೆಯಾಗಿ ಸ್ಥಳಾಂತರಿಸಲ್ಪಟ್ಟಾಗ ಹೊಸ ಸನ್ನಿವೇಶಗಳಿಗೆ ಎಷ್ಟು ಹೊಂದಿಕೊಂಡರೆಂದರೆ ತಮ್ಮ ದೇಶಕ್ಕೆ ಹಿಂದಿರುಗಬಹುದೆಂಬ ಆಮಂತ್ರಣ ಕೋರೇಷನಿಂದ ಬಂದಾಗ ಲಕ್ಷಾಂತರ ಜನರಲ್ಲಿ ಎಲ್ಲಾ ಕುಲಗಳ ಕೇವಲ ಐವತ್ತು ಸಾವಿರ ಮಂದಿ ಮಾತ್ರ ಅವಕಾಶವನ್ನು ಉಪಯೋಗಿಸಿಕೊಂಡರು. ಅನ್ಯಜನರಲ್ಲಿ ಚದುರಿಹೋಗಿದ್ದ ಯೆಹೂದ್ಯರು ಯಾವ ಕಾರಣಗಳಿಗೂ ತಮ್ಮ ರಾಷ್ಟ್ರೀಯತೆಯನ್ನು ಬಿಟ್ಟುಕೊಡದೆ ಅಬ್ರಹಾಮನ ಒಡಂಬಡಿಕೆಯ ಮೇಲಿನ ತಮ್ಮ ನಿರೀಕ್ಷೆಯನ್ನು ತೊರೆಯದೆ ಮೋಶೆಯ ಧರ್ಮಶಾಸ್ತ್ರಕ್ಕೆ ತಾವು ನಂಬಿಗಸ್ತರಾಗಿರುವುದನ್ನು ಬಿಡದೇ ಇದ್ದರು. ಆದರೂ ಅವರು ನಿಜವಾದ ಇಸ್ರಾಯೇಲ್ಯರಾಗಿರುವುದರಲ್ಲಿ ಅಜಾಗರೂಕರಾಗಿ ತಮಗೆ ಸುಲಭವಾಗಿಯೂ ಲಾಭವಾಗಿಯೂ ಇರುವ ವಿಷಯಗಳನ್ನು ಅತಿಯಾಗಿ ಆಶಿಸತೊಡಗಿದರು. ಹೀಗಿದ್ದರೂ ಒಬ್ಬನೇ ದೇವರಲ್ಲಿ ಹಾಗೂ ದೇವಕುಮಾರನಾಗಿ ಲೋಕವನ್ನು ರಕ್ಷಿಸಲು ಬರಲಿರುವ ಮೆಸ್ಸೀಯನ ಮೇಲಿನ ತಮ್ಮ ನಿರೀಕ್ಷೆಗೆ ಸಾಕ್ಷಿಗಳಾಗಿರುವುದರ ಮೂಲಕ ತಾವು ನೆಲೆಸಿದ್ದ ದೇಶದ ನಿವಾಸಿಗಳಲ್ಲಿ ತಮ್ಮ ಪ್ರಭಾವವನ್ನು ಬೀರಿದ್ದರು.

(4) ಕೆಲವು ಸಮಯಗಳಿಗಾದ ಗ್ರೀಕ್ ಸಾಮ್ರಾಜ್ಯದ ಗೆಲುವು ನಾಗರೀಕ ಲೋಕಕ್ಕೆ ಉನ್ನತವಾಗಿ ಅಭಿವೃದ್ಧಿ ಹೊಂದಿದ ಗ್ರೀಕ್ ಸಾಹಿತ್ಯವನ್ನು ಒದಗಿಸಿಕೊಟ್ಟಿತು. ಆಗ ಗ್ರೀಕ್ ಭಾಷೆಯು ಅತ್ಯುನ್ನತವಾದ ತನ್ನ ಶಿಖರವನ್ನೇರಿ ನಾಗರೀಕ ಜಗತ್ತಿನ ಸಾಹಿತ್ಯ ಭಾಷೆಯಾಯಿತು.

(5) ರೋಮ್ ಸಾಮ್ರಾಜ್ಯವು ಪ್ರಪಂಚವನ್ನು ಜಯಿಸಿ ತನ್ನ ಉನ್ನತ ಅಧಿಕಾರ ಸ್ಥಾಪನೆ ಮಾಡಿತ್ತು. ಪರಿಣಾಮವಾಗಿ ಎಲ್ಲಾ ಕಡೆಗಳಲ್ಲಿಯೂ ಶಾಂತಿ ಸಮಾಧಾನ ನೆಲೆಸಿದ್ದವು. ಹೀಗಿರಲು

ಸುವಾರ್ತೆಯನ್ನು ಸಾರಲು ಮತ್ತು ದೇಶದಿಂದ ದೇಶಕ್ಕೆ ಪ್ರಯಾಣ ಮಾಡುವ ಸುವಾರ್ತಾ ಪ್ರತಿನಿಧಿಗಳ ಸುರಕ್ಷತೆಗೆ ಹಿಂದೆಂದೂ ಇಲ್ಲದ ಅನುಕೂಲಕರ ಕಾಲಗಳು ಲಭಿಸಿದವು.

(6) ಬಹುಶಃ ಇಸ್ರಾಯೇಲ್ಯರು ಸ್ವತಃ ಬೌದ್ಧಿಕವಾಗಿ ನೈತಿಕವಾಗಿ ಧಾರ್ಮಿಕವಾಗಿ ಅತ್ಯುನ್ನತವಾಗಿ ಅಭಿವೃದ್ಧಿ ಹೊಂದಿದ್ದರು. ಜೊತೆಗೆ ಸತ್ಯವೇದ ವಚನದಲ್ಲಿ ನಾವು ಹೀಗೆ ತಿಳಿಸಲ್ಪಟ್ಟಿರುವೆವು. "...ಇಸ್ರಾಯೇಲ್ ಜನರು ಬರಬೇಕಾದ ಕ್ರಿಸ್ತನನ್ನು ಎದುರು ನೋಡುವವರಾಗಿದ್ದರಿಂದ..." – ಲೂಕ 3:15

ಬಹು ಸೂಕ್ತವಾದ ಈ ಸಮಯದಲ್ಲೇ ದೈವೀಕ ಏರ್ಪಾಡಿನ ಮೂಲಕ ರೋಮ್ ಚಕ್ರವರ್ತಿಯಾದ ಸೀಸರ ಔಗುಸ್ತನು ತನ್ನ ಸಾಮ್ರಾಜ್ಯದಲ್ಲೆಲ್ಲಾ ತೆರಿಗೆ ಎತ್ತಬೇಕೆಂಬ ತನ್ನ ಆಜ್ಞೆಯನ್ನು ಹೊರಡಿಸಿದನು. ಈ ಆಜ್ಞೆಯು ಕೇವಲ ಬರಲಿರುವ ತೆರಿಗೆಯ ಮೊತ್ತದ ಅಂದಾಜು ಮಾಡುವುದಕ್ಕಾಗಿರದೆ ನಿಜವಾಗಿಯೂ ತೆರಿಗೆದಾರರ ಪಟ್ಟಿ ಮಾಡುವುದಕ್ಕಾಗಿತ್ತು. ಆದರೆ ಪಟ್ಟಿ ಮಾಡುವವರನ್ನು ಜನರ ಬಳಿಗೆ ಕಳುಹಿಸುವ ಈಗಿನ ಪದ್ಧತಿಗೆ ಬದಲಾಗಿ ಆ ದೇಶದಲ್ಲಿನ ಗಂಡಸರೆಲ್ಲಾ ತಮ್ಮ ತಮ್ಮ ಊರುಗಳಿಗೆ ಹೋಗಿ ಹೆಸರುಗಳನ್ನು ಬರೆಸಿಕೊಳ್ಳುವ ಏರ್ಪಾಡಾಗಿತ್ತು. ಈ ಸಂದರ್ಭವೇ ಯೋಸೇಫನನ್ನು ತನಗೆ ನಿಶ್ಚಿತಳಾಗಿದ್ದ ಮರಿಯಳ ಜೊತೆ ತನ್ನ ಹುಟ್ಟೂರಾದ ಬೆತ್ಲೇಹೇಮಿಗೆ ಬರುವಂತೆ ಮಾಡಿತು. ಯಾಕೆಂದರೆ ಅವರಿಬ್ಬರೂ (ಬೇರೆ ಬೇರೆ ಗೋತ್ರಗಳ ಪ್ರಕಾರ) ದಾವೀದನ ಮನೆತನದವರಾಗಿದ್ದರು. ಅಲ್ಲದೆ ಬೆತ್ಲೇಹೇಮೆಂಬದು ದಾವೀದನ ಊರಾಗಿತ್ತು. ಹೀಗೆ ಪ್ರವಾದಿಯು ಮುಂತಿಳಿಸಿದ ಪ್ರಕಾರ, ದೈವಾನುಗ್ರಹವಾಗಿ ತಾವು ತಪ್ಪಲಾಗದ ಆಜ್ಞೆಯ ಮೂಲಕ ಯೋಸೇಫ ಮತ್ತು ಮರಿಯಳನ್ನು ದಾವೀದನಿಗೆ ಬಹು ಸೂಕ್ತವೂ ವಿಶೇಷವಾದ ರೀತಿಯಲ್ಲಿ ಬಾಧ್ಯಸ್ತನೂ ಆಗಿರುವವನು ಹುಟ್ಟಬೇಕಾಗಿರುವ ಊರಿಗೇ ಬರುವ ಹಾಗೆ ಮಾಡಿತು. – ಮೀಕ 5:2.

ನಮ್ಮ ರಕ್ಷಕನು ಹುಟ್ಟಲು ಮತ್ತು ಸುವಾರ್ತಾ ಸಂದೇಶವನ್ನು ಕಳುಹಿಸಲು ದೇವಾನುಗ್ರಹದ ಮೂಲಕ ಸಿದ್ಧಮಾಡಿದ ಸಣ್ಣ ಸಣ್ಣ ಘಟನೆಗಳ ಗಮನಿಸುವಿಕೆಯು ದೇವರ ಜನರ ನಂಬಿಕೆಯನ್ನು ಬಲಪಡಿಸುವುದು. ಹಿಂದಿನ ಈ ಸಣ್ಣ ಸಣ್ಣ ವಿಷಯಗಳಲ್ಲೂ ತೋರಿಬಂದ ದೇವರ ಪರಿಪಾಲನೆಯ ವಿಷಯವಾಗಿ ಅರಿತುಕೊಳ್ಳುವುದು ಮುಂದೆ ಆತನ ಯೋಜನೆಯ ಅಂಶಗಳನ್ನು ನೆರವೇರ ಮಾಡಲು ಆತನಿಗಿರುವ ಜ್ಞಾನ ಮತ್ತು ಮಾಡಿರುವ ಏರ್ಪಾಡುಗಳ ಮೇಲಿರುವ ಭರವಸಕ್ಕೆ ಅದು ತಳಹದಿಯಾಗುವುದು. ಉತ್ಕೃಷ್ಟವೂ ಅಮೂಲ್ಯವೂ ಆದ ವಾಗ್ದಾನಗಳ ಈಡೇರುವಿಕೆಯು ಬೆತ್ಲೇಹೇಮಿನಲ್ಲಿ ಹುಟ್ಟುವಾತನಲ್ಲಿ ಕೇಂದ್ರೀಕೃತವಾಗಿರುವುದು. ಮತ್ತು ಹಾಗೆಯೇ, ದೇವರ ಯೋಜನೆಯ ದೊಡ್ಡ ದೊಡ್ಡ ಅಂಶಗಳಲ್ಲಿ ಮಾಡಿರುವ ದೇವಾನುಗ್ರಹದ ವಿಷಯವಾಗಿ ಮನವರಿಕೆ ಮಾಡಿಕೊಳ್ಳುವುದು ಅತನ ಜನರ ಸ್ವಂತ ಹಾಗೂ ವೈಯಕ್ತಿಕ ವಿಷಯಗಳಲ್ಲಿ ಮಾಡಿರುವ ದೇವರ ಏರ್ಪಾಡಿನ ಮೇಲಿನ ನಂಬಿಕೆಯನ್ನು ಉತ್ತೇಜಿಸುವುದು ನಮ್ಮ ರಕ್ಷಕನ ಜನನಕ್ಕೆ ಸಂಬಂಧಿಸಿದ ಸಣ್ಣ ಸಣ್ಣ ವಿಷಯಗಳನ್ನು ಆಜ್ಞಾಪಿಸಿ ನೆರವೇರಿಸಿದ ಪ್ರಕಾರವೇ ದೇವರು ತನ್ನ ಆತ್ಮೀಕ ಮಕ್ಕಳ ಜೀವಿತದ ಆಗುಹೋಗುಗಳನ್ನು ಆಜ್ಞಾಪಿಸಿ ನೆರವೇರಿಸಲು ಮನಸ್ಸುಳ್ಳವನೂ ಮತ್ತೆ ಅದಕ್ಕೆ ಸಮರ್ಥನೂ ಆಗಿರುವನೆಂಬುದನ್ನು ಹೆಚ್ಚು ಹೆಚ್ಚಾಗಿ ಮನವರಿಕೆ ಮಾಡಿಕೊಳ್ಳೋಣ. ನಾವು ಪಾಪಿಗಳಾಗಿದ್ದಾಗಲೇ ದೇವರು ನಮ್ಮನ್ನು ಪ್ರೀತಿಸಿ ನಮ್ಮ ವಿಮೋಚನಾರ್ಥವಾಗಿ ಜಾಗರೂಕತೆಯಿಂದ ಏರ್ಪಾಡುಗಳನ್ನು ಮಾಡಿರುವುದಾದರೆ ನಾವು ಈಗ ಆತನಿಗೆ ತಿರುಗಿ ಬೀಳದವರೂ ಪರಕೀಯರೂ, ಅಪರಿಚಿತರೂ, ಪರದೇಶಿಗಳೂ ಆಗಿರದೆ ಆತನ ಮಕ್ಕಳಾಗಿ ಕ್ರಿಸ್ತನು ಮತ್ತು ಆತನ ಭಕ್ತರೊಂದಿಗೆ ಸಹ ಬಾಧ್ಯರು ಆಗಿರಲಾಗಿ ಆತನ ಪ್ರೀತಿ ಮತ್ತು ಪರಿಪಾಲನಾನುಗ್ರಹದಲ್ಲಿ ಭರಸವಸೆಯುಳ್ಳವ ರಾಗಬಹುದೆಂಬುದನ್ನು ಅಪೋಸ್ತಲರೊಡನೆ ವಿಚಾರ ಮಾಡಿ ನೋಡೋಣ. ಏಕೆಂದರೆ ತನ್ನ ಸುಚಿತ್ತದಂತೆ ಆತನು ವಾಗ್ದಾನ ಮಾಡಿರುವ ಪ್ರಕಾರ ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಸಂಗತಿಗಳು ಅವರಿಗೆ ಅನುಕೂಲಕರವಾಗಿ ಮಾರ್ಪಡುತ್ತವೆ. – ರೋಮಾ. 5:8–10, 8:28

ಯೋಸೇಫನು ಮತ್ತು ಮರಿಯಳನ್ನು ಬೆತ್ಲೇಹೇಮಿಗೆ ಕರತಂದ ಅದೇ ಆಜ್ಞೆಯು ದಾವೀದನ ಮನೆತನದ ಹಲವಾರು ಗೋತ್ರಗಳವರನ್ನೂ ಅಲ್ಲಿಗೆ ಕರತಂದಿತು. ಮತ್ತು ಆಗಿನ ಕಾಲದ ಛತ್ರ ಅಥವಾ ಹೋಟೇಲುಗಳು ಇತರ ಸ್ಥಳಗಳಿಗೆ ಹೋಲಿಸಿದಾಗ ಅಲ್ಪ ಸಂಖ್ಯೆಯಲ್ಲಿದ್ದು ಅಲ್ಲಿ ಕಡಿಮೆ ಸ್ಥಳಾವಕಾಶಗಳಿರಲಾಗಿ ಯೋಸೇಫನು ಮತ್ತು ಮರಿಯಳು ಬಂದಾಗ ಸೂಕ್ತವಾಗಿದ್ದ ಛತ್ರಗಳು ತುಂಬಿಹೋಗಿದ್ದುದೆಂಬುದರಲ್ಲಿ ಆಶ್ಚರ್ಯವಿಲ್ಲ. ವಾಸ್ತವದಲ್ಲಿ, ಪ್ರವಾಸಿಗಳು ಛತ್ರದ ಅಂಗಳದಲ್ಲಾದರೂ ತಂಗಲು ತಮ್ಮ ಸೌಕರ್ಯಕ್ಕಾಗಿ ಅವಶ್ಯವಾದವುಗಳನ್ನು ತಮ್ಮ ಜೊತೆಯಲ್ಲಿ ಕೊಂಡೊಯ್ಯುವ ಪದ್ಧತಿಯಿತ್ತು. ಹಾಗೆಯೇ ಯೋಸೇಫನು ಮತ್ತು ಮರಿಯಳು ಇದಕ್ಕೆ ಯಾವ ರೀತಿಯಿಂದಲೂ ಹೊರತಾಗಿರಲಿಲ್ಲ. ಆದುದರಿಂದ ಯೇಸು ಮಗುವಾಗಿ ಹುಟ್ಟಿದಾಗ ಗೋದಲಿಯೇ ಬಹು ಅನುಕೂಲವಾದ ತೊಟ್ಟಿಲಾಗಿತ್ತು.

ಬೆತ್ಲೇಹೇಮ್ ಪಟ್ಟಣವು ಈಗಲೂ ಇರುತ್ತದೆ. ಬಹುಶಃ ಆ ದಿನದಲ್ಲಿ ಇದ್ದುದ್ದಕ್ಕಿಂತಲೂ ಅಲ್ಲಿ ಏನೂ ಹೆಚ್ಚು ಬದಲಾವಣೆ ಇರುವುದಿಲ್ಲ. ಯಾಕೆಂದರೆ ಆ ದೇಶದ ಸಂಪ್ರದಾಯಗಳು ಶತಮಾನಗಳಿಂದಲೂ ಹೆಚ್ಚೇನೂ ಬದಲಾಗಿಲ್ಲ. ಒಂದು ಗವಿಯು ಹತ್ತೊಂಭತ್ತು ಶತಮಾನಗಳ ಹಿಂದೆ ಆ ಛತ್ರದ ಲಾಯವಾಗಿತ್ತೆಂದು ಹೇಳಲಾಗಿದ್ದು ಅಲ್ಲಿನ ಒಂದು ಕಲ್ಲಿನ ಗೋದಲಿಯು ಶಿಶುವಾಗಿದ್ದ ಯೇಸುವನ್ನು ಮಲಗಿಸಿದ್ದ ಸ್ಥಳವೆಂದು ಹೇಳಲ್ಪಟ್ಟಿದೆ. ಇದರ ಮೇಲೆ ಒಂದು ಕೆಥೋಲಿಕರ ದೇವಾಲಯವನ್ನು ಕಟ್ಟಲಾಗಿದ್ದು ಅಲ್ಲಿನ "ಆ ಪವಿತ್ರ ಗೋದಲಿಯ ಸಂಬಂಧದಲ್ಲಿ ಮತ್ತು ಅದರ ಸುತ್ತುಮುತ್ತಲೂ ಹಲವು ಆಚರಣೆಗಳನ್ನು ಸತತವಾಗಿ ನಡೆಸಲಾಗುತ್ತಿದೆ. ಆ ಆಚರಣೆಗಳು ವಿಗ್ರಹಾರಾಧನೆಗಳೆಂದು ನಂಬಿರಲಾಗಿ ಅವುಗಳ ವಿಷಯಗಳಲ್ಲಿ ನಮಗೆ ಯಾವ ಅನುಕಂಪವೂ ಇರಲಾರದೆಂದೆನಿಸುವುದು. ನಮ್ಮ ಆಸಕ್ತಿಯು ಕೇಂದ್ರೀಕೃತವಾಗಿರುವುದು ನಮ್ಮ ರಕ್ಷಕನು ನಡೆದಾಡಿದ ಆ ಪವಿತ್ರ ಭೂಮಿಯ ಮೇಲಾಗಲೀ, ಅತನು ಮಗುವಾಗಿದ್ದಾಗ ಮಲಗಿಸಿದ್ದ ಆ ಪವಿತ್ರ ಗೋದಲಿಯ ಮೇಲಾಗಲೀ ಇಲ್ಲವೇ

ಆತನ ಪವಿತ್ರ ತಾಯಿಯ ಮೇಲಾಗಲೀ ಆಗಿರುವುದಿಲ್ಲ. ಅಲ್ಲದೆ ನಾವು ಆತನ ಶರೀರ ಸಂಬಂಧವಾದವುಗಳನ್ನು ವಿಶೇಷವಾಗಿ ಮರಣವನ್ನು ಸೂಚಿಸುವ ಆತನ ಸ್ನಾನದೀಕ್ಷೆಯ ನಂತರದ ಆತನ ಅನುಭವಗಳನ್ನು ಭಕ್ತಿಪೂರ್ವಕವಾಗಿ ಗೌರವಿಸುವೆವಾದರೂ, ಇನ್ನೂ ಅಧಿಕವಾದ ನಮ್ಮ ಆಸಕ್ತಿಯು–ಮರಣದಿಂದ ಎಬ್ಬಿಸಲ್ಪಟ್ಟ ನಮ್ಮ ಕರ್ತನ ಮೇಲೆ, ನೂತನ ಸೃಷ್ಟಿಯಲ್ಲಿ ಪರಿಪೂರ್ಣ ಗೊಂಡವನಾಗಿ ಆತ್ಮಸ್ವರೂಪನಾಗಿರುವವನ ಮೇಲಿರುವುದು. ಆತನು ಮನುಷ್ಯರೆಲ್ಲರಿಗಿಂತಲೂ ದೇವದೂತರಿಗಿಂತಲೂ ಪ್ರಭುತ್ವಗಳಿಗಿಂತಲೂ ಅಧಿಕಾರಗಳಿಗಿಂತಲೂ ಬಹು ಉನ್ನತನಾಗಿದ್ದು. ಎಲ್ಲಾ ಹೆಸರುಗಳಿಗಿಂತಲೂ ಮೇಲಾದ ಹೆಸರನ್ನು ಪಡೆದು ತಂದೆಯ ಬಲಪಾರ್ಶ್ವಕ್ಕೆ ಏರಿಸಲ್ಪಟ್ಟವನಾಗಿ ಎರಡನೇ ಸ್ಥಾನದಲ್ಲಿರುವನು. ಅಪೋಸ್ತಲನು ಈ ಮನೋಭಾವಕ್ಕೆ ಚೆನ್ನಾಗಿ ಧ್ವನಿಗೂಡಿಸಿ ಹೇಳಿರುವನು– "ಕ್ರಿಸ್ತನನ್ನು ಕೂಡ ನಾವು ಶರೀರ ಸಂಬಂಧವಾಗಿ ತಿಳಿದಿದ್ದರೂ ಇನ್ನು ಮುಂದೆ ಆತನನ್ನು ಹಾಗೆ ತಿಳುಕೊಳ್ಳುವುದಿಲ್ಲ" ಮರಣದಿಂದ ಎಬ್ಬಿಸಲ್ಪಟ್ಟು ಪ್ರಭಾವ ಸ್ಥಾನಕ್ಕೆ ಏರಿಸಲ್ಪಟ್ಟ ನಮ್ಮ ಕರ್ತನೂ ರಕ್ಷಕನೂ ಆದವನ ವಿಷಯ ವಾದ ನಮ್ಮ ತಿಳುವಳಿಕೆಯು ಆತನ ಭೂಲೋಕದ ಜೀವಿತದ ವಿಷಯಗಳ ಮೇಲಿನ ನಮ್ಮ ಆಸಕ್ತಿಗಿಂತಲೂ ಮಿಗಿಲಾಗಿ ಶೋಭಿಸುತ್ತದೆ. ಹೀಗಿದ್ದರೂ ಅತನ ಭೂಲೋಕದ ಜೀವಿತದ ವಿಷಯಗಳು ನಾವು ಈಗ ನೋಡಿರುವ ಪ್ರಕಾರ ಹಾಗೂ ಇನ್ನು ಮುಂದೆ ನೋಡುವ ಪ್ರಕಾರ ನಮಗೆ ಆಸಕ್ತಿದಾಯಕವಾಗಿಯೂ ಪ್ರಯೋಜನಕಾರಿ ಯಾಗಿಯೂ ಇರುವುದು.

ಬೆತ್ಲೆಹೇಮಿನಲ್ಲಿ ಕೂಡಿಬಂದಿರುವ ಜನರಿಗೆ ತಮ್ಮ ಪಟ್ಟಣಕ್ಕೆ ಬಂದಿರುವವನು ಯಾರೆಂಬುದು ಅರ್ಥವಾಗಿದ್ದರೆ ಅಂದರೆ ಆತನು ಪರಲೋಕಸ್ಥಾನದಿಂದ ಇಳಿದು ಬಂದು ಶರೀರಧಾರಿ ಯಾಗಿರುವ ಲೋಗಾಸನೂ, "ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸುವುದಕ್ಕಾಗಿ" ಬಂದವನೆಂದು ಅವರಿಗೆ ತಿಳಿದದ್ದೇಯಾದರೆ ಎಷ್ಟೋ ಸಂತೋಷದಿಂದ ಅವರು ಆತನನ್ನು ಛತ್ರಕ್ಕೆ ಆಹ್ವಾನಿಸಿ ತಾನು ಬಯಸುವ ಉತ್ತಮ ಸೌಕರ್ಯವುಳ್ಳ ವಾಸಸ್ಥಳವನ್ನು ಆತನ ಉಪಯೋಗಕ್ಕೆ ಕೊಡುತ್ತಿದ್ದರು. ಆದರೆ ಅವರು ಆತನನ್ನು ತಿಳಿಯಲಿಲ್ಲ ಹಾಗಾಗಿ ಆತನಿಗೆ ಸೇವೆ ಮಾಡುವ ಶ್ರೇಷ್ಠ ಸೌಭಾಗ್ಯವನ್ನು ಕಳಕೊಂಡರು. ಹೀಗೆಯೇ ಕರ್ತನ ಜನರಿರುವ (ಆತನ ನಿಜವಾದ ಭಕ್ತರು) ಎಲ್ಲಾ ಊರು ಮತ್ತು ಪಟ್ಟಣಗಳಲ್ಲಿ ಇವರು ಯೇಸುವಿನ ಮತ್ತು ಪರಲೋಕದ ತಂದೆಯ ದೂತರೆಂದು ಅರಿತಿದ್ದೇಯಾದರೆ ಅಲ್ಲಿಯವರು ಅವರನ್ನು ಸ್ವಾಗತಿಸಿ ತಮ್ಮಲ್ಲಿರುವ ಉತ್ತಮವಾದವುಗಳನ್ನು ಅವರ ಉಪಯೋಗಕ್ಕೆ ಕೊಡುತ್ತಿದ್ದರು. ಆದರೆ ಅಪೋಸ್ತಲನು ಹೇಳಿರುವಂತೆ ಲೋಕವು ನಮ್ಮನ್ನು ತಿಳುಕೊಳ್ಳುವುದಿಲ್ಲ. ಅದು ಆತನನ್ನು ತಿಳುಕೊಳ್ಳಲಿಲ್ಲವಲ್ಲಾ" (1 ಯೋಹಾನ 3:1) ತಮ್ಮ ಗುರುವಿಗಿಂತ ಹೆಚ್ಚಿನವರಾಗುವುದನ್ನು ಶಿಷ್ಯರು ಆಶಿಸಬಾರದು. ಹೀಗಿರಲು ನಾವು ದೇವರಿಗೆ ರಾಯಭಾರಿಗಳಾಗಿ ಕರುಣೆಯನ್ನು ದೊರಕಿಸುವ ಮತ್ತು ಹಿತವನ್ನುಂಟುಮಾಡುವ ಸೇವಾ ಪ್ರಯಾಣಗಳನ್ನು ಮಾಡುವಾಗ ಕರ್ತನ ಏರ್ಪಾಟಿನಲ್ಲಿ ನಮಗೆ ಅರಮನೆಯಂತಹ ಸೌಲಭ್ಯಗಳು ಒದಗುವವೆಂದು ನಿರೀಕ್ಷಿಸಬಾರದು. ಆದರೆ ದೊರಕುವ ಸಾಧ್ಯತೆಗಳಿರುವುದು ಬಹು ದೀನ ಸ್ಥಿತಿಯ ಸೌಲಭ್ಯಗಳು ಮತ್ತು ನಮಗೆ ಹೀಗಾಗುವಾಗ ನಮ್ಮ ಅನುಭವಗಳು ಕೆಲವು ಮಟ್ಟಿಗಾದರೂ ಕರ್ತನ ಅನುಭವಗಳಿಗೆ ಹೋಲುವಂಥವುದೆಂದು ನಾವು ಸಂತೋಷಪಡಬೇಕು. ದೇವಾನುಗ್ರಹದಿಂದ ದೊರೆತವುಗಳನ್ನು ಅರ್ಥೈಸಿಕೊಂಡು ಸಿದ್ಧಮನಸ್ಸಿನಿಂದ ದೇವರ ಸೇವೆಗೆ ದೊರೆತ ಎಲ್ಲಾ ಅವಕಾಶಗಳನ್ನೂ ಅವು ಎಂತಹ ದೀನವಾದವುಗಳಾದರೂ, ಎಷ್ಟು ಉಪಯೋಗಿಸಿಕೊಳ್ಳುವೆವೋ ಅದೇ ಪ್ರಮಾಣದಲ್ಲಿ ಆಶೀರ್ವಾದಗಳನ್ನು ಹೊಂದುತ್ತೇವೆ. ಯೋಸೇಫನಾಗಲೀ, ಮರಿಯಳಾಗಲೀ ಅಥವಾ ಯೇಸುವೇ ಆಗಲೀ ಇಲ್ಲವೇ ಈ ಘಟನೆಗಳನ್ನು ಬರೆದಿರುವ ಅಪೋಸ್ತಲರು ಅಥವಾ ಸೌವಾರ್ತಿಕರೇ ಆಗಲೀ ಇವರುಗಳು ಯಾರೂ ದೈವಾನುಗ್ರಹದ ಮೂಲಕ ದೊರೆತ ಏರ್ಪಾಟುಗಳ ವಿಷಯದಲ್ಲಿ ಸ್ವಲ್ಪವೂ ದೂರಿರುವುದಾಗಲೀ ಅತೃಪ್ತಿಯು ಸೂಚನೆಯಾದರೂ ತೋರಿರುವುದೇ ಆಗಲೀ ಇಲ್ಲದಿರುವುದು ಇಲ್ಲಿ ಗಮನಾರ್ಹವಾದುದು. ಯಾವ ಪ್ರಮಾಣದಲ್ಲಿ ಅವರು ತಮ್ಮ ವಿಷಯವಾದ ಏರ್ಪಾಡುಗಳಲ್ಲಿ ಅತೃಪ್ತಿಯನ್ನು ತೋರಿರುವರೋ ಅದೇ ಪ್ರಮಾಣದಲ್ಲಿ ದೇವರ ಯೋಜನೆಗಳು ಅವರ ಒಳಿತಿಗಾಗಿ ಕಾರ್ಯ ನಿರ್ವಹಿಸಲಾರವು.

ಬೆತ್ಲೆಹೇಮಿನ ಸುತ್ತಮುತ್ತಲಿರುವುದು ಹುಲ್ಲುಗಾವಲು ಪ್ರದೇಶ ಮತ್ತು ಈ ದಿನದಲ್ಲಿ ಅದು ಕುರಿ ಮಂದೆಗಳಿಂದ ತುಂಬಿರುತ್ತದೆ. ಆ ಕಾಲದಲ್ಲಿ ಕುರುಬರು ಮಂದೆಯನ್ನು ಕಳ್ಳರ ಮತ್ತು ಕಾಡು ಪ್ರಾಣಿಗಳಿಂದ ಕಾಪಾಡಲು ರಾತ್ರಿಯಲ್ಲಿ ಅವುಗಳೊಂದಿಗಿರುವುದು ಪದ್ಧತಿಯಾಗಿತ್ತು. ಈ ಸುತ್ತಮುತ್ತಲಿನ ಪ್ರದೇಶದಲ್ಲೇ ದಾವೀದನು (ನಂತರದಲ್ಲಿ ಅರಸನಾದುದು) ಕುರಿಕಾಯುವ ಹುಡುಗನಾಗಿ ತನ್ನ ಮಂದೆಯನ್ನು ಸಂರಕ್ಷಿಸಲು ಒಂದು ಸಂದರ್ಭದಲ್ಲಿ ಸಿಂಹವನ್ನು ಮತ್ತು ಇನ್ನೊಂದು ಸಂದರ್ಭದಲ್ಲಿ ಕರಡಿಯನ್ನು ಸೀಳಿದ್ದನು. ಆ ಕುರುಬರು ಶಾಲೆಗಳಲ್ಲಿ ಒಳ್ಳೆಯ ವಿದ್ಯೆಯನ್ನು ಪಡೆಯದ ಒಂದು ವರ್ಗಕ್ಕೆ ಸೇರಿದವರಾದರೂ ಅವರಲ್ಲಿ ಹಲವರು ಆಲೋಚನಾಪರರಾಗಿ ತಮ್ಮ ಮಂದೆಯನ್ನು ಕಾಯುವಾಗ ಸಿಗುವ ಬಿಡುವಿನ ಸಮಯದಲ್ಲಿ ಚಿಂತನೆ ಮತ್ತು ಸಂಭಾಷಣೆಗಳ ಮೂಲಕ ಬಹುಮಟ್ಟಿನ ತಿಳುವಳಿಕೆಯನ್ನು ಪಡೆದವರಾದ ಇವರನ್ನು ಬುದ್ಧಿಜೀವಿಗಳ ಮತ್ತು ವಿಚಾರವಂತರ ಗುಂಪಿನವರೆಂದು ಹೆಸರಿಸಬಹುದು. ಯಾವಾಗಲೂ ತಮ್ಮ ಮನಸ್ಸುಗಳನ್ನು ವ್ಯವಹಾರ ಮತ್ತು ತಾಂತ್ರಿಕತೆಗಳಲ್ಲಿ ಮುಳುಗಿಸಿಕೊಂಡ ಇತರರಿಗಿಂತಲೂ ಇವರು ತಮ್ಮ ಮನಸ್ಸಿನ ಚಿಂತನೆಗಳನ್ನು ಹೆಚ್ಚಾಗಿ ದೊಡ್ಡ ವಿಷಯಗಳಿಗೆ ಹರಿಬಿಟ್ಟಿರುತ್ತಿದ್ದರು. ದೇವರು ತನ್ನ (ಛಾಯಾ) ಮಾದರಿಯ ರಾಜ್ಯಕ್ಕೆ ಅರಸನನ್ನಾಗಿ ಮಾಡಿ ಗೌರವಿಸಿದ ಕುರುಬನು ಒಬ್ಬ ಶ್ರೇಷ್ಠ ಕವಿಯಾಗಿದ್ದನು. ಹಾಗೂ ಈತನು ಕುರಿಕಾಯುವಾಗ ತನ್ನ ಹೆಚ್ಚಿನ ಸಮಯಗಳನ್ನು ಚಿಂತನೆಗಳಲ್ಲಿ ತೊಡಗಿಸಿಕೊಂಡಿರುತ್ತಿದ್ದನೆಂಬುದು ಸ್ಪಷ್ಟ. ಮತ್ತು ಆತನು ತನ್ನ ಕವಿತೆಗಳಲ್ಲಿ ಅತಿ ಸುಂದರವಾದ ಒಂದು ಕವಿತೆಯಲ್ಲಿ ( ಕೀರ್ತನೆ 23) ಯೆಹೋವನನ್ನು ಕುರಿಗಳಂತಿರುವ ತನ್ನ ಪ್ರಜೆಗಳನ್ನು ಸ್ವತಃ ಪಾಲಿಸುವ ಕುರುಬನನ್ನಾಗಿ ಪ್ರತಿನಿಧಿಸಿದ್ದಾನೆ. ಈ ಚಿಂತನಾಪರ ವರ್ಗದ ಜನರಿಗೆ ಮತ್ತು ದಾವೀದನ ಕೀರ್ತನೆಗಳು ಹಾಗೂ ಅದರಲ್ಲಿರುವ ಕ್ರಿಸ್ತನ ಸಾವಿರ ವರುಷದ ಮೇಲಿನ ನಿರೀಕ್ಷೆಯ ವಿಷಯಗಳಲ್ಲಿ ಪರಿಚಿತರಾಗಿರುವವರಿಗೇ

ಓಹ್, ನಾವು ನಿಜ ಕ್ರೈಸ್ತರನ್ನು ನಮ್ಮ ಪಾಠದ ಈ ಹತ್ತನೇ ವಚನವನ್ನು ಅಧ್ಯಯನ ಮಾಡಿ ಅದರ ಮಹತ್ವ ಆಳವನ್ನು ನೋಡುವಂತೆ ಮಾಡಿದರೆ ಅದು ಕ್ರೈಸ್ತ ಸಮೂಹದವರ ಬೋಧನೆಗಳಲ್ಲಿ ಕ್ರಾಂತಿಕಾರಿ ಬದಲಾವಣೆ ಗಳನ್ನು ಶೀಘ್ರವಾಗಿ ತರುವುದು. ಆದರೆ ನಮ್ಮ ಕರ್ತನು ಸಾರಿ ಹೇಳಿರುವಂತೆ ದೇವರ ಯೋಜನೆಯ ಕೆಲವು ಆಳವಾದ ಸಂಗತಿಗಳು ಈ ಪ್ರಪಂಚದ ಜ್ಞಾನಿಗಳಿಗೂ ವಿವೇಕಿಗಳಿಗೂ ಮರೆಮಾಡಲಾಗಿದ್ದು ಅದನ್ನು ಕೇವಲ ಚಿಕ್ಕ ಮಕ್ಕಳಂತಿರುವ ದೀನರಿಗೆ ಪ್ರಕಟ ಮಾಡಲಾಗಿದೆ. ಹೀಗಿದ್ದರೂ ದೇವರ ಕಟ್ಟಳೆ ಪ್ರಮಾಣಗಳು ಖಂಡಿತವಾಗಿ ನಿಲ್ಲುವವು. ಯಾರ ಮನೋ ನೇತ್ರಗಳು ತೆರೆಯಲ್ಪಟ್ಟಿರುವದೋ ಮತ್ತು ಯಾರಿಗೆ ದೇವರ ಪ್ರೀತಿಯ ಉದ್ದ ಅದರ ಅಗಲ ಅದರ ಆಳ ಮತ್ತು ಎತ್ತರಗಳ ಕೆಲವು ಸಂಗತಿಗಳನ್ನು ತಿಳಿಯುವ ಸಾಮರ್ಥ್ಯ ನೀಡಲಾಗಿರುವುದೋ, ಅವರುಗಳು ಪ್ರಪಂಚದಲ್ಲಿ ಸಾಮಾನ್ಯವಾಗಿರುವ ಈ ವಿಷಯದ ಮೇಲಿನ ಅಜ್ಞಾನವು ಮತ್ತು ತಮ್ಮನ್ನು ಕುರುಡುತನದಲ್ಲಿ ಕಟ್ಟಿಹಾಕಿರುವ ಆ ಮಹಾವಿರೋಧಿಯ (ಸೈತಾನ) ವಿರೋಧಿಸುವಿಕೆ ಇವುಗಳು ನಿರಂತರವಾಗಿ ಅವರಲ್ಲಿ ಸಾಗಲಾರದು ಎಂಬುದಕ್ಕೆ ಸಂತೋಷಿಸಬೇಕು. ಕಲ್ವಾರಿಯಲ್ಲಿ ಲೋಕದ ವಿಮೋಚನೆ ಗಾಗಿ ಪ್ರಾಣಕೊಟ್ಟ ಕರ್ತನು ಕ್ಲುಪ್ತಕಾಲದಲ್ಲಿ ತನ್ನ ಮಹಿಮೆಯುಳ್ಳ ಆಳ್ವಿಕೆಯನ್ನು ಪ್ರಾರಂಭಿಸಿ ಪುರಾತನ ಸರ್ಪವೂ ಪಿಶಾಚನೂ ಆಗಿರುವ ಸೈತಾನನನ್ನು ಬಂಧಿಸಿ ಸಾವಿರ ವರುಷಗಳು ಜನಾಂಗಗಳನ್ನು ಇನ್ನು ಅವನು ಮರುಳುಗೊಳಿಸದಂತೆ ಮಾಡುವನು. ಆಗ ಎಲ್ಲರೂ ಮುಸುಕಿಲ್ಲದ ಕಣ್ಣಿನಿಂದ ನೋಡುವರು. ಆಗ ಅವರು ಈಗಿನ ಕಾಲದಲ್ಲಿ ಕೇವಲ ಕೆಲವರಿಗೆ ನೋಡಲು ಅನುಗ್ರಹವಾಗಿರುವ ದೇವರ ಗುಣಲಕ್ಷಣ ಮತ್ತು ಆತನ ಯೋಜನೆ ಅಂದರೆ, ಬೆತ್ಲೆಹೇಮಿನಲ್ಲಿ ರಕ್ಷಕನು ಹುಟ್ಟಿದ ಪರಿಣಾಮವಾಗಿ ಬರಲಿರುವ ಭವ್ಯವಾದ ಫಲಗಳ ವಿಷಯವಾಗಿರುವ ಆ ದೂತನ ಸಂದೇಶದ ಪ್ರತಿಯೊಂದು ಮಾತೂ ಸತ್ಯವಾಗಿದ್ದು ಅದು ಕಟ್ಟಕಡೆಯಲ್ಲಿ ಜನರಿಗೆಲ್ಲಾ ಮಹಾ ಸಂತೋಷವನ್ನು ಉಂಟುಮಾಡಲಿದ್ದು, ಹೀಗೆ ಯೆಹೋವನು ಕಳುಹಿಸಿರುವ ಈ ಶುಭಸಂದೇಶವು ನ್ಯಾಯವಾದವುಗಳೆಂದು ಅವರು ಗ್ರಹಿಸುವರು. ಇವುಗಳ ಮೂಲಕ ಉಂಟಾಗಲಿರುವ ಜ್ಞಾನಾಶೀರ್ವಾದಗಳಿಗೆ ಯಾವ ಅಡೆತಡೆಗಳೂ ಇಲ್ಲದ ಪರಿಣಾಮವಾಗಿ ಎಲ್ಲರೂ ಸತ್ಯದ ಪರಿಜ್ಞಾನಕ್ಕೆ ಸೇರಿ ತಮಗೆ ದೊರೆಯಲಾದ ಆ ಕೃಪಾವಕಾಶವನ್ನು ಬಳಸಿಕೊಂಡು ನಮ್ಮ ಕರ್ತನಾದ ಯೇಸುವು ತನ್ನ ಈಡುಬಲಿಯಲ್ಲಿ ಗಳಿಸಿಕೊಂಡ ಮಹಾ ರಕ್ಷಣೆಯ ಮೂಲಕ ಕರುಣೆಯನ್ನೂ ಸಮಾಧಾನವನ್ನೂ ಎಲ್ಲರೂ ಹೊಂದುವರು.

ತನ್ನ ದಿವ್ಯ ಸುವಾರ್ತಾ ಸಂದೇಶಕ್ಕೆ ಆಧಾರನಾಗಿರುವ ರಕ್ಷಕನಾದ ಮೆಸ್ಸೀಯನು ಹುಟ್ಟಿದ ಕಾರಣ ಅದರಲ್ಲಿ ತಿಳಿಸಿರುವ ಎಲ್ಲಾ ಒಳ್ಳೆಯ ಸಂಗತಿಗಳು ನೆರವೇರ ಬೇಕಿರುವುದೆಂದು ಆ ದೂತನು ಇನ್ನೂ ಮುಂದಕ್ಕೆ ವಿವರಿಸಿ ಹೇಳಿದನು. ಈತನು ಇಸ್ರಾಯೇಲ್ಯರು ಬಹು ಕಾಲದಿಂದ ನಿರೀಕ್ಷಿಸುತ್ತಿದ್ದವನು. ಇವನು ಅಬ್ರಹಾಮನ ವಾಗ್ದತ್ತ ಸಂತತಿಯಾಗಿ ತನ್ನ ಮೂಲಕ ಕೇವಲ ಇಸ್ರಾಯೇಲ್ಯರು ಆಶೀರ್ವದಿಸಲ್ಪಟ್ಟು, ಘನತೆ ಗೌರವ ಹೊಂದಿ ತನಗೆ ಸಹಕಾರ ನೀಡುವುದು ಮಾತ್ರವಲ್ಲದೆ ಈತನ ಮೂಲಕವಾಗಿ "ಭೂಲೋಕದ ಎಲ್ಲಾ ಕುಲಗಳೂ ಸಹ ಆಶೀರ್ವಾದ" ಹೊಂದಬೇಕಿರುವುದು ಹಾಗೂ ಪರಲೋಕದಿಂದ ಬಂದ ದೂತನು ವಿಷಯವನ್ನು ಪ್ರಕಟಿಸಿದ ಕ್ರಮವು, ಸ್ಪಷ್ಟವಾಗಿ ಇದು ದೇವರ ಆಜ್ಞಾಪನೆಯಾದ್ದರಿಂದ ಆಯಲ್ಪಡಲಿರುವ ಸಭೆಯನ್ನು ಕರೆಯಲು ಕರ್ತನ ರಾಯಭಾರಿಗಳಿಗೆ ವಿಷಯವನ್ನು ಸರಿಯಾಗಿ ಪ್ರಕಟಿಸಲು ಇದೇ ಸೂಕ್ತ ಕ್ರಮವೆನ್ನುವುದು ಇಲ್ಲಿ ಗಮನಾರ್ಹ. ಮೊದಲನೆಯದಾಗಿ, ಇಲ್ಲಿ ಸಂತೋಷಕ್ಕೆ ಕಾರಣವಾಗಿರುವ ದೇವಾನುಗ್ರಹ ಆಶೀರ್ವಾದಗಳು ಭವ್ಯವಾಗಿ ಉಚ್ಚರಿಸಲ್ಪಟ್ಟಿರುವುದು; ಕಡೆಯಲ್ಲಿ ಎಲ್ಲಾ ಜೀವಿಗಳಿಗೂ ಇವುಗಳನ್ನು ವಿಸ್ತರಿಸಲಾಗುವುದು. ಎರಡನೆಯದಾಗಿ, ಸುವರ್ಣಾಕ್ಷರದಂತ ಬರಹಗಳಲ್ಲಿ ನಮಗೆ ತಿಳಿಸಿರುವಂತೆ ಒಬ್ಬ ರಕ್ಷಕನೂ ಬಿಡಿಸುವವನೂ ಆಗಿರುವವನ ಮೂಲಕವಾಗಿ ಇವೆಲ್ಲವೂ ಹೇಗೆ ನೆರವೇರುವುದೆಂದು ಒಂದು ನಿರ್ಧಿಷ್ಟವಾದ ರೀತಿಯಲ್ಲಿ ಇಲ್ಲಿ ವಿವರಿಸಿರುವುದು. ತನ್ನ ಜನರನ್ನು ಪಾಪದ ಸಂಬಳವಾದ ಮರಣದಿಂದ ಬಿಡಿಸಿ ಅವರಿಗೆ ನಿತ್ಯಜೀವ ಆಶೀರ್ವಾದಗಳನ್ನು ನೀಡಲು ಆತನು ಮೊಟ್ಟ ಮೊದಲನೆಯದಾಗಿ ಅವರನ್ನು ಅವರ ಪಾಪಗಳಿಂದ ರಕ್ಷಿಸಬೇಕಿರುವುದು. ಈತನು ನಮ್ಮನ್ನು ಪಾಪಗಳಿಂದ ರಕ್ಷಿಸಲು ಆದಾಮನ ಮೂಲಕ ಬಂದ ಪಾಪಕ್ಕೆ ನಮ್ಮ ಪರವಾಗಿ ದಂಡ ಕಟ್ಟಿಕೊಡುವುದು ಮಾತ್ರವಲ್ಲದೆ ಆನಂತರದಲ್ಲಿ ಮನುಷ್ಯರಿಗೆ ನೀತಿಯ ವಿಷಯವಾಗಿ ತಿಳುವಳಿಕೆಯನ್ನು ನೀಡಿ ಅವರನ್ನು ಪಾಪದ ಸ್ವಭಾವದಿಂದ ಮೇಲಕ್ಕೆತ್ತಬೇಕು. ಹೀಗೆ ಮೇಲಕ್ಕೆತ್ತಲ್ಪಡಲು ಪ್ರತಿಯೊಬ್ಬನೂ ತನ್ನಲ್ಲಿರುವ ಸಾಮರ್ಥ್ಯದ ಪ್ರಕಾರ ಇದಕ್ಕೆ ಮನಃಪೂರ್ವಕವಾಗಿ ಸಹಕರಿಸಬೇಕಾಗಿರುವುದೆಂದು ಸತ್ಯವೇದದ ಇತರ ಭಾಗದಲ್ಲಿ ಸೂಚಿತವಾಗಿರುವುದನ್ನು ನಾವು ನೋಡುತ್ತೇವೆ.

ಹೀಗೆ ಮಾನವರಿಗೆ ದೊರಕಲಿರುವ ಕೃಪೆಯ ವಿಷಯವಾದ ಬೋಧನೆಯನ್ನು ರಕ್ಷಣೆಯ ವಿಷಯವಾದ ತತ್ವದೊಂದಿಗೆ ಜೊತೆಗೂಡಿಸಬೇಕು. ಅಂದರೆ ರಕ್ಷಕನು ಶರೀರಧಾರಿಯಾಗಿ ಆ ಶರೀರವನ್ನು ನಮ್ಮ ಪಾಪ (ವಿಮೋಚನೆ) ಗಳಿಗಾಗಿ ಮುಡುಪಾಗಿಟ್ಟು ಯಜ್ಞಾರ್ಪಣೆಯಾಗಿ ಮಾಡಿ ನಂತರದಲ್ಲಿ ರಕ್ಷಕನು ಪ್ರಭಾವ ಹೊಂದಿ, ಸಭೆಯು ಆಯ್ಕೆಯಾದ ಮೇಲೆ ಆಕೆಯೊಂದಿಗೆ ಕ್ಲುಪ್ತಕಾಲದಲ್ಲಿ ದೇವರ ಯೋಜನಾನುಸಾರ ನೀತಿರಾಜ್ಯವನ್ನು ಸ್ಥಾಪಿಸುವನು. ಆ ಮೂಲಕವಾಗಿ ಮಾನವ ಕುಲದವರನ್ನು ಮಹಾ ವಿರೋಧಿಯು ಬೀಳುವಂತೆ ಮಾಡಿ ಕುರುಡರನ್ನಾಗಿಸಿ ತಪ್ಪಾಗಿ ನಡೆಸಿದರ ಫಲವಾಗಿ ಬಂದ ಅಜ್ಞಾನ ಮೂಢನಂಬಿಕೆ ಮತ್ತು ಎಲ್ಲರಲ್ಲಿಯೂ ಸಾಮಾನ್ಯವಾಗಿರುವ ಹೀನಾವಸ್ಥೆಯಿಂದ ಮೇಲೆತ್ತುವನು. ಈ ಸಂಬಂಧದಲ್ಲಿ ಯೇಸು ಎನ್ನುವ ನಮ್ಮ ಕರ್ತನ ಹೆಸರು ರಕ್ಷಕ ಎನ್ನುವುದನ್ನು ಸೂಚಿಸುವುದೆಂದು ಜ್ಞಾಪಿಸಿಕೊಳ್ಳುವುದು ಒಳ್ಳೆಯದು. ಹಾಗೂ ಆಯಲ್ಪಟ್ಟ ಸಭೆಯಲ್ಲಿ ಸೇರಲಿರುವವರು ಮದಲಿಂಗನ ಆತ್ಮವನ್ನು ಹೊಂದಬೇಕಿರುವುದು (ಹಾಗೆಯೇ ನಂಬಿಕೆಯ ಮೂಲಕ ಆತನಲ್ಲಿ ದೊರಕುವ ನೀತಿಯೆಂಬ ವಸ್ತ್ರವನ್ನು ಹೊದಿಯಬೇಕಿರುವುದು.) ಇದಲ್ಲದೆ ಮದಲಿಂಗನ ಆತ್ಮವೆಂದರೆ ಅದು ತನ್ನ ಸ್ವಾರ್ಥ–ತ್ಯಾಗದ ಮಟ್ಟಿಗೂ ಪಾಪವನ್ನು

ವಿರೋಧಿಸುವುದನ್ನು ಒಳಗೊಂಡಿರುತ್ತದೆ. ನಾವೂ ಸಹ "ಪಾಪಕ್ಕೆ ವಿರೋಧವಾಗಿ ಹೋರಾಡುವುದರಲ್ಲಿ ಪ್ರಾಣಾಪಾಯದ ತನಕ ಇನ್ನೂ ಅದನ್ನು ಎದುರಿಸಬೇಕಾಗಿರುವುದು. – ಇಬ್ರಿಯ 12:4.

ಅನಂತರ ದೂತನು ಕುರುಬರಿಗೆ ಭೂಲೋಕದ ಈ ದೊಡ್ಡ ಅರಸನು ಮಗುವಾಗಿ ಪ್ರಪಂಚದಲ್ಲಿ ಹುಟ್ಟಿದಾಗ ಬಟ್ಟೆಯಲ್ಲಿ ಸುತ್ತಿದವನಾಗಿ ಗೋದಲಿಯಲ್ಲಿ ಮಲಗಿಸಲ್ಪಟ್ಟಿರುವ ದೀನ ಸ್ಥಿತಿಯ ವಿಷಯವಾಗಿ ಸೂಚನೆ ಕೊಟ್ಟನು. ಯೇಸುವನ್ನು ಗುರುತು ಹಿಡಿಯಲು ಇದು ಅವರಿಗೆ ಅಗತ್ಯವಿತ್ತಲ್ಲದೆ ಇದರ ಫಲವಾಗಿ ತಮ್ಮಲ್ಲಿ ಹುಟ್ಟುವ ಭವ್ಯವಾದ ಮಹಾ ನಿರೀಕ್ಷೆಗಳಿಂದ ತಪ್ಪು ಅಭಿಪ್ರಾಯ ಹಿಡಿಯದಂತೆ ಅವರ ಆಲೋಚನೆಗಳನ್ನು ಈ ದೀನತೆಯ ಆರಂಭಗಳ ಕಡೆಗೆ ಅವರ ಆಲೋಚನೆಗಳನ್ನು ತರುವುದು ಇದರ ಉದ್ಧೇಶವಾಗಿತ್ತು. ಅಲ್ಲದೆ ದೇವರ ಯೋಜನೆಯ ಪ್ರತಿಯೊಂದು ಭಾಗದ ವಿಷಯದಲ್ಲೂ ಹೀಗೆಯೇ ಇರುವುದು. ಈ ಸಂಗತಿಗಳನ್ನು ಪ್ರಕಟಿಸುವಾಗ ನಮ್ಮ ವಿಷಯವೂ ಹೀಗೆಯೇ ಇರಬೇಕು. ನಾವು ಮುಂದಿನ ಕಾಲದ ಪ್ರಭಾವ ವೈಭವ ಮಹತ್ವಗಳ ವಿಷಯವಾಗಿ ಹೇಳುವುದು ಮಾತ್ರವಲ್ಲದೆ ಈಗಿನ ಕಾಲದ ಅಪಮಾನಕರ ಸ್ಥಿತಿಗಳ ವಿಷಯವಾಗಿಯೂ ಹೇಳಬೇಕು. ನಮ್ಮ ಪಾಪಗಳ ಸಲುವಾಗಿ ಮರಣ ಹೊಂದಲು ನಮ್ಮ ರಕ್ಷಕನು ತನ್ನನ್ನು ಮನುಷ್ಯರೆಲ್ಲರಿಗಿಂತ ದೀನ ಸ್ಥಿತಿಗೆ ತನ್ನನ್ನು ತಗ್ಗಿಸಿಕೊಂಡದ್ದನ್ನು ಮಾತ್ರವಲ್ಲದೆ ಆತನ ಹೆಜ್ಜೆ ಜಾಡಿನಲ್ಲಿ ಅದೇ ಅಪಮಾನಕರ ಸನ್ನಿವೇಶಗಳಲ್ಲಿ ನಡೆಯಲು ಕರೆಯಲಾಗಿರುವ "ಆಯಲ್ಪಟ್ಟ (ಸಭೆಯವರ)" ವಿಷಯವೂ ಸಹ–ಆತನೊಡನೆ ಸಹಿಸಿಕೊಂಡರೆ ಆತನೊಡನೆ ಆಳುವೆವು, ಆತನೊಡನೆ ಸತ್ತಿದ್ದರೆ ಆತನೊಡನೆ ಜೀವಿಸುವೆವು – ಎಂಬುದನ್ನು ತೋರಿಸಿ ಕೊಡಬೇಕು. ಮತ್ತು ಇದರಂತೆಯೇ ಪ್ರವಾದಿಗಳೂ ಸಹ ಮುಂದೆ ಬರಬೇಕಿರುವ ಪ್ರಭಾವವನ್ನು ಮಾತ್ರವಲ್ಲದೆ ಅದಕ್ಕೆ ಮುನ್ನ ಸಂಭವಿಸಲಿಕ್ಕಿದ್ದ ಕ್ರಿಸ್ತನ (ಶಿರಸ್ಸು ಮತ್ತು ದೇಹ) ಬಾಧೆಗಳ ವಿಷಯವಾಗಿಯೂ ನುಡಿದಿದ್ದರು. (1ಪೇತ್ರ 1:11) ಕೇಳುವ ಕಿವಿಯುಳ್ಳವರೆಲ್ಲರಿಗೆ ಇಲ್ಲಿರುವ ಪಾಠವೆಂದರೆ, "ಶಿಲುಬೆಯಿಲ್ಲದೆ ಕಿರೀಟವಿಲ್ಲ" ಎನ್ನುವುದು. ಹೀಗಿರುವಲ್ಲಿ ನಾವು ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಮ್ಮನ್ನು ತಗ್ಗಿಸಿಕೊಂಡು ನಮ್ಮ ದೀನಸ್ಥಿತಿಯ ಪ್ರತಿಯೊಂದು ಹಂತಗಳಲ್ಲಿಯೂ ಆನಂದಿಸೋಣ. ಆಗ ಆತನು ತಕ್ಕ ಸಮಯದಲ್ಲಿ ನಮ್ಮನ್ನು ಮೇಲಕ್ಕೆತ್ತಿ ತನ್ನ ಮಗನಾದ ನಮ್ಮ ರಕ್ಷಕನ ಪ್ರಭಾವಗಳಲ್ಲಿ ನಾವು ಪಾಲನ್ನು ಹೊಂದಿ ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸುವ ಆತನ ಭವ್ಯವಾದ ಕಾರ್ಯದಲ್ಲಿ ಆತನೊಡನೆ ನಾವು ಭಾಗವಹಿಸುವಂತೆ ಮಾಡುವನು.

ಆ ದೂತನು ಜನರಿಗೆಲ್ಲಾ ಮಹಾ ಸಂತೋಷವನ್ನುಂಟು ಮಾಡುವ ಶುಭವಾರ್ತೆಯನ್ನು ಆಶ್ಚರ್ಯ ಚಕಿತರಾದ ಕುರುಬರಿಗೆ ತಿಳಿಸಿ ಇನ್ನು ಹೊರಡಲು ಸಿದ್ಧನಿರುವಾಗ ದೂತಸೈನ್ಯವು ಆತನೊಡನೆ ಕೂಡಿ "ಮೇಲಿನ ಲೋಕಗಳಲ್ಲಿ ದೇವರಿಗೆ ಮಹಿಮೆ ಮತ್ತು ಭೂಲೋಕದೊಳಗೆ ಮನುಷ್ಯರಲ್ಲಿ ಸಮಾಧಾನ" ಎಂದು ಹಾಡಿದುದು ಈ ಸಂದೇಶ ಸರಣಿಗೆ ಒಂದು ಸೂಕ್ತವಾದ ಮುಕ್ತಾಯ. ಇದು ಈಗಾಗಲೇ ತಿಳಿಸಿದ ಶುಭ ಸಂದೇಶದ ಪುನರಾವರ್ತನೆ. ಆಗತಾನೆ ಹುಟ್ಟಿರುವ ಮಗುವು ನೆರವೇರಿಸಲಿರುವ ಕಾರ್ಯದ ಪರಿಣಾಮವಾಗಿ ಆತನ ತಂದೆ ದೇವರಾದ ಯೆಹೋವನಿಗೆ ಕಡೆಯಲ್ಲಿ ಉತ್ಕೃಷ್ಟವಾದ ಪ್ರಭಾವ ಮಾನಗಳು ಫಲಿಸಬೇಕಿರುವುದು. ಯೇಸುವು ನೆರವೇರಿಸಲಿರುವ ಕಾರ್ಯದ ಮೂಲಕವಾಗಿ ಭೂಲೋಕಕ್ಕೆ ದೇವರು ತೋರುವ ಒಲವಿನ ಪರಿಣಾಮವಾಗಿ ಸಮಾಧಾನವು ಲಭಿಸುವುದು. ಮತ್ತು (ಮಾನವರು) ಸುಸ್ಥಿತಿಗೆ ಮರಳಿ ನಿತ್ಯಜೀವ ಪಡೆಯುವ ಸೌಭಾಗ್ಯಗಳು ಈ ಆಶೀರ್ವಾದದಲ್ಲಿ ಅಡಕವಾಗಿರುವುದು. ಆದರೆ ಈ ಸಂದೇಶವು ಕ್ರೈಸ್ತ ಸಮುದಾಯದಲ್ಲಿ ವಿಶ್ವಾಸಗಳಿಸಿರುವ ತಪ್ಪು ಬೋಧನೆಗಳಿಗೆ ಎಷ್ಟೋ ವಿರುದ್ಧವಾಗಿರುವುದು. ಕರ್ತನಾದ ಯೇಸುವು ಈಡನ್ನು ಕೊಟ್ಟಿದ್ದರೂ ಹಾಗೂ ನಮ್ಮ ಪಾಪಗಳಿಗೋಸ್ಕರವಾದ ಈ ಯಜ್ಞಾರ್ಪಣೆಯು ತಂದೆಯಿಂದ ಪ್ರಾಯಶ್ಚಿತ್ತವಾಗಿ ಅಂಗೀಕಾರವಾದ ಫಲವಾಗಿ ನಮ್ಮ ಮನುಕುಲದ ಮೇಲಿದ್ದ ಮೊದಲ ಅಪರಾಧ ನಿರ್ಣಯವು ತೆಗೆಯಲ್ಪಟ್ಟಿದ್ದರೂ, ಮನುಕುಲದವರಲ್ಲಿ ಹೆಚ್ಚುಪಾಲು ಜನರು ರಕ್ಷಕನನ್ನು ತಿಳಿಯದೆ ಆತನ ರಕ್ಷಣೆಯನ್ನು ಅಂಗೀಕರಿಸುವ ಪೂರ್ಣವಾಗಿ ಸಮಂಜಸವಾದ ಅವಕಾಶವನ್ನು ಎಂದೂ ಹೊಂದದೆ, ದೇವರಿಗೆ ವಿರೋಧವಾಗಿ ತಿರುಗಿಬಿದ್ದು ನಿತ್ಯಯಾತನೆ ಪಡುತ್ತಿದ್ದಾರೆಂಬ ಈ ಬೋಧನೆಗಳು ದೇವರ ನಾಮವನ್ನು ಸತತವಾಗಿ ನಿಂದನೆಗೆ ಗುರಿಮಾಡಿರುತ್ತವೆ. ಇಂತಹ ಒಂದು ಯೋಜನೆಯು ಉನ್ನತದಲ್ಲಿರುವ ದೇವರಿಗೆ ಮಹಿಮೆಯನ್ನು ಉಂಟುಮಾಡುವು ದೆಂದು ಯೋಚಿಸುವುದು ಎಷ್ಟು ವಿಚಿತ್ರ!

ಮಾನವ ಕುಲದವರೆಲ್ಲರೂ ಸತ್ಯದ ಪರಿಜ್ಞಾನಕ್ಕೆ ಸೇರಿದ ಮೇಲೆ ಪಾಪವನ್ನು ಬಿಟ್ಟುಬಿಟ್ಟು ಹೊಸ ಒಡಂಬಡಿಕೆಯ ಏರ್ಪಾಡಿನಲ್ಲಿ ನೀತಿಯುಳ್ಳ ಹೊಸ ಜೀವ ಪಡೆಯುವ ಅವಕಾಶವನ್ನು ದೇವರು ಕ್ರಿಸ್ತನ ಮೂಲಕವಾಗಿ ಅನುಗ್ರಹಿಸಿದ್ದಾನೆಂಬ ಸರಳವಾದ ಹೇಳಿಕೆಯನ್ನು ಕೇಳಲು ಯಾರಾದರೂ ನಿರಾಕರಿಸುವುದು ಎಷ್ಟು ವಿಚಿತ್ರ. ಅಲ್ಲಿಯೂ ಜನರಲ್ಲಿ ಯಾರು ಈ ನೀತಿಯುಳ್ಳ ಏರ್ಪಾಡುಗಳಿಗೆ ತಮ್ಮನ್ನು ಒಳಪಡಿಸಿಕೊಳ್ಳುವುದಿಲ್ಲವೋ ಅವರೆಲ್ಲರೂ ಎರಡನೆಯ ಮರಣದಲ್ಲಿ ಸಂಪೂರ್ಣವಾಗಿ ನಾಶವಾಗುವರು. ಹೀಗೆ ಅಲ್ಲಿ ಯಾರೂ ಪಾಪದಲ್ಲಿ ಜೀವಿಸಿ ದೇವರಿಗೆ ವಿರೋಧವಾಗಿ ನಡೆದು ದೇವರ ಆಧಿಪತ್ಯದಲ್ಲಿನ ಯಾವ ಭಾಗವನ್ನೂ ದೋಷಪೂರಿತವಾಗ ಮಾಡಲು ಬಿಡಲಾಗದು. ಆದರೆ ತಿದ್ದುಪಾಟಿಗೆ ಒಳಗಾದವರು ಎಂದಿಗೂ ಇಲ್ಲದಂತಾಗುವರು. ಮನುಷ್ಯರೊಳಗೆ ಪೂರ್ಣವಾಗಿ ಸಮಾಧಾನವಿರುವ ಕಾಲವು ಇನ್ನು ಬೇರೆ ಯಾವ ವಿಧದಲ್ಲಿಯಾದರೂ ಬರುವುದೆಂದು ಊಹಿಸಲು ನಮಗೆ ಸಾಧ್ಯವಾಗದು. "ದುಷ್ಟರಿಗೆ ಸಮಾಧಾನವೇ ಇಲ್ಲವೆಂದು ದೇವರು ಹೇಳಿತ್ತಾನೆ."

ಆತನ ರಾಜ್ಯವು ಸ್ಥಾಪನೆಯಾಗಿ ಅಲ್ಲಿ ಸಮಾಧಾನವು ಏರ್ಪಡಲು ದೇವರು ದಯಪಾಲಿಸಿರುವ ಒಂದೇ ಪರಿಹಾರವೆಂದರೆ ನಮ್ಮ ಪ್ರಿಯ ವಿಮೋಚಕನು ನಮಗೆ ಕಲಿಸಿಕೊಟ್ಟಿರುವ ಹಾಗೆ "ನಿನ್ನ ರಾಜ್ಯವು ಬರಲಿ ನಿನ್ನ ಚಿತ್ತವು

ಪರಲೋಕದಲ್ಲಿ ನೆರವೇರುವ ಹಾಗೆ ಭೂಲೋಕದಲ್ಲಿಯೂ ನೆರವೇರಲಿ" ಎಂದು ಪ್ರಾರ್ಥಿಸುವುದು. ಇದು ತನ್ನ ಪೂರ್ಣವಾದ ಹಾಗೂ ಬಹು ನಿಖರವಾದ ಅರ್ಥದಲ್ಲಿರುವ ಸಮಾಧಾನ. ಸತ್ಯವೇದವು ಪ್ರಸ್ತಾಪಿಸುವುದು ಕೇವಲ ಕ್ರಿಸ್ತನ ಮೂಲಕ ನಿತ್ಯವಾದ ಆಶೀರ್ವಾದ ಸಮಾಧಾನಗಳು ಪಡೆಯುವ ಅವಕಾಶಗಳನ್ನು ನೀಡಿರುವುದನ್ನು ಇಲ್ಲವೇ ದೇವರು ದಯಪಾಲಿಸಿರುವ ಈ ಯೋಜನೆಯನ್ನು ಮನವರಿಕೆ ಮಾಡಿಕೊಳ್ಳುವಲ್ಲಿ ವಿಫಲರಾದವರನ್ನು ಎರಡನೇ ಮರಣದಲ್ಲಿ ಸಂಪೂರ್ಣವಾಗಿ ತೆಗೆದು ಹಾಕುವುದನ್ನು ಹೊರತುಪಡಿಸಿದರೆ ಯಾವ ಮನುಷ್ಯನೂ ತನ್ನ ಇಚ್ಛೆಗೆ ವಿರೋಧವಾಗಿ ನಡಕೊಳ್ಳುವುದನ್ನು ಒಳಗೊಂಡಿರುವುದಿಲ್ಲ.

ದೇವರ ಕೃಪೆಯ ವಿಷಯವಾಗಿ ಕೇಳಿದ ಕುರುಬರು ರಕ್ಷಕನನ್ನು ಸಂದರ್ಶಿಸಿ ತಮ್ಮ ಗೌರವವನ್ನು ಸಲ್ಲಿಸುವುದರ ಮೂಲಕ ತಮಗಿದ್ದ ಆಸಕ್ತಿಯನ್ನು ವ್ಯಕ್ತಪಡಿಸಿದರು. ಹಾಗೆಯೇ ದೇವರ ಕೃಪೆಯ ವಿಷಯವಾಗಿ ಕೇಳಿ ಅದನ್ನು ಗ್ರಹಿಸ ಹೃದಯವುಳ್ಳ ಪ್ರತಿಯೊಬ್ಬನಿಗೂ ತಾನು ಕರ್ತನನ್ನು ಹುಡುಕುವವನಾಗಿ ಆತನಿಗೆ ಭಯಭಕ್ತಿಯನ್ನು ಸಲ್ಲಿಸಿ ತನಗೆ ಅನುಗ್ರಹವಾದ ಕೃಪೆಯುಳ್ಳ ಸಂದೇಶವನ್ನು ಸಾರುವುದರ ಮೂಲಕ ಕರ್ತನ ದೈವೋದ್ದೇಶ ಈಡೇರಲು ಮಾಡಿವ ಸೇವೆಗಿಂತಲೂ ಕಡಿಮೆಯಾದುದನ್ನು ಮಾಡಲು ಸಾಧ್ಯವಿಲ್ಲ. ನಾವು ಪ್ರತಿಯೊಬ್ಬರೂ ಹೀಗೆಯೇ ಮಾಡುವವರಾಗೋಣ ಮತ್ತು ಈ ರೀತಿಯಲ್ಲಿ ನಮ್ಮ ಹೃದಯಗಳಲ್ಲಿ ಕರ್ತನಿಂದಾಗುವ ಆನಂದವನ್ನು ಅಧಿಕವಾಗಿ ಹೆಚ್ಚಿಸಿಕೊಂಡವರಾಗಿ ಆತನ ಭವ್ಯವಾದ ಸುವಾರ್ತೆಯ ವಿಷಯವಾಗಿ ಮನವರಿಕೆ ಮಾಡಿಕೊಳ್ಳುತ್ತಾ ಸಾಗೋಣ.

ಯೇಸುವು ಹುಟ್ಟಿದ ದಿನದ ವಿಷಯವಾಗಿ ನಾವು ಹೊಂದಿರುವ ಅಭಿಪ್ರಾಯವೆಂದರೆ: ಅದು ಸುಮಾರು ಕ್ರಿ.ಪೂ. 1ನೇ ಇಸವಿಯ ಸೆಪ್ಟಂಬರ್ 25ನೇ ತಾರೀಖಿನಿಂದ ಅಕ್ಟೋಬರ್ 1ನೇ ತಾರೀಖಿನೊಳಗೆ ಸಂಭವಿಸಿರುವುದೆಂಬುದನ್ನು ಮತ್ತು ದೇವದೂತನು ಮರಿಯಳಿಗೆ ಇದನ್ನು ಸಾರಿದುದು (ಲೂಕ 1:28) ಇದಕ್ಕೆ ಒಂಭತ್ತು ತಿಂಗಳ ಮೊದಲು ಅಂದರೆ ಕ್ರಿಸ್ತ ಪೂರ್ವ 2ನೆಯ ಇಸವಿಯ ಡಿಸೆಂಬರ್ 25ನೆಯ ದಿನ ಎಂಬುದು. ಇದರ ವಿಷಯದಲ್ಲಿನ ವಿವರವಾದ ಸಾಕ್ಷ್ಯಾಧಾರಗಳು ಸತ್ಯವೇದ ಅಧ್ಯಯನ ಮಾಲೆಯ 2ನೆಯ ಗ್ರಂಥದಲ್ಲಿ ಪುಟ 54 ರಿಂದ 62 ರವರೆಗೆ ನೀಡಲಾಗಿದೆ.

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಅಕ್ಟೋಬರ್ ಕ್ರಿ. ಪೂ. 2 | ಬೆತ್ಲೇಹೇಮ್ ಸಮೀಪ | ದೇವದೂತನು ಶುಭವಾರ್ತೆಯನ್ನು ಸಾರಿದುದು; ಕುರುಬರು ಮಗುವನ್ನು ಸಂಧಿಸಿದುದು. | | | 2:8–20 | |

## ಲೂಕ 2:8–20

ಆ ಸೀಮೆಯಲ್ಲಿ ಕುರುಬರು ಹೊಲದಲ್ಲಿದ್ದುಕೊಂಡು ರಾತ್ರಿಯಲ್ಲಿ ತಮ್ಮ ಕುರಿಹಿಂಡನ್ನು ಕಾಯುತ್ತಿರಲಾಗಿ ಕರ್ತನ ದೂತನೊಬ್ಬನು ಬಂದು ಅವರ ಎದುರಿನಲ್ಲಿ ನಿಂತನು. ಕರ್ತನ ಪ್ರಭೆಯು ಅವರ ಸುತ್ತಲೂ ಪ್ರಕಾಶಿಸಿತು. ಅವರು ಬಹಳವಾಗಿ ಹೆದರಿದರು. ಆ ದೂತನು ಅವರಿಗೆ – ಹೆದರ ಬೇಡಿರಿ, ಕೇಳಿರಿ, ಜನರಿಗೆಲ್ಲಾ ಮಹಾ ಸಂತೋಷ ವನ್ನುಂಟುಮಾಡುವ ಶುಭ ಸಮಾಚಾರವನ್ನು ನಿಮಗೆ ತಿಳಿಸುತ್ತೇನೆ. ಅದೇನೆಂದರೆ, ಈ ಹೊತ್ತು ನಿಮಗೋಸ್ಕರ ದಾವೀದನೂರಿನಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ. ಆತನು ಕರ್ತನಾಗಿರುವ ಕ್ರಿಸ್ತನೇ. ಆತನು ನಿಮಗೆ ಗೊತ್ತಾಗುವುದಕ್ಕೆ ಗುರುತೇನೆಂದರೆ – ಬಟ್ಟೆಯಿಂದ ಸುತ್ತಿರುವ ಒಂದು ಕೂಸು ಗೋದಲಿಯಲ್ಲಿ ಮಲಗಿರುವುದನ್ನು ಕಾಣುವಿರಿ ಎಂದು ಹೇಳಿದನು. ಫಕ್ಕನೆ ಆ ದೂತನ ಸಂಗಡ ಪರಲೋಕ ಸೈನ್ಯದವರ ಒಂದು ದೊಡ್ಡ ಗುಂಪು ಕಾಣಿಸಿಕೊಂಡು – ಮೇಲಣ ಲೋಕಗಳಲ್ಲಿ ದೇವರಿಗೆ ಮಹಿಮೆ, ಭೂಲೋಕದಲ್ಲಿ ಮನುಷ್ಯರೊಳಗೆ ಸಮಾಧಾನ, ದೇವರು ಅವರಿಗೆ ಒಲಿಯುತ್ತಾನೆ ಎಂದು ದೇವರನ್ನು ಕೊಂಡಾಡುತ್ತಾ ಹೇಳಿದರು. ದೇವದೂತರು ಅವರ ಬಳಿಯಿಂದ ಪರಲೋಕಕ್ಕೆ ಹೊರಟುಹೋದ ಮೇಲೆ ಆ ಕುರುಬರು – ನಾವು ಈಗಲೇ ಬೆತ್ಲೆಹೇಮಿಗೆ ಹೋಗಿ ಕರ್ತನು ನಮಗೆ ತಿಳಿಯಪಡಿಸಿದ ಈ ಸಂಗತಿಯನ್ನು ನೋಡೋಣ ನಡೆಯಿರಿ ಎಂದು ತಮ್ಮತಮ್ಮೊಳಗೆ ಮಾತಾಡಿಕೊಂಡು ತಟ್ಟನೆ ಹೋಗಿ ಮರಿಯಳನ್ನೂ ಯೋಸೇಫನನ್ನೂ ಗೋದಲಿಯಲ್ಲಿ ಮಲಗಿರುವ ಆ ಕೂಸನ್ನೂ ಕಂಡುಕೊಂಡರು. ಅದನ್ನು ನೋಡಿದಾಗ ಅವರು ಆ ಮಗುವಿನ ವಿಷಯದಲ್ಲಿ ತಮಗೆ ಹೇಳಿದ್ದ ಮಾತನ್ನು ತಿಳಿಯಪಡಿಸಿದರು. ಅದನ್ನು ಕೇಳಿದವರೆಲ್ಲರೂ ತಮಗೆ ಕುರುಬರು ಹೇಳಿದ ಮಾತುಗಳಿಗೆ ಆಶ್ಚರ್ಯಪಟ್ಟರು. ಆದರೆ ಮರಿಯಳು ಆ ಮಾತುಗಳನ್ನೆಲ್ಲಾ ತನ್ನ ಮನಸ್ಸಿನಲ್ಲಿ ಇಟ್ಟುಕೊಂಡು ಯೋಚಿಸುತ್ತಿದ್ದಳು.

# "ಭವ್ಯವಾದ ಪ್ರಕಟನೆ"

## ರೀಪ್ರಿಂಟ್ ಪುಟ 3700

### "ಈ ಹೊತ್ತು ನಿಮಗೋಸ್ಕರ ದಾವೀದನೂರಿನಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ ಆತನು ಕರ್ತನಾಗಿರುವ ಕ್ರಿಸ್ತನೇ"

ಪ್ರತಿಯೊಬ್ಬ ದೇವರ ಮಗನಿಗೆ ತಾನು ಕೃಪೆಯಲ್ಲಿಯೂ ಜ್ಞಾನದಲ್ಲಿಯೂ ಬೆಳೆದಂತೆಲ್ಲಾ ಬೆತ್ಲೆಹೇಮಿನ ಬಯಲಿನಲ್ಲಿ ದೇವದೂತರು ಕುರುಬರಿಗೆ ನೀಡಿದ ಸಂದೇಶವು ಹೆಚ್ಚು ಹೆಚ್ಚು ಅಮೂಲ್ಯವಾಗುತ್ತಾ ಬರುತ್ತದೆ. ತನ್ನ ಮನೋನೇತ್ರ ಮತ್ತು ಕಿವಿಗಳು ದೇವರ ಯುಗಯುಗಾಂತರಗಳ ಮಹಾ ಯೋಜನೆಯ ಉದ್ದ ಅಗಲಗಳಿಗೆ ವಿಶಾಲವಾಗಿ ತೆರೆದಹಾಗೆಲ್ಲಾ ಈ ಪ್ರವಾದನಾ ಸಂದೇಶವು ಇಡೀ ಸುವಾರ್ತೆಯ ಸಂಕ್ಷಿಪ್ತವಾದ ಒಂದು ನಿರೂಪಣೆಯಾಗಿ ಬಹು ಶ್ರೇಷ್ಟವೆಂದು ಎಣಿಸಲ್ಪಡುತ್ತದೆ. ಈ ಸಂದೇಶಕ್ಕೆ ತಳಹದಿಯಾಗಿರುವ ರಕ್ಷಕನ ಜನನದ ಈ ವಿಶೇಷ ಸಂಗತಿಗೆ ಪದೇ ಪದೇ ನಮ್ಮ ಗಮನವನ್ನು ಹರಿಸುವುದು ಅತಿಯಾದುದು ಎನಿಸುವುದಿಲ್ಲ. ಕರ್ತನ ಜನನದ ನಿಜವಾದ ವಾರ್ಷಿಕೋತ್ಸವವು ಡಿಸೆಂಬರ್ ತಿಂಗಳಿನ 25ನೇ ದಿನವಲ್ಲ ವೆನ್ನುವುದು ಗಮನಾರ್ಹವಾದುದಲ್ಲ. ಅದು ಗಬ್ರಿಯೇಲ್ ದೇವದೂತನು ಮರಿಯಳಿಗೆ ಯೇಸುವಿನ ಜನನವನ್ನು ಮುಂತಿಳಿಸಿದ ದಿನವಾಗಿರುವ ಸಾಧ್ಯತೆಯಿದೆ. ಕ್ಯಾಲೆಂಡರ್ ಪ್ರಕಾರ ಒಂಭತ್ತು ತಿಂಗಳಿನ ನಂತರ ಅಥವಾ ಅಕ್ಟೋಬರ್ ತಿಂಗಳಿನ ಒಂದನೆ ತಾರೀಖಿನ ಸುಮಾರಿನಲ್ಲಿ ನಮ್ಮ ಕರ್ತನು ಜನಿಸಿರಲಾಗಿ, ಇದು ಮರಿಯಳು ಗರ್ಭಧರಿಸಿದ ದಿನದ ವಾರ್ಷಿಕೋತ್ಸವ ವಾಗಿರುತ್ತದೆ. ಮನುಕುಲಕ್ಕೆ ಬಹು ವಿಶೇಷವಾಗಿರುವ ಒಬ್ಬ ಅತಿ ಶ್ರೇಷ್ಠನ ಜನನ ಮರಣ ಪುನರುತ್ಥಾನಗಳನ್ನು ನೆನಸಿ ಸಂಭ್ರಮಿಸುವುದು ಆತನು ನಮ್ಮ ಮಾನವ ಸಂತತಿಗೆ ಮಾಡಿರುವಂತದ್ದನ್ನು ಮನವರಿಕೆಯಾದವರಿಗೆ ಯಾವ ದಿನದಲ್ಲಿಯಾದರೂ ಎಲ್ಲಾ ದಿನದಲ್ಲಿಯಾದರೂ ಆಗಬಹುದು. ಕ್ರೈಸ್ತರಲ್ಲಿ ಬಹು ಪಾಲು ಜನ ಡಿಸೆಂಬರ್ 25ನೇ ತಾರೀಖಿನಂದು ಕರ್ತನ ಜನನವನ್ನು ಆಚರಿಸುವುದನ್ನು ಅನಂತರದಲ್ಲಿ ರೂಢಿ ಮಾಡಿಕೊಂಡಿರುವುದನ್ನು ವಿರೋಧಿಸುವ ಅಗತ್ಯ ನಮಗಿಲ್ಲ. ಆದರೆ ಆ ದಿನದಲ್ಲಿ ಹೃದಯಪೂರ್ವಕವಾಗಿ ಹರ್ಷಗೊಂಡವರೊಡನೆ ಸೇರಿ ಒಬ್ಬರಿಗೊಬ್ಬರು ಉಡುಗೊರೆ ಮತ್ತು ನೆನಪಿನ ಕಾಣಿಕೆಗಳನ್ನು ಕೊಟ್ಟು, ನಮ್ಮ ವಿಮೋಚನೆಗಾಗಿ ತನ್ನ ಮಗನನ್ನು ಪ್ರೀತಿಕರುಣಾತಿಶಯಗಳಿಂದ ಕೂಡಿದ ವರವಾಗಿ ನೀಡಿದ ದೇವಾನುಗ್ರಹವನ್ನು ಹೀಗೆ ಅನುಕರಣೆ ಮಾಡಿದಂತಾಗುವುದು. ನಾಲ್ಕು ಸಾವಿರ ವರುಷಗಳಿಗೂ ಮಿಗಿಲಾಗಿ ದೇವರ ವಾಗ್ದಾನವನ್ನು ಅಸ್ಪಷ್ಟತೆಯ ರೂಪದಲ್ಲಿ ಮಾನವಕುಲಕ್ಕೆ ನೀಡಲಾಗಿದ್ದು, ಅದರಲ್ಲಿ ಏದೇನಿನಲ್ಲಿ ಆದಿ ತಂದೆಯಾದ ಆದಾಮನ ಅವಿಧೇಯತೆಯ ಮೂಲಕ ಲೋಕಕ್ಕೆ ಬಂದ ಪಾಪ ಮರಣಗಳೆಂಬ ಘೋರ ಶಾಪವನ್ನು ತೆಗೆದುಹಾಕಿ, ಆ ವಿನಾಶಕಾರಿ ಶಾಪಕ್ಕೆ ಬದಲಾಗಿ ಜೀವಕರವೂ ನವಚೈತನ್ಯದಾಯಕವೂ ಆದ ದೇವಾಶೀರ್ವಾದವು ಕಡೆಯಲ್ಲಿ ಬರುವುದನ್ನು ತಿಳಿಸಲಾಗಿತ್ತು. ಈ ಪಾಠವು ಹಿಂದಿನ ಕಾಲಗಳಿಂದ ಕರ್ತನ ಜನನದವರೆಗೂ ವಿಶೇಷವಾಗಿ ದೇವಾನುಗ್ರಹವಾದವರೂ ಒಡಂಬಡಿಕೆಯಲ್ಲಿ ಬಂದವರೂ ಆದ ಯೆಹೂದ್ಯರಿಗೆ ವಿವಿಧ ಮಾದರಿಗಳು ಸಂಕೇತಗಳು ಹಾಗೂ ಅಸ್ಪಷ್ಟ ವಾಗ್ದಾನಗಳ ರೂಪದಲ್ಲಿ ಬಂದಿತ್ತು. ಅಲ್ಲದೆ ಯೆಹೂದ್ಯರು ವ್ಯಾಪಾರ ಮನೋಭಾವದವರಾಗಿದ್ದು ಅವರಲ್ಲಿ ಹಲವರು ನಾಗರೀಕ ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ಕಂಡುಬಂದಿರಲು ಇವರ ಮೂಲಕ ಒಬ್ಬನೇ ದೇವರ ಮೇಲಿನ ನಂಬಿಕೆ ಮತ್ತು ಒಬ್ಬ ಮೆಸ್ಸೀಯನ ವಿಷಯವಾದ ಇಸ್ರಾಯೇಲ್ಯರ ನಿರೀಕ್ಷೆಯು ಪ್ರತಿಯೊಂದು ಜನಾಂಗಗಳಿಗೆ ಹೆಚ್ಚುಕಡಿಮೆಯಾಗಿ ತಿಳಿಸಲ್ಪಟ್ಟಿರು ವುದರಿಂದ ಕರ್ತನ ಜನನದ ಸಮಯದಲ್ಲಿ ನಾವು ಓದುವುದು. "ಎಲ್ಲಾ ಜನಗಳೂ ಬೇಗನೆ ಬರಲಿರುವ ಮೆಸ್ಸೀಯನ ನಿರೀಕ್ಷೆಯಲ್ಲಿದ್ದರು". ನಿಸ್ಸಂದೇಹವಾಗಿಯೂ ಈ ನಿರೀಕ್ಷೆಯು ದಾನಿಯೇಲನ ಪ್ರವಾದನೆಯ ಅರ್ಥವಿವರಣೆಗಳ ಮೇಲೆ ಆಧಾರಗೊಂಡಿರುವುದು. ಇದು ನಮ್ಮ ಕರ್ತನು 30ನೆಯ ವಯಸ್ಸಿಗೆ ಬಂದು ಪ್ರಾಪ್ತ ವಯಸ್ಕನಾಗಿ ಪವಿತ್ರಾತ್ಮದಾನ ಪಡೆದು ನಿಜರೂಪದ ಶ್ರೇಷ್ಠ ಮಹಾಯಾಜಕನಾಗಿ ಹಾಗೂ ಇಸ್ರಾಯೇಲ್ಯರ ಮತ್ತು ಲೋಕಕ್ಕೆ ಮಹಾರಾಜನಾಗಿ ಅಭಿಷೇಕ ಹೊಂದಿ ತನ್ನ ಕಾರ್ಯಕ್ಕೆ ಪ್ರತಿಷ್ಠಿಸಿಕೊಂಡ ವರುಷದ ಗುರುತೆಂಬುದನ್ನು ಈಗ ನಾವು ಸ್ಪಷ್ಟವಾಗಿ ಕಾಣುತ್ತೇವೆ.

## ಬೆತ್ಲೇಹೇಮಿನಿಂದ ನಜರೇತಿಗೆ

ಹಿಂದಿನ ಕಾಲಗಳಲ್ಲಿ ಗೌರವದ ಹೆಸರು ಪಡೆದ ಪಟ್ಟಣಗಳು ಹಾಗೂ ಕೆಟ್ಟ ಹೆಸರಿನ ಪಟ್ಟಣಗಳು ಇದ್ದವು. ನಜರೇತ್ ಎಂಬುದು ಸಾಮಾನ್ಯವಾಗಿ ಎರಡನೇ ಗುಂಪಿನದೆಂದು ಗುರುತಿಸಲಾಗಿದ್ದು, ಬೆತ್ಲೇಹೇಮ್ ಎಂಬುದು ಇಸ್ರಾಯೇಲ್ಯರ ಪ್ರಿಯ ಅರಸನಾದ ದಾವೀದನ ಪಟ್ಟಣವಾಗಿ ಮೊದಲನೇ ಗುಂಪಿಗೆ ಸೇರಿದ ಒಂದು ವಿಶಿಷ್ಟವಾದ ಪಟ್ಟಣವಾಗಿತ್ತು. ಸತ್ಯವೇದವು ನಮಗೆ ವಿವರಿಸಿ ಹೇಳುವುದೆಂದರೆ ನಮ್ಮ ಕರ್ತನ ತಾಯಿಯಾದ ಮರಿಯಳು ಮತ್ತು ಆಕೆಯ ಗಂಡನಾದ ಯೋಸೇಫ ಇವರಿಬ್ಬರೂ ದಾವೀದನ ಮನೆತನದವರಾಗಿದ್ದು, ಮೆಸ್ಸೀಯನು ಬೆತ್ಲೆಹೇಮಿನಲ್ಲಿ ಹುಟ್ಟುವನೆಂಬ ಪ್ರವಾದನೆಯು ಆಕಸ್ಮಿಕ ರೀತಿಯಲ್ಲಿ ನೆರವೇರುವಂತೆ ಕಂಡು ಬಂದಿರುವುದು. – ಮೀಕ 5:2. ಆ ಕಾಲದಲ್ಲಿ ರೋಮ್ ಸಾಮ್ರಾಜ್ಯವು ಲೋಕದಲ್ಲೆಲ್ಲಾ ಆಳ್ವಿಕೆಯನ್ನು ಹೊಂದಿದ್ದು. ಯೆಹೂದ್ಯರು ಅದಕ್ಕೆ ಅಧೀನರಾಗಿದ್ದರೂ ತಮ್ಮನ್ನು ಈ ಅಧೀನತೆಯಿಂದ ಬಿಡಿಸಿ ತನ್ನ ರಾಜ್ಯದಲ್ಲಿ ಲೋಕವನ್ನಾಳುವ ವರ್ಗದವರನ್ನಾಗಿ ಮಾಡಲಿರುವ ಮೆಸ್ಸೀಯನ ಬರುವಿಕೆಯನ್ನು ನಿರೀಕ್ಷಿಸಿ ಅದಕ್ಕೆ ಅವಿರತವಾಗಿ ಕಾಯುತ್ತಿದ್ದರು. ರೋಮ್ ಸಾಮ್ರಾಜ್ಯದ ದೊಡ್ಡ ಚಕ್ರವರ್ತಿಯಾದ ಔಗುಸ್ತ ಸೀಸರನು ಆ ಕಾಲದಲ್ಲಿ ಅಧಿಕಾರದಲ್ಲಿದ್ದು ಕಂದಾಯ ವಸೂಲಿಯ ಉದ್ದೇಶದಿಂದ ಲೋಕದಲ್ಲೆಲ್ಲಾ ಜನಗಣತಿ ಅಥವಾ ಖಾನೇಶುಮಾರಿ ಮಾಡಲು ತನ್ನ ಆಜ್ಞೆಯನ್ನು ಹೊರಡಿಸಿದ್ದನು. ಈ ರಾಜಾಜ್ಞೆಯ ಅನುಸಾರ ಯೋಸೇಫನು ಮತ್ತು ಮರಿಯಳು ತಮ್ಮ ಹೆಸರುಗಳನ್ನು ಬರೆಸಿಕೊಳ್ಳುವುದಕ್ಕಾಗಿ ತಮ್ಮ ಹುಟ್ಟೂರಿಗೆ

ಹೋದರು. ಮತ್ತು ಯೇಸುವು ಹೀಗೆ ಬೆತ್ಲೇಹೇಮಿನಲ್ಲಿ ಜನಿಸುವಂತಾಯಿತು. ಅಲ್ಲದೆ ಆ ಸಮಯದಲ್ಲಿ ಇದೇ ಕಾರಣಕ್ಕಾಗಿ ಬಹು ಜನರು ಬಂದಿರಲು ಅಲ್ಲಿ ಇಳಿದುಕೊಳ್ಳುವುದಕ್ಕೆ ಸ್ಥಳದ ಅಭಾವ ಉಂಟಾಗಿರಲಾಗಿ ಕೆಲವರು ಛತ್ರದ ಅಥವಾ ಪ್ರವಾಸಿ ಮಂದಿರದ ಕೊಟ್ಟಿಗೆಯನ್ನು ಇಳುಕೊಳ್ಳಲು ಬಳಸಿಕೊಂಡಿದ್ದರು. ಯೋಸೇಫನು ಮತ್ತು ಮರಿಯಳು ತಡವಾಗಿ ಬಂದಿರಲು ಈ ದೀನ ಸ್ಥಿತಿಯ ವಸತಿಯಲ್ಲಿ ಇಳಿದುಕೊಳ್ಳಲೇಬೇಕಾಯಿತು. ಹೀಗೆ ಮುಂದೆ ಲೋಕವನ್ನೆಲ್ಲಾ ಆಳ್ವಿಕೆ ಮಾಡಲಿರುವ ಮಹಿಮೆಯುಳ್ಳ ಅರಸನು ತಾನು ಮನುಷ್ಯನಾಗಿದ್ದ ಕಾಲದಲ್ಲಿ ಕೊಟ್ಟಿಗೆಯಲ್ಲಿ ಗೋದಲಿಯನ್ನು ಮಂಚವನ್ನಾಗಿಸಿಕೊಂಡು ಹುಟ್ಟಿದನು.

## ದೇವದೂತರೂ ಮತ್ತು ಕುರುಬರೂ

ಮೆಸ್ಸೀಯನಾದ ಯೇಸುವಿನ ಜನನದ ವಿಷಯವಾಗಿ ಸರ್ವಶಕ್ತನಿಂದ ದೂತರ ಮೂಲಕವಾಗಿ ಸಂದೇಶ ನೀಡಲ್ಪಟ್ಟ ವರಾದ ಕುರುಬರು ಘನವಂತರಿರಬೇಕು. ಆ ಸಂದೇಶವು ಕಾಲದುದ್ದಕ್ಕೂ ಹರಿದು ಬಂದು ನಮ್ಮ ಕಿವಿಗಳಿಗೂ ಬಿದ್ದಿದ್ದು, ನಾವು ಅದರ ಅರ್ಥವನ್ನು ಅಧಿಕವಾಗಿ ಗ್ರಹಿಸ ಶಕ್ತರಾದಷ್ಟೂ ನಮ್ಮನ್ನು ಅದು ಹೆಚ್ಚು ಪುಳಕಿತರನ್ನಾಗ ಮಾಡುತ್ತದೆ. ಮೊದಲು ಒಬ್ಬ ದೇವದೂತನು ಕುರುಬರಿಗೆ ಕಾಣಿಸಿಕೊಂಡು ಅವರಿಗಾದ ಭಯವನ್ನು ನಿವಾರಿಸಲು ಹೀಗೆ ಹೇಳಿದನು – "ಹೆದರಬೇಡಿರಿ, ಕೇಳಿರಿ, ನಿಮಗೆ ಶುಭ ಸಂದೇಶವನ್ನು ತಂದಿದ್ದೇನೆ" ಹೆದರಿಕೆ ಎನ್ನುವುದು ವಿಶೇಷವಾಗಿ ದೇವರಿಂದ ಏನಾದರೂ ಪ್ರಕಟನೆ ಹೊಂದುವ ಸಮಯದಲ್ಲಿ ಮಾನವನ ಮನಸ್ಸಿನಲ್ಲಿ ಉಂಟಾಗುವ ಪ್ರಭಲವಾದ ಪ್ರವೃತ್ತಿಗಳಲ್ಲಿ ಒಂದು. ಮಾನವರಲ್ಲಿ ಉತ್ತಮರಾದವರೂ ಸಹ ತಾವು ಅಪೂರ್ಣರೆಂಬುದನ್ನೂ ಮತ್ತು ದೇವರು ಮತ್ತು ಆತನ ನಿಯಮಗಳು ಪರಿಪೂರ್ಣವೆಂಬುದನ್ನು ಅರಿತಿರುವರು. ಸರ್ವಶಕ್ತನ ಶಾಪ ಅಥವಾ ದಂಡನೆಯು ತನ್ನ ಮೇಲಿರುವುದೆಂದು ಲೋಕವು ತನ್ನ ಸಹಜ ಪ್ರವೃತ್ತಿಯಿಂದ ಅರಿತಿರುವಂತೆ ತೋರುತ್ತದೆ. ಮತ್ತು ತನ್ನಲ್ಲಿ ಸತತವಾಗಿ ಹೆಚ್ಚುತ್ತಿರುವ ಪಾಪ ಸ್ವಭಾವಗಳ ಅರಿವನ್ನು ತಾನು ಹೊಂದಿದ್ದು ಇದಕ್ಕೂ ಹೆಚ್ಚಿನ ಶಾಪ ಮತ್ತು ಹೆಚ್ಚಿನ ದಂಡನೆಗಳಿಗೆ ಸಹಜವಾಗಿ ಹೆದರುವ ಪ್ರವೃತ್ತಿಯಲ್ಲಿರುವುದು. ದೇವರ ಗುಣಗಳ ಮತ್ತು ಯೋಜನೆಯ ಬಗ್ಗೆ ಚೆನ್ನಾಗಿ ತಿಳುವಳಿಕೆ ಹೊಂದಿರುವ ಕೆಲವೇ ಕೆಲವರನ್ನುಳಿದು ಇತರ ಎಲ್ಲರ ವಿಷಯವಾಗಿ ಹೋಲಿಸಿ ನೋಡಿದಲ್ಲಿ ಈ ದಿನದಲ್ಲೂ ಈ ವಿಷಯವು ನಿಜವಾಗಿಯೂ ಹೀಗೆಯೇ ಇರುತ್ತದೆ. ಹೀಗಾಗಿ ಧರ್ಮವೆನ್ನುವುದು ಸಾಧಾರಣವಾಗಿ ಪ್ರಪಂಚದವರೆಲ್ಲರಿಗೆ ಜಿಗುಪ್ಸೆಯ ವಿಷಯ ವಾಗಿರುತ್ತದೆ. ಏಕೆಂದರೆ ಅದರಲ್ಲಿನ ಪಾಪ ಪ್ರಜ್ಞೆಯ ಭಾವನೆ ಮತ್ತು ಹೆಚ್ಚಾದ ತಿಳುವಳಿಕೆಯಿಂದ ಉಂಟಾಗುವ ದಂಡನೆಯ ಭಯದ ಕಾರಣ ಅವರು ಈ ವಿಷಯದಿಂದ ದೂರವಿರಲು ಇಷ್ಟಪಡುತ್ತಾರೆ. ಆ ಕಾಲದಲ್ಲಿ ದೇವದೂತರ ವಿಷಯದಲ್ಲಿದ್ದಂತೆ ಈಗಿನ ಕಾಲದಲ್ಲಿ ನಿಜವಾದ ದೇವರ ಮಕ್ಕಳು – ಲೋಕದವರಿಗೆ ತಮ್ಮಲ್ಲಿರುವ ಭಯ ಉಂಟು ಮಾಡುವ ವಿಷಯಗಳಿಗಿಂತಲೂ ದೇವರ ವಿಷಯವು ಉತ್ತಮವೆಂಬುದನ್ನೂ, ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ಅದನ್ನು ಆದಾಮನಿಂದ ಬಾಧ್ಯವಾಗಿ ಅವರೆಲ್ಲರಿಗೆ ಬಂದ ಆತನ ಅಪರಿಪೂರ್ಣತೆ ಮತ್ತು ಮರಣವೆಂಬ ನ್ಯಾಯವಾದ ದಂಡನೆಯಿಂದ ವಿಮೋಚಿಸಲಿರುವ ವಿಷಯವಾಗಿ ಹೇಳಿ ಅವರಲ್ಲಿ ಭರವಸೆ ಮೂಡಿಸಬೇಕಿರುವುದು. "ಶುಭ ಸಮಾಚಾರ" ಎನ್ನುವುದು ನಾವು "ಸುವಾರ್ತೆ" ಎನ್ನುವ ಶಬ್ದದ ಇನ್ನೊಂದು ಭಾಷಾಂತರ. ಸುವಾರ್ತೆಯು ನಿಜವಾದ ರೀತಿಯಲ್ಲಿಯೂ ಮತ್ತು ಸತ್ಯವಾಗಿಯೂ ಶುಭದ ಸಮಾಚಾರವೆನ್ನುವ ಅಂಶವು ಎಷ್ಟೋ ಸೊಗಸಾದುದು. ಅಯ್ಯೋ, ದೇವರ ಯೋಜನೆಯನ್ನು ತಪ್ಪಾಗಿ ನಿರೂಪಿಸಿ ಆತನ ಸೇವಕರಾಗಿ ತಮ್ಮನ್ನು ತೋರ್ಪಡಿಸಿಕೊಳ್ಳುವ ಜನರ ಸಂಗತಿಗಳು. ಅವರು ದೇವರ ಗುಣ ಆತನ ವಾಕ್ಯದ ಬಗ್ಗೆ ತಪ್ಪು ವಿವರಣೆ ನೀಡಿ, "ಸುವಾರ್ತೆ" ಎಂಬುದನ್ನು (ಡಾರ್ಕ್ ಏಜಸ್ ಎನ್ನುವ) ಕತ್ತಲೆ ಯುಗದಲ್ಲಿ ಕಲ್ಪಿಸಲಾದ ತಮ್ಮ ವಿವಿಧ ಬೋಧನೆಗಳಾದ ಮರಣಾ ನಂತರದಲ್ಲಿ ಆತ್ಮವನ್ನು ಶುದ್ಧಗೊಳಿಸಬೇಕಿರುವ "ಪರ್ಗೆಟರಿ" ಎಂಬ ಸ್ಥಳ ಮತ್ತು ನಿತ್ಯ ಯಾತನೆಯು ಮಾನವಕುಲದವರ ಪಾಲು ಎಂಬ ವಿಷಯಗಳಿಗೆ ಅನ್ವಯಿಸಿರುವರು. ನಾವು ಈ ತಪ್ಪಾದ ವಿಷಯಗಳಿಂದ ದೂರವಿದ್ದು ಸುವಾರ್ತೆಯು ಶುಭದ ಸಮಾಚಾರವೆಂಬ ಸತ್ಯವನ್ನು ಪರಿಗ್ರಹಿಸೋಣ. ದೇವದೂತನು ತನ್ನ ಸಂದೇಶವು ಜನರಿಗೆಲ್ಲಾ ಮಹಾ ಸಂತೋಷವನ್ನು ಉಂಟು ಮಾಡುವ ಶುಭ ಸಮಾಚಾರವಾಗಿತ್ತೆಂದು ವಿವರಿಸಿ ಹೇಳಿದನು. ಆಹಾ, ದೇವರಿಗೆ ಸ್ತೋತ್ರ, ಆತನ ಯೋಜನೆಯು ನಮ್ಮ ಎಲ್ಲಾ ಕಲ್ಪನೆಗಳಿಗಿಂತಲೂ ವಿಶಾಲವಾಗಿಯೂ ಆಳವಾಗಿಯೂ ಮತ್ತು ಎತ್ತರವಾಗಿಯೂ ಇರುವಂತದ್ದು. ಸುವಾರ್ತಾ ಸಂದೇಶವನ್ನು ಹೋಲಿಸಿ ನೋಡಿದಾಗ ಈಗ ಕೇಳುವ ಕಿವಿಯುಳ್ಳ ಕಾಣುವ ಕಣ್ಣುಳ್ಳವರಾದ ಕೇವಲ ಕೆಲವರು ಮಾತ್ರ ಅದರ ಸೊಬಗನ್ನು ಕಾಣುವುದಲ್ಲದೆ ದೇವರ ನಿಗದಿತಕಾಲದಲ್ಲಿ ಅದು ಎಲ್ಲಾ ಜನರಿಗೆ ಸಂತೋಷವನ್ನುಂಟು ಮಾಡುವ ಶುಭ ಸಮಾಚಾರವಾಗಲಿರು ವುದು. ಹೇಗೆ ಆದಾಮನ (ಪರಿಪೂರ್ಣತೆಯಿಂದ) ಬಿದ್ದು ಹೋಗಿರುವ ಸ್ವಭಾವದಲ್ಲಿ ಮತ್ತು ಅದರ ಪರಿಣಾಮವಾಗಿ ಬಂದ ಮರಣವೆಂಬ ಶಾಪದಲ್ಲಿ ಆತನ ಸಂತತಿಯ ಪ್ರತಿಯೊಬ್ಬನೂ ಪಾಲನ್ನು ಹೊಂದಿರುವನೋ ಹಾಗೆಯೇ ಯೇಸುವು ಅರ್ಪಣೆಯಾಗಿ ಕಲ್ವಾರಿಯಲ್ಲಿ ನೆರವೇರಿಸಿದ ಎಲ್ಲರ ವಿಮೋಚ ನಾರ್ಥವಾದ ಆತನ ಶ್ರೇಷ್ಠ ಯಜ್ಞದಲ್ಲಿ ಮಾನವ ಸಂತತಿಯ ಪ್ರತಿಯೊಬ್ಬನ ದೋಷಗಳೂ ಸೇರಿಸಲ್ಪಟ್ಟಿದ್ದವು. ಕ್ರಿಸ್ತನಲ್ಲಿ ಸಂಕಲ್ಪಿಸಿ ರುವ ದೇವರ ಯೋಜನೆಯು ಈಗ ನೆರವೇರುತಲಿದ್ದು ಕಡೆಯಲ್ಲಿ ಪೂರ್ಣಗೊಂಡಾಗ ಇದು ಜನರಿಗೆಲ್ಲಾ ಸಂತೋಷವನ್ನುಂಟು ಮಾಡುವದು. ಈ ವಾರ್ತೆಯು ನಮ್ಮ ಕರ್ತನ ಜನನದ ಸಮಯದಲ್ಲೇ ಕೊಡಲ್ಪಟ್ಟಿದ್ದ ಕಾರಣ. ಆತನ ಮೂಲಕವೇ ದೇವರ ಯೋಜನೆ ಮತ್ತು ಅದರ ಭವ್ಯವಾದ ಉದ್ದೇಶವನ್ನು ಒಳಗೊಂಡ ವಿಷಯಗಳು ಕಡೆಯಲ್ಲಿ ಪೂರ್ಣಗೊಳ್ಳುವುದು.

## ದೂತನ ಸಂದೇಶದ ಧ್ಯೇಯೋದ್ದೇಶ ಹಾಗೂ ಅದರ ತರ್ಕಬದ್ಧತೆ

ಈ ಸಂದೇಶವು ವಿಚಾರಶೀಲ ಜನರಿಗಾಗಿರುವುದು ಎಂಬ ಅಂಶವು ಗಮನೀಯ. ಮಾರ್ಪಡಲಾರದ ದೇವರು ಒಂದು ಸಾರಿ ಶಾಪವನ್ನು ವಿಧಿಸಿ ಮುಂದೆ ಒಂದು ಸಮಯದಲ್ಲಿ ಆ ಶಾಪಕ್ಕೆ ಬದಲಾಗಿ ಆಶೀರ್ವಾದವನ್ನು ತರಲು ವಿಷಯಗಳನ್ನು ಮಾರ್ಪಡಿಸಿ ತಿದ್ದುಪಡಿ ಮಾಡಿರುವುದಕ್ಕೆ ಕಾರಣವನ್ನು ಅವರು

ತಿಳಿಯ ಬಯಸುವರು. ದೇವದೂತನು ದೇವರ ಯೋಜನೆಯ
ಮೂಲ ತತ್ವವಾಗಿ ಹೀಗೆ ಹೇಳಿರುವನು. "ಈ ಹೊತ್ತು ನಿಮ –
ಗೋಸ್ಕರ ದಾವೀದನೂರಿನಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ. ಆತನು
ಕರ್ತನಾಗಿರುವ ಕ್ರಿಸ್ತನೇ" ದೇವರು ನೀತಿವಂತನಾಗಿದ್ದಾಗ್ಯೂ
ಯೇಸುವನ್ನು ಅಂಗೀಕರಿಸುವ ಪಾಪಿಗಳನ್ನು ನೀತಿವಂತರೆಂದು
ನಿರ್ಣಯಿಸಲು ಸಾಧ್ಯವಾದುದು ಹೇಗೆ ಎಂಬ ಸುವಾರ್ತೆಯ
ಪೂರ್ಣ ವಿವರಣೆಯನ್ನು ಅರಿಯಲು ಇಲ್ಲಿ ನಮಗೆ ಕೀಲಿಯಂಥ
ಒಂದು ಸಾಧನವಿದೆ. ಇಲ್ಲಿ "ರಕ್ಷಕ" ಎನ್ನುವ ಪದವು ಜೀವ
ದಾಯಕ ಎನ್ನುವುದನ್ನು ಸೂಚಿಸುತ್ತದೆ. ಮಾನವ ಸಂತತಿಯ
ಮೇಲೆ ಶಾಪವಾಗಿ ಬಂದಿರುವ ಮರಣವು ಪಾಪದ ಸಂಬಳ
ವಾಗಿರಲಾಗಿ, ಈಗ ಹುಟ್ಟಿರುವ ಮೆಸ್ಸೀಯನು ಮತ್ತೆ ಜೀವ
ಕೊಡುವುದರ ಮೂಲಕ ಮಾನವ ಸಂತತಿಯನ್ನು ಹೇಗೆ ಈ
ದಂಡನೆಯಿಂದ ಪಾರುಮಾಡಲಿರುವನು ಎಂಬ ಅಂಶವು ಎಷ್ಟೋ
ಸೊಗಸಾದುದು. ಆತನು ಜೀವವನ್ನು ಹೇಗೆ ನೀಡುವನು
ಎನ್ನುವುದರ ವಿವರಣೆ ಅಲ್ಲಿ ನೀಡಿರಲಿಲ್ಲ. ಆ ಸಮಯದಲ್ಲಿ ಅದರ
ಅಗತ್ಯವೂ ಇರಲಿಲ್ಲ. ಆದರೆ ಈಗಿನ ಬೆಳವಣಿಗೆಗಳ ಫಲವಾಗಿ
ಪವಿತ್ರಾತ್ಮನ ಮೂಲಕ ಹೊಸ ಒಡಂಬಡಿಕೆಯಲ್ಲಿ ಅದರ ವಿವರಣೆ
ದೊರೆತಿರಲು ನಮ್ಮ ಕರ್ತನು ತಾನು ನೀತಿವಂತನಾಗಿದ್ದು,
ಅನೀತಿವಂತರಿಗೋಸ್ಕರ ಪ್ರಾಣ ಕೊಡುವುದರ ಮೂಲಕ ಮಾಡಿದ
ತನ್ನ ಜೀವದ ಸ್ವಯಂ ಪ್ರೇರಿತ ಯಜ್ಞಾರ್ಪಣೆಯು ಹೇಗೆ
ಆದಾಮನ ಮತ್ತು ಆತನ ಮೂಲಕ ಪಾರಂಪರ್ಯವಾಗಿ
ಮರಣವಿಧಿಗೆ ಒಳಗಾದವರೆಲ್ಲರ ಪರವಾಗಿ ದೇವರ ನ್ಯಾಯ
ವಿಧಿಗಳ ಬೇಡಿಕೆಗಳನ್ನು ಇತ್ಯರ್ಥಪಡಿಸಿವೆ ಎನ್ನುವುದನ್ನು ಈಗ
ನಾವು ನೋಡುತ್ತೇವೆ. ನಿಜವಾಗಿಯೂ ಯೇಸುವಿನ ಜನನದ
ಮೂಲಕವಾಗಿ ಆಕಾರ ಪಡೆಯಲಾರಂಭಿಸಿದ ನಮ್ಮ ರಕ್ಷಣೆಯ
ವಿಷಯವಾದ ದೇವರ ಯೋಜನೆಯ ಬಗ್ಗೆ ನಾವು ಹೆಚ್ಚಾಗಿ
ದೃಷ್ಟಿಸಿದಷ್ಟು ಹೆಚ್ಚಾಗಿ ಮನು ಪುತ್ರರಿಗೆ ದೊರೆತ ದೇವರ
ಕರುಣೆಯ ಬಗ್ಗೆ ಕೃತಜ್ಞತಾಪೂರ್ವಕವಾಗಿ ದೇವದೂತರ ಗಾನದ
ಮೂಲಕವಾಗಿ ನಾವು ಸಹ ಪರಲೋಕದ ದೇವರನ್ನು ಹರ್ಷ
ಧ್ವನಿಯಿಂದ ಕೊಂಡಾಡ ಬಯಸುತ್ತೇವೆ. ಬೆತ್ಲೆಹೇಮಿನಲ್ಲಿ ಹುಟ್ಟಿದ
ಮಗುವು ಭವಿಷ್ಯತ್ತಿನಲ್ಲಿ ರಕ್ಷಕನಾಗುವವನಿದ್ದು ಆತನು ಮೂವತ್ತು
ವಯಸ್ಸಿಗೆ ಬಂದು ಪೂರ್ಣ ಮನುಷ್ಯನ ಸ್ಥಿತಿಗೆ ತಲುಪಿ ಪ್ರತಿಷ್ಠಿತ
ನಾಗುವವರೆಗೂ ಈ ಕೆಲಸವನ್ನು ನೆರವೇರಿಸಲಾಗ ದೆಂಬುದೂ
ಗಮನಾರ್ಹವಲ್ಲ. ಹೀಗಾಗಿ ತಾನು ಮೂರುವರೆ ವರುಷದ
ಭೂಸಂಬಂಧವಾಗಿರುವ ತನ್ನ ಸೇವೆಯಲ್ಲಿ ಜೀವವನ್ನು ಹಂತ
ಹಂತವಾಗಿ ನೀಡುತ್ತಾ ಕಲ್ವಾರಿಯಲ್ಲಿ ಅದನ್ನು ಮುಕ್ತಾಯ
ಗೊಳಿಸಬೇಕಾಗುವುದು ಅವಶ್ಯವೆಂಬುದೂ ಗಮನಾರ್ಹವಲ್ಲ.
ಪುನರುತ್ಥಾನವು ಇನ್ನು ಮೂರು ದಿನಗಳ ಮೇಲೆ ಎನ್ನುವುದೂ
ಆತನ ದಿವಾರೋಹಣವು ಆನಂತರದಲ್ಲಿ ನಾಲ್ವತ್ತು ದಿನಗಳಾದ
ಮೇಲೆ ಎನ್ನುವುದೂ, ಮತ್ತು ಇದರ ನಂತರ ಎಲ್ಲರಿಗೆ ಸಾಮಾನ್ಯ
ವಾಗಿರುವ ಆಶೀರ್ವಾದವು ಲಭಿಸುವುದನ್ನು ಸುಮಾರು 19
ಶತಮಾನಗಳಿಗೆ ಮುಂದೂಡಲಾಗುವುದೆಂಬುದೂ ಮುಖ್ಯವಲ್ಲ.
ರಕ್ಷಣೆಯ ವಿಷಯವಾದ ದೇವರ ಯೋಜನೆಯ ಮೊದಲ
ಚಿಗುರೊಡೆದಾಗ ದೇವದೂತರು ಹರ್ಷಿಸಿ ಹಾಡಿದಂತೆ ಇದರ
ಅಂತ್ಯ ಫಲದಲ್ಲಿ ವಿಶ್ವಾಸವಿಟ್ಟವರೆಲ್ಲರೂ ಸಹ ಹೇಳಲಶಕ್ಯವಾದ
ಆನಂದದೊಡನೆ ಮೇಲಣ ಲೋಕದಲ್ಲಿರುವ ದೇವರಿಗೂ ಆತನ
ಕುಮಾರನಾದ ನಮ್ಮ ಕರ್ತನಿಗೂ ಸ್ತೋತ್ರವನ್ನು ಅರ್ಪಿಸಬಹುದು.

## “ನಿರೀಕ್ಷೆಯ ಮೂಲಕವಾಗಿ ರಕ್ಷಿಸಲ್ಪಡುವುದು”

ದೇವದೂತರ ಸಂದೇಶವು ನೀಡಿದಂದಿನಿಂದ ಸುಮಾರು
ಹತ್ತೊಂಬತ್ತು ಶತಮಾನಗಳು ಉರುಳಿದರೂ ಒಂದು ಸೀಮಿತ
ಪ್ರಮಾಣದಲ್ಲಿ ನಂಬಿಕೆಯ ಮೂಲಕ ನಂಬುವ ಮನೋನೇತ್ರಗಳು
ಹಾಗೂ ನಂಬುವ ಆತ್ಮೀಕ ಕಿವಿಗಳುಳ್ಳ "ಚಿಕ್ಕ ಹಿಂಡು" ಎನ್ನಿಸಿ
ಕೊಳ್ಳುವ ಕೆಲವರ ವಿಷಯದಲ್ಲೇ ಹೊರತಾಗಿ ಇದು ಇನ್ನೂ
(ಇತರರ ವಿಷಯವಾಗಿ) ನೆರವೇರಿರುವುದಿಲ್ಲ. ಆದರೆ ಇದು ಹೆಚ್ಚು
ಕಡಿಮೆ ಎಲ್ಲರಿಗಿರುವ (ನಿತ್ಯಯಾತನೆ ಎಂಬ) ಮಹಾ
ದುರವಸ್ಥೆಯ ವಿಷಯವಾದ ವಾರ್ತೆಯಾಗಿ ದೇವರ ಯೋಜನೆಗೆ
ಹೆಚ್ಚು ಕಳಂಕವಾಗಿ ಮತ್ತು ದೇವರ ಗುಣಗಳಿಗೆ ಹೆಚ್ಚು ಅಗೌರವ
ತರುವಂತಾಗಿ ಕ್ರಿಸ್ತನ ಹೆಸರಿನಲ್ಲಿ ಲೋಕವೆಲ್ಲಾ ವ್ಯಾಪಿಸಿಕೊಂಡಿದೆ.
ಈ ಸಂದೇಶವು ಸಾಮಾನ್ಯವಾಗಿ ಎಲ್ಲರಿಗೆ ವಿಶೇಷವಾಗಿ ಕರುಣ
ಹೃದಯವುಳ್ಳವರಿಗೆ ಮತ್ತು ಉಧಾರ ಭಾವದವರಿಗೆ, ಸಂತೋಷ
ವನ್ನು ತರುವ ಬದಲು ದುಃಖ ವ್ಯಥೆಗಳನ್ನು ತಂದುಕೊಟ್ಟಿದೆ.
ನಿಜವಾಗಿ ಹೇಳುವುದಾದರೆ, ಕರ್ತನಾದ ಯೇಸುವಿನ ವಿಷಯ
ವಾದ ಯಾವ ಸಂದೇಶವಾಗಲೀ ಅದು ಸತ್ಯವೇ ಆಗಿರಲಿ ಅಥವಾ
ಮಿಥ್ಯವೇ ಆಗಿರಲಿ, ಎಲ್ಲಾ ಜನರಿಗೆ ಎಂದೂ ತಲುಪಿಲ್ಲ. ಈ ದಿನ
ದಲ್ಲೂ ಸಹ. ಹತ್ತೊಂಭತ್ತು ಶತಮಾನಗಳ ಪ್ರಚಾರದ ನಂತರವೂ
ಹೋಲಿಸಿ ನೋಡಿದ್ದಲ್ಲಿ ಆಕಾಶದ ಕೆಳಗೆ ಮನುಷ್ಯರೊಳಗೆ ನಮಗೆ
ರಕ್ಷಣೆಯಾಗುವುದಕ್ಕೆ ಕೊಡಲ್ಪಟ್ಟಿರುವ ಆ ಒಂದೇ ಹೆಸರನ್ನು
ಮನುಕುಲದವರಲ್ಲಿ ಕೇವಲ ಕೆಲವೇ ಜನರು ಇದುವರೆಗೆ
ಕೇಳಿರುವರು. –"ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ
ಸಿಕ್ಕುವುದಿಲ್ಲ." – ಅಪೋಸ್ತಲರ ಕೃತ್ಯಗಳು 4:12. ಯಾರು ಕ್ರಿಸ್ತನನ್ನು
ನಿಜವಾಗಿಯೂ ತಮ್ಮ ರಕ್ಷಕನೆಂದು ಅಂಗೀಕರಿಸಿರುವರೋ,
ಯಾರು ಇಂಥ ಸ್ಥಿತಿಯಲ್ಲಿದ್ದು ಈ ದಿನ ಆತನಲ್ಲಿ ಆನಂದಿಸುತ್ತಿರು
ವರೋ, ಯಾರಲ್ಲಿ ದೇವರ ರಕ್ಷಣಾ ಕಾರ್ಯವು ತಮ್ಮ ಹೃದಯ
ಗಳಲ್ಲಿ ಆರಂಭವಾಗಿದ್ದು ಇನ್ನೂ ಅದು ಆಕಾಶದ ಕೆಳಗೆ (ಭೂಮಿ
ಯಲ್ಲಿ) ಪೂರ್ಣವಾಗಿ ನೆರವೇರಲಿರು ವುದನ್ನು ಅವರು ನಂಬಿಕೆ
ಯಿಂದ ನೋಡುತ್ತಿರು ವರೋ, ಇವರ ವಿಷಯವಾಗಿ ನಾವು
ಏನು ಹೇಳಬೇಕು? ಇದನ್ನು ಅಪೋಸ್ತಲನು ನಿರೀಕ್ಷೆಯ ಮೂಲಕ
ವಾದ ರಕ್ಷಣೆ ಎಂದು ಕರೆದಿರುವನು. ಆತನ ಮಾತುಗಳು "ನಾವು
ನಿರೀಕ್ಷೆಯ ಮೂಲಕ ರಕ್ಷಿಸಿಲ್ಪಟ್ಟಿದ್ದೇವೆ" (ರೋಮಾ. 8:24) ನಾವು
ನಿಜವಾದ ಅರ್ಥದಲ್ಲಿ ಇನ್ನೂ ರಕ್ಷಿಸಲ್ಪಡಲಿಲ್ಲ. ಪಾಪ ನೋವು
ನಿಟ್ಟುಸಿರು ರೋಧನ ಮತ್ತು ಸಾವು ಇವುಗಳಿಂದ ನಾವು ಇನ್ನೂ
ಆವರಿಸಲ್ಪಟ್ಟಿದ್ದೇವೆ. ಶಾಪವು ಇನ್ನೂ ತೆಗೆದು ಹಾಕಲ್ಪಡಲಿಲ್ಲ.
ಕರ್ತನ ಜನರು ಹೊಂದಿದವುಗಳಲ್ಲಿ ಉತ್ತಮವಾದದ್ದೆಂದರೆ
ನಂಬಿಕೆಯ ಮೂಲಕವಾಗಿರುವ ರಕ್ಷಣೆಯ ನಿರೀಕ್ಷೆ. ಆದರೂ
ಭವಿಷ್ಯತ್ತಿನಲ್ಲಿ ನೆರವೇರಲಿರುವ ಈ ರಕ್ಷಣೆಯ ವಿಷಯವಾದ
ನಿರೀಕ್ಷೆಯು ಅಂದರೆ ಸತ್ತವರಿಗಾಗುವ ಪುನರುತ್ಥಾನ. ನಂಬಿ
ಗಸ್ತರಿಗೆ ವಾಗ್ದಾನಮಾಡಲ್ಪಟ್ಟ ದೈವಸ್ವಭಾವದಲ್ಲಿ ಅಡಕವಾಗಿ ರುವ
ಪ್ರಭಾವ ಮಾನ ನಿರ್ಲಯತ್ವಗಳಲ್ಲಿ ಪಾಲುಗಾರಿಕೆ ಇವುಗಳು ಎಷ್ಟು
ಬಲವಾಗಿದ್ದು ಎಷ್ಟು ಸ್ಪಷ್ಟವಾದ ರೀತಿಯಲ್ಲಿರುವುದೆಂದರೆ, ಇದನ್ನು
ಹೊಂದಿದವರು ಮಾನವ ಕುಲದ ಮೇಲೆ ಇನ್ನೂ ಅವರಿಸಿರುವ
ಶಾಪದ ದೆಸೆಯಿಂದಾದ ಪರಿಶೋಧನೆಗಳ ಕಷ್ಟ ಬಲಹೀನತೆಗಳ
ಪ್ರತಿಕೂಲ ಸ್ಥಿತಿಗಳ ನಡುವೆಯೂ ಅವರು ನುಡಿಯಲಶಕ್ಯವಾದ
ಸಂತೋಷದಿಂದ ಉಲ್ಲಾಸಿಸ ಶಕ್ತರಾಗಿರುವರು.

## ಶುಭ ಸಂಗತಿಗಳ ವಿಷಯವಾದ ಒಂದು ಪ್ರವಾದನೆ

ಹೌದು, ದೇವದೂತನ ಸಂದೇಶವು ಕ್ರೈಸ್ತ ಸಭೆಯ ವಿಷಯದಲ್ಲಿ ಮತ್ತು ಸಾವಿರ ವರುಷದ ಕಾಲದಲ್ಲಿ ಲೋಕದವರ ವಿಷಯದಲ್ಲಿ ನೆರವೇರಲಿರುವ ಶುಭ ಸಂಗತಿಗಳ ವಿಷಯವಾದ ಒಂದು ಪ್ರವಾದನೆಯಾಗಿತ್ತು. ಸಭೆ ಆಶೀರ್ವಾದವನ್ನು ಮೊದಲು ಹೊಂದಲಿರುವುದು. ಕೇವಲ ಕ್ರಿಸ್ತನೊಡನೆ ಸಾವಿರ ವರುಷದಲ್ಲಿ ಜೀವಿಸಿ ಆಳಲಿರುವ ಧನ್ಯರೂ ಪರಿಶುದ್ಧರೂ ಆದವರು ಮಾತ್ರ ಮೊದಲನೇ ಪುನರುತ್ಥಾನದಲ್ಲಿ ಸೇರಿದವರು, ಆ ಸಾವಿರ ವರುಷದಲ್ಲಿ ಸೈತಾನನನ್ನು ಬಂಧಿಸಿಡುವಾಗ ಸತ್ಯ ನೀತಿಗಳು ಒಳ್ಳೆ ಪ್ರಭಾವ ಬೀರಿ ಅವುಗಳ ಅರಿವು ಲೋಕದಲ್ಲೆಲ್ಲಾ ಮೂಡಿಸುವುದು. ಶಾಸ್ತ್ರ ವಚನವು ಪ್ರಕಟ ಮಾಡಿರುವುದೆಂದರೆ ಸಭೆಯ ಬಿಡುಗಡೆಯು ಸಾವಿರ ವರುಷವೆಂಬ ದಿನದ ಮುಂಜಾನೆಯಲ್ಲಿ ಬರುವುದು. ಪ್ರವಾದಿಯು ಪ್ರಕಟಿಸಿರುವ ಹಾಗೆ, "ಉದಯಕಾಲದಲ್ಲಿಯೇ ದೇವರು ಇದರ ಸಹಾಯಕ್ಕೆ ಬರುವನು" (ಕೀರ್ತನೆ 46:5). ಆದರೆ ಈಗ ನಮ್ಮ ಮುಂದೆ ಇಡಲಾಗಿದ್ದು ಈಗ ನಾವು ಅದನ್ನು ನೋಡಿ ನಂಬಿರುವ, ಅದರಿಂದ ಈಗ ಹೇಳಲಶಕ್ಯವಾದ ಸಂತೋಷದಿಂದ ಆನಂದಿಸುತ್ತಿರುವ, ಈ ಸುವಾರ್ತೆಯಲ್ಲಿ ಅಡಕವಾಗಿರುವ ಪ್ರಭಾವವುಳ್ಳ ನಿರೀಕ್ಷೆಯಲ್ಲಿ ಅಧಿಕಾಧಿಕವಾಗಿ ಆನಂದಿಸುವರಾಗಿದ್ದೇವೆ. ದೇವರ ಪ್ರೀತಿ ಕರುಣೆಗಳ ಉದ್ದ ಅಗಲ ಎತ್ತರ ಆಳ ಎಷ್ಟಿರುವುದೆಂದರೆ ಅದು ಮನುಕುಲವನ್ನೆಲ್ಲಾ ವ್ಯಾಪಿಸಿದ್ದು ನಮ್ಮನ್ನು ಪ್ರೀತಿಸಿ ತನ್ನ ಅಮೂಲ್ಯ ರಕ್ತದಿಂದ ವಿಮೋಚಿಸಿದವನ ಮೂಲಕವಾಗಿ ಆದಾಮನ ಸಂತತಿಯ ಪ್ರತಿಯೊಬ್ಬ ಸದಸ್ಯನಿಗೂ ಇದರಿಂದ ಆಶೀರ್ವಾದ ಉಂಟಾಗಲಿರುವುದು. ಇದು ನಮಗೆ ಸಂತೋಷದ ವಿಷಯ. ದೇವದೂತನು ಹೇಳಿರುವ ಈ ಪ್ರವಾದನೆಯು ಸಾವಿರ ವರುಷದ ಸಮಯದಲ್ಲಿ ನೆರವೇರುವುದು. ಮತ್ತು ಈಗಾಗಲೇ ತನ್ನ ಯಜ್ಞದ ಮೂಲಕ ನಮ್ಮನ್ನು ವಿಮೋಚಿಸಿರುವ ದಿವ್ಯ ರಕ್ಷಕನೂ ಪ್ರಭಾವ ಹೊಂದಿರುವ ಮೆಸ್ಸೀಯನೂ ಅರಸನಾಗಿ ಎದ್ದು ಮುನ್ನಡೆದು ಲೋಕದಲ್ಲಿ ತನ್ನ ನೀತಿ ರಾಜ್ಯವನ್ನು ಸ್ಥಾಪಿಸಿ ಮನುಕುಲದ ಪ್ರತಿಯೊಬ್ಬ ಸದಸ್ಯನನ್ನು ಉನ್ನತ ಸ್ಥಿತಿಗೆ ತಂದು ಅವರನ್ನು ಆಶೀರ್ವದಿಸುವನು. ಅಪೋಸ್ತಲನ ಮಾತಿನ ಅನುಸಾರ ಅದು ಪುನಶ್ಚೇತನಗೊಳಿಸುವ ಸಮಯಗಳು. "ಸಮಸ್ತವನ್ನು ಸರಿಮಾಡುವ ಕಾಲಗಳು. ಆ ಕಾಲದ ವಿಷಯವಾಗಿ ದೇವರು ಪೂರ್ವದಲ್ಲಿದ್ದ ತನ್ನ ಪರಿಶುದ್ಧ ಪ್ರವಾದಿಗಳ ಬಾಯಿಂದ ಹೇಳಿಸಿದ್ದಾನೆ" (ಅಪೋಸ್ತಲರ ಕೃತ್ಯಗಳು 3:19–21) ದೇವರು ಲೋಕದವರ ರಕ್ಷಣೆಯ ವಿಷಯವಾದ ನಿರೀಕ್ಷೆಗೆ ಕೆಲವು ಸತ್ಕೀರ್ತಿಗೆ ಯೋಗ್ಯವಾದ ಕಾರ್ಯಗಳ ಮೇಲೆ ಅಥವಾ ಲೋಕದವರು ಮಾಡುವ ನೀತಿಫಲವಾದ ಕೆಲಸಗಳ ಮೇಲೆ ಆಧಾರ ಮಾಡಿದ್ದೇ ಅದರೆ ನಾವು ಅಗ ಭಯಪಡಬೇಕಾಗುತ್ತಿತ್ತು. ಆಗ ಲೋಕದ ವಿಷಯವಾಗಿ ಹೆಚ್ಚು ತಿಳುಕೊಂಡಷ್ಟೂ ಅದರ ರಕ್ಷಣೆಯು ವಿಷಯವಾಗಿ ನಮ್ಮ ನಿರೀಕ್ಷೆಯು ಕಡಿಮೆಯಾಗಿರುತ್ತಿತ್ತು. ಆದರೆ, ಅದಕ್ಕೆ ಬದಲಾಗಿ, ದೇವರು ಮುಂದೆ ಬರಲಿರುವ ಆಶೀರ್ವಾದ ವಿಷಯವಾದ ಯೋಜನೆಯ ಪೂರ್ಣ ಪ್ರಸ್ತಾವನೆಯನ್ನು ನಮ್ಮ ಯೋಗ್ಯತೆಯ ಮೇಲೆ ಆಧಾರ ಮಾಡದೆ ತನ್ನ ಮಗನ ಯಜ್ಞದ ಮೇಲೆ ಆಧಾರ ಮಾಡಿರುವನು. "ನಿಮಗಾಗಿ ಜೀವದಾಯಕನು ಹುಟ್ಟಿದ್ದಾನೆ. ಆತನು ಕರ್ತನಾಗಿರುವ ಮೆಸ್ಸೀಯನೇ" ಈ ಸುವಾರ್ತಾ ಯುಗದಲ್ಲಿ ಎಲ್ಲಾ ಮನುಷ್ಯರೊಳಗಿಂದ ಮುಂದಾಗಿ ಒಂದುಗೂಡಿಸಲ್ಪಡುತ್ತಿರುವ ಚಿಕ್ಕ ಹಿಂಡು ಎನಿಸಿಕೊಳ್ಳುವ "ಆಯಲ್ಪಟ್ಟವರಾದ" ಸಭೆಗೆ ಸಂಭವಿಸುವ ಕಷ್ಟ ಪರಿಶೋಧನೆಗಳು ದೇವರ ಮೇಲ್ವಿಚಾರಣೆಯಲ್ಲಿ ಬರುವಂತಾಗಿದ್ದು ಅದು ಸಭೆಯ ಪ್ರಯೋಜನಾರ್ಥವಾಗಿರುವುದೆಂಬ ತಿಳುವಳಿಕೆಯು ಮುಂದಿನ ಕಾಲದಲ್ಲಿ ಬರಲಿರುವ ಆಶೀರ್ವಾದವನ್ನು ನಾವು ಇನ್ನೂ ಹೆಚ್ಚಾಗಿ ಅನುಭವಿಸುವಂತೆ ಮಾಡುವುದು. ಈಗಿನ ಕಾಲದ ಕಷ್ಟ ಪರಿಶೋಧನೆಗಳು ನಮ್ಮಲ್ಲಿ ಪವಿತ್ರಾತ್ಮನ ಫಲಗಳನ್ನು ಮತ್ತು ವರಗಳನ್ನು ವೃದ್ಧಿಗೊಳಿಸಿ ದೇವರ ಪ್ರಿಯ ಕುಮಾರನ ಗುಣದ ಹೋಲಿಕೆಗೆ ಅಗತ್ಯವಿರುವ ಆಕಾರಕ್ಕೆ ತರಲು ಉಳಿಯಿಂದ ಕೆತ್ತನೆ ಮಾಡಿ ನಮ್ಮನ್ನು ನವಿರು ಮಾಡುವಂತವುಗಳೆಂದು ನಾವು ನೋಡುತ್ತೇವೆ. ಲೋಕದೊಳಗಿಂದ ಕರೆಯಲ್ಪಟ್ಟು ಯಜ್ಞದ ಕುರಿಯ ಹೆಂಡತಿಯಾಗಲು ಮದಲಗಿತ್ತಿಯಾಗಿ ಆಯಲ್ಪಡುವವರ ಸಂಖ್ಯೆಯು ಪೂರ್ಣವಾಗಿ ಅವರು ತಮ್ಮ ಮಹಿಮೆಗೆ ಬೇಗನೆ ಸೇರುವರೆಂಬ ವಿಷಯವು ಎಷ್ಟೋ ಆನಂದಕರವಾದದ್ದು. ಹೀಗಿರುವಲ್ಲಿ ಅವರು ಮುಂದೆ ಲೋಕವನ್ನು ಉನ್ನತ ಸ್ಥಿತಿಗೆ ತಂದು ಆಶೀರ್ವದಿಸುವ ದೇವಾನುಗ್ರಹ ಪೂರ್ಣವಾದ ಕಾರ್ಯದಲ್ಲಿ ತಮ್ಮ ಕರ್ತನೂ ಒಡೆಯನೂ ಆದವನೊಂದಿಗೆ ಸೇರುವ ಸೌಭಾಗ್ಯ ಪಡೆಯುವರೆಂಬ ವಿಷಯವು ಬಹು ಅಮೂಲ್ಯವಾದದ್ದು. ಇದಕ್ಕಿಂತ ಹೆಚ್ಚಿನ ಗೌರವ ಅಥವಾ ಸೌಭಾಗ್ಯ ಅಥವಾ ಆಶೀರ್ವಾದ ಯಾರಿಗಾದರೂ ಬರಲು ಸಾಧ್ಯವೇ?

## ದೇವದೂತರ ಹಾಡು

ಮಹಾ ಸಂತೋಷವನ್ನುಂಟು ಮಾಡುವ ಶುಭಸಂದೇಶವನ್ನು ಪರಲೋಕದಿಂದ ಬಂದಾತನು ನೀಡಿದ ನಂತರವೇ ಕುರುಬರಿಗೆ ಪರಲೋಕ ಸೈನ್ಯದವರ ಒಂದು ದೊಡ್ಡ ಗುಂಪು ಕಾಣಿಸಿಕೊಂಡು, "ಮೇಲಣ ಲೋಕಗಳಲ್ಲಿ ದೇವರಿಗೆ ಮಹಿಮೆ, ಭೂಲೋಕದಲ್ಲಿ ಮನುಷ್ಯರೊಳಗೆ ಸಮಾಧಾನ. ದೇವರು ಅವರಿಗೆ ಒಲಿಯುತ್ತಾನೆ" ಎಂದು ಹೇಳಿದರು. ಇದೂ ಸಹ ಒಂದು ಪ್ರವಾದನೆಯೇ. ಇದು ಇನ್ನೂ ನಿಜವಾಗಿಲ್ಲದಿದ್ದರೂ ದೇವರಿಂದ ನಿಗದಿತವಾದ ಒಂದು ಸಮಯದಲ್ಲಿ ಇದರ ಎಲ್ಲಾ ಅಂಶಗಳೂ ನೆರವೇರುವವು. ಈಗ ಇದು ಹತ್ತಿರದಲ್ಲಿಯೇ ಇದೆ. ಬಹು ಸಮೀಪದಲ್ಲಿಯೇ ಇದೆ ಎನ್ನುವುದು ನಮ್ಮ ನಂಬಿಕೆ. ಮೇಲಣ ಲೋಕಗಳಲ್ಲಿ ದೇವರಿಗೆ ಮಹಿಮೆ ಇನ್ನೂ ಉಂಟಾಗಿರುವುದಿಲ್ಲ. ಮನುಷ್ಯರೊಳಗೆ ಸಮಾಧಾನ ಇನ್ನೂ ಏರ್ಪಟ್ಟಿರುವುದಿಲ್ಲ ಬದಲಾಗಿ ದೇವರ ಹೆಸರು ಇನ್ನೂ ದೂಷಣೆಗೆ ಒಳಗಾಗಿದೆ. ಇದು ಕೇವಲ ಅಸಭ್ಯ ಮತ್ತು ಅಶ್ಲೀಲವಾದ ಹಾಸ್ಯದ ಮೂಲಕ ದೇವರ ನಾಮವನ್ನು ಅಯೋಗ್ಯವಾಗಿ ಎತ್ತುವವರ ಮೂಲಕವಾಗಿ ಮಾತ್ರವಲ್ಲದೆ, ದೆವ್ವಗಳನ್ನು ದೇವರೆಂದು ತಿಳಿದು ಆರಾಧಿಸುವವರ ಮೂಲಕವಾಗಿಯೂ ಮಾತ್ರವಲ್ಲದೆ, ಕ್ರೈಸ್ತರ ಮೂಲಕವಾಗಿಯೂ ದೇವರ ನಾಮವು ಪ್ರತಿದಿನ ದೂಷಣೆಗೆ ಒಳಗಾಗುತ್ತಿದೆ. ಯಾಕೆಂದರೆ ದೂಷಣೆ ಎನ್ನುವುದು ಮತ್ತೊಬ್ಬರನ್ನು ಅಗೌರವ ಬರುವ ರೀತಿಯಲ್ಲಿ ತಪ್ಪಾಗಿ ನಿರೂಪಿಸುವುದನ್ನು

ಒಳಗೊಂಡಿರುತ್ತದೆ ಎಂಬುದು ತಿಳಿದಿರಲಿ. ದೇವರು ನಮ್ಮನ್ನು ಕರುಣಿಸಲಿ; ಯಾಕೆಂದರೆ ನಮ್ಮಲ್ಲಿ ಪ್ರತಿಯೊಬ್ಬನೂ ಸಹ ಯಾವುದಾದರೋ ಒಂದು ಸಮಯದಲ್ಲಿ ನಿಸ್ಸಂದೇಹವಾಗಿ ದೇವರ ಪವಿತ್ರ ನಾಮವನ್ನು ದೂಷಿಸಿರುತ್ತಾನೆ. ಹೇಗೆಂದರೆ ದೇವರ ಗುಣಲಕ್ಷಣಗಳನ್ನು ತಪ್ಪಾಗಿ ನಿರೂಪಿಸುವುದರ ಮೂಲಕವಾಗಿಯೋ ಇಲ್ಲವೇ ಪ್ರೀತಿಸ್ವರೂಪನೂ ಕರುಣಾಳುವೂ ನೀತಿಸ್ವರೂಪನೂ ಸತ್ಯಸ್ವರೂಪನೂ ಆದ ದೇವರನ್ನು ಪಾಪದಲ್ಲಿ ಹುಟ್ಟಿ ಅನೀತಿಯಲ್ಲಿ ರೂಪಗೊಂಡು ಬೆಂಕಿಯ ಕಿಡಿಯು ಮೇಲೇರುವಂತೆ. ಪಾಪ ಮಾಡುವುದಕ್ಕೇ ಹುಟ್ಟಿರುವ ಬಹು ದೊಡ್ಡ ಗುಂಪಾದ ತನ್ನ ಸೃಷ್ಟಿಗೆ ನಿತ್ಯ ಯಾತನೆಯ ಯೋಜನೆಯನ್ನು ರೂಪಿಸಿ ಅವರನ್ನು ನಿರಂತರವಾಗಿ ಅದಕ್ಕೆ ಗುರಿಮಾಡಿರುವವನಾಗಿ ಚಿತ್ರಣ ಮಾಡಿದ್ದೆವು. ಆದರೆ ದೇವರು ನಮ್ಮನ್ನು ಕರುಣಿಸಿದನು. ಏಕೆಂದರೆ ನಾವು ತಿಳಿಯದೆ ಹಾಗೆ ಮಾಡಿದ್ದೆವು. ನಾವು ಈಗಲೂ ನಮ್ಮ ದೇವರನ್ನು ತಿಳಿಯದೆ ತಪ್ಪಾಗಿ ನಿರೂಪಿಸುತ್ತಿರುವವರ ವಿಷಯದಲ್ಲಿ ನಾವು ಕನಿಕರವುಳ್ಳವರಾಗಿರಬೇಕು. ನಮ್ಮ ಚೈತನ್ಯವನ್ನು ಅವರ ನೆರವಿಗಾಗಿ ಸದಾ ವಿನಿಯೋಗಿಸುತ್ತಾ ಅವರ ಮನೋನೇತ್ರಗಳು ವಿಶಾಲವಾಗಿ ತೆರೆಯಲ್ಪಟ್ಟು ಗ್ರಹಿಕೆಗೆ ಮೀರುವ ದೇವರ ಪ್ರೀತಿಯ ಉದ್ದ ಅಗಲ ಎತ್ತರ ಮತ್ತು ಆಳವನ್ನು ಅವರು ಅರಿಯುವಂತೆ ಮಾಡಬೇಕು. ಭೂಲೋಕದಲ್ಲಿ ಸಮಾಧಾನ ಮನುಷ್ಯರೊಳಗೆ ದೇವರ ಒಲಿಯುವಿಕೆ ರಕ್ಷಕನ ಜನನವನ್ನು ಇನ್ನೂ ಹಿಂಬಾಲಿಸಿಲ್ಲವೆಂಬುದನ್ನು ಗಮನಿಸಿ ಮತ್ತು ಇದು ಕ್ರಿಸ್ತನ ಸಾವಿರ ವರುಷದ ಆಳ್ವಿಕೆಯಲ್ಲಿ ನೆರವೇರುವ ಪ್ರವಾದನೆ ಎನ್ನುವುದನ್ನೂ ಅರಿತು. ಹಲವರು ಈ ವಾಕ್ಯವನ್ನು ಮುಂದಿನ ಅರ್ಥ ಬರುವಂತೆ ಅನುವಾದಿಸಲು ಒಲವು ತೋರಿದ್ದಾರೆ; "ಭೂಲೋಕದಲ್ಲಿ ಮನುಷ್ಯರೊಳಗೆ ಸಮಾಧಾನ, ಇವರನ್ನು ದೇವರು ಬಹು ಮೆಚ್ಚಿದ್ದಾನೆ" ಹೀಗೆ ಬದಲಾಯಿಸುವುದರಲ್ಲಿ ಈ ವಿವರಣೆಯು ನಿಜವಾಗುವುದಿಲ್ಲ. ಏಕೆಂದರೆ ಭೂಲೋಕದಲ್ಲಿ ದೇವಜನರಿಗೂ ಸಹ ಸಮಾಧಾನವಿಲ್ಲ, ತಮ್ಮ ಹೃದಯಗಳಲ್ಲಿ ಎಷ್ಟರಮಟ್ಟಿಗೆ ಸಮಾಧಾನವಿರುವುದೋ ಅದು ಕರ್ತನಲ್ಲಿರುವ ತಮ್ಮ ನಂಬಿಕೆಯ ಮತ್ತು ಅತನು ವಾಗ್ದಾನ ಮಾಡಿರುವ ಮಹಿಮೆಯುಳ್ಳ ಸಂಗತಿಗಳ ಮೇಲೆ ಆಧಾರಗೊಂಡಿರುತ್ತದೆ. ನಮ್ಮ ಕರ್ತನು ತಾನೇ ಮತ್ತು ಅಪೋಸ್ತಲರೂ ಇದಕ್ಕೆ ಸಾಕ್ಷಿ ನುಡಿದಿದ್ದಾರೆ; ಏನೆಂದರೆ ಈಗಿನ ಕಾಲದಲ್ಲಿ ಸದ್ಭಕ್ತರಾಗಿ ನಡೆಯುವುದಕ್ಕೆ ಮನಸ್ಸು ಮಾಡುವವರೆಲ್ಲರೂ ಹಿಂಸೆಗೆ ಗುರಿಯಾಗುವರು. ಒಬ್ಬ ಮನುಷ್ಯನಿಗೆ ಅವನ ಮನೆಯವರೇ ಅವನಿಗೆ ವೈರಿಗಳಾಗುವರು. (2 ತಿಮೋಥೆ 3:12, ಮತ್ತಾಯ 10:36) ನಮ್ಮನ್ನು ನಾವು ಗೊಂದಲಕ್ಕೆ ಗುರಿಮಾಡಿಕೊಳ್ಳದಿರೋಣ ಇಲ್ಲವೇ ದೇವರ ವಾಕ್ಯದ ಸಾಕ್ಷಿಯನ್ನು ಸಂಕ್ಷೇಪಿಸದಿರೋಣ. ಮನೋನೇತ್ರಗಳಿಂದ ನಂಬಿಕೆಯ ಮೂಲಕವಾಗಿ ಕ್ರಿಸ್ತನ ದಿನವನ್ನು ಎದುರು ನೋಡೋಣ. ಅಲ್ಲಿ ಈ ಎಲ್ಲಾ ಮಹಿಮೆಯುಳ್ಳ ಸಂಗತಿಗಳು ನೆರವೇರುವಂತಾಗಿ ಕರ್ತನ ಮಹಿಮೆಯ ಜ್ಞಾನದ ಮೂಲಕವಾಗಿ ಭೂಮಿಯಲ್ಲಿ ನಿಜವಾಗಿ ಸಮಾಧಾನವು ತುಂಬಿಕೊಂಡು ಅಪೋಸ್ತಲನು ತೋರಿಸಿಕೊಟ್ಟಂತೆ, ನರಳುತ್ತಿರುವ ಇಡೀ ಜಗತ್ತಿನಿಂದ ಶಾಪವನ್ನು ದೇವಾನುಗ್ರಹದ ಮೂಲಕವಾಗಿ ತೆಗೆದು ಹಾಕಲಾಗುವುದು. – ರೋಮಾ 8:22. ಕ್ರಿಸ್ತನ ಸಾವಿರ ವರುಷದ ಆಳ್ವಿಕೆಯ ಆರಂಭದಲ್ಲಿಯೂ ಸಹ ಈ ಪ್ರವಾದನೆಯು ನೆರವೇರುವುದಿಲ್ಲ. ಅದು ಮುಕ್ತಾಯವಾಗುವ ಸಮಯದವರೆಗೂ ಸಹ ಇದು ನೆರವೇರಲಾಗದು. ಆಗ ಮನುಕುಲವನ್ನು ದೇವರ ರಾಜ್ಯದ ನಿಯಮ ವಿಧಿಗಳ ಮೂಲಕವಾಗಿ ಪಾಪ ಅಸ್ವಸ್ಥತೆ ವೇದನೆ ಸಂಕಟ ಮತ್ತು ಮರಣಗಳಿಂದ ಮೇಲಕ್ಕೆ ಎತ್ತಲ್ಪಟ್ಟು ಆದಾಮನಲ್ಲಿ ಕಳಕೊಂಡ ಎಲ್ಲವನ್ನೂ ಪುನಃ ಗಳಿಸಿಕೊಡುವವರೆಗೆ ಮೇಲಣ ಲೋಕಗಳಲ್ಲಿ ದೇವರಿಗೆ ಮಹಿಮೆಯಾಗದು. ಮತ್ತು ಮನುಷ್ಯರೊಳಗೆ ಸಮಾಧಾನವಿರಲಾರದು. ಕ್ರಿಸ್ತನಲ್ಲಿ ತೋರಿಬಂದ ದೇವರ ನೀತಿಕಾರ್ಯವನ್ನು ಪೂರ್ಣವಾಗಿ ಕಂಡರೂ ಸಹ ಮನುಕುಲದವರೆಲ್ಲರೂ ದೇವರ ಪ್ರೀತಿಯನ್ನು ಮತ್ತು ದೇವಾನುಗ್ರಹವನ್ನು ಅರಿಯುವರೆಂದು ನಾವು ತಿಳಿಯಲಾಗದು. ಬದಲಾಗಿ, ಅಲ್ಲಿಯೂ ದೇವರ ಅನುಗ್ರಹವನ್ನು ಅರಿಯದವರಾಗಿ ನಿತ್ಯಜೀವಕ್ಕೆ ಅಯೋಗ್ಯರೆಂದು ಪರಿಗಣಿಸಲ್ಪಡುವ ಒಂದು ಗುಂಪು ಇರುವುದೆಂದು ದೇವರ ವಾಕ್ಯವು ನಮಗೆ ಸ್ಪಷ್ಟವಾಗಿ ಬೋಧಿಸುವುದು. ಇಂಥವರೆಲ್ಲರೂ ಎರಡನೆಯ ಮರಣದಲ್ಲಿ ಸಂಪೂರ್ಣವಾಗಿ ನಾಶಮಾಡಲ್ಪಡುವರೆಂಬುದನ್ನು ನಾವು ಆಸಕ್ತಿಯಿಂದ (ಓದಿ) ಕಲಿತುಕೊಂಡಿದ್ದೇವೆ. ಹೀಗೆ ಕಡೆಯದಾಗಿ ಸಾವಿರ ವರುಷದ ಆಳ್ವಿಕೆಯ ಅಂತ್ಯದಲ್ಲಿ ಸೈತಾನನು ಮತ್ತು ಮನಃಪೂರ್ವಕವಾಗಿ ಕೆಟ್ಟದ್ದನ್ನು ನಡೆಸುವವರೆಲ್ಲರೂ ನಾಶಮಾಡಲ್ಪಟ್ಟಾಗ, ದೇವರ ವಾಕ್ಯದಲ್ಲಿ ಪ್ರಕಟವಾಗಿರುವಂತೆ, ಆಕಾಶದಲ್ಲಿಯೂ ಭೂಮಿಯ ಮೇಲೆಯೂ ಮತ್ತು ಭೂಮಿಯ ಕೆಳಗಿರುವುದೆಲ್ಲವೂ ಸಿಂಹಾಸನಾಸೀನನಿಗೂ ಯಜ್ಞದ ಕುರಿಯಾದಾತನಿಗೂ ಯುಗಯುಗಾಂತರಗಳಲ್ಲಿಯೂ ಸ್ತುತಿಸುವುದು ಕೇಳಲ್ಪಡುವುದು. ಹೊಸಾನ್ನ! ಮೇಲಣ ಲೋಕಗಳಲ್ಲಿ ದೇವರಿಗೆ ಮಹಿಮೆ ಮನುಷ್ಯರೊಳಗೆ ಸಮಾಧಾನ ಮತ್ತು ದೇವರ ಒಲವು – ಇವು ದೇವರ ವಾಕ್ಯದಲ್ಲಿ ನಿರೂಪಿಸಿರುವ ಪ್ರಕಾರ, ರಕ್ಷಣೆಯ ವಿಷಯವಾದ ದಿವ್ಯ ಯೋಜನೆಯು ಪೂರ್ಣವಾಗಿ ಜಾರಿಗೊಳಿಸಲ್ಪಟ್ಟಾಗ ವಿಮೋಚಿಸಲ್ಪಟ್ಟ ಮಾನವ ಸಂತತಿಯಿಂದ ಕಡೆಯಲ್ಲಿ ಬರುವ ಉಲ್ಲಾಸ ಧ್ವನಿ.

## ಪ್ರಭಾವ ಸ್ಥಾನದಿಂದ ಗೋದಲಿಯವರೆಗೆ

ನಮ್ಮ ಕರ್ತನ ಜನನದ ಸಮಯವನ್ನು ಬಹು ಸ್ಪಷ್ಟವಾಗಿ ನಿಗದಿ ಮಾಡಲಾಗಿತ್ತು. ಸತ್ಯವೇದ ಅಧ್ಯಯನ ಮಾಲೆಯ ಎರಡನೇ ಗ್ರಂಥದಲ್ಲಿ ನಾವು ಈ ವಿಷಯವನ್ನು ಕೂಲಂಕುಶವಾಗಿ ವಿವರಿಸಿ ಹೇಳಿದ್ದೇವೆ ಮತ್ತು ಅದನ್ನು ಪುನಃ ಇಲ್ಲಿ ಹೇಳಲಾಗದು. ಔಗುಸ್ತ ಸೀಸರನ ಆಜ್ಞಾನುಸಾರ ಮಾಡಲಾದ ಪ್ರಖ್ಯಾತ ಖಾನೇಸುಮಾರಿಯು ಆಗಿನ ನಾಗರೀಕ ಜಗತ್ತನ್ನು ಪೂರ್ಣವಾಗಿ ಒಳಗೊಂಡಿತ್ತು. ಹಾಗೂ ಯೆಹೂದ್ಯರ ಪದ್ಧತಿಯ ಪ್ರಕಾರ (ಇಸ್ರಾಯೇಲ್) ಕುಲಗಳ ಪ್ರತಿಯೊಂದು ಕುಟುಂಬವೂ ತಮ್ಮ ಹೆಸರನ್ನು ಬರೆಸಿಕೊಳ್ಳಬೇಕಿತ್ತು. ಯೋಸೇಫನು ಮತ್ತು ಮರಿಯಳು ದಾವೀದನ ವಂಶದವರಾಗಿರಲಾಗಿ ದಾವೀದನ ಊರಾದ ಬೆತ್ಲೇಹೇಮಿಗೆ ಹೋದರು. ಅದು ಬೆಟ್ಟದ ಮೇಲಿನ ಒಂದು ಸಣ್ಣ ಊರಾಗಿತ್ತು. ಬಹುತೇಕ ಅಲ್ಲಿರುವುದೆಲ್ಲವೂ ಅನುಕೂಲಕರವಾಗಿ ತೋರುತ್ತಿತ್ತು. ಆ ಸೀಮೆಯ ಪ್ರವಾಸಿ ಮಂದಿರಗಳು ಅಥವಾ ಹೋಟೆಲುಗಳು ನಮ್ಮಲ್ಲಿ ಇರುವುದಕ್ಕಿಂತಲೂ ಭಿನ್ನವಾಗಿದ್ದವು. ಅವು ಉಪಾಹಾರ ಮಂದಿರಗಳಾಗಲಿ ಇಲ್ಲವೇ ಮದ್ಯದ ಅಂಗಡಿಗಳಾಗಲಿ ಆಗಿರದೆ

ವಿಶಾಲವಾದ ಅಂಗಳದ ಮೂಲಕವಾಗಿ ಅದರ ಒಳಗೆ ಹೋಗಬೇಕಿತ್ತು. ಅಲ್ಲಿ ಯಾವ ಸೌಕರ್ಯವೂ ಇಲ್ಲದ ಹಲವು ವಿಶಾಲ ಕೊಠಡಿಗಳಿರುತ್ತಿದ್ದವು. ಪ್ರಯಾಣಿಕರು ಅಡಿಗೆ ಮಾಡಲು ಪಾತ್ರೆ, ಮಲಗಲು ಹಾಸಿಗೆ, ಮತ್ತು ತಮ್ಮ ಸೌಕರ್ಯಕ್ಕೆ ಬೇಕಾದುದೆಲ್ಲವನ್ನು ತಾವೇ ಕೊಂಡೊಯ್ಯಬೇಕಿತ್ತು. ಕುದುರೆ ಒಂಟೆ ಮುಂತಾದವುಗಳಿಗೆ ಮಹಡಿಯ ಕೆಳಗೆ ಕೊಟ್ಟಿಗೆಯಂಥ ಸ್ಥಳವನ್ನು ಒದಗಿಸಲಾಗುತ್ತಿತ್ತು. ಖಾನೇಷುಮಾರಿ ಮುಂತಾದ ಜನಸಂದಣಿಯ ಸಂದರ್ಭಗಳಲ್ಲಿ ಮೇಲಿನ ವಿಶಾಲ ಕೊಠಡಿಗಳು ತುಂಬಿಹೋಗಿರಲಾಗಿ ಜನರಿಗೆ ಮಹಡಿಯ ಕೆಳಗಿನ ಕೊಟ್ಟಿಗೆಯಲ್ಲೂ ಅನುಕೂಲ ಮಾಡಿಕೊಂಡು ಇಳುಕೊಳ್ಳುವುದು ಅಲ್ಲಿ ಅಸಾಮಾನ್ಯವೇನಾಗಿರಲಿಲ್ಲ. ಈ ರೀತಿಯಲ್ಲಿ ನಮ್ಮ ಕರ್ತನು ಲೋಗಾಸನಾಗಿ ತಾನೇ ಉಂಟು ಮಾಡಿದ ಲೋಕದೊಳಗೆ (ಯೋಹಾನ 1:2) ಬಹು ದೀನ ಸ್ಥಿತಿಯಲ್ಲಿ ಬರುವಂತಾಯಿತು. ಅಲ್ಲಿಯೇ ಕುರುಬರು ದೇವದೂತರು ಸೂಚಿಸಿದಂತೆ ಆ ಮಗುವನ್ನು ಕಂಡುಕೊಂಡು ಹಿಂದಿರುಗಿ ಈ ಸಂಗತಿಯನ್ನು ಸಾರುತ್ತಾ ಹೋದರು. ಆದರೆ ಮರಿಯಳು ಈ ಯಾವದರಲ್ಲೂ ಹೊಗಳಿಕೊಳ್ಳದೆ ದೇವರಿಂದ ನೇಮಿತವಾದ ಕಾಲವು ಬರುವುದಕ್ಕಾಗಿ ಕಾದುಕೊಂಡಿದ್ದಳು.

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ. ಪೂ. 2 | ಬೆತ್ಲೇಹೇಮ್ ಯೆರೂಸಲೇಮ್ | (ಎಂಟನೇ ದಿನದಲ್ಲಿ) ಯೇಸುವಿಗೆ ಸುನ್ನತಿಯಾದದ್ದು. (ನಾಲ್ವತ್ತನೆಯ ದಿನದಲ್ಲಿ) ದೇವಾಲಯದಲ್ಲಿ ಕರ್ತನಿಗೆ ಸಮರ್ಪಿಸಿದ್ದು. | | | 2:21–39 | |

## ಲೂಕ 2:21–39

ಆ ಕೂಸಿಗೆ ಸುನ್ನತಿ ಮಾಡುವುದಕ್ಕೆ ಕಳೆಯಬೇಕಾದ ಎಂಟು ದಿವಸಗಳು ತುಂಬಿದ ಮೇಲೆ ಅದಕ್ಕೆ ಯೇಸುವೆಂದು ಹೆಸರಿಟ್ಟರು. ಅದು ಗರ್ಭದಲ್ಲಿ ಮೂಡುವುದಕ್ಕಿಂತ ಮೊದಲು ದೇವದೂತನು ಅದೇ ಹೆಸರನ್ನು ಸೂಚಿಸಿದ್ದನು.

ಬಳಿಕ ಮೋಶೆಯ ನೇಮದ ಪ್ರಕಾರ ಅವರ ಸೂತಕ ಕಳೆಯುವುದಕ್ಕೆ ತಕ್ಕಷ್ಟು ದಿವಸಗಳು ತುಂಬಲು ಅವರು ಆ ಕೂಸನ್ನು ಯೆರೂಸಲೇಮಿಗೆ ತೆಗೆದುಕೊಂಡು ಹೋದರು. ಯಾಕೆಂದರೆ ಚೊಚ್ಚಲು ಗಂಡೆಲ್ಲಾ ಕರ್ತನಿಗೆ ಮೀಸಲೆನಿಸಿಕೊಳ್ಳುವುದು ಎಂಬದಾಗಿ ಕರ್ತನ ಧರ್ಮಶಾಸ್ತ್ರ ದಲ್ಲಿ ಬರೆದಿರುವಂತೆ ಅದನ್ನು ಕರ್ತನಿಗೆ ಸಮರ್ಪಿಸ ಬೇಕಾಗಿತ್ತು. ಇದಲ್ಲದೆ ಕರ್ತನ ಧರ್ಮಶಾಸ್ತ್ರದಲ್ಲಿ ಹೇಳಿರುವಂತೆ ಒಂದು ಜೋಡಿ ಬೆಳವಕ್ಕಿಯನ್ನಾಗಲಿ ಎರಡು ಪಾರಿವಾಳದ ಮರಿಗಳನ್ನಾಗಲಿ ಬಲಿಕೊಡಬೇಕಾಗಿತ್ತು. ಆ ಕಾಲದಲ್ಲಿ ಯೆರೂಸಲೇಮಿನಲ್ಲಿ ಸೀಮೆಯೋನನೆಂಬ ಒಬ್ಬ ಮನುಷ್ಯನಿದ್ದನು. ಈ ಮನುಷ್ಯನು ನೀತಿವಂತನೂ ದೇವಭಕ್ತನೂ ಆಗಿದ್ದು ಇಸ್ರಾಯೇಲ್ ಜನರನ್ನು ಸಂತೈಸುವವನು ಯಾವಾಗ ಬಂದಾನೆಂದು ಹಾರೈಸುತ್ತಿ ದ್ದನು. ಮತ್ತು ಪವಿತ್ರಾತ್ಮ ಪ್ರೇರಿತನಾಗಿದ್ದನು. ಇದಲ್ಲದೆ ಕರ್ತನು ಕಳುಹಿಸಬೇಕಾದ ಕ್ರಿಸ್ತನನ್ನು ಕಾಣುವುದಕ್ಕಿಂತ ಮುಂಚೆ ನೀನು ಸಾಯುವುದಿಲ್ಲವೆಂದು ಪವಿತ್ರಾತ್ಮನ ಮೂಲಕ ಅವನಿಗೆ ದೈವೋಕ್ತಿ ಉಂಟಾಗಿತ್ತು. ಇವನು ಪವಿತ್ರಾತ್ಮ ಪ್ರೇರಣೆಯಿಂದ ದೇವಾಲಯಕ್ಕೆ ಬಂದನು. ಆಗ ತಂದೆ ತಾಯಿಗಳು ಯೇಸುವೆಂಬ ಮಗುವಿಗೆ ಧರ್ಮಶಾಸ್ತ್ರದಲ್ಲಿ ಹೇಳಿರುವ ಪದ್ಧತಿಯ ಪ್ರಕಾರ ನಡಿಸಬೇಕೆಂದು ಅದನ್ನು ಒಳಕ್ಕೆ ತರಲು ಅವನು ಅದನ್ನು ತನ್ನ ಕೈಯಲ್ಲಿ ತಕ್ಕೊಂಡು ದೇವರನ್ನು ಕೊಂಡಾಡಿ ಒಡೆಯನೇ, ನಿನ್ನ ಮಾತು ನೆರವೇರಿತು. ಈಗ ಸಮಾಧಾನದಿಂದ ಹೋಗುವುದಕ್ಕೆ ನಿನ್ನ ದಾಸನಿಗೆ ಅಪ್ಪಣೆಯಾಯಿತು. ನೀನು ನೇಮಿಸಿರುವ ರಕ್ಷಕನನ್ನು ನಾನು ಕಣ್ಣಾರೆ ಕಂಡೆನು. ಎಲ್ಲಾ ಜನಗಳಿಗೆ ಪ್ರತ್ಯಕ್ಷನಾಗಲಿ ಎಂದು ಆತನನ್ನು ಒದಗಿಸಿಕೊಟ್ಟಿದ್ದೀ. ಆತನು ಅನ್ಯದೇಶದವರಿಗೆ ಜ್ಞಾನೋದಯದ ಬೆಳಕು. ನಿನ್ನ ಪ್ರಜೆಯಾದ ಇಸ್ರಾಯೇಲ್ಯರಿಗೆ ಕೀರ್ತಿ, ಅಂದನು. ಆ ಮಗುವಿನ ವಿಷಯವಾಗಿ ಹೇಳಿದ ಈ ಮಾತುಗಳಿಗೆ ಅದರ ತಂದೆ ತಾಯಿಗಳು ಆಶ್ಚರ್ಯ ಪಡುತ್ತಿರಲು ಸಿಮೆಯೋನನು ಅವರನ್ನು ಆಶೀರ್ವದಿಸಿ ತಾಯಿಯಾದ ಮರಿಯಳಿಗೆ – ಇಗೋ, ಈತನು ಇಸ್ರಾಯೇಲ್ ಜನರಲ್ಲಿ ಅನೇಕರು ಬೀಳುವುದಕ್ಕೂ ಅನೇಕರು ಏಳುವುದಕ್ಕೂ ಕಾರಣನಾಗಿರುವನು. ಮತ್ತು ಜನರು ಎದುರು ಮಾತಾಡುವುದಕ್ಕೂ ಗುರುತಾಗಿರುವನು. ಹೀಗೆ ಬಹುಜನರ ಅಂತರಂಗದ ವಿಚಾರಗಳು ಬೈಲಿಗೆ ಬಂದಾವು. ಇದಕ್ಕೆ ಈತನು ಹುಟ್ಟಿದ್ದು. ಇದಲ್ಲದೆ ನಿನ್ನ ಪ್ರಾಣಕ್ಕಂತೂ ಅಲಗು ನಾಟಿದಂತಾಗುವುದು ಎಂದು ಹೇಳಿದನು.

ಇದಲ್ಲದೆ ಅಸೇರನ ಕುಲದ ಫನುವೇಲನ ಮಗಳಾದ ಅನ್ನಳೆಂಬ ಒಬ್ಬ ಪ್ರವಾದಿನಿ ಇದ್ದಳು. ಆಕೆ ಬಹಳ ಮುಪ್ಪಿನವಳು; ಆಕೆ ತನ್ನ ಕನ್ಯಾವಸ್ಥೆ ಕಳೆದ ತರುವಾಯ ಗಂಡನ ಕೂಡ ಏಳು ವರುಷ ಬಾಳುವೆ ಮಾಡಿ ಎಂಭತ್ತನಾಲ್ಕು ವರುಷ ವಿಧವೆಯಾಗಿದ್ದಳು. ಆಕೆ ದೇವಾಲಯವನ್ನು ಬಿಟ್ಟುಹೋಗದೆ ಉಪವಾಸ ವಿಜ್ಞಾಪನೆಗಳಿಂದ ರಾತ್ರಿ ಹಗಲೂ ದೇವರ ಸೇವೆಯನ್ನು ಮಾಡುತ್ತಿದ್ದಳು. ಅದೇ ಗಳಿಗೆಯಲ್ಲಿ ಹತ್ತರಕ್ಕೆ ಬಂದು ದೇವರಿಂದಾದ ಉಪಕಾರವನ್ನು ನೆನಸಿ ಕೊಂಡಾಡಿದ್ದಲ್ಲದೆ ಯೆರೂಸಲೇಮಿನ ಬಿಡುಗಡೆಯನ್ನು ಹಾರೈಸುತ್ತಿದ್ದವರೆಲ್ಲರ ಸಂಗಡ ಆತನ ವಿಷಯವಾಗಿ ಮಾತಾಡುವವಳಾದಳು. ಇತ್ತಲಾಗಿ ಅವರು ಕರ್ತನ ಧರ್ಮಶಾಸ್ತ್ರದಲ್ಲಿ ಹೇಳಿರುವ ಕಾರ್ಯಗಳನ್ನೆಲ್ಲಾ ನೆರವೇರಿಸಿದ ಮೇಲೆ ಗಲಿಲಾಯಕ್ಕೆ ಸೇರಿದ ನಜರೇತೆಂಬ ತಮ್ಮ ಊರಿಗೆ ಹಿಂತಿರುಗಿ ಹೋದರು.

# ದೇವಾಲಯದಲ್ಲಿ (ಮಗುವಿನ) ಪ್ರತಿಷ್ಠೆ

**ರೀಪ್ರಿಂಟ್ ಪುಟ 4942**

## ಲೂಕ 2:22-39

**"ನೀನು ನೇಮಿಸಿರುವ ರಕ್ಷಕನನ್ನು ನಾನು ಕಣ್ಣಾರೆ ಕಂಡೆನು. ಎಲ್ಲಾ ಜನಗಳಿಗೆ ಪ್ರತ್ಯಕ್ಷನಾಗಲಿ ಎಂದು ಅತನನ್ನು ಒದಗಿಸಿಕೊಟ್ಟಿದ್ದೀ" ಲೂಕ 2:30, 31**

ಯೇಸುವು ನಾಲ್ವತ್ತು ದಿವಸದವನಾದಾಗ ಯೋಸೇಫನು ಮತ್ತು ಮರಿಯಳು ಅವನನ್ನು ಪ್ರತಿಷ್ಠೆ ಮಾಡಿ ಸಮರ್ಪಿಸುವುದಕ್ಕೆ ದೇವಾಲಯಕ್ಕೆ ತೆಗೆದುಕೊಂಡು ಹೋದರು. ಇದು ಪ್ರತಿ ಕುಟುಂಬದ ಚೊಚ್ಚಲ ಮಗುವಿನ ವಿಷಯವಾದ ವಿಶೇಷ ಪದ್ಧತಿಯಾಗಿತ್ತು. ಇಡೀ ಇಸ್ರಾಯೇಲ್ ಜನಾಂಗದ ಚೊಚ್ಚಲ ಮಕ್ಕಳೆಲ್ಲರೂ ಐಗುಪ್ತದಿಂದ ಪಸ್ಕದ ಮೂಲಕವಾಗಿ ಬಿಡುಗಡೆ ಹೊಂದಿದಾಗ ಅವರಿಗೆ ಬದಲಾಗಿ ಲೇವಿಕುಲವನ್ನು ವಿಶೇಷವಾಗಿ ದೇವರ ಸೇವೆಗೆ ಮೀಸಲಾಗಿ ತೆಗೆದುಕೊಂಡಾಗ್ಯೂ, ಇದೇ ತತ್ವವನ್ನು ಪ್ರತಿಯೊಂದು ತಾಯಿಯ ಚೊಚ್ಚಲು ಮಗುವಿನ ವಿಷಯದಲ್ಲಿ ದೃಷ್ಟಾಂತವನ್ನಾಗಿ ಪ್ರತಿಪಾದಿಸಲಾಗಿತ್ತು. ಅದನ್ನು ದೇವರಿಗೆ ಮತ್ತು ಆತನ ಸೇವೆಗೆ ವಿಶೇಷವಾಗಿ ಮೀಸಲಾಗಿಡಬೇಕಿತ್ತು.

ಈ ಸುವಾರ್ತಾ ಯುಗದಲ್ಲಿ ಒಟ್ಟುಗೂಡಿಸಲಾಗುತ್ತಿರುವ ಆಯಲ್ಪಟ್ಟವರಾದ ಸಭೆಯನ್ನು ಚೊಚ್ಚಲ ಮಕ್ಕಳ ಸಭೆಯೆಂದು ಹೆಸರಿಸಿರುವುದನ್ನು ಸ್ಮರಿಸುವಾಗ ಇದರಲ್ಲಿರುವ ಮಹತ್ವವನ್ನು ನಾವು ನೋಡುತ್ತೇವೆ. ನಾವು ಒಂದು ವಿಧದಲ್ಲಿ ದೇವರಿಗೆ ಆತನ ಸೃಷ್ಟಿಗಳಲ್ಲಿ ಪ್ರಥಮ ಫಲದಂತಾಗಿರುವುದನ್ನು ಭಕ್ತನಾದ ಯಾಕೋಬನು ನಮಗೆ ಹೇಳಿದ್ದಾನೆ. ಇಲ್ಲಿ ಸ್ಪಷ್ಟವಾಗಿರುವ ಸಂಗತಿ ಎಂದರೆ ಪ್ರಥಮ ಪುನರುತ್ಥಾನದಲ್ಲಿ ಸಭೆಯು ಪರಲೋಕದ ಮಹಿಮೆಗೆ ಸೇರಿಸಲ್ಪಟ್ಟ ನಂತರ ಸ್ಥಾಪನೆಯಾಗುವ ಭೂಲೋಕದ ರಾಜ್ಯದಲ್ಲಿ ಸಮಸ್ತವನ್ನು ಸರಿಮಾಡುವ ಕಾರ್ಯದ ಮೂಲಕವಾಗಿ ಎಲ್ಲಾ ಕುಲಗಳಿಗೆ ಮನುಷ್ಯ ಸ್ವಭಾವದಲ್ಲಿ ದೇವರ ಮಕ್ಕಳಾಗುವ ಅವಕಾಶವನ್ನು ನೀಡುವುದರ ಮೂಲಕವಾಗಿ ಆಶೀರ್ವದಿಸ ಲಾಗುವುದು. – ಅಪೋಸ್ತಲರ ಕೃತ್ಯಗಳು 3:19–21.

ಈ ಸಂಬಂಧದಲ್ಲಿ ನಾವು ಗಮನಿಸಿರುವುದೆಂದರೆ ತಮ್ಮ ಮಕ್ಕಳನ್ನು ನಂಬಿಕೆಯುಳ್ಳವರ ಸಮ್ಮುಖದಲ್ಲಿ ದೇವರಿಗೆ ಶಾಸ್ತ್ರೋಕ್ತವಾಗಿ ಪ್ರತಿಷ್ಠಿಸುವುದು ಕೆಲವು ತಂದೆ ತಾಯಿಗಳ ವಾಡಿಕೆಯಾಗಿರುವುದು. ಮಕ್ಕಳ ಮೇಲೆ ಅದರ ಪ್ರಭಾವವು ಪ್ರಯೋಜನಕಾರಿಯಲ್ಲದೆ ಬೇರೊಂದಿರಲಾದು. ಮುಂದಿನ ದಿನಗಳಲ್ಲಿ ಮಕ್ಕಳು ತಮ್ಮ ಈ ಹಿಂದಿನದನ್ನು ತಿರುಗಿ ನೋಡುವಾಗ ತಮ್ಮ ತಂದೆ ತಾಯಿಗಳು ತಮ್ಮಲ್ಲಿರುವ ಅತ್ಯುತ್ತಮವಾದುದ್ದನ್ನು (ತಮ್ಮ ದೇಹದಿಂದ ಬಂದ ಫಲವನ್ನು) ದೇವರಿಗೆ ಸಮರ್ಪಿಸಿರುವಲ್ಲಿ ಅವರಲ್ಲಿದ್ದ ಶ್ರದ್ಧೆ ಪ್ರೀತಿ ಮತ್ತು ಭಕ್ತಿಗಳನ್ನು ಗ್ರಹಿಸುವರು. ನಿಸ್ಸಂದೇಹವಾಗಿ ಬಹು ಮಂದಿ ಮಕ್ಕಳಲ್ಲಿ ತಮ್ಮನ್ನು ಸೃಷ್ಟಿಕರ್ತನಿಗೆ ಹೀಗೆ ಪ್ರತಿಷ್ಠೆ ಮಾಡಿರುವುದರ ಪ್ರಭಾವವು ತಮಗೆ ಹಿತಕರವಾಗಿರುವುದು ಅವರ ಅನುಭವಕ್ಕೆ ಬರುವುದು.

ಅದಲ್ಲದೆ ನಾವು ನಂಬುವುದೆಂದರೆ, ತಮ್ಮಲ್ಲಿರುವ ಅತ್ಯುತ್ತಮವಾದುದನ್ನು ಹೀಗೆ ದೇವರಿಗೆ ಅರ್ಪಿಸುವಲ್ಲಿ ತಂದೆ ತಾಯಿಗಳು ತಮಗೆ ನಿಜವಾಗಿಯೂ ವಿಶೇಷವಾದ ಆಶೀರ್ವಾದವನ್ನು ಪಡಕೊಳ್ಳುವರು. ಕಷ್ಟ ಪರಿಶೋಧನೆಗಳು ಖಂಡಿತವಾಗಿಯೂ ಬರುವವು ಆದರೂ ಇವೆಲ್ಲವುಗಳಲ್ಲಿಯೂ ತಮ್ಮ ಮಕ್ಕಳು ದೇವರಿಗೆ ಸೇರಿದವರಾಗಿರುವರು. ಹಾಗೂ ಅವರು ನಿನ್ನ ಚಿತ್ತವೇ ನೆರವೇರಲೆಂದು ಪ್ರಾರ್ಥಿಸುವುದೇ ಆದರೆ ಅವರಿಗೆ ಸಮಾಧಾನವು ಒದಗಿ, ಇತರರಿಗೆ ತಿಳಿಯಲಾಗದಂಥ ಆನಂದವನ್ನು ಅವರು ತಮ್ಮ ಆತ್ಮದಲ್ಲಿ ಪಡಕೊಳ್ಳುವರು. ವಾಸ್ತವದ ಸಂಗತಿಯೆಂದರೆ ತಮ್ಮ ಮಕ್ಕಳು ಬೆಳೆದು ವಿವೇಚನಾ ಶಕ್ತಿ ಮತ್ತು ನ್ಯಾಯಾನ್ಯಾಯದ ಪರಿಜ್ಞಾನ ಹೊಂದಿದ ನಂತರ ಇದು ಅವರ ವೈಯಕ್ತಿಕ ಪ್ರತಿಷ್ಠೆಯ ಸ್ಥಾನವನ್ನು ಪಡಕೊಳ್ಳಲಾರದು. ಆದರೂ ಮಗುವು ಪ್ರೌಢತೆಯ ವರುಷಗಳಿಗೆ ತಲುಪಿದಾಗ ಈ ಆಶೀರ್ವಾದದ ಪ್ರಭಾವವು ಪ್ರಯೋಜನ ಕಾರಿಯಾಗಿರುವುದು. ದೇವರ, ಸತ್ಯದ ಮತ್ತು ನೀತಿಯ ವಿಷಯದಲ್ಲಿ ಸೂಕ್ತವಾದ ತೀರ್ಮಾನಗಳನ್ನು ತೆಗೆದುಕೊಳ್ಳುವುದಕ್ಕೆ ಇದು ಸಹಾಯ ಮಾಡುವುದು.

ದೇವಾಲಯದಲ್ಲಿ (ಮಗುವಿನ ಪ್ರತಿಷ್ಠೆಯ ಸಮಾರಂಭದ ಸಮಯದಲ್ಲಿ ಒಬ್ಬ ಇಳಿ ವಯಸ್ಸಿನ ಪ್ರವಾದಿಯು ಬಂದು ಮಗುವಾದ ಯೇಸುವನ್ನು ತನ್ನ ಕೈಗಳಲ್ಲಿ ತೆಗೆದುಕೊಂಡು ದೇವರನ್ನು ಕೊಂಡಾಡಿದನು. ದೇವರ ವಾಕ್ಯ ವಿವರಿಸಿ ಹೇಳುವುದು. ದೇವರು ಈತನಿಗೆ ಯಾವುದೋ ಒಂದು ರೀತಿಯಲ್ಲಿ ಅಬ್ರಹಾಮನಿಗೆ ಮಾಡಿದ ಕೃಪಾಪೂರ್ಣವಾದ ವಾಗ್ದಾನದ ನೆರವೇರುವಿಕೆಯು ಹತ್ತಿರವಿದೆಯೆಂದೂ ಈತನು ಇಸ್ರಾಯೇಲ್ಯರನ್ನು ಬಿಡಿಸುವವನ್ನು ಕಾಣುವವರೆಗೂ ಸಾಯುವುದಿಲ್ಲವೆಂದೂ ಪ್ರಕಟ ಮಾಡಿದ್ದನು. ಇಳಿವಯಸ್ಸಿನ ಈ ಪ್ರವಾದಿಯು ದೈವ ಪ್ರೇರಣೆಯಿಂದ ಯೇಸುವಿನ ಗುರುತು ಹಿಡಿದು ಮತ್ತು "ಈಗ ಸಮಾಧಾನದಿಂದ ಹೋಗುವುದಕ್ಕೆ ನಿನ್ನ ದಾಸನಿಗೆ ಅಪ್ಪಣೆಯಾಯಿತು. ನೀನು ನೇಮಿಸಿರುವ ರಕ್ಷಕನನ್ನು ನಾನು ಕಣ್ಣಾರೆ ಕಂಡೆನು. – ನಿನ್ನ ರಕ್ಷಣೆಯು ಇಸ್ರಾಯೇಲ್ಯರಿಗೆ ಮತ್ತು ಭೂಲೋಕದ ಎಲ್ಲಾ ಕುಲಗಳಿಗೆ ಬರುವ ವಿಧಾನವನ್ನು – ಆತನು ಮುಂದುವರಿದು ಹೇಳಿದುದು. "ಎಲ್ಲಾ ಜನಗಳಿಗೆ ಪ್ರತ್ಯಕ್ಷನಾಗಲಿ ಎಂದು ಆತನನ್ನು ಒದಗಿಸಿಕೊಟ್ಟಿದ್ದೀ. ಆತನು ಅನ್ಯ ದೇಶದವರಿಗೆ ಜ್ಞಾನೋದಯದ ಬೆಳಕು. ನಿನ್ನ ಪ್ರಜೆಯಾದ ಇಸ್ರಾಯೇಲ್ಯರಿಗೆ ಕೀರ್ತಿ".

**'ಈತನು ಇಸ್ರಾಯೇಲ್ ಜನರಲ್ಲಿ ಅನೇಕರು ಬೀಳುವುದಕ್ಕೂ ಏಳುವುದಕ್ಕೂ ಕಾರಣನಾಗಿರುವನು'**

ಸಿಮೆಯೋನನು ಮರಿಯಳನ್ನು ಸಂಬೋಧಿಸಿ ಪ್ರವಾದನೆಯಾಗಿ ಹೇಳಿದ್ದೇನೆಂದರೆ, "ಇಗೋ, ಈತನು ಇಸ್ರಾಯೇಲ್ ಜನರಲ್ಲಿ ಅನೇಕರು ಬೀಳುವುದಕ್ಕೂ ಅನೇಕರು ಏಳುವುದಕ್ಕೂ ಕಾರಣನಾಗಿರುವನು. ಮತ್ತು ಜನರು ಎದುರು ಮಾತಾಡುವುದಕ್ಕೂ ಗುರುತಾಗಿರುವನು. ಹೀಗೆ ಬಹುಜನರ ಅಂತರಂಗದ ವಿಚಾರಗಳು ಬೈಲಿಗೆ ಬಂದಾವು". ಎಂಥಾ ಅದ್ಭುತವಾದ ಒಂದು ಪ್ರವಾದನೆಯಿದು! ಇದು ಅಪೋಸ್ತಲನಾದ ಪೌಲನ ಮಾತುಗಳನ್ನು ನಮ್ಮ ನೆನಪಿಗೆ ತರುವುದು, ಅದೇನೆಂದರೆ – ಬಹು ಮಂದಿ ಇಸ್ರಾಯೇಲ್ಯರಿಗೆ "ಎಡವುವ ಕಲ್ಲು ಮುಗ್ಗರಿಸುವ ಬಂಡೆ..." ಅವರು ನಿರಾಶರಾಗಿ "ಆ ಎಡವುವ ಕಲ್ಲಿಗೆ ಅವರು ಎಡವಿಬಿದ್ದರು". ಎಡವಿಬಿದ್ದ ಹಲವರು ಮತ್ತೆ ಏಳುವರೆಂದು ಸಹ ಪೌಲನು ಹೇಳಿರುವನು. ಆತನು ಪ್ರಕಟಮಾಡಿ ಹೇಳಿದ್ದೇನೆಂದರೆ, ಇಸ್ರಾಯೇಲ್ಯರು ಹುಡುಕಿದ್ದು ಅವರೆಲ್ಲರಿಗೆ ದೊರೆಯಲಿಲ್ಲ. ಅವರೊಳಗೆ ಆಯಲ್ಪಟ್ಟವರಿಗೆ ದೊರೆಯಿತು. ಅವರು ಎಡವಿಬಿದ್ದರು – ದೇವಾನುಗ್ರಹದ ಕಡೆಯಿಂದ ಬೇರೆಡೆಗೆ ತಿರುಗಿಕೊಂಡರು. (ರೋಮಾ. 11:17) ಹೀಗಿದ್ದರೂ ಅವನು ನಮಗೆ ಬರವಸೆ ನೀಡಿ ಹೇಳಿರುವದೆಂದರೆ ಕ್ರಿಸ್ತನ ಸಭೆಯಾದ "ಆಯಲ್ಪಟ್ಟ ವರ್ಗವು" ಪ್ರಥಮ ಪುನರುತ್ಥಾನದಲ್ಲಿ ಪೂರ್ಣಗೊಂಡ ಮೇಲೆ ದೇವಾನುಗ್ರಹವು ಆಯಲ್ಪಟ್ಟ ಆತ್ಮಿಕ ಇಸ್ರಾಯೇಲ್ಯರ ಮೂಲಕವಾಗಿ ಶಾರೀರಿಕವಾದ ಇಸ್ರಾಯೇಲ್ಯರಿಗೆ ಹಿಂತಿರುಗಿ ಬರುವುದು. "ಅವರು... ನಿಮಗೆ ದೊರಕಿರುವ ಕರುಣೆಯನ್ನು ಹೊಂದುವರು". ರೋಮಾ. 11:25–33

ಮುಂದಾಗಿ ಆಯಲ್ಪಡಲಿರುವ "ನಿಜವಾದ ಇಸ್ರಾಯೇಲ್ಯರು" ಪೂರ್ಣಗೊಳ್ಳಲು ಸಾಕಷ್ಟು ಸಂಖ್ಯೆಯಲ್ಲಿ ದೊರೆಯದ ಕಾರಣ ಈ ಸುವಾರ್ತಾ ಯುಗದಲ್ಲಿ ಆಹ್ವಾನವು ಶಾರೀರಿಕವಾಗಿ ಅಬ್ರಹಾಮನ ಸಂತತಿಯಲ್ಲದೆ ಸಕಲ ಕುಲ ಪ್ರಜೆ ಜನಾಂಗ ಮತ್ತು ಭಾಷೆಯವರಲ್ಲಿ ಭಕ್ತರಾದವರನ್ನು ಒಟ್ಟುಗೂಡಿಸಲು ಸಹ ನೀಡಲ್ಪಟ್ಟಿತ್ತು. ಮನುಷ್ಯ ಸ್ವಭಾವದಲ್ಲಿ ಪರಿಪೂರ್ಣರಾಗಿ ಪುನರುದ್ಧಾರ ಹೊಂದುವ ಆಶೀರ್ವಾದವು ಶಾರೀರಿಕ ಇಸ್ರಾಯೇಲ್ಯರಿಗೆ ಮತ್ತು ಮಾನವ ಕುಲದವರಲ್ಲಿ ಉಳಿದವರಿಗೆ ತಲುಪುವ ಮುನ್ನ ಇವರ ಸಂಖ್ಯೆ ಪೂರ್ಣಗೊಂಡದ್ದಾಗಿ ಕಂಡುಬರಬೇಕು.

ಹನ್ನಳೆಂಬ ಒಬ್ಬ ಭಕ್ತಳಾದ ಸ್ತ್ರೀಯು ಪ್ರವಾದಿನಿಯೂ ಆಗಿದ್ದು ನೂರು ವರುಷಕ್ಕೂ ಹೆಚ್ಚಿನವಳಾಗಿ ಯೆರೂಸಲೇಮಿನಲ್ಲಿ ವಾಸಿಸುವವಳಾಗಿ ದೇವಾಲಯದ ಅಂಗಳದಲ್ಲಿ ಇರುತ್ತಿದ್ದಳು. ಆಕೆಯೂ ಸಹ ಪವಿತ್ರಾತ್ಮನಿಂದ ಪ್ರೇರಿತಳಾಗಿ ಆ ಮಗುವಿನ ಗುರುತು ಹಿಡಿದು ದೇವರನ್ನು ಕೊಂಡಾಡುತ್ತಾ ಇಸ್ರಾಯೇಲ್ಯರನ್ನು ಸಂತೈಸುವವನ ವಿಷಯವಾಗಿ ಅಬ್ರಹಾಮನಿಗೆ ಮಾಡಲ್ಪಟ್ಟ ವಾಗ್ದಾನವು ನೆರವೇರುವುದನ್ನು ಹಾರೈಸುತ್ತಿದ್ದ ಭಕ್ತರೊಡನೆ ಈ ವಿಷಯವನ್ನು ಹೇಳುತ್ತಿದ್ದಳು.

ಯೇಸುವನ್ನು ಮಗುವಾಗಿ ನೋಡುವುದೇ ದೇವರನ್ನು ಕೊಂಡಾಡಿ ಕೃತಜ್ಞತೆ ಹೇಳುವ ವಿಷಯವಾದರೆ, ಅತನು ತನ್ನ ಮೂವತ್ತನೆಯ ವಯಸ್ಸಿನಲ್ಲಿ ಮರಣ ಪರ್ಯಂತರವಾದ ಸಜೀವ ಬಲಿಯಾಗಿ ತನ್ನನ್ನು ಪ್ರತಿಷ್ಠಿಸಿಕೊಂಡು ಪವಿತ್ರಾತ್ಮನಿಂದ ನೂತನ ಸೃಷ್ಟಿಯಾಗಿ ದೈವ ಸ್ವಭಾವದಲ್ಲಿ ಮತ್ತೆ ಹುಟ್ಟಿದ್ದುದ್ದನ್ನು ನೋಡಿದವರು ದೇವರಿಗೆ ಇನ್ನೂ ಹೆಚ್ಚಾದ ಕೃತಜ್ಞತೆ ಸಲ್ಲಿಸುವುದಕ್ಕೆ ಕಾರಣವಾಗುವದು. ಮೂರುವರೆ ವರುಷಗಳಲ್ಲಿ ತನ್ನ ಪ್ರತಿಷ್ಠೆಯ ಮೂಲಕವಾಗಿ ಯಜ್ಞಾರ್ಪಣೆ ಮಾಡಿಕೊಂಡದ್ದರಲ್ಲಿ ಕಂಡುಬಂದ ಒಡೆಯನ ನಂಬಿಗಸ್ತಿಕೆಯನ್ನು ನೋಡಿದವರು ದೇವರಿಗೆ ಸ್ತೋತ್ರ ಸಲ್ಲಿಸಲು ಇನ್ನೂ ಅಧಿಕವಾದ ಕಾರಣವಿರುವುದು. ಕಲ್ವಾರಿಯಲ್ಲಿ ಅತನು ತನ್ನ ಜೀವಿತದ ಅವಧಿಯನ್ನು ಮುಗಿಸಿ ಮೂರನೆಯ ದಿನದಲ್ಲಿ ಸತ್ತವರೊಳಗಿಂದ ಎದ್ದುಬಂದು ನಾಲ್ವತ್ತು ದಿನಗಳ ನಂತರ ತಾನು ಮೊದಲು ಇದ್ದ ಉನ್ನತ ಲೋಕಕ್ಕೆ ಏರಿಹೋದುದರಲ್ಲಿ ಮನುಷ್ಯರೆಲ್ಲರ ರಕ್ಷಣೆಯ ವಿಷಯವಾದ ದೇವರ ಯೋಜನೆಯು ಮುಂದುವರಿಯಲ್ಪಟ್ಟದ್ದನ್ನು ಗ್ರಹಿಸಿಕೊಂಡವರು ಧನ್ಯರು.

ಪಂಚಾಶತ್ತಮ ದಿನದಲ್ಲಿ ಪವಿತ್ರತಾತ್ಮನ ಮೂಲಕವಾಗಿ ಗರ್ಭಾಂಕುರಿಸಿ ಹೊಸದಾಗಿ ಜನಿಸುವ ಶಕ್ತಿಹೊಂದಿದವರಾಗಿ ಮತ್ತು ಆನಂತರದಲ್ಲೂ ಈ ಶಕ್ತಿಯನ್ನು ಪಡೆದು ತಮ್ಮಲ್ಲಿ ದೇವರ ಮಕ್ಕಳೆಂಬ ಸಾಕ್ಷಿಯನ್ನು ಹೊಂದಿದವರು ಇನ್ನೂ ಅಧಿಕವಾಗಿ ಧನ್ಯರು ಹಾಗೂ "ಮಕ್ಕಳಾಗಿದ್ದರೆ ದೇವರಿಗೆ ಬಾಧ್ಯರು ತಮ್ಮ ಕರ್ತನಾದ ಕ್ರಿಸ್ತನೊಂದಿಗೆ ಇನ್ನೂ ಶ್ರೇಷ್ಠವಾದ ಬಾಧ್ಯತೆಗೆ ಅಂದರೆ ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲಗಳಿಗೆ ಆಶೀರ್ವಾದ ಉಂಟಾಗುವುದೆಂಬ ಅಬ್ರಹಾಮನಿಗೆ ಆಣೆಯೊಡನೆ ಮಾಡಿದ ವಾಗ್ದಾನಕ್ಕೆ ಸಹ ಬಾಧ್ಯರು.

**ಇಸ್ರಾಯೇಲ್ಯರ ಬೀಳುವಿಕೆ ಹಾಗೂ ಏಳುವಿಕೆ**

ಯೇಸುವು ದೇವರಿಂದ ಕಳುಹಿಸಲ್ಪಟ್ಟವನೆಂದು ಗುರುತು ಹಿಡಿಯುವಲ್ಲಿ ಇಸ್ರಾಯೇಲ್ ಜನಾಂಗವು ಸಂಪೂರ್ಣವಾಗಿ ವಿಫಲರಾಗಿ ಎಡವಿದರು. ಇದನ್ನು ಹೋಲಿಸಿದಲ್ಲಿ ಆತನ ಶಿಷ್ಯರಾಗಿ ಬಂದ ಕೇವಲ ಅಲ್ಪಮಂದಿ ಅಂದರೆ ದೇವ ವಾಕ್ಯದ ಪ್ರಕಾರ ಸುಮಾರು ಹತ್ತು ಅಥವಾ ಹದಿನೈದು ಸಾವಿರ ಮಂದಿ ಇದಕ್ಕೆ ಹೊರತಾಗಿದ್ದರು. ಆ ಜನಾಂಗದ ಬಗ್ಗೆ ಸಾಮಾನ್ಯವಾಗಿ ಪ್ರವಾದಿಯಾದ ಯೆಶಾಯನು ಪ್ರಕಟ ಮಾಡಿರುವುದು. "ಅವರಲ್ಲಿ ಅನೇಕರು ಎಡವಿಬಿದ್ದು ಭಂಗವಾಗುವರು. ಬೋನಿಗೆ ಸಿಕ್ಕಿ ವಶವಾಗುವರು" ಯೆಶಾಯ 8:15. ಭಕ್ತನಾದ ಪೌಲನು ಯೆಶಾಯನ ಪ್ರವಾದನೆಯನ್ನು ಉಲ್ಲೇಖಿಸಿ ಮುಂದುವರಿದು ತೋರಿಸಿರುವುದು. ಈ ಸುವಾರ್ತಾ ಯುಗದಲ್ಲಿ ಸಮಸ್ತ ಜನಾಂಗಗಳೊಳಗಿಂದ ಆಯಲ್ಪಡುವ ವರ್ಗವು ಪೂರ್ಣವಾದ ಕ್ಷಣದಿಂದ ಇಸ್ರಾಯೇಲ್ಯರಿಗೆ ದೇವಾನುಗ್ರಹವು ಹಿಂದಿರುಗುವುದು. ಆಗ ಇಸ್ರಾಯೇಲ್ಯರು ಎಚ್ಚೆತ್ತುಕೊಂಡು ಪುನಃ ದೇವಾನುಗ್ರಹವನ್ನು ಮರಳಿ ಪಡೆಯುವ ಕಾಲ ಬರುವುದು. ರೋಮಾ. 11:9–11.

ತನ್ನ ವಾದವನ್ನು ಮುಂದುವರೆಸಿ, ಅಪೋಸ್ತಲನಾದ ಪೌಲನು ನಮಗೆ ಬರವಸದಿಂದ ಹೇಳಿರುವುದು, ಇಸ್ರಾಯೇಲ್ ಜನರಿಗೆ ಉಂಟಾಗಿರುವ (ಕುರುಡುತನವೆಂಬ) ಮೊಂಡುತನವು ಯಾವಾಗಲೂ ಇರದೆ ಅನ್ಯಜನರೊಳಗಿಂದ "ಆಯಲ್ಪಡುವವರ" ಸಂಖ್ಯೆಯು ಪೂರ್ಣವಾಗುವವರೆಗೆ ಮಾತ್ರವಿರುವುದು. ಆತನು

ಪ್ರಕಟಿಸಿರುವುದೆಂದರೆ, ಆ ಮೇಲೆ ಇಸ್ರಾಯೇಲ್ ಜನವೆಲ್ಲಾ ರಕ್ಷಣೆ ಹೊಂದಿ ತಮ್ಮ ಎಡವುವಿಕೆಯಿಂದ ಪಾರಾಗುವರು. ನಮ್ಮ ಪಾಠದಲ್ಲಿ ಉಲ್ಲೇಖಿಸಿರುವಂತೆ ಇದು ಮತ್ತೆ ಅವರ ಏಳುವಿಕೆ. ಭಕ್ತನಾದ ಪೌಲನು ಪ್ರಕಟಿಸಿರುವಂತೆ ಇದು ಶರೀರ ಸಂಬಂಧವಾದ ಇಸ್ರಾಯೇಲ್ಯರೊಡನೆ ದೇವರು ಅವರ ಪಾಪ ವಿಮೋಚನೆಗಾಗಿ ಮಾಡಿಕೊಳ್ಳುವ ಒಡಂಬಡಿಕೆ. ಹೀಗೆ ಸಭೆಗೆ ದೊರಕಿದ ಕರುಣೆಯ ಮೂಲಕವಾಗಿ ಅವರು ಕರುಣೆಯನ್ನು ಹೊಂದುವರು. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ಪುನರುತ್ಥಾನದ ಮೂಲಕವಾಗಿ ಸಭೆಯು ಪ್ರಭಾವಕ್ಕೆ ಸೇರಿದಾಗ ದೇವಾಶೀರ್ವಾದವು ತಕ್ಷಣ ಹೊರಟು ಇಸ್ರಾಯೇಲ್ಯರನ್ನು ತಲುಪಿ ಅನಂತರ ಅದು ಭೂಲೋಕದ ಎಲ್ಲಾ ಕುಲಗಳಿಗೂ ವ್ಯಾಪಿಸುವುದು. ದೇವರು ಎಲ್ಲರಿಗೂ ಕರುಣೆಯನ್ನು ತೋರಿಸಬೇಕೆಂಬ ಉದ್ದೇಶ ಉಳ್ಳವನಾಗಿದ್ದು ಎಲ್ಲರನ್ನೂ (ಅಪನಂಬಿಕೆಯೆಂಬ) ಅವಿಧೇಯತೆಯೆಂಬ ದುಸ್ಥಿತಿಯಲ್ಲಿ ಕಟ್ಟಿಹಾಕಿದ್ದಾನೆ. ರೋಮಾ 11:25–32

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ. ಪೂ. 1 ಅಥವಾ ಕ್ರಿ. ಶ. 1 | ಯೆರೂಸಲೇಮ್ ಬೆತ್ಲೆಹೇಮ್ ನಜರೇತ್ | ಜೋಯಿಸರು, ಐಗುಪ್ತಕ್ಕೆ ಓಡಿಹೋಗುವಿಕೆ. ಮಕ್ಕಳು ಕೊಲ್ಲಲ್ಪಟ್ಟಿದ್ದು ಯೇಸುವು ಹಿಂದಿರುಗುವುದು. | 2:1–23 | –– | 2:39–40 | –– |

# ಮತ್ತಾಯ 2:1–23

ಅರಸನಾದ ಹೆರೋದನ ದಿನಗಳಲ್ಲಿ ಯೂದಾಯ ಸೀಮೆಯ ಬೆತ್ಲೆಹೇಮ್ ಎಂಬ ಊರಲ್ಲಿ ಯೇಸು ಹುಟ್ಟಿದಾಗ ಮೂಡಣ ದೇಶದ ಜೋಯಿಸರು ಯೆರೂಸಲೇಮಿಗೆ ಬಂದು – ಯೆಹೂದ್ಯರ ಅರಸನಾಗಿ ಹುಟ್ಟಿದವನು ಎಲ್ಲಿದ್ದಾನೆ? ಆತನನ್ನು ಸೂಚಿಸುವ ನಕ್ಷತ್ರವನ್ನು ನಾವು ಮೂಡಣ ದೇಶದಲ್ಲಿ ಕಂಡು ಆತನಿಗೆ ಅಡ್ಡಬೀಳುವುದಕ್ಕೆ ಬಂದೆವು ಅಂದರು. ಇದನ್ನು ಕೇಳಿ ಅರಸನಾದ ಹೆರೋದನೂ ಅವನ ಕೂಡ ಯೆರೂಸಲೇಮಿನ ವರೆಲ್ಲರೂ ಕಳವಳಪಟ್ಟರು. ಅವನು ಯೆಹೂದ್ಯರ ಎಲ್ಲಾ ಮಹಾಯಾಜಕರನ್ನೂ ಶಾಸ್ತ್ರಿಗಳನ್ನೂ ಕೂಡಿಸಿ – ಕ್ರಿಸ್ತನು ಹುಟ್ಟಬೇಕಾದದ್ದು ಎಲ್ಲಿ ಎಂದು ಅವರನ್ನು ಕೇಳಿದನು. ಅವರು ಅವನಿಗೆ – ಯೂದಾಯ ಬೆತ್ಲೆಹೇಮಿನಲ್ಲಿಯೇ. ಯಾಕೆಂದರೆ – ಯೆಹೂದ ಸೀಮೆಯ ಬೆತ್ಲೆಹೇಮೇ, ಯೆಹೂದದ ಮುಖ್ಯ ಪಟ್ಟಣಗಳಲ್ಲಿ ನೀನು ಎಷ್ಟು ಮಾತ್ರವೂ ಸಣ್ಣದಲ್ಲ. ಒಬ್ಬ ಅಧಿಪತಿ ನಿನ್ನೊಳಗಿಂದಲೇ ಹೊರಡುವನು, ಆತನು ನನ್ನ ಪ್ರಜೆಯಾದ ಇಸ್ರಾಯೇಲನ್ನು ಆಳತಕ್ಕವನು ಎಂಬದಾಗಿ ಪ್ರವಾದಿಯ ಮುಖಾಂತರ ಬರೆದದೆ ಎಂದು ಹೇಳಿದರು. ಆಗ ಹೆರೋದನು ಯಾರಿಗೂ ತಿಳಿಯದಂತೆ ಆ ಜೋಯಿಸರನ್ನು ಕರೆಸಿ ಆ ನಕ್ಷತ್ರವು ಕಾಣಿಸಿದ ಕಾಲವನ್ನು ಅವರ ಕಡೆಯಿಂದ ಚೆನ್ನಾಗಿ ತಿಳುಕೊಂಡು – ನೀವು ಹೋಗಿ ಆ ಕೂಸಿನ ವಿಷಯದಲ್ಲಿ ಚೆನ್ನಾಗಿ ವಿಚಾರಣೆ ಮಾಡಿರಿ. ಅದು ಸಿಕ್ಕಿದ ಮೇಲೆ ನನಗೆ ತಿಳಿಸಿರಿ ನಾನೂ ಬಂದು ಅದಕ್ಕೆ ಅಡ್ಡಬೀಳಬೇಕು ಎಂದು ಹೇಳಿ ಅವರನ್ನು ಬೆತ್ಲೆಹೇಮಿಗೆ ಕಳುಹಿಸಿದನು. ಅವರು ಅರಸನ ಮಾತನ್ನು ಕೇಳಿ ಹೊರಟಾಗ ಮೂಡಣ ದೇಶದಲ್ಲಿ ಕಂಡ ನಕ್ಷತ್ರವು ಅವರ ಮುಂದೆ ಮುಂದೆ ನಡೆದು ಕೂಸು ಇದ್ದ ಸ್ಥಳದ ಮೇಲೆ ಬಂದು ನಿಂತಿತು. ಅವರು ನಕ್ಷತ್ರವನ್ನು ಕಂಡು ಅತ್ಯಂತ ಸಂತೋಷಪಟ್ಟರು. ಮತ್ತು ಆ ಮನೆಯೊಳಕ್ಕೆ ಹೋಗಿ ಆ ಕೂಸನ್ನು ಅದರ ತಾಯಿಯಾದ ಮರಿಯಳ ಬಳಿಯಲ್ಲಿ ಕಂಡು ಅದಕ್ಕೆ ಸಾಷ್ಟಾಂಗ ನಮಸ್ಕಾರ ಮಾಡಿ ತಮ್ಮ ಗಂಟುಗಳನ್ನು ಬಿಚ್ಚಿ ಅದಕ್ಕೆ ಚಿನ್ನ ಧೂಪ ರಕ್ತಬೋಳಗಳನ್ನು ಕಾಣಿಕೆಯಾಗಿ ಕೊಟ್ಟರು. ಆ ಮೇಲೆ ದೇವರು ಕನಸ್ಸಿನಲ್ಲಿ ಅವರಿಗೆ – ನೀವು ಹೆರೋದನ ಬಳಿಗೆ ತಿರುಗಿ ಹೋಗಬಾರದೆಂದು ಅಪ್ಪಣೆಕೊಟ್ಟದ್ದರಿಂದ ಅವರು ಮತ್ತೊಂದು ದಾರಿಯಿಂದ ತಮ್ಮ ದೇಶಕ್ಕೆ ಹೊರಟುಹೋದರು. ಅವರು ಹೋದ ಮೇಲೆ ಕರ್ತನ ದೂತನು ಯೋಸೇಫನಿಗೆ ಕನಸಿನಲ್ಲಿ ಕಾಣಿಸಿಕೊಂಡು –– ನೀನು ಎದ್ದು ಈ ಕೂಸನ್ನೂ ಇದರ ತಾಯಿಯನ್ನೂ ಕರಕೊಂಡು ಐಗುಪ್ತ ದೇಶಕ್ಕೆ ಓಡಿಹೋಗಿ ನಾನು ನಿನಗೆ ಹೇಳುವ ತನಕ ಅಲ್ಲೇ ಇರು; ಹೆರೋದನು ಈ ಕೂಸನ್ನು ಕೊಲ್ಲಬೇಕೆಂದು ಅದನ್ನು ಹುಡುಕುತ್ತಿರುವನು ಅಂದನು. ಆಗ ಅವನು ಎದ್ದು ಕೂಸನ್ನು ಅದರ ತಾಯಿಯನ್ನೂ ರಾತ್ರಿ ವೇಳೆಯಲ್ಲಿ ಕರಕೊಂಡು ಐಗುಪ್ತದೇಶಕ್ಕೆ ಹೊರಟು ಹೋಗಿ ಹೆರೋದನು ತೀರಿಹೋಗುವ ತನಕ ಅಲ್ಲೇ ಇದ್ದನು. ಇದರಿಂದ ನನ್ನ ಮಗನನ್ನು ಐಗುಪ್ತ ದೇಶದೊಳಗಿಂದ ಕರೆದೆನೆಂದು ಕರ್ತನು ಪ್ರವಾದಿಯ ಮುಖಾಂತರ ಹೇಳಿದ ಮಾತು ನೆರವೇರಿತು.

ಆಗ ಹೆರೋದನು ತನಗೆ ಜೋಯಿಸರು ಮೋಸ ಮಾಡಿದರೆಂದು ತಿಳಿದು ಬಹಳ ಸಿಟ್ಟಾಗಿ ಆಳುಗಳನ್ನು ಕಳುಹಿಸಿ ತಾನು ಜೋಯಿಸರಿಂದ ತಿಳುಕೊಂಡ ಕಾಲಕ್ಕೆ ಸರಿಯಾಗಿ, ಬೆತ್ಲೆಹೇಮಿನಲ್ಲಿಯೂ ಅದರ ಎಲ್ಲಾ ನೆರೆಹೊರೆ ಹಳ್ಳಿಗಳಲ್ಲಿಯೂ ಎರಡು ವರುಷದೊಳಗಿನ ಗಂಡುಕೂಸುಗಳನ್ನೆಲ್ಲಾ ಕೊಲ್ಲಿಸಿದನು. ಯೆರೆಮೀಯನೆಂಬ ಪ್ರವಾದಿಯು ಹೇಳಿದ ಮಾತು ಆ ಕಾಲದಲ್ಲಿ ನೆರವೇರಿತು. ಅದೇನೆಂದರೆ – ರಾಮದಲ್ಲಿ ಬೊಬ್ಬೆಯು ಕೇಳಿಸಿತು. ಅಳುವಿಕೆಯೂ ಬಹು ಗೋಳಾಟವೂ ಉಂಟಾದವು; ರಾಹೇಲಳು ತನ್ನ ಮಕ್ಕಳಿಗೋಸ್ಕರ ಅತ್ತತ್ತು ಅವರು ಇಲ್ಲದೆ ಹೋದದ್ದಕ್ಕಾಗಿ ಸಮಾಧಾನ ಹೊಂದಲೊಲ್ಲದೆ ಇದ್ದಳು ಎಂಬುದು. ಹೆರೋದನು ತೀರಿಹೋದ ಮೇಲೆ ಐಗುಪ್ತ ದೇಶದಲ್ಲಿ ಕರ್ತನ ದೂತನು

ಯೋಸೇಫನಿಗೆ ಕಾಣಿಸಿಕೊಂಡು – ನೀನು ಎದ್ದು ಕೂಸನ್ನು ಅದರ ತಾಯಿಯನ್ನೂ ಕರಕೊಂಡು ಇಸ್ರಾಯೇಲ್ ದೇಶಕ್ಕೆ ಹೋಗು. ಕೂಸಿನ ಪ್ರಾಣವನ್ನು ತೆಗೆಯಬೇಕೆಂದಿದ್ದವರು ಸತ್ತುಹೋದರು ಎಂದು ಹೇಳಿದನು. ಆಗ ಯೋಸೇಫನು ಎದ್ದು ಕೂಸನ್ನೂ ಅದರ ತಾಯಿಯನ್ನೂ ಕರಕೊಂಡು ಇಸ್ರಾಯೇಲ್ ದೇಶಕ್ಕೆ ಬಂದನು. ಆದರೆ ಅರ್ಖೆಲಾಯನು ತನ್ನ ತಂದೆಯಾದ ಹೆರೋದನಿಗೆ ಬದಲಾಗಿ ಯೂದಾಯವನ್ನು ಆಳುತ್ತಾನೆಂದು ಕೇಳಿ ಅಲ್ಲಿಗೆ ಹೋಗುವುದಕ್ಕೆ ಅಂಜಿದನು. ಆಗ ಅವನು ಕನಸಿನಲ್ಲಿ ದೇವರ ಅಪ್ಪಣೆಯನ್ನು ಹೊಂದಿ ಗಲಿಲಾಯ ಸೀಮೆಗೆ ಹೋದನು. ಮತ್ತು ನಜರೇತೆಂಬ ಊರಿಗೆ ಬಂದು ಅಲ್ಲಿ ಮನೆಮಾಡಿಕೊಂಡು ಇದ್ದನು. ಇದರಿಂದ – ನಜರಾಯನೆಂಬ ಹೆಸರು ಆತನಿಗೆ ಬರುವುದು ಎಂಬದಾಗಿ ಪ್ರವಾದಿಗಳಿಂದ ಹೇಳಿಸಿರುವ ಮಾತು ನೆರವೇರಿತು.

## ಲೂಕ 2:39, 40

ಇತ್ತಲಾಗಿ ಅವರು ಕರ್ತನ ಧರ್ಮಶಾಸ್ತ್ರದಲ್ಲಿ ಹೇಳಿರುವ ಕಾರ್ಯಗಳನ್ನೆಲ್ಲಾ ನೆರವೇರಿಸಿದ ಮೇಲೆ ಗಲಿಲಾಯಕ್ಕೆ ಸೇರಿದ ನಜರೇತೆಂಬ ತಮ್ಮ ಊರಿಗೆ ಹಿಂದಿರುಗಿ ಹೋದರು.

# ನಮ್ಮ ಅರಸನಿಗೆ ಕೊಟ್ಟ ಉಡುಗೊರೆಗಳು

**ರೀಪ್ರಿಂಟ್ ಪುಟ 3702**

## ಮತ್ತಾಯ 2:1–12

**" ಕಂದಾ ನನ್ನ ಕಡೆಗೆ ಮನಸ್ಸುಕೊಡು " ಜ್ಞಾನೋಕ್ತಿ 23:26**

ನಮ್ಮ ಪಾಠವು ರಕ್ತಬೋಳ ಧೂಪ ಮತ್ತು ಚಿನ್ನ ಈ ಕಾಣಿಕೆಗಳೊಡನೆ ಹೊಸದಾಗಿ ಹುಟ್ಟಿದ ಯೆಹೂದ್ಯರ ಅರಸನಾದ ಯೇಸುವನ್ನು ಹುಡುಕುತ್ತಾ ಬಂದ ಮೂಡಣ ದೇಶದ ಜೋಯಿಸರ ವಿಷಯವಾಗಿರುವುದು. ಮತ್ತೊಂದು ವರುಷದ ಪ್ರಾರಂಭದಲ್ಲಿ ನಾವು ನಿಸ್ಸಂದೇಹವಾಗಿ ಈ ಸಂಗತಿಯಿಂದ ಶ್ರೇಷ್ಠ ಮೆಸ್ಸೀಯನ ಕಡೆಗಿರುವ ನಮ್ಮ ಜವಾಬ್ಧಾರಿಯ ವಿಷಯದಲ್ಲಿ ಮತ್ತು ಅದನ್ನು ನವೀಕರಿಸಿ ಹೆಚ್ಚಿಸಿಕೊಳ್ಳುವುದರ ಔಚಿತ್ಯದ ಬಗ್ಗೆ ಕೆಲವು ಅಮೂಲ್ಯವಾದ ಸೂಚನೆಗಳನ್ನು ಸಂಗ್ರಹಿಸ ಶಕ್ತರಾಗುತ್ತೇವೆ.

ಸಂಪ್ರದಾಯದ ಮೂಲಕ ತಿಳಿದು ಬಂದಂತೆ, ಮೂವರು ಜೋಯಿಸರು ಯೆರೂಸಲೇಮಿಗೆ ಬಂದು ಹೊಸದಾಗಿ ಹುಟ್ಟಿದ ಯೆಹೂದ್ಯರ ಅರಸನಾಗಿರುವ ಯೇಸುವಿನ ವಿಷಯವಾಗಿ ವಿಚಾರಿಸತೊಡಗಿದರು. ಈ ಸಮಾಚಾರವು ಬೇಗನೆ ಪರಿಶುದ್ಧ ಪಟ್ಟಣದಲ್ಲೆಲ್ಲಾ ಹಬ್ಬಿ ಕೋಲಾಹಲವಾಯಿತು. ಏಕೆಂದರೆ ಪ್ರವಾದಿಗಳ ಪ್ರಕಾರ ಶತಮಾನಗಳಿಂದ ವಾಗ್ದಾನ ಮಾಡಲ್ಪಟ್ಟ ಮೆಸ್ಸೀಯನು ಆ ಸಮಯದಲ್ಲಿ ಬರಬೇಕಾಗಿತ್ತು. ನಾವು ಮತ್ತೂ ಓದುವುದು "... ಇಸ್ರಾಯೇಲ್ ಜನರು ಬರಬೇಕಾದ ಕ್ರಿಸ್ತನನ್ನು ಎದುರು ನೋಡುತ್ತಿದ್ದವರಾಗಿದ್ದರು..." ಮೆಸ್ಸೀಯನಿಗೆ ಅಡ್ಡಬೀಳಬೇಕೆಂದು ದೂರದೇಶದಿಂದ ಬಹುಶಃ ಪರ್ಷಿಯಾ ದೇಶದಿಂದ, ಪಂಡಿತರು ಅಥವಾ ಜೋಯಿಸರು ಬಂದ ನಂತರ ಈ ಎದುರು ನೋಡುವಿಕೆಯು ಸಹಜವಾಗಿ ಹೆಚ್ಚಾಗುವುದು. ಈ ಸಮಾಚಾರವು ಹಬ್ಬುತ್ತಾ ಕಡೆಯಲ್ಲಿ ಅರಮನೆಯಲ್ಲಿ ಸ್ವತಃ ಅರಸನಾದ ಹೆರೋದನಿಗೂ ತಲುಪಿತು. ತನ್ನ ಸ್ವಂತ ವಿಷಯದಲ್ಲಿ ಅರಸನಿಗೆ ಯಾರಾದರೂ ರಾಜಗೌರವ ಮರ್ಯಾದೆಗಳನ್ನು ತನ್ನೊಡನೆ ಯಾವುದೇ ಪ್ರಮಾಣದಲ್ಲಿ ಹಂಚಿಕೊಂಡು ತನ್ನ ಪ್ರಾಮುಖ್ಯತೆಯು ಕಡಿಮೆಯಾಗಿ ಹೋಗುವ ಸಂದರ್ಭ ವೇನಾದರೂ ಬಂದಲ್ಲಿ ಅಂಥವರ ಮೇಲೆ ನಿಸ್ಸಂಶಯವಾಗಿ ಒಂದು ವಿಧವಾದ ಅಸೂಯೆ ಉಂಟಾಗುವ ಸಂಭವವಿರುವುದು. ಆದರೆ ಇದಕ್ಕೂ ಮಿಗಿಲಾಗಿ ರೋಮ್ ಸಾಮ್ರಾಜ್ಯದ ಆಶ್ರಯದಲ್ಲಿ, ಸೀಸರನ ಆಡಳಿತದಲ್ಲಿ ಆತನ ಪ್ರತಿನಿಧಿಯಾಗಿ ತನ್ನ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ಯಾರೂ ರಾಜನಾಗಿ ಯಾವುದೇ ಪ್ರಮಾಣದಲ್ಲಿ ಸೀಸರನ ಅಧಿಕಾರಕ್ಕೆ ಪ್ರತಿರೋಧಿಯಾಗಿ ಏಳದಂತೆ ನೋಡಿಕೊಳ್ಳುವುದು ನಿಸ್ಸಂದೇಹವಾಗಿ ಅತನ ಕರ್ತವ್ಯ.

### ಉದಯ ಸೂಚಕವಾದ ಪ್ರಕಾಶವುಳ್ಳ ನಕ್ಷತ್ರ

ಆದುದರಿಂದ ಹೆರೋದನು ಜೋಯಿಸರನ್ನು ಕರೇಕಳುಹಿಸಿದನು. ಅವರ ಹುಡುಕಾಟದ ಬಗ್ಗೆ ತೀವ್ರವಾದ ಆಸಕ್ತಿ ತೋರಿದಂತೆ ನಟಿಸಿ, ಅವರು ಮೆಸ್ಸೀಯನ ಬಗ್ಗೆ ತಮ್ಮ ದೂರ ದೇಶದಲ್ಲಿ ಹೇಗೆ ತಿಳಿದರೆಂಬುದನ್ನೂ ಮಗುವು ಹುಟ್ಟುವ ಸ್ಥಳವನ್ನು ಎಲ್ಲಿ ಹುಡುಕಬೇಕೆಂಬುದನ್ನೂ ಹೇಗೆ ತಿಳಿದರೆಂಬು ದನ್ನು ಸೂಕ್ಷ್ಮವಾಗಿ ವಿಚಾರಿಸಿದನು. ಮೂಡಣ ದೇಶದಲ್ಲಿ ಆತನನ್ನು ಸೂಚಿಸುವ ನಕ್ಷತ್ರವನ್ನು ನೋಡಿದೆವೆಂಬುದಾಗಿ ಅವರು ಉತ್ತರಿಸಿದರು. ಮೂಡಣ ದೇಶದ ಪಂಡಿತರು ಖಗೋಳ ಶಾಸ್ತ್ರಜ್ಞರಿಗಿಂತಲೂ ಹೆಚ್ಚಾಗಿ ಜ್ಯೋತಿಷ್ಯರುಗಳಾಗಿದ್ದು ನಕ್ಷತ್ರಗಳ ಚಲನವಲನವನ್ನು ಗಮನಿಸಿ ದೇಶಗಳ ಮತ್ತು ವ್ಯಕ್ತಿಗಳ ಇತಿಹಾಸವನ್ನು ತಿಳಿಯುವ ಸೋಗು ಹಾಕುತ್ತಿದ್ದರು. ದೇವರು ನಕ್ಷತ್ರಗಳಲ್ಲಿ ಎಷ್ಟರಮಟ್ಟಿಗೆ ಜನಾಂಗಗಳ ಮತ್ತು ಮನುಷ್ಯರ ಇತಿಹಾಸಗಳನ್ನು ಬರೆದಿರುವನೆಂಬುದನ್ನು ನಿರ್ಧರಿಸುವುದು ನಮ್ಮ

ಪ್ರಯತ್ನವಲ್ಲ. ಆದರೂ ಲೋಕದವರಿಗೆ ಸಾಮಾನ್ಯವಾಗಿ ನಕ್ಷತ್ರಾ ಕಾಶವು ದೇವರು ಬರೆದ ಭರವಸೆಗೆ ಆಧಾರವಾದ ಪುಸ್ತಕದಂತಿರುವುದು. ಕೀರ್ತನಾಗಾರನು ವಿವರಿಸಿದಂತೆ "ರಾತ್ರಿಯು ರಾತ್ರಿಗೆ ಅರುಹುತ್ತಿರುವುದು" ಲಿಖಿತವಾದ ದೇವರ ವಾಕ್ಯವನ್ನು ನಾವು ಹೊಂದಿರಲು, ನಮಗೆ ಮನುಷ್ಯರ ಸಂಪ್ರದಾಯಗಳ ಅಜ್ಞಿಯ ಕಟ್ಟುಕತೆ ಹಾಗೂ ಜ್ಯೋತಿಷ್ಯರ ಮಾರ್ಗದರ್ಶನಗಳ ಅಗತ್ಯವಿರುವುದಿಲ್ಲ. ಯಾಕೆಂದರೆ "... ಪ್ರವಾದನಾ ವಾಕ್ಯವು ನಮಗೆ ಮತ್ತೂ ದೃಢವಾಗಿದೆ. ನಿಮ್ಮ ಹೃದಯದೊಳಗೆ ಬೆಳ್ಳಿಯು ಮೂಡಿ ಅರುಣೋದಯವಾಗುವ ಪರ್ಯಂತರ ಅದನ್ನು ಕತ್ತಲೆಯಾದ ಸ್ಥಳದಲ್ಲಿ ಪ್ರಕಾಶಿಸುವ ದೀಪವೆಂದೆಣಿಸಿ ಅದಕ್ಕೆ ಲಕ್ಷ್ಯಕೊಡುವುದೇ ಒಳ್ಳೆಯದು" 2 ಪೇತ್ರ 1:19.

ಜ್ಯೋತಿಷ್ಯ ಶಾಸ್ತ್ರವು ಎಷ್ಟರಮಟ್ಟಿಗೆ ಸತ್ಯ ಅಥವಾ ಸತ್ಯವಲ್ಲ ಎಂಬುದನ್ನು ನಿರ್ಧರಿಸುವ ಪ್ರಯತ್ನ ನಮಗಿಲ್ಲದಿದ್ದರೂ, ಮೂಡಣ ದೇಶದ ಪಂಡಿತರನ್ನು ಮಾರ್ಗದರ್ಶನ ಮಾಡಿದ ಆ ವೈಶಿಷ್ಟ್ಯ ವಿಶೇಷತೆಗಳುಳ್ಳ ನಕ್ಷತ್ರ ಕಾಣಿಸುವಿಕೆಯ ಸಂಬಂಧದಲ್ಲಿ ಒಂದು ಸತ್ಯಾಂಶವಿದ್ದುದಂತೂ ನಮಗೆ ಖಚಿತ. ಅದು ಆ ಪಂಡಿತರಿಗೆ ಮೆಸ್ಸೀಯನ ಜನನ ಮತ್ತು ಆತನು ಯಾವ ದೇಶಕ್ಕೆ ಸೇರಿದವನು ಎಂಬುದನ್ನು ಸೂಚಿಸಿ ಅವರನ್ನು ಆ ದೇಶದ ರಾಜಧಾನಿಗೆ ಬರುವಂತೆ ಮಾಡಿತು. ಅದಲ್ಲದೆ ಈ ವಿಷಯದಲ್ಲಿ ದೇವರು ಅವರಿಗೆ ಅನಂತರದಲ್ಲಿ ಕನಸಿನಲ್ಲಿ ಅವರನ್ನು ಎಚ್ಚರಿಸಿದ ಹಾಗೆ, ಇಲ್ಲಿಯೂ ಕೆಲವು ಹೆಚ್ಚಿನ ವಿವರಣೆಗಳನ್ನು ನೀಡಿರಬಹುದು. ಹೆರೋದನು ಯುಕ್ತಿಯಿಂದ ಅವರು ಮೆಸ್ಸೀಯನನ್ನು ಹುಡುಕುವುದರಲ್ಲಿ ತನಗೆ ತೀವ್ರ ಆಸಕ್ತಿಯಿರುವಂತೆ ನಟಿಸಿದನು. ತನಗೆ ಸಹಾಯ ಮಾಡುವುದಕ್ಕಾಗಿ ಯೂದಾಯದಲ್ಲಿನ ಜ್ಞಾನಿಗಳನ್ನು ಕರೆಸಿದನು. ಇವರು ಜ್ಯೋತಿಷಿಗಳಾಗಿರದೆ ಧರ್ಮಶಾಸ್ತ್ರ ಮತ್ತು ಪ್ರವಾದಿಗಳ ಗ್ರಂಥಗಳನ್ನು ತಿಳಿದವರಾದ ಪ್ರಧಾನ ಯಾಜಕರು ಮತ್ತು ಶಾಸ್ತ್ರಿಗಳು. ಹೀಗೆ ಅವನು ಇಸ್ರಾಯೇಲಿನ ಜ್ಞಾನಿಗಳನ್ನು ಮೂಡಣ ದೇಶದ ಪಂಡಿತರೊಂದಿಗೆ ಕೂಡಿಸಿ ಮೆಸ್ಸೀಯನು ಹುಟ್ಟಬೇಕಾಗಿರುವುದು ಎಲ್ಲಿ ಎಂದು ಪ್ರವಾದಿಗಳು ಮುಂತಿಳಿಸಿದ್ದಾರೆಂದು ವಿಚಾರಿಸಲು ಹೇಳಿದನು. ಅವರು "ಯೂದಾಯದ ಬೆತ್ಲೆಹೇಮಿನಲ್ಲಿ" ಎಂದು ಕೂಡಲೇ ಉತ್ತರಿಸಿದರು. ಮತ್ತು ಆ ಪಟ್ಟಣವು ಕೇವಲ ಆರು ಮೈಲಿಗಳ ದೂರದಲ್ಲಿರಲು, ಪಂಡಿತರು ಹಿಂದಿರುಗಿ ಬಂದು, ತೋರಿಕೆಗಾಗಿ ತಾನೂ ಹೋಗಿ ಅದರ ಪಾದಗಳಿಗೆ ಅಡ್ಡಬಿದ್ದು ಆರಾಧಿಸುವುದಕ್ಕಾಗಿ, ತನಗೆ ಅರಸನಾಗಬೇಕಿರುವ ಆ ಮಗುವನ್ನು ಎಲ್ಲಿ ಕಂಡುಕೊಳ್ಳಬೇಕೆಂಬುದನ್ನು ತಿಳಿಸುವಂತೆ ಪ್ರಮಾಣ ಮಾಡಿಸಿಕೊಂಡು ಅವರನ್ನು ಕಳುಹಿಸಿಕೊಟ್ಟನು. ಆದರೆ ನಿಜವಾಗಿ ಅವನು ಈ ವಿಷಯವನ್ನು ತಿಳಿದುಕೊಂಡು ಮಗುವಾದ ಯೇಸುವನ್ನು ನಾಶಮಾಡಲು ಉಪಯೋಗಿಸಿಕೊಳ್ಳುವ ಅವಕಾಶವನ್ನು ಉತ್ತಮಪಡಿಸಿಕೊಳ್ಳುವುದಕ್ಕಿದ್ದನು.

ಬೆತ್ಲೆಹೇಮಿಗೆ ಹೋಗುವ ದಾರಿಯಲ್ಲಿ ಅವರು ಮೂಡಣ ದೇಶದಲ್ಲಿ ನೋಡಿದ ಅದ್ಭುತವಾದ ನಕ್ಷತ್ರವು ಅವರಿಗೆ ಮತ್ತೆ ಕಾಣಿಸತೊಡಗಿತು. ಅದು ಒಂದು ಬೆಳಕಿನ ಅಥವಾ ಬೆಂಕಿಯ ಚಂಡಿನಂತೆ ಭೂಮಿಗೆ ಸಮೀಪದಲ್ಲಿ ಚಲಿಸುತ್ತಾ ಅವರು ಮನೆಯನ್ನು ನಿಖರವಾಗಿ ತಲುಪಿ ಆನಂದದಿಂದ ಆ ಮಗು ಮತ್ತು ಅದರ ತಾಯಿಯನ್ನು ಕಂಡುಕೊಳ್ಳುವವರೆಗೂ ಅವರನ್ನು ನಡೆಸಿತು. ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದ ಪ್ರೊಫೆಸರ್ ಆದ ಚಾರ್ಲ್ಸ್ ಎ ಯಂಗ್, ಎಲ್. ಎಲ್. ಡಿ., ಅವರು ಪ್ರತಿಪಾದಿಸಿದಂತೆ ಆಕಾಶದಲ್ಲಿ ನಕ್ಷತ್ರಗಳು ಇದ್ದಕ್ಕಿಂದ್ದಂತೆ ಪ್ರಜ್ವಲಿಸಿ ಒಂದು ಸಮಯದಲ್ಲಿ ಅತ್ಯಂತ ಪ್ರಕಾಶಮಾನವಾಗಿ ಉರಿದು ನಂತರ ಒಂದೆರಡು ವರುಷಗಳಲ್ಲಿ ಥಟ್ಟನೆ ಕಾಂತಿಹೀನವಾಗುವುದು ವಿರಳವಾದ ಘಟನೆಯೇನಲ್ಲ. 1901ನೇ ಇಸವಿಯಲ್ಲಿ ಇಂತಹ ಒಂದು ನಕ್ಷತ್ರವನ್ನು ಗಮನಿಸಲಾಗಿತ್ತು. ಹೀಗಿರಲಾಗಿ ನಂತರದಲ್ಲಿ ಹೇಳಿರುವುದು ಕೇವಲ ನಕ್ಷತ್ರದಂತೆ ಕಾಣುವ ಪ್ರಕಾಶಮಾನವಾದ ವಿದ್ಯುತ್ಕಾಂತಿಯಿಂದ ಹೊಳೆಯುವ ಆಕಾಶದಲ್ಲಿನ ಒಂದು ಸ್ಥಳ ಎನ್ನುವುದು ನಮ್ಮ ಆಲೋಚನೆ.

## ಮೂಡಣ ದೇಶದ ಪಂಡಿತರು

"ಸ್ವಲ್ಪ ಸಮಯದಲ್ಲೇ ಒಬ್ಬ ಪ್ರಬಲನಾದ ಅಧಿಪತಿಯು ಯೂದಾಯ ದೇಶದಲ್ಲಿ ಎದ್ದು ಲೋಕದಲ್ಲೆಲ್ಲಾ ತನ್ನ ಪ್ರಭುತ್ವವನ್ನು ಜಾರಿಗೊಳಿಸುವನೆಂಬ ಗಾಢ ನಂಬಿಕೆಯು ಆ ಕಾಲದಲ್ಲಿ ಪುರಾತನ ಪ್ರವಾದನೆಗಳ ಮೂಲಕ ಮೂಡಣ ದೇಶಗಳ ಪರ್ಯಂತರ ಪ್ರಚಲಿತವಾಗಿತ್ತು ಎನ್ನುವುದು ಟಾಸಿಟಸ್, ಸುಟೋನಿಯಸ್ ಮತ್ತು ಜೋಸೆಫಸ್ ಇವರ ಮೂಲಕ ನಮಗೆ ತಿಳಿಸಲ್ಪಟ್ಟಿರುವುದು" –ಫೆರಾರ್.

"ಒಂದು ಮಗುವು ಪರಲೋಕದಿಂದ ಬಂದು ಸುವರ್ಣ ಯುಗವನ್ನು ಮರಳಿ ಸ್ಥಾಪಿಸಿ ಪಾಪವನ್ನು ತೆಗೆದುಹಾಕುವನೆಂದು ಇದಕ್ಕೆ ಸ್ವಲ್ಪ ಸಮಯಗಳ ಮೊದಲು ಜೀವಿಸಿದ್ದ ವರ್ಜಿಲ್ ಎನ್ನುವರು ಹೇಳಿರುವರು" – ಜಾಕೋಬಸ್.

"ಒಬ್ಬ ಬಿಡಿಸುವಾತನು ಕಾಣಿಸಿಕೊಳ್ಳುವನೆಂದೂ ಮತ್ತು ಆತನನ್ನು ಹುಡುಕುತ್ತಾ ಹೊರಟ ಆತನ ಅನುಯಾಯಿಗಳ ಒಂದು ನಿಯೋಗವು ಚೀನಾ ದೇಶಕ್ಕೆ ಬೌದ್ಧ ದರ್ಮವನ್ನು ಪರಿಚಯಿಸುವರೆಂದು ಕನ್ಫೂಸಿಯಸ್ ಎನ್ನುವರು ಪ್ರವಾದಿಸಿದ್ದರು" –ಅಬ್ಬೋಟ್.

"ಆದರೆ ಇವೆಲ್ಲಕ್ಕಿಂತಲೂ ಸ್ಪಷ್ಟವಾದ ಒಂದು ಪ್ರವಾದನೆಯು ಜೋರಾಸ್ಟರ್ ಎನ್ನುವರ ಮುಖಾಂತರವಾಗಿತ್ತು. ಜೋರಾಸ್ಟರನು ಯೆರೆಮೀಯನ ಶಿಷ್ಯನಾಗಿದ್ದು ಆತನ ಮೂಲಕ ಮೆಸ್ಸೀಯನ ವಿಷಯವಾಗಿ ಕಲಿತುಕೊಂಡು ತನ್ನ ಶಿಷ್ಯರಿಗೆ ಅತನ ಬಗ್ಗೆ ಹೇಳಿದ್ದನು" – ಪರ್ಷಿಯಾ ದೇಶದ ಮಿಷನರಿ.

ದಾನಿಯೇಲ, ಶದ್ರಕ್, ಮೇಷಕ್ ಮತ್ತು ಅಬೇದ್ನೆಗೋ ಎಂಬುವರು ಈ ಸಮಯದಲ್ಲಿ ಪರ್ಷಿಯಾ ದೇಶದಲ್ಲಿ ಅಧಿಕಾರಿಗಳಾಗಿದ್ದು ಲೋಕದಲ್ಲೆಲ್ಲಾ ಆಗ ಪ್ರಮುಖವಾಗಿದ್ದ ಆ ದೇಶದ ಪಂಡಿತರೊಂದಿಗೆ ನಿಕಟವರ್ತಿಗಳಾಗಿದ್ದರೆಂದು ಈ ಸಂದರ್ಭದಲ್ಲಿ ನಾವು ಜ್ಞಾಪಿಸಿಕೊಳ್ಳಬೇಕು. ಈ ಒಂದು ಸಂಬಂಧಗಳ ಮೂಲಕ ಸಂಪ್ರದಾಯಗಳು ಹೇಗೆ ಒಂದು ತಲೆಮಾರಿನಿಂದ ಇನ್ನೊಂದಕ್ಕೆ ಕೊಡೋಣವಾಗುತ್ತದೆಂದು ತಿಳಿಯುವುದು ಸುಲಭ. ಹೀಗೆ ಮೆಸ್ಸೀಯನ ಜನನದ

ವಿಷಯವಾದ ದಾನಿಯೇಲನ ಪ್ರವಾದನೆಗಳು ಪರ್ಶಿಯಾ ದೇಶದ ಪಂಡಿತರಾದ ಜೋರಾಸ್ಟರನ ಅನುಯಾಯಿಗಳಿಗೆ ಚೆನ್ನಾಗಿ ತಿಳಿದಿತ್ತೆಂದು ನಾವು ಸ್ಪಷ್ಟವಾಗಿ ಊಹಿಸಬಹುದು. ಇದಕ್ಕಿಂತಲೂ ಮಿಗಿಲಾಗಿ, ಯೆಹೂದ್ಯರು ಆ ದೇಶದಲ್ಲೆಲ್ಲಾ ಚದುರಿಹೋಗಿದ್ದು ಅವರು ತಮಗೆ ವಾಗ್ದಾನ ಮಾಡಲ್ಪಟ್ಟ ಮೆಸ್ಸೀಯನು ಕೇವಲ ಇಸ್ರಾಯೇಲ್ಯರನ್ನು ಆಶೀರ್ವದಿಸುವುದಲ್ಲದೆ ಅವರ ಮೂಲಕ ಭೂಲೋಕದ ಎಲ್ಲಾ ಕುಲಗಳೂ ಆಶೀರ್ವದಿಸಲ್ಪಡುವುದೆಂಬ ಪ್ರವಾದನೆ ಯನ್ನು ಒಳಗೊಂಡ ಇಸ್ರಾಯೇಲ್ಯರ ನಿರೀಕ್ಷೆಯನ್ನು ಹೆಚ್ಚುಕಡಿಮೆ ಜೀವಂತವಾಗಿಟ್ಟುಕೊಂಡಿದ್ದರು.

## ರಕ್ತಬೋಳ, ಧೂಪ ಮತ್ತು ಚಿನ್ನ

ದೇವರು ತನ್ನ ಶುಭ ಸಂದೇಶವನ್ನು ಸಾರುವ ದೂತರನ್ನಾಗಿ ಕೇವಲ ಜ್ಞಾನಿಗಳನ್ನೇ ಮಾತ್ರವಲ್ಲದೆ ಭಕ್ತರಾದ ಜನರನ್ನು ನಂಬಿಕೆಯುಳ್ಳ ಜನರನ್ನು ಆರಿಸಿಕೊಳ್ಳುವನು. ಅಲ್ಲದೆ ಯೂದಾಯ ಮತ್ತು ಯೆರೂಸಲೇಮಿನ ಜನರನ್ನು ಜಾಗೃತಗೊಳಿಸಲು ಹಾಗೂ ಶ್ರೇಷ್ಠ ಅರಸನನ್ನು ಪ್ರಕಟಿಸಲು ಮೂಡಣ ದೇಶದ ಪಂಡಿತರನ್ನು ಆಯ್ಕೆ ಮಾಡಿದುದು ಈ ನಿಯಮಕ್ಕೆ ಹೊರತೇನಲ್ಲ. ಇವರು ಒಂದು ಅರ್ಥದಲ್ಲಿ ಅನ್ಯಜನರಾಗಿದ್ದು ದೇವರು ತನ್ನ ಕೃಪಾಪೂರ್ಣವಾದ ವಾಗ್ದಾನ ನೀಡಿ ಆವರೆಗೆ ಒಕ್ಕುಬಳಕೆ ಮಾಡಿದ ಜನಾಂಗಕ್ಕೆ ಸಂಬಂಧವಿಲ್ಲದವರಾದರೂ ಅವರು ಒಳ್ಳೆಯವರೂ ಭಯಭಕ್ತಿಯುಳ್ಳ ಜನರೂ ಆಗಿದ್ದು ದೇವರು ಆದುಕೊಳ್ಳುವ ಯಾವ ವಿಧದಲ್ಲಾದರೂ ಅಥವಾ ತನ್ನನ್ನು ಪ್ರತಿನಿಧಿಸಲು ಬಯಸುವ ಯಾವ ಜನಾಂಗದ ಮೂಲಕವಾದರೂ ಇಲ್ಲವೇ ದೂತರ ಮೂಲಕವಾಗಿಯೋ ಭೂಲೋಕದಲ್ಲಿ ಮನುಷ್ಯರೊಳಗೆ ಸಮಾಧಾನ ಮತ್ತು ದೇವರ ಒಲವು ಇರುವ ಆಶೀರ್ವಾದವು ಬರುವುದನ್ನು ತಿಳಿದುಕೊಳ್ಳಲು ಆನಂದವುಳ್ಳವರಾಗಿದ್ದರು.

ಒಂದು ವಿಧದಲ್ಲಿ ಕ್ರೈಸ್ತ ಸಮುದಾಯದ ಅನೇಕರಿಗೆ ಅನ್ಯಜನಾಂಗದವರಾದ ಈ ಪಂಡಿತರ ವಿಷಯದಲ್ಲಿ ಹಲವಾರು ಮುಖ್ಯವಾದ ಪಾಠಗಳನ್ನು ಕಲಿಯಲು ಸಾಧ್ಯ. ಮನುಷ್ಯರೆಲ್ಲರಿಗೆ ದೇವಾನುಗ್ರಹವು ಯಾವ ರೀತಿಯಲ್ಲಾದರೂ ತೋರಿಬರುವುದನ್ನು ಅವರು ಅರಿಯಲು ತಮ್ಮ ಯಾವ ಮಿಥ್ಯ ದೇಶಪ್ರೇಮವು ಅವರಿಗೆ ಅಡ್ಡಿ ಬರಲಿಲ್ಲ. ಅವರು ರಕ್ಷಕನನ್ನು ಕಂಡುಕೊಂಡಾಗ ಆತನ ಮನೆಯ ದೀನತೆಯ ಪರಿಸರವು ಅವರ ಎದೆಗುಂದಿಸಲಿಲ್ಲ. ಅವರು ವಾಕ್ಯದಲ್ಲಿನ ಮೂರು ಅರ್ಥದಲ್ಲಿ ಆತನಿಗೆ ಅಡ್ಡಬಿದ್ದು ಆರಾಧಿಸಿದರು.

1. ಅವರು ಆತನ ಮುಂದೆ ಅಡ್ಡಬಿದ್ದು ಸಾಷ್ಟಾಂಗವಾಗಿ ನಮಸ್ಕರಿಸಿ ತಮ್ಮಲ್ಲಿರುವ ಭಯಭಕ್ತಿಯನ್ನು ಹೀಗೆ ಶಾರೀರಿಕವಾಗಿ ಪ್ರದರ್ಶಿಸಿದರು.

2. ಅವರು ಆತನನ್ನು ತಮ್ಮ ಹೃದಯಗಳಲ್ಲಿ ಆರಾಧಿಸಿದರು ಮತ್ತು ತಮ್ಮ ಆನಂದ ಮತ್ತು ಆತನ ಮೇಲಿರುವ ಭರವಸಗಳನ್ನು ತಮ್ಮ ತುಟಿಗಳ ಮೂಲಕ ಪ್ರದರ್ಶಿಸಿದರು.

3. ಅವರು ತಮ್ಮ ಗಂಟುಗಳನ್ನು ಬಿಚ್ಚಿ ರಾಜನಿಗೆ ತಕ್ಕಂತ ಮೂರು ಉಡುಗೊರೆಗಳನ್ನು ಆತನಿಗೆ ಅರ್ಪಿಸಿದರು. ಅದು ಅಧೀನತೆಯನ್ನು ಸೂಚಿಸುವ ರಕ್ತಬೋಳ, ಸ್ತುತಿಯನ್ನು ಸೂಚಿಸುವ ದೂಪ, ವಿಧೇಯತೆಯನ್ನು ಸೂಚಿಸುವ ಚಿನ್ನ.

**'ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ, ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು'.**

ಶ್ರೇಷ್ಠನಾದ ಮೆಸ್ಸೀಯನ ಬಗ್ಗೆ ಅತ್ಯಲ್ಪ ಬೆಳಕು ಮತ್ತು ಅತ್ಯಲ್ಪ ಪ್ರಮಾಣದ ಪರಿಜ್ಞಾನವನ್ನು ಹೊಂದಿದ್ದ ಘನವಂತರಾದ ಈ ಅನ್ಯದೇಶದವರ ಭಕ್ತಿಭಾವವನ್ನು ನಾವು ಸೂಕ್ಷ್ಮವಾಗಿ ಆಲೋಚಿಸಿದಾಗ ಅದು ನಮ್ಮ ಮುಖವನ್ನು ನಾಚಿಕೆಯಿಂದ ಕೆಂಪೇರುವಂತೆ ಮಾಡುತ್ತದೆ. ಯಜ್ಞದ ಕುರಿಯಾದಾತನ ಬಳಿಗೆ ನಡೆಸಲು ಇನ್ನೂ ಅಧಿಕವಾದ ಬೆಳಕನ್ನು ಹೊಂದಿದವರೂ, ಆತನನ್ನು ಸೂಚಿಸುವ ನಕ್ಷತ್ರವನ್ನು ಇನ್ನೂ ಉತ್ತಮ ಮತ್ತು ನಿಜಾರ್ಥದಲ್ಲಿ ನೋಡಿರುವವರೂ, ಪ್ರವಾದನಾ ವಾಕ್ಯಗಳ ಮೂಲಕವಾಗಿ ಆತನ ಬಳಿಗೆ ನಡೆಸಲ್ಪಟ್ಟವರೂ, ನಾವು ಆತನನ್ನು ಮಗುವಾಗಿ ಕಂಡವರು ಮಾತ್ರವಲ್ಲದೆ ಮುಂದೆ ನಮ್ಮ ಸಂಕಟವನ್ನು ನಮ್ಮ ಬೇನೆಯನ್ನು ಹೊರಲಿರುವವನೂ, ಪಾಪಗಳಿಗಾಗಿ ತನ್ನ ಆತ್ಮವನ್ನು ಪ್ರಾಯಶ್ಚಿತ್ತವಾಗಿ ಅರ್ಪಿಸಲಿರುವನೂ, ಆತನ ಬಾಸುಂಡೆಗಳಿಂದ ನಮಗೆ ಗುಣವಾಗಲಿರುವಲ್ಲಿ, ನಮ್ಮನ್ನು ಪ್ರೀತಿಸಿದವನೂ ತನ್ನ ಅಮೂಲ್ಯ ರಕ್ತದಿಂದ ನಮ್ಮನ್ನು ಕೊಂಡುಕೊಂಡಾತನೂ ಆದವನ ಪಾದಗಳಿಗೆ ಎಂತಹ ಘನತೆಗೌರವಗಳನ್ನು ಅರ್ಪಿಸಬೇಕಿರುವುದು? ಎಷ್ಟು ಗಾಢವಾದ ಭಕ್ತಿಯಿಂದ ನಾವು ಆತನೆದುರು ಮೊಣಕಾಲೂರಿ ಅಡ್ಡಬಿದ್ದಿದ್ದೇವೆ? ನಮ್ಮ ದೊಡ್ಡ ಅರಸನಿಗೆ ಪೂರ್ಣ ಅಧೀನವಾಗಿರುವುದನ್ನು ನಮ್ಮ ಶರೀರದ ಮೂಲಕವಾಗಿ ಹೇಗೆ ಬಹಿರಂಗವಾಗಿ ರುಜುವಾತುಪಡಿಸಿದ್ದೇವೆ? ನಮಗೆ ಮತ್ತು ಲೋಕದ ಜನರಿಗೆ ಆತನು ಒದಗಿಸಿರುವ ಕೃಪಾತಿಶಯಗಳ ಬಗ್ಗೆ ನಾವು ಕೇವಲ ತಿಳುಕೊಂಡವರೂ ಮಾತ್ರವಲ್ಲದೆ ಪರಲೋಕದಿಂದ ನುಡಿದಾತನಿಂದಲೇ ನಿಶ್ಚಿತವಾದ ರೀತಿಯಲ್ಲಿ ಕೇಳಿದ್ದೇವಲ್ಲವೇ? ಹೀಗಿರುವಲ್ಲಿ ನಾವು ನಮ್ಮಲ್ಲಿರುವ ರಕ್ತಬೋಳಗಳನ್ನು ಅರ್ಪಿಸಿದ್ದೇವೋ? ಕಷ್ಟದ ಪರಿಸ್ಥಿತಿಯಲ್ಲೂ ಅತನ ಸೇವೆಮಾಡಲು ನಾವು ಸಿದ್ಧರಿದ್ದೇವೆಂಬುದನ್ನು ತೋರ್ಪಡಿಸಿದ್ದೇವೋ?. ಆತನೊಡನೆ ಕಷ್ಟವನ್ನನುಭವಿಸಿ ಅರಸನನ್ನಾಗಿ ಆತನನ್ನು ಗೌರವಿಸುವುದು ಆನಂದಕರವೆಂದು ಕಂಡುಕೊಂಡಿದ್ದೇವೋ? ಹೊರಗೆ ತೋರುವ ಭಕ್ತಿಯ ವೇಷದಿಂದಿದ್ದು ಅದರ ಬಲವನ್ನು ಬೇಡವೆನ್ನದೆ ನಾವು ಆತನನ್ನು ಹೃದಯಪೂರ್ವಕವಾಗಿ ಆರಾಧಿಸಿದ್ದೇವೋ? ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ನಾವು ಅತನಿಗೆ ಹೃದಯಾರಾಧನೆ, ಮೆಚ್ಚುಗೆ ಮತ್ತು ಕೃತಜ್ಞತೆಗಳನ್ನು ಸೂಚಿಸುವ ದೂಪವನ್ನು ಅರ್ಪಿಸಿದ್ದೇವೋ?

ಚಿನ್ನದಿಂದ ಸೂಚಿತವಾದ ನಮ್ಮ ಭೂಸೊತ್ತನ್ನು ಆತನ ಪಾದಗಳ ಬಳಿ ಇಟ್ಟಿದ್ದೇವೋ? ನಮಗಿರುವುದೆಲ್ಲವೂ ಮತ್ತು ನಾವು ಅರ್ಪಿಸಿರುವುದೆಲ್ಲವೂ ಆ ದೊಡ್ಡ ಅರಸನಾದ

ಇಮ್ಮಾನುವೇಲನಿಂದ ಅಂಗೀಕಾರವಾಗಲು ಬಹು ಅಲ್ಪವಾದವುಗಳೆಂದು ನಾವು ಮನಗೊಂಡಿದ್ದೇವೋ? ಇದು ನಮ್ಮ ಈಗಿನ ಮನೋಭಾವವಾಗಿದೆಯೋ? ಅಲ್ಲದೆ ಭೂಯಾತ್ರೆಯ ಕಡೆಯವರೆಗೂ ಇದೇ ನಮ್ಮ ಮನೋಭಾವವಾಗಿರುವುದೋ?

"ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಕೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ, ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು" ಎಂಬ ಅಪೋಸ್ತಲರ ಮಾತು ನಮ್ಮ ಹೃದಯಗಳನ್ನು ಪ್ರಥಮವಾಗಿ ಪ್ರತಿಷ್ಠೆ ಮಾಡಿಕೊಂಡ ದಿನಗಳಿಗೆ ಮಾತ್ರ ಅನ್ವಯವಾಗದೆ, ಸತ್ಯವೇದವು ತೋರಿಸಿಕೊಟ್ಟಿರುವಂತೆ, ಅದು ಯಜ್ಞದ ಮೂಲಕವಾಗಿ ಮಾಡಿಕೊಂಡ ಒಡಂಬಡಿಕೆಯಾಗಿ, ಅನುದಿನವೂ ನಮ್ಮ ಪಾಲಿಗೆ ನಾವು ಸತ್ತವರಾಗಿ ಕರ್ತನ ಸೇವೆಯನ್ನು ಅಧಿಕವಾಗಿ ಮಾಡಲು ಅನುದಿನವೂ ಜೀವಿಸುವ ಒಪ್ಪಂದ ಮಾಡಿಕೊಂಡು, ಆತನ ಸೊತ್ತಾದ ನಮ್ಮ ದೇಹದ ಮೂಲಕವಾಗಿ ಆತನ ಪ್ರಭಾವವನ್ನು ಪ್ರಕಾಶಪಡಿಸುವುದಕ್ಕೆ ಅನ್ವಯಿಸುತ್ತದೆ. ಈ ಹಿಂದೆ ಇದು ನಮ್ಮ ಮನೋಭಾವವಾಗದಿದ್ದಲ್ಲಿ ಇನ್ನು ಮುಂದಿನ ನಮ್ಮ ಜೀವಿತಾವದಿಯಲ್ಲಿಯಾದರೂ ಇದು ನಮ್ಮ ಮನೋಭಾವವಾಗಿರಬಾರದೆ? ಏನೇ ಬಂದರೂ, ನಾವು ಜ್ಞಾನದಲ್ಲಿ ಅಭಿವೃದ್ಧಿಯಾಗುವುದನ್ನು ಪ್ರೀತಿಯಲ್ಲಿ ಬೆಳೆಯುವುದನ್ನು, ಸೇವೆಯಲ್ಲಿಯೂ, ಆರಾಧನೆಯಲ್ಲಿಯೂ, ಕೃಪಾಪೂರ್ಣನಾದ ಪರಲೋಕದ ನಮ್ಮ ಅರಸನಾಗಿರುವಾತನ ಪಾದಗಳ ಬಳಿ ನಮಗಿರುವುದೆಲ್ಲವನ್ನು ಅರ್ಪಿಸುವ ಸೌಭಾಗ್ಯದಲ್ಲಿ ಮುಂದುವರೆಯುವೆವಲ್ಲವೆ? ಆತನ ರಾಜ್ಯವು ಶೀಘ್ರದಲ್ಲಿ ಸ್ಥಾಪನೆಯಾಗಲಿದ್ದು ಅಲ್ಲಿ ತನ್ನೊಡನೆ ಸಿಂಹಾಸನದಲ್ಲಿ ಕುಳಿತು ಆತನ ಮಹಿಮೆಯಲ್ಲಿ ಪಾಲುಹೊಂದಿ ಆತ್ಮೀಕ ಇಸ್ರಾಯೇಲ್ಯರಾಗಿ ಮಾನವ ಸಂತತಿಯ ಪ್ರತಿ ಕುಲ ಪ್ರಜೆ ಜನಾಂಗ ಭಾಷೆಯವರನ್ನು ಆಶೀರ್ವದಿಸುವ ಕಾರ್ಯದಲ್ಲಿ ಭಾಗವಹಿಸಲು ನಮ್ಮನ್ನು ಆತನು ಆಹ್ವಾನಿಸಿರುವನು.

### "ಕಂದಾ, ನನ್ನ ಕಡೆಗೆ ಮನಸ್ಸುಕೊಡು"

ನಮ್ಮ ಸುವರ್ಣಮಯ ಪಠ್ಯಭಾಗದ ವಿಷಯವು ಇಲ್ಲಿ ನೆನೆಯಲು ಬಹು ಯೋಗ್ಯ ಇದು ಯಾವ ಅರ್ಥದಲ್ಲಿಯೂ ಕಂದಾ ಎಂದೆನಿಸಿಕೊಳ್ಳದ ಪಾಪಿಗಳಿಗೆ ಅನ್ವಯಿಸುವುದಿಲ್ಲ. ಇಲ್ಲಿ ಪಾಪಿಗಳಿಗೆ ಒಂದು ಸಂದೇಶವಿದೆ. ಅದು ಯಾವುದೆಂದರೆ, ಮನತಿರುಗಿಕೊಂಡು ಪಾಪವನ್ನು ತ್ಯಜಿಸಿ (ಕ್ರಿಸ್ತನ) ಅಮೂಲ್ಯವಾದ ರಕ್ತದ ಮೂಲಕವಾಗಿ ದೊರೆಯುವ ನೀತಿನಿರ್ಣಯವನ್ನು ಅಂಗೀಕರಿಸಲು ಒಂದು ಕರೆ. ಆದರೆ "ಕಂದಾ, ನನ್ನ ಕಡೆಗೆ ಮನಸ್ಸುಕೊಡು" ಎಂಬ ಈ ಸುವರ್ಣಮಯ ಪಠ್ಯಭಾಗದ ವಿಷಯವು ಅನ್ವಯಿಸುವುದು ಕೇವಲ ತಮ್ಮ ಪಾಪಗಳಿಗೆ ಪಶ್ಚಾತ್ತಾಪಪಟ್ಟು, ಮಾನಸಾಂತರದ ಜೀವಿತವನ್ನು ನಡೆಸಲು ಯತ್ನಿಸುತ್ತಾ, ಸಾಧ್ಯವಾದಷ್ಟೂ ತಮ್ಮ ಹಿಂದಿನ ತಪ್ಪುಗಳನ್ನು ತಿದ್ದಿಸರಿಪಡಿಸಿಕೊಳ್ಳುತ್ತಾ, ಕ್ರಿಸ್ತನ ಅಮೂಲ್ಯ ರಕ್ತದ ಮೇಲೆ ತಮ್ಮ ಬರವಸವನ್ನಿಟ್ಟು ದೇವರೊಂದಿಗೆ ಆತನ ಕುಮಾರನ ಮರಣದ ಮೂಲಕ ಸಂಧಾನ ಮಾಡಿಕೊಂಡವರಿಗೆ ಮಾತ್ರ.

ನಮ್ಮ ಹೃದಯಗಳನ್ನು (ಮನಸ್ಸುಗಳನ್ನು) ಕೊಟ್ಟಾಗ, ಅದು ಉತ್ಕೃಷ್ಟವಾದ ಉನ್ನತವಾದ ಒಂದು ಪೂರ್ಣಾರ್ಥದಲ್ಲಿ ನಮ್ಮ ಸರ್ವಸ್ವವನ್ನು ಕೊಡುವುದನ್ನು ಒಳಗೊಂಡಿದ್ದು. ಆ ಪಂಡಿತರು ನೀಡಿದ ಮೂರು ಉಡುಗೊರೆಗಳ ದೃಷ್ಟಾಂತದ ಮೂಲಕ ನನ್ನ ಕಡೆಗೆ ಮನಸ್ಸು (ಹೃದಯ) ಕೊಡು ಎಂಬ ಸಂಕ್ಷಿಪ್ತವಾದ ಹೇಳಿಕೆಯನ್ನು ಸೂಚಿಸುತ್ತದೆ. ಯಾರಾರು ಕರ್ತನಿಗೆ ತನ್ನ ಹೃದಯವನ್ನು(ಮನಸ್ಸನ್ನು) ಶರತ್ತುಗಳಿಲ್ಲದೆ ಪೂರ್ಣವಾಗಿ ನೀಡುವನೋ ಅವನು ತನ್ನ ದೇಹವನ್ನು ತನ್ನ ಆರಾಧನೆ ಮತ್ತು ಭಯಭಕ್ತಿ ಸ್ತುತಿಗಳನ್ನು, ತನ್ನ ಭೂಸಂಪತ್ತು ಸಮಯ ತಲಾಂತು ಪ್ರಭಾವ ಹಣ ಇವೆಲ್ಲವುಗಳನ್ನು ಆ ಅರಸನನ್ನು ಮಹಿಮೆಪಡಿಸುವ ಆನಂದಕರವಾದ ಸೇವೆಯಲ್ಲಿ ಉಪಯೋಗಿಸಲು ನೀಡಿರುವನು.

ಯಾರು ಈವರೆಗೂ ಇಂತಹ ಒಂದು ಕ್ರಮವನ್ನು ತೆಗೆದುಕೊಂಡಿಲ್ಲವೋ ಅವರಿಗೆ ನಾವು ಒತ್ತಾಯಿಸುವುದೆಂದರೆ, ಈ ಕ್ರಮವನ್ನು ತೆಗೆಯುವುದರ ಅತಿಶಯದ ಪ್ರತಿಫಲವಾಗಿ ದೊರೆಯುವ ಪ್ರಭಾವ ಮಾನ ನಿರ್ಲಯತ್ವಗಳನ್ನು ಪಡೆಯುವ ಕೃಪಾ ನಿರೀಕ್ಷೆಯನ್ನು ಪರಿಗಣಿಸದೆ ಪ್ರಾಮಾಣಿಕವಾಗಿ ಇದನ್ನು ಅಂಗೀಕರಿಸಬೇಕು. ಅಪೋಸ್ತಲನು ಪ್ರಕಟಿಸಿರುವಂತೆ ಇದು ನಮ್ಮ ವಿವೇಕಪೂರ್ವಕವಾದ ಆರಾಧನೆ. ಪ್ರಿಯ ವಿಮೋಚಕನ ನೀತಿವಸ್ತ್ರವನ್ನು ಧರಿಸುವುದರಿಂದ ದೊರೆಯುವ ನೀತಿಫಲಗಳ ಆಸರೆಯಲ್ಲಿ ತಮ್ಮನ್ನು ಸೇವೆಗೆ ಅರ್ಪಿಸಿಕೊಳ್ಳುವವರನ್ನು ಅಂಗೀಕರಿಸಲು ದೇವರು ಸಿದ್ಧವಿರುವನೆಂಬ ಅರಿವು ವಿವೇಚನೆಯುಳ್ಳವರಿಗೆ ಸಂತೋಷ ತರುವಂಥದ್ದಾಗಬೇಕು.

ಯಾರು ಈಗಾಗಲೇ ದೇವಾನುಗ್ರಹವನ್ನು ಅಂಗೀಕರಿಸಿ ತಮ್ಮ ದೇಹಗಳನ್ನು ಸಜೀವ ಯಜ್ಞವಾಗಿ ಅರ್ಪಿಸಿಕೊಂಡು ಈಗಾಗಲೇ ತಮ್ಮ ಹೃದಯವನ್ನು ದೇವರಿಗೆ ಕೊಟ್ಟಿರುತ್ತಾರೋ ಅವರಿಗೆ ನಾವು ಒತ್ತಾಯಿಸುವುದೆಂದರೆ, ಒಂದು ಸಾರಿ ವೇದಿಕೆಯ ಮೇಲೆ ಯಜ್ಞವನ್ನು ಇರಿಸಿದ ಮೇಲೆ ಅದು ಅಲ್ಲೇ ಉಳಿದಿರಬೇಕು ಮತ್ತು ಅದು ದೀರ್ಘಕಾಲ ಉಳಿದಿರುವಷ್ಟೂ ಸೇವೆಯು ಹೆಚ್ಚು ಆನಂದಕರವಾಗಿರುವುದು. ಯಜ್ಞಾರ್ಪಣಾ ಸೇವೆಯ ಪ್ರತಿಯೊಂದು ಅವಕಾಶದ ಬೆಲೆಯನ್ನು ಮೆಚ್ಚಿ ಮನನ ಮಾಡಿಕೊಂಡಷ್ಟೂ ಹೆಚ್ಚು ಕೃತಜ್ಞತಾ ಪೂರ್ಣವಾಗಿರಬೇಕು ಹೃದಯ; ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯ ಅನುಭವವೂ ಹೆಚ್ಚು ಸಮೃದ್ಧವಾಗಿರಬೇಕು. ಅದು ನಮ್ಮ ಹೃದಯಗಳಲ್ಲಿ ಆಳ್ವಿಕೆ ಮಾಡಿ ನಮ್ಮನ್ನು ಪವಿತ್ರಾತ್ಮವರಗಳ ಮೂಲಕ ದೇವರು ತನ್ನ ಮಗನನ್ನು ಪ್ರೀತಿಸಿ ಆತನಿಗೆ ಭಯಭಕ್ತಿ ತೋರಿಸುವವರಿಗಾಗಿ ಸಿದ್ಧಮಾಡಿರುವ ಮಹಿಮಾ ಪದವಿ ಹೊಂದಲು ಹೆಚ್ಚೆಚ್ಚಾಗಿ ಸಿದ್ಧಪಡಿಸಬೇಕು.

# ಐಗುಪ್ತಕ್ಕೆ ಪಲಾಯನ

**ರೀಪ್ರಿಂಟ್ ಪುಟ 1681**

## ಮತ್ತಾಯ 2:13–23

**" ನೀನು ಹೋಗುವಾಗಲೂ ಬರುವಾಗಲೂ ಇಂದಿನಿಂದ ಸದಾಕಾಲವೂ ಯೆಹೋವನು ನಿನ್ನನ್ನು ಕಾಪಾಡುವನು " ಕೀರ್ತನೆ 121:8**

ಈ ಪಾಠದಲ್ಲಿ ನಾವು ವಿಶೇಷವಾಗಿ ಗಮನಿಸಯೋಗ್ಯವಾದ ಐದು ವಿಶೇಷ ಅಂಶಗಳಿರುವುದು. ಅವುಗಳು ಯಾವುವೆಂದರೆ:

1. ದೇವರ ದೂರದೃಷ್ಟಿ ಹಾಗೂ ಮುಂದಾಗಿ ಮಾಡಿದ ಏರ್ಪಾಡುಗಳು. ಆತನ ಭವಿಷ್ಯತ್ ಜ್ಞಾನ ನಮ್ಮ ಗ್ರಹಿಕೆಗೆ ಮೀರಿದುದು. ಮಿತಿಯುಳ್ಳ ನಮ್ಮ ಮನಸ್ಸಿಗೆ ಮಿತಿಯಿಲ್ಲದ ಮನಸ್ಸಿನ ಆಳವನ್ನು ಅಳೆಯಲಾಗದು. ಆದರೂ ಯೆಹೋವನ ಜ್ಞಾನವಿವೇಕಗಳು ಆತನ ಲೋಕ ಸಾಮ್ರಾಜ್ಯದಲ್ಲಿನ ಅಗತ್ಯತೆಗೆ ಬೇಕಾಗಿರುವುಗಳಿಗಿಂತಲೂ ಎಲ್ಲವುಗಳಿಗಿಂತಲೂ ಉತ್ಕೃಷ್ಟವಾದದ್ದು. ಮತ್ತು ಮನುಷ್ಯರೆಲ್ಲರ ಕೋಪವೂ ಹಾಗೂ ಅಂಧಕಾರದ ಶಕ್ತಿಯೆಲ್ಲವುಗಳೂ ಒಟ್ಟುಗೂಡಿ ಒಂದು ಸಣ್ಣಪ್ರಮಾಣದಲ್ಲಿಯಾದರೂ ದೇವರ ಯೋಜನೆಯನ್ನು ನಿಷ್ಫಲಗೊಳಿಸಲಾರವು. ಆತ್ಮೀಕರೂಪದ ತನ್ನ ಮಗನನ್ನು ಮನುಷ್ಯ ಸ್ವಭಾವಕ್ಕೆ ಮಾರ್ಪಡಿಸಲು ಸಮರ್ಥವಾದ ಅದೇ ಶಕ್ತಿಯು ಆತನನ್ನು ಅಸಹಾಯಕವಾದ ಎಳೆತನದಿಂದಲೂ ಲೋಕದ ವಿಮೋಚನೆಗಾಗಿ ತನ್ನನ್ನು ಯಜ್ಞವನ್ನಾಗಿ ಅರ್ಪಿಸಿಕೊಳ್ಳಲು ನೇಮಕವಾದ ಸಮಯದವರೆಗೂ ಎಲ್ಲಾ ವಿರೋಧಿಗಳಿಂದ ಕಾಪಾಡಲು ಸಮರ್ಥವಾಗಿರುವುದು.

2. ನಾವು ಮತ್ತೆ ದೇವದೂತರ ಸೇವೆಯನ್ನು ಗಮನಿಸಿದ್ದೇವೆ, ಇವರೆಲ್ಲರೂ ರಕ್ಷಣೆಯನ್ನು ಬಾಧ್ಯವಾಗಿ ಹೊಂದಬೇಕಾಗಿರುವವರ ಸೇವೆಗೋಸ್ಕರ ಕಳುಹಿಸಲ್ಪಡುವ ಊಳಿಗದ ಅತ್ಮಗಳಲ್ಲವೋ? ಇಬ್ರಿಯ 1:14 ಹೌದು, ಅವರು ಯಾವ ರೀತಿಯ ಸೇವೆಗೂ ಸಿದ್ಧರಿದ್ದಾರೆ. – 1 ಪೇತ್ರ 1:12.

3. ಕರ್ತನ ದೂತನು ನೀಡಿದ ಎಚ್ಚರಿಕೆ ಮತ್ತು ಆತನ ಸಮಾಲೋಚನೆಗಳ ಮೇಲಿನ ಯೋಸೇಫನ ಮತ್ತು ಮರಿಯಳ ನಂಬಿಕೆ ಹಾಗೂ ಅದಕ್ಕೆ ಅವರ ಪ್ರಾಮಾಣಿಕವಾದ ವಿಧೇಯತೆ ಗಮನಾರ್ಹ. ಅವರು ಹಿಂಜರಿಯಲಿಲ್ಲ, ಅದನ್ನು ಪ್ರಶ್ನಿಸಲೂ ಇಲ್ಲ; ಆದರೆ ಕರ್ತನ ಆದೇಶವನ್ನು ಕೂಡಲೇ ಪಾಲಿಸಿದರು. ಅಲ್ಲದೆ ಐಗುಪ್ತಕ್ಕೆ ಹೊರಟಂದಿನಿಂದ ಪ್ಯಾಲೆಸ್ಟೇನಕ್ಕೆ ಹಿಂದಿರುವವರೆಗೂ ಕರ್ತನ ಆಶೀರ್ವಾದ ಮತ್ತು ರಕ್ಷಣೆ ಅವರೊಂದಿಗೆ ಬಂದಿತ್ತು. ಹೊಸ ರಾಜನಾದ ಅರ್ಖೆಲಾಯನ (ಹೆರೋದನ ಮಗನೂ ಉತ್ತರಾಧಿಕಾರಿಯೂ ಆದ ಇವನು ಎದುರಾಳಿಗಳ ದಮನ, ಕ್ರೂರತನ, ದುರಹಂಕಾರ, ಭೋಗಾಸಕ್ತಿಯಲ್ಲಿ ತನ್ನ ತಂದೆಯನ್ನೂ ಮೀರಿಸಿದವನು) ಅಧಿಕಾರದಿಂದ ತಪ್ಪಿಸಿಕೊಳ್ಳ ಸಲುವಾಗಿ ಯೆರೂಸಲೇಮಿಗೆ ಹತ್ತಿರವಿದ್ದ ಬೆತ್ಲೆಹೇಮಿಗೆ ಹೋಗುವ ಬದಲು ನಜರೇತಿಗೆ ಹೋದುದರಲ್ಲಿ ಯೋಸೇಫ ಮತ್ತು ಮರಿಯಳು ಕರ್ತನ ನಿರ್ದೇಶನವನ್ನು ಅಲಕ್ಷ್ಯಮಾಡಲಿಲ್ಲ. ಅವರು ಹೋಗಿ ಇಸ್ರಾಯೇಲ್ ದೇಶದ ಯಾವ ಭಾಗದಲ್ಲಿಯಾದರೂ ನೆಲೆಸಬಹುದಿತ್ತು.

4. ಇಲ್ಲಿ ಲಿಖಿತವಾಗಿರುವ ಸಂದರ್ಭಗಳಲ್ಲಿ ಹಲವು ಪ್ರವಾದನೆಗಳು ನೆರವೇರಿದುದನ್ನು ನಾವು ನೋಡುತ್ತೇವೆ. ಅವು ಯಾವುವೆಂದರೆ, (ಅ) "...ನನ್ನ ಮಗನನ್ನು ಐಗುಪ್ತದೇಶದಿಂದ ಕರೆದೆನು". ಬೇರೆ ಇತರ ಪ್ರವಾದನೆಗಳಂತೆ ಇದರಲ್ಲಿ ಎರಡು ಬಗೆಯ ಮಹತ್ವಗಳಿರುವುದು. ಮೂಲವಾಗಿ ಇದು ಇಸ್ರಾಯೇಲ್ಯರು ಐಗುಪ್ತದ ದಾಸತ್ವದಿಂದ ಬಿಡುಗಡೆಯಾಗಿ ಹೊರಟು ಬಂದದ್ದಕ್ಕೆ ಅನ್ವಯಿಸುತ್ತದೆ (ಹೋಶೇಯ 11:1, ವಿಮೋಚನಾಕಾಂಡ 4:22, 23) ಆನಂತರದಲ್ಲಿ ಮಗುವಾದ ದೇವಕುಮಾರನು ಹೆರೋದನು ಸತ್ತ ಮೇಲೆ ಐಗುಪ್ತದಿಂದ ಹಿಂದಿರುಗಿದುದ್ದಕ್ಕೆ ಅನ್ವಯಿಸುತ್ತದೆ. (ಮತ್ತಾಯ 2:15) ಮತ್ತು ಇನ್ನೂ ವಿಶಾಲವಾದ ರೀತಿಯಲ್ಲಿ ಐಗುಪ್ತವು ಲೋಕವನ್ನು ಸೂಚಿಸುವುದು ಹಾಗೂ ಕ್ರಿಸ್ತನು ಮತ್ತು ದೇವರ ಪೂರ್ಣವಾದ ಸಭೆ ಅಲ್ಲಿಂದ ಕರೆಯಲ್ಪಟ್ಟ ವಾಗ್ದತ್ತ ಸಂತತಿಯಾಗಿರುವುದು. (ಆ) ನಜರೇತಿಗೆ ನೆಲಸುವಂತೆ ಮಾಡಿದ ಸಂದರ್ಭವು ಮತ್ತಾಯ 2:23ರಲ್ಲಿ ಹೇಳಿರುವ "ನಜರಾಯನೆಂಬ ಹೆಸರು ಆತನಿಗೆ ಬರುವುದು" ಎಂಬ ಪ್ರವಾದನೆ ನೆರವೇರುವಂತೆ ಮಾಡಿತು. (ಇ) ಬೆತ್ಲೆಹೇಮಿನಲ್ಲಿ ಮಕ್ಕಳನ್ನು ಕೊಲ್ಲಲ್ಪಟ್ಟದ್ದು ಪ್ರವಾದನೆಯಲ್ಲಿ ತಿಳಿಸಲಾಗಿತ್ತು. ಯೆರೆಮೀಯ 31:15 ಮತ್ತು ಮತ್ತಾಯ 2:17, 18 ನೋಡಿ. ಇಲ್ಲಿ ಸ್ಮರಿಸಬೇಕಿರುವುದೆಂದರೆ, ಈ ಎರಡು ಸನ್ನಿವೇಶಗಳಲ್ಲಿಯೂ ಘಟನೆಗಳು ಪ್ರವಾದನೆಗೆ ಹೊಂದುವಂತೆ ಹೇಳಲ್ಪಟ್ಟಿಲ್ಲ ಆದರೆ ಪ್ರವಾದನೆಗಳು ಘಟನೆಗಳನ್ನು ಮುಂತಿಳಿಸುವಂತೆ ಹೊಂದಿಸಿ ಅವುಗಳು ದೇವರ ಭವಿಷ್ಯತ್ ಜ್ಞಾನವನ್ನು ತೋರಿಸುವವುಗಳಂತೆ ಮಾಡಲಾಗಿದೆ.

5. ಮಗುವಾದ ವಿಮೋಚಕನನ್ನು ಕಾಪಾಡಲು ದೇವರು ಆಗಿನ ಕಾಲದ ವ್ಯವಸ್ಥೆಯಲ್ಲಿ ಮಧ್ಯಪ್ರವೇಶಿಸಲಿಲ್ಲವೆಂಬುದು ಗಮನಾರ್ಹ. ತನಗೆ ಎಲ್ಲಾ ಅಧಿಕಾರಗಳಿದ್ದರೂ ಹೆರೋದನನ್ನು ಸಾಯಿಸುವುದಾಗಲೀ ಆತನನ್ನು ಪದಚ್ಯುತಿಗೊಳಿಸುವುದಾಗಲಿ ಇಲ್ಲವೇ ಆತನ ಅಧಿಕಾರ ಪ್ರಭಾವಗಳಿಗೆ ಅಡ್ಡಬರುವುದಾಗಲಿ ಮಾಡಲಿಲ್ಲ. ಅಂತಹ ವ್ಯವಸ್ಥೆಗಳನ್ನು ಅಮೂಲಾಗ್ರವಾಗಿ ಬದಲಾಯಿಸುವ ಕ್ರಮವನ್ನು ತೆಗೆದುಕೊಳ್ಳುವ ಸಮಯ ಇನ್ನೂ ಬಂದಿರಲಿಲ್ಲ. "ಅನ್ಯಜನಗಳ ಸಮುದಾಯವು ದೇವರ ರಾಜ್ಯವನ್ನು ಸೇರುವ ಸಮಯವು" ಮುಕ್ತಾಯವಾಗುವ ವರೆಗೂ ಅಂದರೆ ಕ್ರಿ.ಶ. 1915 ರವರೆಗೆ. ಈ ಲೋಕದ ರಾಜ್ಯಗಳಿಗೆ ಆಡಳಿತಾಧಿಕಾರವನ್ನು ಕೊಡಲಾಗಿರುವುದು. ಪರಿಣಾಮವಾಗಿ,

ಅವರು (ಆತನ ಚಿತ್ತಾನುಸಾರ). ಒಳ್ಳೆಯ ರೀತಿಯಲ್ಲೋ ಅಥವಾ ಕೆಟ್ಟ ರೀತಿಯಲ್ಲೋ ತಮಗೆ ಸರಿ ಕಾಣುವ ಹಾಗೆ ಆಡಳಿತ ನಡೆಸಲು ಬಿಡಲಾಗಿರುವುದು. ಇದಕ್ಕೆ ಹೊರತೇನೆಂದರೆ, ದೇವರ ಯೋಜನೆಗೆ ಅಡ್ಡಬರುವಂಥ ಸನ್ನಿವೇಶಗಳಲ್ಲಿ ಮಾತ್ರ ದೇವರು ಯಾವಾಗಲೂ ಅವುಗಳನ್ನು ಮಾರ್ಪಡಿಸುವ ಅಥವಾ ನಿರ್ಬಂಧಿಸುವ ಹಾಗೆ ಮಾಡುವನು.

ಈಗ ಇಲ್ಲಿ ಹೇಳಿರುವ ಸನ್ನಿವೇಶದಲ್ಲಿ ಮಾತ್ರ ದೇವರು ರಕ್ಷಣೆಯ ವಿಷಯವಾದ ಯೋಜನೆಯು ಕೇಂದ್ರೀಕೃತವಾಗಿರುವ ತನ್ನ ಮಗನನ್ನು ಕಾಪಾಡಲು (ಅಂದಿನ ವ್ಯವಸ್ಥೆಯಲ್ಲಿ) ಮಧ್ಯಪ್ರವೇಶಿಸಿದನು. ಆದರೆ ಆ ಮಗನು ಲೋಕದ ವಿಮೋಚನೆಗಾಗಿ ಯಜ್ಞಾರ್ಪಿತನಾಗಲು ನಿಗಧಿಯಾದ ಸಮಯ ಬಂದಾಗ ಅಂಧಕಾರದ ಈ ಲೋಕದ ಅಧಿಪತಿಗಳು ತಮ್ಮದೇ ಆದ ಮಾರ್ಗವನ್ನು ಹಿಡಿದಿದ್ದರು. ಆಗ ದೇವರ ಮಗನನ್ನು ಶಿಲುಬೆಗೆ ಹಾಕಲು ಅವರನ್ನು ಬಿಡಲಾಯಿತು. ಯಾಕೆಂದರೆ ಅನೇಕರನ್ನು ಬಿಡಿಸಿಕೊಳ್ಳಲು ತನ್ನನ್ನು ಈಡುಕೊಡುವ ಉದ್ಧೇಶಕ್ಕಾಗಿಯೇ ಆತನು ಲೋಕಕ್ಕೆ ಬಂದಿದ್ದನು ಮತ್ತು ಆ ಸಮಯವು ಬಂದಿತು. – ಮತ್ತಾಯ 20:28; ಯೋಹಾನ 2:4, 7:6; ಲೂಕ 22:53.

ಅರಸನ ಕೋಪಕ್ಕೆ ತಪ್ಪಿಸಿಕೊಳ್ಳಲಾಗದೆ ವಧೆಯಾದ ಮಕ್ಕಳ ನಿಮಿತ್ತ ಉಂಟಾದ ಕಣ್ಣೀರು ಗೋಳಾಟಗಳು ನರಳುತ್ತಿರುವ ಜಗತ್ತಿನ ದೀರ್ಘಕಾಲದ ವ್ಯಥೆಯ ಮತ್ತೊಂದು ಘಟನೆಯ ದಾಖಲೆ. ಈ ವಿಷಯವನ್ನು ದೇವರು ಮನಸ್ಸಿಗೆ ತೆಗೆದುಕೊಂಡಿಲ್ಲವೆಂತಲ್ಲ. ಆತನ ದೂರದೃಷ್ಟಿಯುಳ್ಳ ಜ್ಞಾನದ ಮೂಲಕವಾಗಿ "ಸಮಸ್ತವನ್ನು ಸರಿಮಾಡುವ ಕಾಲಗಳು" ಬರುವವರೆಗೆ ವಿವೇಕದಿಂದ ಕೂಡಿದ ದಯಾಪೂರ್ಣವಾದ ಉದ್ಧೇಶಕ್ಕಾಗಿ ಇದನ್ನು ಹೀಗೆಯೇ ಬಿಡಲಾಗಿದೆ.

ಈ ಸುವರ್ಣಮಯ ಪಠ್ಯಭಾಗದಿಂದ ದೊರೆಯುವ ಭರವಸಪೂರ್ಣ ವಾಗ್ದಾನವು ಆತ್ಮೀಕ ಇಸ್ರಾಯೇಲ್ಯರೂ ಪ್ರತಿಷ್ಠಿತರು ಆದ ದೇವಜನರ ಆತ್ಮೀಕ ಜೀವಿತಗಳಿರುವ ವಿಶೇಷ ಸಂಬಂಧವನ್ನು ಸೂಚಿಸುವುದು. ಅವರು ಕ್ರಿಸ್ತನಲ್ಲಿ ಹೊಸ ಸೃಷ್ಟಿಗಳಾಗಿ ಇದುವರೆಗೂ ದೇವರ ಪಾಲನೆಯಲ್ಲಿ ಯಾವಾಗಲೂ ಸುರಕ್ಷಿತರಾಗಿರುವರು.

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ. ಶ. 12 | ಯೆರೂಸಲೇಮ್ | ಹನ್ನೆರಡು ವರುಷ ವಯಸ್ಸಿನ ಯೇಸು ಪಸ್ಕ ಹಬ್ಬದಲ್ಲಿ ಮನೆಗೆ ಹಿಂದಿರುಗುವಿಕೆ | –– | –– | 2:41–52 | –– |

# ಲೂಕ 2:41–52

ಆತನ ತಂದೆತಾಯಿಗಳು ಪ್ರತಿವರುಷವೂ ಪಸ್ಕ ಹಬ್ಬದ ಜಾತ್ರೆಗೆ ಯೆರೂಸಲೇಮಿಗೆ ಹೋಗುತ್ತಿದ್ದರು. ಹೀಗಿರಲಾಗಿ ಆತನು ಹನ್ನೆರಡು ವರುಷದವನಾದಾಗ ಅವರು ಹಬ್ಬದ ಪದ್ಧತಿಯ ಪ್ರಕಾರ ಅಲ್ಲಿಗೆ ಹೋದರು. ಬರುವಾಗ ಬಾಲಕನಾದ ಯೇಸು ಯೆರೂಸಲೇಮಿನಲ್ಲಿಯೇ ಉಳುಕೊಂಡನು. ಆತನ ತಂದೆ ತಾಯಿಗಳು ಅದನ್ನು ತಿಳಿಯದೆ ಆತನು ಜಾತ್ರೆಯವರ ಗುಂಪಿನಲ್ಲಿ ಸೇರಿರುವನು ಎಂದು ಭಾವಿಸಿ ಒಂದು ದಿನದ ಪ್ರಯಾಣ ನಡೆದು ಬಂಧುಬಾಂಧವರಲ್ಲಿಯೂ ಪರಿಚಿತಿಯವರಲ್ಲಿಯೂ ಆತನನ್ನು ಹುಡುಕಿ ಕಾಣದೆ ತಿರಿಗಿ ಯೆರೂಸಲೇಮಿಗೆ ಹುಡುಕಿಕೊಂಡು ಹೋದರು. ಮೂರು ದಿನಗಳ ಮೇಲೆ ಆತನನ್ನು ದೇವಾಲಯದಲ್ಲಿ ಕಂಡರು. ಆತನು ಬೋಧಕರ ನಡುವೆ ಕುಳಿತುಕೊಂಡು ಅವರ ಉಪದೇಶವನ್ನು ಕೇಳುತ್ತಾ ಪ್ರಶ್ನೆಮಾಡುತ್ತಾ ಇದ್ದನು. ಅತನು ಆಡಿದ ಮಾತುಗಳನ್ನು ಕೇಳಿದವರೆಲ್ಲರೂ ಆತನ ಬುದ್ಧಿಗೂ ಉತ್ತರಗಳಿಗೂ ಆಶ್ಚರ್ಯಪಟ್ಟರು. ತಂದೆತಾಯಿಗಳು ಆತನನ್ನು ಕಂಡು ಬೆರಗಾದರು. ಮತ್ತು ಆತನ ತಾಯಿಯು – ಕಂದಾ, ನೀನು ನಮಗೆ ಯಾಕೆ ಹೀಗೆ ಮಾಡಿದಿ? ನಿನ್ನ ತಂದೆಯೂ ನಾನು ಎಷ್ಟೋ ತಳಮಳಗೊಂಡು ನಿನ್ನನ್ನು ಹುಡುಕಿ ಬಂದೆವಲ್ಲಾ ಎಂದು ಹೇಳಲು ಆತನು ಅವರಿಗೆ – ನೀವು ನನ್ನನ್ನು ಹುಡುಕಿದ್ದೇನು? ನಾನು ನನ್ನ ತಂದೆಯ ಮನೆಯಲ್ಲಿ ಇರಬೇಕಾದದ್ದು ನಿಮಗೆ ತಿಳಿಯಲಿಲ್ಲವೋ? ಎಂದು ಉತ್ತರಕೊಟ್ಟನು. ಆದರೆ ಆತನು ಹೇಳಿದ ಮಾತಿನ ಅರ್ಥವನ್ನು ಅವರು ಗ್ರಹಿಸಲಿಲ್ಲ. ಬಳಿಕ ಆತನು ಅವರ ಜೊತೆಯಲ್ಲಿ ನಜರೇತಿಗೆ ಬಂದು ಅವರಿಗೆ ಅಧೀನನಾಗಿದ್ದನು. ಆತನ ತಾಯಿಯು ಈ ಸಂಗತಿಗಳನ್ನೆಲ್ಲಾ ತನ್ನ ಮನಸ್ಸಿನಲ್ಲಿ ಇಟ್ಟುಕೊಂಡಳು. ಯೇಸು ಜ್ಞಾನದಲ್ಲಿಯೂ ದೇಹಬಲದಲ್ಲಿಯೂ ವೃದ್ಧಿಯಾಗುತ್ತಾ ಬಂದನು. ಇದಲ್ಲದೆ ದೇವರ ಮತ್ತು ಮನುಷ್ಯರ ದಯೆಯು ಆತನ ಮೇಲೆ ಹೆಚ್ಚಾಗುತ್ತಾ ಬಂತು.

# “ಯೇಸು ಜ್ಞಾನದಲ್ಲಿಯೂ ದೇಹಬಲದಲ್ಲಿಯೂ ವೃದ್ಧಿಯಾಗುತ್ತಾ ಬಂದನು”

**ರೀಪ್ರಿಂಟ್ ಪುಟ 2558**

## ಲೂಕ 2:41–52

**" ಯೇಸು ಜ್ಞಾನದಲ್ಲಿಯೂ ದೇಹಬಲದಲ್ಲಿಯೂ ವೃದ್ಧಿಯಾಗುತ್ತಾ ಬಂದನು, ಇದಲ್ಲದೆ ದೇವರ ಮತ್ತು ಮನುಷ್ಯರ ದಯೆಯು ಆತನ ಮೇಲೆ ಹೆಚ್ಚಾಗುತ್ತಾ ಬಂತು”.**

ನಮ್ಮ ಕರ್ತನಾದ ಯೇಸುವಿನ ಬಾಲ್ಯ ಪ್ರಾಯ ಯೌವ್ವನಾವಸ್ಥೆಯ ಬಗ್ಗೆ ಬಹು ವಿಚಿತ್ರವಾದ ಊಹಾಪೋಹಗಳು ಪ್ರಚಲಿತವಾಗಿವೆ. ಅವುಗಳ ಬಗ್ಗೆ ನಮಗೆ ಯಾವ ಸಹಾನುಭೂತಿಯೂ ಇರುವುದಿಲ್ಲ. ಸತ್ಯವೇದ ವಿದ್ಯಾರ್ಥಿಯು ತನ್ನನ್ನು ಸತ್ಯವೇದದಲ್ಲಿ ತಿಳಿಸಿರುವ ವಿಷಯಗಳಿಗೆ ಸೀಮಿತಪಡಿಸಿಕೊಳ್ಳಬೇಕು. ಮತ್ತು ನಿಜವಲ್ಲದ ಅಸತ್ಯ ಸಂಗತಿಗಳ ವಿಷಯವಾದ ಕಲ್ಪನೆಗಳಿಗೂ ಊಹಾಪೋಹಗಳಿಗೂ ಮನಸ್ಸುಗಳನ್ನು ನಡೆಸಿ ಹರಿಯ ಬಿಡಬಾರದು. ನಮ್ಮ ರಕ್ಷಕನ ಜೀವಿತದ ಈ ಅವಧಿಯ ಸಂಗತಿಗಳ ಬಗ್ಗೆ ತಿಳಿಸುವ ಅಗತ್ಯತೆಯನ್ನು ದೇವರು ಮುಂದಾಗಿ ನಿರೀಕ್ಷಿಸಿದ್ದಲ್ಲಿ ನಿಸ್ಸಂಶಯವಾಗಿಯೂ ಪವಿತ್ರಾತ್ಮಪ್ರೇರಿತ ಗ್ರಂಥದಲ್ಲಿ ಅದು ದೊರೆಯುವಂತೆ ಮಾಡುತ್ತಿದ್ದನು. ಇದು ನಮ್ಮ ಕರ್ತನ ಮುಂಚಿನ ಜೀವಿತದಲ್ಲಿ ಗಮನಾರ್ಹವಾದ ಇಲ್ಲವೇ ಪ್ರಶಂಸನೀಯವಾದ ಸಂಗತಿಗಳು ಇರಲಿಲ್ಲವೆಂದಲ್ಲ. ಆದರೆ ಕರ್ತನು ಇವುಗಳನ್ನು ನಾವು ಗಣನೆಗೆ ತಾರದೆ ತಾನು ಯೋರ್ದನಿನಲ್ಲಿ ಸ್ನಾನ ದೀಕ್ಷೆ ಹೊಂದಿದ ನಂತರ ಆತನ ಮೂರುವರೆ ವರುಷಗಳ ಪವಿತ್ರಾತ್ಮನ ಮೂಲಕವಾದ ಬಹಿರಂಗ ಸೇವೆಯ ವಿಷಯಗಳಲ್ಲಿ ಮುಖ್ಯವಾಗಿ ಗಮನ ಹರಿಸಬೇಕೆಂದು ನಮಗೆ ತೋರಿಸಿಕೊಟ್ಟಿದ್ದಾನೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ನಮಗೆ ಅನುಸರಿಸಲಿಕ್ಕೆ ಬೇಕಾಗಿರುವ ಮಾತುಗಳು ಮತ್ತು ಅಮೂಲ್ಯ ಪಾಠಗಳು ಮನುಷ್ಯನಾದ ಯೇಸುನಿವನದಲ್ಲ. ಆದರೆ ಅದು ಅಭಿಷಕ್ತನಾದ ಯೇಸುವಿನದು. ಪವಿತ್ರಾತ್ಮವರಗಳನ್ನು ಅಳತೆ ಮಾಡದೆ ಕೊಡಲ್ಪಟ್ಟ ನಂತರ ಕ್ರಿಸ್ತ ಯೇಸುವಿನದು ಎಂಬುದನ್ನು ನಮ್ಮ ಕರ್ತನು ಹೀಗೆ ತೋರಿಸಿಕೊಟ್ಟಿದ್ದಾನೆ. ಹೀಗಿರಲು ಸತ್ಯವೇದದಲ್ಲಿ ಬರೆಯಲ್ಪಟ್ಟಿರುವ ಕೆಲವೇ ಸಂಗತಿಗಳನ್ನು ಗಣನೆಗೆ ತೆಗೆದುಕೊಂಡಲ್ಲಿ ನಮ್ಮ ಒಡೆಯನ ಬಾಲ್ಯ ಹಾಗೂ ಯೌವ್ವನದ ಜೀವಿತಗಳಿಂದ ನಾವು ಕೆಲವು ಅಮೂಲ್ಯವೂ ಮತ್ತು ಪ್ರಯೋಜನಕಾರಿಯೂ ಆದ ಪಾಠಗಳನ್ನು ಪಡೆಯಬಹುದು.

ದೈವಾದೇಶದ ಮೇರೆಗೆ ಹೆರೋದನ ಹಿಡಿತದಿಂದ ತಪ್ಪಿಸಿಕೊಳ್ಳಲು ನಮ್ಮ ಕರ್ತನ ತಾಯಿ ಹಾಗೂ ಸಾಕು ತಂದೆಯು ಅವನನ್ನು ಐಗುಪ್ತಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಹೆರೋದನ ಮರಣದವರೆಗೆ ಕೆಲವು ತಿಂಗಳುಗಳಿದ್ದು ತಮ್ಮ ಸ್ವಂತ ಊರಾದ ಗಲಿಲಾಯದ ನಜರೇತಿಗೆ ಹಿಂದಿರುಗಿದುದ್ದನ್ನು ಹೊರತು ಪಡಿಸಿದರೆ ಆತನ ಜೀವಿತದ ಮೊದಲ ಹನ್ನೆರಡು ವರುಷಗಳವರೆಗಿನ ಯಾವ ಸಂಗತಿಗಳೂ ತಿಳಿದಿರುವುದಿಲ್ಲ. ಐಗುಪ್ತಕ್ಕೆ ಪಲಾಯನ ಮಾಡುವ ಸಂದರ್ಭವು ಉಂಟಾದದ್ದು ಯೆಹೂದ್ಯರ ಸಂಪ್ರದಾಯದ ಅನುಸಾರ ದಾವೀದನ ವಂಶದಲ್ಲಿ ಒಬ್ಬ ಅರಸನು ಎದ್ದು ಹೆರೋದನ ಕುಟುಂಬವನ್ನು ಅರಸುತನದಿಂದ ಉಚ್ಚಾಟನೆ ಮಾಡುವನೆಂಬ ಹೆರೋದನ ಭಯದ ನಿಮಿತ್ತದಿಂದ ಎಂಬುದನ್ನು ಇಲ್ಲಿ ಸ್ಮರಿಸಲಾಗುವುದು. ಹೆರೋದನು ದಾವೀದನ ಕುಟುಂಬದವನಾಗಿರಲಿಲ್ಲ ಯೆಹೂದ್ಯನೂ ಆಗಿರಲಿಲ್ಲ ಅವನು ಯಾಕೋಬನ ತಮ್ಮನಾದ ಏಸಾವನ ವಂಶಸ್ಥನು. ಹೊಸದಾಗಿ ಹುಟ್ಟಿದ ಯೆಹೂದ್ಯರ ಅರಸನನ್ನು ಹುಡುಕಿಕೊಂಡು ಬಂದ ಮೂಡಣ ದೇಶದ ಪಂಡಿತರ ಸಂಗತಿಯನ್ನು ನೆನಪಿಗೆ ತಂದುಕೊಳ್ಳಲಾಗುವುದು. ಅವರು ಬಂದಿರುವ ಈ ಉದ್ದೇಶವನ್ನು ತಿಳಿದ ಹೆರೋದನು ಹೊಸ ಅರಸನಿಗೆ ಗೌರವ ಸಲ್ಲಿಸುವ ನೆಪಹಾಕಿ ಆ ಮಗುವನ್ನು ಕಂಡ ನಂತರ ತನಗೆ ತಿಳಿಸಬೇಕೆಂದು ಅವರನ್ನು ಒತ್ತಾಯಿಸಿದನು. ಆದರೆ ಪಂಡಿತರು ದೇವಾದೇಶದ ಮೇರೆಗೆ ಹೆರೋದನ ಕೋರಿಕೆಯನ್ನು ಉಪೇಕ್ಷಿಸಿದರು. ಆನಂತರದಲ್ಲಿ ಬೆತ್ಲೆಹೇಮಿನಲ್ಲಿನ ಜನನದ ವಿಷಯವಾದ ವಿವರಗಳನ್ನು ತಿಳಿದುಕೊಂಡು ಹೆರೋದನು ಆ ಪಟ್ಟಣದಲ್ಲಿನ ಎರಡು ವರುಷದೊಳಗಿನ ಗಂಡುಮಕ್ಕಳನ್ನು ಕೊಲ್ಲುವಂತೆ ಮಾಡಿ ಹೊಸದಾಗಿ ಹುಟ್ಟಿದ ಅರಸನ ಮರಣವನ್ನು ಹೀಗೆ ಖಚಿತಪಡಿಸಿಕೊಳ್ಳಲು ಯತ್ನಿಸಿದನು. ಈ ಆಜ್ಞೆಯ ಅನುಸಾರ ವಧೆಯಾದ ಮಕ್ಕಳ ಸಂಖ್ಯೆಯು ದೊಡ್ಡದಾಗಿರುವ ಸಾಧ್ಯತೆಗಳಿರಲಾರದು. ಬೆತ್ಲೆಹೇಮಿನ ಜನಸಂಖ್ಯೆ ಚಿಕ್ಕದಾದುರಿಂದ ಆ ವಯಸ್ಸಿನ ಗಂಡು ಮಕ್ಕಳ ಸಂಖ್ಯೆಯು ಅತ್ಯಲ್ಪವಾಗಿರಬೇಕು.

ಇತರ ಮಕ್ಕಳಂತೆಯೇ ಯೇಸುವು ದೇಹದಲ್ಲಿಯೂ ಜ್ಞಾನದಲ್ಲಿಯೂ ಬೆಳೆದನು ಮತ್ತು ಅದು ಹಂತ ಹಂತವಾದ ಬೆಳವಣಿಗೆಯೆಂದು ಈ ಸ್ವರ್ಣಮಯ ಪಠ್ಯಭಾಗವು ನಮಗೆ ತಿಳಿಸುವುದು. ಆದುದರಿಂದ ತಾನು ಪವಿತ್ರಾತ್ಮನಿಂದ ಅಭಿಷೇಕ ಹೊಂದಿದ ನಂತರದಲ್ಲಿದ್ದಂತೆ ಯೇಸುವಿನ ಬಾಲ್ಯದ ದಿನಗಳು ಒಬ್ಬ ದೊಡ್ಡ ಜ್ಞಾನಿಯಂತಾಗಲೀ ಒಬ್ಬ ಬೋಧಕನಂತಾಗಲೀ ರೋಗ ಸ್ವಸ್ಥ ಮಾಡುವವನೆಂತಾಗಲಿ ಇದ್ದವೆಂದು ನಾವು ಯೋಚಿಸಬಾರದು. ಆದರೂ ಈ ಪರಿಪೂರ್ಣನಾದ ಬಾಲಕನು ಹಲವು ವಿಧದಲ್ಲಿ ಪರಿಪೂರ್ಣತೆಯಿಂದ ಬಿದ್ದುಹೋಗಿ ಚಿಕ್ಕಪುಟ್ಟ ದೋಷಗಳನ್ನು ಬಾಧ್ಯವಾಗಿ ಪಡೆದ ಸಾಮಾನ್ಯ ಬಾಲಕನಿಗಿಂತಲೂ ತೀವ್ರಾಸಕ್ತಿಯುಳ್ಳ ಪ್ರತಿಭಾವಂತನಾಗಿದ್ದನೆಂದು ನಾವು ಸೂಕ್ತವಾಗಿ ಭಾವಿಸಬಹುದು.

ಮರಿಯಳು ಮತ್ತು ಯೋಸೇಫನು ಶ್ರದ್ಧೆಭಕ್ತಿಯುಳ್ಳವರೆಂದು ಅವರು ವಾಡಿಕೆಯಂತೆ ಪ್ರತಿವರುಷವೂ ಪಸ್ಕ ಹಬ್ಬಕ್ಕೆ ಹೋಗುತ್ತಿದ್ದರೆಂಬುದು ಸತ್ಯವೇದದ ಸಾಕ್ಷಿಯಿಂದ ಕಂಡು ಬರುವುದು ನಿಸ್ಸಂದೇಹ. ಧರ್ಮಶಾಸ್ತ್ರದ ಈ ಒಂದು ನಿಯಮವನ್ನು ಪಾಲಿಸುತ್ತಿದ್ದುದು ಬಹು ಶ್ರದ್ಧಾವಂತ ಯೆಹೂದ್ಯರು. ಮರಿಯಳು ಅದ್ಭುತರೀತಿಯಲ್ಲಿ ಜನ್ಮತಳೆದು ಪಾಪರಹಿತಳಾಗಿದ್ದಳೆಂದು ಕೆಲವರು ಭಾವಿಸುವಂತೆ ಸತ್ಯವೇದ ಪ್ರಕಟಿಸುವುದಕ್ಕಿಂತಲೂ ಹೆಚ್ಚಾಗಿ ಊಹಿಸುವುದು ನಮಗೆ ಅನವಶ್ಯಕ ಮತ್ತು ಅಯುಕ್ತ ಮರಿಯಳ ದೈವಭಕ್ತಿಯ ವಿಷಯವಾಗಿ ನಮಗೆ ಲಿಖಿತವಾದ ಸಾಕ್ಷಾಧಾರಗಳು ಇಲ್ಲದಿದ್ದರೂ, ಆಕೆಯು ಶಾರೀರಿಕ ರೀತಿಯಲ್ಲಿ ಯೇಸುವಿನ ತಾಯಿಯಾಗುವುದಕ್ಕೆ ಆಯಲ್ಪಟ್ಟದ್ದರಲ್ಲಿ ದೇವರಿಂದ ಬೇರೆ ಎಲ್ಲಾ ಸ್ತ್ರೀಯರಿಗಿಂತಲೂ ಮೇಲಾದ ಗೌರವ ಹೊಂದಿದವಳೆಂಬುದು ಆಕೆಯ ಉತ್ತಮ ಗುಣ ಮತ್ತು ಹೃದಯದ ಪರಿಶುದ್ಧತೆಗೆ ಪ್ರಮಾಣವಾಗಿದೆ. ಏಕೆಂದರೆ ದೇವರು ಉತ್ತಮ ಗುಣಗಳುಳ್ಳವರನ್ನು ಬಿಟ್ಟು ಬೇರೆಯವರನ್ನು ವಿಶೇಷವಾಗಿ ಗೌರವಿಸಿ ಆಶೀರ್ವದಿಸುವನೆಂಬುದನ್ನು ಊಹಿಸಲೂ ಆಗದು. ದೇವರು ಯಾರನ್ನು ಬಳಸಿಕೊಳ್ಳುತ್ತಾನೋ ಅವರನ್ನು ಗೌರವಾನ್ವಿತರೆಂದು ನಿಸ್ಸಂದೇಹವಾಗಿ ಮಾನ್ಯತೆ ನೀಡಬಹುದು.

ಯೆಹೂದ್ಯರ ಧರ್ಮಶಾಸ್ತ್ರದಲ್ಲಿ ಇದನ್ನು ವಿಧಿಸದಿದ್ದರೂ ಸಂಪ್ರದಾಯದಿಂದ ನಮಗೆ ತಿಳಿದದ್ದೇನೆಂದರೆ ಹನ್ನೆರಡು ವರುಷ ತುಂಬಿದ ಪ್ರತಿಯೊಬ್ಬ ಹುಡುಗನನ್ನು "ಧರ್ಮಶಾಸ್ತ್ರದ ಮಗನೆಂದು" ಪರಿಗಣಿಸಲ್ಪಡುತ್ತಿತ್ತು. ಈ ವಯಸ್ಸಿನಿಂದ ಒಂದು ನಿಗಧಿತ ಪ್ರಮಾಣದಲ್ಲಿ ಧರ್ಮಶಾಸ್ತ್ರದ ವಿಧಿಗಳನ್ನು ನೆರವೇರಿಸಬೇಕಿರುವುದು. ನಮ್ಮ ಪಾಠದ ವಿವರಣೆಯಲ್ಲಿರುವಂತೆ ಈ ಒಂದು ಪದ್ಧತಿಯನ್ನು ದೃಢಪಡಿಸಲೆಂಬಂತೆ ಯೇಸುವು ಹನ್ನೆರಡು ವರುಷ ತುಂಬಿದವನಾದಾಗ (ಆತನ ಹದಿಮೂರನೇ ವರುಷದಲ್ಲಿ) ಪಸ್ಕ ಹಬ್ಬಕ್ಕಾಗಿ ತನ್ನ ತಂದೆತಾಯಿಗಳೊಂದಿಗೆ ಯೆರೂಸಲೇಮಿಗೆ ಹೋದನು. ಮಕ್ಕಳ ಎಳೆತನದಲ್ಲಿ ಅವರಿಗೆ ಧಾರ್ಮಿಕ ವಿಷಯಗಳಲ್ಲಿ ನೀಡುವ ತರಬೇತು ಅವರು ಪ್ರಾಯದ ಹುಡುಗರ ವಯಸ್ಸಿನ ಅಂಚಿಗೆ ಬರುವಾಗ ಅವರಲ್ಲಿ ಗಂಭೀರವಾದ ಧಾರ್ಮಿಕ ವಿಷಯಗಳಿಗೆ ತಮ್ಮ ಗಮನ ಹರಿಸುವ ಗುಣವನ್ನು ಪಡೆದವರಾಗುವರು ಎಂಬ ಸಲಹೆಯು ದೇವಭಕ್ತರಾದ ತಂದೆತಾಯರೆಲ್ಲರಿಗೆ ಈ ಪಾಠದಲ್ಲಿ ದೊರೆಯುವುದಲ್ಲವೆ? ಅದು ಇಲ್ಲಿ ದೊರೆಯುವುದೆನ್ನುವುದು ನಮ್ಮ ಅನಿಸಿಕೆ. ಕೆಲವು ಸದುದ್ದೇಶವುಳ್ಳ ತಂದೆತಾಯಿಗಳು ತಮ್ಮ ಮಕ್ಕಳು ಹನ್ನೆರಡು ವರುಷಗಳಲ್ಲಿ ಲೌಕಿಕ ವಿದ್ಯಾಭ್ಯಾಸಗಳಲ್ಲಿ ಅದರ ಮೂಲತತ್ವಗಳನ್ನು ಪರಿಗ್ರಹಿಸಲು ಸಾಕಷ್ಟು ಬುದ್ಧಿಪಡೆದಿರುವವರಾದರೂ ಉನ್ನತ ಧಾರ್ಮಿಕ ವಿಷಯಗಳ ಅಧ್ಯಯನಕ್ಕೆ ಸಮರ್ಥರಿರುವುದಿಲ್ಲವೆಂಬ ನಿರ್ಣಯಕ್ಕೆ ಬರುವುದರಲ್ಲಿ ಒಂದು ದೊಡ್ಡ ತಪ್ಪನ್ನು ಮಾಡುತ್ತಿರುವರೆಂಬುದು ನಮ್ಮ ಭಾವನೆ. ಉನ್ನತ ವಿಷಯಗಳ ಲೌಕಿಕ ಶಿಕ್ಷಣಕ್ಕೆ ಸಿದ್ಧರಿರುವ ಆ ವಯಸ್ಸಿನ ಮಕ್ಕಳಿಗೆ ಆಗಲೇ ಪ್ರಾಥಮಿಕ ವಿಷಯಗಳ ಅಮೂಲಾಗ್ರ ಶಿಕ್ಷಣ ಪಡೆದವರಾಗಿರುವಲ್ಲಿ ಉನ್ನತ ಧಾರ್ಮಿಕ ವಿಷಯಗಳಿಗೆ ಸಿದ್ಧವಿಲ್ಲವಾದಲ್ಲಿ ಅದು ಅವರಿಗೆ ಪ್ರಾಥಮಿಕವಾದ ಧಾರ್ಮಿಕ ವಿಷಯಗಳ ಬಾಲಬೋಧನೆಗಳನ್ನು ನೀಡುವಲ್ಲಿ ದೇವರಿಂದ ನೇಮಿತವಾದ ಅವರ ಶಿಕ್ಷಕರಾದ ತಂದೆತಾಯಿಗಳು ಈ ವಿಷಯಗಳಲ್ಲಿ ತೋರಿದ ಉದಾಸೀನತೆ. ತಮ್ಮ ಮಕ್ಕಳಿಗೆ ನೈತಿಕ ಮತ್ತು ಧಾರ್ಮಿಕ ಅಲ್ಲದೆ ಲೌಕಿಕ ಮತ್ತು ಶಾರೀರಿಕ ವಿಷಯಗಳ ಶಿಕ್ಷಣವನ್ನು ನೀಡುವ ಸ್ವಭಾವ ಸಿದ್ಧವಾದ ಹೊಣೆಗಾರಿಕೆಯಿಂದ ಯಾವ ಕ್ರೈಸ್ತ ತಂದೆತಾಯಿಗಳೂ ತಪ್ಪಿಸಿಕೊಳ್ಳಲಾಗದು.

ಪಸ್ಕ ಹಬ್ಬವು ಏಳು ದಿನಗಳ ವರೆಗೆ ನಡೆಯುತ್ತಿತ್ತು. ಆದರೆ ದೂರದಿಂದ ಬಂದ ಹಲವು ಯಾತ್ರಾರ್ಥಿಗಳು ಪ್ರಮುಖ ಆಚರಣೆಗಳ ನಂತರ ಎರಡು ದಿನಗಳು ಮಾತ್ರ ಉಳಿದುಕೊಳ್ಳುವುದು ವಾಡಿಕೆಯಾಗಿತ್ತು. ಯೋಸೇಫನು ಮತ್ತು ಮರಿಯಳು ತಮ್ಮ ಸಂಬಂಧಿಗಳೊಂದಿಗೆ ಹಬ್ಬದ ಮೂರನೇ ದಿನದಲ್ಲಿ ಹಿಂದಿರುಗಲಾರಂಬಿಸಿದ ಸಾಧ್ಯತೆಯಿದೆ. ಪ್ರಯಾಣ ಮಾಡುವವರ ಗುಂಪಿನಲ್ಲಿ ಮೊದಲು ಸ್ತ್ರೀಯರು ಹೊರಡುವುದು ನಂತರ ಪುರುಷರು ಹಿಂದೆ ಹೋಗುವುದು ಮತ್ತು ಯೇಸುವಿನ ವಯಸ್ಸಿನ ಮಕ್ಕಳು ತಂದೆಯಾಗಲಿ ತಾಯಿಯಾಗಲಿ ಇವರಲ್ಲೊಬ್ಬರ ಜೊತೆಯಲ್ಲಿ ಹೋಗುವ ವಾಡಿಕೆಯಾಗಿತ್ತು. ಮಕ್ಕಳು ಕಳೆದು ಹೋಗಿರುವ ವಿಷಯವು ರಾತ್ರಿಯವರೆಗೆ ತಿಳಿಯುತ್ತಿರಲಿಲ್ಲ. ಇಲ್ಲಿ ಇವರ ಸನ್ನಿವೇಶವು ಹೀಗಿದ್ದಿತು. ಪ್ರಯಾಣದಲ್ಲಿ ಒಂದು ದಿನ ಕಳೆದಿತ್ತು. ಯೆರೂಸಲೇಮಿಗೆ ಹಿಂದಿರುಗಲು ಮತ್ತೊಂದು ದಿನ ಮತ್ತು ಮೂರನೇ ದಿನ ಪಟ್ಟಣದಲ್ಲೆಲ್ಲಾ ಹುಡುಕಲು ಕಡೆಯಲ್ಲಿ ಯೇಸುವನ್ನು ದೇವಾಲಯದಲ್ಲಿ ಧರ್ಮಶಾಸ್ತ್ರ ಬೋಧಕರಾದ "ಶಾಸ್ತ್ರಿಗಳ" ನಡುವೆ ಕುಳಿತಿರುವುದಾಗಿ ಕಂಡರು. ಹೀಗೆ ನಡೆಯುವುದು ವಿರಳವೇನಲ್ಲವೆಂದು ಮೊದಲಲ್ಲಿ ನಮಗೆ ತೋರುತ್ತದೆ. ಯಾಕೆಂದರೆ ಆ ಕಾಲದಲ್ಲಿ ಪುಸ್ತಕಗಳಿಂದ ತಿಳಿದುಕೊಳ್ಳುವುದು ವಿರಳವಾಗಿದ್ದು ಬಾಯಿಯ ಉಪದೇಶಗಳ ಮೂಲಕ ತಿಳಿಯುವುದು ಹೆಚ್ಚಾಗಿದ್ದು ಅದಕ್ಕಾಗಿ ತಿಳಿಯಬಯಸುವವರಿಗೆ ಉಪದೇಶ ಮಾಡುವುದಕ್ಕೆ ಧರ್ಮಶಾಸ್ತ್ರ ಬೋಧಕರು ವಿಶೇಷವಾಗಿ ಪಸ್ಕ ಹಬ್ಬದ ವಾರದಲ್ಲಿ ಸಿದ್ಧ ಭಾವನೆಯಲ್ಲಿರುತ್ತಿದ್ದರು. ಇಂತಹ ಅವಕಾಶಗಳನ್ನು ಯೌವನಸ್ಥರು ಉಪಯೋಗಿಸಿಕೊಳ್ಳುತ್ತಿದ್ದರು. ಅಲ್ಲಿನ ಪದ್ಧತಿಯೆಂದರೆ ಬೋಧಕರುಗಳು ಅರ್ಧಚಂದ್ರಾಕಾರದ ಆಸನಗಳಲ್ಲಿ ಕುಳಿತುಕೊಂಡು ಅವರೆದುರಿನಲ್ಲಿ ಹಿರಿಯ ಶಿಷ್ಯರು ಕಿರಿದಾದ ಆಸನದಲ್ಲಿ ಕುಳಿತಿರಲು ಚಿಕ್ಕ ಹುಡುಗರು ಅವರ ಮುಂದೆ ನೆಲದ ಮೇಲೆ ಅಂದರೆ ಅಕ್ಷರಶಃ "ಅವರ ಪಾದಗಳ" ಬಳಿ ಕುಳಿತುಕೊಳ್ಳುತ್ತಿದ್ದರು. ಹೀಗೆಯೇ ಪೌಲನು ಸಹ ಯೌವನಸ್ಥನಾಗಿದ್ದಾಗ ಗಮಲಿಯೇಲನ ಶಿಷ್ಯನಾಗಿದ್ದನು. ವಾಕ್ಯ ವಿವರಣೆಯಲ್ಲಿ ಓದುವುದು, "ಗಮಲಿಯೇಲನ ಪಾದಗಳ" ಬಳಿಯಲ್ಲಿ ಕುಳಿತು ಆತನಿಂದ ಕಲಿತವನು ಗಮಲಿಯೇಲನು ತನ್ನ ಕಾಲದವರಲ್ಲಿ ಧರ್ಮಶಾಸ್ತ್ರದ ಮುಖ್ಯ ಬೋಧಕರಲ್ಲಿ ಒಬ್ಬನಾಗಿದ್ದನು.

ಬಾಲಕನಾದ ಯೇಸುವು ಧೀರ ಸ್ವಭಾವದವನಾಗಿದ್ದು ತನ್ನ ಕಾಲದ ಶಾಸ್ತ್ರಜ್ಞರ ಮುಂದೆ ಹೋಗಿ ಅವರನ್ನು ಅಜ್ಞಾನಿಗಳೂ ಬೋಧಿಸ ಶಕ್ತರಲ್ಲದವರೆಂದು ಹೀಯಾಳಿಸಿ, ತಮ್ಮ ವಯಸ್ಸಿಗೆ ಮೀರಿದ ಬುದ್ಧಿ ತೋರಲು ಅಬದ್ಧ ತರಬೇತು ಪಡೆದ ಈಗಿನ ಕಾಲದ ಕೆಲವು ಯೌವನಸ್ಥರಂತೆ ತಾನು ಅವರಿಗಿಂತ

ಉತ್ತಮನೆಂದು ತೋರಿಸಿಕೊಳ್ಳಲು ಯತ್ನಿಸಿದ್ದನೆಂದು ನಾವು ತಿಳಿಯಲಾರೆವು. ಪ್ರತಿಯಾಗಿ ನಾವು ಭಾವಿಸುವುದು, ಬಾಲಕನಾದ ಯೇಸುವು ಸ್ಥಿಮಿತ ಪ್ರಜ್ಞೆಯ ಮನೋಭಾವದವನಾಗಿದ್ದು ಬಹುಶಃ ತಾನು ಲೋಕದಲ್ಲಿ ಕೆಲವು ವರುಷಗಳು ಮಾತ್ರ ಕಳೆದಿದ್ದು, ಬೇರೆಯವರನ್ನು ಹೋಲಿಸಿ ನೋಡಿದ್ದಲ್ಲಿ ಅಲ್ಪ ಪ್ರಮಾಣದಲ್ಲಿ ಜೀವಿತದ ಅನುಭವ ಹೊಂದಿದ್ದು ಎಂದೂ ಎಲ್ಲವನ್ನೂ ತಿಳಿದವನಲ್ಲವಾದರೂ ಹಲವು ವಿಷಯಗಳ ಬಗ್ಗೆ ಪ್ರಶ್ನೆಗಳಿರುವುದನ್ನು ಅರಿತು ಅವುಗಳ ವಿಷಯವಾಗಿ ಹೆಚ್ಚು ತಿಳಿದುಕೊಳ್ಳುವುದಕ್ಕಾಗಿ "ಮೋಶೆಯ ಪೀಠದಲ್ಲಿ" ಕುಳಿತಿರುವ ಬೋಧಕರಿಂದ ಅವುಗಳಿಗೆ ತೃಪ್ತಿಕರವಾದ ಉತ್ತರವನ್ನು ಪಡೆಯಲು ಬಯಸಿ ಅವರಿಗೆ ಪ್ರಶ್ನೆಗಳನ್ನು ಕೇಳಿದನು.

ಪ್ರಶ್ನೆಗಳು ಯಾವ ಸ್ವರೂಪದವುಗಳೆಂಬುದು ತಿಳಿಸಿಲ್ಲ. ಆದರೆ ಆ ಕಾಲದ ಹಾಗೂ ಅಲ್ಲಿನ ಸನ್ನಿವೇಶಗಳು ಅವುಗಳನ್ನು ಧಾರ್ಮಿಕ ವಿಷಯವಾದವುಗಳೆಂದು ಸೂಚಿಸುವ ಹಾಗೆ ತೋರುತ್ತದೆ. ಹಾಗೂ ಯೆಹೂದ್ಯರ ಕುಲದ ಸದಸ್ಯನಾಗಿ ತನಗೆ ಸೂಕ್ತ ರೀತಿಯಲ್ಲಿ ಸಂಬಂಧಿಸಿದ ವಿಷಯಗಳಾದ ದೇವರು ಅಬ್ರಹಾಮನಿಗೆ ಮಾಡಿದ ಉತ್ಕೃಷ್ಟವೂ ಅಮೂಲ್ಯವೂ ಆದ ಕೆಲವು ವಾಗ್ದಾನಗಳ ಮೇಲಿನ ಗಾಢವಾದ ಪ್ರಶ್ನೆಗಳು ಈಗಾಗಲೇ ಯೇಸುವಿನ ಮನಸ್ಸನ್ನು ಭದ್ರವಾಗಿ ಹಿಡಿದಿದ್ದವು. ಅವುಗಳಾವುವೆಂದರೆ; ಮೆಸ್ಸೀಯನ ಮೂಲಕ ಉಂಟಾಗಲಿರುವ ದೇವಾಶೀರ್ವಾದಗಳನ್ನು ಒಳಗೊಂಡ ವಾಗ್ದಾನಗಳು. ಲೋಕದಲ್ಲಿ ಅವರನ್ನು (ಇಸ್ರಾಯೇಲ್ಯರನ್ನು) ಜನಾಂಗವಾಗಿ ಪ್ರಮುಖ ಸ್ಥಾನಕ್ಕೇರಿಸುವುದು, ಅನಂತರದಲ್ಲಿ ಎಲ್ಲಾ ಜನಾಂಗಗಳನ್ನು ಆಶೀರ್ವಾದಿಸುವ ಸೌಭಾಗ್ಯ ಪಡೆಯುವುದು. ಮನುಕುಲದವರೆಲ್ಲರೂ ದೇವರ ವಿಷಯವಾದ ಜ್ಞಾನವನ್ನು ಹೊಂದಿ ಆತನ ಸೇವೆ ಮಾಡುವಂತಾಗಲು ಮಧ್ಯಸ್ಥಿಕೆ ವಹಿಸುವುದು. ಆ ವಯಸ್ಸಿನಲ್ಲಿ ನಮ್ಮ ಮನಸ್ಸುಗಳಲ್ಲಿ ನಡೆಯುತ್ತಿದ್ದ ಆಲೋಚನಾ ಕ್ರಿಯೆಗಳ ಆಧಾರದಿಂದ ನಾವು ಭಾವಿಸುವುದೆಂದರೆ ಯೇಸುವಿನ ಮನಸ್ಸಿನಲ್ಲಿ ಇಸ್ರಾಯೇಲ್ಯರ ನಿರೀಕ್ಷೆಯ ಮೇಲಿನ ಪ್ರಶ್ನೆಗಳು ತುಂಬಿತುಳುಕುತ್ತಿದ್ದವು. ಹಾಗೂ ತನ್ನ ತಾಯಿಯ ಮೂಲಕವಾಗಿ ನಿಸ್ಸಂದೇಹವಾಗಿ ಕೆಲವು ಸಂಗತಿಗಳನ್ನು ಕನಿಷ್ಟವೆಂದರೆ ದೇವರು ಮುಂದಾಗಿ ಮಾಡಿದ ಏರ್ಪಾಡಿನ ಪ್ರಕಾರವಾಗಿ ಈ ಶಾಸ್ತ್ರವಚನಗಳು ನೆರವೇರಲು ಆತನೇ ಕೆಲವು ಮುಖ್ಯ ಪಾತ್ರ ವಹಿಸಬೇಕಿರುವುದೆಂದು ತಿಳಿಸಲ್ಪಟ್ಟಿರಬಹುದು. ಪರಲೋಕದಲ್ಲಿರುವ ತಂದೆಯು ಧರ್ಮಶಾಸ್ತ್ರದ ಹಾಗೂ ಪ್ರವಾದಿಗಳ ಗ್ರಂಥಗಳಲ್ಲಿ ನೀಡಿರುವ ಕಟ್ಟಳೆ ಪ್ರಮಾಣಗಳ ಮೂಲಕ ತಾನು ನಿರ್ವಹಿಸಲಿರುವ ಪಾತ್ರಗಳ ಬಗ್ಗೆ ತಿಳಿಯಲು ಪ್ರಯತ್ನಿಸುತ್ತಿದ್ದನು.

ತನ್ನ ಮನೆಯಲ್ಲಿ ಒಂದು ವೇದಗ್ರಂಥವು ಇಲ್ಲದಿದ್ದರೂ ಆತನು ದೇವರ ಕಟ್ಟಳೆ ಪ್ರಮಾಣಗಳ ವಿಷಯವಾಗಿ ಸಮಾಲೋಚಿಸಿ ತಿಳಿದುಕೊಳ್ಳಲು ಸಾಧ್ಯವಿತ್ತು. ತನ್ನ ಕಾಲದ ಯೌವನಸ್ಥರಿಗಿದ್ದಂತೆ ಸಣ್ಣ ಗ್ರಾಮೀಣ ಪಟ್ಟಣವಾದ ನಜರೇತಿನ ಚಿಕ್ಕ ಸಭಾಮಂದಿರದಲ್ಲಿ ನಡೆಯುವ ಕೂಟಗಳಿಗೆ ಹೋಗುವ ಸದಾವಕಾಶ ಆತನಿಗಿತ್ತು. ಪ್ರತಿ ಸಬ್ಬತ್ತಿನಲ್ಲಿಯೂ ಅಲ್ಲಿ ಆತನು ಧರ್ಮಶಾಸ್ತ್ರದ ಮತ್ತು ಕೆಲವು ಸಮಯಗಳಲ್ಲಿ ಕೀರ್ತನಾ ಗ್ರಂಥದ ಮತ್ತು ಪ್ರವಾದನಾ ಗ್ರಂಥಗಳ ಪಾರಾಯಣವನ್ನು ಕೇಳುತ್ತಿದ್ದನು. ಅಲ್ಲದೆ ಯಾವುದಾದರೂ ವಿಷಯಗಳಲ್ಲಿ ಅಲ್ಲಿ ಸವಿಸ್ತಾರವಾದ ವ್ಯಾಖ್ಯಾನಗಳು ನಡೆಯುತ್ತಿದ್ದವು. ಈ ತಿಳುವಳಿಕೆಯ ಮೂಲಗಳಿಂದ ತಿಳುಕೊಂಡ ವಿಷಯಗಳು ಬಾಲಕನ ಕುತೂಹಲವುಳ್ಳ ಮನಸ್ಸನ್ನು ತುಂಬಿಹಿಡಿದಿದ್ದವು. ಮತ್ತು ಇಲ್ಲಿ ಆ ಮಹಾ ಪಟ್ಟಣವಾದ ಯೆರೂಸಲೇಮಿಗೆ ಮೊದಲನೇ ಸಾರಿ ಭೇಟಿ ನೀಡುವ ಸಂದರ್ಭವಾದಾಗ ಅಲ್ಲಿನ ದೇವಾಲಯ ಮತ್ತು ಅದರಲ್ಲಿ ನಡೆಯುವ ಸಾಂಕೇತಿಕವಾದ ದೇವಾರಾಧನೆಗಳು ಹಾಗೂ ಅದರ ಅಂಗಗಳಲ್ಲಿ ನಡೆಯುವ ಸಮರ್ಥರಾದ ಬೋಧಕರಿಂದ ಧರ್ಮಶಾಸ್ತ್ರದ ಮತ್ತು ಪ್ರವಾದಿಗಳ ಗ್ರಂಥಗಳ ಮೇಲಿನ ವಿಷಯವಾದ ಸಂಭಾಷಣೆ ವಿಚಾರ ನಿಯಮಗಳನ್ನು ಬಿಟ್ಟರೆ ಬೇರೆ ಯಾವ ವಿಷಯಗಳೂ ಆತನಿಗೆ ಆಕರ್ಷಣೆಯಾಗಿರಲಿಲ್ಲ. ಯಾಕೆಂದರೆ ಸತ್ಯವೇದ ಗ್ರಂಥದ ಅಧ್ಯಯನದಲ್ಲಿ ಯೇಸುವಿಗಿದ್ದ ದೀರ್ಘಾಸಕ್ತಿ ಮತ್ತು ಉತ್ಸಾಹಗಳು ಆತನನ್ನು ಲೌಕಿಕ ವಿಷಯಗಳನ್ನೆಲ್ಲಾ ಮರೆಯುವಂತೆ ಮಾಡಿತ್ತು. ಪರಲೋಕದ ತಂದೆಯ ವಿಷಯಗಳಾದ ದೈವೀಕವಾದ ಆತನ ಯೋಜನೆಗಳನ್ನು ಅಧ್ಯಯನ ಮಾಡುವುದರಲ್ಲಿ ಯೇಸುವಿನ ಮನಸ್ಸು ಪೂರ್ಣವಾಗಿ ಕೇಂದ್ರೀಕೃತವಾಗಿತ್ತು. ಅದರಲ್ಲಿ ಆತನೇ ಬಹು ಮುಖ್ಯವಾದ ಪಾತ್ರಧಾರಿಯಾಗಬೇಕಿತ್ತು.

ಆತನ ಪ್ರಶ್ನೆಗಳು ತನ್ನ ವಯಸ್ಸಿನ ಇತರ ಬಾಲಕರಿಗಿಂತ ಗಾಢವಾಗಿಯೂ ಮತ್ತು ಹೆಚ್ಚು ತರ್ಕಬದ್ಧವಾಗಿಯೂ ಇರುವುದು ಸಹಜವೇ ಮತ್ತು ಈ ಕಾರಣಕ್ಕಾಗಿ ಧರ್ಮಶಾಸ್ತ್ರ ಪಂಡಿತರುಗಳು ಈತನಲ್ಲಿ ದೀರ್ಘಾಸಕ್ತಿ ಹೊಂದಿದುದು ಸಹಜವೇ. ಯಾಕೆಂದರೆ ಇವೆಲ್ಲವುಗಳಲ್ಲಿಯೂ ವಿನಮ್ರತೆಯು ಆತನಲ್ಲಿ ಮೈಗೂಡಿ – ತ್ತೆಂಬುದು ನಮ್ಮ ಖಚಿತಾಭಿಪ್ರಾಯ. ಇಂತಹ ಹಬ್ಬಗಳ ಸಮಯ ಗಳಲ್ಲಿ ದೂರದಿಂದ ಬಂದ ಪರಸ್ಥಳದ ಯಾತ್ರಾರ್ಥಿಗಳಿಗೆ ವಿಶೇಷವಾಗಿ ಅತಿಥಿ ಸತ್ಕಾರಗಳು ಮಾಡಲ್ಪಡುತ್ತಿರಲಾಗಿ ಯೇಸುವಿಗೆ ಹೊಸದಾಗಿ ಪರಿಚಯವಾದ ಯಾರಾದರೂ ಒಬ್ಬ ಗೆಳೆಯರಿಂದ ಸತ್ಕಾರ ಪಡೆದಿದ್ದ ಸಂಭವವಿದ್ದಿತು.

ಆ ನಿರೂಪಣೆಯಲ್ಲಿ ಬರೆಯಲ್ಪಟ್ಟಿರುವುದೆಂದರೆ, ಯೋಸೇಫನು ಮತ್ತು ಮರಿಯಳು ಯೇಸುವನ್ನು ಕಂಡು ಕೊಂಡಾಗ ಈತನು ಬೋಧಕರ ನಡುವೆ ಕುಳಿತು ಅವರಿಂದ ಕೇಳುತ್ತಲೂ ಮತ್ತು ಅವರನ್ನು ಪ್ರಶ್ನೆಮಾಡುತ್ತಲೂ ಇದ್ದನು. ತಮ್ಮ ಹಿರಿಯರ ಮತ್ತು ಬೋಧಕರ ವಿಷಯವಾಗಿ ಹೇಗೆ ನಡೆದುಕೊಳ್ಳ ಬೇಕೆಂಬುದರ ಬಗ್ಗೆ ಒಂದು ಅಮೂಲ್ಯವಾದ ಪಾಠ ಯೌವನ – ಸ್ಥರಿಗೆ ಇಲ್ಲಿದೆ. ಈ ವಿವರಣೆಯಲ್ಲಿ ಯೇಸುವು ಬೋಧಕರಿಗೆ ಉಪದೇಶ ಮಾಡಿ ಬುದ್ಧಿ ಹೇಳಲು ಪ್ರಯತ್ನಿಸುತ್ತಿದ್ದುದ್ದಾಗಿ ಅವರು ಯೇಸುವನ್ನು ಕಂಡುಕೊಂಡ ರೆಂದು ಬರೆದಿರುವುದೆಂಬ ಅಭಿಪ್ರಾಯಕ್ಕೆ ನಾವೇನಾದರೂ ಬಂದಿದ್ದಲ್ಲಿ ಅದು ಎಷ್ಟು ಭಿನ್ನ ವಾಗಿರುತ್ತಿತ್ತು. ಯೇಸುವು ಬೋಧಕರಿಂದ ಕಲಿತ ಹಾಗೆಲ್ಲಾ ಅವರೂ ಈತನಿಂದ ಕಲಿಯುತ್ತಿದ್ದರು. ಏನಿಲ್ಲವೆಂದರೂ ಬಹುಶಃ ಕೆಲವು ವಿಷಯಗಳಲ್ಲಿ ಹೆಚ್ಚು ಕಲಿತಿದ್ದಿರಬೇಕೆಂಬುದರಲ್ಲಿ ನಾವು ಒಂದು ಕ್ಷಣವಾದರೂ ಸಂದೇಹಪಡಲಾರೆವು. ನಿಜ ವಾಗಿಯೂ ಘನವಂತರಾಗಿದ್ದಲ್ಲಿ ಅವರು ಚಿಕ್ಕ ಮಕ್ಕಳಿಂದಲೂ ಕಲಿತುಕೊಳ್ಳುವ ದೀನಸ್ವಭಾವ ಹೊಂದಿದ್ದರೆಂಬುದರಲ್ಲಿ ನಮಗೆ ಸಂಶಯವಿಲ್ಲ.

ಅವರು ಯೇಸುವನ್ನು ಕೆಲವು ವಿಷಯಗಳಲ್ಲಿ ಪ್ರಶ್ನೆಮಾಡಿದ್ದ ರೆಂದು ಈ ಸಂಬಂಧವಾಗಿ ತಿಳಿಸಲ್ಪಟ್ಟಿರುವುದು. "ಆತನು ಆಡಿದ ಮಾತುಗಳನ್ನು ಕೇಳಿದವರೆಲ್ಲರೂ ಆತನ ಬುದ್ಧಿಗೂ ಉತ್ತರ ಗಳಿಗೂ ಆಶ್ಚರ್ಯಪಟ್ಟರು" ಈ ಇಬ್ಬರ ವಿಷಯಗಳಲ್ಲೂ ಪ್ರಶ್ನೆ ಯನ್ನು ಕೇಳುವುದರ ಹಿಂದಿರುವುದು ಮತ್ತೊಬ್ಬರ ಬಗ್ಗೆ ಅಡಕ ವಾಗಿರುವ ಗೌರವ. ಯೇಸುವು ಗೌರವಭಾವದಿಂದ ಬೋಧಕರಿಗೆ ಪ್ರಶ್ನೆಗಳನ್ನು ಮಾಡಿದುದರಲ್ಲಿ ತೋರಿಬಂದು ದೇನೆಂದರೆ ಅತನ ಮನಸ್ಸಿನ ಅಂತರಾಳ ಮತ್ತು ಗ್ರಹಿಸುವುದರಲ್ಲಿರುವ ಸ್ಪಷ್ಟತೆ ಇದಲ್ಲದೆ ಆತನ ತರ್ಕಬದ್ಧವಾದ ಪ್ರತಿಪಾದಿಸುವಿಕೆಯು ಪ್ರತಿ ಯಾಗಿ ಈತನಿಗೆ ಪ್ರಶ್ನೆಗಳನ್ನು ಮಾಡುವಂತೆ ಅವರನ್ನು ನಡೆಸಿತು.

ಸತ್ಯವನ್ನು ಪ್ರೀತಿಸುವ ಅದರ ಮಿತ್ರರಿಗೆ ನಾವು ಶಿಫಾರಸು ಮಾಡುವುದೆಂದರೆ, ಈ ರೀತಿಯಲ್ಲಿ ಯೋಜಿತವಾಗಿ ಪ್ರಶ್ನೆ ಮಾಡುವ ವಿಧಾನಗಳು ಬಾಲಕನಾದ ಯೇಸುವಿಗೆ ಮತ್ತು ಧರ್ಮಶಾಸ್ತ್ರದ ಬೋಧಕರಿಗೆ ಮಾತ್ರವಲ್ಲದೆ ಈಗಿನ ಕಾಲದ ನಮಗೂ ವಿವೇಕವುಳ್ಳವುಗಳೂ ಸಮಂಜಸವೂ ಆದವುಗಳು. ದೇವರ ಪ್ರಿಯರಾದ ಕೆಲವು ಜನರು ದೇವರ ಯೋಜನೆಗಳನ್ನು ಇತರರಿಗೆ ವಿಶೇಷವಾಗಿ ತಿಳಿದವರಿಗೆ ಹೇಳುವಲ್ಲಿ ತಮ್ಮ ಅಧಿಕ ವಾದ ಆತ್ಮವಿಶ್ವಾಸ ತಮ್ಮ ಸ್ವಂತ ಸಾಮರ್ಥ್ಯದ ಮೇಲಿನ ಭರವಸೆಯನ್ನು ತೋರಿ ಸತ್ಯದ ಮೇಲಿನ ತಮ್ಮ ಪ್ರಭಾವಕ್ಕೆ ಬಹುವಾಗಿ ಹಾನಿ ಮಾಡಿಕೊಂಡಿದ್ದಾರೆ. ದೀನತೆಯು ಎಲ್ಲಿದ್ದರೂ ಅದು ಒಂದು ಭೂಷಣ. ಇದು ಸತ್ಯಾನ್ವೇಷಣೆಗೆ ವಿಶೇಷವಾಗಿ ಬಯಸುವ ಒಬ್ಬ ಜೊತೆಗಾರನಂತೆ ಮತ್ತು ಅದರ ಪ್ರಸಾರಣೆಗೆ ಇದು ಒಂದು ಕವಣೆಯಂತಿರುವುದು. ಸತ್ಯವನ್ನು (ಕವಣೆಯ ಮೂಲಕವಾಗಿ) ಪೂರ್ಣ ಸಾಮರ್ಥ್ಯದಿಂದ ಎಸೆಯೋಣವಾಗಲಿ ಆದರೆ ಅದು ಯಾವಾಗಲೂ ಸಾತ್ವಿಕ ಭಾವದಿಂದಲೂ ದೀನಭಾವ ದಿಂದಲೂ ಕೂಡಿದ್ದಾಗಿರಲಿ; ಅಲ್ಲದೆ ಸತ್ಯವನ್ನು ಪ್ರಶ್ನೆಯ ರೂಪದಲ್ಲಿ ಸಲಹೆಯಾಗಿ ತಿಳಿಯಪಡಿಸುವುದು ಬಹು ಸಮಯಗಳಲ್ಲಿ ಅತಿ ಶಕ್ತಿಶಾಲಿಯಾಗಿ ಕಂಡುಬಂದಿದೆ.

ತಮ್ಮ ಚಿಕ್ಕ ಮಗನು ಆ ಕಾಲದಲ್ಲಿನ ಘನವಂತರಾದ ಬೋಧಕರ ಸಂಗಡವಿದ್ದು ಅವರ ಗಮನ ಸೆಳೆಯುತ್ತಿದ್ದುದ್ದನ್ನು ಕಂಡು ಯೋಸೇಫನು ಮತ್ತು ಮರಿಯಳಿಗೆ ಸಹಜವಾಗಿಯೇ ಆಶ್ಚರ್ಯವಾಗಿತ್ತು. ತಮ್ಮ ನಿರಾಸೆಯ ಬಗ್ಗೆಯಾಗಲಿ ನಂತರದಲ್ಲಿ ಆತನನ್ನು ಹುಡುಕಿಕೊಂಡು ಬಂದ ವಿಷಯವಾಗಲಿ ಯೇಸುವಿಗೆ ಎಲ್ಲರ ಮುಂದೆ ಅವರು ಹೇಳಿದಂತಿಲ್ಲ. ಮರಿಯಳು ಏಕಾಂತದಲ್ಲಿ ಅವನಿಗೆ ಯಾತ್ರಿಕರ ಗುಂಪಿನಲ್ಲಿರುವುದನ್ನು ಅಲಕ್ಷ್ಯ ಮಾಡಿದು ದಕ್ಕೆ ಬುದ್ಧಿ ಹೇಳಿರುವಂತಿದೆ. ಆದರೂ ಆಕೆಯು ಇದನ್ನು ಬಹು ಕರುಣೆಯಿಂದಲೂ ಮತ್ತು ಸೌಮ್ಯಭಾವದಿಂದಲೂ ಹೇಳಿರುವಲ್ಲಿ ಇದು ಒಂದು ಬಹು ಅಸಾಧಾರಣವಾದ ಘಟನೆಯೆಂದು ಸೂಚಿತ ವಾಗಿತ್ತೆಂದು ತೋರುತ್ತದೆ. ಪ್ರತಿಯಾಗಿ ಇದು ತನ್ನ ತಂದೆತಾಯಿ ಗಳ ವಿಷಯದಲ್ಲಿ ಯೇಸುವಿನ ವಿಧೇಯತೆಯ ಬಗ್ಗೆ ಹೇಳುತ್ತದೆ.

"ನಿನ್ನ ತಂದೆಯೂ ನಾನೂ ಎಷ್ಟೋ ತಳಮಳಗೊಂಡು ನಿನ್ನನ್ನು ಹುಡುಕಿಕೊಂಡು ಬಂದೆವಲ್ಲಾ" ಎಂದು ಮರಿಯಳು ವ್ಯಕ್ತಪಡಿಸಿದ್ದಲ್ಲಿ ಯೋಸೇಫನು ಯೇಸುವಿನ ತಂದೆಯೆಂಬುದನ್ನು ಒಪ್ಪಿಕೊಂಡಂತೆಯೇ ಎಂಬ ಪ್ರಶ್ನೆಯನ್ನು ಕೆಲವರು ಎತ್ತಿರುವರು. ಇದು ಹಾಗಿಲ್ಲವೆಂದು ನಮ್ಮ ಉತ್ತರ ಈ ಮುಂದಿನ ರೀತಿಯಲ್ಲಿ ಊಹಿಸುವುದು ಸೂಕ್ತವಲ್ಲ.

1. ಲೂಕನು ಯೇಸುವಿನ ವಂಶಾವಳಿಯನ್ನು ವಿಶೇಷವಾಗಿ ಮರಿಯಳ ಮೂಲಕವಾಗಿ ಪತ್ತೆಹಚ್ಚಿ ಪಟ್ಟಿಮಾಡಿರುವುದರಲ್ಲಿ ಯೋಸೇಫನನ್ನು ಅಲಕ್ಷಿಸಿ ಅನಂತರದಲ್ಲಿ ಯೋಸೇಫನು ಯೇಸುವಿನ ತಂದೆಯೆಂಬಂತೆ ಅನ್ವಯಿಸಿರುವನು.

2. ಯೋಸೇಫನು ಮರಿಯಳನ್ನು ಅಂಗೀಕರಿಸಿದ್ದಲ್ಲಿ ಆಕೆಯ ಮಗನನ್ನೂ ಸಹ ಅಂಗಿಕರಿಸಿ ಆತನಿಗೆ ನಾನು ಸಾಕು ತಂದೆಯಾದೆನು ಮತ್ತು ಈದಿನದ ಇಂಥದೇ ಸನ್ನಿವೇಶ ಗಳಲ್ಲಿಯೂ ಅಂತವರನ್ನು ಪೋಷಕರಲ್ಲಿ ಒಬ್ಬನಂತೆ ಪರಿಗಣಿಸಿ ಆತನನ್ನು ತಂದೆಯೆಂದು ಕರೆಯುವಂತೆ ಆ ಮಗುವಿಗೆ ಕಲಿಸಿಕೊಡಲಾಗುವುದು.

3. ಯೇಸುವಿನ ನಿಷ್ಕಳಂಕವಾದ (ಪವಿತ್ರಾತ್ಮನ ಮೂಲಕವಾದ) ಗರ್ಭಧಾರಣೆಯ ವಿಷಯವಾದ ಸಂಗತಿಯನ್ನು ಆತನ ಬಹು ಹತ್ತಿರದ ಸಂಬಂಧಿಗಳಿಗೆ ಹೊರತು ಮತ್ತಾರಿಗೂ ತಿಳಿಸಲ್ಪಟ್ಟಿರುವ ಸಂಭವವಿಲ್ಲ. ಮತ್ತು ಹನ್ನೆರಡು ವರುಷ ವಯಸ್ಸಿನ ಬಾಲಕನಾದ ಯೇಸುವಿನೊಂದಿಗೆ ಈ ವಿಷಯವಾಗಿ ಮಾತುಕತೆ ನಡೆದಿರು ವುದು ತೀರಾ ಅಸಂಭವ. ಹಾಗೆ ಮಾಡುವುದು ಸೂಕ್ತವೂ ಆಗುತ್ತಿರಲಿಲ್ಲ ಆದುದರಿಂದ ಸುವಾರ್ತೆಯಲ್ಲಿ ಹೇಳಿರುವಂತೆ ಈ ಎಲ್ಲಾ ಅಂಶಗಳೂ ಪೂರ್ಣವಾಗಿ ಮರಿಯಳ ಮಾತಿನಲ್ಲಿ ಒಳಗೊಂಡಿತ್ತು.

ಪರಲೋಕದ ತಂದೆಯ ಕಡೆಗೆ ಮತ್ತು ಆತನ ಯೋಜನೆ ಗಳ ಬಗ್ಗೆ ತನ್ನ ಜವಾಬ್ದಾರಿಯ ವಿಚಾರದಲ್ಲಿ ಪರಿಶೀಲಿಸಿದಾಗ ತನ್ನ ಕಾರ್ಯಭಾರಗಳು ಕೆಲವು ಹಂತದಲ್ಲಿ ತನ್ನ ಹದಿಮೂರನೇ ವಯಸ್ಸಿನಲ್ಲಿಯೇ ಪ್ರಾರಂಭವಾಗಿರಬಹುದೇ ಎನ್ನುವುದು ಬಾಲಕ ನಾದ ಯೇಸುವಿನ ಮನಸ್ಸಿನಲ್ಲಿ ಅಚ್ಚರಿ ಕುತೂಹಲಗಳನ್ನು ಉಂಟುಮಾಡಿರಲು ಸಾಕಷ್ಟು ಸಾಧ್ಯತೆಗಳಿವೆ. ಆ ಸಮಯದಿಂದ ಆತನು "ಧರ್ಮಶಾಸ್ತ್ರಕ್ಕೆ ಮಗನಂತಾದನು" ಎಂದು ಪರಿಗಣಿಸ ಲಾಗುತ್ತಿತ್ತು. ಧರ್ಮಶಾಸ್ತ್ರ ಬೋಧಕರಿಗೆ ಕೇಳಿದ ಕೆಲವು ಪ್ರಶ್ನೆಗಳು ಈ ಸಂಬಂಧವಾಗಿರುವ ಸಾಧ್ಯತೆಗಳು ಸಾಕಷ್ಟಿದ್ದು, ಯಾಜಕ ಉದ್ಯೋಗದ ವಿಷಯವಾದ ಛಾಯೆಗಳಲ್ಲಿ ಸೂಚಿತವಾಗಿರುವಂತೆ ತನ್ನ ಕಾರ್ಯಭಾರವು ಮೂವತ್ತು ವರುಷಗಳಿಗೆ ಮೊದಲು ಆರಂಭವಾಗುವುದಿಲ್ಲವೆಂಬ ನಿರ್ಣಯಕ್ಕೆ ಕಡೆಯಲ್ಲಿ ಬಂದಿರುವ ಸಂಭವವು ಸಾಕಷ್ಟಿರುವುದು. ಮರಿಯಳ ಬುದ್ಧಿಮಾತಿಗೆ ತನ್ನ ಉತ್ತರ ಈ ಸಂಬಂಧವಾಗಿತ್ತು. ನನ್ನ ತಂದೆಯ ಮನೆಯಲ್ಲಿದ್ದು ಆತನ ಕೆಲಸಗಳಲ್ಲಿ ನಿರತನಾಗಿರುವುದನ್ನು ನೀನು ನಿರೀಕ್ಷಿಸು ವುದಿಲ್ಲವೇ? "ಧರ್ಮಶಾಸ್ತ್ರಕ್ಕೆ ಮಗನಂತಾಗುವ" ವಯಸ್ಸನ್ನು ನಾನು ತಲುಪಿದ್ದು, ಈ ಕಾರಣದಿಂದಾಗಿ ಪರಲೋಕದ ತಂದೆಯ ಮತ್ತು ವಾಕ್ಯಗಳ ಹಾಗೂ ಆತನ ಯೋಜನೆಗಳ ಬಗ್ಗೆ ಕೆಲವು ಜವಾಬ್ದಾರಿಗಳು ನನ್ನ ಮೇಲೆ ಬಂದಿರುತ್ತವೆ ಎಂಬುದು ನಿನಗೆ ತಿಳಿದಿಲ್ಲವೇ? ಅನಂತರದಲ್ಲಿ ಧರ್ಮಶಾಸ್ತ್ರದಲ್ಲಿ ಬೋಧಕ ರೊಂದಿಗೆ ಸಂಭಾಷಿಸಿದ ನಂತರ ಬಂದ ನಿರ್ಣಯವನ್ನು ನೆನಸಿ ಕೊಂಡು ತನ್ನ ಮಾತನ್ನು ನಿಲ್ಲಿಸಿ ಅವರ (ತಂದೆತಾಯಿಗಳ)

ಬಯಕೆಯಂತೆ ನಜರೇತಿಗೆ ಅವರೊಂದಿಗೆ ಹೋದನು. (ಶಾಸ್ತ್ರದಲ್ಲಿ ಲಿಖಿತ ವಾಗಿರುವಂತೆ) ತಾನು ತನ್ನ ಮೂವತ್ತು ವರುಷ ತಲುಪು ವವರೆಗೂ ತನ್ನ ದಿನ ನಿತ್ಯದ ಸಾಮಾನ್ಯವಾದ ವಿಷಯಗಳಲ್ಲಿ ಹೊರತು ಬೇರೆ ಯಾವ ಸಲಹೆಗಳನ್ನೂ ನಂತರದಲ್ಲಿ ಮಾಡಲಿಲ್ಲ. "ಮತ್ತು ಅವರಿಗೆ ಅಧೀನನಾಗಿದ್ದನು" ಎಂಬ ಈ ಮಾತಿನಲ್ಲಿ ಇದು ವ್ಯಕ್ತವಾಗಿರುವುದು. ಈ ಹುಡುಗನು ಸಾಮಾನ್ಯರಿಗಿಂತ ಹೆಚ್ಚಿನವನು ಬಹು ವಿಶೇಷವಾದವನೆಂದು ಯೋಸೇಫನು ಮತ್ತು ಮರಿಯಳು ಸ್ಪಷ್ಟವಾಗಿ ಅರಿತಿದ್ದರು. ಆದರೂ ಆ ಸನ್ನಿವೇಶದ ಬಗ್ಗೆಯಾಗಲೀ ಅಥವಾ ಆತನ ಮಾತಿನಲ್ಲಿ ಸೂಚಿತವಾದ ಅಭಿಪ್ರಾಯವನ್ನಾಗಲೀ ಅವರು ಪೂರ್ಣವಾಗಿ ಗ್ರಹಿಸಲಿಲ್ಲ ಹೀಗಿರುವಲ್ಲಿ ಮರಿಯಳು ಇವುಗಳನ್ನು ಮತ್ತು ಆತನ ವಿಷಯವಾಗಿ ಹೇಳಿದ ವಿಶಿಷ್ಠವಾದ ಇತರ ಸಾಕ್ಷಿಗಳನ್ನು ತನ್ನ ಹೃದಯದಲ್ಲಿ ನಿಧಿಯಂತೆ ಇಟ್ಟುಕೊಂಡಿದ್ದಳು. ಹಾಗೂ ಈ ನಮ್ಮ ಪಾಠದಲ್ಲಿನ ವಿಷಯವನ್ನು ಲೂಕನು ಆಕೆಯ ಬಾಯಿಂದಲೇ ಪಡಕೊಂಡನೆಂಬುದರಲ್ಲಿ ಸಂದೇಹವಿಲ್ಲ.

ಯೇಸುವು ಇನ್ನೂ ಯೌವನಸ್ಥನಾಗಿರುವಾಗಲೇ ಯೋಸೇಫನು ತೀರಿಹೋದನೆಂದೂ ಮತ್ತು ಆತನು ಬಡಗಿಯ ಉದ್ಯೋಗವನ್ನು ತೆಗೆದುಕೊಂಡು ತನ್ನ ಕುಟುಂಬಕ್ಕೆ ಬೆಂಬಲನಾದನೆಂದೂ ಸಂಪ್ರದಾಯವು ಪ್ರಕಟಿಸುತ್ತದೆ. ಸತ್ಯವೇದದಲ್ಲಿ ಯೇಸುವನ್ನು ಬಡಗಿಯೆಂದು ಕರೆದಿದ್ದು ಮತ್ತು ಆತನ ತಾಯಿ ತಮ್ಮಂದಿರ ವಿಷಯವಾಗಿ ಹೇಳುವಾಗ ಯೋಸೇಫನನ್ನು ಬಿಟ್ಟಿರುವಲ್ಲಿ ಈ ಅಂಶಕ್ಕೆ ಸಾಕ್ಷ್ಯಾಧಾರವಿದೆ. ಇದಕ್ಕೂ ಮಿಗಿಲಾಗಿ ಯೇಸುವಿನ ಸೇವೆಯ ಸಂಬಂಧದಲ್ಲಿ ಆತನ ತಾಯಿ ಮತ್ತು ತಮ್ಮಂದಿರ ಬಗ್ಗೆ ಹಲವು ಸಾರಿ ಪ್ರಸ್ತಾಪಿಸಿದ್ದರೂ ಯೋಸೇಫನನ್ನು ಎಲ್ಲಿಯೂ ಉಲ್ಲೇಖಿಸಿಲ್ಲ. ಈ ಪಾಠದಲ್ಲಿ ಹೇಳಿರುವ ಘಟನೆಯಿಂದ ಆತನ ಸ್ನಾನದೀಕ್ಷೆಯವರೆಗಿನ ನಮ್ಮ ಕರ್ತನ ಜೀವಿತದ ಹದಿನೆಂಟು ವರುಷಗಳ ದೀರ್ಘಾವಧಿಯನ್ನು ಆತನು ಸಾಧಾರಣ ಜೀವಿತದ ಕರ್ತವ್ಯಗಳನ್ನು ನೆರವೇರಿಸಿ ರುವುದರಲ್ಲಿ ಕಳೆದಿರುವುದು ಬಹು ಸಂಭವನೀಯ. ನಮ್ಮ ಕರ್ತನು ತಾಳ್ಮೆಯನ್ನು ಅಭಿವೃದ್ಧಿ ಪಡಿಸಿಕೊಂಡಿರುವ ವಿಷಯದಲ್ಲಿ ಇದು ಎಂಥಾ ಒಂದು ಚಿಂತನೆಯನ್ನು ನಮಗೆ ನೀಡುತ್ತದೆ. ತನ್ನ ಸೇವೆಯನ್ನು ಆರಂಭಿಸಲು ತಂದೆಯು ನೇಮಿಸಿದ ಸಮಯ ಬರುವವರೆಗೂ ತಾಳ್ಮೆಯಿಂದ ಕಾದಿದ್ದುದು; ಈ ಮಧ್ಯೆಯಲ್ಲಿ ತಾಳ್ಮೆಯಿಂದ ತಂದೆಯ ಚಿತ್ತ ಮತ್ತು ಆತನ ಯೋಜನೆಗಳನ್ನು ಹೆಚ್ಚುಹೆಚ್ಚಾಗಿ ತಿಳುಕೊಳ್ಳಲು ಸಾಧ್ಯವಾದಷ್ಟೂ ಅತ್ಯುತ್ತಮ ರೀತಿಯಲ್ಲಿ ಅಧ್ಯಯನ ಮಾಡಿದುದು, ಪವಿತ್ರಾತ್ಮನಿಂದ ಸ್ನಾನವಾಗಲು ತಾಳ್ಮೆಯಿಂದ ಕಾದಿದ್ದುದು; ಆಗಿನ ಸನ್ನಿವೇಶಗಳನ್ನು ಹಾಗೂ ಈ ವಿಷಯಗಳಿಗೆ ತನಗಿರುವ ಸಂಬಂಧವನ್ನು ಪೂರ್ಣವಾಗಿ ಗ್ರಹಿಸಿಕೊಳ್ಳಲು ಇವು ಆತನನ್ನು ಸಮರ್ಥನನ್ನಾಗಿ ಮಾಡುವುದಾಗಿದ್ದವು. ಆತನ ಅನುಯಾಯಿಗಳೆಲ್ಲರಿಗೆ ಇಲ್ಲಿ ಎಂಥಾ ಒಂದು ಪಾಠವಿದೆ ಮತ್ತು ಇದರಿಂದ ನಮ್ಮಲ್ಲಿ ಪ್ರತಿಯೊಬ್ಬನೂ "ನಿಮಗೆ ತಾಳ್ಮೆಬೇಕು" ಮತ್ತೆ ಪುನಃ "ಆ ತಾಳ್ಮೆಯು ಸಿದ್ಧಿಗೆ ಬರಲಿ" ಎಂಬ ಮಾತುಗಳಲ್ಲಿರುವ ಸತ್ಯಾಂಶವನ್ನು ಚೆನ್ನಾಗಿ ಅರಿತುಕೊಳ್ಳಬಹುದು. ನಾವು ದೇವರ ಯೋಜನೆಯನ್ನು ತ್ವರಿತಗೊಳಿಸುವ ಯತ್ನ ಮಾಡಬಾರದು ಆದರೆ ಅದು ಹರವಿಕೊಂಡು ಪ್ರಕಟವಾಗುವವರೆಗೂ ತಾಳ್ಮೆಯಿಂದ ಕಾದಿರಬೇಕು. ಅಂದರೆ; ಕರ್ತನ ಯಾವ ಕಾರ್ಯಗಳನ್ನೂ ಅದರ ನೆರವೇರಿಕೆಯ ಸಮಯ ಬಂದಿರುವುದು ಅಲ್ಲದೆ ಅತನು ಅದನ್ನು ನೆರವೇರಿಸುವುದಕ್ಕಾಗಿ ನಮ್ಮನ್ನು ಕರೆದಿರುವುದು ಖಚಿತವಾಗುವವರೆಗೂ ನಾವು ಅದನ್ನು ಅರಂಭಿಸಲು ಯತ್ನಿಸಬಾರದು. ಅನಂತರ ನಮ್ಮ ಕರ್ತನಂತೆ ಅದನ್ನು ಅನುಕೂಲ ಸಮಯಗಳಲ್ಲೂ ಮತ್ತು ಅನುಕೂಲವಲ್ಲದ ಸಮಯಗಳಲ್ಲೂ ತಕ್ಷಣ ನೆರವೇರಿಸಲು ಸಿದ್ಧರಿರಬೇಕು; ಆಗ ಅಲ್ಲಿ ನಮಗೆ ಸೌಕರ್ಯಗಳಿರಬಹುದು ಅಥವಾ ಸೌಕರ್ಯಗಳು ಇಲ್ಲದೇ ಇರಬಹುದು. ಸೌಹಾರ್ದಯುತ ಸನ್ನಿವೇಶಗಳಿರ ಬಹುದು ಅಥವಾ ಸೌಹಾರ್ದತೆ ಇಲ್ಲದೇಯೂ ಇರಬಹುದು. ಕರ್ತನು ನಮಗೆ ಕೆಲಸ ಮಾಡಲು ಕರೆದಾಗ ನಮ್ಮ ಕೈಗೆ ಸಿಕ್ಕಿದ ಆ ಕೆಲಸವನ್ನು ಪೂರ್ಣಾಸಕ್ತಿಯಿಂದ ಮಾಡಬೇಕು. ಇವುಗಳಲ್ಲಿ ನಮಗೆ ಎಂತಹ ಒಂದು ಪಾಠವಿರುವುದು. ನಾವು ಮುಂದುವರೆದು ಕಲಿಹಾಕಿದ ಇನ್ನೂ ಹೆಚ್ಚಿನ ಅಂಶವೆಂದರೆ ದೇವರ ಏರ್ಪಾಡಿನಲ್ಲಿ ನಮಗೆ ಸಮಂಜಸವಾಗಿದ್ದಲ್ಲಿ, ಅತಿ ದೀನವಾದ ರೀತಿಯಲ್ಲಿ ಸೇವಾಪರಿಶ್ರಮಗಳು (ದೇವರ ಎಣಿಕೆಯಲ್ಲಿ) ಗೌರವವಾದವುಗಳು.

ನಾವು ಧರ್ಮಶಾಸ್ತ್ರಾಧೀನರಾಗಿ ಹುಟ್ಟಿಲ್ಲದಿರುವುದು ಇಲ್ಲವೇ ಮೂವತ್ತು ವರುಷ ವಯಸ್ಸಿಗೆ ಮೊದಲು ದೇವರಿಂದ ಕರೆಯನ್ನು ಸ್ವೀಕರಿಸಿ ಅದಕ್ಕೆ ಸ್ಪಂದಿಸಲು ನಿರ್ಬಂದ ಮಿತಿಗಳು ನಮಗಿಲ್ಲದಿರುವುದು ಸಂತೋಷದ ಸಂಗತಿ. ಬದಲಾಗಿ ದೇವರ ವಿಷಯವಾದ ಪರಿಜ್ಞಾನ ಪಡೆದು ದೈವನಿರ್ಣಯಗಳನ್ನು ಅರಿತುಕೊಳ್ಳುವ ವಯಸ್ಸಿಗೆ ನಾವು ಎಷ್ಟು ಶೀಘ್ರವಾಗಿ ತಲುಪುವೆವೋ ಅಷ್ಟೇ ಶೀಘ್ರವಾಗಿ ನಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವನ್ನಾಗಿ ಅರ್ಪಿಸಿಕೊಳ್ಳುವುದು ಕೃಪೆಗೆ ಸಂಬಂಧವಾದ ನೂತನ ಒಡಂಬಡಿಕೆಯಲ್ಲಿ ನಮಗೆ ಲಭಿಸಿರುವ ಸೌಭಾಗ್ಯ. ನಾವು ದೈಹಿಕವಾಗಿಯೂ ಮಾನಸಿಕವಾಗಿಯೂ ಬೆಳೆದು ಪರಿಪೂರ್ಣ ತೆಯ ವಯಸ್ಸಿನ ಪರಿಮಾಣವನ್ನು ಹೊಂದುವವರೆಗೂ ಕಾಯುವ ಬದಲು ನಾವು ರಾಜವಂಶದ ಯಾಜಕವರ್ಗದ ಅಂಗಗಳಾಗಿ ಒಮ್ಮೆಲೇ ಸೇವೆಯನ್ನು ಪ್ರಾರಂಭಿಸುವಂತೆಯೂ ಅದೇ ಸಮಯದಲ್ಲಿ ಸೇವೆಯಲ್ಲಿ ಅಭಿವೃದ್ಧಿಯಾಗುವಂತೆಯೂ ನಮಗೆ ಅವಕಾಶ ನೀಡಲಾಗಿದೆ. ಆದರೆ ನಮಗಿರುವ ನಂಬಿಕೆಗೆ ಸದ್ಗುಣವನ್ನು, ಸದ್ಗುಣಕ್ಕೆ ಜ್ಞಾನವನ್ನೂ, ಜ್ಞಾನಕ್ಕೆ ದಮೆಯನ್ನೂ, ದಮೆಗೆ ತಾಳ್ಮೆಯನ್ನೂ, ತಾಳ್ಮೆಗೆ ಭಕ್ತಿಯನ್ನೂ, ಭಕ್ತಿಗೆ ಸಹೋದರ ಸ್ನೇಹವನ್ನೂ, ಸಹೋದರ ಸ್ನೇಹಕ್ಕೆ ಪ್ರೀತಿಯನ್ನೂ ಕೂಡಿಸಿಕೊಳ್ಳುತ್ತಾ ವೃದ್ಧಿಯಾಗುವ ಅವಶ್ಯಕತೆ ಇದೆ ಎಂಬುದನ್ನು ನಾವು ಮರೆಯದಿರೋಣ – 2 ಪೇತ್ರ 1:5–9.

"ನೀವು ಕೆಟ್ಟತನದ ವಿಷಯದಲ್ಲಿ ಶಿಶುಗಳಾಗಿಯೇ ಇದ್ದು ಬುದ್ಧಿಯ ವಿಷಯದಲ್ಲಿ ಪ್ರಾಯಸ್ಥರಾಗಿರಿ" 1 ಕೊರಿಂಥ 14:20.

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ. ಶ. 29 ಚೈತ್ರ | ಯೂದಾಯದ ಅರಣ್ಯಪ್ರದೇಶ | ಸ್ನಾನಿಕನಾದ ಯೋಹಾನನ ಸೇವಾಕಾರ್ಯಗಳು | 3:1–12 | 1:1–8 | 3:1–18 | 1:6–8 15:28 |

## ಮತ್ತಾಯ 3:1–12

ಆ ದಿನಗಳಲ್ಲಿ ಸ್ನಾನಿಕನಾದ ಯೋಹಾನನು – ಪರಲೋಕ ರಾಜ್ಯವು ಸಮೀಪವಾಯಿತು; ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ಯೂದಾಯದ ಅಡವಿಯಲ್ಲಿ ಸಾರಿ ಹೇಳುತ್ತಾ ಬಂದನು. ಕರ್ತನ ದಾರಿಯನ್ನು ಸಿದ್ಧ ಮಾಡಿರಿ, ಆತನ ಹಾದಿಗಳನ್ನು ನೆಟ್ಟಗೆ ಮಾಡಿರಿ ಎಂದು ಅಡವಿಯಲ್ಲಿ ಕೂಗುವವನ ಶಬ್ಧವದೆ ಎಂಬದಾಗಿ ಪ್ರವಾದಿಯಾದ ಯೆಶಾಯನಿಂದ ಸೂಚಿತನಾದವನು ಇವನೇ. ಈ ಯೋಹಾನನಿಗೆ ಒಂಟೇ ಕೂದಲಿನ ಹೊದಿಕೆಯೂ ಸೊಂಟದಲ್ಲಿ ತೊಗಲಿನ ನಡುಕಟ್ಟೂ ಇದ್ದವು. ಇವನಿಗೆ ಮಿಡತೆ ಮತ್ತು ಕಾಡುಜೇನು ಆಹಾರವಾಗಿದ್ದವು. ಆಗ ಯೆರೂಸಲೇಮೂ ಎಲ್ಲಾ ಯೂದಾಯವೂ ಯೋರ್ದನ್ ಹೊಳೆಯ ಸುತ್ತಲಿರುವ ಎಲ್ಲಾ ಸೀಮೆಯೂ ಅವನ ಬಳಿಗೆ ಹೊರಟುಹೋಗಿ, ಅವರು ತಮ್ಮ ತಮ್ಮ ಪಾಪಗಳನ್ನು ಹೇಳಿಕೊಂಡು ಯೋರ್ದನ್ ಹೊಳೆ ಯಲ್ಲಿ ಅವನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಿದ್ದರು. ಆದರೆ ಅವನು ಫರಿಸಾಯರಲ್ಲಿಯೂ ಸದ್ದುಕಾಯರಲ್ಲಿಯೂ ಅನೇಕರು ತನ್ನಿಂದ ಸ್ನಾನ ಮಾಡಿಸಿಕೊಳ್ಳುವುದಕ್ಕೆ ಬರುವುದನ್ನು ಕಂಡು ಅವರಿಗೆ – ಎಲೈ ಸರ್ಪ ಜಾತಿಯವರೆ, ಮುಂದೆ ಕಾಣಬರುವ ದೇವಕೋಪದಿಂದ ತಪ್ಪಿಸಿಕೊಳ್ಳುವುದಕ್ಕೆ ನಿಮಗೆ ಉಪದೇಶ ಮಾಡಿದವರಾರು? ಹಾಗಾದರೆ ನಿಮ್ಮ ಮನಸ್ಸು ದೇವರ ಕಡೆಗೆ ತಿರುಗಿತೆಂಬುದನ್ನು ತಕ್ಕ ಫಲದಿಂದ ತೋರಿಸಿರಿ ಅಬ್ರಹಾಮನು ನಮಗೆ ಮೂಲಪುರಷನಲ್ಲವೆ ಎಂಬುವ ಆಲೋಚನೆಯನ್ನು ಬಿಡಿರಿ. ದೇವರು ಅಬ್ರಹಾಮನಿಗೆ ಈ ಕಲ್ಲುಗಳಿಂದಲೂ ಮಕ್ಕಳನ್ನು ಹುಟ್ಟಿಸಬಲ್ಲನೆಂದು ನಿಮಗೆ ಹೇಳುತ್ತೇನೆ. ಈಗಲೇ ಮರಗಳ ಬೇರಿಗೆ ಕೊಡಲಿ ಹಾಕಿದೆ. ಒಳ್ಳೇ ಫಲವನ್ನು ಕೊಡದ ಪ್ರತಿ ಯೊಂದು ಮರವನ್ನು ಕಡಿದು ಬೆಂಕಿಯಲ್ಲಿ ಹಾಕುವರು. ನಾನಂತೂ ನಿಮ್ಮ ಮನಸ್ಸು ತಿರುಗಿಕೊಳ್ಳ ಬೇಕೆಂಬುದಕ್ಕೆ ನಿಮಗೆ ನೀರಿನಲ್ಲಿ ಸ್ನಾನ ಮಾಡಿಸುತ್ತೇನೆ. ಆದರೆ ನನ್ನ ಹಿಂದೆ ಬರುವವನು ನನಗಿಂತ ಶಕ್ತನು. ಆತನ ಕೆರಗಳನ್ನು ಹೊರಲಿಕ್ಕೂ ನಾನು ಯೋಗ್ಯ ನಲ್ಲ. ಆತನು ಪವಿತ್ರಾತ್ಮನಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಸ್ನಾನ ಮಾಡಿಸುವನು. ಆತನು ಮೊರವನ್ನು ಕೈಯಲ್ಲಿ ಹಿಡಿದಿ – ದ್ದಾನೆ. ತನ್ನ ಕಣದಲ್ಲಿಯ ರಾಶಿಯನ್ನು ತೂರಿ ಹಸನು ಮಾಡಿ ತನ್ನ ಗೋದಿಯನ್ನು ಕಣಜದಲ್ಲಿ ತುಂಬಿಕೊಂಡು ಹೊಟ್ಟನ್ನು ಆರದ ಬೆಂಕಿಯಲ್ಲಿ ಸುಟ್ಟುಬಿಡುವನು ಎಂದು ಹೇಳಿದನು.

## ಮಾರ್ಕ 1:1–8

ದೇವಕುಮಾರನಾದ ಯೇಸುಕ್ರಿಸ್ತನ ವಿಷಯವಾದ ಸುವಾರ್ತೆಯ ಪ್ರಾರಂಭವು. ಇಗೋ, ನಾನು ನನ್ನ ದೂತನನ್ನು ನಿನ್ನ ಮುಂದೆ ಕಳುಹಿಸುತ್ತೇನೆ. ನೀನು ಹೋಗುವ ದಾರಿಯನ್ನು ಅವನು ಸರಿಮಾಡುವನೆಂತಲೂ, ಕರ್ತನ ದಾರಿಯನ್ನು ಸಿದ್ಧಮಾಡಿರಿ, ಆತನ ಹಾದಿಗಳನ್ನು ನೆಟ್ಟಗೆ ಮಾಡಿರಿ ಎಂದು ಅಡವಿಯಲ್ಲಿ ಕೂಗುವವನ ಶಬ್ಧವದೆ ಎಂತಲೂ ಪ್ರವಾದಿಯಾದ ಯೆಶಾಯನ ಗ್ರಂಥದಲ್ಲಿ ಬರೆದಿರುವ ಪ್ರಕಾರ ಯೋಹಾನನು ಬಂದು ಜನರಿಗೆ – ನೀವು ಪಾಪ ಪರಿಹಾರಕ್ಕಾಗಿ ದೇವರ ಕಡೆಗೆ ತಿರುಗಿಕೊಂಡು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಸಾರಿಹೇಳುತ್ತಾ ಅಡವಿಯಲ್ಲಿ ದೀಕ್ಷಾಸ್ನಾನ ಮಾಡಿಸುತ್ತಾ ಇದ್ದನು. ಆಗ ಯೂದಾಯ ಸೀಮೆಯೆಲ್ಲವೂ ಯೆರೂಸಲೇಮಿನವರೆಲ್ಲರೂ ಅವನ ಬಳಿಗೆ ಹೊರಟುಹೋಗಿ ತಮ್ಮತಮ್ಮ ಪಾಪಗಳನ್ನು ಹೇಳಿಕೊಂಡು ಯೋರ್ದನ್ ಹೊಳೆಯಲ್ಲಿ ಅವನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಿದ್ದರು. ಈ ಯೋಹಾನನು ಒಂಟೆಯ ಕೂದಲಿನ ಹೊದಿಕೆಯನ್ನು ಹೊದ್ದುಕೊಂಡು ಸೊಂಟಕ್ಕೆ ತೊಗಲಿನ ನಡುಕಟ್ಟನ್ನು ಕಟ್ಟಿಕೊಂಡಿದ್ದನು. ಅವನು ಮಿಡತೆಯನ್ನೂ ಕಾಡುಜೇನನ್ನೂ ಆಹಾರ ಮಾಡುತ್ತಿದ್ದನು. ಅವನು – ನನಗಿಂತ ಶಕ್ತನು ನನ್ನ ಹಿಂದೆ ಬರುತ್ತಾನೆ. ಆತನ ಕೆರಗಳ ಬಾರನ್ನೂ ಬೊಗ್ಗಿಕೊಂಡು ಬಿಚ್ಚುವುದಕ್ಕೂ ನಾನು ಯೋಗ್ಯನಲ್ಲ. ನಾನು ನಿಮಗೆ ನೀರಿನಲ್ಲಿ ಸ್ನಾನ ಮಾಡಿಸಿದೆನು. ಆತನಾದರೋ ನಿಮಗೆ ಪವಿತ್ರಾತ್ಮದ ಸ್ನಾನಮಾಡಿಸುವನು ಎಂದು ಸಾರಿಹೇಳಿದನು.

## ಲೂಕ 3:1–18

ಚಕ್ರವರ್ತಿಯಾದ ತಿಬೇರಿಯನು ಪಟ್ಟಕ್ಕೆ ಬಂದ ಹದಿನೈದನೆಯ ವರುಷದಲ್ಲಿ ಪೊಂತ್ಯಪಿಲಾತನು ಯೂದಾಯಕ್ಕೆ ಅಧಿಪತಿಯೂ ಹೆರೋದನು ಗಲಿಲಾಯಕ್ಕೆ ಉಪರಾಜನೂ ಅವನ ತಮ್ಮನಾದ ಫಿಲಿಪ್ಪನೂ ಇತುರಾಯ ತ್ರಕೋನೀತಿ ಸೀಮೆಗಳಿಗೆ ಉಪರಾಜನೂ ಲುಸನ್ಯನು ಅಬಿಲೇನೆಗೆ ಉಪರಾಜನೂ ಆಗಿರುವಲ್ಲಿ ಅನ್ನನೂ ಕಾಯಫನೂ ಮಹಾಯಾಜಕರಾಗಿದ್ದ ಕಾಲದಲ್ಲಿ ಜಕರೀಯನ ಮಗನಾದ ಯೋಹಾನನಿಗೆ ಅಡವಿಯಲ್ಲಿ ದೇವರ ವಾಕ್ಯವುಂಟಾಯಿತು. ಅವನು ಯೋರ್ದನ್ ಹೊಳೆಯ ಸುತ್ತಲಿರುವ ಪ್ರಾಂತ್ಯದಲ್ಲೆಲ್ಲಾ ಸಂಚರಿಸಿ ಜನರಿಗೆ – ನೀವು ಪಾಪ ಪರಿಹಾರಕ್ಕಾಗಿ ದೇವರ ಕಡೆಗೆ ತಿರುಗಿಕೊಂಡು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಸಾರಿ ಹೇಳುವವನಾದನು. ಇದು ಯೆಶಾಯನೆಂಬ ಪ್ರವಾದಿಯ ಗ್ರಂಥದಲ್ಲಿ ಬರೆದಿರುವ ಮಾತಿಗೆ ಅನುಸಾರವಾಗಿ ನಡೆಯಿತು. ಆ ಮಾತು ಏನೆಂದರೆ, ಕರ್ತನ ದಾರಿಯನ್ನು ಸಿದ್ಧಮಾಡಿರಿ, ಆತನ ಹಾದಿಗಳನ್ನು ನೆಟ್ಟಗೆ ಮಾಡಿರಿ, ಎಲ್ಲಾ ಹಳ್ಳಕೊಳ್ಳಗಳು ಮುಚ್ಚಲ್ಪಡುವವು ಎಲ್ಲ ಬೆಟ್ಟಗುಡ್ಡಗಳು ತಗ್ಗಿಸಲ್ಪಡುವವು. ಡೊಂಕಾಗಿರುವಂಥದು ನೀಟಾಗುವುದು. ಕೊರಕಲಾದ ದಾರಿಗಳು ಸಮವಾಗುವವು. ಎಲ್ಲಾ ಮನುಷ್ಯರೂ ದೇವರಿಂದ ಸಿದ್ಧವಾಗಿರುವ ರಕ್ಷಣೆಯನ್ನು ಕಾಣುವರು

ಎಂಬುದಾಗಿ ಅಡವಿಯಲ್ಲಿ ಕೂಗುವವನ ಶಬ್ಧವದೆ ಎಂಬದೇ. ಹೀಗಿರಲಾಗಿ ಅವನು ತನ್ನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುವು ದಕ್ಕಾಗಿ ಹೊರಟುಬಂದ ಗುಂಪುಗಳಿಗೆ – ಎಲೈ, ಸರ್ಪಜಾತಿ ಯವರೆ, ಮುಂದೆ ಕಾಣಬರುವ ದೈವಕೋಪದಿಂದ ತಪ್ಪಿಸಿ ಕೊಳ್ಳಲು ನಿಮಗೂ ಉಪದೇಶ ಮಾಡಿದವರಾರು? ಹಾಗಾದರೆ ನಿಮ್ಮ ಮನಸ್ಸು ದೇವರ ಕಡೆಗೆ ತಿರುಗಿತೆಂಬುದನ್ನು ತಕ್ಕ ಫಲಗಳಿಂದ ತೋರಿಸಿರಿ. ಅಬ್ರಹಾಮನು ನಮಗೆ ಮೂಲಪುರುಷ ನಲ್ಲವೇ ಎಂದು ನಿಮ್ಮೊಳಗೆ ಅಂದುಕೊಳ್ಳುವವರಾಗಬೇಡಿರಿ. ದೇವರು ಅಬ್ರಹಾಮನಿಗೆ ಈ ಕಲ್ಲುಗಳಿಂದಲೂ ಮಕ್ಕಳನ್ನು ಹುಟ್ಟಿಸಬಲ್ಲನೆಂದು ನಿಮಗೆ ಹೇಳುತ್ತೇನೆ. ಈಗಲೇ ಮರಗಳ ಬೇರಿಗೆ ಕೊಡಲಿ ಹಾಕಿಯದೆ; ಒಳ್ಳೇ ಫಲಗಳನ್ನು ಕೊಡದ ಪ್ರತಿಯೊಂದು ಮರವನ್ನು ಕಡಿದು ಬೆಂಕಿಯಲ್ಲಿ ಹಾಕುವರು ಎಂದು ಹೇಳಿದನು. ಆಗ ಆ ಗುಂಪಿನವರು – ಹಾಗಾದರೆ ನಾವೇನು ಮಾಡಬೇಕು ಎಂದು ಅವನು ಕೇಳಿದ್ದಕ್ಕೆ ಅವನು – ಎರಡು ಅಂಗಿಯುಳ್ಳವನು ಇಲ್ಲದವನಿಗೆ ಒಂದು ಕೊಡಲಿ. ಆಹಾರವುಳ್ಳವನು ಇಲ್ಲದವನಿಗೆ ಕೊಡಲಿ ಎಂದು ಅವರಿಗೆ ಹೇಳಿದನು. ಸುಂಕದವರು ಸಹ ದೀಕ್ಷಾಸ್ನಾನ ಮಾಡಿಸಿಕೊಳ್ಳ ಬೇಕೆಂದು ಬಂದು – ಗುರುವೇ ನಾವೇನು ಮಾಡಬೇಕು ಎಂದು ಅವನನ್ನು ಕೇಳಲು ಅವನು ಅವರಿಗೆ – ನೇಮಿಸಿದ ಹಾಸಲಿಗಿಂತ ಹೆಚ್ಚಾಗಿ ಏನೂ ಎಳಕೊಳ್ಳಬೇಡಿರಿ ಎಂದು ಹೇಳಿದನು. ಸಿಪಾಯಿಗಳು ಸಹ ಬಂದು ನಾವು ಏನು ಮಾಡಬೇಕು ಎಂದು ಅವನನ್ನು ಕೇಳಿದಾಗ ಅವನು ಅವರಿಗೆ – ಯಾರನ್ನಾದರೂ ಬೆದರಿಸಬೇಡಿರಿ; ಯಾರ ಮೇಲಾದರೂ ಸುಳ್ಳುದೂರು ತಂದು ದುಡ್ಡು ಕಸಕೊಳ್ಳಬೇಡಿರಿ; ನಿಮ್ಮ ಸಂಬಳದಲ್ಲಿ ತೃಪ್ತರಾಗಿರಿ ಎಂದು ಹೇಳಿದನು. ಹೀಗಿರುವಲ್ಲಿ ಇಸ್ರಾಯೇಲ್ ಜನರು ಬರಬೇಕಾದ ಕ್ರಿಸ್ತನನ್ನು ಎದುರು ನೋಡುವವರಾಗಿದ್ದುದ್ದರಿಂದ ಅವರೆಲ್ಲರೂ ಯೋಹಾನನ ವಿಷಯವಾಗಿ – ಇವನೇ ಆ ಕ್ರಿಸ್ತನಾಗಿರಬಹುದೋ ಏನೋ ಎಂದು ತಮ್ಮ ಮನಸ್ಸಿನಲ್ಲಿ ವಿಚಾರ ಮಾಡಿಕೊಳ್ಳುತ್ತಿರಲು ಯೋಹಾನನು ಅವರೆಲ್ಲರಿಗೆ – ನಾನಂತೂ ನಿಮಗೆ ನೀರಿನ ಸ್ನಾನ ಮಾಡಿಸುವವನು; ಆದರೆ ನನಗಿಂತ ಶಕ್ತನು ಬರುತ್ತಾನೆ, ಆತನ ಕೆರಗಳ ಬಾರನ್ನು ಬಿಚ್ಚುವುದಕ್ಕೂ ನಾನು ಯೋಗ್ಯನಲ್ಲ. ಆತನು ಪವಿತ್ರಾತ್ಮದಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಸ್ನಾನ ಮಾಡಿ – ಸುವನು. ಆತನು ಮೊರವನ್ನು ಕೈಯಲ್ಲಿ ಹಿಡಿದಿದ್ದಾನೆ. ತನ್ನ ಕಣದಲ್ಲಿಯ ರಾಶಿಯನ್ನು ತೂರಿ ಹಸನು ಮಾಡಿ ತನ್ನ ಗೋದಿ ಯನ್ನು ಕಣಜದಲ್ಲಿ ತುಂಬಿಕೊಳ್ಳುವುದಕ್ಕಿದ್ದಾನೆ. ಹೊಟ್ಟನ್ನು ಆರದ ಬೆಂಕಿಯಲ್ಲಿ ಸುಟ್ಟುಬಿಡುವನು ಎಂದು ಉತ್ತರಕೊಟ್ಟನು. ಇನ್ನೂ ಬೇರೆ ಅನೇಕ ಮಾತುಗಳಿಂದ ಅವನು ಇಸ್ರಾಯೇಲ್ ಜನರಿಗೆ ಬುದ್ಧಿ ಹೇಳಿ ಸುವಾರ್ತೆಯನ್ನು ಸಾರುತ್ತಿದ್ದನು.

## ಯೋಹಾನ 1:6–8, 15–28

ದೇವರು ಕಳುಹಿಸಿದ ಒಬ್ಬ ಮನುಷ್ಯನು ಬಂದನು, ಅವನ ಹೆಸರು ಯೋಹಾನನು. ಈ ಯೋಹಾನನು ಸಾಕ್ಷಿಗಾಗಿ ಬಂದನು. ತನ್ನ ಮೂಲಕವಾಗಿ ಎಲ್ಲರೂ ನಂಬುವಂತೆ ಅವನು ಆ ಬೆಳಕಿನ ವಿಷಯದಲ್ಲಿ ಸಾಕ್ಷಿ ಕೊಡುವುದಕ್ಕೆ ಬಂದನು. ಅವನೇ ಆ ಬೆಳಕಲ್ಲ. ಆ ಬೆಳಕಿನ ವಿಷಯದಲ್ಲಿ ಸಾಕ್ಷಿಕೊಡುವುದಕ್ಕಾಗಿ ಬಂದವನು. ಯೋಹಾನನು ಆತನ ವಿಷಯವಾಗಿ ಸಾಕ್ಷಿಕೊಡುತ್ತಾನೆ. ಹೇಗೆಂದರೆ – ನನ್ನ ಹಿಂದೆ ಬರುವವನು ನನಗಿಂತ ಮೊದಲೇ ಇದ್ದುದರಿಂದ ನನಗೆ ಮುಂದಿನವನಾದನು ಎಂಬುದಾಗಿ ನಾನು ಹೇಳಿದವನು ಈತನೇ ಎಂದು ಕೂಗಿ ಹೇಳಿದ್ದಾನೆ. ಧರ್ಮಶಾಸ್ತ್ರವು ಮೋಶೆಯ ಮುಖಾಂತರ ಕೊಡಲ್ಪಟ್ಟಿತ್ತು; ಕೃಪೆಯೂ ಸತ್ಯವೂ ಯೇಸುಕ್ರಿಸ್ತನ ಮುಖಾಂತರ ಬಂದವು. ನಾವೆಲ್ಲರೂ ಆತನ ಪರಿಪೂರ್ಣತೆಯೊಳಗಿಂದ ಕೃಪೆಯ ಮೇಲೆ ಕೃಪೆಯನ್ನು ಹೊಂದಿದೆವು. ದೇವರನ್ನು ಯಾರೂ ಎಂದೂ ಕಂಡಿಲ್ಲ. ಯಾವನೂ ಏಕಪುತ್ರನೂ ಸ್ವತಃ ದೇವರೂ ಆಗಿದ್ದು, ತಂದೆಯ ಎದೆಯಲ್ಲಿದ್ದಾನೋ ಆತನೇ ತಿಳಿಯಪಡಿಸಿದನು. ಯೋಹಾನನು ಕೊಟ್ಟ ಸಾಕ್ಷಿ ಏನೆಂದರೆ – ಯೆಹೂದ್ಯರು ಯೆರೂಸಲೇಮಿನಿಂದ ಯಾಜಕರನ್ನೂ ಲೇವಿಯರನ್ನೂ ಅವನ ಬಳಿಗೆ ಕಳುಹಿಸಿ – ನೀನು ಯಾರೆಂದು ಕೇಳಿದ್ದಕ್ಕೆ ಅವನು ಮರೆಮಾಚದೆ – ನಾನು ಕ್ರಿಸ್ತನಲ್ಲವೆಂದು ಎಲ್ಲರ ಮುಂದೆ ಹೇಳಿದನು. ಹಾಗಾದರೆ ನೀನು ಯಾರು? ಎಲಿಯನೋ? ಎಂದು ಅವರು ಕೇಳಲು ಅಲ್ಲವೆಂದನು. ನೀನು ಬರಬೇಕಾದ ಆ ಪ್ರವಾದಿಯೋ? ಅಂದದ್ದಕ್ಕೂ ಅಲ್ಲವೆಂದನು. ಆಗ ಅವರು – ನೀನು ಯಾರು? ನಮ್ಮನ್ನು ಕಳುಹಿಸಿದವರಿಗೆ ನಾವು ಉತ್ತರ ಹೇಳಬೇಕಲ್ಲಾ? ನಿನ್ನ ವಿಷಯವಾಗಿ ಏನು ಹೇಳುತ್ತೀ? ಎಂದು ಕೇಳಲು ಅವನು – ಕರ್ತನ ದಾರಿಯನ್ನು ನೆಟ್ಟಗೆ ಮಾಡಿರಿ ಎಂದು ಅಡವಿಯಲ್ಲಿ ಕೂಗುವವನ ಶಬ್ಧವದೆ ಎಂಬದಾಗಿ ಯೆಶಾಯ ಪ್ರವಾದಿಯು ಹೇಳಿದನಷ್ಟೆ. ಆ ಶಬ್ಧವೇ ನಾನು ಎಂದು ಉತ್ತರಕೊಟ್ಟನು. ಬಂದಿದ್ದವರು ಫರಿಸಾಯರ ಕಡೆಯವರಾಗಿದ್ದು – ನೀನು ಕ್ರಿಸ್ತನೂ ಎಲಿಯನೂ ಆ ಪ್ರವಾದಿಯೂ ಅಲ್ಲವಾದರೆ ಸ್ನಾನಮಾಡಿಸುವುದೇನು? ಎಂದು ಅವನನ್ನು ಕೇಳಿದರು. ಅದಕ್ಕೆ ಯೋಹಾನನು – ನಾನು ನೀರಿನಿಂದ ಸ್ನಾನ ಮಾಡಿಸುವವನು. ಆದರೆ ನೀವು ಅರಿಯದೆ ಇರುವ ಒಬ್ಬಾತನು ನಿಮ್ಮ ಮಧ್ಯದಲ್ಲಿ ನಿಂತಿದ್ದಾನೆ. ಆತನೇ ನನ್ನ ಹಿಂದೆ ಬರತಕ್ಕವನು. ಆತನ ಕೆರದ ಬಾರನ್ನು ಬಿಚ್ಚುವುದಕ್ಕೂ ನಾನು ಯೋಗ್ಯನಲ್ಲ ಅಂದನು. ಇದೆಲ್ಲಾ ಯೋರ್ದನ್ ಹೊಳೆಯ ಆಚೇಕಡೆಯಲ್ಲಿ ನಡೆಯಿತು. ಅಲ್ಲಿ ಯೋಹಾನನು ಸ್ನಾನ ಕೊಡುತ್ತಿದ್ದನು.

# "ಸ್ನಾನಿಕನಾದ ಯೋಹಾನನ ಉಪದೇಶ"

### ರೀಪ್ರಿಂಟ್ ಪುಟ 2562

## ಲೂಕ 3:1–17

"ಕರ್ತನ ದಾರಿಯನ್ನು ಸಿದ್ಧಮಾಡಿರಿ".

ಈ ಪಠ್ಯವಿಷಯದ ಮೇಲಿನ ವ್ಯಾಖ್ಯಾನುಕಾರರಲ್ಲಿ ಅನೇಕರು ಸ್ನಾನಿಕನಾದ ಯೋಹಾನನ ಸೇವೆಯು ಕ್ರಿ.ಶ. 26 ರಲ್ಲಿ ಪ್ರಾರಂಭವಾಯಿತೆಂದು ಹೇಳಿಕೊಂಡಿರುವರೆಂಬುದು ನಿಸ್ಸಂದೇಹ. ಹಾಗೂ ಇದು ಖಚಿತವೆಂಬಂತೆ ಪ್ರತಿಪಾದಿಸುವುದರ ಮೂಲಕ ಅವರ ಈ ಸಂಗತಿಗೆ ತಮ್ಮಲ್ಲಿ ಸಾಕ್ಷ್ಯಾಧಾರ ಇಲ್ಲದಿರುವುದನ್ನು ಮುಚ್ಚಿಹಾಕಲು ಯತ್ನಿಸಿರುವರು. ಯೋಹಾನನ ಸೇವೆಯ ಕಾಲಾವಧಿ ದಿನಾಂಕದ ನಿಷ್ಕರ್ಷೆಯು ಕೇವಲ ಅವರ ಅವಿಚಾರಕವಾದ ಅಭಿಪ್ರಾಯ ಎಂಬುದನ್ನು ಮನಸ್ಸಿನಲ್ಲಿಟ್ಟು ಕೊಳ್ಳೋಣ. ಶಾಸ್ತ್ರಜ್ಞರುಗಳಲ್ಲಿ ಪ್ರಚಲಿತವಾಗಿರುವಂತೆ ನಮ್ಮ ಕರ್ತನ ಜನನದ ದಿನಾಂಕದ ತಪ್ಪಾದ ಗಣನೆಯನ್ನು ಇದು ದೃಢಪಡಿಸುವ ಸಲುವಾಗಿರುವುದು. ನಮ್ಮ ಕರ್ತನು ತನ್ನ ದಾಯಾದಿಯಾದ ಯೋಹಾನನಿಗೆ ಆರು ತಿಂಗಳು ಕಿರಿಯನೆಂಬುದು ಸತ್ಯವೇದದಲ್ಲಿ ಸ್ಪಷ್ಟವಾಗಿ ದೃಢಪಡಿಸಲಾಗಿದ್ದರೂ, ಯೋಹಾನನು (ಮೂವತ್ತು ವಯಸ್ಸಿನವನಾಗಿದ್ದಾಗ) ಚಕ್ರವರ್ತಿಯಾದ ಔಗುಸ್ತನ ಆಳುವಿಕೆಯ ಹದಿನೈದನೇ ವರುಷದಲ್ಲಿ ತನ್ನ ಸೇವೆಯನ್ನು ಆರಂಭಿಸಿದನೆಂದು ಈ ಪಠ್ಯವಿಷಯದಲ್ಲಿ ತಿಳಿಸಿರುವಂತೆ ನಮ್ಮ ಕರ್ತನ ಮತ್ತು ಸ್ನಾನೀಕನಾದ ಯೋಹಾನರ ಜೀವನದ ಚಾರಿತ್ರಕ ಸಂಬಂಧವಾದ ದಿನಾಂಕಗಳಿಗೆ ಹೊಂದಿಕೊಂಡಂತೆ, ಸತ್ಯವೇದದ ಇತರ ಭಾಗದಲ್ಲಿ ಈ ದಿನಾಂಕಗಳ ವಿಷಯದಲ್ಲಿ ನಿಕಟವಾಗಿ ಖಚಿತವಾದ ಸೂಚನೆಯಿರುವುದಿಲ್ಲ. ಯೇಸುವು ತನ್ನ ಸೇವೆಯನ್ನು ಕ್ರಿ.ಶ. 29ರ ಬದಲು ಕ್ರಿ.ಶ. 27 ರಲ್ಲಿ ಆರಂಭಿಸಿದನೆಂದು ಹೇಳಿಕೊಳ್ಳುವವರು ಯೋಹಾನನು ಕ್ರಿ.ಶ. 26 ರಲ್ಲಿ ಸೇವೆಯನ್ನು ಆರಂಭಿಸಿದನೆಂದು ಹೇಳುತ್ತಾರೆ. ಇದನ್ನು ಪಠ್ಯ ವಿಷಯದಲ್ಲಿರುವ ಅಂಶಕ್ಕೆ ಸರಿಹೊಂದಿಸಲು ಅವರು ಔಗುಸ್ತ ಸೀಸರನ ಆಳ್ವಿಕೆಯನ್ನು (ಚಾರಿತ್ರಿಕವಾಗಿ) ಅಂಗೀಕೃತವಾದ ದಿನಾಂಕಗಳಿಗಿಂತ ಎರಡು ವರುಷಗಳ ಮೊದಲೇ ಪ್ರಾರಂಭವಾಗಿತ್ತೆಂದು ಗಣನೆಮಾಡಿ ಹೇಳುವ ಅನಿವಾರ್ಯಕ್ಕೆ ಒಳಗಾಗುತ್ತಾರೆಂಬುದನ್ನು ಮರೆಯಬಾರದು. ಈ ವಿಷಯದಲ್ಲಿನ ವಿಶೇಷ ಪ್ರಸ್ತಾವನೆಗಳಿಗೆ ಸತ್ಯವೇದಾದ್ಯಯನ ಪಾಠಮಾಲೆ 2ನೇ ಗ್ರಂಥದ 54ನೇ ಪುಟವನ್ನು ನೋಡುವಂತೆ ನಮ್ಮ ಓದುಗರಿಗೆ ಶಿಫಾರಸ್ಸು ಮಾಡುತ್ತೇವೆ.

ಯೋಹಾನನ ವಿಷಯದಲ್ಲಿ ಆತನು ಹುಟ್ಟಿದಂದಿನಿಂದ ಪರಿತ್ರಾತ್ಮಭರಿತನಾಗಿದ್ದನೆಂದು ಬರೆಯಲ್ಪಟ್ಟಿದೆ. ಅದರೆ ಕ್ರೈಸ್ತರಲ್ಲಿನ ಸಂಗತಿಯಂತೆ ಯೋಹಾನನು ಪವಿತ್ರಾತ್ಮನಿಂದ ಹುಟ್ಟಿದವನೆಂದು ಇಲ್ಲಿ ಅಪಾರ್ಥ ಮಾಡಿಕೊಳ್ಳಬಾರದು. ಯಾಕೆಂದರೆ ಅವನು ಪವಿತ್ರಾತ್ಮನಿಂದ ಹುಟ್ಟುವಂಥ ಸುವಾರ್ತಾಯುಗದ ಕಾಲಗಳಿಗೆ ಮೊದಲೇ ಯೆಹೂದ್ಯರ (ಧರ್ಮಶಾಸ್ತ್ರದ) ಕಾಲದಲ್ಲಿ ಹುಟ್ಟಿದ್ದನು. ಹೀಗೆ (ಸ್ತ್ರೀಯರಲ್ಲಿ ಹುಟ್ಟಿದವರೊಳಗೆ) ಯೋಹಾನನಿಗಿಂತಲೂ ದೊಡ್ಡವನು ಎದ್ದಿಲ್ಲ; ಆದರೂ ದೇವರ ರಾಜ್ಯದಲ್ಲಿನ ಚಿಕ್ಕವನು ಇವನಿಗಿಂತಲೂ ದೊಡ್ಡವನಾಗಿರುವನೆಂದು ನಮ್ಮ ಕರ್ತನು ಯೋಹಾನನ ವಿಷಯವಾಗಿ ಹೇಳಿರುವನು ಅಂದರೆ (ದೇವರ) ಮಕ್ಕಳ ಮನೆತನದವರಲ್ಲಿನ ಚಿಕ್ಕವನು (ದೇವರ) ಸೇವಕರ ಮನೆತನದವರಲ್ಲಿನ ಹೆಚ್ಚಿನವನಿಂಗಿತಲೂ ಉನ್ನತ ಸ್ಥಾನದಲ್ಲಿರುವನು. (ಮತ್ತಾಯ 11:11; ಇಬ್ರಿಯ 3:5–6) ಆಪೋಸ್ತಲನು ಮತ್ತೆ ಈ ವಿಷಯವನ್ನು ವಿವರಿಸಿ ಹೇಳಿರುವುದು – "ಆತನು (ಯೇಸುವು) ಇನ್ನೂ ತನ್ನ ಮಹಿಮೆಯ ಪದವಿಯನ್ನು ಹೊಂದದೆ ಇದ್ದ ಕಾರಣ ಪವಿತ್ರಾತ್ಮವರವು ಇನ್ನೂ ಬಂದಿದ್ದಿಲ್ಲ" ಯೋಹಾನ 7:39

ಇದಕ್ಕೆ ಅನುಸಾರವಾಗಿ ನಾವು ಅರ್ಥಮಾಡಿಕೊಳ್ಳಬೇಕಿರುವುದು: ಯೆಹೂದ್ಯರ (ಧರ್ಮಶಾಸ್ತ್ರದ) ಕಾಲದ ಪರ್ಯಂತರ ಇದ್ದ ಇತರ ಪ್ರವಾದಿಗಳು ಪವಿತ್ರಾತ್ಮಾಧೀನರಾಗಿದ್ದ ರೀತಿಯಲ್ಲೇ ಯೋಹಾನನೂ ಹುಟ್ಟಿದಂದಿನಿಂದಲೂ ದೇವರಿಂದ ಬಂದ ಪವಿತ್ರಾತ್ಮನಿಂದ, ಪವಿತ್ರ ಶಕ್ತಿ ಅಥವಾ ಪ್ರಭಾವದಿಂದ ಭರಿತವನಾಗಿದ್ದನು. ಹೀಗೆ ವ್ಯಕ್ತವಾಗಿರುವ ವಿಷಯಗಳು ನಮ್ಮನ್ನು – ಯೋಹಾನನು ಯೇಸುವಿನಂತೆ (ಪುರುಷ ಸಂಕಲ್ಪವಿಲ್ಲದೆಯೇ, ಪವಿತ್ರಾತ್ಮನನಿಂದ) ನಿಷ್ಕಳಂಕವಾದ ರೀತಿಯಲ್ಲಿ ಹುಟ್ಟದಿದ್ದರೂ ಪವಿತ್ರತೆಗೆ ಪ್ರೇರಕವಾದ ಒಳ್ಳೆಯ ಸನ್ನಿವೇಶದಲ್ಲಿ ಆತನು ಹುಟ್ಟಿದವನಾಗಿದ್ದನು ಎಂಬುದನ್ನು ಗ್ರಹಿಸುವಂತೆ ಮಾಡುವುದು. ದೇವರು ಅವನಲ್ಲಿ ಉದ್ದೇಶೀಸಿದ ಕಾರ್ಯಾಭಾರವನ್ನು ನೆರವೇರಿಸಲು ಸ್ವಭಾವಸಿದ್ದವಾಗಿರುವ ಗುಣಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಇದು ಅವನಿಗೆ ಅನುಕೂಲಕವಾಗಿತ್ತು. ಇಲ್ಲಿ ವ್ಯಕ್ತಿಗಳ ಇಚ್ಛಾ ಸ್ವಾತಂತ್ರ್ಯಗಳಲ್ಲಿ ದೇವರ ಹಸ್ತಕ್ಷೇಪವು ಒಳಗೊಂಡಿರುವುದೆಂಬ ಅಂಶವಿರುವುದಿಲ್ಲ. ಯಾಕೆಂದರೆ ಪೌಲನು ಸಹ ಜನನದಲ್ಲಿಯೇ ತಾನು ಒಂದು ವಿಶೇಷ ಕಾರ್ಯಕ್ಕೆ ಒಬ್ಬ ವಿಶೇಷ ಸೇವಕನಾಗಿ ದೇವರಿಂದ ಆದುಕೊಳ್ಳಲ್ಪಟ್ಟವನೆಂದು ಹೇಳಿಕೊಂಡಿದ್ದಾನೆ. (ಗಲಾತ್ಯ 1:15) ಹೀಗಿದ್ದರೂ ತನ್ನ ಸ್ವತಂತ್ರವಾದ ಸ್ವಂತ ಇಚ್ಛಾನುಸಾರ ಸಭೆಯ ಹಿಂಸಕನಾಗುವ ವಿವೇಚನಾ ರಹಿತವಾದ ತಪ್ಪಿಗೆ ಹೋಗುವಾಗಲೂ ಪೌಲನ ವಿಷಯದಲ್ಲಿ ದೇವರು ಹಸ್ತಕ್ಷೇಪಮಾಡಲಿಲ್ಲ. ಹಾಗೂ ಕರ್ತನು ದಮಸ್ಕದ ಹಾದಿಯಲ್ಲಿ ಅವನನ್ನು ಗದರಿಸುವಾಗಲೂ ಆತನ ಇಚ್ಛೆಯ ಅಥವಾ ಪೌಲನ ವಿಷಯದಲ್ಲಿ ದೇವರು ಹಸ್ತಕ್ಷೇಪ ಮಾಡಲಿಲ್ಲ. ಹಾಗೂ ಕರ್ತನು ದಮಸ್ಕದ ಹಾದಿಯಲ್ಲಿ ಅವನನ್ನು ಗದರಿಸುವಾಗಲೂ ಆತನ ಇಚ್ಛೆಯ ಅಥವಾ ಸ್ವಭಾವ ಸಂಬಂಧವಾದ ವಿಷಯಗಳಲ್ಲಿ ಹಸ್ತಕ್ಷೇಪಮಾಡದೆ ಆತನಲ್ಲಿರುವ ಅಂಧಕಾರ ಅಜ್ಞಾನಗಳನ್ನು ಹೋಗಲಾಡಿಸಿ, ತನ್ನ ನಿಜವಾದ ಇಚ್ಛಾಶಕ್ತಿಯು ಕಾರ್ಯಪ್ರವೃತ್ತವಾಗುವಂತೆ ಅನುವು ಮಾಡಿದನು. ಹೀಗೆಯೇ ಕಾಲಾನುಕಾಲದಲ್ಲಿ ದೇವಜನರಲ್ಲಿ ಇತರರಿಗೂ ತಮ್ಮ ಬಾಲ್ಯಾರಂಭದಿಂದಲೂ ದೇವರು ಮುಂದಾಗಿ ಮಾಡಿದ ಏರ್ಪಾಟುಗಳ ಪ್ರಕಾರ ಅವರಿಗೆ ಮಾರ್ಗದರ್ಶನ ನೀಡಿ ಅವರ

ಚಿತ್ತದಲ್ಲಿ ತನ್ನ ಹಸ್ತಕ್ಷೇಪವಿಲ್ಲದಯೇ ಅವರ ಜೀವಿತಾನುಭವಗಳನ್ನು ರೂಪಿಸಿ ತನ್ನ ಉದ್ದೇಶಗಳನ್ನು ನೇರವೇರಿಸುವ ವಿಶೇಷ ಸಾಧನಗಳಾಗುವಂತೆ ಮಾಡಿರುವ ನೆಂಬುದರಲ್ಲಿ ಸಂದೇಹವಿಲ್ಲ.

ಯೋಹಾನನ ಬಾಲ್ಯದಿಂದ ಪಾಯಸ್ಥನಾಗುವವರೆಗಿನ ಆತನ ಜೀವಿತದ ವಿಷಯವಾಗಿ ದಾಖಲೆಗಳಲ್ಲಿ ಲಿಖಿತವಾದ ಕೇವಲ ಈ ಮುಂದಿನದನ್ನು ಬಿಟ್ಟರೆ ಬೇರೆ ಯಾವುದೂ ನಮಗೆ ತಿಳಿದುಬಂದಿಲ್ಲ: "ಆ ಬಾಲಕನು ಬೆಳೆದು ಆತ್ಮದಲ್ಲಿ ಬಲವುಳ್ಳವನಾದನು. ಮತ್ತು ಇಸ್ರಾಯೇಲ್ ಜನರಿಗೆ ತನ್ನನ್ನು ತೋರ್ಪಡಿಸಿಕೊಳ್ಳುವ ದಿನದವರೆಗೆ ಅರಣ್ಯ ಪ್ರದೇಶಗಳಲ್ಲಿ ಇದ್ದನು." ಇದು ಮರಳುಗಾಡಾಗಿರದೆ ಹೆಚ್ಚು ಸೂಕ್ತವಾದುದೆಂದರೆ ಇದು ಕೃಷಿಮಾಡದ ಬೀಳುಭೂಮಿ ಪ್ರದೇಶ. ಬಹುಶಃ ತನ್ನ ಜನನದ ಸಮಯದಲ್ಲಿ ತನ್ನ ತಂದೆತಾಯಿಗಳು ವಾಸವಾಗಿದ್ದ "ಬೆಟ್ಟಗಳ ಪ್ರದೇಶ" ಆಗಿದ್ದಿರಬಹುದು. ಯೋಹಾನನನ್ನು ತನ್ನ ಕಾರ್ಯಗಳಿಗೆ ತರಬೇತುಗೊಳಿಸುವ ದೇವರ ಮುನ್ನೇರ್ಪಾಟಿನ ಅಂಗವಾಗಿ ಆತನ ತಂದೆತಾಯಿಗಳ ಜೀವಿತದ ಸಂಗತಿಗಳನ್ನು ಕ್ರಮಕ್ಕೆ ತಂದಿರಲು ಇಲ್ಲಿ ಸಾಧ್ಯ. ಹೀಗೆ ಅವರ ಆ ಸನ್ನಿವೇಶಕ್ಕೆ ಅನಿವಾರ್ಯವಾಗುವಂತೆ ಇತರರೊಂದಿಗೆ ಅಲ್ಪವಾಗಿ ಹೊಕ್ಕುಬಳಕೆ ಮಾಡಸಲುವಾಗಿ ಅಂತಹ ಅರಣ್ಯಪ್ರದೇಶದ ಮನೆಯಲ್ಲಿ ವಾಸಿಸುವಂತೆ ಸಾಧ್ಯವಾಗಿ ಅಲ್ಲಿ ಯೋಹಾನನು ಒಬ್ಬ ಅರಣ್ಯವಾಸಿಯಾಗಿ ದೇವರ ಉದ್ದೇಶಿತ ಕಾರ್ಯಗಳಿಗೆ ಸೂಕ್ತವಾದ ಅನುಭವಗಳನ್ನು ಹೊಂದಿ ಅದಕ್ಕೆ ಅತಿ ಯೋಗ್ಯನಾಗುವ ಸಂಭವವಿರುವುದನ್ನು ದೇವರು ಕಂಡನು. "ದೇವರನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ" ಎಂಬ ಆತನ ಈ ವಿಶೇಷವಾದ ವಾಗ್ದಾನವು ಕ್ರಿಸ್ತನಲ್ಲಿರುವ ಎಲ್ಲರಿಗೂ ಅನ್ವಯವಾಗುವವೆಂಬುದನ್ನು ಸ್ಮರಿಸುವವರಾಗಿ ಕ್ರೈಸ್ತರೆಲ್ಲರೂ ಪರಲೋಕದ ತಂದೆಯ ನಡೆಸುವಿಕೆಯಲ್ಲಿ ಭರವಿಡುವುದನ್ನು ಕಲಿಯಬೇಕು. ಹೀಗೆ ಅವರು ದೇವರ ಮುನ್ನೇರ್ಪಾಟಿನಲ್ಲಿ ತಮ್ಮ ಪಾಲಿಗೆ ಬಂದಿರುವುಗಳಲ್ಲಿ ತೃಪ್ತರಾಗಿ ಸೋಮಾರಿಗಳಾಗದೆ ಚಡಪಡಿಸದೆ ಸಿಡುಕದೆ ಅತೃಪ್ತರಾಗದೆ ದೇವರ ಮತ್ತು ಆತನ ಮುನ್ನೇರ್ಪಾಟುಗಳ ವಿಷಯದಲ್ಲಿ ದೂರುವವರಾಗದೆ ತಮ್ಮ ಕೈಗೆ ಸಿಕ್ಕಿದ ಕೆಲಸಗಳನ್ನು ಮಾಡುವುದರಲ್ಲಿ ತೃಪ್ತರಾಗಿ "ದೇವರಲ್ಲಿ ಭರವಸವಿಟ್ಟು ಒಳ್ಳೆಯದನ್ನು ಮಾಡು" ಎಂಬಂಥವರಾಗಬೇಕು. ದೇವರು ನಮ್ಮನ್ನು ವೈಯಕ್ತಿಕವಾಗಿ ಕೆಲವು ವಿಶೇಷ ಸೇವಾ ಕಾರ್ಯಗಳಿಗೆ ಯೋಗ್ಯರಾಗುವುದಕ್ಕಾಗಿ ಸಿದ್ದಮಾಡುತ್ತಿರಬಹುದು. ಅಲ್ಲದೆ ನಮಗೆ ಬರಮಾಡುವ ಜೀವಿತಾನುಭವಗಳು ಮಾತ್ರ ನಮ್ಮನ್ನು ಕೇವಲ ಆ ಸೇವಾಕಾರ್ಯಗಳಿಗೆ ಸಿದ್ಧರನ್ನಾಗ ಮಾಡುವುದು. ನಿಜವಾಗಿಯೂ, ದೇವರವಾಕ್ಯದಿಂದ ನಮಗೆ ತಿಳಿದುಬರಲಿರುವುದು: ದೇವರು ತಾನು "ಆದುಕೊಂಡ" ಜನರನ್ನು ಪ್ರಿಯ ವಿಮೋಚಕನೊಂದಿಗೆ ಆತನ ಸಾವಿರವರುಷದ ಮಹಿಮೆಯ ರಾಜ್ಯದಲ್ಲಿ ಸಹಬಾಧ್ಯರಾಗಲು ಅವರ ಜೀವಿತಗಳನ್ನು ರೂಪಿಸುತ್ತಿರುವುದು; ನಮ್ಮಲ್ಲಿರುವ ಅಪರಿಪೂರ್ಣತೆಯ ನಿಮಿತ್ತ "ನಾವು ಬೆಳಕಿನ ರಾಜ್ಯದಲ್ಲಿ ದೇವಜನರ ಬಾಧ್ಯತೆಯಲ್ಲಿ ಪಾಲು ಹೊಂದಲು ಯೋಗ್ಯರಾಗಿ" ಒಂದು ಆಕಾರಕ್ಕೆ ಬಂದು ರೂಪುಗೊಳ್ಳಲು ನಮಗೆ ಅಧಿಕವಾದ ಕೆತ್ತನೆಯ ಮತ್ತು ನವಿರುಮಾಡುವ ಸಂಗತಿಗಳ ಅಗತ್ಯವಿರುವುದನ್ನು ನಾವು ಚೆನ್ನಾಗಿ ಮನಗಂಡವರಾಗಬಹುದು. ನಾವು ಇನ್ನೂ ನೆನೆಯಲಿರುವುದೆಂದರೆ, ನಮ್ಮಲ್ಲಿರುವ ಲೋಪದೋಷಗಳ ವಿಷಯದಲ್ಲಿ ತೀರ್ಮಾನ ತೆಗೆದುಕೊಳ್ಳಲು ನಾವು ಅಸಮರ್ಥರು. ಅದುದರಿಂದ ನಮಗೆ ಅಗತ್ಯವಿರುವ ಅತಿ ಪ್ರಯೋಜನಕಾರಿಯಾದ ಜೀವಿತಾನುಭವಗಳ ವಿಷಯದಲ್ಲಿಯೂ ತೀರ್ಮಾನಕ್ಕೆ ಬರಲೂ ಅಸಮರ್ಥರು. ಕೆಲವುವೇಳೆ ಇತರರು ನಮ್ಮನ್ನು ನೋಡುವ ರೀತಿಯಲ್ಲಿ ನಮ್ಮನ್ನು ನಾವು ನೋಡಿ ಕೊಳ್ಳಲು ನಮಗೆ ಕಷ್ಟವಾಗುವುದು. ದೇವರ ದೃಷ್ಟಿಯಲ್ಲಿ ಕಂಡು ಬರುವಂತೆ ನಮ್ಮನ್ನು ನಾವು ನೋಡಿಕೊಳ್ಳುವುದು ಇನ್ನೂ ಹೆಚ್ಚು ಕಷ್ಟವೆನ್ನುವುದರಲ್ಲಿ ಸಂದೇಹವಿಲ್ಲ. ಇಲ್ಲಿ ದೇವರಲ್ಲಿರುವ ನಮ್ಮ ನಂಬಿಕೆಯು ಎದ್ದು ಕಾಣುತ್ತದೆ–"ಲೋಕವನ್ನು ಜಯಿಸುವುದು ನಮ್ಮ ನಂಬಿಕೆಯೇ."

ಯೋಹಾನನು ಇಸ್ರಾಯೇಲ್ಯರಿಗೆ ತನ್ನನ್ನು "ತೋರಿಸಿಕೊಳ್ಳುವ" ಅಥವ ಪರಿಚಯ ಮಾಡಿಕೊಳ್ಳುವ ಸಮಯವು ನಿಸ್ಸಂದೇಹವಾಗಿ ಆತನು ಧರ್ಮಶಾಸ್ತ್ರ ವಿಧಿಗಳ ಅನುಸಾರ ಅಗತ್ಯವಾದ ಮೂವತ್ತು ವರುಷ ವಯಸ್ಸಿಗೆ ತಲುಪಿದ ಸಮಯವಾಗಿತ್ತು. ಆಗ ಆತನಿಗೆ ದೇವರಿಂದ ವಾಕ್ಯವುಂಟಾಗಿ ತನ್ನ ಸೇವಾಕಾರ್ಯವನ್ನು ಆರಂಭಿಸುವಂತಾಯಿತು. ಇಲ್ಲಿ ವ್ಯಕ್ತವಾಗಿರುವುದರಲ್ಲಿ, ಈ ಸುವಾರ್ತಾಯುಗದಲ್ಲಿ ನಮ್ಮಗಳಿರುವಂತೆಯೇ, ಯೋಹಾನನಿಗೂ ಇದೇ ಮಹತ್ವವಿದ್ದುದಾಗಿ ನಾವು ಆಲೋಚಿಸಬಾರದು. ಒಬ್ಬ ಪ್ರವಾದಿಗಾಗುವಂತೆ ಯೋಹಾನನಿಗೆ ದೇವರವಾಕ್ಯ ಉಂಟಾಯಿತು. ಯಾಕೆಂದರೆ ನಮ್ಮ ಕರ್ತನು ಅವನ ವಿಷಯದಲ್ಲಿ ಪ್ರಕಟಮಾಡಿ ಹೇಳಿರುವುದು–"ಪ್ರವಾದಿಗಳಲ್ಲಿ ಸ್ನಾನಿಕನಾದ ಯೋಹಾನನಿಗಿಂತ ಹೆಚ್ಚಿನವನು ಇನ್ನೂ ಎದ್ದಿಲ್ಲ." ತನ್ನ ಸೇವಾಕಾರ್ಯವನ್ನು ಪ್ರಾರಂಭಿಸುವ ಸಮಯ ಬಂದಿರುವುದಾಗಿ ದೇವರು ಯೋಹಾನನಿಗೆ ಸ್ಪಷ್ಟಪಡಿಸಿದನು. ಅದನ್ನು ಕೇವಲ ಒಂದು ಅಭಿಪ್ರಾಯವಾಗಿ ಅಥವಾ ಊಹಿಸಿ ತಿಳಿದುಕೊಳ್ಳುವಂತೆ ಮಾಡದೆ ಪ್ರವಾದಿಗಳೆಲ್ಲರ ವಿಷಯದಲ್ಲಿದ್ದಂತೆ ಅದನ್ನು ಖಚಿತವಾದ ರೀತಿಯಲ್ಲಿ ದೇವರು ಅವನಿಗೆ ತಿಳಿಯಪಡಿಸಿದನು. ತನಗೆ ಕೊಟ್ಟ ಕಾರ್ಯಭಾರಕ್ಕೆ ಅನುಸಾರವಾಗಿ, ಅವನು ಯೊರ್ದಾನ್ ನದಿಯ ಸುತ್ತಲಿರುವ ಜನನಿಬಿಡ ಪ್ರದೇಶಗಳಿಗೆ ಹೋಗಿ ಜನರನ್ನು ದೇವರ ಕಡೆಗೆ ತಿರುಗಿಕೊಂಡು ಮಾನಾಸಾಂತರ ಹೊಂದುವಂತೆ ಉಪದೇಶಮಾಡಿ ಹಾಗೆ ಮಾನಸಾಂತರ ಹೊಂದಿದವರಿಗೆ ದೀಕ್ಷಾಸ್ನಾನ ಕೊಡುತ್ತಿದ್ದನು. ಈ ಕಾರಣಕ್ಕಾಗಿ ಯೋಹಾನನು ಹೊಳೆಯ ವಿಶಾಲ ಇಲ್ಲವೇ ಆಳವಾದ ಸ್ಥಳವನ್ನು ಆರಿಸಿಕೊಂಡನು; ದೃಷ್ಟಾಂತವಾಗಿ ಆತನು ಸಾಲೇಮಿಗೆ ಹತ್ತಿರವಿರುವ ಐನೋನ್ ಎಂಬ ಸ್ಥಳಕ್ಕೆ ಹೋದನು. "ಯಾಕೆಂದರೆ ಅಲ್ಲಿ ಹೆಚ್ಚು ನೀರು ಇತ್ತು." ಅಲ್ಲಿ ಮುಳುಗಿಸಿ ಸ್ನಾನಮಾಡಿಸುವಷ್ಟು ವಿಶಾಲ ಸ್ಥಳವಿತ್ತು.

ದೇವರ ಕಡೆಗೆ ತಿರುಗಿಕೊಂಡು ದೀಕ್ಷಾಸ್ನಾನ ಮಾಡಿಸಿಕೊಳ್ಳವುದು ಅವರಲ್ಲಿ ಪಾಪಗಳು ಪರಿಹಾರ ಉಂಟುಮಾಡುವ ಕಾರ್ಯವಾಡುತ್ತದೆಂದು ಊಹೆವಾಡುವಂಥ ಅತಿ ಸಾಮಾನ್ಯವಾಗಿ ಮಾಡುವ ತಪ್ಪಿಗೆ ನಾವು ಒಳಗಾಗಬಾರದು. ಈ ವಾಕ್ಯಗಳಿಗೆ ಹೀಗೆ ಅರ್ಥವಿವರಣೆ ಮಾಡಿದ್ದಲ್ಲಿ ರಕ್ತಧಾರೆಯಿಲ್ಲದೆ ಪಾಪಪರಿಹಾರ ವಿಲ್ಲವೆಂಬ ಸತ್ಯವೇದದಲ್ಲಿನ ಸಾಕ್ಷಾಧಾರ ವಚನಗಳಿಗೆ ನೇರವಾಗಿ ಬಿನ್ನಾಭಿಪ್ರಾಯಕ್ಕಿಳಿದಂತಾಗುತ್ತದೆ.

ಆದುದರಿಂದ ಸಾಧಾರಣವಾಗಿ ಈ ರೀತಿಯಲ್ಲಿ ಮಾಡುವ ವಿಷಯದ ನಿರೂಪಣೆಯು ಸ್ಪಷ್ಟವಾಗಿ ತಪ್ಪಿನಿಂದ ಕೂಡಿರುತ್ತದೆ. ಇದಕ್ಕೆ ಬದಲಾಗಿ ಪಾಪ ಪರಿಹಾರಕ್ಕಾಗಿ ಮಾನಸಾಂತರಪಡಲು ಅಥವಾ ಸಿದ್ಧವಾಗಲು ಸೂಚಿಸುವ ದೀಕ್ಷಾಸ್ನಾನದ ವಿಷಯವಾಗಿ ಯೋಹಾನನು ಉಪದೇಶ ಮಾಡಿದನೆಂಬ ಅರ್ಥವನ್ನು ಈ ವಚನವು ಕೊಡುತ್ತದೆಂದು ನಾವು ತಿಳಿಯಬೇಕು. ಪಾಪಗಳು ಅಳಿಸಲ್ಪಡುವ ಸಮಯವು ಆಗ ಇನ್ನೂ ಬಂದಿರಲಿಲ್ಲ. ದೇವರ ಕಡೆಗೆ ತಿರುಗಿಕೊಂಡು ದೀಕ್ಷಾಸ್ನಾನ ಮಾಡಿಸಿಕೊಂಡಲ್ಲಿ ಪಾಪಗಳು ಪರಿಹಾರವಾದವೆಂದು ಪ್ರಕಟಿಸುವ ಅಧಿಕಾರ ಯೋಹಾನನಿಗೆ ಇತ್ತೆಂಬುದಾಗಲಿ ಇಲ್ಲವೇ ಆತನು ಅದನ್ನು ಪಡಕೊಂಡವ ನೆಂಬುದಕ್ಕಾಗಲಿ ಸಾಧ್ಯವಿರಲಿಲ್ಲ. ಹಾಗೆ ಆತನು ನಿಜವಾಗಿಯೂ ಸಾರಿಹೇಳುವುದಕ್ಕೆ ಸಾಧ್ಯವಾಗಿದ್ದಲ್ಲಿ ನಮ್ಮ ಕರ್ತನಾದ ಯೇಸುವು ಬಂದು ಇಸ್ರಾಯೇಲ್ಯರನ್ನು ಹಾಗೂ ಭೂಲೋಕದ ಎಲ್ಲಾ ಕುಲಗಳನ್ನು ಬಿಡಿಸಿಕೊಳ್ಳಲು ತನ್ನನ್ನು ತಾನು ಈಡುಕೊಡುವ ಅಗತ್ಯವಿಲ್ಲವೆಂಬುದಕ್ಕೆ ಅದು ಪ್ರಮಾಣ ಮಾಡಿ ತೋರಿಸುವಂತಾಗಿರುತ್ತಿತ್ತು. ದೇವರ ಕಡೆಗೆ ತಿರುಗಿಕೊಂಡು ನೀರಿನಲ್ಲಿ ಸ್ನಾನ ಮಾಡಿಸಿಕೊಳ್ಳುವುದು ಪಾಪ ಪರಿಹಾರವನ್ನು ತಂದುಕೊಡುವುದಾಗಿದ್ದರೆ ದೇವರು ಇಸ್ರಾಯೇಲ್ಯರಿಗೆ ಬಹುಕಾಲದ ಹಿಂದೆ "ರಕ್ಷಕ ಶ್ರೇಷ್ಠನಾದ ಒಬ್ಬನ" ವಿಷಯವಾಗಿ ಮಾಡಿದ್ದ ವಾಗ್ದಾನವು ಪೂರ್ಣವಾಗಿ ಅನವಶ್ಯಕವಾಗಿರುತ್ತಿತ್ತು. ಆದರೆ ಯೋಹಾನನ ಸೇವಾಕಾರ್ಯ ಮತ್ತು ಉಪದೇಶವು ಕೇವಲ ಒಂದು ಪ್ರಾಥಮಿಕವಾದದ್ದಾಗಿ ಅದು ದೇವರ ಕಡೆಗೆ ತಿರುಗಿಕೊಂಡು ಪಾಪ ಪರಿಹಾರವನ್ನು ಹೊಂದಿ ದೇವರೊಂದಿಗೆ ಸಂಧಾನವಾಗ ಬಯಸಿ ಈ ಕಾರ್ಯವನ್ನು ನೆರವೇರಿಸುವ ಒಬ್ಬ ರಕ್ಷಕನನ್ನು ಎದುರು ನೋಡುವ ಜನರನ್ನು ಸಿದ್ಧ ಮಾಡುವುದಕ್ಕಾಗಿ ಎಂದು ನಾವು ತಿಳಿದಲ್ಲಿ ಎಲ್ಲಾ ಅಂಶವೂ ಸರಿಯಾದ ಹೊಂದಾಣಿಕೆಯಲ್ಲಿರುತ್ತದೆ.

ಪಾಪಗಳ ಪರಿಹಾರವು ಯೋಹಾನನ ದಿನಗಳ ನಂತರ ನಡೆಯುವ ಕಾರ್ಯ; ಅದು ಕ್ರಿಸ್ತನಿಂದ ನೆರವೇರುವುದೆಂಬ ಅಂಶವು ಯೆಶಾಯನ ಪ್ರವಾದನಾ ಗ್ರಂಥದಿಂದ ಉಲ್ಲೇಖಿಸಲಾದ ಈ ಪಠ್ಯವಾಕ್ಯದ ನಂತರದಲ್ಲಿ ಬರೆದಿರುವ ವಾಕ್ಯವು ಆ ಸನ್ನಿವೇಶವನ್ನು ಪೂರ್ಣವಾಗಿ ವಿವರಿಸುತ್ತದೆ. ಅದು ಇನ್ನೂ ನೆರವೇರಿರುವುದಿಲ್ಲ. ಆದರೆ ಅದು (ಕ್ರಿಸ್ತನ) ಸಾವಿರ ವರುಷದ (ಆಳ್ವಿಕೆಯ) ಪೂರ್ಣ ಕಾಲವನ್ನು ಒಳಗೊಂಡಿರುತ್ತದೆ. ಅದು ಅಲ್ಲಿ ಸ್ಥಾಪಿತವಾಗುವ ಹೊಸ ಒಡಂಬಡಿಕೆಯ ಪ್ರಕಾರ ಕ್ರಿಸ್ತನಲ್ಲಿ ತೋರಿಬಂದ ದೇವರ ಕೃಪೆಯನ್ನು ಅಂಗೀಕರಿಸುವ ಹಲವಾರು ಜನರ ಪಾಪಗಳನ್ನು ಪರಿಹರಿಸಿ ಆ ಪಾಪಗಳನ್ನು ಅಳಿಸಿಹಾಕಿ ಅವರನ್ನು ಪೂರ್ಣವಾಗಿ (ದೇವರೊಂದಿಗೆ) ಹೊಂದಾಣಿಕೆಗೆ ತರುವ ಕಾಲವಾಗಿರುವುದು. (ಅಪೊಲಸ್ತಲರ ಕೃತಗಳು 3:19–21 ಹೋಲಿಸಿ ನೋಡಿ) ಆ ಕಾಲದಲ್ಲಿ ಹಾಗೂ ಅಲ್ಲಿನ ಅನುಕೂಲಕರ ಸನ್ನಿವೇಶದಲ್ಲಿಯೇ, ಆದರೆ ಅದಕ್ಕೆ ಮೊದಲೇ ಅಲ್ಲದೆ,"ಎಲ್ಲಾ ಮನುಷ್ಯರು ಒಟ್ಟಿಗೆ ಅದನ್ನು (ಯೆಹೋವನ ರಕ್ಷಣಾ ಕಾರ್ಯ ವನ್ನು) ಕಾಣುವರು" ಎಂಬ ವಾಕ್ಯವು ನೆರವೇರಲ್ಪಡುವುದು.

ಯೋಹಾನನು ದೂತನಾಗಿ ಮಾಡುವ ಕಾರ್ಯವು ಕೇವಲ ಇಸ್ರಾಯೇಲ್ಯರಿಗೆ ಮಾತ್ರ ಮೀಸಲಾಗಿತ್ತು; ಅದರಲ್ಲಿ ಅನ್ಯಜನರಿಗೆ ಯಾವ ಪಾಲೂ ಇರಲಿಲ್ಲ. ಆತನು ಇಸ್ರಾಯೇಲ್ಯರಿಗೆ ಎಲೀಯನಾಗಿ ಅಥವಾ ನರನಾಗಿ ಬಂದ ಮೆಸ್ಸೀಯನ ಮುಂದೂತನಾಗಿ ಆ ಜನಾಂಗವನ್ನು ಅದರ ಸುಗ್ಗೀಕಾಲದಲ್ಲಿ ಯೇಸುವನ್ನು ರಾಜನೆಂದು ಅಂಗೀಕರಿಸುವ ಮೂಲಕ ಔಪಚಾರಿಕವಾಗಿ ನೀಡಲ್ಪಟ್ಟ ದೇವರ ರಾಜ್ಯವನ್ನು ಅಂಗೀಕರಿಸಲು ಪ್ರೇರೇಪಿಸುವುದ್ದಾಗಿತ್ತು. ಆದರೆ ಯೋಹಾನನು ತನ್ನ ಜನಾಂಗಕ್ಕೆ ಮಾಡಿದ ಸೇವೆಯೂ ಫಲಕಾರಿಯಾಗಿರಲಿಲ್ಲ. ಕೇವಲ ಕೆಲವೇ ಜನರು ಅದರಿಂದ ಪ್ರಯೋಜನ ಹೊಂದಿದರು. ಯೋಹಾನನ ಸಾಕ್ಷಿಯನ್ನು ನಂಬಿದ ಕೆಲವರು ತಮ್ಮ ಪ್ರಾಮಾಣಿಕವೂ ಮಾನಸಾಂತರವೂ ಆದ ಒಳ್ಳೆಯ ಹೃದಯಕ್ಕೆ ಅದನ್ನು ತೆಗೆದು ಕೊಂಡು, ಯೇಸುವನ್ನು ಅಂಗೀಕರಿಸಿ ದೇವರು ಆತನ ಮೂಲಕ ವಾಗಿ ನೀಡಿದ ಪಾಪಗಳ ಪರಿಹಾರ ಕಾರ್ಯವನ್ನು ಮೆಚ್ಚಿ ಅದನ್ನು ಅಂಗೀಕರಿಸಲು ಸಿದ್ಧರಾದರು. ಆ ಜನಾಂಗದವರಲ್ಲಿ ಮಿಕ್ಕ ಉಳಿದವರು ಪಶ್ಚಾತ್ತಾಪವಿಲ್ಲದ ಹೃದಯವುಳ್ಳವರಾಗಿ ತಮ್ಮನ್ನು ಸರಿಯಾಗಿ ಶಿಕ್ಷಿಸಿಕೊಳ್ಳದೆ ಯೋಹಾನನ ಬೋಧನೆಯನ್ನು ತಿರಸ್ಕರಿಸಿ ಯೇಸುವನ್ನು ಆತನ ರಕ್ತದ ಮೂಲಕವಾಗಿ ದೊರಕುವ ಪಾಪ ಪರಿಹಾರವನ್ನು ಮೆಚ್ಚಿ ಅಂಗೀಕರಿಸಲು ಸಿದ್ಧರಾಗಲಿಲ್ಲ. ಪರಿಣಾಮವಾಗಿ ಅವರು ಜನಾಂಗವಾಗಿ ದೇವರಿಂದ ತಿರಸ್ಕರಿಸಲ್ಪಟ್ಟು ಸಂಪೂರ್ಣವಾಗಿ ಉಚ್ಚಾಟಿಸಲ್ಪಟ್ಟರು.

ಯೋಹಾನನು ಎಲೀಯನಾಗಿ ಯೇಸುವನ್ನು ಶಾರೀರಿಕ ಸಂಬಂಧದ ಇಸ್ರಾಯೇಲ್ಯರಿಗೆ ಪರಿಚಯಿಸಿ ಅವರು ಯೇಸುವನ್ನು ಅಂಗೀಕರಿಸಲು ಸಿದ್ಧರಾಗಿ ಆತನಿಂದ ಆಶೀರ್ವದಿಸಲ್ಪಟ್ಟ ಕೆಲವು ಜನರ ವರ್ಗವನ್ನು ಒಂದು ಗುಂಪಾಗಿ ಕೂಡಿಸಿರಲು, ದೇವರ ಯೋಜನೆಯಲ್ಲಿ ನಮ್ಮ ಕರ್ತನಾದ ಯೇಸುವಿನ ರೀತಿಯಲ್ಲಿ ಕ್ರಿಸ್ತನೆಂಬ ಒಂದು ಶ್ರೇಷ್ಠ ವರ್ಗವಿರುವಂತೆಯೇ ನಿಜರೂಪದಲ್ಲಿ ಯೋಹಾನನ ರೀತಿಯಲ್ಲಿಯೂ ಎಲೀಯನೆಂಬ ಒಂದು ಶ್ರೇಷ್ಠ ವರ್ಗವು ಇರುವುದನ್ನು ನಾವು ನೋಡುತ್ತೇವೆ. ಕ್ರಿಸ್ತನೆಂಬ ಆ ಶ್ರೇಷ್ಠ ವರ್ಗವು ಆತ್ಮ ಸಂಬಂಧವಾಗಿದ್ದು, "ಆ ಕರ್ತನು ಈಗ ಆತ್ಮಸ್ವರೂಪನಾಗಿರುವನು" ಅಂದರೆ "ಪರಲೋಕದಿಂದ ಬರುವ ಕರ್ತನಾಗಿರುವನು" ಹಾಗೂ ಮಹಿಮೆ ಹೊಂದಿದ ಆತ್ಮಸ್ವರೂಪನಾದ ಈ ಕರ್ತನೇ "ಸಭೆಯೆಂಬ ತನ್ನ ದೇಹಕ್ಕೆ ಶಿರಸ್ಸಾಗಿರುವನು" ಮತ್ತು ಒಂದೇ ದೇಹದ ಹಲವು ಅಂಗಗಳಾಗಿರುವ ಇವರು "ಮೊದಲನೇ ಪುನರುತ್ಥಾನದಲ್ಲಿ" ಯೇಸುವಿನ ಸ್ವರೂಪಕ್ಕೆ ಬಂದು ಆತನ ಮಹಿಮೆಯಲ್ಲಿ ಪಾಲುಗಾರರಾಗಿ ಆತನೊಂದಿಗೆ ಮತ್ತು ಆತನ ಅಧೀನದಲ್ಲಿದ್ದು "ಶ್ರೇಷ್ಠ ಮೆಸ್ಸೀಯನಲ್ಲಿ" (ದೇಹವಾಗಿ ಆತನಲ್ಲಿ) ಒಳಗೊಂಡವ ರಾಗಿರುವರು. ಇವರು (ಶಿರಸ್ಸಾಗಿರುವ ಯೇಸುಕ್ರಿಸ್ತನು ಮತ್ತು ಆತನ ದೇಹವಾದ ಸಭೆ) ಎಲ್ಲಾ ಅಧಿಕಾರವನ್ನು ತಮಗೆ ಸ್ವಾಧೀನಮಾಡಿಕೊಂಡು ಆಳ್ವಿಕೆ ಮಾಡಿ ಭೂಮಿಯಲ್ಲಿ ದೇವರ ರಾಜ್ಯವನ್ನು ಸ್ಥಾಪನೆ ಮಾಡಿ ದೇವರ ಚಿತ್ತವು "ಪರಲೋಕದಲ್ಲಿ ನೆರವೇರುವಂತೆ ಭೂಲೋಕದಲ್ಲಿಯೂ ನೆರವೇರುವ ಹಾಗೆ" ಮಾಡುವರು (ಮತ್ತಾಯ 6:10). ಅಧಿಕಾರ ಪಡೆದು ಬರುವ ಈ ಮೇಲಾದ ಕ್ರಿಸ್ತನೇ (ಶಿರಸ್ಸು ಮತ್ತು ದೇಹವನ್ನೊಳಗೊಂಡು) ಆತ್ಮಿಕ ರೀತಿಯಲ್ಲಿ ಕ್ರಿಸ್ತನಾಗಿ ಮನುಷ್ಯರಿಗೆ ಎರಡನೇ ಬರೋಣದಲ್ಲಿ ರೂಪುಗೊಂಡವರಾಗಿ "ನರಳುತ್ತಿರುವ ಈ ಜಗತ್ತನ್ನು ಬಿಡುಗಡೆ ಮಾಡಲು ದೇವಪುತ್ರರಾಗಿ ಮಹಿಮೆಯಲ್ಲಿ ಪ್ರತ್ಯಕ್ಷರಾಗುವರು

ರೋಮಾ. 8:17–19. ಹೀಗೆ (ತನ್ನ ದೇಹವಾಗಿರುವ ಸಭೆಯೊಡನೆ ಕೂಡಿದ) ಶಿರಸ್ಸಾದ ಕ್ರಿಸ್ತನ ಎರಡನೇ ಬರೋಣವು ನಮ್ಮ ಕರ್ತನ ಶರೀರ ಸಂಬಂಧದ ಮೊದಲನೇ ಬರೋಣಕ್ಕಿಂತಲೂ ಉನ್ನತ ಮಟ್ಟದಲ್ಲಿರುವುದಾಗಿ ಕಾಣಬರುವುದು. ಹೀಗಿದ್ದರೂ ಪಾಪ ನಿವಾರಣೆಯ ಯಜ್ಞದ ಸಲುವಾಗಿ ಆತನ ಮೊದಲನೇ ಬರೋಣವು ಎಲ್ಲಾ ವಿಧದಲ್ಲಿಯೂ ಮುಖ್ಯವಾಗಿತ್ತು. ಏಕೆಂದರೆ ಇದಿಲ್ಲದಿದ್ದಲ್ಲಿ ರಾಜ್ಯಾಧಿಕಾರ ಮಹಿಮೆಗಳಿಂದ ಕೂಡಿದ ಶಿರಸ್ಸಾದ ಕ್ರಿಸ್ತನ ಎರಡನೇ ಬರೋಣವು ಸಾಧ್ಯವಿಲ್ಲದಂತಾಗಿ, ಆತನ ದೇಹದ ಅಂಗಗಳಾಗಿರುವ ಸಭೆಯೂ ಮಹಿಮೆಹೊಂದಿ ಆತನಿಗೆ ಸಹಕಾರಿಗಳಾಗುವುದು ಸಾಧ್ಯವಾಗುತ್ತಿರಲಿಲ್ಲ.

ಈ ಎರಡು ಘಟನೆಗಳನ್ನು ಹೀಗೆ ಗಮನಿಸಿದ ನಂತರ ನಮಗೆ ಯುಕ್ತವಾದ ಸಂಗತಿಯೆಂದರೆ ಶಾರೀರಿಕ ಸಂಬಂಧದಲ್ಲಿ ಹೆಸರಿಗಾಗಿರುವ ಇಸ್ರಾಯೇಲ್ಯರಿಗೆ (ಕ್ರಿಸ್ತನ) ಮೊದಲನೇ ಬರೋಣದಿಂದ ಉಂಟಾದ ಆಶೀರ್ವಾದಗಳನ್ನು ನೀಡಿದ ರೀತಿಯಲ್ಲೇ (ಆತನ) ಎರಡನೇ ಬರೋಣದಿಂದ ಉಂಟಾಗುವ ಆಶೀರ್ವಾದಗಳನ್ನು ಆತ್ಮಿಕ ಇಸ್ರಾಯೇಲ್ಯರಿಗೆ (ಕ್ರೈಸ್ತ ಸಮುದಾಯಕ್ಕೆ) ಕೊಡಲಾಗುವುದೆಂಬುದನ್ನು ಗಮನಿಸುವುದು. (ಕ್ರಿಸ್ತನ) ಮೊದಲನೇ ಬರೋಣಕ್ಕೆ ಸಿದ್ಧಮಾಡ ಸಲುವಾಗಿ ಮುಂದೂತನನ್ನು ಶಾರೀರಿಕ ಇಸ್ರಾಯೇಲ್ಯರಿಗೆ ಸಾರುವುದಕ್ಕೆ ಯುಕ್ತವಾದ ರೀತಿಯಲ್ಲಿ ಕಳುಹಿಸಿದಂತೆಯೇ ಕ್ರಿಸ್ತನ ಎರಡನೇ ಬರೋಣವನ್ನು ಆತ್ಮಿಕ ರೀತಿಯ ಹೆಸರಿನ ಇಸ್ರಾಯೇಲ್ಯರಿಗೆ ಸಾರಿ ಹೇಳಿ ಅವರನ್ನು ಸಿದ್ಧಮಾಡುವುದಕ್ಕಾಗಿ ಅಧಿಕವಾದ ಸಾಮರ್ಥ್ಯ ವಿರುವ ಮೇಲಾದ ಮುಂದೂತನನ್ನು ಕಳುಹಿಸುವುದು ಯುಕ್ತವಾಗಿರುವುದು. ನಾವು ಈಗಾಗಲೇ ತೋರಿಸಿಕೊಟ್ಟಿರುವಂತೆ ಆತ್ಮೀಯ ರೀತಿಯಲ್ಲಿರುವ ಕ್ರಿಸ್ತನನ್ನು ಪ್ರಕಟಮಾಡುವ ಈ ಮೇಲಾದ ಎಲೀಯನು ಹಲವು ಮಂದಿ ಸದಸ್ಯರನ್ನು ಒಳಗೊಂಡಿರುವವನು. ಮನುಷ್ಯನಾಗಿದ್ದ ಯೇಸುವು ತಾನೇ ಈ ಎಲೀಯನ ವರ್ಗಕ್ಕೆ ಶಿರಸ್ಸು. ಹಾಗೂ ಆತನ ನಿಜವಾದ ಹಿಂಬಾಲಕರು ಆತನೊಂದಿಗೆ ಮಹಿಮೆ ಹೊಂದಿ ಪ್ರಭಾವವುಳ್ಳ ಕ್ರಿಸ್ತನ (ದೇಹದ) ಅಂಗಗಳಾಗಲಿರುವವರು, ಹಿಂದೆ ತಮ್ಮ ಭೂಲೋಕದ ಜೀವಿತದಲ್ಲಿ ಕ್ರಿಸ್ತನೊಡನೆ ಎಲೀಯನ ವರ್ಗದ ಅಂಗಗಳೂ ಆಗಿದ್ದು, ಮುಂದೆ ಅವರ ಕಾರ್ಯಭಾರವು ಮನುಷ್ಯರೆಲ್ಲರಿಗೆ ನೀತಿ ತತ್ವಗಳನ್ನು ಮತ್ತು ನಿಜವಾದ ಪವಿತ್ರತೆ ಯನ್ನು ತೋರಿಸಿ ಕೊಡುವವರಾಗಿ ತಮ್ಮ ನಡೆನುಡಿ ಗಳಿಂದ ಅವರಲ್ಲಿ ಮಾನಸಾಂತರ ಉಂಟುಮಾಡಿ, (ಕ್ರಿಸ್ತನ) ಎರಡನೇ ಬರೋಣಕ್ಕೆ ಅವರನ್ನು ಸಿದ್ಧ ಮಾಡುವು ದಾಗಿದೆ. ಅದು ಕ್ರಿಸ್ತನ ಪ್ರಭಾವದ ಪ್ರತ್ಯಕ್ಷತೆಯಾಗಿದ್ದು ಆತನ ರಾಜ್ಯವು ಸ್ಥಾಪಿತವಾಗಿ ಪಾಪಗಳೆಲ್ಲವೂ ನಿಜ ರೀತಿಯಲ್ಲಿ ಅಳಿಸಲ್ಪಟ್ಟು ಅಂಕುಡೊಂಕಾದ ಮಾರ್ಗವನ್ನು ನೆಟ್ಟಗೆ ಮಾಡಿ ಮನುಷ್ಯ ಸ್ವಭಾವವೆಂಬ ಹಳ್ಳಕೊಳ್ಳ ಗಳು ಮುಚ್ಚಲ್ಪಟ್ಟು ಸಮಮಾಡಿ ಬೆಟ್ಟದಂತಿರುವ ಹೆಮ್ಮೆಯ ಗುಣವನ್ನು ದೀನತೆಗೆ ತಗ್ಗಿಸಲ್ಪಟ್ಟು ಮನುಷ್ಯರೆಲ್ಲರನ್ನು ದೇವರ ರಕ್ಷಣಾಕಾರ್ಯವನ್ನು ಕಾಣಲು ಸಿದ್ಧಮಾಡುವರೆಂಬ ಈ ಮಾತು ಗಳಲ್ಲಿರುವ ಅದರ ಎಲ್ಲಾ ಅರ್ಥಗಳಲ್ಲಿಯೂ ಯತ್ನಿಸುವುದಾಗಿದೆ.

ಹೀಗಿದ್ದರೂ ಈ ಮೇಲಾದ ಎಲೀಯನ ಸಾಕ್ಷಿಯು ಸ್ನಾನಿಕನಾದ ಯೋಹಾನನು ಸ್ವಲ್ಪಮಟ್ಟಿನ ನಿಜರೂಪವಾದ ಎಲೀಯನಾಗಿ ಕೊಟ್ಟ ಸಾಕ್ಷಿಯಂತೆ ಫಲಕಾರಿಯಾಗುವು ದಿಲ್ಲವೆಂದು ಸತ್ಯವೇದವು ನಿಖರವಾಗಿ ಸೂಚಿಸುತ್ತದೆಂಬುದನ್ನು ನಾವು ನೆನಪಿನಲ್ಲಿಡಬೇಕು. ಶರೀರದಲ್ಲಿರುವ ಸಭೆಯು ಕರ್ತನು ಜಯಶಾಲಿಯಾಗಿ ತನ್ನ ರಾಜ್ಯದಲ್ಲಿ ಪ್ರವೇಶಿಸಲು ದಾರಿಗಳನ್ನು ನೆಟ್ಟಗೆ ಮಾಡುವಲ್ಲಿ ಸಫಲವಾಗದು. ಕೆಲವರು ಮಾತ್ರ ಈ ಸಂದೇಶಕ್ಕೆ ಕಿವಿಗೊಟ್ಟಿರುವರು; ಆದರೆ ದೇವರ ರಾಜ್ಯವನ್ನು ನಿರೀಕ್ಷಿಸುತ್ತಿರುವುವೆಂದು ಹೇಳಿಕೊಳ್ಳುವ ಬಹು ದೊಡ್ಡ ಪಾಲಿನವರನ್ನು ತಲುಪಲು ಈ ಸಂದೇಶವು ಅತ್ಯಂತವಾಗಿ ವಿಫಲವಾಗಿದೆ. ಆದಾಗ್ಯೂ ದೇವರ ಸದುದ್ದೇಶಗಳು ಅಂತಿಮವಾಗಿ ಪೂರ್ಣಗೊಳ್ಳುತ್ತವೆ. ದೇವರು ತಮಗೆ ದರ್ಶನ ಕೊಟ್ಟ ಕಾಲಗಳನ್ನು ಅರಿಯದೆ ರಕ್ಷಕನ ಮೊದಲನೇ ಬರುವಿಕೆಯಲ್ಲಿ ಅದಕ್ಕೆ ಸಿದ್ಧವಾಗದ ಶಾರೀರಿಕ ಸಂಬಂಧದಲ್ಲಿನ ಇಸ್ರಾಯೇಲ್ಯರಿಗೆ ಸಂಭವಿಸಿದಂತೆಯೇ ಈ ಕಾಲದ ಅಂತ್ಯಭಾಗವಾದ "ಸುಗ್ಗಿಯ ಕಾಲದಲ್ಲಿ" ಕಷ್ಟ ವಿಪತ್ತು ಸಂಕಟಗಳ ಮೂಲಕ ದೈವಸಂಕಲ್ಪವನ್ನು "ಕ್ರೈಸ್ತ ಸಮುದಾಯಕ್ಕೆ" ಪರಿಚಯಿಸಲ್ಪಡಬೇಕು. ಹೀಗಿದ್ದರೂ ಅವು ಪೂರ್ಣವಾಗಿ ನೆರವೇರುವವು. ಮೆಸ್ಸೀಯನ ಬರುವಿಕೆಗೆ ಸಿದ್ಧವಾಗದಿರುವುದು ಆತನು ನೆರವೇರಿಸಲಿರುವ ಕಾರ್ಯಗಳಿಗೆ ಅಡ್ಡಿಯಾಗಲಾರವು. ತನ್ನ ಮೊದಲ ಬರುವಿಕೆಯಲ್ಲಿ ನಿಜವಾದ ಇಸ್ರಾಯೇಲ್ಯರೆಲ್ಲರನ್ನು ಅರಿಸಿ ತೆಗೆದು ದೇವರ ಹೊಸ ವ್ಯವಸ್ಥೆಯಲ್ಲಿ ಸೇರಿಸಿದಂತೆಯೇ ಈಗ ಆತನು ಆಯಲ್ಪಟ್ಟ ತನ್ನ "ಚಿಕ್ಕ ಹಿಂಡನ್ನು" ತನಗಾಗಿ ಕೂಡಿಸಿಕೊಂಡು ತನ್ನ ರಾಜ್ಯವನ್ನು ಸ್ಥಾಪನೆ ಮಾಡುವನು. ಅದರ ಆಳ್ವಿಕೆ ಎಲ್ಲರ ಮೇಲಿರುವುದು. ಅದು ಎಲ್ಲಾ ಡೊಂಕಾದ ಮಾರ್ಗಗಳನ್ನು ನೆಟ್ಟಗೆ ಮಾಡುವುದು, ನೀತಿ ಮತ್ತು ಪರಿಶುದ್ಧತೆಯುಳ್ಳ ಮಾರ್ಗವನ್ನು ಎತ್ತರಿಸಿ ಸಮವಾಗ ಮಾಡುವದು; ಈ ಮೂಲಕ ಅಲ್ಲಿ ತಪ್ಪುಗಳೆಂಬ ಮುಗ್ಗರಿಸುವ ಬಂಡೆಗಳೂ ಸೈತಾನನ ವಂಚನೆಗಳೂ ಇಲ್ಲದ ಒಂದು "ರಾಜಮಾರ್ಗವು" ಉಂಟಾಗುವುದು. (ಯೆಶಾಯ 35:8,9) ಅಲ್ಲಿ ಆಗ ಮನುಷ್ಯರೆಲ್ಲರನ್ನು ಸತ್ಯದ ಪರಿಜ್ಞಾನಕ್ಕೆ ತಂದು ಅವರು ವಿಧೇಯತೆಯೆಂಬ ಈ ಉನ್ನತವಾದ ರಾಜಮಾರ್ಗದಲ್ಲಿ ಮುಂದುವರಿದು (ಕೆಟ್ಟು ಹೋಗಿದ್ದ) ಸಮಸ್ತವನ್ನೂ ಸರಿಮಾಡುವ ಕಾಲಗಳ ಪರ್ಯಂತರ ಅವರು ವೃದ್ಧಿಯಾಗಿ ಭವ್ಯವಾದ ಪರಿಪೂರ್ಣತೆಗೆ ಸೇರುವರು. ಆದಿ ತಂದೆಯಾದ ಆದಾಮನ ಆಜ್ಞೆ ಮೀರುವಿಕೆಯಿಂದ ಕಳೆದುಹೋದ ಆ ಪರಿಪೂರ್ಣತೆಯು ಕ್ರಿಸ್ತನ ಅಮೂಲ್ಯ ರಕ್ತದಿಂದ ವಿಮೋಚಿಸಲ್ಪಟ್ಟು ನಂತರ ಆತನಿಗೂ ಆತನ ಸಂತತಿಗೂ ಅದು ಮರಳಿ ದೊರಕುವುದು. ಮನುಷ್ಯರೆಲ್ಲರೂ ದೇವರ ರಕ್ಷಣಾ ಕಾರ್ಯವನ್ನು ನಿಜವಾಗಿಯೂ ಕಾಣುವರು. ಅವರಲ್ಲಿ ಯಾರು ಅದನ್ನು ಇಚ್ಛಿಸುವರೋ ಅವರೆಲ್ಲರೂ ಅದರಲ್ಲಿ ಪಾಲುಗಾರರಾಗುವರು. ಏಕೆಂದರೆ ಈ ಆಶೀರ್ವಾದವನ್ನು ದೇವರು ಅಬ್ರಹಾಮನ ನಿಜವಾದ ಆತ್ಮಿಕ ಸಂತತಿಯಾದ ಕ್ರಿಸ್ತನು ಮತ್ತು ಆತನ ಆಯಲ್ಪಟ್ಟ ಸಭೆಯ ಮೂಲಕ ಎಲ್ಲರಿಗೂ ಒದಗಿಸಿದ್ದಾನೆ. – ಗಲಾತ್ಯ 3:16, 29

ಯೋಹಾನನು ಗುಡ್ಡಗಾಡಿನಲ್ಲಿನ ಒರಟಾದ ವ್ಯಕ್ತಿಯಂತೆ ಕಂಡರೂ ಬಹುಶಃ ಆತನ ಅತಿ ಸರಳ ಮಾತಿನಿಂದ ಕೂಡಿದ ಸೇವಾಕಾರ್ಯಗಳು ಮೊದಮೊದಲಲ್ಲಿ ಪ್ರಚಲಿತವಾದಂತೆ ತೊರುತ್ತದೆ. ಹೀಗಾಗಿ ಬಹು ದೊಡ್ಡ ಗುಂಪು ಆತನ ಬಳಿಗೆ

ಬಂದಿತು; ಅವರಲ್ಲಿ ಕೆಲವರು ಯೋಹಾನನಿಗೂ ಬಹು ದುಷ್ಟಜನರಾಗಿ ತೋರಿದ್ದರಿಂದ ತಾವು ದೇವರ ಕಡೆಗೆ ತಿರುಗಿಕೊಂಡದ್ದನ್ನು ತಕ್ಕ ಫಲಗಳಿಂದ ತೋರಿಸುವವರೆಗೆ ಅವರನ್ನು ಪೂರ್ಣವಾಗಿ ಅಂಗೀಕರಿಸುವುದು ಆತನಿಗೆ ಸರಿಕಾಣಲಿಲ್ಲ. ಇವರನ್ನು ಆತನು "ಸರ್ಪಜಾತಿಯವರೆಂದು" ಹೆಸರಿಸಿರುವನು. ಇದು ಬಹು ಕಠಿಣವಾದ ಮಾತೆಂದು ನಾವು ಹೇಳ ಮನಸ್ಸಿನವರಾಗಿದ್ದೇವೆ. ಈ ವಿಧವಾದ ಭಾಷೆಯನ್ನು ಅನುಸರಿಸುವುದು ಈ ಕಾಲದ ದೇವಜನರಿಗೆ ಯುಕ್ತವಾದುದೆಂದು ನಾವು ಅರ್ಥೈಸಬಾರದು. ಆ ಕಾಲದ ವಿಶೇಷವಾದ ಒಂದು ಪರಿಸ್ಥಿತಿಯಲ್ಲಿ ಯೋಹಾನನು ಒಬ್ಬ ಪ್ರವಾದಿಯಾಗಿ ಈ ವಿಧವಾದ ಭಾಷಾಶೈಲಿಯನ್ನು ತೀಕ್ಷಣವಾದ ಖಂಡನೆಯಾಗಿ ಬಳಸಲು ದೇವರಿಂದ ನಡೆಸಲ್ಪಟ್ಟವನೆಂದು ನಾವು ಸರಿಯಾದ ರೀತಿಯಲ್ಲಿ ಭಾವಿಸಬೇಕು. ಇದಕ್ಕೆ ಬದಲಾಗಿ ಈ ಸುವಾರ್ತಾ ಯುಗದಲ್ಲಿ ದೇವಜನರು ಸಾತ್ವಿಕರಾಗಿ ತಾಳ್ಮೆ ದೀರ್ಘಶಾಂತಿ ಮುಂತಾದವುಗಳಿಂದ ಕೂಡಿದವರಾಗಿ ನುಡಿಯಬೇಕೆಂದು ದೇವರು ಸೂಚಿಸಿದ್ದಾನೆ. "ಕೇಡನ್ನು ಸಹಿಸಿಕೊಳ್ಳುವವನೂ ಎದುರಿಸುವವರನ್ನು ನಿಧಾನದಿಂದ ತಿದ್ದುವವನೂ ಆಗಿರಬೇಕು." ಹಿಂದಿನ ಕಾಲದ ಪ್ರವಾದಿಗಳ ವಿಷಯದಲ್ಲಿದ್ದಂತೆ ದೈವನಿರ್ದೇಶನದ ಪ್ರಕಾರ ವಿಶೇಷ ಸೂಚನೆ ಇಲ್ಲದಿದ್ದಲ್ಲಿ, ತಮ್ಮ ನಡತೆಯ ವಿಷಯದಲ್ಲಿ ದೇವರ ವಾಕ್ಯದ ನಿರ್ದೇಶನದಿಂದ ಹೇಗೂ ತಿರುಗಿಕೊಳ್ಳಬಾರದೆಂದು ದೇವಜನರಿಗೆ ಈಗಿನ ಕಾಲದಲ್ಲಿ ಸಾಮಾನ್ಯವಾದ ಒಂದು ಸೂಚನೆಯಿದೆ. ನಮಗೆ ತಿಳಿದಿರುವಂತೆ ಅಂಥ (ಹಿಂದಿನ ಕಾಲದ ಪ್ರವಾದಿಗಳಿಗಿದ್ದಂತ)ಸೂಚನೆಯನ್ನು ಈಗಿನ ಕಾಲದಲ್ಲಿ ಯಾರಿಗೂ ಕೊಟ್ಟಿರುವುದಿಲ್ಲ.

"ಮುಂದೆ ಕಾಣಬರುವ ದೇವ ಕೋಪದಿಂದ ತಪ್ಪಿಸಿಕೊಳ್ಳಬೇಕೆಂದು" ತನ್ನನ್ನು ಕೇಳಿದವರ ವಿಷಯವಾಗಿ ಯೋಹಾನನು ಮಾತನಾಡುವಾಗ ಆತನು ನಿತ್ಯಯಾತನೆಯ ವಿಷಯವಾದ ಬೋಧನೆ ಮಾಡಿದನೆಂದೂ ಜನರು ಅದನ್ನು ನಂಬಿದರೆಂದೂ ಈ ವಚನಗಳು ಉಲ್ಲೇಖಿಸುತ್ತವೆಂದು ನಾವು ಯೋಚಿಸಬಾರದು. ಅದಕ್ಕೆ ಬದಲಾಗಿ ಹೇಳುವುದಾದರೆ, ಸತ್ಯವೇದದಲ್ಲಿ ಇಂತಹ ಬೋಧನೆ ಇರುವುದಿಲ್ಲ. ಯೋಹಾನನು ಸೂಚಿಸಿದ "ಮುಂದೆ ಕಾಣಬರುವ ದೇವ ಕೋಪ" ಎಂಬುದು. ಅವರ ಮೆಸ್ಸೀಯನ್ನು ಅಂಗೀಕರಿಸದಿದ್ದಲ್ಲಿ ಆಗ ಇನ್ನೂ ಪ್ರಸ್ತುತ ಪಡಿಸದಿದ್ದ, ಹಾಗೂ ಸ್ವಲ್ಪ ಸಮಯದಲ್ಲೇ ಕಾಣಿಸಿಕೊಳ್ಳಬೇಕಿದ್ದ ಆ ಜನಾಂಗಕ್ಕೆ ಬರಲಿರುವ ಕೇಡಿನ ವಿಷಯವಾದ ಪ್ರವಾದನೆಯಾಗಿತ್ತು. ಮತ್ತು ಅವರು ನಿಜವಾದ ರೀತಿಯಲ್ಲಿ ಮಾನಸಾಂತರಪಟ್ಟು ಸ್ನಾನದೀಕ್ಷೆ ಹೊಂದುವುದರ ಮೂಲಕ ಆತನ ಬರೋಣಕ್ಕೆ ಸಿದ್ಧವಾಗಬೇಕಿತ್ತು. ನಮ್ಮ ಕರ್ತನು ಮತ್ತು ಅಪೋಸ್ತಲನಾದ ಪೌಲನು ವಿಶೇಷವಾಗಿ ಸಾಕ್ಷಿನುಡಿದಂತೆ ಅವರು ಮೆಸ್ಸೀಯನನ್ನು ನಿರಾಕರಿಸಿದ ಕಾರಣ "ಕಾಣಬರಲಿದ್ದ ದೇವಕೋಪವು" ಅವರ ಮೇಲೆ ಬಂದಿತು. (ಲೂಕ 21:23, ರೋಮಾ. 9:22, 1 ಥೆಸಲೋನಿಕ 2:16 ನೋಡಿ) ಆ ಮಹಾ ಸಂಕಟದ ಕಾಲದಲ್ಲಿ ಅದು (ಆ ಕೋಪಾಗ್ನಿ) ಅವರನ್ನು ತೀಕ್ಷಣವಾಗಿ ದಹಿಸಿದ ಪರಿಣಾಮವಾಗಿ ಕ್ರಿ.ಶ. 69–70 ರಲ್ಲಿ ಅವರು ಒಂದು ಜನಾಂಗವಾಗಿ ರಾಜ್ಯವೆನಿಸಿಕೊಳ್ಳುವುದರಿಂದ ಬಿದ್ದುಹೋದರು. ಮತ್ತು ಅವರು ಅಂದಿನಿಂದ ದೇವಕೋಪಕ್ಕೆ ಗುರಿಯಾಗಿ ತಾವು ಜನಾಂಗವಾಗಿ ಮತ್ತೆ ತಮ್ಮನ್ನು ಪುನಃ ಸ್ಥಾಪನೆ ಮಾಡಿಕೊಳ್ಳಲು ಈ ವರೆಗೂ ಅವರಿಗೆ ಸಾಧ್ಯವಾಗಿಲ್ಲ. "ಮುಂದೆ ಕಾಣಬರುವ ದೇವಕೋಪ" ಎಂಬುದನ್ನು ಮುಂದೆ ಈ ಪಾಠದ ಕೆಳಭಾಗದಲ್ಲಿ ವಿವರಿಸಿ ದೃಡಪಡಿಸಿರುವುದನ್ನು ನಾವು ಕಂಡುಕೊಳ್ಳಲಿರುವೆವು.

ಯೋಹಾನನು ಉಪದೇಶ ಮಾಡುವಾಗ ತನಗೆ ಒಂದು ಕಷ್ಟವಿರುವುದನ್ನು ಅವನು ಕಂಡನು. ಅದೇನೆಂದರೆ ಅತನ ಮಾತನ್ನು ಕೇಳಿದವರಲ್ಲಿ ಕೆಲವರು – ತಾವು ದೇವರಿಂದ ವಿಶೇಷವಾಗಿ ಆದುಕೊಳ್ಳಲ್ಪಟ್ಟ ಜನರೆಂದೂ, ತಾವು ಮುಂದೆ ಪ್ರಭಾವಹೊಂದುವುದನ್ನು ಪ್ರವಾದಿಗಳು ಮುಂತಿಳಿಸಿರುವರೆಂದೂ ಲೋಕದಲ್ಲಿ ತಮಗಿಂತಲೂ ಉತ್ತಮರಾದ ಜನರು ಇಲ್ಲದಿರುವಲ್ಲಿ ದೇವರು ಅತ್ಯುತ್ತಮರಾದ ತಮ್ಮನ್ನು ಬಿಟ್ಟು ಮುಂದೆ ದಾಟಿಹೋಗುವನೆಂದು ಊಹಿಸುವುದು ಸೂಕ್ತವಲ್ಲವೆಂಬ ಆಲೋಚನೆಯನ್ನು ತಮ್ಮಲ್ಲಿ ಇಟ್ಟುಕೊಂಡಿದ್ದರು. ತನ್ನ ವಾಗ್ದಾನವನ್ನು ನೆರವೇರಿಸಲು ಆತನು ಅವರಲ್ಲಿ ಸ್ವಲ್ಪ ಮಂದಿಯನ್ನಾದರೂ ತೆಗೆದುಕೊಳ್ಳಬೇಕೆಂದೂ ಮತ್ತು ಅವರು ತೋರಿಕೆಯಲ್ಲಿ ಆತನ ನಿಯಮಗಳಿಗೆ ಅತಿ ವಿಧೇಯರಾಗಿದ್ದುದು ಮಾತ್ರವಲ್ಲದೆ ವಾಗ್ದಾನಗಳನ್ನು ಕೊಡಲ್ಪಟ್ಟ ಅಬ್ರಹಾಮನ ಶಾರೀರಿಕವಾದ ಸಂತತಿಯಾಗಿರುವರೆಂದೂ ಅವರು ವಾದಿಸುತ್ತಿದ್ದರು. ಇದೇ ರೀತಿಯಲ್ಲಿ ಪವಿತ್ರತೆ ಹಾಗೂ ದೇವರಿಗೆ ಸಂಪೂರ್ಣವಾದ ಪ್ರತಿಷ್ಠೆಯ ವಿಷಯವಾದ ಬೋಧನೆಗಳಿಗೆ ಈಗಿನ ಕಾಲದ ಸಮಸ್ತ "ಕ್ರೈಸ್ತ ಸಮುದಾಯದಲ್ಲಿ" ಇರುವ ಪ್ರಾಮುಖ್ಯವಾದ ವಿರೋಧಾಭಿಪ್ರಾಯವು ಇದೇ ತಪ್ಪಿನಿಂದ ಕೂಡಿರುವುದು. ಒಂದು ತಪ್ಪಾದ ಸಿದ್ಧಾಂತವು ಕ್ರೈಸ್ತರ ಮನಸ್ಸಿನಲ್ಲಿ ಒಳಹೊಕ್ಕಿದ್ದು ಅದು ದೇವಾನುಗ್ರಹವನ್ನು ಪಡೆಯಲು ಪರಿಶುದ್ಧತೆಯು ಅಗತ್ಯವಿಲ್ಲವೆಂಬ ಅಂಶವನ್ನು ವಾದಿಸಲು ಅವರಿಗೆ ಎಡೆಮಾಡಿಕೊಟ್ಟಿರುವುದು. ಅವರ ವಾದಸರಣಿಯು ಹೀಗಿರುವುದು: ಪ್ರಪಂಚದ 160 ಕೋಟಿ ಜನಸಂಖ್ಯೆಯಲ್ಲಿ ಕೇವಲ 30 ಕೋಟಿ ಜನರು ಮಾತ್ರ ಕ್ರೈಸ್ತತ್ವವನ್ನು ಅಲ್ಪ ಸ್ವಲ್ಪವಾಗಿ ಅನುಸರಿಸುವವರಾಗಿದ್ದಾರೆ. ಅವರಲ್ಲಿ ಗ್ರೀಕ್ ಕಥೋಲಿಕರು. ರೋಮನ್ ಕಥೋಲಿಕರು ಇರುವರು. ಮತ್ತು ಫೋಸ್ಟರ್ (ಎಂ. ಇ) ಎಂಬ ಬಿಷಪ್ಪರು, ಪ್ರೋಟೆಸ್ಟಂಟರು ಮತ್ತು ಶಿಶುಗಳೆಂಬವರನ್ನು "ದೇಹದ ಸುತ್ತಾ ಉಂಗುರಾಕಾರ ದಲ್ಲಿರುವ ಸಣ್ಣ ಸಣ್ಣ ಕಲೆಗಳು" ಎಂದು ಹೆಸರಿಸಿದ್ದಾರೆ. ಈಗ ಅವರು ಹೇಳುವುದು ದೇವರು ಇವರಲ್ಲಿ ಸ್ವಲ್ಪ ಮಂದಿಯನ್ನಾದರೂ ತೆಗೆದುಕೊಳ್ಳಬೇಕು. ಏಕೆಂದರೆ, ಹೋಲಿಸಿ ನೋಡಿದ್ದಲ್ಲಿ, ಅತನು ಎಲ್ಲಾ ಪಂಗಡದ ಜನರನ್ನು ತೆಗೆದುಕೊಳ್ಳಬೇಕಾದಲ್ಲಿ ಆತನಿಗೆ ಕೇವಲ ಅಲ್ಪ ಮಂದಿಯೇ ದೊರಕುವರು. ತನ್ನ ವಿರೋಧಿಯಾದ ಸೈತಾನನಿಗಿಂತಲೂ ಮುಂದಾಗಿರಬೇಕೆಂಬ ಕೇವಲ ಒಂದೇ ಮಹತ್ವಾಕಾಂಕ್ಷೆ ಆತನನ್ನು ಪ್ರೇರಿಸಿದ್ದಲ್ಲಿ ಕ್ರೈಸ್ತರೆಂದು ಹೇಳಿಕೊಳ್ಳುವವರನ್ನೂ ಅಲ್ಲದೆ ಅವರಲ್ಲಿ ಅರೆ – ಸಭ್ಯರಾದ ಯಾರನ್ನೂ ನಿರಾಕರಿಸಲು ಆತನಿಗೆ ಸಾಧ್ಯವಾಗದು. ಇದರ ಪರಿಣಾಮವಾಗಿ ಅವರ ವಾದವು, ದೇವರಿಗಾಗಿ ತಾವು ಪವಿತ್ರರಾಗುವುದೂ, ನಡೆ ನುಡಿ, ಆಲೋಚನೆಗಳಲ್ಲಿ ಶುದ್ಧೀಕರಣ ಹೊಂದುವುದೂ ದೇವಾನುಗ್ರಹ ಪಡೆಯಲು ಪ್ರಾಮುಖ್ಯವಾದುದೇನಲ್ಲವೆಂಬುದು.

ಆದುದರಿಂದ ಇವುಗಳು ವಿಷಯವನ್ನು ಅತಿರೇಕಕ್ಕೆ ಕೊಂಡೊಯ್ಯುವಂತದ್ದು. "ನಿರ್ಮಲ ಚಿತ್ತರು ದೇವರನ್ನು ನೋಡುವರು" ಮತ್ತು "ಪರಿಶುದ್ಧತೆಯಿಲ್ಲದೆ ಯಾರೂ ದೇವರನ್ನು ಕಾಣಲಾರರು" ಎಂಬ ಹೇಳಿಕೆಗಳು ಅವರಿಗೆ ಒಂದು ಅತಿರೇಕದ ಮಾತಾಗಿರುವುದು. ಹಾಗಾಗಿ ಇವುಗಳನ್ನು ಬಿಟ್ಟುಬಿಡಬೇಕು ಇಲ್ಲದಿದ್ದಲ್ಲಿ, ಹಿಂದಿನ ಕಾಲಗಳಲ್ಲಿ ಉಪಯೋಗ ಮಾಡುತ್ತಿದ್ದಂತೆ, "ಪವಿತ್ರತೆ" ಎಂಬ ಶಬ್ಧವನ್ನು ಬಹಿರಂಗವಾಗಿಯೂ ಉಗ್ರವಾಗಿಯೂ ತೋರದಿರುವ ಕೆಟ್ಟತನವೆಂಬ ಒಂದು ಸಂಕುಚಿತಾರ್ಥದಲ್ಲಿ ಇದನ್ನು ಪರಿಗಣಿಸಬೇಕು. ಹೀಗೆ ಹೆಸರಿನ ಆತ್ಮೀಕ ಇಸ್ರಾಯೇಲ್ಯರ ನಿಜರೂಪದ ಎಲೀಯನು ಈಗ ಎದುರಿಸುತ್ತಿರುವ ಈ ವಿವಿಧ ರೂಪದ ಕಷ್ಟಗಳನ್ನೇ ಇಸ್ರಾಯೇಲ್ಯರ ನಿಜರೂಪದ ಎಲೀಯನು ಎದುರಿಸಿದ್ದನೆಂಬುದನ್ನು ನಾವು ನೋಡುತ್ತೇವೆ. ಆದರೆ ಯೋಹಾನನು ನೀಡಿದ ಉತ್ತರವನ್ನು ಗಮನಿಸಿ; ಅವನು ಬಹು ಕಟ್ಟುನಿಟ್ಟಾದ ಶರತ್ತುಗಳನ್ನು ಹಾಕಿದ್ದನು. ದೇವರು ನಿಮ್ಮಂಥವರನ್ನು ಅಂಗೀಕರಿಸುವ ಒತ್ತಾಯದಲ್ಲಿದ್ದಾನೆ; ಇಲ್ಲವಾದಲ್ಲಿ ಆತನ ಮಾತುಗಳು ನಿರರ್ಥಕವಾಗುತ್ತವೆ ಎಂಬ ಆಲೋಚನೆ ಮಾಡಿ ವಂಚಿತರಾಗಬೇಡಿರಿ. ನಮಗಿಂತಲೂ ಶುದ್ಧರಾದ ಅಬ್ರಹಾಮನ ಮಕ್ಕಳನ್ನು ಪಡೆಯಲು ಸಾಧ್ಯವಿಲ್ಲ. ಆದುದರಿಂದ ಆತನು ನಮ್ಮನ್ನೇ ತೆಗೆದುಕೊಳ್ಳಬೇಕು ಎಂಬ ಆಲೋಚನೆಯನ್ನು ಬಿಡಿರಿ. ಆತನ ಶಕ್ತಿಸಾಮರ್ಥ್ಯಗಳು ಹಾಗೂ ಆತನಿಗಿರುವ ಸಂಪತ್ತು ಸಾಧನಗಳು ಅಪರಿಮಿತವಾದವುಗಳು. ಅಲ್ಲದೆ ಆತನಿಗೆ ಅಗತ್ಯವಾದಲ್ಲಿ ಈ ಕಲ್ಲುಗಳಿಂದಲೂ ಅಬ್ರಹಾಮನಿಗೆ ಮಕ್ಕಳನ್ನು ಹುಟ್ಟಿಸಲು ಸಾಧ್ಯ. ಇವರಲ್ಲಿ ಕೆಲವರನ್ನು ಅಬ್ರಹಾಮನ ಮಕ್ಕಳೆನಿಸಿಕೊಳ್ಳುವ ಸಾಧ್ಯತೆಯು ಬಹು ದೂರವಾದದ್ದಾಗಿರುವುದೆಂದು ಪರಿಗಣಿಸಿ ಅವರನ್ನು ನಿಮ್ಮ ಕಾಲ ಕೆಳಗಿನ (ನಿಕೃಷ್ಟವಾಗಿ) ಕಲ್ಲುಗಳಂತೆ ಕಂಡಿರುವಿರಿ. ಮತ್ತು ನಾವು ಈ ರೀತಿಯಲ್ಲೇ ಉತ್ತರಿಸುವುದೆಂದರೆ, ಕ್ರೈಸ್ತತ್ವವನ್ನು ಕಪಟತನದಿಂದ ಅನುಸರಿಸುತ್ತಿರುವ "ಕ್ರೈಸ್ತ ಸಮುದಾಯವನ್ನು" ದೇವರು ಸಂಪೂರ್ಣವಾಗಿ ನಿರಾಕರಿಸುವನು. ಇದು ತೋರಿಕೆಗಾಗಿ ಅನುಸರಿಸುತ್ತಿರುವ ಬಹು ಪಾಲಿನ ಜನರಿಂದ ಪ್ರತಿನಿಧಿಸಲ್ಪಟ್ಟದ್ದು. ಈಗಲೂ ಅವರು ಇಹಲೋಕಾಧಿಪತಿಯಿಂದ ಮಂಕುಮಾಡಲ್ಪಟ್ಟವರಾಗಿ ದೇವರ ಮತ್ತು ಆತನು ಕಳುಹಿಸಿದ ಯೇಸುಕ್ರಿಸ್ತನ ನಿಜವಾದ ಗುಣಲಕ್ಷಣಗಳನ್ನು ಅರಿಯದವರಾಗಿದ್ದಾರೆ. ಏಕೆಂದರೆ ಅವರು ಹೃದಯದಲ್ಲಿ ಶುದ್ಧರಾಗದೆ ಕರ್ತನಿಗೆ ಪೂರ್ಣವಾಗಿ ಪ್ರತಿಷ್ಠೆ ಮಾಡಿಕೊಳ್ಳದೆ ಇದ್ದಾರೆ. ಒಂದು ವೇಳೆ ನಾವು ತುತ್ತೂರಿ ಧ್ವನಿಯಂತ ಸ್ವರವನ್ನು ಪಡೆದು ಈ ನಾಮಾಂಕಿತ ಕ್ರೈಸ್ತ ಸಮುದಾಯದ ಕೋಟ್ಯಾಂತರ ಜನರಿಗೆ ಅವರ ನಿಜಸ್ಥಿತಿಯನ್ನು ತಿಳಿಸಿದಾಗ ಅವರು ಕರ್ಣಶುದ್ಧಿಯನ್ನು ಹೊಂದಿ ನಮ್ಮ ಮಾತುಗಳನ್ನು ಕೇಳಿ ಮಾನಸಾಂತರ ಹೊಂದಿ ಈಗ ಲೋಕದಲ್ಲಿ ಸಂಭವಿಸಲಿಕ್ಕಿರುವ ಭವ್ಯವಾದ ಘಟನೆಗಳಿಗೆ ತಮ್ಮನ್ನು ಸಿದ್ಧಪಡಿಸಿಕೊಂಡು ಮಹಾ ಸಂಕಟದ ಕಾಲದೊಳಗೆ ಸೇರದಂತೆ ತಪ್ಪಿಸಿಕೊಳ್ಳಲು ಅವರಿಗೆ ಅನುಗ್ರಹವಾಗುವುದೆಂದು ಭಾವಿಸಬಹುದೋ? ನಾವು ಅವರಿಗೆ ಇಷ್ಟನ್ನೇ ಭರವಸೆಯಿಂದ ಹೇಳಲು ಸಾಧ್ಯ. ದೇವರು ತನಗಾಗಿ ಆಯ್ಕೆಮಾಡಿರುವ ಜನರು ಪೂರ್ಣಸಂಖ್ಯೆಯಲ್ಲಿ ದೊರೆಯುವರು. ಆ ಸಂಖ್ಯೆಯು ಈ ಸಮೀಪದಲ್ಲೇ ಪೂರ್ಣಗೊಳ್ಳುತ್ತದೆ. ಹೀಗಿದ್ದರೂ ಅದು "ಚಿಕ್ಕ ಹಿಂಡೇ". ಅವರಿಗೆ ಆ ರಾಜ್ಯವನ್ನು ಕೊಡಲು ತಂದೆಯು ಹರ್ಷವುಳ್ಳವನಾಗಿದ್ದಾನೆ. ಇವರೆಲ್ಲರೂ ತಮ್ಮ ಮಹಿಮೆಯುಳ್ಳ ಶಿರಸ್ಸಾದ ಕರ್ತನೊಡನೆ ಸೇರಿ ಪ್ರಭಾವ ಹೊಂದುವರು. ಅಲ್ಲಿ ಆಗ ಸ್ಥಾಪನೆಯಾಗಿರುವ ದೇವರ ರಾಜ್ಯವು ಮಾನವ ಕುಲದವರೆಲ್ಲರನ್ನೂ ಆಶೀರ್ವದಿಸುವಂತದ್ದಾಗಿ ಕಾಣಿಸಿಕೊಳ್ಳುವುದು. ಹೀಗಿದ್ದರೂ, ಅವರ ದುಃಸ್ಥಿತಿಯ ಕಾರಣ ಜನಾಂಗ ಹುಟ್ಟಿದಂದಿನಿಂದಲೂ ಸಂಭವಿಸದಂತ ಮಹಾ ಸಂಕಟ ಕಾಲದಲ್ಲಿ ದೇವರ ರಾಜ್ಯವನ್ನು ಅವರಿಗೆ ಪರಿಚಯಿಸುವುದು ಅಗತ್ಯವಾಗುತ್ತದೆ ಎಂಬ ಅಂಶದ ನಿಮಿತ್ತ ನಮಗೆ ಗಾಢವಾದ ಅನುಕಂಪ ಉಂಟಾಗುತ್ತದೆ. ಅದು ಮುಂದೆ ಇನ್ನೆಂದಿಗೂ ಸಂಭವಿಸುವುದಿಲ್ಲವೆಂಬುದಕ್ಕಾಗಿ ದೇವರಿಗೆ ಸ್ತೋತ್ರ. – ದಾನಿಯೇಲ 12:1, ಮತ್ತಾಯ 23:21.

ತನ್ನ ಉಪದೇಶವನ್ನು ಮುಂದುವರೆಸುತ್ತಾ ಯೋಹಾನನು ತನ್ನನ್ನು ಕೇಳುವ ಯೆಹೂದ್ಯರಿಗೆ ಅವರ ಜನಾಂಗದ ಮೇಲೆ ನ್ಯಾಯ ವಿಚಾರಣೆಯ ಸಮಯ ಬಂದಿರುವುದೆಂದು ಸೂಚಿಸಿದನು. ಮರದ ಬೇರಿಗೆ ಈಗಾಗಲೇ ಕೊಡಲಿ ಹಾಕಿದೆ; ಇಸ್ರಾಯೇಲ್ಯರಲ್ಲಿ ನಿಜವಾದ ಇಸ್ರಾಯೇಲ್ಯರಾಗದೇ ಇರುವವರೆಲ್ಲರೂ ಸಂಕಟವೆಂಬ "ಬೆಂಕಿಯಲ್ಲಿ" ಹಾಕಲ್ಪಡುವರು. ಇದರೊಂ–ದಿಗೆ ಅವರ ಜನಾಂಗವು ರಾಜ್ಯವಿಲ್ಲದ್ದಾಗಿ ಅಳಿದು ಹೋಗುವುದು. ಮೂರುವರೆ ವರುಷ ಕಾಲ ಯೆಹೂದ್ಯ ಜನಾಂಗಕ್ಕೆ ನಮ್ಮ ಕರ್ತನು ಮಾಡಿದ ಸೇವೆಯ ಮತ್ತು ಅವರನ್ನು ಅಂತಿಮವಾಗಿ ನಿರಾಕರಿಸಲ್ಪಟ್ಟ ವಿಷಯಗಳು ಮೇಲೆ ಹೇಳಿದ ಯೋಹಾನನ ಮಾತಿಗೆ ಹೊಂದಿಕೊಂಡಂತೆ ಅದನ್ನು ಗೊಡ್ಡು ಅಂಜೂರ ಮರದ ಸಾಮ್ಯದಲ್ಲಿ ಸೂಚಿತವಾಗಿದೆ. – ಲೂಕ 13:6–9.

ಯೋಹಾನನು ಸ್ವಲ್ಪ ಮಟ್ಟಿಗೆ ಭಯ ಹುಟ್ಟಿಸುವಂತೆ ಹೇಳಿದ್ದರೂ ಅದನ್ನು ಸೂಕ್ತವಾಗಿ ಹೇಳಿದ್ದನು. ದೇವಾಜ್ಞೆಗಳನ್ನು ಉಲ್ಲಂಘಿಸುವವರ ಮುಂದೆ ಸತ್ಯವನ್ನು ಸರಿಯಾದ ರೀತಿಯಲ್ಲಿ ಪ್ರಸ್ತುತಪಡಿಸುವ ಮತ್ತು ದೇವರ ಹಾಗೂ ಆತನು ನೀಡುವ ದಂಡನೆಗಳ ವಿಷಯವಾದ ಭಯವನ್ನು ಸೂಕ್ತವಾಗಿ ತಿಳಿಸುವ ವಿಧಾನಗಳಿವೆ. ಆದರೆ ಇದು ಭೀತಿಮೂಡಿಸುವ "ನಿತ್ಯ ಯಾತನೆ" ವಿಷಯದಲ್ಲಿರುವ ಭಯಗಳಿಗಿಂತಲೂ ಭಿನ್ನವಾದುದು. ಪ್ರತ್ಯಕ್ಷವಾಗಿಯೋ ಇಲ್ಲವೇ ಪರೋಕ್ಷವಾಗಿಯೋ ಇದು ಇಂದಿನ ದೈವಶಾಸ್ತ್ರದ ಎಲ್ಲಾ ಬೋಧನೆಗಳಲ್ಲಿ ಒಂದು ಮುಖ್ಯವಾದ ಭಾಗವಾಗಿ, ಕೆಲವರನ್ನು ಬುದ್ಧಿಬ್ರಮಣೆಗೆ ಕೆಲವರನ್ನು ಸಂದೇಹವಾದಕ್ಕೆ ಹಾಗೂ ನಾಸ್ತಿಕತೆಗೆ ನಡೆಸಿ ಬಹು ಪಾಲು ಭಕ್ತರನ್ನೂ ದೇವರ ಮತ್ತು ಆತನ ಯೋಜನೆಯ ನಿಜವಾದ ಗುಣಲಕ್ಷಣಗಳನ್ನು ಅರಿತುಕೊಳ್ಳಲು ಅಡ್ಡಿಮಾಡಿದೆ. ನಾವಾದರೋ ನಮ್ಮ ದೇವರ ಗುಣಲಕ್ಷಣಗಳನ್ನು ತಪ್ಪಾಗಿ ನಿರೂಪಿಸದೆ ಮುಂದೆ ಬರುವ ದೇವಕೋಪವನ್ನು ಸತ್ಯವಾದ ರೀತಿಯಲ್ಲಿ ಪ್ರಸ್ತುತಪಡಿಸೋಣ. ಏಕೆಂದರೆ, ದೇವರು ತನ್ನ ಪವಿತ್ರನಾಮವನ್ನು ದೂಷಿಸುವವರನ್ನು ಖಂಡಿತವಾಗಿ ತಪ್ಪಿತಸ್ತರೆಂದು ನಿರ್ಣಯಿಸದೆ ಬಿಡುವುದಿಲ್ಲ.

ಯೋಹಾನನ ಉಪದೇಶದ ಅನುಸಾರ ಜನರು ತಾವು ಮುಂದೆ ಏನು ಮಾಡಬೇಕೆಂದು ವಿಚಾರಣೆ ಮಾಡಲಾರಂಭಿಸಿ

ದರು. ಸಾರಾಂಶವಾಗಿ ಹೇಳಬೇಕಾದಲ್ಲಿ, ಯೋಹಾನನು ಅವರಿಗೆ ನ್ಯಾಯ ಕರುಣೆ ಪ್ರೀತಿ ಉದಾರತೆಗಳನ್ನು ಅಭ್ಯಾಸಮಾಡಿ ಬಲಾತ್ಕಾರ ಸುಲಿಗೆಗಳನ್ನು ಬಿಟ್ಟುಬಿಟ್ಟು ತಮಗಿರುವವುಗಳಲ್ಲಿ ತೃಪ್ತಿಯಿಂದಿರಬೇಕೆಂದು ಪ್ರಬೋಧಿಸಿದನು. ಇದು ಉತ್ಕೃಷ್ಟವಾದ ಬುದ್ಧಿವಾದವಾಗಿತ್ತು. ನಿಸ್ಸಂದೇಹವಾಗಿ ಇದನ್ನು ಅನುಸರಿಸಿದವರು ಸರಿಯಾದ ಮನೋಭಾವಕ್ಕೆ ಬಂದು ಹೃದಯ ಪೂರ್ವಕವಾಗಿ ಕರ್ತನಾದ ಯೇಸುವನ್ನು ಮತ್ತು ಅತನ ರಕ್ತದಮೂಲಕ ಉಂಟಾಗುವ ಪಾಪ ಪರಿಹಾರದ ವಿಷಯವಾದ ಶುಭಸಂದೇಶವನ್ನು ಅಂಗೀಕರಿಸುವರು ಮತ್ತು ಹೀಗೆ ತಂದೆ ದೇವರೊಂದಿಗೆ ಸಂದಾನವಾಗುವರು. ಇದೇ ರೀತಿಯಲ್ಲಿ ಯಾರಾದರೂ ಈಗ ಬರಲಿರುವ ಕಷ್ಟಕಾಲದ ಈ (ಸುವಾರ್ತಾ) ಯುಗದ ಅಂತ್ಯದಲ್ಲಿ "ಕ್ರೈಸ್ತ ಸಮುದಾಯದ" ಮೇಲೆ ಬರುವ ದೇವಕೋಪದ ವಿಷಯವಾಗಿ ವಿಚಾರಿಸಿ, ನಾವು ಮಾಡಬೇಕಾದುದು ಏನು? ಎಂದು ಕೇಳಿದರೆ ನಾವು ಅವರಿಗೆ ಉತ್ತರಿಸುವುದೆಂದರೆ: ನೀತಿ ಸತ್ಯತೆ ಭಯಭಕ್ತಿ ಕರುಣೆ ಉಪಕಾರ ನ್ಯಾಯ ದೇವರಲ್ಲಿ ಭರವಸೆ ಮತ್ತು ಆತನ ಮಾರ್ಗವನ್ನು ಹುಡುಕಿ ಅದರಲ್ಲಿ ನಡೆಯುವುದು – ಇವುಗಳನ್ನು ಅಭ್ಯಾಸಿಸುವುದು. ಅಥವಾ ನಾವು ವಿಶೇಷವಾಗಿ ಈ ಕಾಲದ ವಿಷಯವಾಗಿರುವ ಪ್ರವಾದಿಗಳ ನುಡಿಗಳನ್ನು ಅವರಿಗೆ ಉಲ್ಲೇಖಿಸಿ ಹೇಳಬಹುದು. ಅವು ಯಾವುವೆಂದರೆ, "ಸದ್ಧರ್ಮವನ್ನು ಅಭ್ಯಾಸಿಸಿರಿ, ದೈನ್ಯವನ್ನು ಹೊಂದಿಕೊಳ್ಳಿರಿ, ಯೆಹೋವನ ಸಿಟ್ಟಿನ ದಿನದಲ್ಲಿ ಒಂದುವೇಳೆ ಮರೆಯಾಗುವಿರಿ" ಚೆಫನ್ಯ 2:3. ಇಷ್ಟೇ ಅಲ್ಲದೆ, ಯಾರು ಹೀಗೆ ನೀತಿ ಮುಂತಾದವುಗಳನ್ನು ಹುಡುಕುವರೋ ಅವರು ನಮ್ಮ ಅರಸನನ್ನು ಮತ್ತು ಅತನ ರಾಜ್ಯವನ್ನೂ ಆಹ್ವಾನಿಸಲು ಹೆಚ್ಚಾಗಿ ಸಿದ್ಧರಾಗಿರುವರೆಂಬ ಅಂಶದಲ್ಲಿ ನಂಬಿಕೆಯಿಡಬಹುದು. ಈ ಸುಗ್ಗಿಯ ಕಾಲದಲ್ಲಿ ಯಾರು ದೇವರು ಕರೆದದ್ದನ್ನೂ ಆದುಕೊಂಡದ್ದನ್ನೂ ದೃಢಪಡಿಸಿಕೊಳ್ಳುವುದರಲ್ಲಿ ವಿಫಲರಾಗಿ ತಮಗಾಗಿ ಕಾದಿರಿಸಿರುವ ಕಿರೀಟವನ್ನು ಪಡೆಯಲು ಅನರ್ಹರಾಗುವರೋ, ಅವರಿಗೆ ಬದಲಾಗಿ ಹೀಗೆ ಮಾನಸಾಂತರ ಹೊಂದಿ ನೀತಿಯನ್ನು ಹುಡುಕುತ್ತಿರುವಂಥವರಿಂದ ಕೆಲವರನ್ನು ತೆಗೆದುಕೊಂಡು ತನ್ನ ಆಯಲ್ಪಟ್ಟ ಸಬೆಯನ್ನು ಪೂರ್ಣಗೊಳಿಸಲು ಕರ್ತನು ಹರ್ಷವುಳ್ಳವನಾಗಿದ್ದಾನೆ ಎಂಬುದನ್ನು ನಾವು ಖಚಿತಮಾಡಿಕೊಳ್ಳಬಹುದು.

ಯೋಹಾನನು ಪ್ರಸ್ತುತಪಡಿಸಿದ ಸತ್ಯವು ಎಷ್ಟು ಪ್ರಬಲವಾಗಿತ್ತೆಂದರೆ ಜನರು ಮೆಸ್ಸೀಯನಾಗಿ ಬರಬೇಕಾದವನು ಈತನೇ ಆಗಿರಬಹುದೋ ಇಲ್ಲವೋ ಎಂದು ಆಶ್ಚರ್ಯಪಡಲಾರಂಭಿಸಿದರು. ಆದರೆ ತಾನು ಮೆಸ್ಸೀಯನ ಕೆರಗಳನ್ನು ತೆಗೆಯಬಹುದಾದ ಕನಿಷ್ಠ ಕೆಲಸಕ್ಕೂ ಯೋಗ್ಯನಲ್ಲ ಎಂಬುದನ್ನು ಖಚಿತವಾಗಿ ಹೇಳಿ ಇರುವ ಸಂಶಯಗಳೆಲ್ಲವನ್ನೂ ಶಮನಗೊಳಿಸಿದನು. ಅನಂತರದಲ್ಲಿ ಅವರಿಗೆ ಮೆಸ್ಸೀಯನ ಗುಣದ ಸಣ್ಣ ಮಿಣುಕು ನೋಟವನ್ನು ತೋರಿಸಿ, ಅಲ್ಲಿಂದ ಮುಂದುವರಿದು ಆತನ ಕಾರ್ಯದ ವಿಷಯವಾಗಿ ಹೇಳುವವನಾಗಿ ಅದು ತನ್ನ ಕಾರ್ಯಕ್ಕಿಂತಲೂ ಉನ್ನತವಾದುದೆಂದು ತಿಳಿಸಿ, ಯಾರು ಆತನನ್ನು ಅಂಗೀಕರಿಸುವರೋ ಅವರು ಉತ್ತಮವಾದ ಸ್ನಾನದೀಕ್ಷೆಯನ್ನು ಸಹ ಹೊಂದುವರೆಂದು ಹೇಳಿದನು. "ಆತನು ನಿಮಗೆ ಪವಿತ್ರಾತ್ಮದಲ್ಲಿಯೂ ಬೆಂಕಿಯಲ್ಲಿಯೂ ಸ್ನಾನ ಮಾಡಿಸುವನು" ಅಂದರೆ ಅವರಲ್ಲಿ ಕೆಲವರಿಗೆ (ಸ್ವಲ್ಪ ಮಂದಿಗೆ) ಪವಿತ್ರಾತ್ಮದಲ್ಲಿ, ಉಳಿದವರಿಗೆ (ದೊಡ್ಡ ಗುಂಪಿಗೆ) ತಮ್ಮ ಜನಾಂಗರಾಜ್ಯದ ಜೀವಿತವನ್ನು ಮತ್ತು ವೈಯಕ್ತಿಕ ಜೀವಿತವನ್ನು ನಾಶಮಾಡಲಿರುವ ಮಹಾಸಂಕಟ ಕಾಲವೆಂಬ ನ್ಯಾಯತೀರ್ಪಿನ ಬೆಂಕಿಯಲ್ಲಿ ಸ್ನಾನಮಾಡಿಸುವನು.


ಆತನು ಅವರಿಗೆ ಒಂದು ವಿಷಯದ ದೃಷ್ಟಾಂತಕೊಟ್ಟು ಹೇಳಿ, ಅವರು ತಮ್ಮ (ಯೆಹೂದ್ಯರ) ಯುಗದ ಸುಗ್ಗಿಯ ಕಾಲವನ್ನು ತಲುಪಿದ್ದಾರೆಂದು ಅವರು ಈಗ ನಿಜವಾದ ಗೋದಿಕಾಳನ್ನು ಹೊಟ್ಟಿನಿಂದ ಬೇರ್ಪಡಿಸುವಂತೆ ತಮ್ಮ ಬೇರ್ಪಡಿಸುವಿಕೆಯನ್ನು ಎದುರು ನೋಡಬೇಕಾಗಿರುವುದೆಂದು ಹೇಳಿದನು. ಇಸ್ರಾಯೇಲ್ಯರಲ್ಲಿ ನಮ್ಮ ಕರ್ತನ ಕೆಲಸವು ಗೋದಿಯ ಕೊಯ್ಲು ಮಾಡಿ ತೂರಿ "ಹೊಟ್ಟನ್ನು" ತೆಗೆದು ಕಾಳನ್ನು ಹಸನುಗೊಳಿಸುವ ಕಾರ್ಯವೆಂದು ಆತನು ಸೂಚಿಸಿದನು. ಎಷ್ಟು ಪ್ರಭಲ ಈ ಸಾಂಕೇತಿಕ ಭಾಷೆ! ಎಷ್ಟು ಸತ್ಯ ಈ ಅಂಶಗಳು! ನಮ್ಮ ಕರ್ತನು ನಿಜಕ್ಕೂ ಆ ಜನಾಂಗದವರೊಳಗಿಂದ ನಿಜವಾದ "ಗೋದಿ ಕಾಳನ್ನು" ಆರಿಸಿ ತೆಗೆದನು. ಅದರಲ್ಲಿ ಒಂದು ಕಾಳನ್ನೂ ಬಿಡಲಿಲ್ಲವೆಂಬುದು ನಮಗೆ ಖಚಿತ. ಆ ಗೋಧಿಯ ಕಾಳೆಲ್ಲ ವನ್ನೂ ಒಂದು ಸುರಕ್ಷಿತ ಸ್ಥಳಕ್ಕೆ ಅಂದರೆ ಒಂದು ಉನ್ನತವಾದ ದೈವೀಕ ವ್ಯವಸ್ಥೆಯೆಂಬ (ಸುವಾರ್ತಾಯುಗ) ತನ್ನ ಕಣಜಕ್ಕೆ ಕೂಡಿಸಿಕೊಂಡನು. ಅವರು ಸುವಾರ್ತಾಯುಗದ ಕ್ರೈಸ್ತಸಭೆಯ ಆರಂಭಿಗರಾಗಿ ಅಥವಾ ಮೊದಲನೇ ಸದಸ್ಯರಾಗಿ ರಚಿತಗೊಂಡರು. ಗೋದಿಕಾಳುಗಳೆಂಬ ಈ ವರ್ಗದವರ ಮೇಲೆಯೇ ಪಂಚಾಶತ್ತಮ ದಿನದಲ್ಲಿ ಪವಿತ್ರಾತ್ಮವು ಬಂದಿಳಿಯಿತು. ಅಲ್ಲಿಂದೀಚೆಗೆ ಈ ಸತ್ಯ ಸಭೆಯಲ್ಲಿಯೇ ಅದು ನೆಲೆಯಾಗಿರುವುದು. ಈ "ಗೋದಿಕಾಳನ್ನು" (ಗಾಳಿಯಲ್ಲಿ ತೂರಿ) ಬೇರ್ಪಡಿಸಿ ಪವಿತ್ರಾತ್ಮನಿಂದ ಸ್ನಾನದೀಕ್ಷೆ ಕೊಡುವುದರ ಮೂಲಕ ಕಣಜಕ್ಕೆ ಸೇರಿಸಿಕೊಂಡ ನಂತರ ಆ ಜನಾಂಗದಲ್ಲಿ "ಹೊಟ್ಟು" ಎನ್ನಿಸಿಕೊಳ್ಳುವ ಎಲ್ಲರನ್ನೂ ಕ್ಲುಪ್ತಕಾಲದಲ್ಲಿ ಯಾರೂ ತಡೆಯಲಾಗದ ಸಂಕಟಕಾಲವೆಂಬ ಆರದ ಬೆಂಕಿಯಲ್ಲಿ ಸುಟ್ಟುಹಾಕುವನು. ಇಸ್ರಾಯೇಲ್ ಜನಾಂಗವನ್ನು ನಾಶನದಿಂದ ತಪ್ಪಿಸಲು ಹಲವು ಬಗೆಯ ಕ್ರಮಗಳನ್ನು ತೆಗೆದುಕೊಂಡರೂ ಅವೆಲ್ಲವೂ ವಿಫಲಗೊಂಡವೆಂಬುದನ್ನು ನೆನಪಿನಲ್ಲಿಡಬೇಕು. ರೋಮ್ ಸಾಮ್ರಾಜ್ಯದ ಚಕ್ರವರ್ತಿಯೂ ಸಹ ಆ ಜನಾಂಗವನ್ನು ಕ್ರಮಕ್ಕೆ ತಂದು ಅದನ್ನು ಉಳಿಸ ಬಯಸಿದ್ದನು. ರೋಮ್ ಸೈನ್ಯವು ಅಲ್ಲಿಗೆ ತೆರಳಿದ್ದುದು ಅವರನ್ನು ನಾಶಮಾಡುವುದಕ್ಕಾಗಿರದೆ ಅವರಲ್ಲಿ ಸಮಾಧಾನವನ್ನು ಸ್ಥಾಪಿಸುವುದಕ್ಕಾಗಿತ್ತು. ಅದರೆ ಕರ್ತನು ತಾನು ಹೊತ್ತಿಸಿದ ಕಷ್ಟವೆಂಬ ಬೆಂಕಿಯನ್ನು ಯಾವ ಶಕ್ತಿಯೂ ನಂದಿಸಬಾರದೆಂದೂ ಅದು ತನ್ನ ಕಾರ್ಯವನ್ನು ಪೂರ್ಣವಾಗಿ ನೆರವೇರಿಸಬೇಕೆಂದೂ ಘೋಷಿಸಿದ್ದನು. ಅದರಂತೆಯೇ ಆಯಿತು.

ಹೀಗೆಯೇ ಕಷ್ಟಕಾಲಗಳೆಂಬ ಮಹಾ "ಬೆಂಕಿಯು" ಈ ಸುವಾರ್ತಾ ಯುಗವನ್ನು ಮುಕ್ತಾಯಗೊಳಿಸಲಿರುವುದು. ಮತ್ತು ಕ್ರೈಸ್ತ ಸಮುದಾಯದಲ್ಲಿನ "ಹಣಜಿ" ಎಂಬ ವರ್ಗವನ್ನು ಈ ಬೆಂಕಿಯೊಳಗೆ ಎಸೆಯಲಾಗುವುದು. (ಹಲವು ಜೀವಿಗಳು ದೇವಕೋಪ ದಿನದ ಸಂಕಷ್ಟಗಳಲ್ಲಿ ನಶಿಸಿಹೋದರೂ) ಇದು ಎಲ್ಲಾ ಜೀವಿಗಳನ್ನು ಸಂಪೂರ್ಣವಾಗಿ ನಾಶಮಾಡುವುದಿಲ್ಲ. ಆದರೆ ಅರಾಜಕತೆಯೆಂಬ ಬೆಂಕಿಯು ಭೂಲೋಕ ಸರ್ಕಾರಗಳ

ಹಾಗೂ ಸಭಾಡಳಿತಾಧಿಕಾರಗಳ ವ್ಯವಸ್ಥೆಯನ್ನು ಸಂಪೂರ್ಣವಾಗಿ ದಹಿಸಿಬಿಡುವುದು. ಈ ಕಾಲದ (ಸಾಮಾಜಿಕ) ವ್ಯವಸ್ಥೆಗಳನ್ನು ಸಂಪೂರ್ಣ ನಾಶಮಾಡಲಿರುವ ಆ ಬೆಂಕಿಯನ್ನು ನಂದಿಸಲು ಅಥವಾ ಅದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಈಗಿನ ಕಾಲದಲ್ಲಿ ಕೂಳೆಯಂತಿರುವ ಮಿಥ್ಯೆ ಮತ್ತು ಮೋಸಗಳನ್ನು ದಹಿಸಿದ ನಂತರ ಆ ಬೆಂಕಿಯು ದೇವರು ಸಂಕಲ್ಪಿಸಿ ಏರ್ಪಡಿಸಿದ ದಿವ್ಯಾಶೀರ್ವಾದಗಳು ಬರಲಿರುವ ತನ್ನ ರಾಜ್ಯದಲ್ಲಿ ಉಂಟಾಗಲು ದಾರಿಯನ್ನು ಸಿದ್ಧಮಾಡಿಕೊಡುವುದೆಂಬುದಕ್ಕೆ ದೇವರಿಗೆ ಸ್ತೋತ್ರ! ಆ "ಬೆಂಕಿ" ಮತ್ತು ಅದನ್ನು ಹಿಂಬಾಲಿಸಲಿರುವ ಆಶೀರ್ವಾದಗಳನ್ನು ಚೆಫನ್ಯ 3:8,9 ರಲ್ಲಿ ವಿಶೇಷವಾಗಿ ಉಲ್ಲೇಖಿಸಲಾಗಿದೆ.

# ಯೆಸುವಿನ ಸೇವಾಕಾರ್ಯಗಳ ಆರಂಭ

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ. ಶ. 29 ಹಿಮಕಾಲ | ಯೋರ್ದನ್ ನದಿ | ಯೇಸುವಿನ ಸ್ನಾನದೀಕ್ಷೆ ಮತ್ತು ಅಭಿಷೇಕ; ವಂಶಕ್ರಮದಿಂದ ದಾವೀದನ ಸಂತಾನದಲ್ಲಿ ಹುಟ್ಟಿದವನು ಆದರೆ ದೇವಕುಮಾರನೆಂದು ನಿರ್ಣಯಿಸಲ್ಪಟ್ಟವನು | 3:13–17 | 1:9–11 | 3:21–38 | 1:32–34 |
| | ಯೂದಾಯದ ಅರಣ್ಯಪ್ರದೇಶ | ಯೇಸುವಿನ ಉಪವಾಸ ಮತ್ತು ಆತನಿಗಾದ ಶೋಧನೆ | 4:1–11 | 1:12–13 | 4:1–13 | –– |
| | ಯೋರ್ದನ್ ಹೊಳೆಯ ಆಚೆಯಿರುವ ಬೇಥಾನ್ಯ | ಯೇಸುವಿನ ವಿಷಯವಾಗಿ ಸ್ನಾನಿಕನಾದ ಯೋಹಾನನು ಕೊಟ್ಟ ಸಾಕ್ಷಿ | –– | –– | –– | 1:15, 29–34 |
| | ಯೋರ್ದನ್ ಕಣಿವೆ ಮೇಲಿನ ಪ್ರದೇಶ | ಯೇಸುವಿನ ಪ್ರಥಮ ಶಿಷ್ಯರು | –– | –– | –– | 1:35–51 |
| | ಗಲಿಲಾಯದ ಕಾನಾ ಊರು | ಯೆಸುವಿನ ಮೊದಲನೇ ಅದ್ಭುತಕಾರ್ಯ, ಕಪೆರ್ನೌಮಿಗೆ ಆತನ ಭೇಟಿ | –– | –– | –– | 2:1–12 |
| ಕ್ರಿ. ಶ. 30 ಪಸ್ಕ ಹಬ್ಬ | ಯೆರೂಸಲೇಮ್ | ಪಸ್ಕದ ಆಚರಣೆ, ಮಾರಾಟಗಾರರನ್ನು ದೇವಾಲಯದಿಂದ ಹೊರಡಿಸಿದ್ದು | –– | –– | –– | 2:13–25 |
| | ಯೆರೂಸಲೇಮ್ | ನಿಕೋದೇಮನೊಡನೆ ಯೇಸುವಿನ ಸಂಭಾಷಣೆ | –– | –– | –– | 3:1–21 |
| | ಯೂದಾಯ ಐನೋನ್ | ಯೇಸುವಿನ ಶಿಷ್ಯರಿಂದ ದೀಕ್ಷಾಸ್ನಾನ ಯೋಹಾನನು ಕಡಿಮೆಯಾಗುವುದು | –– | –– | –– | 3:22–36 |
| | ತಿಬೇರಿಯ | ಯೋಹಾನನು ಸೆರೆಯಾದುದು; ಯೇಸುವು ಗಲಿಲಾಯಕ್ಕೆ ಹೊರಟದ್ದು | 4:12 14:3–5 | 1:14 6:17–20 | 3:19, 20 4:14 | 4:1–3 |
| | ಸಮಾರ್ಯದ ಸುಖರ್ | ಗಲಿಲಾಯಕ್ಕೆ ಹೋಗುವ ಹಾದಿಯಲ್ಲಿ ಯೇಸು ಸಮಾರ್ಯದವರಿಗೆ ಉಪದೇಶ ಮಾಡಿದುದು | –– | –– | –– | 4:4–43 |




**ಮಾರುವವರನ್ನು ಕೊಳ್ಳುವವರನ್ನು ದೇವಾಲಯದಿಂದ ಹೊರಹಾಕುತ್ತಿರುವುದು**

"ನನ್ನ ಆಲಯವು ಪ್ರಾರ್ಥನಾ ಆಲಯವಾಗಿರುವುದು ಎಂದು ಬರೆದದೆಯಲ್ಲಾ;
ಆದರೆ ನೀವು ಅದನ್ನು ಕಳ್ಳರ ಗವಿ ಮಾಡಿದ್ದೀರಿ" (ಲೂಕ 19:46)

## ಮತ್ತಾಯ 3:13–17

ಆ ಕಾಲದಲ್ಲಿ ಯೇಸು ಯೋಹಾನನಿಂದ ಸ್ನಾನ ಮಾಡಿಸಿಕೊಳ್ಳಬೇಕೆಂದು ಗಲಿಲಾಯದಿಂದ ಯೋರ್ದನ್ ಹೊಳೆಗೆ ಬಂದನು. ಆಗ ಯೋಹಾನನು – ನಾನು ನಿನ್ನಿಂದ ಸ್ನಾನ ಮಾಡಿಸಿಕೊಳ್ಳತಕ್ಕವನಾಗಿರುವಲ್ಲಿ ನೀನು ನನ್ನ ಬಳಿಗೆ ಬರುವುದೇನು ಎಂದು ಹೇಳಿ ಆತನನ್ನು ತಡೆಯುತ್ತಾ ಇದ್ದನು. ಆದರೆ ಯೇಸು ಅವನಿಗೆ – ಸದ್ಯಕ್ಕೆ ಒಪ್ಪಿಕೋ, ಹೀಗೆ ನಾವು ಎಲ್ಲಾ ಧರ್ಮವನ್ನು ನೆರವೇರಿಸತಕ್ಕದ್ದಾಗಿದೆ ಎಂದು ಹೇಳಿದಾಗ ಅವನು ಒಪ್ಪಿಕೊಂಡನು. ಯೇಸು ಸ್ನಾನ ಮಾಡಿಸಿಕೊಂಡ ಕೂಡಲೇ ನೀರಿನಿಂದ ಮೇಲಕ್ಕೆ ಬರಲು ಇಗೋ, ಅತನಿಗೆ ಆಕಾಶವು ತೆರೆಯಿತು. ಮತ್ತು ದೇವರ ಆತ್ಮವು ಪಾರಿವಾಳದ ಹಾಗೆ ಇಳಿದು ತನ್ನ ಮೇಲೆ ಬರುವುದನ್ನು ಕಂಡನು. ಆಗ – ಈತನು ಪ್ರಿಯನಾಗಿರುವ ನನ್ನ ಮಗನು. ಈತನನ್ನು ನಾನು ಮೆಚ್ಚಿದ್ದೇನೆ ಎಂದು ಆಕಾಶವಾಣಿ ಆಯಿತು.

## ಮಾರ್ಕ 1:9–11

ಆ ದಿನಗಳಲ್ಲಿ ಯೇಸು ಗಲಿಲಾಯ ಸೀಮೆಗೆ ಸೇರಿದ ನಜರೇತೆಂಬ ಊರಿನಿಂದ ಬಂದು ಯೋರ್ದನ್ ಹೊಳೆಯಲ್ಲಿ ಯೋಹಾನನಿಂದ ಸ್ನಾನಮಾಡಿಸಿಕೊಂಡನು. ಮಾಡಿಸಿಕೊಂಡ ಕೂಡಲೇ ಆತನು ನೀರಿನೊಳಗಿಂದ ಮೇಲಕ್ಕೆ ಬರಲು ಆಕಾಶವೊಡೆದು ದೇವರಾತ್ಮವು ಪಾರಿವಾಳದ ಹಾಗೆ ತನ್ನ ಮೇಲೆ ಇಳಿಯುವುದನ್ನು ಕಂಡನು. ಅಗ – ನೀನು ಪ್ರಿಯನಾಗಿರುವ ನನ್ನ ಮಗನು. ನಿನ್ನನ್ನು ನಾನು ಮೆಚ್ಚಿದ್ದೇನೆ ಎಂದು ಆಕಾಶವಾಣಿಯಾಯಿತು.

## ಲೂಕ 3:21–38

ಜನರೆಲ್ಲಾ ದೀಕ್ಷಾಸ್ನಾನ ಮಾಡಿಸಿಕೊಂಡಾಗ ಯೇಸು ಸಹ ಸ್ನಾನ ಮಾಡಿಸಿಕೊಂಡನು ಪ್ರಾರ್ಥನೆ ಮಾಡುತ್ತಿರುವಲ್ಲಿ ಆಕಾಶವು ತೆರೆಯಿತು. ಮತ್ತು ಪವಿತ್ರಾತ್ಮನು ದೇಹಾಕಾರವಾಗಿ ಪಾರಿವಾಳದ ಹಾಗೆ ಆತನ ಮೇಲೆ ಇಳಿದನು. ಆಗ – ನೀನು ಪ್ರಿಯನಾಗಿರುವ ನನ್ನ ಮಗನು, ನಿನ್ನನ್ನು ನಾನು ಮೆಚ್ಚಿದ್ದೇನೆ ಎಂದು ಆಕಾಶವಾಣಿ ಆಯಿತು. ಯೇಸು ಉಪದೇಶ ಮಾಡುವುದಕ್ಕೆ ಪ್ರಾರಂಭಿಸಿದಾಗ ಹೆಚ್ಚುಕಡಿಮೆ ಮೂವತ್ತು ವರುಷದವನಾಗಿದ್ದನು. ಆತನು ಜನರ ಎಣಿಕೆಯಲ್ಲಿ ಯೋಸೇಫನ ಮಗನು. ಯೋಸೇಫನು ಹೇಲಿಯ ಮಗನು, ಇವನು ಮತ್ಥಾತನ ಮಗನು, ಇವನು ಲೇವಿಯ ಮಗನು, ಇವನು ಮೆಲ್ಖಿಯ ಮಗನು, ಇವನು ಎನ್ನಾಯನ ಮಗನು, ಇವನು ಯೋಸೇಫನ ಮಗನು, ಇವನು ಮತ್ತತೀಯನ ಮಗನು, ಇವನು ಆಮೋಸನ ಮಗನು, ಇವನು ನಹೂಮನ ಮಗನು, ಇವನು ಎಸ್ಲಿಯ ಮಗನು, ಇವನು ನಗ್ಗಾಯನ ಮಗನು, ಇವನು ಮಹಾಥನ ಮಗನು, ಇವನು ಮತ್ತಥೀಯನ ಮಗನು, ಇವನು ಶಿಮೀಯ ಮಗನು, ಇವನು ಯೋಸೇಖನ ಮಗನು, ಇವನು ಯೂದನ ಮಗನು, ಇವನು ಯೋಹಾನನ ಮಗನು, ಇವನು ರೇಸನ ಮಗನು, ಇವನು ಜೆರುಬಾಬೇಲನ ಮಗನು, ಇವನು ಸಲಥಿಯೇಲನ ಮಗನು, ಇವನು ನೇರಿಯ ಮಗನು, ಇವನು ಮೆಲ್ಖಿಯ ಮಗನು, ಇವನು ಅದ್ದಿಯ ಮಗನು, ಇವನು ಕೋಸಾಮನ ಮಗನು, ಇವನು ಎಲ್ಮದಾಮನ ಮಗನು, ಇವನು ಏರನ ಮಗನು, ಇವನು ಯೆಹೋಶುವನ ಮಗನು, ಇವನು ಎಲಿಯೇಜರನ ಮಗನು, ಇವನು ಯೋರೈಮನ ಮಗನು, ಇವನು ಮತ್ಥಾತನ ಮಗನು, ಇವನು ಲೇವಿಯ ಮಗನು, ಇವನು ಸಿಮಿಯೋನನ ಮಗನು, ಇವನು ಯೂದನ ಮಗನು, ಇವನು ಯೋಸೇಫನ ಮಗನು, ಇವನು ಯೋನಾಮನ ಮಗನು, ಇವನು ಎಲಿಯೇಕೀಮನ ಮಗನು. ಇವನು ಇವನು ಮೆಲೆಯಾನ ಮಗನು, ಇವನು ಮೆನ್ನನ ಮಗನು, ಇವನು ಮತ್ತಾಥನ ಮಗನು, ಇವನು ನಾತಾನನ ಮಗನು, ಇವನು ದಾವೀದನ ಮಗನು, ಇವನು ಇಷಯನ ಮಗನು, ಇವನು ಓಬೇದನ ಮಗನು, ಇವನು ಬೋವಜನ ಮಗನು, ಇವನು ಸಲ್ಮೋನನ ಮಗನು, ಇವನು ನಹಸ್ಸೋನನ ಮಗನು, ಇವನು ಅಮ್ಮೀನಾದಾಬನ ಮಗನು, ಇವನು ಅರ್ನೈಯನ ಮಗನು, ಇವನು ಎಸ್ರೋನನ ಮಗನು, ಇವನು ಪೆರೆಚನ ಮಗನು ಇವನು ಯೂದನ ಮಗನು, ಇವನು ಯಾಕೋಬನ ಮಗನು, ಇವನು ಇಸಾಕನ ಮಗನು, ಇವನು ಅಬ್ರಹಾಮನ ಮಗನು, ಇವನು ತೇರನ ಮಗನು, ಇವನು ನಹೋರನ ಮಗನು, ಇವನು ಸೆರೂಗನ ಮಗನು, ಇವನು ರೆಗೂವನ ಮಗನು, ಇವನು ಪೆಲೆಗನ ಮಗನು, ಇವನು ಹೇಬೆರನ ಮಗನು, ಇವನು ಸಾಲನ ಮಗನು, ಇವನು ಕಯಿನಾನನ ಮಗನು, ಇವನು ಅರ್ಪಕ್ಷಾದನ ಮಗನು, ಇವನು ಶೇಮನ ಮಗನು, ಇವನು ನೋಹನ ಮಗನು, ಇವನು ಲಾಮೆಕನ ಮಗನು, ಇವನು ಮತೂಷಲನ ಮಗನು ಇವನು ಹನೋಕನ ಮಗನು, ಇವನು ಯೆರೆದನ ಮಗನು, ಇವನು ಮಹಲೇಲನ ಮಗನು, ಇವನು ಕಯಿನಾನನ ಮಗನು, ಇವನು ಎನೋಷನ ಮಗನು, ಇವನು ಸೇಥನ ಮಗನು ಇವನು ಆದಾಮನ ಮಗನು, ಇವನು ದೇವರ ಮಗನು.

## ಯೋಹಾನ 1:32–34

ಇದಲ್ಲದೆ ಯೋಹಾನನು ಸಾಕ್ಷಿಕೊಟ್ಟು ಹೇಳಿದ್ದೇನೆಂದರೆ – ದೇವರಾತ್ಮವು ಪಾರಿವಾಳದಂತೆ ಆಕಾಶದಿಂದ ಇಳಿಯುವುದನ್ನು ನೋಡಿದೆನು. ಅದು ಆತನ ಮೇಲೆ ನೆಲೆಗೊಂಡಿತು. ನನಗೂ ಅತನ ಗುರುತಿರಲಿಲ್ಲ. ಅದರೆ ನೀರಿನ ಸ್ನಾನವನ್ನು ಮಾಡಿಸುವುದಕ್ಕೆ ನನ್ನನ್ನು ಕಳುಹಿಸಿದಾತನು – ಯಾವನ ಮೇಲೆ ಆತ್ಮವು ಇಳಿದುಬಂದು ಇರುವುದನ್ನು ನೀನು ನೋಡುವಿಯೋ ಆತನೇ ಪವಿತ್ರಾತ್ಮದ ಸ್ನಾನವನ್ನು ಕೊಡುವವನು ಎಂದು ತಾನೇ ನನಗೆ ಹೇಳಿದನು. ನಾನು ಅದನ್ನು ನೋಡಿ ಈತನೇ ದೇವಕುಮಾರನೆಂದು ಸಾಕ್ಷಿ ಕೊಟ್ಟಿದ್ದೇನೆ ಅಂದನು.

# (ಆತನ) ಪ್ರತಿಷ್ಠೆ ಅದನ್ನು ಅನುಸರಿಸಿ (ಆತನಿಗೆ) ಬಂದ ಶೋಧನೆ

## ಮತ್ತಾಯ 3:13 – 4:11

"ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ"

ಯೋಹಾನನು ಸುಮಾರು ಆರು ತಿಂಗಳು ಉಪದೇಶ ಮಾಡುತ್ತಾ ಸ್ನಾನದೀಕ್ಷೆ ಮಾಡಿಸುತ್ತಾ ಇದ್ದ ನಂತರ ಕ್ರಿ.ಶ. 29 ಸೆಪ್ಟಂಬರ್ ಸುಮಾರಿನಲ್ಲಿ ಗಲಿಲಾಯ ಸೀಮೆಯಲ್ಲಿ ವಾಸಿಸುತ್ತಿದ್ದ ಯೇಸುವು ತನ್ನ ಮೂವತ್ತನೇ ಜನನದ ದಿನಕ್ಕೆ ಸಮೀಪಿಸುತ್ತಿದ್ದು ತಾನು ಸ್ನಾನದೀಕ್ಷೆ ಹೊಂದಿ ಸಾಧ್ಯವಾದಷ್ಟು ಶೀಘ್ರವಾದ ಸಂದರ್ಭದಿಂದ ತನ್ನ ಜನತೆಯ ಸೇವೆಯನ್ನು ಪ್ರಾರಂಭಿಸುವ ಸಲುವಾಗಿ ಯೋಹಾನನ್ನು ಹುಡುಕಿಕೊಂಡು ಬಂದನು. ಆತನು ತನ್ನ ಜನರಿಗೆ ಯಾಜಕನಾಗಿಯೂ ಅಲ್ಲದೆ ಅರಸನಾಗಿಯೂ ಆಗಬೇಕಿತ್ತು. "... ಸದಾಕಾಲವೂ ಮೆಲ್ಕಿಜೆದೇಕನ ತರಹದ ಮಹಾಯಾಜಕನಾಗಿದ್ದು ..." ಮತ್ತು ಧರ್ಮಶಾಸ್ತ್ರ ನಿಯಮದ ಪ್ರಕಾರ ಯಾಜಕನಿಗೆ (ಸೇವೆ ಆರಂಭಿಸಲು) ಕನಿಷ್ಠ ಮೂವತ್ತು ವರುಷಗಳು ತುಂಬಬೇಕಿತ್ತು. ಆದಕಾರಣ ಯೇಸುವಿನ ಸೇವೆಯು ಆರಂಭವಾಗಲು ಈ ವಯಸ್ಸನ್ನು ತಲುಪುವವರೆಗೂ ಅಡ್ಡಿಯಿದ್ದು ಈ ಸಮಯದ ನಂತರ ಸಾಧ್ಯವಾದಷ್ಟೂ ಶೀಘ್ರವಾದ ಸಂದರ್ಭದಲ್ಲಿ ಅರಂಭಮಾಡುವುದಕ್ಕೆ ಅತನಿಗೆ ಸ್ವಾತಂತ್ರ್ಯವಿತ್ತು.

ಯೆಸುವಿಗೆ ವಂಶಕ್ರಮದಲ್ಲಿ ತನ್ನ ಎರಡನೇ ದಾಯಾದನಾದ ಸ್ನಾನಿಕನಾದ ಯೋಹಾನನ ಪರಿಚಯವಿದ್ದು ಆತನ ನೀತಿಯುಳ್ಳ ಜೀವಿತ ಹಾಗೂ ನಿರ್ದೋಷವುಳ್ಳ ನಡೆತೆಯ ವಿಷಯವಾಗಿ ಸ್ಪಷ್ಟವಾಗಿ ಅತನಿಗೆ ತಿಳಿದಿತ್ತು. ಯೋಹಾನನು ಧರ್ಮಬ್ರಷ್ಟರು ಮತ್ತು ಪಾಪಿಗಳ ಗುಂಪಿಗೆ ಸೇರಿದವರನ್ನು ಹುಡುಕುವವನಾಗಿದ್ದು ಯೇಸುವು ಸ್ನಾನದೀಕ್ಷೆಗೆ ಕೇಳಿದ್ದಕ್ಕಾಗಿ ಅತನು ಆಶ್ಚರ್ಯಪಡುತ್ತಿದ್ದನು. ಮೂಲಾರ್ಥದಲ್ಲಿ ಈ ವಾಕ್ಯವು ಹೇಳುವುದು "ಯೋಹಾನನು ನಾನು ನಿನ್ನಿಂದ ಸ್ನಾನ ಮಾಡಿಸಿಕೊಳ್ಳುವವನಾಗಿರುವಲ್ಲಿ ನೀನು ನನ್ನ ಬಳಿಗೆ ಬರುವುದೇನು? ಎಂದು ಹೇಳಿ ಅತನನ್ನು ತಡೆಯುತ್ತಾ ಇದ್ದನು". ತೊಳೆದುಕೊಳ್ಳಲು ಯೇಸುವಿನಲ್ಲಿ ಯಾವ ಪಾಪವೂ ಇಲ್ಲವೆಂಬ ಅರಿವು ಯೋಹಾನನಿಗಿದ್ದು ಆತನಿಗೆ ಈ ಸಂಸ್ಕಾರ ನೀಡುವುದು ಯುಕ್ತವಲ್ಲವೆಂದು ಆತನಿಗೆ ತೋರಿಬಂತು. ಯಾಕೆಂದರೆ ಯೋಹಾನನ ಸ್ನಾನದೀಕ್ಷೆಯು ದೇವರ ಕಡೆಗೆ ತಿರುಗಿಕೊಂಡು ಮಾನಸಾಂತರ ಹೊಂದುವ ಉದ್ದೇಶಕ್ಕಾಗಿದ್ದು ಕ್ರೈಸ್ತರ ಸ್ನಾನದೀಕ್ಷೆಯ ರೀತಿಯದ್ದಲ್ಲವೆಂಬುದು ನೆನಪಿನಲ್ಲಿಡಬೇಕು. ಅಪೋಸ್ತಲರ ಕೃತ್ಯಗಳು 19:4, 5 ನೋಡಿ.

ಯೇಸುವು ತಾನು ಪರಿಚಯಿಸುತ್ತಿದ್ದುದು ಒಂದು ಹೊಸ ರೀತಿಯ ಸ್ನಾನದೀಕ್ಷೆಯೆಂದು ಯೋಹಾನನಿಗೆ ವಿವರಿಸುವ ಯತ್ನಮಾಡಲಿಲ್ಲ. ಅದು ಪಾಪಿಗಳಿಗೋಸ್ಕರವಾಗಿರದೆ ಪರಿಶುದ್ಧರಿಗೆ ಮಾತ್ರ ಪ್ರತ್ಯೇಕವಾಗಿದ್ದು, ಆ ಪದದ ಯಾವ ಅರ್ಥದಲ್ಲೂ ಸಾಂಕೇತಿಕವಾಗಿ ಪಾಪವನ್ನು ತೊಳಕೊಳ್ಳುವುದನ್ನು ಸೂಚಿಸದೆ ಇತರರ ಪಾಪಗಳಿಗಾಗಿ ಮರಣದ ಮೂಲಕವಾಗಿ ಯಜ್ಞಾರ್ಪಣೆ ಮಾಡಿಕೊಳ್ಳುವುದನ್ನು ಸಾಂಕೇತಿಕವಾಗಿ ಸೂಚಿಸುವುದಾಗಿತ್ತು. ಕ್ರಿಸ್ತೀಯ ಸ್ನಾನದೀಕ್ಷೆಯ ವಿಷಯವಾಗಿ ವಿವರಿಸಿ ಹೇಳುವುದಕ್ಕೆ ಅದು ಇನ್ನೂ ಸೂಕ್ತ ಸಮಯವಾಗಿರಲಿಲ್ಲ. ಮತ್ತು ಹಾಗೇನಾದರೂ ವಿವರಿಸಿದ್ದಲ್ಲಿ ಅದು ಯೋಹಾನನಲ್ಲಿಯೂ ಮತ್ತು ಅದನ್ನು ಕೇಳಿದವರಲ್ಲಿಯೂ ಕೇವಲ ಗೊಂದಲ ಉಂಟುಮಾಡುತ್ತಿದ್ದಲ್ಲದೆ ಯಾವ ಪ್ರಯೋಜನವೂ ಅದರಿಂದ ಆಗುತ್ತಿರಲಿಲ್ಲ. ಯಾಕೆಂದರೆ, ಆ ಹೊಸ ಸ್ನಾನದೀಕ್ಷೆಯು (ಸುವಾರ್ತಾ ಯುಗವೆಂಬ) ಒಂದು ಹೊಸ ವ್ಯವಸ್ಥೆಗೆ ಸಂಬಂಧಿಸಿದ್ದು ಕರ್ತನಾದ ಯೆಸುವಿನ ವಿಷಯವನ್ನು ಹೊರತುಪಡಿಸಿದ್ದಲ್ಲಿ ಪಂಚಾಶತ್ತಮ ದಿನದವರೆಗೆ ಅದು ಪ್ರಾರಂಭವಾಗಿರಲಿಲ್ಲ. ಯಾವ ವಿಧದಲ್ಲಿಯಾದರೂ ಆ ಸಂಕೇತದಲ್ಲಿರುವ ಪ್ರಭಾವ ಹಾಗೂ ಅದರ ಅರ್ಥವು ಕೇವಲ ಅದನ್ನು ಹೊಂದಿದವರಿಗೆ ಮಾತ್ರವೇ ಗ್ರಹಿಕೆಗೆ ಬರುವಂತದ್ದು. [ಶಿಷ್ಯರೆಂದು (ಡಿಸೈಪಲ್ಸ್) ಇನ್ನೊಂದು ರೀತಿಯಲ್ಲಿ ಹೆಸರಿಸಿಕೊಳ್ಳುವ ಪಂಗಡದ] ಕ್ರೈಸ್ತರಲ್ಲಿ ಪ್ರಭಾವಿಗಳಾದ ಒಂದು ದೊಡ್ಡ ಗುಂಪು ಈ ದಿನದಲ್ಲೂ ಸಹ ಪಾಪ ಪರಿಹಾರವನ್ನು ಸೂಚಿಸುವ ಯೋಹಾನನ ಸ್ನಾನದೀಕ್ಷೆಯನ್ನು ಅನುಸರಿಸುತ್ತಿರುವ ಕಾರಣಕ್ಕಾಗಿ ಈ ಅಂಶವನ್ನು ನಾವು ವಿಶೇಷ ಗಮನಕ್ಕೆ ತರುವುದು ಬಹುಶಃ ಒಳ್ಳೇಯದು. ನಮ್ಮ ಕರ್ತನಾದ ಯೇಸುವಿನಿಂದ ಮೊದಲು ಸಾಂಕೇತಿಕವಾಗಿ ನೆರವೇರಿಸಲ್ಪಟ್ಟ ಕ್ರಿಸ್ತೀಯ ಸ್ನಾನದೀಕ್ಷೆಯೆಂಬ ಹೊಸ ದೀಕ್ಷಾಕ್ರಮದ ಪ್ರಾಮುಖ್ಯತೆಯನ್ನು ಗ್ರಹಿಸುವಲ್ಲಿ ಅವರು ಪೂರ್ಣವಾಗಿ ವಿಫಲವಾಗಿರುವರು.

"ಶಿಷ್ಯರು" (ಡಿಸೈಪಲ್ಸ್) ಎಂಬ ನಮ್ಮ ಮಿತ್ರರು – ನಮ್ಮ ಕರ್ತನಾದ ಯೇಸುವು ಪರಿಶುದ್ಧನೂ ನಿರ್ದೋಷಿಯೂ ನಿಷ್ಕಳಂಕನೂ ಪಾಪಿಗಳಲ್ಲಿ ಸೇರದವನೂ ಆಗಿರುವುದರಿಂದ ಆತನಲ್ಲಿ ತೊಳೆದುಕೊಳ್ಳಲು ಯಾವ ಪಾಪವೂ ಇರಲಿಲ್ಲವೆನ್ನುವ ಸತ್ಯವೇದದ ಹೇಳಿಕೆಯ ವಿಷಯದಲ್ಲಿ ವಿವಾದ ಮಾಡುವುದಿಲ್ಲ. ಇದರ ಪರಿಣಾಮವಾಗಿ ಮಾನಸಾಂತರಕ್ಕಾಗಿರುವ ಯೋಹಾನನ ಸ್ನಾನದೀಕ್ಷೆಯನ್ನು ತೆಗೆದುಕೊಳ್ಳುವುದರಲ್ಲಿ ಆತನಿಗೆ ಯಾವ ಅರ್ಥವೂ ಇರುತ್ತಿದ್ದಿಲ್ಲ. ಹಾಗಾಗಿದ್ದಲ್ಲಿ ಇದು ಅವರ ಹೇಳಿಕೆಗೆ ಪ್ರತಿಕೂಲವಾಗಿಯೂ ನಂಬಿಕೆಗೆ ವಿರುದ್ಧವಾಗಿಯೂ ಇರುತ್ತಿತ್ತು. ಏಕೆಂದರೆ "ಯಾವುದಕ್ಕೆ ನಂಬಿಕೆಯ ಆಧಾರವಿಲ್ಲವೋ ಅದು ಪಾಪ" ಆದ್ದರಿಂದ ಯೋಹಾನನು ಗ್ರಹಿಸಿರುವಂತೆ ಕೇವಲ ಪಾಪ ಪರಿಹಾರಕ್ಕಾಗಿರುವ ಸ್ನಾನದೀಕ್ಷೆಯನ್ನು ತೆಗೆದುಕೊಳ್ಳೂವುದು ನಮ್ಮ ಕರ್ತನಾದ ಯೇಸುವಿನ ವಿಷಯದಲ್ಲಿ ತಪ್ಪೆನಿಸಿಕೊಳ್ಳುತ್ತಿತ್ತು. ಇದರಿಂದ ನಾವು ಖಚಿತ ಮಾಡಿಕೊಳ್ಳಬಹುದೆಂದರೆ ಆತನಲ್ಲಿ (ಯೇಸುವಿನಲ್ಲಿ) ಪಾಪವಿಲ್ಲದ ಕಾರಣ ತಾನು ಹೊಂದಿದ ಸ್ನಾನದೀಕ್ಷಾ ಕಾರ್ಯವು ಹೊಸದಾದ ಒಂದು ದೀಕ್ಷಾಕ್ರಮದಲ್ಲಿ ಮೊದಲನೆಯದಾಗಿದ್ದು ಪಂಚಾಶತ್ತಮ ದಿನದ ನಂತರದಲ್ಲಿ ಆತನ ಶಿಷ್ಯರಿಂದ ಇದರ ಅನುಸರಣೆ ಪ್ರಾರಂಭವಾಯಿತು. (ಅಪೋಸ್ತಲರ ಕೃತ್ಯಗಳು 19:4,5) ನಾವು ಇಲ್ಲಿ ಗಮನಿಸುವುದು, ಕ್ರಿಸ್ತೀಯ

ಸ್ನಾನದೀಕ್ಷೆಯು ಕೇವಲ ನಂಬಿದವರಿಗಾಗಿರುವುದೇ ಹೊರತು ನಂಬಿಕೆಯಿಲ್ಲದವರಿಗಲ್ಲ. ಕ್ರಿಸ್ತನ ಮೇಲಿನ ನಂಬಿಕೆಗೆ ನೀತಿ ನಿರ್ಣಯದ ಸಾಮರ್ಥ್ಯವಿದ್ದು ನಾವು ಆತನ ರಕ್ತದ ಮೇಲಿನ ನಂಬಿಕೆಯ ಮೂಲಕ ನಾವು ನೀತಿವಂತರೆಂಬ ನಿರ್ಣಯವನ್ನು ಹೊಂದುವೆವು. ನೀತಿವಂತರೆಂದು ನಿರ್ಣಯಿಸಲ್ಪಟ್ಟ ನಂತರವೇ ನಾವು ಸ್ನಾನದೀಕ್ಷೆಗೆ ಸಿದ್ಧರಾಗುವುದು. ಅದಕ್ಕೆ ಮುಂಚಿತವಾಗಿ ಅಲ್ಲ. (ನಮ್ಮ ಮೇಲೆ ದೋಷಾರೋಪಣೆ ಹೊರಿಸುವ) ಎಲ್ಲಾ ವಿಷಯಗಳಿಂದಲೂ "ನಾವು ಉಚಿತವಾಗಿ ವಿಮೋಚಿಸಲ್ಪಟ್ಟು ನೀತಿವಂತರೆಂದು ನಿರ್ಣಯಿಸಲ್ಪಟ್ಟ" ನಂತರದಲ್ಲಿ ತೊಳೆದು ಕೊಳ್ಳಲು ನಮ್ಮಲ್ಲಿ ಪಾಪಗಳು ಇರುವುದಿಲ್ಲ. ತಮ್ಮ ಕರ್ತನಿಗೆ ಸ್ನಾನದೀಕ್ಷೆಯು ಸಂಕೇತವು ಯಾವ ವಿಷಯಗಳ ಸೂಚನೆಗಾಗಿತ್ತೋ ಕ್ರಿಸ್ತನನ್ನು ನಂಬಿದವರಿಗೂ ಸಹ ಇದು ಅದೇ ವಿಷಯಗಳನ್ನು ಸೂಚಿಸುತ್ತದೆ. ಅಂದರೆ ಅದು ತನ್ನ ಚಿತ್ತ, ತನ್ನ ಜೀವಿತ, ಮತ್ತು ತನ್ನ ಸರ್ವಸ್ವವನ್ನು ತಂದೆ ದೇವರ ಚಿತ್ತಕ್ಕೆ ಪೂರ್ಣವಾಗಿ ಅಧೀನಮಾಡುವ ಪ್ರತಿಷ್ಠೆ. ತನ್ನ ಚಿತ್ತವನ್ನು ಹೀಗೆ ಅಧೀನ ಮಾಡಿಕೊಳ್ಳುವುದರ ಮೂಲಕ ಲೋಕಕ್ಕೆ ತನ್ನನ್ನು ಸತ್ತವನಾಗ ಮಾಡಿಕೊಳ್ಳುವನು. ಹೀಗೆ ಅವನು ಭೂಸಂಬಂಧವಾದ ನಿರೀಕ್ಷೆ ಧ್ಯೇಯೋದ್ದೇಶಗಳಿಗೆ ಸತ್ತಂತವನಾಗಿ ದೇವರಿಗಾಗಿ ನೂತನ ರೀತಿಯಲ್ಲಿ ನಡೆಯಲು ಜೀವಿಸುವವನಾಗುವನು. ನಂತರದಲ್ಲಿ ಕ್ರಮೇಣ ಮೊದಲನೆಯ ಪುನರುತ್ಥಾನದಲ್ಲಿ" ತನ್ನ ವಿಮೋಚಕನೂ ಕರ್ತನೂ ಆದ ಯೇಸುವಿನೊಂದಿಗೆ ಪಾಲುಗಾರನಾಗಿ ನಿಜವಾದ ಹೊಸ ಜೀವವನ್ನು ಪಡೆಯುವನು. ಇವೆಲ್ಲವುಗಳೂ ಯುಕ್ತವಾದ ರೀತಿಯಲ್ಲಿ ಕ್ರಿಸ್ತೀಯ ಸ್ನಾನದೀಕ್ಷೆಯಲ್ಲಿ ಸಾಂಕೇತಿಕವಾಗಿ ಸೂಚನೆಯಾಗಿವೆ. ನಮ್ಮ ಕರ್ತನು ಪಾಪವಿಲ್ಲದವನಾಗಿರಲು ಆತನು ಬೇರೆಯವರಿಂದ ನೀತಿನಿರ್ಣಯ ಪಡೆಯಬೇಕಾಗಿರಲಿಲ್ಲ. ಮನುಷ್ಯಾವಸ್ಥೆಯನ್ನು ತಲುಪಿದಾಗ ತನ್ನನ್ನು ಸಂಪೂರ್ಣವಾಗಿ ಯಾವ ಶರತ್ತುಗಳಿಲ್ಲದೆಯೇ, ತನ್ನ ತಂದೆಯ ಚಿತ್ತಕ್ಕೆ ಒಪ್ಪಿಸಿಕೊಟ್ಟನು. ಆತನು ಪ್ರತಿಷ್ಠೆಯ ಸಂದರ್ಭದಲ್ಲಿ ಸರ್ವಲೋಕದ ಪಾಪಗಳಿಗಾಗಿ ತನ್ನ ಭೂಲೋಕದ ಜೀವಿತವನ್ನು ಒಂದು ಯಜ್ಞವಾಗಿ ಒಪ್ಪಿಸಿಕೊಟ್ಟನು. ನೀರಿನ ಸ್ನಾನದಲ್ಲಿ ಇದು ಸಾಂಕೇತಿಕವಾಗಿ ನೆರವೇರಿತು. ಉಳಿದ ತನ್ನ ಮೂರುವರೆ ವರುಷದ ಜೀವಿತವು ಯಜ್ಞವೇದಿಯ ಮೇಲೆ ಬಲಿಯಾಗಿಡ ಲ್ಪಟ್ಟದ್ದಾಗಿದ್ದು ತನ್ನ ಕಡೆಯ ಉಸಿರಿನಲ್ಲಿ "ತೀರಿತೆಂದು" ಹೇಳುವುದರ ಮೂಲಕ ಕೇವಲ ತನ್ನ ಆ ಯಜ್ಞಾರ್ಪಣೆಯು ಪೂರ್ಣಗೊಳ್ಳುವುದಕ್ಕೆ ಆತನು ಕಾಯುತ್ತಿದ್ದನು. ಇದರಂತೆಯೇ ತಮ್ಮನ್ನು ಯಜ್ಞಮಾಡಿಕೊಳ್ಳುವ ವಿಷಯದಲ್ಲಿ ತನಗೆ ಜೊತೆಗಾರರಾಗಿ ಕಡೆಯಲ್ಲಿ ರಾಜವಂಶದ ಯಾಜಕರಿಗೆ ಕೊಡಲ್ಪಡುವ ಆ ರಾಜ್ಯಕ್ಕೆ ತನ್ನೊಡನೆ ಸಹ–ಬಾಧ್ಯತೆ ಹೊಂದಲು ನಂಬಿಗಸ್ತರಾದ ತನ್ನ ಆಯಲ್ಪಟ್ಟ ಸಭೆಯನ್ನು ಆಹ್ವಾನಿಸಿರುವನು. ಆದುದರಿಂದ ಯೇಸುವಿನ ಸ್ನಾನದೀಕ್ಷೆಯು ಪಾಪಗಳಿಗೋಸ್ಕರ ವಾದ ತನ್ನ ಮರಣ ಬಲಿಯನ್ನು ಸೂಚಿಸುವ ಪ್ರಕಾರವೇ ಕ್ರೈಸ್ತರ ಸ್ನಾನದೀಕ್ಷೆಯು ಕರ್ತನೊಂದಿಗೆ ಆತನ ಯಜ್ಞದಲ್ಲಿ ಅವರು ಪಾಲುಗಾರರಾಗುವುದನ್ನು ಸೂಚಿಸುತ್ತದೆ. (ಅವರು ಮೊದಲು ನಂಬಿಕೆಯಿಂದ ಕ್ರಿಸ್ತನ ರಕ್ತವು ಹೊಂದಿರುವ ಅರ್ಹತೆಯ ಮೂಲಕ ಎಲ್ಲಾ ದೋಷಗಳಿಂದ ವಿಮೋಚಿಸಲ್ಪಟ್ಟು ಉಚಿತವಾಗಿ ನೀತಿ ನಿರ್ಣಯವನ್ನು ಹೊಂದಿದ ನಂತರ ಇದು ನೆರವೇರುವುದು) ನಮ್ಮ ಕರ್ತನ ವಿಷಯದಲ್ಲಿ ಸಾಂಕೇತಿಕವಾಗಿ ನೆರವೇರಿದ ದೀಕ್ಷಾಸ್ನಾನವು ಅತನ ಪ್ರತಿಷ್ಠೆಯನ್ನು ಶೀಘ್ರವಾಗಿ ಅನುಸರಿಸಿಕೊಂಡು ಬಂದದ್ದಾಗಿತ್ತು. ಮತ್ತು ಆತನ ಶಿಷ್ಯರ ವಿಷಯದಲ್ಲಿ ಅವರು ಸ್ನಾನದೀಕ್ಷೆ ಸಂಕೇತದ ಅರ್ಥವನ್ನು ತಿಳಿದ ಕೂಡಲೇ ಅದು ಅವರ ಪ್ರತಿಷ್ಠೆಯನ್ನು ಅನುಸರಿಸಿ ಬರಬೇಕು. ಶತಮಾನಗಳಿಂದಲೂ ಈ ಅಂಶವನ್ನು ಮೊಬ್ಬುಗೊಳಿಸಿ ಅಸ್ಪಷ್ಟವಾಗಿ ಕಾಣುವಂತೆ ಮಾಡಲಾಗಿದೆ.

ನಮ್ಮ ರಕ್ಷಕನ ಪ್ರತಿಷ್ಠೆ ಹಾಗೂ ಅದರ ಸಂಕೇತವಾದ ಸ್ನಾನದೀಕ್ಷೆ ನೆರವೇರಿದ ಕೂಡಲೇ ಈ ಮೂಲಕವಾದ ಯಜ್ಞಾರ್ಪಣೆಯು ಅಂಗೀಕಾರವಾದುದಕ್ಕೆ ಸಾಕ್ಷಿಯಾಗಿ ಪರಲೋಕವು ಆತನಿಗೆ ತೆರೆಯಲ್ಪಟ್ಟಿತು. ಇದು ಬಹುಶಃ ಆತನಿಗೆ ಪರಲೋಕದ ವಿಷಯವಾಗಿ ದರ್ಶನವಾಗಿ ಅದರಲ್ಲಿ ಮನುಷ್ಯನಾಗಿ ಬರುವುದಕ್ಕೆ ಮೊದಲಿದ್ದ ಆತನ ಪೂರ್ವಸ್ಥಿತಿ ಯನ್ನು ಮನುಷ್ಯನಾಗಿ ಬಂದ ಈ ಮಧ್ಯಕಾಲದಲ್ಲಿ ಪಡೆದ ಆತನ ಅನುಭವಗಳೊಂದಿಗೆ ಕೂಡಿಸಿ ತನ್ನ ತಂದೆಯೊಡನೆ ಆತನಿಗಿರುವ ಸಂಭಂದವನ್ನು ದೃಢಪಡಿಸಿರುವುದರ ಸೂಚನೆಯಾಗಿತ್ತು. ಮತ್ತು ಆಗ ಒಂದು ಆಕಾಶವಾಣಿಯಾಗಿ ಅದು – ಈತನು ದೇವರ ಪ್ರಿಯನಾಗಿರುವ ಮಗನು ಎಂದು ಸಾರಿ ಹೇಳಿತು. ಅಲ್ಲದೆ ಆಗ ದೇವಾಶೀರ್ವಾದವು ಪಾರಿವಾಳದ ರೂಪದಲ್ಲಿ ತನ್ನ ಮೇಲೆ ಇಳಿದು ಬಂದುದಕ್ಕೆ ಯೇಸುವೂ ಮತ್ತು ಯೋಹಾನನೂ ಅಲ್ಲಿ ಸಾಕ್ಷಿಯಾದರು. (ಯೋಹಾನ 1:34) ಜನರು ಪರಲೋಕವು ತೆರೆದುದನ್ನು ನೋಡಿದರೆಂದೂ ಆಕಾಶವಾಣಿಯನ್ನು ಕೇಳಿದರೆಂದೂ ಹಾಗೂ ಪಾರಿವಾಳವನ್ನು ನೋಡಿದರೆಂದೂ ನಮಗೆ ತಿಳಿಸಲ್ಪಟ್ಟಿಲ್ಲ. ಬದಲಾಗಿ ಕೇವಲ ಯೇಸು ಹಾಗೂ ಯೋಹಾನರು ಮಾತ್ರ ಇದನ್ನು ಕಂಡು ಕೇಳಿದರೆಂದು ಸತ್ಯವೇದದ ದಾಖಲೆಗಳು ಸೂಚಿಸಿದಂತೆ ತೋರುತ್ತದೆ. ಈ ವಿಷಯಕ್ಕೆ ಸಾಕ್ಷಿಯಾಗಿದ್ದು ಅದನ್ನು ಸಾರಿ ಹೇಳುವ ಸೌಭಾಗ್ಯವು ಯೋಹಾನನಿಗೆ ಅನುಗ್ರಹಿಸೋಣವಾಯಿತು. ಯೆಹೂದ್ಯರಲ್ಲಿ ಪಾರಿವಾಳವು ಶಾಂತಿ ಮತ್ತು ರಕ್ಷಣೆಗೆ ಬಹು ಜನಪ್ರಿಯವಾದ ಸಂಕೇತವಾಗಿತ್ತು. ಒಲೀವ ಮರದ ರೆಂಬೆಯನ್ನು ಹಿಡಿದಿದ್ದ ನೋಹನ ಪಾರಿವಾಳವು ನಾಗರೀಕ ಜನತೆಗೆ ಒಂದು ಸಂಕೇತವಾಗಿ ಬಂದಿರುವುದೆಂದು ತೋರುತ್ತದೆ. ಆದುದರಿಂದ ದೇವಾಶೀರ್ವಾದಕ್ಕೆ ಬಾಹ್ಯರೂಪದ ಸಾಕ್ಷಿಯಾಗಿ ಒಂದು ಆಕೃತಿಯನ್ನು ಬಳಸುವುದು ಬಹು ಸಮಂಜಸವಾದುದು. ಆ ಆಕೃತಿಯು ಪಾರಿವಾಳದ್ದಾಗಿರಬೇಕು. ಆದರೂ ದೇವರಾತ್ಮವು ಪಾರಿವಾಳವೆಂದೂ ಇಲ್ಲವೇ ಅದು ಪಾರಿವಾಳದ ದೇಹದ ಆಕಾರದಲ್ಲಿ ಇರುವುದೆಂದೂ ನಾವು ಊಹಿಸಬಾರದು. ಆದರೆ ಸತ್ಯವೇದದಲ್ಲಿ ಸೂಚಿಸಿರುವಂತೆ ಅದು ಒಂದು ದೇವರ ಶಕ್ತಿ ಅಥವಾ ಪ್ರಭಾವ. ಪಾರಿವಾಳವು ಸಾತ್ವಿಕ ಮತ್ತು ಶಾಂತ ಭಾವಗಳನ್ನು ಸೂಕ್ತವಾದ ರೀತಿಯಲ್ಲಿ ಪ್ರತಿನಿಧಿಸುವುದಾಗಿದ್ದು ಅದು ಕರ್ತನ ಹೆಸರಿಗಾಗಿ ಪರಿಶುದ್ಧಾತ್ಮವನ್ನು ಹೊಂದಿದವರಿಗೆ ಶೋಭೆ ನೀಡುವ ಆಭರಣವಾಗಿದೆ. ನಮ್ಮ ಕರ್ತನಿಗಾದ ಇಂತಹ ಒಂದು ಅನುಭವವು ಆತನ ಶಿಷ್ಯರಿಗೆ ಅನುಗ್ರಹಿಸೋಣವಾಗಿಲ್ಲ. ಆಕಾಶವಾಣಿಯಾಗುವುದನ್ನಾಗಲೀ, ಪರಲೋಕವು ತೆರೆಯುವು ದನ್ನಾಗಲೀ, ಅಥವಾ ಪಾರಿವಾಳವನ್ನಾಗಲಿ ಈ ದಿನದಲ್ಲಿ

ನಿರೀಕ್ಷಿಸಬಾರದು. ಪಂಚಾಶತ್ತಮ ದಿನದಲ್ಲಿ ಸಭೆಯ ಮೇಲೆ ಪವಿತ್ರಾತ್ಮ ಬಂದುದ್ದನ್ನು ಬಾಹ್ಯರೀತಿಯ ಪ್ರದರ್ಶನವಾಗಿ ಸೂಚಿತವಾಗಿದ್ದು. ಅದು ಈ ಕಾಲದ (ಸುವಾರ್ತಾ ಯುಗದ) ಪರ್ಯಂತರ ಸಂಪೂರ್ಣವಾದ ಸಭೆಗೂ ಅದು ಸೂಚಿತವಾಗುತ್ತದೆ. ಆ ಬಗೆಯ ಬಾಹ್ಯ ಪ್ರದರ್ಶನಗಳು ಪ್ರಾರಂಭದಲ್ಲಿ ಅವಶ್ಯಕವಾಗಿದ್ದವು. ಪವಿತ್ರಾತ್ಮನ ವಿಷಯವಾಗಿ ನಾವು ನಿಷ್ಪ್ರಯೋಜನವಾದ ಸ್ವಕಲ್ಪನೆಗಳನ್ನಾಗಲಿ ಇಲ್ಲವೇ ಬೇರೆಯವರ ಆಲೋಚನೆಗಳನ್ನಾಗಲಿ ಅನುಸರಿಸದೆ ಆರಂಭದಲ್ಲಿ ಪ್ರತ್ಯಕ್ಷವಾಗಿ ಸಾಂಕೇತಿಕವಾದ ರೀತಿಯಲ್ಲಿ ಸೂಚಿತವಾಗಿದ್ದುದ್ದನ್ನು ಈಗ ನಾವು ಕೇವಲ ಅವುಗಳ ನೈಜತೆಗಳನ್ನು ನೋಡುವವರಾಗಿದ್ದೇವೆ. ಯಾರು ನಂಬಿದವರಾಗಿ ಮಾನಸಾಂತರಪಟ್ಟು, ನಂತರದಲ್ಲಿ ತಮ್ಮ ಪಾಪಗಳಿಂದ ವಿಮೋಚನೆ ಹೊಂದಿ ನೀತಿವಂತರಾಗಿ ಮುಂದೆ ಕರ್ತನ ಮರಣದಲ್ಲಿ ಪಾಲುಗಾರರಾಗುವುದಕ್ಕಾಗಿ ಸ್ನಾನದೀಕ್ಷೆಯಲ್ಲಿ ತಮ್ಮನ್ನು ಒಪ್ಪಿಸಿಕೊಡುವರೋ (ರೋಮಾ 6:3) ಅವರಿಗೆ ಪರಲೋಕದ ಸಂಗತಿಗಳನ್ನು ನೋಡುವಂತೆ ಅವರ ಮನಸ್ಸುಗಳು ತೆರೆಯಲ್ಪಟ್ಟು ಆತ್ಮೀಕ ವಿಷಯಗಳನ್ನು ಅರಿತುಕೊಳ್ಳುವರೆಂಬ ಅರ್ಥದಲ್ಲಿ ಅವರ ಮುಂದೆ ಪರಲೋಕವು ತೆರೆಯಲಾಗುವುದು. ಇದನ್ನು ಅಪೋಸ್ತಲನು ಹೀಗೆ ಸಾರಿ ಹೇಳಿರುವನು. – "ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ." ಆ ವಿಷಯವಾಗಿ "ಕಣ್ಣು ಕಾಣಲಿಲ್ಲ. ಕಿವಿ ಕೇಳಲಿಲ್ಲ, ಅದರ ಭಾವನೆಯು (ಪ್ರಾಕೃತ) ಮನುಷ್ಯರ ಹೃದಯದಲ್ಲಿ ಹುಟ್ಟಲೂ ಇಲ್ಲ" (1ಕೊರಿಂಥ 2:9–10) ಅವರು ನಂಬಿಕೆಯ ಮೂಲಕವಾಗಿ ತಂದೆ ದೇವರ ಸ್ವರವನ್ನು ಆಲಿಸುವರು. ಹೀಗೆ ಅವರು ಯೇಸುವಿನ ಮೂಲಕ ಆತನ (ತಂದೆ ದೇವರ) ಬಳಿಗೆ ಬಂದು ತಮ್ಮ ಜೀವಿತವನ್ನು ಆತನಿಗೆ (ದೇವರಿಗೆ) ಈ ವಿಧದಲ್ಲಿ ಪ್ರತಿಷ್ಠಿಸಿಕೊಳ್ಳುವರು. ಆಗ ಅವರು ಆತನ ಪ್ರಿಯನಾದವನಲ್ಲಿ (ಕುಮಾರನಲ್ಲಿ) ಪ್ರೀತಿಯುಳ್ಳ ಮಕ್ಕಳಾಗಿ ಅಂಗೀಕರಿಸಲ್ಪಡುವರು. ಅವರು ಪವಿತ್ರಾತ್ಮವನ್ನು ಆಶೀರ್ವಾದವಾಗಿ ಹೊಂದಿ ತಮ್ಮ ಹೃದಯಗಳಲ್ಲಿ ಶಾಂತಿಕರವಾಗಿಯೂ ಸಾತ್ವಿಕವೂ ಸಾಧುವೂ ಆಗಿರುವ ಪವಿತ್ರವಾದ ಆತ್ಮಭಾವವು ಸುರಿಸಲ್ಪಟ್ಟವರಾಗುವರು. ಅವರು ಹೆಚ್ಚು ಹೆಚ್ಚು "ಆತ್ಮಭರಿತರಾದಷ್ಟೂ" ಇವುಗಳ ನೈಜತೆಯೂ ಅವರಲ್ಲಿ ಹೆಚ್ಚುತ್ತಾ ಹೆಚ್ಚುತ್ತಾ ಬರುವುದು.

ಆಗಷ್ಟೇ ಹೊಂದಿದ ಪವಿತ್ರಾತ್ಮಸ್ನಾನದ ಮೂಲಕ ತನ್ನ ಆತ್ಮವನ್ನು ಬೆಳಗಿಸಿಕೊಂಡು ಯೋಹಾನನ ಮತ್ತು ಜನರೆಲ್ಲರ ಸಂಪರ್ಕದಿಂದ ದೂರ ಸರಿದು ಏಕಾಂತಕ್ಕೆ ಹೋಗಲು ಯೇಸುವು ಆತ್ಮನಿಂದ ನಡೆಸಲ್ಪಟ್ಟನು. ಈ ಉದ್ಧೇಶಕ್ಕಾಗಿ ಆತನು ಅರಣ್ಯ ಪ್ರದೇಶವನ್ನು ಆದುಕೊಂಡನು. ಆತನು ಆತ್ಮನಿಂದ ದೂಡಲ್ಪಟ್ಟನೆಂದು ಅಥವಾ ನಡೆಸಲ್ಪಟ್ಟನೆಂದು ಮಾರ್ಕನು ಹೇಳುತ್ತಾನೆ. ನಮಗೆ ಇಲ್ಲಿ ಕಂಡುಬರುವ ಅಂಶವೆಂದರೆ, ಆ ಸಮಯದಲ್ಲಿ ನಮ್ಮ ಕರ್ತನ ಮನಸ್ಸಿನಲ್ಲಿ ತೀವ್ರವಾದ ಒಂದು ಒತ್ತಡವಿತ್ತು. ಹಿಂದಿನ ಪಾಠದಲ್ಲಿ ತನ್ನ ಚಿಕ್ಕ ವಯಸ್ಸಿನಲ್ಲಿ "ತಂದೆಯ ವಿಷಯವಾದ ಕಾರ್ಯಗಳ" ಬಗ್ಗೆ ಮತ್ತು ಅದರಲ್ಲಿ ತಾನು ಹೇಗೆ ತೊಡಗಿಸಿಕೊಳ್ಳಬೇಕೆಂಬುದರ ವಿಷಯವಾಗಿ ಅಧ್ಯಯನ ಮಾಡಿದ್ದನ್ನು ಗಮನಿಸಿದೆವು. ತನ್ನ ತಂದೆಯ ಕಾರ್ಯಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳಲು ಮೂವತ್ತನೇ ವಯಸ್ಸಿನವರೆಗೆ ಸೂಕ್ತವಲ್ಲವೆಂದು ಧರ್ಮಶಾಸ್ತ್ರದಲ್ಲಿ ಸೂಚಿತವಾಗಿರುವ ಅಂಶವನ್ನು ಗಣನೆಗೆ ತೆಗೆದುಕೊಂಡು ತನ್ನನ್ನು ತಡೆಹಿಡಿದುಕೊಂಡವನಾಗಿ ತನ್ನ ತಂದೆತಾಯಿಗಳನ್ನು ಸೇವಿಸುತ್ತಿದ್ದನು. ತಾನು ಹದಿನೆಂಟು ವರುಷಗಳಿಂದಲೂ ಕಾಯುತ್ತಿದ್ದ ಮಹತ್ವಪೂರ್ಣವಾದ ಸಮಯವು ಬಂದಿತು. ಆತನ (ತಂದೆಯ) ಸೇವೆಗೆ ವಿಳಂಬವಾಗದೆ ಬೇಗನೆ ತನ್ನನ್ನು ಸಮರ್ಪಿಸಿಕೊಳ್ಳಬೇಕೆಂದು ಅವಸರವಾಗಿ ತಾನು ಹೋಗಿದ್ದನು. ಆದರೆ ಈಗ ಪವಿತ್ರಾತ್ಮನಿಂದ ಅರಿವು ಉಂಟಾಗಲು, ತನ್ನ ಸೇವೆಯನ್ನು ತ್ವರಿತವಾಗಿ ಆರಂಭಿಸುವುದಕ್ಕೆ ಬದಲಾಗಿ, ತನ್ನ ಸೇವೆಯ ಆರಂಭದಲ್ಲೇ ತಪ್ಪು ಉಂಟಾಗದಂತೆ, ತನ್ನ ತಂದೆಯ ಚಿತ್ತವನ್ನು ತಿಳಿದುಕೊಂಡು ಅದಕ್ಕೆ ಅನುಸಾರವಾಗಿ ಸೇವೆ ಮಾಡುವ ಸಲುವಾಗಿ, ತಾನು ತೊಡಗಿಸಿಕೊಳ್ಳಬೇಕಾದ ಉಚಿತವಾದ ಮಾರ್ಗದ ಬಗ್ಗೆ ಖಚಿತವಾಗಿ ತಿಳಿದುಕೊಳ್ಳುವ ಅನಿಸಿಕೆಯಲ್ಲಿದ್ದನು. ಈ ಬಗೆಯ ಪ್ರೇರಣೆಗಳು ತಾನು ಏಕಾಂತವಾಗಿದ್ದು ಪ್ರಾರ್ಥನೆ ಅವಲೋಕನದ ಮೂಲಕ ಇದುವರೆಗೂ ಅಧ್ಯಯನ ಮಾಡಿ ಅಸ್ಪಷ್ಟ ರೀತಿಯಲ್ಲಿ ಗ್ರಹಿಸಿದ್ದ ಸತ್ಯವೇದದ ಹಲವು ಭಾಗಗಳನ್ನು ಪುನರಾಮರ್ಶೆ ಮಾಡಲು ಆತನನ್ನು ಒತ್ತಾಯಿಸಿದವು. ಹೀಗಿರಲು ತಾನು ಹೊಂದಿದ ಪವಿತ್ರಾತ್ಮನ ಪ್ರಭಾವದ ಮೂಲಕವಾಗಿ ಆತನಿಗೆ ಈಗ ಜ್ಞಾನೋದಯವಾಗಲು ಪ್ರಾರಂಭವಾಯಿತು.

ದೇವರ ಸೇವೆಗೆ ತಮ್ಮನ್ನು ಪ್ರತಿಷ್ಠೆ ಮಾಡಿಕೊಂಡ ನಂತರ ದೇವಜನರು ಆತುರ ಪಡದೆ ತಮಗೆ ದೊರೆತ ನೂತನ ಮನಸ್ಸು ನೂತನ ಆತ್ಮದ ಮೂಲಕ ಮೊದಲು ತಮ್ಮನ್ನು ಪ್ರತ್ಯೇಕಿಸಿಕೊಂಡು ತಂದೆಯೊಡನೆ ಅನ್ಯೋನ್ಯರಾಗಿ ಅತನ ವಾಕ್ಯಗಳನ್ನು ಅಧ್ಯಯನ ಮಾಡಿ ಆತನಿಗೆ ಬಹು ಮೆಚ್ಚುಗೆಯಾದ ರೀತಿಯಲ್ಲಿ ಆತನ ಸೇವೆಗೆ ತಮ್ಮ ಜೀವಿತಗಳನ್ನು ಒಪ್ಪಿಸಿಕೊಡುವುದು ಎಷ್ಟು ಸಮಂಜಸವಲ್ಲವೇ! ಈ ವಿಧಾನವನ್ನು ಅನುಸರಿದಿದ್ದಲ್ಲಿ ಎಷ್ಟು ಜನರ ಜೀವಿತಗಳು ಈಗ ಇರುವುದಕ್ಕಿಂತಲೂ ಭಿನ್ನವಾಗಿರುತ್ತಿತ್ತು. ಎಷ್ಟು ಬಗೆಯ ವೈಫಲ್ಯಗಳೂ ಮಾರ್ಪಾಡುಗಳೂ ಹೀಗೆ ಹಾಗೆ ತಿರುಗಿಕೊಳ್ಳುವುದೂ ತಪ್ಪಬಹುದಿತ್ತು. ಯಾವನಾದರೂ ತನ್ನ ಶಿಲುಬೆಯನ್ನು ಹೊತ್ತುಕೊಂಡು ಆತನ ಹಿಂದೆ ಹೋಗುವ ಮೊದಲು ಕುಳಿತು ಇದಕ್ಕೆ ತಗಲುವ ಕಷ್ಟನಷ್ಟಗಳ ಬಗ್ಗೆ ಲೆಕ್ಕಾಚಾರ ಹಾಕಬೇಕೆಂಬ ವಿಷಯವನ್ನು – ಅಂದರೆ, ತಂದೆಯ ಚಿತ್ತವು ಏನಾಗಿರುವುದೆಂಬುದನ್ನೂ ಮತ್ತು ಅದರಿಂದ ಅಪೇಕ್ಷಿಸಬೇಕಾಗಿರುವ ಪ್ರತಿಫಲವೇನೆಂಬುದರ ವಿಷಯವಾಗಿ – ನಮ್ಮ ಕರ್ತನು ಒಂದು ಸಾಮ್ಯದಲ್ಲಿ ವ್ಯಕ್ತಪಡಿಸಿರುವನು. ಅಲ್ಲದೆ ದೇವರಿಗೆ ಪ್ರಿಯರಾದ ಮಕ್ಕಳಲ್ಲಿ ಯಾರಾದರೂ ತಮ್ಮ ಪ್ರತಿಷ್ಠೆಯ ಆರಂಭದಲ್ಲಿ ಸರಿಯಾದ ಮಾರ್ಗವನ್ನು ತಿಳಿದುಕೊಳ್ಳಲು ಅಲಕ್ಷ್ಯಮಾಡಿದಲ್ಲಿ ಅವರಿಗೆ ನಮ್ಮ ಕರ್ತನ ಉದಾಹರಣೆಯನ್ನು ತೋರಿಸಿಕೊಡುವವರಾಗಿದ್ದೇವೆ. ಆತನು ಸ್ವಸ್ಥತೆಯುಳ್ಳ ಮನೋಭಾವವನ್ನು ಹೊಂದಿದ್ದು ಮಾತ್ರವಲ್ಲದೆ ಸ್ವಸ್ಥ ಬುದ್ಧಿಯನ್ನೂ ಸಹ ಪಡೆದಿದ್ದು, ಈ ಮೂಲಕವಾಗಿ ಪವಿತ್ರಾತ್ಮನು ಪರಿಪೂರ್ಣ ರೀತಿಯಲ್ಲಿ ಕಾರ್ಯಮಾಡುವಂತಾಗಿ, ಇತರ ಎಲ್ಲಾ ವಿಷಯಗಳಲ್ಲಿದ್ದಂತೆ ಆತನು ಈ ವಿಷಯದಲ್ಲೂ ಜ್ಞಾನ ವಿವೇಕವುಳ್ಳವನಾಗಿದ್ದನು. ಹೀಗಿರಲಾಗಿ ದೇವರ ಚಿತ್ತದ

ವಿಷಯವಾದ ನಮ್ಮ ಅಧ್ಯಯನವು ಸಂಪೂರ್ಣವಾಗಿ ನಮ್ಮ ಒಡೆಯನ ವಿಷಯದಲ್ಲಿ ಇದ್ದಂತೆ ಏಕಾಂತವಾದುದ್ದಲ; ನಮಗೆ "ಸಹೋದರರುಗಳು" ಇದ್ದಾರೆ, ಅತನು ತಾನೆ ಮುಂದಾಗಿ ಓಡಬೇಕಾಗಿ ಬಂದುದರಲ್ಲಿ ತನಗೆ ಯಾರೂ (ಜೊತೆಗಾರರು) ಇರಲಿಲ್ಲ. ದೇವರಲ್ಲಿ ನಂಬಿಕೆಯನ್ನು ಮತ್ತು ದೇವರಿಗಾಗಿರುವ ತಮ್ಮ ಪ್ರತಿಷ್ಠೆಯನ್ನು ವ್ಯಕ್ತಪಡಿಸುವಂಥವರ ಮೂಲಕವಾಗಿ ನಮ್ಮ ವಿಷಯವಾಗಿರುವ ತಂದೆಯ ಚಿತ್ತವನ್ನು ಶೀಘ್ರವಾಗಿಯೂ ಅಧಿಕವಾಗಿಯೂ ತಿಳಿದುಕೊಳ್ಳಲು ಉಪಯುಕ್ತವಾದ ಸಲಹೆಗಳನ್ನು ಪಡೆಯಬಹುದು. ನಮ್ಮ ಹಿರಿಯ ಸಹೋದರರಾದ ಯೇಸುವಿನ ಮೂಲಕ ಆತನ ವಾಕ್ಯ ಮತ್ತು ಆತನ ನಿದರ್ಶನಗಳ ನೆರವನ್ನು ವಿಶೇಷವಾಗಿ ಪಡೆಯಬಹುದು. ಹೀಗಿರುವಲ್ಲಿ ನಮ್ಮ ಪ್ರತಿಷ್ಠೆಯು ತಂದೆಯ ಕಾರ್ಯಭಾರವನ್ನು ನೆರವೇರಿಸ ಸಲುವಾಗಿ ಇರುವುದೆಂಬುದನ್ನೂ ಹಾಗೂ ತಂದೆಯ ಚಿತ್ತವನ್ನೂ ಅದರಲ್ಲಿರುವ ನಮ್ಮ ಪಾತ್ರವನ್ನು ಅರಿತುಕೊಳ್ಳುವಲ್ಲಿ ನಮಗೆ ಸಹಾಯ ಮಾಡುವಲ್ಲಿ ಮಾತ್ರ ನಮ್ಮ ಸಹೋದರರು ನಿಜವಾಗಿಯೂ ನಮಗೆ ಸಹಾಯಕರಾಗುವರೆಂಬುದನ್ನೂ ನಾವು ಮರೆಯಬಾರದು. ಇಲ್ಲವಾದಲ್ಲಿ ಅವರು ಇದಕ್ಕೆ ಪ್ರತಿಯಾಗಿ ತಮ್ಮ ಸ್ವಂತ ಅಥವಾ ಪಂಗಡಕ್ಕೆ ಅನುಸಾರವಾದ ಯೋಜನೆಗಳನ್ನು ತಿಳಿಯಪಡಿಸಿ ಅದರ ಸಲುವಾಗಿ ನಾವು ಪ್ರತಿಷ್ಠೆ ಮಾಡಿಕೊಳ್ಳಲು ಅವರು ಅಪೇಕ್ಷಿಸಿ ನಮಗೆ ಅಡ್ಡಿಯನ್ನು ಉಂಟುಮಾಡಬಹುದು.

ನಮ್ಮ ಕರ್ತನ ಶೋಧನೆಯು ಈ ಗಳಿಗೆಯಿಂದ ಪ್ರಾರಂಭ ವಾಯಿತೆಂದು ಹೇಳಬಹುದು. ಆ ಶೋಧನೆಗಳಲ್ಲಿ "ಆತನು ... ನಮ್ಮ ಹಾಗೆ ಶೋಧನೆಗೆ ಗುರಿಯಾದನು. ಆದರೆ ಪಾಪ ಮಾತ್ರ ಮಾಡಲಿಲ್ಲ." ನಮ್ಮ ಹಾಗೆ ಶೋಧನೆಗೆ ಗುರಿಯಾದುದು ಬಾಲಕ ನಾದ ಯೇಸುವಲ್ಲ. ಇಲ್ಲವೇ ಯೌವನಸ್ಥನಾದ ಯೇಸುವೂ ಅಲ್ಲ. ತನ್ನ ಪ್ರತಿಷ್ಠೆಯ ನಂತರ ಬಂದ ನಮ್ಮ ರಕ್ಷಕನ ಶೋಧನೆಗಳು ಲೋಕದ ವಿಷಯಗಳ ಮೇಲಿನವುಗಳಲ್ಲ. ಆದರೆ ಕ್ರೈಸ್ತಸಭೆಗೆ ಸಂಭವಿಸುವಂಥ ರೀತಿಯವುಗಳು. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ನಾವು ನಮ್ಮ ಕರ್ತನಲ್ಲಿ ಪ್ರತಿಷ್ಠೆ ಹೊಂದಿದ ನಂತರ ನೂತನ ಸೃಷ್ಟಿಗಳಾಗಿ ಎಣಿಸಲ್ಪಟ್ಟಂತೆಯೇ ನಮ್ಮ ಕರ್ತನು ಯೋರ್ದಾನಿನಲ್ಲಿ ಪ್ರತಿಷ್ಠೆ ಮಾಡಿಕೊಂಡ ಸಮಯದ ನಂತರ ಒಬ್ಬ ನೂತನ ಸೃಷ್ಟಿಯಾಗಿ ಎಣಿಸಲ್ಪಟ್ಟನು. ಪ್ರತಿಷ್ಠಿತರಾದ ತನ್ನ ಹಿಂಬಾಲಕರು ಶೋಧಿಸಲ್ಪಟ್ಟು ಪರೀಕ್ಷಿತರಾದಂತೆಯೇ ಪ್ರತಿಷ್ಠಿತರಾದ ಯೇಸುವು ಶೋಧಿಸಲ್ಪಟ್ಟು ಪರೀಕ್ಷಿತನಾಗಿದ್ದನು. ನಾವು ಮುಂದುವರಿದು ನಮ್ಮ ಕರ್ತನ ಶೋಧನೆಗಳ ಲಕ್ಷಣ ಗಳನ್ನು ಗಮನಿಸಿ ಅವುಗಳೊಂದಿಗೆ ಪ್ರತಿಷ್ಠಿತರಾದ ಆತನ "ಸಹೋದರರ" ಶೋಧನೆಗಳನ್ನು ಹೋಲಿಸಿದಾಗ ಈ ವಿಷಯಕ್ಕೆ ಹೆಚ್ಚಿನ ಸಾಕ್ಷ್ಯಾಧಾರವಿರುವುದನ್ನು ನಾವು ನೋಡುತ್ತೇವೆ ವಾಸ್ತವದಲ್ಲಿ ತಾವು ಪ್ರತಿಷ್ಠಿತರಾದ ನಂತರದಲ್ಲಿಯೇ ಏಕೆ ಶೋಧನೆಗಳು ಪ್ರಾರಂಭವಾದಂತೆ ತೋರುತ್ತವೆ? ಅದಕ್ಕೆ ಮುನ್ನ ಅಲ್ಲ ಎನ್ನುವುದಕ್ಕೆ ಹಲವರು ಆಶ್ಚರ್ಯಪಡುವರು. ಪ್ರತಿಷ್ಠೆಯ ನಂತರ ವಿರೋಧಿಯಾದ ಸೈತಾನನು ಅವರನ್ನು ಬಿಟ್ಟು ಓಡಿ ಹೋಗುವನೆಂದೂ ಆ ನಂತರದಲ್ಲಿ ಅವರಿಗೆ ಶೋಧನೆಗಳು ಇರುವುದಿಲ್ಲವೆಂದೂ ಅವರು ನಿರೀಕ್ಷಿಸಿದಂತೆ ತೋರುತ್ತದೆ. ಒಟ್ಟಾರೆ ಇದು ದೇವರ ಏರ್ಪಾಡುಗಳ ತಪ್ಪಾದ ಗ್ರಹಿಕೆ. ಪ್ರತಿಷ್ಠೆ ಹೊಂದಿದವರಿಗೆ ಬರುವ ಇಂತಹ ಶೋಧನೆಗಳು ಮತ್ತು ಗುಣದ ಪರೀಕ್ಷೆಗಳು ಪ್ರತಿಷ್ಠೆಹೊಂದದೇ ಇರುವವರಿಗೆ ಸೂಕ್ತವಲ್ಲ. ಈ ಕಾಲವು ಲೋಕದ ನ್ಯಾಯ ವಿಚಾರಣೆಯ ದಿನವಲ್ಲ. ಆದರೆ ಕ್ರೈಸ್ತ ಸಭೆಯ ನ್ಯಾಯ ವಿಚಾರಣೆಯ ಸಮಯ.

ನಮ್ಮ ಕರ್ತನ ಶೋಧನೆಗಳು 40 ದಿನಗಳ ಪರ್ಯಂತ ರವೂ ಮುಂದುವರಿದಂತೆ ತೋರುತ್ತದೆ. ಆದರೆ ವಿಶೇಷವಾಗಿ ವಿವರಿಸಿರುವ ಆ ಮೂರು ಶೋಧನೆಗಳು ಆ ಪರೀಕ್ಷಾ ಸಮಯ ಕೊನೆಗೊಳ್ಳಲು ನಡೆದಂತವುಗಳು. ಒಬ್ಬ ವಾಸ್ತುಶಿಲ್ಪಿಯು ಮೊದಲು ಕಟ್ಟಡದ ರೂಪರೇಖೆಯನ್ನು ಬಿಡಿಸಿದ ಬಳಿಕ ಅದರ ಒಳವಿನ್ಯಾಸಗಳ ವಿವರಗಳನ್ನು ಒಂದಾದ ಮೇಲೆ ಒಂದರಂತೆ ತುಂಬಿಸುವಂತೆ, ನಮ್ಮ ರಕ್ಷಕನೂ ಸಹ ಅರಣ್ಯದಲ್ಲಿ ಏಕಾಂತ ವಾಗಿದ್ದು ತನಗೆ ಅನ್ವಯಿಸುವ ಹಲವು ಪ್ರವಾದನೆಗಳ ವಿಷಯ ವಾಗಿ ಆಲೋಚಿಸುವುದರಲ್ಲಿ ಮಗ್ನನಾಗಿ ಅವುಗಳನ್ನು ಒಟ್ಟು ಗೂಡಿಸಿ ಅವುಗಳಿಗೆ ತನಗಿರುವ ಸಂಬಂಧವನ್ನು ತಿಳಿದು ಕೊಳ್ಳುತ್ತಿದ್ದುದ್ದನ್ನು ನಾವು ಕಲ್ಪಿಸಿಕೊಳ್ಳಬಹುದು. ನಿಶ್ಚಿತವಾಗಿಯೂ ತನ್ನ ಮುಂದಿದ್ದ ಸತ್ಯವೇದದ ರೂಪ ರೇಖೆಗಳು ದೇವರ ರಾಜ್ಯದ ವಿಷಯಗಳಾಗಿದ್ದವು. ಆತನು ಅಬ್ರಹಾಮನ ಸಂತತಿಯಾಗಿ ಅದರ ರಾಜನಾಗಿದ್ದು ತನ್ನ ದಯಾಪೂರ್ಣವಾದ ಆಡಳಿತ ಮತ್ತು ಜ್ಞಾನವಿವೇಕವುಳ್ಳ ಆಜ್ಞಾವಿಧಿಗಳ ಮೂಲಕ ಭೂಲೋಕದ ಎಲ್ಲಾ ಕುಲಗಳು ಆಶೀರ್ವಾದ ಹೊಂದುವುದರಲ್ಲಿದ್ದವು. ಇದರ ಕಿರುನೋಟಗಳು ಆಗಲೇ ತನ್ನ ಮನಸ್ಸಿನಲ್ಲಿ ಸ್ಪಷ್ಟವಾಗಿ ಮೂಡಿ ಬಂದಿದ್ದವು. ಆದರೆ ಅವುಗಳನ್ನು ಹೊಂದಿಸಿ ಕ್ರಮವಾಗಿ ಜೋಡಿಸ ಬೇಕಿತ್ತು. ಧರ್ಮಶಾಸ್ತ್ರದಲ್ಲಿ ಛಾಯೆಯಾಗಿ ಸೂಚಿಸಿರುವಂತೆ ತಾನು ಯಾಜಕನಾಗಿ ಜನರ ಪಾಪಗಳಿಗಾಗಿ ತನ್ನ ಯಜ್ಞಾರ್ಪಣೆ ಯನ್ನು ಹೇಗೆ ನೆರವೇರಿಸಬೇಕಿದೆ? ನಿರಂತರವಾದ ಯಾಜಕತ್ವದ ಛಾಯಾರೂಪಗಳು ಎಲ್ಲಿ ದೊರೆಯುವವು? ಇಸ್ರಾಯೇಲ್ಯರ ಗುಂಪಿನಲ್ಲಿ ರೆಬೆಕ್ಕಳನ್ನು ಸೂಚಿಸುವ ವರ್ಗವು ಎಲ್ಲಿರುವುದು. ತಾನು ಇಸಾಕನಾಗಿ ಹಾಗೂ ಅಬ್ರಹಾಮನು ತಂದೆಯಾಗಿ ಎಲ್ಲಿ ಸೂಚಿತರಾಗಿರುವರು? ಅಲ್ಲದೆ ಇಸ್ರಾಯೇಲ್ಯರು ತನ್ನನ್ನು ಅಂಗೀಕರಿಸಿ ರೆಬೆಕ್ಕಳ ವರ್ಗದವರಾದಲ್ಲಿ ತನ್ನ ಬಲಿದಾನವು ನೆರವೇರಬೇಕಿರುವುದು ಎಲ್ಲಿ ಮತ್ತು ಹೇಗೆ? ಇದಲ್ಲದೆ ಇತರ ಪ್ರವಾದನೆಗಳು ದೇವರ ಯೋಜನೆಯಲ್ಲಿ ಯಾವ ಸ್ಥಾನದಲ್ಲಿ ಇರುವವು ಎಂಬುದನ್ನು ತಿಳಿಯಲು ನಿಸ್ಸಂದೇಹವಾಗಿ ಆತನ ಮನಸ್ಸನ್ನು ಒತ್ತಾಯಪಡಿಸುತ್ತಿದ್ದವು. ಅವು ಯಾವುವೆಂದರೆ, ಇಸ್ರಾಯೇಲ್ಯರು ಸಮುದ್ರದ ಮರಳಿನಷ್ಟಾಗಿದ್ದರೂ ಅವರಲ್ಲಿ ಕೇವಲ ಒಂದಂಶವು ಮಾತ್ರ ಅಂಗೀಕಾರವಾಗುವರೆಂಬುದು ಪ್ರಕಟವಾಗಿರುವಲ್ಲಿ ಮುಂದಾಗಿ "ಆಯಲ್ಪಟ್ಟವರ" ಸಂಖ್ಯೆಯು ದೊರಕಿ ಪ್ರಭಾವವುಳ್ಳ ರಾಜವಂಶ ಯಾಜಕತ್ವದ ವರ್ಗವು ಪೂರ್ಣವಾಗುವುದು ಹೇಗೆ? ತಾನೇ ಮಹಾ ಯಾಜಕನಾಗಿದ್ದು ತನ್ನ ನಿಜವಾದ ಹಿಂಬಾಲಕರು ರಾಜವಂಶದ ಯಾಜಕರಾಗಿದ್ದು ಇವರೆಲ್ಲರೂ ನೀತಿಯ ನಿಮಿತ್ತ ಬಾಧೆಯನ್ನು ಅನುಭವಿಸಿ ಮರಣ ದಲ್ಲಿ ಯಜ್ಞಾರ್ಪಿತರಾಗಬೇಕಿದ್ದಲ್ಲಿ ಭೂಲೋಕದ ಎಲ್ಲಾ ಕುಲಗಳ ವರು ಆಶೀರ್ವದಿಸಲ್ಪಡುವ ಕಾರ್ಯವಿಧಾನ ಯಾವುದು?

ಆ ನಾಲ್ವತ್ತು ದಿನಗಳು ಸಂಗತಿಗಳ ಹೊಂದಾಣಿಕೆ ಹಾಗೂ ಮರುಹೊಂದಾಣಿಕೆ ಮಾಡುವುದರಲ್ಲಿಯೂ, ಅವುಗಳನ್ನು ಸರಿಯಾದ ಕ್ರಮದಲ್ಲಿ ಅಳವಡಿಸುವುದು ಮತ್ತು ಪುನಃ –

ಅಳವಡಿಸುವುದರಲ್ಲಿಯೂ, ವಿಷಯಾಲೋಚನೆ ಪ್ರಾರ್ಥನೆಗಳಿಂದಲೂ ತುಂಬಿಕೊಂಡಿತ್ತೆಂಬುದನ್ನು ನಾವು ಚೆನ್ನಾಗಿ ಕಲ್ಪಿಸಿಕೊಳ್ಳಬಹುದು. ಇವೆಲ್ಲವುಗಳ ಮಧ್ಯೆ ಅಲ್ಲಿ ಶೋಧನೆಗಳೂ ಸೇರಿಕೊಂಡಿದ್ದಿರಬಹುದು. ದೃಷ್ಟಾಂತವಾಗಿ ಹೇಳುವುದಾದರೆ, ಕ್ರಿಸ್ತನು ಪ್ರಭಾವ ಹೊಂದುವುದಕ್ಕೆ ಮುನ್ನ ಪ್ರವಾದನೆಗಳಲ್ಲಿ ಛಾಯಾರೂಪವಾಗಿ ಸೂಚಿಸಿರುವಂತೆ ತಾನು ಅನುಭವಿಸಬೇಕಿರುವ ಶ್ರಮ ಸಂಕಟದ ಸ್ವರೂಪಗಳ ಅಗತ್ಯತೆಗಳನ್ನು ಪ್ರಶ್ನಿಸುವುದು. ಸತ್ಯವೇದದ ವಚನಗಳನ್ನು ತಿರುಚುವ ಅಪ್ರಮಾಣಿಕವಾದ ವಿಧಾನಗಳನ್ನು ಅನುಸರಿಸಲೂ ಸಹ ಪ್ರಚೋದನೆ ಉಂಟಾಗಿರಬಹುದು. ಹೀಗೆ ದೇವ ಸಂಕಲ್ಪದ ರೂಪರೇಷೆಗಳಿಗೆ ಪೂರ್ಣವಾಗಿ ಹೊಂದಿಕೊಳ್ಳದ ವಿಧಾನಗಳನ್ನು ಆರಿಸಿಕೊಳ್ಳುವ ಮೋಸಕ್ಕೆ ತಾನೇ ಒಳಪಡಿಸಿಕೊಳ್ಳಲೂ ಬಹುದಿತ್ತು. ಈ ವಿಧವಾದ ಸಲಹೆಗಳು ಒಂದಾದ ನಂತರ ಮತ್ತೊಂದು ತನ್ನ ಎದುರಿನಲ್ಲಿ ಬಂದಾಗ ನಮ್ಮ ಕರ್ತನು ಪ್ರಾಮಾಣಿಕವಾಗಿ ಅವುಗಳನ್ನು ತಿರಸ್ಕರಿಸಿದ್ದನೆಂದು ನಾವು ಸುರಕ್ಷಿತವಾಗಿ ಭಾವಿಸಬಹುದು. ಯಾಕೆಂದರೆ ತನ್ನ ತಂದೆಯ ಚಿತ್ತಕ್ಕೆ ಸಂಪೂರ್ಣವಾಗಿ ವಿಧೇಯನಾಗಿರಲು ಮತ್ತು ಆತನು ನಿರ್ವಹಿಸಲು ಕೊಟ್ಟ ಕಾರ್ಯವನ್ನು ಆತನೇ ಗೊತ್ತುಮಾಡಿದ ರೀತಿಯಲ್ಲೇ ನೆರವೇರಿಸಲು ನಮ್ಮ ಕರ್ತನು ಪೂರ್ಣವಾಗಿ ನಿಶ್ಚಯಿಸಿಕೊಂಡಿದ್ದನು.

ತನ್ನ ಅಧ್ಯಯನವು ಎಷ್ಟೊಂದು ಉದ್ದೇಶ ಪೂರಿತವಾಗಿತ್ತೆಂದರೆ, ತಂದೆಯ ಮತ್ತು ಆತನ ನ್ಯಾಯವಿಧಿಗಳೊಡನೆಯ ಅನ್ಯೋನ್ಯತೆಗೆ ಆತನಲ್ಲಿ ಅದೆಷ್ಟು ಪ್ರಾಮಾಣಿಕವಾದ ಬಯಕೆಯಿತ್ತೆಂದರೆ ಈ ಸ್ಥಿತಿಯಲ್ಲಿ ನಾಲ್ವತ್ತು ದಿನಗಳು ಕಳೆದರೂ ಅದೆಷ್ಟರ ಮಟ್ಟಿಗೆ ನಮ್ಮ ಕರ್ತನು ಗಾಢವಾಗಿ ತಲ್ಲೀನನಾಗಿಸಿಕೊಂಡಿದ್ದನೆಂದು ತೋರಿತ್ತೆಂದರೆ ತನಗೆ ಆಹಾರದ ಯೋಚನೆಯೇ ಇರಲಿಲ್ಲ. ಆತನು ಶಾರೀರಿಕವಾಗಿಯೂ ಅಲ್ಲದೆ ಇತರ ರೀತಿಯಲ್ಲಿಯೂ ಪರಿಪೂರ್ಣನಾಗಿದ್ದುದ್ದನ್ನು ಅಪರಿಪೂರ್ಣರೆಂಬುದನ್ನು ನಾವು ನೆನೆದಾಗ ಇದು ನಮಗೆ ಆಶ್ಚರ್ಯವಾಗಿ ಕಾಣಲಾರದು. ಅವು ಕಳೆದ ಮೇಲೆ ಆತನಿಗೆ ಹಸಿವಾಯಿತು.

ಸತ್ಯವೇದ ಅಧ್ಯಯನ ಹಾಗೂ ಪ್ರಾರ್ಥನಾವಧಿ ಕಾಲಗಳ ಅಂತ್ಯಭಾಗದಲ್ಲಿ ನಮ್ಮ ಕರ್ತನು ಉಪವಾಸವಿದ್ದು ಹಸಿವಾಗಿದ್ದಾಗ ವಿರೋಧಿಯು (ಸೈತಾನನು) ಮೂರು ವಿಧವಾದ ಶೋಧನೆಗಳ ಮೂಲಕ ಆತನ ಮೇಲೆ ದಾಳಿಮಾಡಿದನು.

"ಶೋಧಕನು" (devil) ಎನ್ನುವುದು ಡಯಾಬೊಲೋಸ್ (diabolos) ಎಂಬ ಶಬ್ಧದ ಭಾಷಾಂತರವಾಗಿದ್ದು ಅದನ್ನು "ಆ" ಎಂಬ ನಿರ್ದೇಶಕ ಗುಣವಾಚಿಯೊಂದಿಗೆ (definite article) ಬಳಸಬಹುದಾಗಿದೆ. ಈ ಪರಮ ವಂಚಕನನ್ನು ಸತ್ಯವೇದದಲ್ಲಿ ಹೀಗೆ ಬಹುವಚನದಿಂದ ಸೂಚಿಸಲ್ಪಟ್ಟು ಬಿದ್ದುಹೋದ ದೇವದೂತರಿಗಿಂತ ವ್ಯತ್ಯಾಸವಾದ ರೀತಿಯಲ್ಲಿ ತೋರಿಸಲಾಗಿದೆ. ಬಿದ್ದುಹೋದ ದೇವದೂತರನ್ನು ಪಿಶಾಚಿಗಳು (demons) ಎಂಬ ಇನ್ನೊಂದು ಶಬ್ಧದಿಂದ ಹೆಸರಿಸಲಾಗಿದೆ. ಸತ್ಯವೇದ ಈ ಒಂದು ಸ್ಥಳದಲ್ಲಿ ದುರಾತ್ಮಗಳ ಒಡೆಯನ ವ್ಯಕ್ತಿತ್ವವನ್ನು ಹೀಗೆ ಸ್ಪಷ್ಟವಾಗಿ ದೃಢಪಡಿಸಲಾಗಿದೆ. ಈತನು ವ್ಯಕ್ತಿಯಾಗಿರುವುದನ್ನು ಮತ್ತು ಆತನಲ್ಲಿರುವ ಬಲವನ್ನು ನಮ್ಮ ಕರ್ತನೇ ಗುರುತಿಸಿ ಹೇಳಿದ್ದಾನೆ. ಸೈತಾನನು ನಮ್ಮ ಕರ್ತನ ಎದುರಿನಲ್ಲಿ ನರರೂಪದಲ್ಲಿ ಕಾಣಿಸಿಕೊಂಡನೆಂದು ನಮಗೆ ಭಾವಿಸುವ ಅಗತ್ಯವಿಲ್ಲ. ವ್ಯಕ್ತಿಯಾಗಿ ಕಾಣಿಸಿಕೊಂಡಿದ್ದೇ ಆದಲ್ಲಿ ತಾನು ಪ್ರಕಾಶವುಳ್ಳ ದೇವದೂತನ ವೇಷದಲ್ಲಿ ಅತ್ಯುತ್ತಮವಾದ ರೂಪದಲ್ಲಿ ತನ್ನನ್ನು ತೋರ್ಪಡಿಸಿಕೊಳ್ಳುತ್ತಿದ್ದನೆಂಬುದನ್ನು ನಾವು ಸಂಪೂರ್ಣವಾಗಿ ನಂಬಬಹುದು. ನಿಜವಾಗಿಯೂ ನಮ್ಮ ಕರ್ತನು ತನ್ನ ಪೂರ್ವಾಸ್ತಿತ್ವದಲ್ಲಿ ತಂದೆ ದೇವರ ಪ್ರತಿನಿಧಿಯಾಗಿ ಸೈತಾನನನ್ನು ಸೃಷ್ಟಿಸಿದವನು ಎಂಬುದನ್ನು ಇಲ್ಲಿ ಸ್ಮರಿಸಬಹುದು. ಅಲ್ಲದೆ ನಾವು ಮತ್ತೂ ಸ್ಮರಿಸುವುದೆಂದರೆ, ಸೈತಾನನು ದೇವದೂತರ ಕ್ರಮದಲ್ಲಿ ಅತ್ಯುನ್ನತವಾದ ಸೃಷ್ಟಿಯಾಗಿದ್ದು ಆತನಲ್ಲಿದ್ದ ಪಾಪವೆಂದರೆ (ದೇವರ) ಬಲಾಧಿಕಾರವನ್ನು ಅಪಹರಿಸಿಕೊಂಡು ಮಾನವರ ಅನುಕಂಪ ಪ್ರೀತಿವಿಶ್ವಾಸ ಮತ್ತು ವಿಧೇಯತೆಗಳನ್ನು ಕಸಿದುಕೊಳ್ಳುವುದರ ಮೂಲಕ ಭೂಮಿಯ ಮೇಲೆ ಬಲಿಷ್ಠ ನಾಯಕನಾಗಲು ಮಾಡಿದ ಪ್ರಯತ್ನ. ಈ ಕಾರಣದಿಂದ ಆತನು ದೈವಖಂಡನೆಗೆ ಒಳಗಾದನು. ನಮ್ಮ ಕರ್ತನ ಪ್ರತಿಷ್ಠೆಯ ವಿಷಯವಾಗಿಯೂ ಹಾಗೂ ತಂದೆಯು ಬಿದ್ದುಹೋದ ನರಜಾತಿಯವರನ್ನು ವಿಮೋಚಿಸುವ ಕೆಲಸವನ್ನು ಆತನಿಗೆ ವಹಿಸಿಕೊಟ್ಟಿರುವ ವಿಷಯವಾಗಿಯೂ ಸೈತಾನನು ನಿಸ್ಸಂಶಯವಾಗಿ ಕೆಲವುಮಟ್ಟಿಗೆ ತಿಳಿದಿದ್ದರಿಂದ ಯೇಸುವಿಗೆ ನೀಡಿದ ಆತನ ಈ ಒಂದು ಬೇಟಿಯು ಅಸಮಂಜಸವಾದುದೇನೂ ಅಲ್ಲವೆಂದು ನಾವು ಕಲ್ಪಿಸಿಕೊಳ್ಳಬಹುದು. ಕರ್ತನ ಮುಂದೆ ಸ್ನೇಹಭಾವದಿಂದ ತನ್ನನ್ನು ತೋರ್ಪಡಿಸಿಕೊಂಡು ಆತನ ಮತ್ತು ಆತನು ನಿರ್ವಹಿಸಲಿರುವ ಕಾರ್ಯಗಳಲ್ಲಿ ತನಗೆ ವಿಶೇಷವಾದ ಆಸಕ್ತಿಯಿರುವುದಾಗಿಯೂ, ಮಾನವ ಸಂತತಿಯ ಮೇಲಿರುವ ಪಾಪದ ದಂಡನೆ ಹಾಗೂ ಅದರ ಪರಿಣಾಮವಾದ ಭೀಕರ ನೀತಿಭ್ರಷ್ಟತೆಯನ್ನು ಗಮನಿಸುವಲ್ಲಿ ತನಗೆ ಸಂಕಟಭರಿತ ವಿಸ್ಮಯವಾಗಿದೆಯೆಂದೂ, ಅಲ್ಲದೆ ಈ ನಿಸ್ಸಹಾಯಕವಾದ ಮಾನವ ಸಂತತಿಯನ್ನು ನರಳಾಟ ಸಂಕಟ ಮರಣಕರ ಸ್ಥಿತಿಯಿಂದ ಬಿಡಿಸಲು ಏನಾದರೂ ಮಾಡಲು ತನಗೂ ಸಂತೋಷವಾಗುವುದೆಂಬ ಭರವಸೆಯ ಮಾತು ಹೇಳಿರುವುದನ್ನು ಊಹೆ ಮಾಡಿಕೊಳ್ಳಬಹುದು. ಎಲ್ಲೆಡೆ ಇರುವ ಪರಿಸ್ಥಿತಿಯನ್ನು ಅರಿಯುವುದರಲ್ಲಿ ಬಹು ನುರಿತವನಾಗಿ ಮನುಕುಲದ ಮನಃಸ್ಥಿತಿ ಹಾಗೂ ಅದರ ನ್ಯೂನ್ಯತೆಗಳ ವಿಷಯವಾಗಿ ಪೂರ್ಣವಾಗಿ ತಿಳಿದಿದ್ದು, ಅದನ್ನು ನಿವಾರಿಸುವಲ್ಲಿ ಸಫಲನಾಗಲು ಅಸಕ್ತನಾಗಿದ್ದು ಒಬ್ಬ ಸ್ನೇಹಿತನಂತೆ ಕರ್ತನು ತಾನು ನಿರ್ವಹಿಸಲಿರುವ ಕಾರ್ಯಗಳ ವಿಷಯವಾದ ಯೋಜನೆಗಳ ಬಗ್ಗೆ ಆಗ ಪರಿಗಣನೆ ಮಾಡುತ್ತಾ ಅದನ್ನು ನೆರವೇರಿಸಲು ಇಚ್ಛಿಸುತ್ತಿದ್ದ ಸಮಯದಲ್ಲಿ ಆ ವಿಷಯದಲ್ಲಿ ಕೆಲವು ಸಲಹೆಗಳನ್ನು ನೀಡಲು ಸೈತಾನನು ತಾನು ಅರ್ಹನಾದ ಸ್ಥಿತಿಯಲ್ಲಿರುವುದಾಗಿ ಭಾವಿಸಿದ್ದನು.

## ಆತ್ಮೀಕಾನುಗ್ರಹಗಳನ್ನು ಸ್ವಪ್ರಯೋಜನಕ್ಕಾಗಿ ಬಳಸುವ ವಿಷಯವಾದ ಶೋಧನೆ

ನಮ್ಮ ರಕ್ಷಕನು ಆಹಾರವಿಲ್ಲದೆ ನಿಶ್ಯಕ್ತನಾಗಿರುವುದನ್ನೂ ಆತನು ನಿರ್ವಹಿಸಲಿರುವ ಮಹಾ ಕಾರ್ಯವನ್ನು ಪೂರ್ಣಗೊಳಿಸಲು ತನ್ನ ಶಾರೀರಿಕ ಆರೋಗ್ಯದ ಬಗ್ಗೆ ಸೂಕ್ತವಾದ ಕಾಳಜಿ ವಹಿಸುವುದು ಅವಶ್ಯವೆಂಬುದನ್ನು ಸಲಹೆ ಮಾಡುವುದರ

ಮೂಲಕ ಸೈತಾನನು ನಮ್ಮ ರಕ್ಷಕನ ಬಗ್ಗೆ ತನಗಿರುವ ಆಸಕ್ತಿಯನ್ನು ಮೊದಲು ತೋರ್ಪಡಿಸಿದ್ದನು. ಆಗಷ್ಟೇ ನಮ್ಮ ರಕ್ಷಕನು ದೈವೀಕ ಶಕ್ತಿಯನ್ನು ಪಡೆದಿರುವುದಾಗಿಯೂ, ಆದರಿಂದ ತನ್ನ ಅಗತ್ಯತೆಗಳನ್ನು ಪೂರೈಸಿಕೊಳ್ಳುವ ಸಾಮರ್ಥ್ಯವು ತನಗೆ ಲಭಿಸಿರುವುದಾಗಿಯೂ, ಅದಕ್ಕಾಗಿ ಈಗ ಆತನು ಕೇವಲ ಮಾತನ್ನು ನುಡಿಯುವ ಅವಶ್ಯಕತೆ ಇರುವುದಾಗಿಯೂ, ಆಗ ಕಲ್ಲುಗಳು ರೊಟ್ಟಿಯಾಗಿ ಮಾರ್ಪಡುವವೆಂತಲೂ ಸಲಹೆ ಮಾಡಿದನು. ಹೀಗೆ ಕರ್ತನು ತನ್ನ ಮೇಲೆ ಬಂದಿಳಿದ ಹಲವು ವಿಧಗಳಿಂದ ಕೂಡಿರುವ ಹೊಸ ಶಕ್ತಿಯನ್ನು ಪ್ರದರ್ಶನ ಮಾಡಬಹುದೆಂಬ ಸಲಹೆಯನ್ನು ಸಹ ಆತನಿಗೆ ಮಾಡಿದನು. ಇದನ್ನು ಮುಂದೆ ಮಾಡಲು ಬೇಕಾಗಬಹುದೆಂದು ಕರ್ತನಿಗೆ ಅನ್ನಿಸಿತು. ಇದಕ್ಕಿಂತಲೂ ಹೆಚ್ಚಿನ ಯುಕ್ತಿಯುಳ್ಳ ಶೋಧನೆಯ ಉಪಾಯವನ್ನು ಮಾಡಲು ಹೇಗೆ ಸಾಧ್ಯ? ಇದನ್ನು ನೆರವೇರಿಸಿ ದ್ದಲ್ಲಿ ಇದು ಖಂಡಿತವಾಗಿ ನಮ್ಮ ಕರ್ತನ ಹಸಿವನ್ನು ನಿವಾರಿಸಿ ಆತನ ಶರೀರವನ್ನು ಬಲಪಡಿಸುತ್ತಿತ್ತಲ್ಲದೆ; ಇದಕ್ಕಿಂತಲೂ ಮಿಗಿಲಾಗಿ, ಪಶ್ಚಾತ್ತಾಪದ ಮನೋಭಾವ ಹೊಂದಿ ಕೆಟ್ಟದ್ದನ್ನು ಹಿಂದೆಂದೋ ತೆಗೆದುಹಾಕುವ ಕಾರ್ಯದಲ್ಲಿ ಕರ್ತನಿಗೆ ಸಹಕಾರಿಯಾಗಲು ಬಯಸಿದಂತೆ ತೋರ್ಪಡಿಸುತ್ತಿದ್ದ ಸೈತಾನನು ಮಾನಸಾಂತರಗೊಂಡನೆಂಬ ಅರ್ಥ ಬರುವಂತೆಯೂ ಕಾಣುತ್ತಿತ್ತು. ಇದು ಬಹು ಬಲವಾದ ಶೋಧನೆಯಾಗಿತ್ತು.

ಇಂತಹ ಶೋಧನೆಗಳು ಪ್ರತಿಷ್ಠಿತರಾದವರೆಲ್ಲರ ಮೇಲೆ ಬರುವುದು, ಅದು ಈ ವಿಧವಾಗಿಯೇ ಇರಲಾರದು ಇಲ್ಲವೇ ಈ ರೀತಿಯ ಮಾತುಗಳಿಂದಲೇ ಕೂಡಿರಲಾರದು. ಆದರೆ ದೇವರೊಂದಿಗೆ ಉಂಟಾದ ಹೊಸ ಸಂಭಂದದ ಫಲವಾಗಿ ಬಂದ ನೂತನ ಸಾಮರ್ಥ್ಯವನ್ನು ಕೆಲವು ಮಟ್ಟಿಗೆ ನಮ್ಮ ಶಾರೀರಿಕ ಸುಖ ಸೌಕರ್ಯವನ್ನು ಬಯಸುವ ಲೌಕಿಕ ವಿಷಯಗಳ ಅಭಿವೃದ್ಧಿಗೆ ಬಳಸಬಹುದೆಂಬ ಸಲಹೆಗಳು ಬರಬಹುದು. ಇದರಿಂದ ಜನರ ಮುಂದೆ ನಾವು ದೇವರಿಂದ ಬಹು ಗೌರವಾನ್ವಿತರಾಗಿ ಅನುಗ್ರಹ ಮಾಡಲ್ಪಟ್ಟವರೆಂದು ಪ್ರಸಿದ್ಧರಾಗಬಹುದು. ಇವುಗಳನ್ನು ಹೆಚ್ಚು ಸಂಬಳ ವರಮಾನಗಳನ್ನು ಪಡೆಯಲು ಬಳಸಿಕೊಳ್ಳಬಹುದು, ಇಲ್ಲವೇ ಇವುಗಳಿಂದ ಲೌಕಿಕವಾದವುಗಳನ್ನು ಹೊಂದಲು, ಅದು ದೊರೆಯದಿದ್ದರೂ, ಯತ್ನಿಸಬಹುದು. ಅನಂತರದಲ್ಲಿ ನಾವು ನಮ್ಮ ಕರ್ತನು ಮುಂದೆ ತನ್ನ ಸ್ನೇಹಿತನೆನಿಸಿಕೊಳ್ಳುವವನ ಹಾಗೂ ಆತನು ಕೊಟ್ಟ ಲೌಕೀಕ ವಿಷಯ ಸಂಭಂಧವಾದ ಸಲಹೆಗಳನ್ನು ಹೇಗೆ ಎದುರಿಸಿದನೆಂಬುದನ್ನು ನಾವು ಗಮನಿಸಬಹುದು. ಪ್ರಾಪಂಚಿಕವಾದ ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಆತ್ಮೀಕ ಶಕ್ತಿಯನ್ನು ಬಳಸುವ ವಿಷಯವಾದ ಆತನ ಸಲಹೆಯನ್ನು ನಿರ್ದಾಕ್ಷಿಣ್ಯವಾಗಿ ನಿರಾಕರಿಸಿದನು. ಲೌಕಿಕ ಸುಖಸಾಧನಗಳನ್ನು ಪಡೆಯಲು ಆತ್ಮೀಕ ವರಗಳನ್ನು ಎಂದಿಗೂ ಬಳಸುವಂತಿಲ್ಲ; ಹಾಗಾಗಿದ್ದಲ್ಲಿ ಅದು (ಮಂತ್ರವಾದಿಯಾದ) ಸೀಮೋನನಿಗೆ ಅವುಗಳನ್ನು ಹಣಕ್ಕೆ ಮಾರಿದಂತಾಗುವುದು. (ಅ. ಕೃತ್ಯ. 8:18 – 24) ಆದರೆ ಈ ವಿಷಯಗಳನ್ನು ವಿವರಿಸುವುದಕ್ಕೆ ಹೋಗದೆ, ತನ್ನ ಹೊಣೆಗಾರಿಕೆಗೆ ಒಪ್ಪಿಸಿಕೊಟ್ಟಿರುವ ಶಕ್ತಿಯನ್ನು ಅಪವಿತ್ರವಾಗಿ ಬಳಸಲಾರದಷ್ಟು ಪರಿಶುದ್ಧನು ತಾನೆಂದು ಹೊಗಳಿಕೊಳ್ಳದೆ, ಯೇಸುವು ಶೋಧಕನಿಗೆ–ಮನುಷ್ಯನ ಜೀವಿತವು ಪೂರ್ಣವಾಗಿ ತಾನು ಏನನ್ನು ತಿನ್ನಬೇಕೆಂಬುದರ ಮೇಲೆ ಅವಲಂಬಿಸಿಲ್ಲ ಅದರೆ ದೇವರ ವಾಕ್ಯಗಳಿಗೆ ವಿಧೇಯರಾಗಿ ನಡೆಯುವುದರಲ್ಲಿ ನಿಸ್ಸಂದೇಹವಾಗಿ ಜೀವವು ಖಾತರಿಯಾಗುತ್ತದೆ ಎಂದು ಸತ್ಯವೇದದ ಭಾಷೆಯಲ್ಲಿ ಸರಳವಾಗಿ ಉತ್ತರಿಸಿದನು. ಭೂಸುಖ ಸಂಪತ್ತುಗಳನ್ನು ಪಡೆಯಲು ಆತ್ಮೀಕ ಸಂಗತಿಗಳನ್ನು ತ್ಯಾಗಮಾಡು ವಂಥ ಸಮಸ್ಯೆಗಳೆಲ್ಲವುಗಳಿಗೂ ಕರ್ತನ ಪ್ರತಿಯೊಬ್ಬ ಹಿಂಭಾಲಕನೂ ಇದೇ ರೀತಿಯಲ್ಲಿ ಉತ್ತರಿಸಬೇಕು. ಕರ್ತನ "ಸಹೋದರರಲ್ಲಿ" ಹಲವರಿಗೆ ಶೋಧಕನು ಈ ರೀತಿಯ ಶೋಧನೆಯನ್ನು ತರುವನು. ನೀನು ಇಷ್ಟು ಕಟ್ಟುನಿಟ್ಟಾಗಿ ಸತ್ಯವನ್ನು ಅನುಸರಿಸಿ, ಪವಿತ್ರನಾದ ಸತ್ಯದ ಆತ್ಮನು ಅತ್ಯಾಸಕ್ತಿಯಿಂದ ತನಗೆ ಸೇವೆಸಲ್ಲಿಸುವಂತೆ ನಿನ್ನನ್ನು ನಡೆಸಲು ಬಿಟ್ಟರೆ ನಿನಗೆ ಬೇಗನೆ ಊಟಕ್ಕೂ ಗತಿಯಿಲ್ಲದವನಾಗುವಿ, ನೀನು ವ್ಯವಹರಿಸಲಿರುವ ಪ್ರಪಂಚದ ಜನರು ಇದನ್ನು ಮೆಚ್ಚುವುದಿಲ್ಲ. ಅವರು ನಿನ್ನನ್ನು ಕೆಲಸದಿಂದ ತೆಗೆಯುವರು. ಇಲ್ಲವೇ ಕೊಂಡುಕೊಳ್ಳಲು ನಿನ್ನ ಅಂಗಡಿಗೆ ಬರುವುದನ್ನು ನಿಲ್ಲಿಸುವರು, ಅಥವಾ ಅವರು ನಿನ್ನನ್ನು ಸಭಾಪಾಲಕನ ಹುದ್ದೆಯಿಂದ ತೆಗೆದುಹಾಕುವರು ಇಲ್ಲವೇ ನಿನ್ನಲ್ಲಿರುವ ತಮ್ಮ ಅನ್ಯೋನ್ಯತೆ ಅಥವಾ ಸಮಾಜ ಸಂಪರ್ಕವನ್ನು ಹಿಂದಕ್ಕೆ ತೆಗೆದುಕೊಳ್ಳುವರು, ಆಗ ನೀನು ಈ ಜೀವಿತದಲ್ಲಿನ ಎಲ್ಲಾ ಶುಭ ಸಂಗತಿಗಳಿಂದ ವಂಚಿತನಾಗಿರುವಿ, ಇತ್ಯಾದಿಗಳು. ಇದಕ್ಕೆ ಕೊಡಬೇಕಾದ ತಕ್ಕ ಉತ್ತರವೆಂದರೆ, ತನ್ನ ಆತ್ಮೀಕಾಶೀರ್ವಾ ದಗಳನ್ನು ಏಸಾವನಂತೆ ಒಂದು ಬಟ್ಟಲು ಗುಗ್ಗರಿಗೆ ಮಾರಲಿಚ್ಚಿಸದೆ ಅವುಗಳು ಮಾರಲಾರದಷ್ಟೂ ಅಮೂಲ್ಯವೆಂದು ಅವುಗಳನ್ನು ಗೌರವಿಸುವವರೆಲ್ಲರವನ್ನು ಪರಿಪಾಲಿಸಲು ದೇವರು ಸಮರ್ಥ ನೆಂದು ಮತ್ತು ಯಾವನು ದೇವರ ವಾಕ್ಯಾನುಸಾರ ನಡೆಯವನೋ ಅವನು ಈಗಿನ ಕಾಲದಲ್ಲಿ ಕೆಲವು ಸುಖ ಸೌಕರ್ಯಗಳನ್ನು ಕಳಕೊಂಡರೂ ಕಡೆಯಲ್ಲಿ ನಿತ್ಯಜೀವವನ್ನು ಅದರ ಉತ್ಕೃಷ್ಟ ಪ್ರಭಾವದ ಸಹಿತವಾಗಿ ಪಡೆದುಕೊಳ್ಳುವರು.

ನಮ್ಮ ಕರ್ತನ ದೃಢವಾದ ಉತ್ತರವು ಶೋಧನೆಯು ಶೀಘ್ರವಾಗಿ ಅಂತ್ಯವಾಗುವಂತೆ ಮಾಡಿ ಆ ಶೋಧಕನನ್ನು ಎದೆಗುಂದುವಂತೆ ಮಾಡಿ ಆತನು ಈ ವಿಷಯದಲ್ಲಿ ಮುಂದು ವರಿಯದಂತೆ ಮಾಡಿತು. ಆತನ ಹಿಂಬಾಲಕರಾದ ನಮ್ಮ ವಿಷಯವೂ ಹೀಗೆಯೇ ನಾವು ಶೋಧನೆಯನ್ನು ತಿರಸ್ಕರಿಸುವಲ್ಲಿ ದೃಢಚಿತ್ತರಾಗಿದ್ದರೆ ಅದು ನಮ್ಮ ಮನೋಸ್ಥೈರ್ಯವನ್ನು ಹೆಚ್ಚಿಸು ವುದು. ಇದು ಆ ಒಂದು ಸಂದರ್ಭಕ್ಕೆ ಮಾತ್ರವಲ್ಲದೆ ಮುಂದೆ ಬರುವ ಶೋಧನೆಗಳ ವಿಷಯದಲ್ಲೂ ಸಹ ಹೀಗೆಯೇ ಆಗುವುದು. ಇದು ಕೆಲವು ಮಟ್ಟಿಗೆ ನಮ್ಮ ಶೋಧಕನಿಗೆ ಸ್ಥೈರ್ಯ ಗೆಡಿಸುವುದು. ಆತನು ನಮ್ಮ ಸ್ಥಿರಚಿತ್ತವನ್ನು ಗಮನಿಸಿ ದೃಢ ನಿರ್ಧಾರ ಹಾಗೂ ಗುಣದ ಸದೃಢತೆಯುಳ್ಳ ವ್ಯಕ್ತಿಗಳೊಂದಿಗೆ ವಿಷಯಗಳನ್ನು ಚರ್ಚಿಸುವುದರಲ್ಲಿ ಪ್ರಯೋಜನವಿಲ್ಲ ಎಂಬು ದನ್ನು ಚೆನ್ನಾಗಿ ತಿಳಿದಿರುವನು. ಒಂದು ವೇಳೆ ನಾವೇನಾ ದರೂ ಆ ವಿಷಯದ ಸಾಧಕ ಬಾಧಕಗಳನ್ನು ಮನಸ್ಸಿನಲ್ಲಿ ಚರ್ಚಿಸುತ್ತಾ ಹೋದಲ್ಲಿ ಅದರ ಪರಿಣಾಮವಾಗಿ ಶೋಧಕನು ಖಂಡಿತವಾಗಿ ತನ್ನ ವಾದವನ್ನು ಅಧಿಕಗೊಳಿಸುವನು. ಆಗ ವಾದದಲ್ಲಿ ಆತನಿಗೆ ಸರಿಸಮಾನರಾಗಿ ಕಂಡುಬರಲಾರದೇ ಹೋಗುವ ಅಪಾಯಕ್ಕೆ ಒಳಗಾಗುವೆವು. ಏಕೆಂದರೆ ಅಪೋಸ್ತಲನು ಹೇಳಿದಂತೆ ಆ ಶೋಧಕನು ಒಬ್ಬ ಕುಯುಕ್ತಿಯುಳ್ಳ ಎದುರಾಳಿಯಾಗಿದ್ದಾನೆ ಹಾಗೂ ನಾವು ಆತನ ಯುಕ್ತಿಯನ್ನು ಅರಿತವರಲ್ಲವಲ್ಲ. ದೇವರ

ವಾಕ್ಯಕ್ಕೆ ಹಾಗೂ ಕರ್ತನ ಆತ್ಮಕ್ಕೆ ಪ್ರಾಮಾಣಿಕ ಹಾಗೂ ಪೂರ್ಣವಾದ ವಿಧೇಯತೆಯೊಂದೇ ಸಹೋದರರಿಗೆ ಇರುವ ಸುರಕ್ಷಿತ ಮಾರ್ಗ.

## ಅನಧಿಕೃತ ಕಾರ್ಯಗಳ ಮೂಲಕ ದೇವರನ್ನು ಪರೀಕ್ಷಿಸುವುದು

ತನ್ನ ಮೊದಲನೇ ಪ್ರಯತ್ನದಲ್ಲಿ ನಿರಾಶನಾದ ಶೋಧಕನು ನಮ್ಮ ಕರ್ತನ ತೀರ್ಮಾನವನ್ನು ನಿರಾಕರಿಸದೆಯೇ ಬೇಗನೇ ವಿಷಯವನ್ನು ಬದಲಿಸುವನು. ಆತನು ನೀಡಿದ ಎರಡನೇ ಶೋಧನೆಯು ನಮ್ಮ ಕರ್ತನಿಗೆ ಮತ್ತು ಆತನ ಪ್ರತಿಷ್ಠಿತರಾದ ಹಿಂಬಾಲಕರಿಗೆ ಬರುವ ಇತರ ಎಲ್ಲಾ ಶೋಧನೆಗಳಂತಿದ್ದು, ಅದು ತೀರಾ ಕೆಟ್ಟತನವಾದ ಕೊಲೆ, ಕಳ್ಳತನದ ವಿಷಯವಾದ ಶೋಧನೆಯಾಗಿರದೆ ಅದು ದೇವರು ಯೋಜಿಸಿದ ಕೆಲಸವನ್ನು ಬೇರೆ ವಿಧಾನದಲ್ಲಿ ಮಾಡುವ ಬಗೆಯಾಗಿದ್ದು, ಅದು ತನಗೆ ನೀಡಿರುವ ದೈವಾಧಿಕಾರಗಳನ್ನು ದುರುಪಯೋಗ ಮಾಡಿಕೊಳ್ಳುವ ಅಂದರೆ ಒಳ್ಳೆಯ ಫಲಗಳು ದೊರೆಯುವುದನ್ನು ಸರಿಯಿಲ್ಲದ ರೀತಿಯಲ್ಲಿ ಮಾಡಲು ಯತ್ನಿಸುವುದು.

ಸೈತಾನನು ನಮ್ಮ ಕರ್ತನನ್ನು ಯೆರೂಸಲೇಮಿಗೆ ಕರೆದು ಕೊಂಡು ಹೋಗಿ ದೇವಾಲಯದ ಶಿಖರದ ಮೇಲೆ ನಿಲ್ಲಿಸಿದನು. ಇದು ದೈಹಿಕವಾಗಿ ಅಲ್ಲದೆ ಮಾನಸಿಕವಾಗಿ ಅಂದರೆ ನಾವು ದೈಹಿಕವಾಗಿ ಹೋಗದೆ ಮನಸ್ಸಿನಲ್ಲಿ ಬೇರೆಬೇರೆ ಸ್ಥಳಗಳಿಗೆ ಹೋಗಿ ಅಲ್ಲಿ ಕೆಲವು ಕೆಲಸಗಳನ್ನು ಮಾಡುವಂತಿರುವುದು. ಆಗ ನೀಡಿದ ಸಲಹೆಯು ಇಂತಿತ್ತು. ನಾನು (ಸೈತಾನನು) ನಿನಗೆ ಇಸ್ರಾಯೇಲ್ ಜನರ ಎದುರಿನಲ್ಲಿ ಬೇಗನೆ ನೀನು ಪ್ರಖ್ಯಾತಿಗೆ ಬರುವಂತೆ ಮಾಡುವ ವಿಧಾನದ ಒಂದು ಒಳ್ಳೆಯ ಸಲಹೆಯನ್ನು ಕೊಡುವೆನು. ಅದರಿಂದ ನಿನಗೆ ಸಂತೋಷವಾಗುತ್ತದೆ ಯಾಕೆಂದರೆ ಅದು ಸತ್ಯವೇದದಲ್ಲಿ ಹೇಳಿರುವ ಒಂದು ಮಾರ್ಗ. ಮೆಸ್ಸೀಯನು ಬಂದಾಗ ಆತನು ಇದನ್ನು ಮಾಡುವನೆಂಬ ಪ್ರವಾದನೆಯು ನನಗೆ ನಿಜವಾಗಿ ಕಂಡುಬಂತು; ದಾವೀದನು ಪ್ರವಾದನೆಯಾಗಿ ಹೇಳಿದ ಮಾತು ನೆರವೇರಿತೆಂದು ಜನರು ಸಿದ್ಧಮನಸ್ಸಿನಿಂದ ಗ್ರಹಿಸಿಕೊಳ್ಳುವುದು ಹೀಗೆ ಅವರು ನಿನ್ನ ಉಪದೇಶದ ಧ್ಯೇಯೋದ್ಧೇಶಗಳನ್ನು ಕೂಡಲೇ ಅವಲಂಭಿ ಸುವರು. ನೀನು ಜನನಾಯಕನಾಗುವಿ, ನಿನ್ನ ಕಾರ್ಯಗಳು ಬಹು ವಿಜೃಂಭಣೆಯಿಂದ ನಡೆಯುವವು; ನಾನು ಹಿಂದೆ ಹೇಳಿದಂತೆಯೇ ನಿನ್ನ ಕಾರ್ಯಗಳು ಅಭಿವೃದ್ಧಿಯಾಗುವುದನ್ನು ಕಂಡು ನನಗೆ ಆನಂದವಾಗುವುದು; ಯಾಕೆಂದರೆ ಆರು ಸಾವಿರ ವರುಷಗಳಿಂದಲೂ ಇರುವ ಈ ಹೀನಾವಸ್ಥೆಯನ್ನು ಕಂಡು ನನ್ನ ಮನಸ್ಸು ಪೂರ್ಣ ಅಸ್ವಸ್ಥವಾಗಿದೆ. ಹಿನ್ನೋಮ್ ತಗ್ಗಿಗೆ ಎದುರಾಗಿರುವ ದೇವಾಲಯದ ದಕ್ಷಿಣ ಭಾಗದ ಆರುನೂರು ಅಡಿ ಎತ್ತರವಿರುವ ಅಲ್ಲದೆ ದೇವಾಲಯದ ಅಂಗಳಕ್ಕೆ ಎದುರಾಗಿಯೂ ಇರುವ ಶಿಖರದ ಮೇಲೆ ಹೋಗಿ ಕೆಳಗೆ ಅಂಗಳದಲ್ಲಿ ಇರುವ ನೂರಾರು ಭಕ್ತರ ಮುಂದೆ ಎತ್ತರದಿಂದ ಜಿಗಿದು ಪೆಟ್ಟಾಗದಂತೆ ಬಿದ್ದು ಏಳಬೇಕೆಂಬುದು ನನ್ನ ಸಲಹೆ. ಇದು ಪರಾತ್ಪರನಾದ ದೇವರ ಶಕ್ತಿಯು ನಿನ್ನಲ್ಲಿರುವುದೆಂದು ಅವರು ಬೇಗನೆ ಗ್ರಹಿಸುವಂತೆ ಬೇರೆ ಯಾವ ವಿಧದಲ್ಲೂ ಆಗದ ರೀತಿಯಲ್ಲಿ ತೋರ್ಪಡಿಸುತ್ತದೆ. ನಾನು ಹೇಳುವುದೆಂದರೆ ಇದು ಸತ್ಯವೇದ ದಲ್ಲಿ ಸೂಚಿಸಿರುವುದು; ಅದು ಹೇಳುವುದು – "ಆತನು ನಿನ್ನ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆ ಕೊಡುವನು; ನಿನ್ನ ಕಾಲು ಕಲ್ಲಿಗೆ ತಗಲೀತೆಂದು ಅವರು ನಿನ್ನನ್ನು ಕೈಗಳಲ್ಲಿ ಎತ್ತಿಕೊಳ್ಳುವರು". – ಮತ್ತಾಯ 4:6.

ಪ್ರತಿಷ್ಠಿತರಾದ ಯೇಸುವಿನ ಹಿಂಬಾಲಕರಿಗೂ ಸೈತಾನನು ಇದೇ ರೀತಿಯಾದ ಶೋಧನೆಯನ್ನು ಕೊಡುವನು ಅದೇನೆಂದರೆ ಲೋಕದವರ ಮತ್ತು ಹೆಸರಿನ ಕ್ರೈಸ್ತಸಭೆಯವರ ಮುಂದೆ (ನಿನ್ನ ಸಾಮರ್ಥ್ಯದ) ಒಂದು ಒಳ್ಳೆಯ ಪ್ರದರ್ಶನವನ್ನು ಮಾಡು; ಯಾವುದಾದರೂ ಒಂದು ವಿಧಾನದಿಂದ ಅವರ ಗಮನವನ್ನು ಸೆಳೆ; ಕ್ರಿಸ್ತನ ಶಿಲುಬೆಯ ವಿಷಯವಾಗಿ ಕೇವಲ ಉಪದೇಶ ಮಾಡುವುದೇ ಅಲ್ಲದೆ ಪ್ರಾಕೃತ ಮನುಷ್ಯರ ಮುಂದೆ ದೊಡ್ಡದಾದ ಗಮನ ಸೆಳೆಯುವ ಕಾರ್ಯಗಳನ್ನು ಮಾಡಿ ಆತ್ಮೀಕವಾದ ಶಕ್ತಿಗಳು ಆಶೀರ್ವಾದಗಳು ನಿನ್ನಲ್ಲಿರುವುದೆಂದು ಅವರಿಗೆ ತೋರಿಸು. ಹೀಗೆ ಶೀಘ್ರವಾಗಿ ದೊಡ್ಡ ಯಶಸ್ಸನ್ನು ಸಂಪಾದಿಸುವಿ; ಆತ್ಮೀಕ ವರ್ಗದವರಿಗೆ ಕಣ್ಣು ಕಟ್ಟದಿರುವ ರೀತಿಯಲ್ಲಿ ಆತ್ಮೀಕವಾದ ವಿಷಯಗಳನ್ನು ತಿಳಿಸುವ ಕಾರ್ಯಗಳನ್ನು ಬಿಟ್ಟುಬಿಟ್ಟು ಇದನ್ನು ಮಾಡು. ನಿನ್ನಲ್ಲಿರುವ ಆತ್ಮೀಕ ವಿಷಯಗಳನ್ನು ಕಂಡ ಬಹುಪಾಲು ಜನರು ನೀನು ವಿಶಿಷ್ಠನಾಗಿರುವಿಯೆಂದು ಪ್ರಶಂಶಿಸಿ ನಿನ್ನನ್ನು ಹೇಗೂ ದೂರವಿಡುವರು. ಇದರಿಂದ ನೀನು ಬಹು ಜನರ ಅನುಕಂಪವನ್ನು ಕಳಕೊಂಡು ವಿಶೇಷವಾಗಿ ಕ್ರೈಸ್ತ ಸಮುದಾಯದ ಕೆಲವು ಪ್ರಾಮುಖ್ಯ ಪ್ರತಿಪಾದಕರ ದ್ವೇಷಕ್ಕೆ ಗುರಿಯಾಗುವಿ.

ನಮ್ಮ ಕರ್ತನು ಪುನಃ ಪ್ರಾಮಾಣಿಕವಾಗಿಯೂ ಸರಿಯಾಗಿಯೂ ಉತ್ತರಿಸಿದನು; ನಿನ್ನ ದೇವರಾಗಿರುವ ಕರ್ತನನ್ನು (ಯೆಹೋವನನ್ನು) ಪರೀಕ್ಷಿಸಬಾರದು ಎಂಬುದಾಗಿ ಸಹ ಬರೆದದೆ ಅಂದನು. ನಾವು ನಂಬುವವರಾಗಿ ನಡೆಯದೆ ನೋಡುವವರಾಗಿಯೇ ನಡೆಯಬೇಕೆಂದು ಸೈತಾನನು ಇಷ್ಟಪಡುವನು. ನಾವು ಸತತವಾಗಿ ದೇವರನ್ನು ಪರೀಕ್ಷಿಸುತ್ತಿರ ಬೇಕೆಂದೂ ಆತನ ವಾಕ್ಯಗಳ ಸಾಕ್ಷಿಯನ್ನು ಅಂಗೀಕರಿಸಿ ಅದರಲ್ಲಿ ಎಳ್ಳಷ್ಟೂ ಸಂಶಯವಿಲ್ಲದ ನಂಬಿಕೆಯನ್ನಿಟ್ಟು ಅದನ್ನು ಅವಲಂಬಿಸುವುದರ ಬದಲು ಆತನ ಅನುಗ್ರಹ ಮತ್ತು ರಕ್ಷಣೆಗಳ ಸಾದೃಶ್ಯ ಪ್ರದರ್ಶನವನ್ನು ನಾವು ಬಯಸುತ್ತಿರಲು ಅಭಿಲಾಷಿಸುವನು. ಈಗ ತೆರೆದು ಪ್ರಕಾಶಗೊಳ್ಳುತ್ತಿರುವ ಸತ್ಯವೇದ ವಾಕ್ಯಾರ್ಥಗಳ ಪ್ರಕಾರ ನಾವು ನೋಡುವುದೆಂದರೆ ಸೈತಾನನು ಸತ್ಯವೇದ ವಾಕ್ಯಭಾಗವನ್ನು ಅದರ ಸರಿಯಾದ ಅರ್ಥ ವಿವರಣೆಯಿಲ್ಲದ ರೀತಿಯಲ್ಲಿ ಉದ್ದೇಶರಹಿತವಾಗಿ ಉಲ್ಲೇಖಿಸಿ ರುವ ಸಂಭವವಿದೆ. ಈ ವಾಕ್ಯಭಾಗವು ಹೇಳಿರುವುದು ಯೇಸುವಿನ ನಿಜವಾದ ಕಾಲುಗಳು ನಿಜವಾದ ಕಲ್ಲುಗಳು ಮತ್ತು ನಿಜವಾದ ದೇವದೂತರ ವಿಷಯವಾಗಿರದೆ ಅದು ಸಾಂಕೇತಿಕವಾಗಿ ಈಗಿನ ಕಾಲದ ಕ್ರಿಸ್ತನ ದೇಹದ ಪಾದಗಳನ್ನು ಸೂಚಿಸುವ ಸದಸ್ಯರ ಮತ್ತು ಈಗ ನೀತಿವಂತರ ಮಾರ್ಗದಲ್ಲಿ ಕಂಡುಬರಬಹುದಾದ (ಸತ್ಯವೇದದ) ಭೋಧನೆಗಳು, ಮುಂತಾದವುಗಳ ವಿಷಯ ಗಳಲ್ಲಿರುವ ತಪ್ಪಾದ ವಿವರಣೆಗಳೆಂಬ ಎಡಹುಕಲ್ಲುಗಳನ್ನು ಸೂಚಿಸುತ್ತದೆ; ಹಾಗೂ ದೇವದೂತರು ಈಗಿನ ಕಾಲದ

ಸುಗ್ಗೀಕಾಲದ ದೈವೀಕ ಸತ್ಯಾರ್ಥಗಳನ್ನು ಹೊಂದಿ ಅವುಗಳನ್ನು (ಕ್ರಿಸ್ತನ ದೇಹದ) ಪಾದಗಳನ್ನು ಸೂಚಿಸುವವರಿಗೆ ಅವಶ್ಯವಾಗಿರುವ ಸತ್ಯವೇದದ ಮಾರ್ಗದರ್ಶನ ಬುದ್ಧಿಮಾತು ವಾಕ್ಯವಿವರಣೆಗಳನ್ನು ನೀಡುವುದರ ಮೂಲಕ ಅವರಿಗೆ ಸೇವೆ ಮಾಡುತ್ತಿರುವವರನ್ನು ಸೂಚಿಸುತ್ತಾರೆ. – ಕೀರ್ತನೆ 91:11, 12.

## ನೀತಿ ನಿಯಮಗಳನ್ನು ರಾಜಿಮಾಡಿಕೊಂಡು ಒಳ್ಳೆಯ ಫಲಿತಾಂಶಗಳನ್ನು ಪಡೆಯುವದರ ವಿಷಯವಾದ ಶೋಧನೆಗಳು

ಸೈತಾನನು ಕೊಟ್ಟ ಮೂರನೇ ಶೋಧನೆಯೂ ಸಹ ಒಂದು ಸ್ನೇಹ ಸಹಾನುಭೂತಿ ಭಾವಗಳಿಂದ ಕೂಡಿದ್ದು ನಮ್ಮ ಕರ್ತನು ನಡೆಸಲಿರುವ ವಿಶೇಷ ಕಾರ್ಯಗಳಿಗೆ ಸಹಕಾರ ಸೂಚಿಸುವ ಉದ್ದೇಶವುಳ್ಳದ್ದಾಗಿತ್ತೆಂಬುದು ನಮ್ಮ ಭಾವನೆ. ಅವನು ನಮ್ಮ ಕರ್ತನನ್ನು ಒಂದು ಎತ್ತರವಾದ ಬೆಟ್ಟಕ್ಕೆ ಕರೆದುಕೊಂಡು ಹೋದನು. ಅದು ಶಾರೀರಿಕವಾಗಿತ್ತಲ್ಲದೆ ಮಾನಸಿಕ ರೂಪದಲ್ಲಿತ್ತು. ನಿಜವಾಗಿಯೂ ಯೆರೂಸಲೇಮಿನ ಸಮೀಪದಲ್ಲಿ ಯಾವ ಅತಿ ಎತ್ತರದ ಬೆಟ್ಟವಿರುವುದಿಲ್ಲ; ಪ್ರಪಂಚದ ರಾಜ್ಯಗಳು ಮತ್ತು ಅವುಗಳ ವೈಭವಗಳನ್ನೆಲ್ಲಾ ಕಾಣುವಷ್ಟು ಎತ್ತರದ ಬೆಟ್ಟವು ಪ್ರಪಂಚದಲ್ಲಿಯೇ ಇರುವುದಿಲ್ಲ. ಸೈತಾನನು ನಮ್ಮ ಕರ್ತನನ್ನು ಮಾನಸಿಕವಾಗಿ ಅತ್ಯುನ್ನತವಾದ ಒಂದು ಸಾಂಕೇತಿಕ ಬೆಟ್ಟಕ್ಕೆ (ರಾಜ್ಯಕ್ಕೆ) ಕರೆದುಕೊಂಡು ಹೋದನು. ಆತನು ಕರ್ತನ ಮುಂದೆ ಲೋಕದಾದ್ಯಂತ ತನಗಿರುವ (ಸೈತಾನನಿಗೆ) ರಾಜ್ಯಾಧಿಕಾರ ಬಲಗಳ ಹಾಗೂ ಸಮಸ್ತ ಪ್ರಜೆಜನಾಂಗಗಳ ಮೇಲಿರುವ ಬಹುಮಟ್ಟಿನ ತನ್ನ ಹಿಡಿತದ ವಿಷಯವಾಗಿ ಒಂದು ಚಿತ್ರಣವನ್ನು ತೋರಿಸಿದನು; ಇದನ್ನು ನಮ್ಮ ಕರ್ತನು ನಂತರದಲ್ಲಿ ಒಪ್ಪಿಕೊಂಡು ಸೈತಾನನನ್ನು "ಇಹಲೋಕಾಧಿಪತಿ" ಎಂದು ಸೂಚಿಸಿ ಹೇಳಿದ್ದಾನೆ. ಪ್ರಪಂಚದಾದ್ಯಂತವಿರುವ ತನ್ನ ಪ್ರಭಾವಾಧಿಕಾರಗಳ ಒಂದು ಸಮಗ್ರ ನೋಟವನ್ನು ತೋರಿಸಿದ ಉದ್ದೇಶವು ಸೈತಾನನ ಸ್ನೇಹ ಸಹಕರಿಸುವಿಕೆಗಳು ಬಹು ಬೆಲೆಯುಳ್ಳದ್ದೆಂದೂ ಅಲ್ಲದೆ ತನ್ನ ಕಾರ್ಯದಲ್ಲಿ ಸಫಲನಾಗಲು ಅತ್ಯಗತ್ಯವಾಗಿ ನಮ್ಮ ವಿಮೋಚಕನಿಗೆ ಇವುಗಳು ಬೇಕಾದವುಗಳೆಂದೂ ಮನವರಿಕೆ ಮಾಡಿಕೊಡುವ ಸಲುವಾಗಿತ್ತು. ಆದುದರಿಂದ ಈ ಒಂದು ವಿಶೇಷ ಸಂದರ್ಭದಲ್ಲಿ ಸೈತಾನನು ಬಹು ಸ್ನೇಹ ಭಾವದಿಂದ ಕೂಡಿದವನಾಗಿ ತಾನು ಬಹು ಪ್ರಾಮಾಣಿಕವಾಗಿ ಆತನ ಪರಿಶ್ರಮಗಳನ್ನು ಸ್ವಾಗತಿಸಿ ಅದಕ್ಕೆ ಸಹಕರಿಸಲು ಸಿದ್ಧನೆಂಬುದನ್ನು ಸ್ಪಷ್ಟವಾಗಿ ನಮ್ಮ ಕರ್ತನಲ್ಲಿ ಹೇಳಿಕೊಂಡನು.

ಮೆಸ್ಸೀಯನು ಇಸ್ರಾಯೇಲ್ಯರ ಅರಸನೆಂಬುದನ್ನೂ ಇಸ್ರಾಯೇಲ್ಯರನ್ನು ಆಶೀರ್ವಸುವ ಅಮೂಲ್ಯ ಕಾರ್ಯ ಸಂಬಂಧವಾಗಿ ವಿಶೇಷವಾಗಿ ಹೇಳಲ್ಪಟ್ಟಿರುವುದನ್ನು ಸೈತಾನನು ನಮ್ಮ ಕರ್ತನಿಗೆ ತೋರಿಸಿಕೊಟ್ಟಿರುವ ಸಾಧ್ಯತೆಯಿದ್ದು, ಆ ಮೂಲಕವಾಗಿ ಇದರ ಒಂದು ಪ್ರಕಾಶ ಪ್ರಭಾವಗಳು ಲೋಕದ ಸಮಸ್ತ ಜನಾಂಗಗಳಿಗೆ ವಿಸ್ತರಿಕೊಳ್ಳುವುದೆಂಬುದನ್ನು ಆತನು ಒಪ್ಪಿಕೊಂಡಿರಲೂ ಬಹುದು. ಆದರೂ ಆತನ ಪ್ರಸ್ತಾವನೆಯಲ್ಲಿ ಕೇಂದ್ರೀಕೃತವಾದ ಅಂಶವು ಯೇಸುವಿಗೆ ಇಸ್ರಾಯೇಲ್ ರಾಜ್ಯಕ್ಕಿಂತಲೂ ಇನ್ನೂ ದೊಡ್ಡದಾದ ಒಂದು ರಾಜ್ಯವನ್ನು ಕೊಡುವುದರ ವಿಷಯವಾಗಿತ್ತೆಂದು ತೋರುತ್ತದೆ.

ಆತನು ಮಂಡಿಸಿದ ಸಲಹೆಯೆಂದರೆ, ಆ ರಾಜ್ಯವು ಲೋಕದ ಸಮಸ್ತ ಜನಾಂಗಗಳನ್ನು ಒಳಗೊಂಡಿದ್ದು ಅವೆಲ್ಲವುಗಳ ಮೇಲೆ ಆತನ ನಿಯಂತ್ರಣವಿದ್ದು ಅದರಲ್ಲಿ ದೇವರು ಸಂಕಲ್ಪಿಸಿದ್ದ ಆಶೀರ್ವಾದಪೂರಿತವಾದ ಸುಧಾರಣೆಗಳನ್ನು ತರುವುದಕ್ಕೆ ಆತನು ಸಮರ್ಥನಾಗಿರಬೇಕೆಂದೂ ಆದರೆ ಅದಕ್ಕಿರುವ ಕೇವಲ ಒಂದೇ ಷರತ್ತೆಂದರೆ ಅಲ್ಲಿ ಸ್ಥಾಪನೆಯಾಗುವ ಯಾವುದೇ ರಾಜ್ಯ ಅಥವಾ ಅಧಿಕಾರಗಳಲ್ಲಿ ಸೈತಾನನಿಗೆ ಮನ್ನಣೆಯಿರಬೇಕೆಂಬುದೇ. ತಾನು ಏನು ಯೋಚಿಸಿದ್ದನೋ ಆ ಮೂಲ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಹೀಗೆ ಇದು ಒಂದು ಸದಾವಕಾಶವಾಗಿತ್ತೆಂದು ಆ ಶೋಧಕನು ಯೋಚಿಸಿದಂತೆ ತೋರುತ್ತದೆ. ಏಕೆಂದರೆ ಮರಣಾಧೀನವಾಗಿ ಹೀನಾವಸ್ಥೆಯಲ್ಲಿರುವ ಮಾನವ ಸಂತತಿಯನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವುದು ಆತನ ಮೂಲೋದ್ದೇಶವಾಗಿತ್ತೆಂದು ನಾವು ಊಹಿಸಲು ಸಾಧ್ಯವಿಲ್ಲ. ಆದರೆ ಉತ್ತಮ ತಿಳುವಳಿಕೆಯಿಂದ ಕೂಡಿದ ಒಳ್ಳೆಯ ಪ್ರತಿಭೆಯುಳ್ಳ ಜನರ ಮೇಲೆ ತಾನು ಒಡೆಯನಾಗಿ ಅಥವಾ ಆಳ್ವಿಕೆ ನಡೆಸಬೇಕೆಂಬುದು ಆತನ ಬಹು ವಿಶೇಷವಾದ ಉದ್ದೇಶವಾಗಿರಬೇಕು. ಆದುದರಿಂದ ದೇವರು ಯೋಜಿಸಿದ ಕೃಪಾಪೂರ್ಣವಾದ ಸಂಕಲ್ಪವು ಕಾರ್ಯರೂಪಕ್ಕೆ ಬರುವುದನ್ನೂ, ಅದರಲ್ಲಿ ತಾನು ಸುಧಾರಣೆ ಹೊಂದುವ ಇಚ್ಛೆಯುಳ್ಳವನಾಗಿದ್ದು ಮಾನವರ ಸುಧಾರಣಾ ಕಾರ್ಯಗಳಿಗೆ ಮುಂದಾಳುತನ ವಹಿಸುವುದಾಗಿಯೂ ಆದರೆ ಆ ಕಾರ್ಯಗಳಲ್ಲಿ ತನಗೆ ಮುಖ್ಯ ಸ್ಥಾನವಿರುವುದನ್ನು ಎಲ್ಲರೂ ಮಾನ್ಯಮಾಡಬೇಕೆಂದು ಬಯಸಿದ್ದನು. ಈ ವಿಧದಲ್ಲಿ ಅಂದರೆ ಆತನ ಪ್ರಭಾವ ಮತ್ತು ಸಹಕಾರಗಳಿಗೆ ಮಾನ್ಯತೆ ನೀಡುವುದರ ಮೂಲಕ ನಮ್ಮ ಕರ್ತನು ಆತನಿಗೆ ಅಡ್ಡಬಿದ್ದು ಆರಾಧಿಸಬೇಕೆಂದು ಅಭಿಲಾಷಿಸಿದ್ದನು. ಆದರೆ ನಮ್ಮ ಕರ್ತನು ತನಗೆ ಅಡ್ಡಬಿದ್ದು ತನ್ನನ್ನು ದೇವರಂತೆ ಆರಾಧಿಸುವನೆಂದು ಸೈತಾನನು ನಿರೀಕ್ಷಿಸಿದ್ದನೆಂದು ನಾವು ಒಂದು ಕ್ಷಣವಾದರೂ ಊಹಿಸುವಂತಿಲ್ಲ.

ಈ ಕೊನೆಯ ಶೋಧನೆಗೆ ಕೊಟ್ಟ ನಮ್ಮ ಕರ್ತನ ಉತ್ತರವು ಆತನಿಗೆ ಸೈತಾನನಲ್ಲಿ ಯಾವ ನಿಜವಾದ ಪರಿವರ್ತನೆಯ ಕಾರ್ಯವು ನಡೆದಿಲ್ಲವೆಂದೂ, ಆತನು ತನ್ನ ಕೀಳುಪ್ರವೃತ್ತಿಯ ಪ್ರಾರಂಭದಲ್ಲಿದ್ದಂತೆಯೇ ಆಗಲೂ ಮಹತ್ವಾಕಾಂಕ್ಷೆ ಸ್ವಾರ್ಥ ಚಿಂತನೆಗಳಿಂದ ತುಂಬಿದ್ದನೆಂಬ ಅಂಶದ ಪೂರ್ಣ ಅರಿವು ಉಂಟಾಗಿತ್ತೆಂಬುದನ್ನು ತೋರಿಸುತ್ತದೆ. ಅಲ್ಲದೆ ತನ್ನ ನಿಜವಾದ ಮನೋಪ್ರವೃತ್ತಿಗಳನ್ನು ಹೀಗೆ ಒಪ್ಪಿಕೊಂಡವರೊಡನೆ ಪ್ರಸ್ತಾಪವನ್ನು ಮುಂದುವರಿಸುವುದೂ ಸಹ ತಂದೆಗೆ ಅನಿಷ್ಟಾವಂತಿಕೆಯನ್ನು ತೋರಿದಂತಾಗುವುದೆಂದು ಅರಿತವನಾಗಿದ್ದನು. ಆದುದರಿಂದ ಆತನು ಹೇಳಿದ್ದು – ಸೈತಾನನೆ ನೀನು ತೊಲಗಿ ಹೋಗು. – ಅಂದರೆ ನನ್ನನ್ನು ಬಿಟ್ಟುಬಿಡು, ನನ್ನೊಡನೆ ಸಹಕರಿಸಲು ನಿನಗೆ ಸಾಧ್ಯವೇ ಆಗದು, ನನ್ನ ಕಾರ್ಯವೂ ದೇವರ ಚಿತ್ತಕ್ಕೆ ಸಂಪೂರ್ಣವಾಗಿ ಹೊಂದಿಕೆಯಾದದ್ದು. ಇದಕ್ಕೆ ವಿರುದ್ಧವಾದ ಯಾವ ಕಾರ್ಯಕ್ರಮವಿದ್ದು, ಅದರಲ್ಲಿರುವ ಕೆಲವು ವಿಶೇಷತೆಗಳು ಬಹು ತ್ವರಿತವಾಗಿ ಲೋಕವನ್ನು ಜಯಿಸುವಂತೆ ಆಕರ್ಷಕವಾಗಿ

ತೋರಿ, ಶ್ರಮಸಂಕಟಗಳಿಲ್ಲದೆಯೇ ನೀತಿ ಆಶೀರ್ವಾದಗಳಿಂದ ಕೂಡಿದ ಆಳ್ವಿಕೆಯು ಬೇಗನೆ ಸ್ಥಾಪನೆಯಾಗುವ ವಾಗ್ದಾನದ ಭರವಸೆಯಿದ್ದರೂ ಅದರಲ್ಲಿ ಭಾಗಿಯಾಗಲು ನನಗೆ ಸಾಧ್ಯವಿಲ್ಲ. ಇಬ್ಬರು ಯಜಮಾನರಿಗೆ ಸೇವೆಮಾಡಲು ನನಗಾಗದು. ಕೇವಲ ಸರ್ವಶ್ರೇಷ್ಠನಾದ ಯೆಹೋವನೊಬ್ಬನೇ ಭೂಪರಲೋಕಗಳ ಒಡೆಯನೆಂದು ಅಂಗೀಕರಿಸಲು ನನಗೆ ಸಾಧ್ಯ. ಆದುದರಿಂದ ಮಹೋನ್ನತನಾದ ಯೆಹೋವನು ನಿನಗೆ ನೇಮಿಸುವ ಅಧಿಕಾರ ಸ್ಥಾನದ ಹೊರತು ಬೇರೆ ಯಾವುದನ್ನೂ ಮಾನ್ಯಮಾಡಲು ನನಗೆ ಸಾಧ್ಯವಿಲ್ಲ; ಅಲ್ಲದೆ ಈಗಿನ ಮಹತ್ವಾಕಾಂಕ್ಷೆಯ ಭಾವವು ನಿನ್ನಲ್ಲಿ ರುವವರೆಗೂ ಆತನು ನಿನಗೆ ಯಾವುದನ್ನೂ ನೇಮಿಸುವುದಿಲ್ಲ ವೆಂಬುದು ನನಗೆ ತಿಳಿದದೆ. "ನಿನ್ನ ದೇವರಾದ ಯೆಹೋವನನ್ನು ಆರಾಧಿಸಬೇಕು" (ಭಯಭಕ್ತಿ ತೋರಿಸಬೇಕು) ಮತ್ತು ಆತನೊಬ್ಬ ನನ್ನೇ ನೀವು ಸೇವಿಸಬೇಕು. ಎಂಬ ಈ ಆಜ್ಞಾಘೋಷಣೆಯ ಅನುಸಾರವಾಗಿ ನಾನು ಕಾರ್ಯ ನಿರ್ವಹಿಸುತ್ತಿದ್ದೇನೆ.

ಇಕ್ಕಟ್ಟಾದ ಮಾರ್ಗದಲ್ಲಿರುವ ಆತನ ಹಿಂಬಾಲಕರ ಮೇಲೆರಗಿ ಬರುವಂತ ಶೋಧನೆಗಳ ನಿದರ್ಶನಗಳಿಗೆ ನಮ್ಮ ಕರ್ತನ ಈ ಶೋಧನೆಯ ಒಂದು ಮಾದರಿಯಾಗಿರುವುದೆಂದು ನಾವು ಸುಲಭವಾಗಿ ಗ್ರಹಿಸಬಹುದು. ಇದು ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಆ ಒಂದೇ ಮೂಲದಿಂದ ಬರುವುದು. ತನಗೆ ಬಾಯಂತಿರುವ ಹಲವಾರು ಜನರ ಮೂಲಕವಾಗಿ ಸೈತಾನನು ಭಕ್ತರಿಗೆ ಸತತವಾಗಿ ಹೀಗೆ ಹೇಳುತ್ತಿರುವನು – ನಿಮ್ಮ ಗುರಿಯನ್ನು ಸಾಧಿಸಲು ನೀವು ಅನುಸರಿಸುತ್ತಿರುವ ವಿಧಾನಕ್ಕಿಂತಲೂ ಬಹು ಫಲಕಾರಿಯಾದ ಒಂದು ವಿಧಾನವು ಇಲ್ಲಿದೆ, ಇದು ಕರ್ತನು ಅನುಸರಿಸಿದ ವಿಧಾನಕ್ಕಿಂತಲೂ ಬಹು ಯಶಸ್ಸಿನ ವಿಧಾನ. ಸ್ವಲ್ಪ ಓರೆಯಾಗಿ ಲೌಕಿಕ ಭಾವದೊಂದಿಗೆ ರಾಜಿಯಾಗಿರಿ, ದೇವರ ವಾಕ್ಯಗಳಿಗೂ ಕರ್ತನಾದ ಯೇಸುವಿನ ಮತ್ತು ಆತನ ಅಪೋಸ್ತಲರ ನಿದರ್ಶನಗಳಿಗೆ ನಿಮ್ಮನ್ನು ಅತಿಯಾಗಿ ಹೊಂದಿಕೆ ಮಾಡಿಕೊಳ್ಳಬೇಡಿರಿ. ನೀವು ಪ್ರಭಾವಿಗಳಾಗಿ ಸ್ವಲ್ಪ ರಾಜಕೀಯ ಗಳಲ್ಲೂ ಸೇರಿ ಸಾಮಾಜಿಕ ಸಂಘಸಂಸ್ಥೆಗಳಲ್ಲಿ ಒಂದು ಒಳ್ಳೆಯ ಹೆಸರು ಪಡೆದು ಈಗಿರುವ ಅದರ ದೌರ್ಬಲ್ಯ ಚಟಗಳ ಬಗ್ಗೆ ತಿಳಿದಿರಲು ನೀವು ಅಧಿಕವಾಗಿ ಪ್ರಾಪಂಚಿಕರಂತೆ ಇರಬೇಕು. ಇವೆಲ್ಲವುಗಳಿಗೂ ಮಿಗಿಲಾಗಿ ಈಗಿನ ಕಾಲದಲ್ಲಿ ಸತ್ಯದಿಂದ ಹೊರಡುವ ಬೆಳಕನ್ನು ಕೊಳಗದೊಳಗೆ ಮುಚ್ಚಿಡಬೇಕು. ಹೀಗಿದ್ದರೆ ಮಾತ್ರ ನೀವು ಪ್ರಭಾವಿಗಳಾಗಿ ನಿಮ್ಮ ಆಕಾಂಕ್ಷೆ ಬಯಕೆಗಳನ್ನು ಜನರ ಮುಂದೆ ಈಡೇರಿಸಿಕೊಳ್ಳಬಹುದು. ಆದರೆ ನಮ್ಮ ಪ್ರಿಯ ಒಡೆಯನು ಭರವಸೆಯಾಗಿ ನಮಗೆ ನುಡಿದಿರುವುದೇನೆಂದರೆ, ನೀವು ದೇವರಿಗೂ ಆತನ ಸಂಕಲ್ಪಗಳಿಗೂ ನಂಬಿಗಸ್ತರಾಗಿರಬೇಕು. ಅವರ ಸಂಗತಿಗಳು ಅವರ ವಿಧಾನದಂತೆಯೇ ನಡೆಯಲಿ, ಆದರೆ ಕಡೆಯಲ್ಲಿ ತಂದೆಯ ಸಂಕಲ್ಪವೇ ಅತ್ಯುತ್ತಮವಾಗಿ ತೋರುವುದು ಮಾತ್ರವಲ್ಲದೆ ಅತನ ಶ್ರೇಷ್ಠವಾದ ಉದ್ದೇಶಗಳು ನೆರವೇರುವುದು ಕೇವಲ ಈ ಯೋಜನೆಗಳಿಂದ ಮಾತ್ರವೇ ಎಂದು ಭರವಸವುಳ್ಳವ ರಾಗಿ ನೆಮ್ಮದಿಯಿಂದಿರಬಹುದು. ಅಲ್ಲದೆ ನಾವು ಆತನ ಜೊತೆ ಕೆಲಸದವರಾಗಿ ಆತನೊಂದಿಗೆ ಸಹಕಾರಿಗಳಾಗಬೇಕಿದ್ದಲ್ಲಿ ಆತನೊಬ್ಬನೇ ನಮ್ಮ ಒಡೆಯನೆಂಬುದನ್ನು ಅಂಗೀಕರಿಸಿ ಆತನಿಗೆ ಮೆಚ್ಚಿಕೆಯಾದವುಗಳನ್ನು ಮಾಡುವಲ್ಲಿ ಏಕಮನಸ್ಸುಳ್ಳ ವರಾಗಿರಬೇಕು.

ತನ್ನ ಕಾರ್ಯವನ್ನು ನೆರವೇರಿಸಲು ತಂದೆಯು ತೋರಿಸಿದ ಸ್ವಾರ್ಥ ತ್ಯಾಗದಿಂದ ಕೂಡಿದ ಇಕ್ಕಟ್ಟಾದ ಮಾರ್ಗದ ವಿಧಾನವನ್ನು ಬಿಟ್ಟು ಬೇರೆ ಯಾವುದೇ ಮಾರ್ಗವನ್ನು ಸಂಪೂರ್ಣವಾಗಿ ನಿರಾಕರಿಸಿದುದು ನಮ್ಮ ಕರ್ತನಿಗೆ ನಿಜವಾಗಿಯೂ ದೊರಕಿದ ಒಂದು ವಿಶೇಷವಾದ ಜಯ. ನಮ್ಮ ಕರ್ತನು ಯೆಹೋವನ ನುಡಿಗಳಿಗೂ ಆತನ ಆತ್ಮಕ್ಕೂ ಎಷ್ಟು ನಿಷ್ಠೆಯುಳ್ಳವನಾಗಿದ್ದನೆಂದರೆ, ಆತನ ಮೇಲೆ ಅಥವಾ ಆತನ ಕಾರ್ಯಗಳ ಮೇಲೆ ತನಗೆ ಯಾವ ಹಿಡಿತವೂ ಸಾಧ್ಯವಾಗದೆಂದು ಕಂಡುಕೊಂಡು ಶೋಧಕನು ಆತನನ್ನು ಬಿಟ್ಟು ಹೋದನು. ಹಾಗೂ ಅನಂತರದಲ್ಲಿ ಶೋಧನೆಗಳು ಮುಕ್ತಾಯವಾಗಿರಲು ದೇವದೂತರು ಬಂದು ಅತನನ್ನು ಉಪಚರಿಸಿದರೆಂದು ನಾವು ಓದುತ್ತೇವೆ. ನಿಸ್ಸಂಶಯವಾಗಿಯೂ ಅವರು ಆತನಿಗೆ ತಾನು ದೈವಿಕ ಶಕ್ತಿಯಿಂದ ತನಗಾಗಿ ಪಡೆಯಲು ನಿರಾಕಸಿದ್ದ ಪುನಶ್ಚೇತನಗೊಳಿಸುವಂಥ ಆಹಾರವನ್ನು ಆತನಿಗೆ ಒದಗಿಸಿದರು. ನಮ್ಮ ಕರ್ತನ ಹಿಂಬಾಲಕರಿಗೂ ಇದೆ ವಿಧವಾದ ಅನುಭವಗಳಿರುವವೆಂದು ನಾವು ತಿಳಿದುಕೊಳ್ಳಬಹುದು. ಈ ಯಶಸ್ಸಿನೊಂದಿಗೆ ಅತನ ಆತ್ಮದಲ್ಲಿ ಪಾಲುಗಾರರಾಗಿ ಹೃದಯದಲ್ಲಿ ಪುನಶ್ಚೇತನಗೊಂಡು ಮುಂದಿನ ಶೋಧನೆಯನ್ನು ಎದುರಿಸಲು ಇನ್ನೂ ಬಲಗೊಳ್ಳುವ ಆಶೀರ್ವಾದವು ನಮ್ಮ ಕರ್ತನಿಂದ ನಮಗೆ ಲಭಿಸುವುದು.

ನಮಗೆ ಇಲ್ಲಿರುವ ಇನ್ನೊಂದು ಪಾಠವೆಂದರೆ, ಶೋಧನೆಯು ಪಾಪದ ಸೂಚನೆಯಲ್ಲ, ನಮ್ಮ ಕರ್ತನು ಶೋಧನೆಗೆ ಒಳಗಾದರೂ ಪಾಪ ಮಾತ್ರ ಮಾಡಲಿಲ್ಲವೆಂಬಂತೆ ಆತನ ಸಹೋದರರೂ ಆತನ ನಿದರ್ಶನವನ್ನು ಅನುಸರಿಸಿ ಶುದ್ಧ ಹೃದಯ ಶುದ್ಧ ಮನಸ್ಸುಳ್ಳವರಾಗಿ ಶುದ್ಧವಾದ ಉದ್ದೇಶವುಳ್ಳವರಾಗಿ ಕೇವಲ ತಂದೆಯ ಚಿತ್ತವನ್ನು ಬಯಸಿದರೆ ಅವರಲ್ಲಿಯೂ ಇದೇ ರೀತಿಯಾಗಿರುವುದು. ಶೋಧನೆಯಲ್ಲಿ ಸೋತುಹೋದರೆ ಮಾತ್ರ ಪಾಪವು ಬರಲು ಸಾಧ್ಯ. ತಪ್ಪನ್ನು ಮಾಡಿದಾಗ (ತಿದ್ದಿಕೊಳ್ಳಲು) ಹಿಂದುಮುಂದು ನೋಡಿದಲ್ಲಿ ಅದು ಶೋಧನೆಯ ಬಲವನ್ನು ಹೆಚ್ಚಿಸುವುದಾಗಿ ಕಂಡುಬರುತ್ತದೆಂಬು ದನ್ನು ನಾವು ಮರೆಯದಿರೋಣ. ಸೈತಾನನು ಶೋಧಕನಾಗಿ ನಮ್ಮನ್ನು ತಪ್ಪು ದಾರಿ ತಪ್ಪು ನಡವಳಿಕೆಯಲ್ಲಿ ಸಿಕ್ಕಿಸುವ ಉಪಾಯಗಳನ್ನು ಕಲ್ಪಿಸುತ್ತಿರುವನು. ಆದರೆ ದೇವರು ಹಾಗಲ್ಲ "ಆತನು ಯಾರನ್ನೂ ಪಾಪಕ್ಕೆ ಪ್ರೇರೇಪಿಸುವುದಿಲ್ಲ" (ಯಾಕೋಬ1:13) ದೇವರು ಶೋಧಕನನ್ನು ಮತ್ತು ಆತನ ರಾಯಭಾರಿಗಳನ್ನು ತನ್ನ ಜನರ ಮೇಲೆ ಆಕ್ರಮಣ ಮಾಡಲು ಬಿಟ್ಟರೂ ಸಹ ಅದರಲ್ಲಿ ಅವರು ಸಿಕ್ಕಿಬೀಳುವ ಉದ್ದೇಶಕ್ಕಾಗಿರದೆ, ಅದಕ್ಕೆ ತದ್ವಿರುದ್ಧವಾಗಿ, ಅವರ ಪರೀಕ್ಷಾರ್ಥವಾಗಿರುವ ಅಂತಹ ಪರಿಶೋಧನೆಗಳ ಮೂಲಕ ಅವರು ಬಲಗೊಂಡು ಒಳ್ಳೆಯ ಗುಣಗಳಿಂದ ಕೆಡಕು ಎದುರಿಸುವುದನ್ನು ಅಭ್ಯಾಸಿಸಿ ಅದರಿಂದ ಆ ಗುಣಗಳನ್ನು ವೃದ್ಧಿಪಡಿಸಿಕೊಳ್ಳುವ ಸಲುವಾಗಿರುವುದು. ದೇವರು ನಮ್ಮ ಶಕ್ತಿಯನ್ನು ಮೀರುವ ಶೋಧನೆಯನ್ನು ನಮಗೆ ಬರಗೊಡಿಸದೆ ನಾವು ಅದನ್ನು ಸಹಿಸುವುದಕ್ಕೆ ಶಕ್ತರಾಗುವಂತೆ ಶೋಧನೆಯಾಗುತ್ತಲೇ ತಪ್ಪಿಸಿಕೊಳ್ಳುವ ಮಾರ್ಗವನ್ನು ಸಿದ್ಧಮಾಡುವನು ಎಂದು ಸತ್ಯವೇದವು ನೀಡುವ ಭರವಸೆಯನ್ನು ಸಹ ನಾವು ಬಲ ಹೊಂದುವುದಕ್ಕಾಗಿ ನೆನೆಯೋಣ.

ಈ ಒಂದು ದೇವಾನುಗ್ರಹವನ್ನು ಬಳಸಿಕೊಳ್ಳಲು ನಮಗೆ ಬೇಕಾಗಿರುವುದು ಕೇವಲ ನಂಬಿಕೆ ಮಾತ್ರ. ನಾವು ಈ ವಿಷಯಗಳಲ್ಲಿ ನಮ್ಮ ನಂಬಿಕೆಯನ್ನು ಅಧಿಕವಾಗಿ ಅಭ್ಯಾಸಿಸಿದಷ್ಟೂ ನಮಗೆ ಅವು ಇನ್ನೂ ಅಧಿಕವಾಗಿ ಬಂದು ಅವುಗಳಲ್ಲಿ ನಾವು ಕರ್ತನನ್ನೂ ಮತ್ತು ಆತನ ಅತ್ಯಧಿಕವಾದ ಶಕ್ತಿಯನ್ನೂ ಆಶ್ರಯಿಸಿಕೊಂಡು ಬಲಗೊಳ್ಳುವೆವು. ಹೀಗೆ ನಾವು ದೇವರ ಕೃಪೆಯಿಂದ ಮತ್ತು ನಮ್ಮ ಒಡೆಯನ ಸಹಾಯದಿಂದ ಜಯಶಾಲಿಗಳಾಗುವೆವು. ಅಂದರೆ ನಮ್ಮನ್ನು ಪ್ರೀತಿಸಿ ನಮ್ಮನ್ನು ತನ್ನ ಸ್ವರಕ್ತದಿಂದ ಕೊಂಡುಕೊಂಡಾತನ ಮೂಲಕವಾಗಿ ನಾವು ಜಯಹೊಂದಿ ಪೂರ್ಣ ಜಯಶಾಲಿಗಳಾಗುವೆವು.

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ. ಶ. 29, ಹಿಮಕಾಲ | ಯೂದಾಯದ ಅರಣ್ಯಪ್ರದೇಶ | ಉಪವಾಸ ಮತ್ತು ಯೇಸುವಿನ ಶೋಧನೆ | 4:1–11 | 1:12,13 | 4:1–13 | –– |
| | ಯೋರ್ದನ್ ಹೊಳೆಯ ಆಚೆಯ ಪ್ರದೇಶ | ಯೇಸುವಿನ ವಿಷಯವಾಗಿ ಸ್ನಾನಿಕನಾದ ಯೋಹಾನನು ಕೊಟ್ಟ ಸಾಕ್ಷಿ | –– | –– | –– | 1:15, 29–34 |

## ಮತ್ತಾಯ 4:1–11

ಆಗ ಯೇಸು ಸೈತಾನನಿಂದ ಶೋಧಿಸಲ್ಪಡುವುದಕ್ಕಾಗಿ ಆತ್ಮನು ಆತನನ್ನು ಅಡವಿಗೆ ಒಯ್ದನು. ಆತನು ನಾಲ್ವತ್ತು ದಿವಸ ಹಗಲಿರುಳು ಉಪವಾಸವಿದ್ದ ತರುವಾಯ ಆತನಿಗೆ ಹಸಿವಾ ಯಿತು. ಆಗ ಆ ಶೋಧಕನು ಆತನ ಬಳಿಗೆ ಬಂದು––ನೀನು ದೇವರ ಮಗನಾಗಿದ್ದರೆ ಈ ಕಲ್ಲುಗಳು ರೊಟ್ಟಿಯಾಗುವಂತೆ ಅಪ್ಪಣೆಕೊಡು ಎಂದು ಹೇಳಲು ಅತನು–ಮನುಷ್ಯನು ರೊಟ್ಟಿತಿಂದ ಮಾತ್ರದಿಂದ ಬದುಕುವುದಿಲ್ಲ, ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುವನು ಎಂದು ಬರೆದದೆ ಅಂದನು. ಅಗ ಸೈತಾನನು ಆತನನ್ನು ಪರಿಶುದ್ಧಪಟ್ಟಣಕ್ಕೆ ಕರಕೊಂಡು ಹೋಗಿ ದೇವಾಲಯದ ಶಿಖರದ ಮೇಲೆ ನಿಲ್ಲಿಸಿ ಆತನಿಗೆ––ನೀನು ದೇವರ ಮಗನಾಗಿದ್ದರೆ ಕೆಳಕ್ಕೆ ದುಮುಕು; ಆತನು ನಿನ್ನ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆಕೊಡುವನು; ನಿನ್ನ ಕಾಲು ಕಲ್ಲಿಗೆ ತಗಲೀತೆಂದು ಅವರು ನಿನ್ನನ್ನು ಕೈಗಳಲ್ಲಿ ಎತ್ತಿಕೊಳ್ಳುವರು ಎಂಬದಾಗಿ ಬರೆದದೆಯಲ್ಲಾ ಎಂದು ಹೇಳಿದನು. ಅದಕ್ಕೆ ಯೇಸು––ನಿನ್ನ ದೇವರಾದ ಕರ್ತನನ್ನು ಪರೀಕ್ಷಿಸಬಾರದು ಎಂಬದಾಗಿ ಸಹ ಬರೆದದೆ ಅಂದನು. ಬಳಿಕ ಸೈತಾನನು ಆತನನ್ನು ಬಹಳ ಎತ್ತರವಾದ ಬೆಟ್ಟಕ್ಕೆ ಕರಕೊಂಡು ಹೋಗಿ ಪ್ರಪಂಚದ ಎಲ್ಲಾ ರಾಜ್ಯಗಳನ್ನೂ ಅವುಗಳ ವೈಭವವನ್ನೂ ಅತನಿಗೆ ತೋರಿಸಿ––ನೀನು ನನಗೆ ಸಾಷ್ಟಾಂಗ ನಮಸ್ಕಾರ ಮಾಡಿದರೆ ಇವುಗಳನ್ನೆಲ್ಲಾ ನಿನಗೆ ಕೊಡುವೆನು ಅಂದನು. ಯೇಸು ಅವನಿಗೆ––ಸೈತಾನನೇ, ನೀನು ತೊಲಗಿ ಹೋಗು, ನಿನ್ನ ದೇವರಾಗಿರುವ ಕರ್ತನಿಗೆ ಅಡ್ಡಬಿದ್ದು ಆತನೊಬ್ಬನನ್ನೇ ಆರಾಧಿಸಬೇಕು ಎಂಬದಾಗಿ ಬರೆದದೆ ಎಂದು ಹೇಳಿದನು. ಆಗ ಸೈತಾನನು ಆತನನ್ನು ಬಿಟ್ಟುಬಿಟ್ಟನು. ಮತ್ತು ದೇವದೂತರು ಬಂದು ಆತನಿಗೆ ಉಪಚಾರ ಮಾಡಿದರು.

## ಮಾರ್ಕ 1:12–13

ಕೂಡಲೆ ಯೇಸು ದೇವರಾತ್ಮ ಪ್ರೇರಿತಾನಾಗಿ ಅಡವಿಗೆ ಹೋದನು. ಆತನು ನಾಲ್ವತ್ತು ದಿವಸ ಅಡವಿಯಲ್ಲಿ ಮೃಗಗ ಳೊಂದಿಗೆ ಇದ್ದು ಸೈತಾನನಿಂದ ಶೋಧಿಸಲ್ಪಡುವವನಾದನು; ಮತ್ತು ದೇವದೂತರು ಆತನಿಗೆ ಉಪಚಾರಮಾಡಿದರು.

## ಲೂಕ 4:1–13

ಯೇಸು ಪವಿತ್ರಾತ್ಮಭರಿತನಾಗಿ ಯೊರ್ದನ್ ಹೊಳೆಯಿಂದ ಹಿಂದಿರುಗಿ ದೇವರಾತ್ಮನಿಂದ ನಾಲ್ವತ್ತು ದಿವಸ ಅಡವಿಯಲ್ಲಿ ನಡಿಸಲ್ಪಡುತ್ತಾ ಸೈತಾನನಿಂದ ಶೋದಿಸಲ್ಪಟ್ಟನು. ಆ ದಿವಸಗಳಲ್ಲಿ ಆತನು ಏನೂ ತಿನ್ನಲಿಲ್ಲ. ಅವು ಕಳೆದ ಮೇಲೆ ಆತನಿಗೆ ಹಸಿವಾ ಯಿತು. ಆಗ ಸೈತಾನನು ಆತನಿಗೆ––ನೀನು ದೇವರ ಮಗನಾಗಿದ್ದರೆ ಈ ಕಲ್ಲು ರೊಟ್ಟಿಯಾಗುವಂತೆ ಇದಕ್ಕೆ ಅಪ್ಪಣೆ ಕೊಡು ಎಂದು ಹೇಳಲು ಯೇಸು ಅವನಿಗೆ–ಮನುಷ್ಯನು ರೊಟ್ಟಿ ತಿಂದ ಮಾತ್ರದಿಂದ ಬದುಕುವುದಿಲ್ಲ ಎಂದು ಬರೆದದೆ ಎಂತ ಉತ್ತರ ಕೊಟ್ಟನು. ಬಳಿಕ ಸೈತಾನನು ಆತನನ್ನು ಮೇಲಕ್ಕೆ ಕರೆದುಕೊಂಡು ಹೋಗಿ ಕ್ಷಣಮಾತ್ರದಲ್ಲಿ ಲೋಕದ ಎಲ್ಲಾ ರಾಜ್ಯಗಳನ್ನು ಆತನಿಗೆ ತೋರಿಸಿ––ಇವೆಲ್ಲವುಗಳ ಅಧಿಕಾರವನ್ನೂ ಇವುಗಳ ವೈಭವ ವನ್ನೂ ನಿನಗೆ ಕೊಡುವೆನು; ಇದೆಲ್ಲಾ ನನಗೆ ಕೊಟ್ಟದೆ, ಇದನ್ನು ನನ್ನ ಮನಸ್ಸು ಬಂದವನಿಗೆ ಕೊಡುತ್ತೇನೆ; ನೀನು ನನ್ನ ಮುಂದೆ ಅಡ್ಡಬಿದ್ದರೆ ಇದೆಲ್ಲಾ ನಿನ್ನದಾಗುವದು ಎಂದು ಆತನಿಗೆ ಹೇಳಿದನು. ಅದಕ್ಕೆ ಯೇಸು––ನಿನ್ನ ದೇವರಾಗಿರುವ ಕರ್ತನಿಗೆ ಅಡ್ಡಬಿದ್ದು ಆರಾಧಿಸಬೇಕು ಎಂಬದಾಗಿ ಬರೆದದೆ ಎಂದು ಉತ್ತರ ಕೊಟ್ಟನು. ಇದಲ್ಲದೆ ಅವನು ಆತನನ್ನು ಯೆರೂಸಲೇಮಿಗೆ ಕರೆದು ಕೊಂಡು ಹೋಗಿ ದೇವಾಲಯದ ಶಿಖರದ ಮೇಲೆ ನಿಲ್ಲಿಸಿ ಆತನಿಗೆ––ನೀನು ದೇವರ ಮಗನಾಗಿದ್ದರೆ ಇಲ್ಲಿಂದ ಕೆಳಕ್ಕೆ ದುಮುಕು. ನಿನ್ನನ್ನು ಕಾಯುವದಕ್ಕೆ ಆತನು ನಿನ್ನ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆ ಕೊಡುವನು; ಮತ್ತು ನಿನ್ನ ಕಾಲು ಕಲ್ಲಿಗೆ ತಗಲೀತೆಂದು ಅವರು ನಿನ್ನನ್ನು ಕೈಗಳಲ್ಲಿ ಎತ್ತಿಕೊಳ್ಳುವರು ಎಂಬದಾಗಿ ಬರೆದದೆಯಲ್ಲಾ ಎಂದು ಹೇಳಿದನು. ಅದಕ್ಕೆ ಯೇಸು – ನಿನ್ನ ದೇವರಾಗಿರುವ ಕರ್ತನನ್ನು ಪರೀಕ್ಷಿಸಬಾರ ದೆಂದು ಹೇಳಿಯದೆ ಎಂತ ಉತ್ತರ ಕೊಟ್ಟನು. ಸೈತಾನನು ಸಕಲ ವಿಧವಾದ ಶೋಧನೆಯನ್ನು ಮುಗಿಸಿ ಸ್ವಲ್ಪಕಾಲ ಆತನನ್ನು ಬಿಟ್ಟು ಹೊದನು.

## ಯೋಹಾನ 1:15,29–34

ಯೋಹಾನನು ಆತನ ವಿಷಯವಾಗಿ ಸಾಕ್ಷಿಕೊಡುತ್ತಾನೆ; ಹೇಗೆಂದರೆ––ನನ್ನ ಹಿಂದೆ ಬರುವವನು ನನಗಿಂತ ಮೊದಲೇ

ಇದ್ದದರಿಂದ ನನಗೆ ಮುಂದಿನವನಾದನು ಎಂಬದಾಗಿ ನಾನು ಹೇಳಿದವನು ಈತನೇ ಎಂದು ಕೂಗಿ ಹೇಳಿದ್ದಾನೆ. ಮರುದಿನ ಯೋಹಾನನು ತನ್ನ ಕಡೆಗೆ ಬರುವ ಯೇಸುವನ್ನು ನೋಡಿ – ಅಗೋ [ಯಜ್ಞಕ್ಕೆ] ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು. ನನ್ನ ಹಿಂದೆ ಬರುವವನು ನನಗಿಂತ ಮೊದಲೇ ಇದ್ದದರಿಂದ ನನಗೆ ಮುಂದಿನವನಾದನು ಎಂದು ನಾನು ಹೇಳಿದ ಮಾತು ಈತನ ವಿಷಯವಾಗಿಯೇ. ನನಗೂ ಆತನ ಗುರುತಿರಲಿಲ್ಲ; ಆದರೆ ಆತನನ್ನು ಇಸ್ರಾಯೇಲ್ಯರಿಗೆ ತಿಳಿಯಪಡಿಸುವದಕ್ಕೋಸ್ಕರವೇ ನಾನು ನೀರಿನ ಸ್ನಾನವನ್ನು ಮಾಡಿಸುವವನಾಗಿ ಬಂದೆನು ಅಂದನು. ಇದಲ್ಲದೆ ಯೋಹಾನನು ಸಾಕ್ಷಿಕೊಟ್ಟು ಹೇಳಿದ್ದೇನೆಂದರೆ ದೇವರಾತ್ಮವು ಪಾರಿವಾಳದಂತೆ ಆಕಾಶದಿಂದ ಇಳಿಯುವದನ್ನು ನೋಡಿದೆನು. ಅದು ಆತನ ಮೇಲೆ ನೆಲೆಗೊಂಡಿತು. ನನಗೂ ಆತನ ಗುರುತಿರಲಿಲ್ಲ; ಆದರೆ ನೀರಿನ ಸ್ನಾನವನ್ನು ಮಾಡಿಸುವದಕ್ಕೆ ನನ್ನನ್ನು ಕಳುಹಿಸಿದಾತನು– ಯಾವನ ಮೇಲೆ ಆತ್ಮವು ಇಳಿದುಬಂದು ಇರುವುದನ್ನು ನೀನು ನೋಡುವಿಯೋ ಆತನೇ ಪವಿತ್ರಾತ್ಮದ ಸ್ನಾನವನ್ನು ಕೊಡುವವನು ಎಂದು ತಾನೇ ನನಗೆ ಹೇಳಿದನು. ನಾನು ಅದನ್ನು ನೋಡಿ ಈತನೇ ದೇವಕುಮಾರನೆಂದು ಸಾಕ್ಷಿಕೊಟ್ಟಿದ್ದೇನೆ ಅಂದನು.

# "ಕರ್ತನ ದಾರಿಯನ್ನು ನೆಟ್ಟಗೆ ಮಾಡುವುದು"

**ರೀಪ್ರಿಂಟ್ ಪುಟ 4112**

## ಯೋಹಾನ 1:19–34

**"ಅಗೋ [ಯಜ್ಞಕ್ಕೆ] ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು"**

ನಮ್ಮ ಕರ್ತನು ತನ್ನ ಮುಂದೂತನ ವಿಷಯವಾಗಿ ಪ್ರಕಟಿಸಿದ್ದುದು: "ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಸ್ನಾನಿಕನಾದ ಯೋಹಾನನಿಗಿಂತ ದೊಡ್ಡ ಪ್ರವಾದಿ ಎದ್ದಿಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ." ಪ್ರವಾದಿ ಎಂಬ ಶಬ್ದದ ಭಾವಾರ್ಥ "ಪ್ರಕಟಿಸುವವನು", ಅಂದರೆ ಮುಂದಿನ ಸಂಗತಿಗಳನ್ನು ಹೇಗೂ ಪ್ರಕಟಿಸಬೇಕೆಂತಲೇಯೇನಿಲ್ಲ. ದೃಷ್ಟಾಂತವಾಗಿ, ಸತ್ಯವೇದದಲ್ಲಿ ಪ್ರವಾದಿಗಳು ಹಾಗೂ ದರ್ಶಿಗಳ ವಿಷಯವಾಗಿ ಪ್ರಸ್ತಾಪಿಸಲಾಗಿದೆ, ಇಲ್ಲಿ ಎರಡನೆಯದಾಗಿ ಹೇಳಲ್ಪಟ್ಟಿರುವವರು ವಿಶೇಷವಾಗಿ ದರ್ಶನಗಳನ್ನು ನೋಡುವುದನ್ನು ಹಾಗೂ ಮುಂದೆ ನಡೆಯಲಿರುವ ಸಂಗತಿಗಳನ್ನು ಮುಂದಾಗಿ ಕಾಣುವುದನ್ನು ಸೂಚಿಸಲಾಗಿದೆ. ನಿಖರವಾಗಿ ಹೇಳುವುದಾದರೆ, ಪ್ರವಾದಿಯಾದ ವನು ಬೋಧಿಸುವವನಾಗಿ ಇಲ್ಲವೇ ಸಾರುವವನಾಗಿ ಇದ್ದರೂ ಹಲವು ಸಂದರ್ಭಗಳಲ್ಲಿ ಈ ಎರಡೂ ಗುಣಗಳು ಒಬ್ಬನೇ ವ್ಯಕ್ತಿಯಲ್ಲಿ ಜತೆಗೂಡಿರುವುದು. ಸ್ನಾನಿಕನಾದ ಯೋಹಾನನ ಸಂಗತಿಯೂ ಹೀಗೆಯೇ ಇತ್ತು. ಜನರು ಮಾನಸಾಂತರ ಹೊಂದಬೇಕೆಂಬ ಮತ್ತು ಇತರ ಮುಖ್ಯವಾದ ಸಂದೇಶವನ್ನು ಅವರಿಗೆ ಸಾರಿ ಹೇಳುವದಲ್ಲದೆ ಆತನು ಮುಂದಾಗುವ ಸಂಗತಿಯನ್ನು, ದೃಷ್ಟಾಂತವಾಗಿ, ನಮ್ಮ ಕರ್ತನು ಲೋಕದ ಪಾಪವನ್ನು ನಿವಾರಣೆಮಾಡಲು ದೇವರು ನೇಮಿಸಿರುವ ಯಜ್ಞದ ಕುರಿಮರಿ ಎನ್ನುವುದನ್ನು ಮುಂತಿಳಿಸಿದನು. ಕರ್ತನು ಜನರಿಗೆ ಪವಿತ್ರಾತ್ಮದಲ್ಲಿಯೂ ಮತ್ತು ಬೆಂಕಿ ಯಲ್ಲಿಯೂ ಸ್ನಾನಮಾಡಿಸುವ ನೆಂದು ಸಹ ಸಾರಿ ಹೇಳಿದನು. ಯೋಹಾನನಿಗಿಂತಲೂ ದೊಡ್ಡ ಪ್ರವಾದಿ ಇರಲಿಲ್ಲ ಏಕೆಂದರೆ ನಮ್ಮ ಕರ್ತನ ವಿಷಯವಾದ ಈ ಸೇವೆಗಿಂತಲೂ ಹೆಚ್ಚು ಮುಖ್ಯವಾದ ಸೇವೆಯನ್ನು ಬೇರೆ ಯಾವ ಪ್ರವಾದಿಗಳಿಗೂ ವಹಿಸಿಕೊಟ್ಟಿರಲಿಲ್ಲ. ಮೆಸ್ಸೀಯನ ಬರುವಿಕೆ, ಕನ್ಯೆಯ ಮೂಲಕ ವಾದ ಆತನ ಜನನ, ಕುರಿಯಂತೆ ವಧ್ಯಸ್ಥಾನಕ್ಕೆ ಒಯ್ಯಲ್ಪಡುವುದು, ಅತನ ಶಿಲುಬೆಯ ಮರಣ, ಮುಂತಾದವುಗಳನ್ನು ಇತರರು ಸಾರಿದರಾದರೂ ದೇವಕುಮಾರ ನಾದ ಕ್ರಿಸ್ತ ಯೇಸುವನ್ನು ಮೊದಲು ನೇರವಾಗಿ ಪ್ರಕಟಿಸುವ ಅಥವಾ ಸಾರುವ ಬಹು ಗೌರವಯುತವಾದ ಸೇವೆಯನ್ನು ಯೋಹಾನನಿಗೆ ಕೊಡಲಾಯಿತು.

ಯೋಹಾನನಿಂದ ತುಂಬಲ್ಪಟ್ಟ ಈ ಗೌರವಯುತ ಸ್ಥಾನದ ವಿಷಯವಾಗಿ ನಾವು ಆಲೋಚಿಸುವಾಗ ಈ ವಿಷಯದ ಬಗ್ಗೆ ಗುರುವು (ಯೇಸುವು) ಹೇಳಿದ ಈ ಮಾತನ್ನು ನೆನೆಯೋಣ– "ಆದರೂ ಪರಲೋಕರಾಜ್ಯದಲ್ಲಿರುವ ಚಿಕ್ಕವನು ಅವನಿಗಿಂತಲೂ ದೊಡ್ಡವನೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ." (ಮತ್ತಾಯ 11:11) ಅಪೋಸ್ತಲರಿಗೆ ಹಾಗೂ ಅವರ ಕಾಲದ ನಂತರದಲ್ಲಿ ಅವರ ಮಾತಿನ ಆಧಾರದ ಮೇಲೆ ಕರ್ತನನ್ನು ನಂಬಿ ತಮ್ಮ ವಿಶ್ವಾಸ ಪ್ರತಿಷ್ಠೆಗಳ ಮೂಲಕವಾಗಿ ಆತನೊಡನೆ ಅತಿ ಮುಖ್ಯವಾದ ಸಂಬಂಧಕ್ಕೆ ಬಂದವರಿಗೆ ದೇವರು ನೀಡಿರುವ ಗೌರವಸ್ಥಾನದ ವಿಷಯವಾಗಿ ಎಂಥಾ ಒಂದು ಚಿಂತನೆಯು ಇಲ್ಲಿರುವುದು. ದೇವರ ರಾಯಭಾರಿಗಳಾಗಿರುವ ಗೌರವದ ಬಗ್ಗೆ ಎಷ್ಟರ ಮಟ್ಟಿಗೆ ನಮಗೆ ಗ್ರಹಿಕೆಯಾಗಿರುವುದೋ ಅಷ್ಟರ ಮಟ್ಟಿಗೂ ನಮಗೆ ದೊರೆತಿರುವ ಅವಕಾಶ ಮತ್ತು ಸವಲತ್ತುಗಳನ್ನು ಉಪಯೋಗಿಸುವುದರಲ್ಲಿಯೂ ನಂಬಿಗಸ್ತರಾಗಿರೋಣ. ಶರೀರ ಸಂಬಂಧದಲ್ಲಿ ಬಂದ ಕರ್ತನನ್ನು ಪ್ರಕಟಿಸುವ ಗೌರವವು ಯೋಹಾನನದಾಗಿತ್ತು. ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸಲಿರುವ ಮನುಷ್ಯಕುಮಾರನ ಪ್ರತ್ಯಕ್ಷತೆ ಹಾಗೂ ಆತನ ಮಹಿಮೆಯುಳ್ಳ ಆಳ್ವಿಕೆಗಳು ಆರಂಭವಾಗಲಿರುವುದನ್ನು ಸಾರುವ ಅವಕಾಶ ನೀಡಲ್ಪಟ್ಟಿರುವುದು ನಮಗೆ ಲಭಿಸಿರುವ ಒಂದು ವಿಶೇಷ ಗೌರವ. ದೇವರ ಚಿತ್ತದಿಂದ ಇದರ ದೆಸೆಯಾಗಿ ನಾವು ಸೆರೆಗೆ ಹೋಗಬೇಕಾದರೂ, ಸಾವನ್ನು ಹೊಂದಬೇಕಾದರೂ, ತಲೆ ಹೊಯ್ಯಿಸಿಕೊಳ್ಳಬೇಕಾಗಿ ಬಂದರೂ ಈ ವಿಷಯದಲ್ಲಿ ನಾವು ನಂಬಿಗಸ್ತರಾಗಿರೋಣ.

ಯೋಹಾನನು ಸಾರುತ್ತಿದ್ದುದು–"ಪರಲೋಕರಾಜ್ಯವು ಸಮೀಪವಾಯಿತು; ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು", ಅಂದರೆ ಮಾನಸಾಂತರ ಹೊಂದಿ ಅದಕ್ಕೆ ಸಿದ್ಧರಾಗಿರೆಂದು. ನಮ್ಮ ಕರ್ತನು ಇಸ್ರಾಯೆಲ್ಯರಿಗೆ ಸುಗ್ಗಿಯ ಬೆಳೆಯುನ್ನು ಕೊಯ್ಯುವವನಂತಿದ್ದು ಗೋದಿ ಕಾಳನ್ನು ತನ್ನ ಕಣಜಕ್ಕೆ ತುಂಬಿಕೊಂಡು ಹೊಟ್ಟನ್ನು ಬೆಂಕಿಯಲ್ಲಿ ಹಾಕುವನೆಂಬುದನ್ನು ಅವನು ಮುಂತಿಳಿಸಿದನು. ಇದೇ ಅಂಶವನ್ನು ಆತನು ಮತ್ತೆ ವ್ಯಕ್ತಪಡಿಸುವವನಾಗಿ––"ಆತನು [ನಿಮ್ಮಲ್ಲಿ ಕೆಲವರಿಗೆ] ಪವಿತ್ರಾತ್ಮದಲ್ಲಿಯೂ ಮತ್ತು [ನಿಮ್ಮಲ್ಲಿ ಬೇರೆಯವರಿಗೆ] ಬೆಂಕಿಯಲ್ಲಿಯೂ ಸ್ನಾನಮಾಡಿಸುವನು." ಎಂದು ಹೇಳಿದನು. ಈ ಪ್ರವಾದನೆಗಳು ಖಚಿತವಾದ ರೀತಿಯಲ್ಲಿ ನೆರವೇರಲ್ಪಟ್ಟಿದ್ದವು. ತನ್ನ ಶಿಷ್ಯರಿಗೆ ಹೇಳಿದಂತೆಯೇ ನಮ್ಮ ಕರ್ತನು ಆ ಜನಾಂಗದವರಲ್ಲಿ ಕೊಯ್ಲಿನ ಕಾರ್ಯವನ್ನು ನೆರವೇರಿಸಿದ್ದನು–"ನೀವು ಕಷ್ಟಮಾಡದಂತ ಬೆಳೆಯನ್ನು ಕೊಯ್ಯುವದಕ್ಕೆ ನಾನು ನಿಮ್ಮನ್ನು ಕಳುಹಿಸಿದೆನು.' ಮೂರುವರೆ ವರುಷಗಳ ಪರ್ಯಂತರ ಕರ್ತನು ಕೊಯ್ಲಿನ ಕೆಲಸವನ್ನು ಮಾಡಿ ಆ ಜನಾಂಗದವರಲ್ಲಿ ತನ್ನ ಶಿಷ್ಯರನ್ನು ಪ್ರಥಮ ಫಲವನ್ನಾಗಿ ಕೂಡಿಸಿಕೊಂಡು ಅವರ ಮೇಲೆ ಪಂಚಾಶತ್ತಮ ದಿನದಂದು ಪವಿತ್ರಾತ್ಮವನ್ನು ಸುರಿಸಿದನು. ಇದರ ನಂತರ ಹೊಟ್ಟನ್ನು ಬೆಂಕಿಯಲ್ಲಿ ಹಾಕಿ ಸುಡುವ ಬೆಂಕಿಯ ಸ್ನಾನದ ಮುನ್ನ ಶಿಷ್ಯರು ಇತರರನ್ನು ಕೂಡಿಸಿದರು. ಆ ಬೆಂಕಿಯ ಸ್ನಾನವು ಆ ಜನಾಂಗದ ಇತಿಹಾಸವು ಮುಕ್ತಾಯವಾಗುವ ಸಮಯದಲ್ಲಿ ಅಂದರೆ ಕ್ರಿ. ಶ. 70 ರಲ್ಲಿ ನೆರವೇರಲ್ಪಟ್ಟು ಆ ಪಟ್ಟಣ ದೇವಾಲಯ ಮತ್ತು ಇಡೀ ರಾಜ್ಯ ವ್ಯವಸ್ಥೆಗಳ ಪೂರ್ಣ ನಾಶನದಲ್ಲಿ ಅಂತ್ಯವಾಯಿತು. ಹಾಗೆಯೇ ಈ ಸುವಾರ್ತಾಯುಗದ ಸುಗ್ಗಿಯ ಕಾಲದಲ್ಲಿ ಜೀವಿಸುತ್ತಿರುವವರಾಗಿ "ಪರೋಷಿಯ" ಎಂಬ ಮನುಷ್ಯಕುಮಾರನ ಪ್ರತ್ಯಕ್ಷತೆಯನ್ನು ಪ್ರಕಟಿಸುತ್ತಿರುವ ನಾವು ಹೆಸರಿಗೆ ಆತ್ಮೀಕ ಇಸ್ರಾಯೇಲ್ಯರಂತಿರುವ ಕ್ರೈಸ್ತ ಸಮುದಾಯದಲ್ಲಿ ಕೊಯ್ಲಿನ ಕೆಲಸವು ಪೂರ್ಣಗೊಳ್ಳುತ್ತಿದ್ದು ಗೋದಿಕಾಳುಗಳು ತೆರೆಯ ಆಚೆಯ ಕಡೆಯೆಂಬ ಕಣಜಕ್ಕೆ ಕೂಡಿಸಲ್ಪಡುತಿದ್ದು ಶೀಘ್ರದಲ್ಲಿ ಲೋಕದ ಮೇಲೆ, ವಿಶೇಷವಾಗಿ ಹಣಜಿ ಎಂಬ ಗುಂಪಿನ ಮೇಲೆ, ಜನಾಂಗ ಹುಟ್ಟಿದಂದಿನಿಂದ ಮೊದಲುಗೊಂಡು ಇದುವರೆಗೂ ಸಂಭವಿಸದಂಥ ಸಂಕಟವು ಬರುವದೆಂಬುದನ್ನು ಅರಿತವರಾಗಿದ್ದೇವೆ. ಇದು ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸಲು ಮೆಸ್ಸೀಯನ ರಾಜ್ಯವು ಬಲದಿಂದಲೂ ಪ್ರಭಾವದಿಂದಲೂ ಕೂಡಿ ಸ್ಥಾಪನೆಯಾಗುವುದಕ್ಕೆ ಮೊದಲು ದೇವರು ಮಾಡುವ ಸಿದ್ಧತೆಯ ಕಾರ್ಯ.

## "ನಾವು ಅಬ್ರಹಾಮನ ಮಕ್ಕಳು"

ಪಾಪವು ಯಾರನ್ನೂ ದೇವರ ರಾಜ್ಯದಲ್ಲಿ ಪಾಲನ್ನು ಹೊಂದಲು ಬಿಡುವುದಿಲ್ಲ, ಆದುದರಿಂದ ಎಲ್ಲರೂ (ತಮ್ಮ ಪಾಪಗಳಿಗೆ ಪಶ್ಚಾತ್ತಾಪ ಪಟ್ಟು) ದೇವರ ಕಡೆಗೆ ತಿರುಗಿಕೊಂಡು ಆತನೊಂದಿಗೆ ಸಂಧಾನವಾಗಿ ಜೀವನದ ಒಂದು ಹೊಸ ಪುಟವನ್ನು ತೆರೆಯಲು ಯತ್ನಿಸಬೇಕೆಂದು ಯೋಹಾನನು ಸಾರುತ್ತಿದ್ದುದು ಅಲ್ಲಿ ಕೇಳುತಿದ್ದ ದೇವರ ಪರಿಶುದ್ಧ ಜನರೆಂದು ಹೇಳಿಕೊಳ್ಳುವ ಕೆಲವರಿಗೆ ಒಂದು ಅಘಾತವಾಗಿ ತೋರಿಬಂತು. ಇವರಲ್ಲಿ ಪರಿಸಾಯರು ಲೌಕೀಕ–ಜ್ಞಾನಿಗಳಾದ ಸದ್ದುಕಾಯರು ಹೈಯರ್ ಕ್ರಿಟಿಕ್ಸ್ (ಉತ್ಕೃಷ್ಟವಾದ ವಿಮರ್ಶಕರು) ನಂಬಿಕೆಯಿಲ್ಲದವರು ಇದ್ದರು. ಕೆಲವರು ಇದನ್ನು ಕೇಳಿ ತಮ್ಮ ಪಾಪಗಳನ್ನು ಅರಿಕೆಮಾಡಿ ಮಾನಸಾಂತರ ಹೊಂದಿದರಾದರೂ ಬೇರೆಯವರು ಯೋಹಾನನ ಬೋಧನೆಗಳು ವಿಪರೀತವಾದವುಗಳು ಅಸಮಂಜಸವಾದವುಗಳೆಂದು ವಿವಾದ ಮಾಡಿದರು. ದೇವರು ಅಬ್ರಹಾಮನ ಸಂತತಿಗೆ ಆ ರಾಜ್ಯವನ್ನು ಕೊಡುವ ವಾಗ್ದಾನ ಮಾಡಿರುವನೆಂದು ಅವರು ವಾದಿಸಿದರು. ತಮ್ಮಂತೆ ಪರಿಶುದ್ಧರೂ ಯೋಗ್ಯರೂ ಅಬ್ರಹಾಮನ ಸಂತತಿಯ ಬೇರೆ ಯಾವ ಜನಾಂಗಲ್ಲಿಯಾಗಲೀ ಅಥವಾ ಬೇರೆ ಯಾರಲ್ಲೇ ಆಗಲೀ ಇರುವುದಿಲ್ಲವಾದ್ದರಿಂದ ದೇವರ ರಾಜ್ಯದ ವಾಗ್ದಾನವು ಎಲ್ಲಾ ಯೆಹೂದ್ಯರಿಗೆ, ಅವರ ಪಾವಿತ್ರ್ಯವನ್ನು ಪರಿಗಣಿಸದೆಯೇ, ಸಲ್ಲಬೇಕು. ಹೀಗಾಗಿ ಯೋಹಾನನ ಸಾಕ್ಷಿಯನ್ನು ಅಂಗೀಕರಿಸಿದವರಲ್ಲಿ ಮುಖ್ಯವಾಗಿ ತಾವು ಪಾಪಿಗಳೆಂದು ಒಪ್ಪಿಕೊಂಡಿದ್ದ ಬಡವರೇ ಹೆಚ್ಚಾಗಿದ್ದರು. ಆ ಜನಾಂಗವು ಯೋಹಾನನ ಮಾತಿಗೆ ಕಿವಿಗೊಟ್ಟು ಆತನ ಬೊಧನೆಯನ್ನು ಅಂಗೀಕರಿಸಿದ್ದಲ್ಲಿ ಅವರು ಯೇಸುವನ್ನು ನಂಬುತ್ತಿದ್ದರೆಂದು ನಮ್ಮ ಕರ್ತನು ನಮಗೆ ನುಡಿದಿರುವನು. ಅದುದರಿಂದ ನಮ್ಮ ಕರ್ತನು ಶಿಲುಬೆಯಲ್ಲಿ ಸಾಯುವ ಮೊದಲು ಆತನಿಗೆ ಶಿಷ್ಯರಾಗಿದ್ದು ಆತನ ಪುನರುತ್ಥಾನದ ಬಳಿಕ ಆತನನ್ನು ಕಾಣುವ ಭಾಗ್ಯ ಪಡೆದ ಆ 500 ಮಂದಿಯಲ್ಲಿ ಹಲವರು ಯೋಹಾನನ ಸಂದೇಶವನ್ನು ಆಲಿಸಿ ಅದಕ್ಕೆ ಲಕ್ಷ್ಯಗೊಟ್ಟವರೆಂದು ನಾವು ಸ್ಪಷ್ಟವಾಗಿ ಊಹಿಸಬಹುದು. ಪಂಚಾಶತ್ತಮ ದಿನದಂದು ಹಾಗೂ ಆ ನಂತರ ನಂಬಿಕೆಯಿಟ್ಟವರಲ್ಲಿ ದೊಡ್ಡಪಾಲು ಜನರು ಯೋಹಾನನ ಮಾತನ್ನು ಕೇಳಿ ಪಾಪ ಪರಿಹಾರ ಹೊಂದಿ ಜೀವನದಲ್ಲಿ ಮಾರ್ಪಡಲು ಆತನಿಂದ ಸ್ನಾನದೀಕ್ಷೆ ಪಡೆದವರೆಂದೂ ಸಹ ನಾವು ಭಾವಿಸಬಹುದು. ನಿಷ್ಠಾವಂತ ಹೃದಯವುಳ್ಳವರು ಆಶೀರ್ವಾದ ಹೊಂದಲು––ಅವರು ಕುಲೀನರಾಗಲೀ ಕುಲಹೀನರಾಗಲೀ, ಇಲ್ಲವೇ ಐಶ್ವರ್ಯವಂತರಾಗಲೀ ಬಡವರಾಗಲೀ ಅಥವಾ ತಮ್ಮ ಜೀವನದಲ್ಲಿ ಯಾವ ಸ್ಥಿತಿಯಲ್ಲೇ ಅವರು ಇರಲಿ––ದೇವರ ಏರ್ಪಾಡುಗಳು ಮತ್ತು ಅದರ ಕಾರ್ಯಬಾರ ಪಡೆದವರು ಈ ಕಾರ್ಯಕ್ಕೆ ಹೀಗೆ ಸಹಕರಿಸುವರು.

## ನಮ್ಮ ಕರ್ತನ ಮುಂದೂತನು

ಹಿಂದಿನ ಕಾಲಗಳಲ್ಲಿ, ಮತ್ತು ಈಗಿನ ಕಾಲದಲ್ಲೂ, ಪೂರ್ವ ದೇಶಗಳಲ್ಲಿ ದೊಡ್ಡ ವ್ಯಕ್ತಿಗಳು ತಾವು ಪ್ರಯಾಣ ಮಾಡುವಾಗ ತಮ್ಮ ಮುಂದುಗಡೆಯಲ್ಲಿ ಓಡುತ್ತಾ ದಾರಿಯನ್ನು ಸುಗಮಗೊಳಿಸಲು ಆಗಮನ–ಘೋಷಕರು ಅಥವಾ ಮುಂದೂತರು ಮುಂದಾಗಿ ಓಡುತ್ತಿದ್ದರು. ಡಾ. ಟ್ರಂಬಲ್ ಎಂಬುವರು ಒಂದು ಪೌರಾತ್ಯ ಪಟ್ಟಣದ ಬೀದಿಯನ್ನು ಹೀಗೆ ವರ್ಣಿಸಿರುವರು: "ಅರೆನಗ್ನರಾದ ಕುಂಟರು ಕುರುಡು ಬಿಕ್ಷುಕರು ನಿರುಪಯುಕ್ತ ಹೆಂಗಸರು ಹಾಗೂ ಹೊಳಪು ಬಣ್ಣದ ಬಟ್ಟೆಗಳನ್ನು ಧರಿಸಿದ್ದ ಗಂಡಸರು ಪೂರ್ಣವಾಗಿ ತುಂಬಿರುತ್ತಿದ್ದರು; ವೇಗವಾಗಿ ಸಾಗುತ್ತಿದ್ದ ಕತ್ತೆಗಳೂ ದಾರಿಯಲ್ಲಿ ಒತ್ತಾಗಿರುತ್ತಿದ್ದವು. ಈ ಗೊಂದಲದ ನಡುವೆ ಇದ್ದಕ್ಕಿದ್ದಂತೆ ತೀಕ್ಷಣವೂ ಸ್ಪಷ್ಟವೂ ಆದ ಒಂದು ಸ್ವರವು ಕೇಳಲ್ಪಟ್ಟಿತ್ತು, ಅದು "ಓ ಅಹ್! ಓ ಅಹ್!" ಅಂದರೆ ಎಚ್ಚೆತ್ತುಕೊಳ್ಳಿ ಎಂದು ಥಳಕಿನ ವಸ್ತ್ರ ತೊಟ್ಟಿದ್ದ ಒಬ್ಬ

ಏಗುಪ್ತ ಯುವಕನು ಹಗುರವಾದ ಒಂದು ಕೋಲನ್ನು ಆಡಿಸುತ್ತಾ ಓಡುತ್ತಾ ಕಿಕ್ಕಿರಿದ ಜನರಿಗೆ ಪದೇ ಪದೇ ಕೂಗಿ ಹೇಳುತ್ತಾ ತನ್ನ ಹಿಂದೆ ಬರುವವರಿಗೆ ದಾರಿ ಮಾಡಿಕೊಡುತ್ತಿದ್ದನು. ಆತನ ಹಿಂದೆ ಹತ್ತಿರದಲ್ಲೇ ಒಬ್ಬ ಸರಕಾರಿ ಅಧಿಕಾರಿಯು ಕುಳಿತಿದ್ದ ಆಕರ್ಷಕವಾದ ಕುದುರೆಗಳಿಂದ ಎಳೆಯಲ್ಪಡುತ್ತಿದ್ದ ಒಂದು ತೆರೆದ ಬಂಡಿ ಬರುತ್ತಿತ್ತು. ನಾನು ಕೈರೋ ನಗರದಲ್ಲಿರುವಾಗ ಸಾಮಾನ್ಯವಾಗಿದ್ದ ದೃಶ್ಯವೆಂದರೆ ಜನಸಂದಣಿ ರಸ್ತೆಗಳಲ್ಲಿ ಪಾಷಾಗಳ (ಅಧಿಕಾರಿಗಳು) ಗಾಡಿಗಳು, ಅದರ ಮುಂದೆ ಜೋರಾಗಿ ಕೂಗಿ ಓಡುತ್ತಾ ದಾರಿಯನ್ನು ಸುಗಮ ಮಾಡುತಿದ್ದ ಒಬ್ಬ ಅಥವಾ ಇಬ್ಬರು ಮುಂದೂತರುಗಳದು.

ಸ್ನಾನಿಕನಾದ ಯೋಹಾನನು ಮುಂದೂತನಾಗಿ ಶರೀರ ಸಂಬಂಧದಲ್ಲಿ ಬಂದ ನಮ್ಮ ಕರ್ತನಿಗೆ ಆತನ ದಾರಿಯನ್ನು ಸುಗಮಗೊಳಿಸಿ ಆತನು ಸರಿಯಾದ ರೀತಿಯಲ್ಲಿ ಅಂಗೀಕರಿಸಲ್ಪಡಲು ಆತನ ವಿಷಯವನ್ನು ಪ್ರಕಟಮಾಡಬೇಕಿತ್ತು. ಅದರೆ ಯೋಹಾನನು ಮೆಸ್ಸೀಯನಿಗೆ ದಾರಿಯನ್ನು ಸುಗಮಗೊಳಿಸಿ ಆತನ ರಾಜ್ಯ ಬರುವುದಕ್ಕೆ ಸಿದ್ಧಮಾಡುವ ವಿಷಯವಾದ ಪ್ರವಾದನೆಗಳೆಲ್ಲವನ್ನು ನೆರವೇರಿಸಲಿಲ್ಲ. ಅದರ ವಿಷಯವಾಗಿ ಹೀಗೆ ಬರೆದದೆ: "ಅರಣ್ಯದಲ್ಲಿ ಯೆಹೋವನ ದಾರಿಯನ್ನು ಸರಿಪಡಿಸಿರಿ, ಅಡವಿಯಲ್ಲಿ ನಮ್ಮ ದೇವರಿಗೆ ರಾಜಮಾರ್ಗವನ್ನು ನೆಟ್ಟಗೆ ಮಾಡಿರಿ; ಎಲ್ಲಾ ಹಳ್ಳಕೊಳ್ಳಗಳು ಮುಚ್ಚಲ್ಪಡುವದು, ಎಲ್ಲಾ ಬೆಟ್ಟಗುಡ್ಡಗಳು ತಗ್ಗಿಸಲ್ಪಡುವವು, ಮಲೆನಾಡು ಬೈಲುಸೀಮೆ ಯಾಗುವದು, ಕೊರಕಲ ನೆಲವು ಸಮವಾಗುವದು.

## ನಿಜರೂಪದಲ್ಲಿನ ಎಲೀಯನು

ನಮ್ಮ ಓದುಗರ ನೆನಪಿಗೆ ತರುವುದೆಂದರೆ: ಸತ್ಯವೇದ ಪಾಠಮಾಲೆಯ ಎರಡನೆಯ ಗ್ರಂಥದ 8ನೇ ಅದ್ಯಾಯದಲ್ಲಿ ಪುರಾವೆಗಳ ಸಹಿತವಾಗಿ ನಾವು ಪ್ರತಿಪಾದಿಸಿ ಹೇಳಿದಂತೆ ಶರೀರ ಸಂಬಂಧದಲ್ಲಿ ಬಂದ ಯೋಹಾನನು ಶರೀರ ಸಂಬಂಧದಲ್ಲಿ ಬಂದಿದ್ದ ಯೇಸುವನ್ನು ಪರಿಚಯಿಸಿ ಮುಂದೂತನ ಕಾರ್ಯವನ್ನು ನೆರವೇರಿಸಿದಂತೆಯೇ ಈ ಸುವಾರ್ತಾಯುಗದಲ್ಲಿ ಶರೀರದಲ್ಲಿರುವ ಕ್ರೈಸ್ತಸಭೆಯು ನಿಜರೂಪದಲ್ಲಿನ ಎಲೀಯನಾಗಿದ್ದು ಪ್ರಭಾವವುಳ್ಳ ಅರಸನಾದ ಕ್ರಿಸ್ತನ ಎರಡನೆಯ ಬರುವಿಕೆಯನ್ನು ಪ್ರಕಟಿಸಿ ಆತನ ಸಾವಿರ ವರುಷದ ಆಳ್ವಿಕೆಗೆ ದಾರಿಯನ್ನು ಸುಗಮಗೊಳಿಸುವಂತೆ ಕೇಳಿಕೊಳ್ಳುವುದು ಅದರ ಕಾರ್ಯವಾಗಿರುವುದು. ಈ ವಿಷಯವಾದ ನಿರೂಪಣೆಯನ್ನು ನೀವೆಲ್ಲರೂ ಹೊಂದಿರುವುದರಿಂದ ಇಲ್ಲಿ ನಾವು ಇದರ ಪ್ರಸ್ತಾವನೆಗೆ ಹೋಗುವುದಿಲ್ಲ.

ನಾವು ಮೇಲೆ ಹೇಳಿರುವ ಪ್ರವಾದನೆಯನ್ನು ಗಮನಿಸೋಣ: ನಾವು ತಿಳಿದುಕೊಂಡಿರುವುದೆಂದರೆ, ಯೋಹಾನನ ಸೇವೆಯನ್ನು ಹೋಲಿಸಿ ನೋಡಿದ್ದಲ್ಲಿ ಇದು ನೆರವೇರಲ್ಪಟ್ಟಿರುವುದು ಅಲ್ಪ ಪ್ರಮಾಣದಲ್ಲಿ. ಇದು ಎರಡು ವರುಷಗಳಿಗೂ ಕಡಿಮೆಯ ಅವಧಿಯಲ್ಲಿ ಅಂತ್ಯಗೊಂಡು ಆ ಜನಾಂಗದ ಒಂದು ಪೀಳಿಗೆಯವರಲ್ಲಿ ಬಹು ಸ್ವಲ್ಪ ಮಂದಿಗೆ ಮಾತ್ರ ತಲುಪಿತ್ತು. ಆದರೆ ಕೇವಲ ಈ ಸಂದೇಶವನ್ನೇ ಲೋಕಕ್ಕೆ ಸಾಕ್ಷಿಯಾಗಿ ಹೇಳುತ್ತಿರುವುದು ನಿಜರೂಪದಲ್ಲಿನ ಎಲೀಯನನ್ನು ಹಾಗೂ ನಿಜರೂಪದಲ್ಲಿನ ಯೋಹಾನರನ್ನು ಸೂಚಿಸುವ ಶಾರೀರಿಕವಾದ ಕ್ರಿಸ್ತನ ಸಭೆ. ಈ ಸಂದೇಶದ ಬಗ್ಗೆ ಅಪೊಸ್ತಲನು ವ್ಯಕ್ತಪಡಿಸಿದ ಅಭಿಪ್ರಾಯದಂತೆ ಲೋಕವು ಅರಣ್ಯವಾತಾವರಣದ ಸನ್ನಿವೇಶದಲ್ಲಿದ್ದು ಅದನ್ನು ಆ ಗೊಂದಲದ ಸ್ಥಿತಿಯಿಂದ ಒಂದು ಕ್ರಮಕ್ಕೆ ತರಲು ದೊಡ್ಡ ಅರಸನ ಪ್ರತ್ಯಕ್ಷತೆಯು ಅಗತ್ಯವಿರುವುದು. ಈ ಮೂಲಕವಾದ ಅದರ ಸಂದೇಶವೇನೆಂದರೆ ಯಾರು ಇದಕ್ಕೆ ಕಿವಿಗೊಡುವರೋ ಅವರು ಜಾಗರೂಕರಾಗಿ ನಡೆದು ಅರಣ್ಯದ ದಾರಿಯನ್ನು ನೆಟ್ಟಗೆ ಮಾಡಿ ಬರುತ್ತಿರುವ ಅರಸನಿಗೆ ರಾಜಮಾರ್ಗ ಏರ್ಪಡಿಸಬೇಕು. ಇದಕ್ಕೂ ಮಿಗಿಲಾಗಿ ಅದು ತೋರಿಸಿ ಕೊಡುವುದೆಂದರೆ ಯೇಸುವಿನ ಮತ್ತು ಸಭೆಯ ಸಾವಿರ ವರುಷ ಪೂರ್ಣವಾದ ಆ ಆಳ್ವಿಕೆಯಲ್ಲಿ ಲೋಕವನ್ನು ಯೆಹೋವನ ಪ್ರತ್ಯಕ್ಷತೆಗೆ ಸಿದ್ಧಗೊಳಿಸಿ, ಪಾಪದ ದೆಸೆಯಿಂದ ಆತನಿಂದ ತಿರಸ್ಕರಿಸಲ್ಪಟ್ಟು ಖಂಡನೆಗೆ ಒಳಗಾಗಿ ಒಣ ಅರಣ್ಯದಂತಿರುವುದಕ್ಕೆ ಬದಲಾಗಿ, ಭೂಮಿಯನ್ನು ಹಸಿರಿನಿಂದ ಕೂಡಿದ ಆತನ ಪಾದಪೀಠವನ್ನಾಗಿ ಮತ್ತೆ ಮಾಡಲಾಗುವುದು.

ಈ ಪ್ರವಾದನೆಯಲ್ಲಿ ಶರೀರದಲ್ಲಿರುವ ಸಭೆಯ ಕಾರ್ಯವನ್ನು ಮಾತ್ರವಲ್ಲದೆ ಸಾವಿರ ವರುಷದಲ್ಲಿ ಕ್ರಿಸ್ತನು ಮತ್ತು ಸಭೆಯು ಮಾಡುವ ಕಾರ್ಯವನ್ನು ಸಹ ಮುಂತಿಳಿಸಲಾಗಿರುವುದು. "ಎಲ್ಲಾ ಹಳ್ಳಕೊಳ್ಳಗಳು ಮುಚ್ಚಲ್ಪಡುವವು" ಎನ್ನುವುದು ದೀನರನ್ನು ಹೀನಾವಸ್ಥೆಯಿಂದ ಮೇಲೆತ್ತುವುದನ್ನು ಮತ್ತು ಯಾರು ಈ ಪಾಪದ ಆಳ್ವಿಕೆಯಲ್ಲಿ ಪ್ರಭಾವ ಮತ್ತು ಸಮೃದ್ಧಿಯನ್ನು ಗಳಿಸಿ ಉನ್ನತ ಸ್ಥಿತಿಗೆ ತಲುಪಿರುವರೋ ಅವರನ್ನು ನೀತಿಯುಳ್ಳ ಆಳ್ವಿಕೆಯಲ್ಲಿ ದೀನ ಸ್ಥಿತಿಗೆ ತರಲಾಗುವುದು ಇದನ್ನು ಸಾಂಕೇತಿಕವಾಗಿ "ಎಲ್ಲಾ ಬೆಟ್ಟಗಳು ತಗ್ಗಿಸಲ್ಪಡುವವು" ಎಂದು ಸೂಚಿಸಲಾಗಿದೆ. ಪಾಪ ಮತ್ತು ಅಪಕ್ವತೆಗಳು ಕೂಡಿರುವ ಈಗಿನ ಕಾಲದಲ್ಲಿನ ವಕ್ರತೆಯುಳ್ಳ ವಿಶೇಷ ಸಂಗತಿಗಳೆಲ್ಲವನ್ನು ನೆಟ್ಟಗೆ ಮಾಡಲಾಗುವುದು ಅಸಂಬದ್ಧವಾದ ಕ್ಲಿಷ್ಟಕರ ಸಂಗತಿಯೆಲ್ಲವನ್ನು ಸರಾಗವಾಡಲಾಗುವುದು; ಹೀಗೆ "ಸಮಸ್ತವನ್ನು ಸರಿಮಾಡುವ ಕಾಲಗಳಲ್ಲಿ" ನಡೆಯುವ ಕಾರ್ಯಗಳ ಫಲವಾಗಿ ದೇವರ ಚಿತ್ತಕ್ಕೆ ಹಾಗೂ ಪ್ರೀತಿಯ ವಿಷಯವಾದ ದೇವರ ನಿಯಮಕ್ಕೆ ಅನುಗುಣವಾಗಿ ಮನುಕುಲದವರೆಲ್ಲರು ಹೊಂದಾಣಿಕೆಗೆ ಬಂದು ದೇವರ ಸಮಕ್ಷಮಕ್ಕೆ ಸೇರಲು ಅಂತ್ಯವಾಗಿ ಸಿದ್ಧರಾಗುವರು. "ಆತನ ಪಾದ ಪೀಠವು ವೈಭವವಾಗಿರುವುದು" ಎಂಬ ಪ್ರವಾದಿಗಳ ಮಾತಿನಲ್ಲಿ ಇದು ಸೂಚಿತವಾಗಿರುವುದು.

## ಹಾಗಾದರೆ ನೀನು ಯಾರು?

"ನೀನು ಕ್ರಿಸ್ತನೋ?" ಇಲ್ಲ. "ನೀನು ಏಲೀಯನೋ?" ಇಲ್ಲ. "ನೀನು ಮೋಶೆಯು ಹೇಳಿರುವ ಆ ಪ್ರವಾದಿಯೋ? (ಅ. ಕೃ. 3:21,23) ಇಲ್ಲ. "ಹಾಗಾದರೆ ನೀನು ಯಾರು? ಏಕೆ ನೀನು ಈ ರೀತಿಯಲ್ಲಿ ಬಂದು ಅಧಿಕಾರವಿದ್ದವನಂತೆ ಮಾತನಾಡುತ್ತಿರುವಿ? ಇದು ಸ್ನಾನಿಕನಾದ ಯೋಹಾನನ ಬಗ್ಗೆ ಕೇಳಲ್ಪಟ್ಟ ಪ್ರಶ್ನೆ. ಇದಕ್ಕೆ ಯೋಹಾನನ ಉತ್ತರ: "ಕರ್ತನ ದಾರಿಯನ್ನು ನೆಟ್ಟಗೆ ಮಾಡಿರಿ ಎಂದು ಅಡವಿಯಲ್ಲಿ ಕೂಗುವವನ ಶಬ್ದವದೆ ....... ಆ

ಶಬ್ದವೇ ನಾನು. ನಾನಂತೂ ನಿಮಗೆ ನೀರಿನ ಸ್ನಾನ ಮಾಡಿಸುವವನು; ಆದರೆ ನನಗಿಂತ ಶಕ್ತನು ಬರುತ್ತಾನೆ. ಆತನ ಕೆರಗಳ ಬಾರನ್ನು ಬಿಚ್ಚುವುದಕ್ಕೂ ನಾನು ಯೋಗ್ಯನಲ್ಲ." (ಲೂಕ 3:4,16) ಹೀಗೆ ಯೋಹಾನನು ತನ್ನ ಅಲ್ಪತನವನ್ನು ಹೋಲಿಸಿಕೊಂಡು ಮೆಸ್ಸೀಯನ ಶ್ರೇಷ್ಠತೆಯನ್ನು ಸಾರಿ ಹೇಳಿದನು. ಖಂಡಿತವಾಗಿಯೂ ಆತನಿಗೆ ನಿಜರೂಪವಾಗಿರುವ ನಾವು ಆ ಮಹಿಮೆಯುಳ್ಳ ರಾಜ್ಯದ ಬಗ್ಗೆ ಸಾರುವ ಸೌಭಾಗ್ಯದ ವಿಷಯವನ್ನು ಬಹು ದೀನರಾಗಿ ಭಾವಿಸಬಹುದು. ಇದನ್ನು ಬಿಟ್ಟು ನಮಗೆ ಬೇರೆ ಯಾವ ಮನೋಭಾವವಿದ್ದರೂ ಆತನ ಪ್ರತಿನಿಧಿಗಳು ಮತ್ತು ರಾಯಭಾರಿಗಳೂ ಆಗಿರಲು ನಾವು ಅಯೋಗ್ಯರಾಗುವೆವು. ಒಬ್ಬ ಕವಿಯು ಇದನ್ನು ವ್ಯಕ್ತಪಡಿಸಿ ಹೀಗೆ ಹೇಳಿದ್ದಾನೆ:

"ನಿಜವಾಗಿಯೂ ಎನೂ ಅಲ್ಲದವರಾಗಿ, ಅಲ್ಲದವರಾಗಿ
ಆತನಿಗೇ ತಮ್ಮ ಸ್ವರವನ್ನು ಎತ್ತಲಿ;
ಆತನೇ ಆಶೀರ್ವಾದದ ಬುಗ್ಗೆ,
ಹೌದು, ಸ್ತುತಿ ಹೊಂದಲು ಆತನೇ ಯೋಗ್ಯನು."

ಈ ಹೇಳಿಕೆಯು ಆ ಒಬ್ಬಾತನ ಬಗ್ಗೆ ನುಡಿದಿರುವುದಕ್ಕೆ ಹೇಗೆ ಸಮನಾಗಿರುವುದು. ಅಲ್ಲಿ ಯೇಸುವು ಶರೀರ ಸಂಬಂಧವಾಗಿ ಪ್ರತ್ಯಕ್ಷನಾಗಿ ಶರೀರ ಸಂಬಂಧದ ಇಸ್ರಾಯೇಲ್ಯರಿಗೆ ತನ್ನನ್ನು ಸಮರ್ಪಿಸಿಕೊಂಡನು. ಈಗ ಆತನು ಆತ್ಮ ಸಂಬಂಧವಾಗಿ ಪ್ರತ್ಯಕ್ಷನಾಗಿ ಅದೇ ರೀತಿಯಲ್ಲಿ ಗುರುತು ಹಿಡಿಯಲ್ಪಡದೆ ಇರುವನು. ಅಲ್ಲಿ ಅತನು ನಿಜವಾದ ಇಸ್ರಾಯೇಲ್ಯರಿಂದ ಕಡೆಯದಾಗಿ ಗುರುತುಹಿಡಿಯಲ್ಪಟ್ಟನು. ಇಲ್ಲಿ ನಾವು ನಿರೀಕ್ಷಿಸುವುದೆಂದರೆ: (ಸುವಾರ್ತಾಯುಗದ) ಸುಗ್ಗಿಯ ಕಾಲವು ಅಂತ್ಯವಾಗುವ ಮೊದಲು ಪರೋಕ್ಷಿಯ ಎಂಬ ಆತನ ಪ್ರತ್ಯಕ್ಷತೆಯು ನಿಜವಾದ ಆತ್ಮೀಕ ಇಸ್ರಾಯೇಲ್ಯರಿಂದ ಗುರುತು ಹಿಡಿಯಲಾಗುವುದು. ಈ ಮುತ್ತಿನಂತಿರುವ ಅಮೂಲ್ಯವಾದ ಸತ್ಯವನ್ನು ಲೋಕದವರ ಮುಂದೆಯಾಗಲೀ ಇಲ್ಲವೆ ಪ್ರತಿಷ್ಠಿತರಲ್ಲದವರ ಮುಂದೆಯಾಗಲೀ ಚೆಲ್ಲುಬೇಕೆಂಬುದು ಸಲಹೆಯಲ್ಲ. ಕರ್ತನ ಪ್ರತ್ಯಕ್ಷತೆ, ಈಗಿನ ಕಾಲದ (ಸುವಾರ್ತಾಯುಗದ) ಸುಗ್ಗಿಯ ಕೊಯ್ಲಿನ ಮುಂದುವರಿಯುವಿಕೆ, ಶೀಘ್ರದಲ್ಲಿ ಗೋದಿಕಾಳು ಕಣಜಕ್ಕೆ ತುಂಬಲ್ಪಡುವುದು ಹಾಗೂ ಕಷ್ಟಕಾಲವೆಂಬ ಬೆಂಕಿಯು ಹಣಜಿಯನ್ನು ದಹಿಸಲು ಶೀಘ್ರದಲ್ಲಿ ಉರಿಹತ್ತಿಕೊಳ್ಳುವುದು ಇವೆಲ್ಲವುಗಳು ಕೇವಲ ನೀತಿಗೆ ಹಸಿದು ಬಾಯಾರಿರುವ "ನಿಜವಾದ ಇಸ್ರಾಯೇಲ್ಯರ" ಸಲುವಾಗಿರುವುದು. ಅದರೆ ಈ ಸತ್ಯಾರ್ಥಗಳು ನಿಜವಾಗಿಯೂ ಬುದ್ಧಿಯುಳ್ಳ ಕನ್ಯೆಯರಿಗೆ ಹೊತ್ತುಹೊತ್ತಿಗೆ ಬೇಕಾಗಿರುವ ಆಹಾರವಾಗಿರುವುದು.

## "ಇಗೋ, [ಯಜ್ಞಕ್ಕೆ] ದೇವರು ನೇಮಿಸಿದ ಕುರಿ"

ನಮ್ಮ ಕರ್ತನ ಬಲಗಾಂಭೀರ್ಯಗಳನ್ನು ಸಾಂಕೇತಿಕವಾಗಿ ಸೂಚಿಸಿ "ಯೂದಾ ಕುಲದಲ್ಲಿ ಜನಿಸಿದ ಸಿಂಹ" ಎಂದು ಉಲ್ಲೇಖಿಸಿರುವುದು ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿನ ಅರಸನಾಗಿ ಆತನ ಮಹಾ ಬಲಪರಾಕ್ರಮಗಳನ್ನು ವರ್ಣಿಸುವುದಾದರೂ ಪಾಪಗಳಿಗೋಸ್ಕರ ಯಜ್ಞಾರ್ಪಿತನಾಗಲು ಆತನು ಮಾಡುವ ಭೂಲೋಕದ ಸೇವೆಯನ್ನು ಸೂಚಿಸಲು ಕುರಿಯ (ಸಾಂಕೇತಿಕ) ಚಿತ್ರಣವು ನಿಜವಾಗಿಯೂ ಆತನಿಗೆ ಬಹು ಸಮಂಜಸವಾದದ್ದು. ತಾನು ಮರಣದವರೆಗೂ ಎಲ್ಲಾ ರೀತಿಯಲ್ಲೂ ತನ್ನ ತಂದೆಯ ಚಿತ್ತಕ್ಕೆ ಅಂದರೆ ಶಿಲುಬೆಯ ಮರಣಪರ್ಯಂತರವೂ ಅಧೀನನಾಗಿದ್ದುದು ಕುರಿಯ ಸ್ವಭಾವವನ್ನು ಬಹುವಾಗಿ ಹೋಲುವುದು. ಇನ್ನೂ ಹೆಚ್ಚಾಗಿ ಹೇಳುವುದಾದರೆ, ಆತನು ನಮ್ಮ ಪಾಪಗಳಿಗೋಸ್ಕರ ಅರ್ಪಿತನಾಗಲು ದೇವರು ನೇಮಿಸಿದ ಕುರಿ ಎಂಬ ಅರ್ಥದ ಪ್ರಕಾರ ಇದು ತಂದೆಯ ಚಿತ್ತದ ಮೂಲಕವಾಗಿರುವ ದೈವಿಕವಾದ ಏರ್ಪಾಡು. ಸತ್ಯವೇದವು ಪ್ರಕಟಿಸಿರುವಂತೆ ದೇವರು ತನ್ನ ಒಬ್ಬನೇ ಮಗನನ್ನು ಮಾನವರ ವಿಮೋಚಕನನ್ನಾಗಿ ಕೊಟ್ಟನು, ತನ್ನ ಕುಮಾರನನ್ನು ಲೋಕಕ್ಕೆ ಕಳುಹಿಸಿದನು. ಆ ಕುಮಾರನು ತಂದೆಯ ಚಿತ್ತವನ್ನು ನೆರವೇರಿಸಲು ಉಲ್ಲಾಸವಾಗಿದ್ದನು. ಈ ಎಲ್ಲಾ ಅಂಶಗಳೂ "ದೇವರು ನೇಮಿಸಿದ ಕುರಿ" ಎಂಬ ಮಾತಿನ ವರ್ಣನೆಯಲ್ಲಿ ಸೊಗಸಾಗಿ ಬೆರೆಯಲ್ಪಟ್ಟಿರುವುದು. ಇನ್ನು ಅಧಿಕವಾಗಿ ಇದು ನಮ್ಮ ಪಾಪಗಳ ನಿವಾರಣೆಗಾಗಿ ಒಂದು ಯಜ್ಞವು ಅವಶ್ಯವಾಗಿರುವುದೆಂಬ ಅಂಶವನ್ನು ನಮ್ಮ ಮನಸ್ಸಿಗೆ ತರುವುದು. ಬೇರೆ ಯಾವ ವಿಧದಲ್ಲೂ ಒಂದು ಕುರಿಯು ಲೋಕದ ಪಾಪವನ್ನು ನಿವಾರಣೆಮಾಡಲು ಸಾಧ್ಯವಾಗದು. ಕರ್ತನ ಕೃಪೆಯಿಂದ ನಾವು ಆತನನ್ನು ನಮ್ಮ ಶ್ರೇಷ್ಠ ಬೋಧಕನಾಗಿಯೂ ಕುರುಬನಾಗಿಯೂ ಗ್ರಹಿಸುವಂತೆ ನಮ್ಮ ಮನೋನೇತ್ರಗಳು ತೆರೆದಿರುವುದು ಮಾತ್ರವಲ್ಲದೆ ನಮಗೋಸ್ಕರ ವಾದ ಆತನ ಯಜ್ಞಾರ್ಪಣೆಯಿಂದ ನಮ್ಮ ಪಾಪಗಳು ಅದರ ದಂಡನೆಯೂ ಅಳಿಸಲ್ಪಟ್ಟುದ್ದನ್ನು ತಿಳಿಯುವಂತಾದುದು ಎಷ್ಟೋ ಸಂತೋಷಕರವಾಗಿರುವದು. ಯೇಸುವನ್ನು ತಮ್ಮ ಪಾಪವನ್ನು ಹೊರುವ ದೇವರ ಕುರಿಮರಿ ಎನ್ನುವುದನ್ನು ಗ್ರಹಿಸಲು ಕೇವಲ ಯಾರಿಗೆ ಸಾಧ್ಯವೋ ಅವರು ಈ ಸುವಾರ್ತಾಯುಗದಲ್ಲಿ ನಂಬುವವರಿಗೆ ನೀಡಲಾಗಿರುವ ನಂಬಿಕೆಯ ಮೂಲಕವಾದ ನೀತಿನಿರ್ಣಯವನ್ನು ಹೊಂದಲು ಸಾಧ್ಯ. ಯಾವನು (ಕ್ರಿಸ್ತನ ರಕ್ತದ ಮೇಲಿನ) ನಂಬಿಕೆಯ ಮೂಲಕವಾಗಿ ದೊರೆತ ತನ್ನ ನೀತಿವಸ್ತ್ರವನ್ನು ಕಳೆದುಕೊಳ್ಳುವನೋ ಅವನು ಇದುವರೆಗೂ ತನಗೆ ಸತ್ಯವೇದದವು ಪ್ರಕಟಮಾಡಿರುವದೆಲ್ಲವನ್ನು ಕಳಕೊಳ್ಳುವನೆಂಬ ಸತ್ಯದ ಈ ಮುಖ್ಯಲಕ್ಷಣದ ಮೇಲೆ ಇರಿಸಿರುವ ನಮ್ಮ ದೃಷ್ಟಿಯು ಎಂದೂ ಕಳೆದುಹೋಗದಂತೆ ನೋಡಿಕೊಳ್ಳೋಣ.

## ಲೋಕದ ಪಾಪವನ್ನು ನಿವಾರಣೆಮಾಡುವುದು

ದೇವವಾಕ್ಯದಲ್ಲಿನ ಹೇಳಿಕೆಗಳು ಎಷ್ಟು ಅದ್ಭುತವಾದವುಗಳು ಎಷ್ಟು ಕರಾರುವಕ್ಕಾದವುಗಳು! ಯೋಹಾನನು ಒಬ್ಬ ಯೆಹೂದ್ಯನಾಗಿ ತಾನು ಪ್ರಕಟಿಸಿರುವುದೆಲ್ಲವನ್ನು ಅರ್ಥಮಾಡಿಕೊಂಡಿದ್ದನೆಂಬುದನ್ನು ನಿರೀಕ್ಷಿಸಲಾಗದು. ಏಕೆಂದರೆ ಯೆಹೂದ್ಯರು ಮೆಸ್ಸೀಯನು ಯೆಹೂದ್ಯರ ಪಾಪಗಳನ್ನು ನಿವಾರಣೆಮಾಡುವುದನ್ನು ಅನಂತರ ಅವರು ದೇವರಿಂದ ನೇಮಕವಾದ ರಾಜವಂಶದ ಯಾಜಕರಾಗಿ ಲೋಕವನ್ನು ನೀತಿಯ ಮೂಲಕವಾಗಿ ತಿದ್ದುಪಡಿಮಾಡುವುದನ್ನು ನಿರೀಕ್ಷಿಸುತ್ತಿದ್ದರು. ಆದರೆ ಯೋಹಾನನ ಪ್ರಕಟನೆಯು ಇದಕ್ಕಿಂತಲೂ ಮುನ್ನಡೆದು

ಅನ್ಯಜನರನ್ನು ಸಹ ಒಳಗೊಂಡಿರುವುದು. ಈ ಪ್ರವಾದನೆಯನ್ನು ನುಡಿಯಲು ಮಾರ್ಗದರ್ಶಿಸಿರುವ ಮೇಲಿನಿಂದ ಬಂದ ಜ್ಞಾನವು ಈಗಿರುವ ಕರ್ತನ ಜನರಲ್ಲಿ ಬಹುಪಾಲಿನವರಿಗೆ ಅರಿಯಲೂ ಮೀರಿದ ವಿಷಯ. ಈ ದಿನಗಳಲ್ಲಿರುವ ಸಾಮಾನ್ಯವಾದ ಆಲೋಚನೆಯೆಂದರೆ, ಲೋಕದ ಪಾಪವು ಎಂದಿಗೂ ನಿವಾರಣೆಯಾಗದು ಹಾಗೂ ಲೋಕವು ಆದಾಮನಿಗುಂಟಾದ ದಂಡನೆ ಮತ್ತು ಪ್ರತಿಯೊಬ್ಬರ ವೈಯುಕ್ತಿಕವಾದ ನಿಯಮ ಉಲ್ಲಂಘನೆಗಳ ಸಹಿತವಾದ ಪಾಪದ ಭಾರದಿಂದ ನಿತ್ಯಯಾತನೆಗೆ ಇಳಿದು ಹೋಗುವುದು ಎಂದು ತೋರುತ್ತದೆ. ಕ್ರೈಸ್ತ ಸಮುದಾಯವು ಮತ್ತು ಸಭಾಸಂಪ್ರದಾಯಗಳು ರಕ್ಷಕನು ದೇವರು ನೇಮಿಸಿದ ಕುರಿಮರಿಯಾಗಿ ಲೋಕದ ಪಾಪವನ್ನು ನಿವಾರಣೆ ಮಾಡುವನೆಂಬುದರ ವಿಷಯವಾಗಿ ಏನೂ ತಿಳಿದಿಲ್ಲ. ಅಯ್ಯೋ! ಅಯ್ಯೋ! ನಿಸ್ಸಹಾಯಕರಾದ ಕುರುಡು ಕ್ರೈಸ್ತ ಸಮುದಾಯ! ಅದು ಈ ವಾಕ್ಯಗಳನ್ನೂ ಮತ್ತು ಇದೇ ರೀತಿಯ ಸತ್ಯವೇದದಲ್ಲಿನ ಇತರ ಪ್ರಕಟಣೆಗಳನ್ನು ಓದಿರುವುದಾದರೂ ಅವುಗಳಲ್ಲಿ ಅಡಕವಾಗಿರುವ ನಿಜವಾದ ಆಶೀರ್ವಾದದ ಬಗ್ಗೆ ಗ್ರಹಿಸಿಕೊಂಡಿರುವುದಿಲ್ಲ. ಈ ಸಂಬಂಧದಲ್ಲಿ ಅಪೋಸ್ತಲನು ಮುಂದೆ ಹೇಳಿರುವುದನ್ನು ಜ್ಞಾಪಿಸಿಕೊಳ್ಳೋಣ: "ಮನುಷ್ಯನಾದ ಯೇಸುವು ಎಲ್ಲರಿಗಾಗಿ ತನ್ನನ್ನು ಈಡಾಗಿ ಅರ್ಪಿಸಿಕೊಂಡನು" ಅಲ್ಲದೆ ನಾವು ಅತನು ಮುಂದೆ ಹೇಳಿರುವುದನ್ನೂ ನೆನೆಯುತ್ತೇವೆ: "ಯೇಸುವಿನ ಯಜ್ಞವು ನಮ್ಮ ಪಾಪಗಳ ನಿವಾರಣೆ ಮಾಡುವುದು (ಸಭೆಯ ಪಾಪಗಳು); ಅದು ನಮ್ಮ ಪಾಪಗಳನ್ನು ಮಾತ್ರವಲ್ಲದೆ ಸಮಸ್ತ ಲೋಕದ ಪಾಪವನ್ನೂ ಸಹ ನಿವಾರಣೆಮಾಡುವುದು." (1 ಯೋಹಾನ 2:2) ದೇವರು ಪ್ರಕಟಮಾಡಿ ಹೇಳಿರುವಂತೆ ನಿಜವಾಗಿಯೂ ಭೂಮಿಗಿಂತ ಆಕಾಶವು ಎಷ್ಟು ಉನ್ನತವಾಗಿದೆಯೋ ಆತನ ಮಾರ್ಗಗಳು ನಮ್ಮ ಮಾರ್ಗಗಳಿಗಿಂತ ಅಷ್ಟು ಉನ್ನತವಾಗಿವೆ. ಮತ್ತು ಆತನ ಯೋಜನೆಗಳೂ ಅಷ್ಟು ಉನ್ನತವಾಗಿವೆ. ದೇವರು ಅಲ್ಪನಾದವನಲ್ಲದೆ ಕೆಟ್ಟವನೂ ಮುಯ್ಯಿತೀರಿಸುವವನೂ ಆಗಿರದೆ ಆತನು ಶ್ರೇಷ್ಠನಾದ ದೇವರಾಗಿದ್ದು ಆಶ್ಚರ್ಯಕರವಾದ ಆತನ ಯೋಜನೆಗಳು ಮನುಷ್ಯನ ಇದುವರೆಗಿನ ಆಲೋಚನೆಗಳನ್ನು ಮೀರುವವೆಂದು ನಮಗೆ ಕಂಡುಬಂದಿರುವುದು ಬಹು ಸಂತೋಷದ ವಿಷಯ. ನಾವು ನಮ್ಮ ಮನೋನೇತ್ರಗಳಿಂದ ನೋಡಲಾಗಿ ಅಪೋಸ್ತಲನ ಈ ಮುಂದಿನ ಪ್ರಾರ್ಥನೆ ಎಷ್ಟರ ಮಟ್ಟಿಗೆ ನೆರವೇರಿರುವುದೆಂದು ನಮಗೆ ಗ್ರಹಿಕೆಯಾಗುವುದು: "...... (ಯೇಸು ಕ್ರಿಸ್ತನ) ಆ ತಂದೆಯ ಮುಂದೆ ನಾನು ಮೊಣಕಾಲೂರಿ––ನೀವು ..... ದೇವರ ಪ್ರೀತಿಯಲ್ಲಿ ನೆಲೆಗೊಂಡು ಅದರ ಅಗಲ ಉದ್ದ ಎತ್ತರ ಆಳ ಎಷ್ಟೆಂಬುದನ್ನು ದೇವಜನರೊಂದಿಗೆ ಗ್ರಹಿಸಲೂ ಜ್ಞಾನಕ್ಕೆ ಮೀರುವ ಕ್ರಿಸ್ತನ ಪ್ರೀತಿಯನ್ನು ತಿಳುಕೊಳ್ಳಲು ಪೂರ್ಣಶಕ್ತವಾಗಿದ್ದು ದೇವರ ಸಂಪೂರ್ಣತೆಯ ಮಟ್ಟಿಗೂ ಪರಿಪೂರ್ಣರಾಗುವ ಹಾಗೆ ನಿಮಗೆ ದಯಪಾಲಿಸಲಿ....."–ಎಫೆಸ 3:14,18,19

## ತನ್ನ ಮುಂದಿರುವ ಕಾರ್ಯ

ಯಜ್ಞದ ಕುರಿಯು ಪ್ರತ್ಯಕ್ಷವಾಗಿರುವುದಾದರೂ ಲೋಕದ ಪಾಪವನ್ನು ಅಳಿಸಿಬಿಡುವುದು ಮುಂದೆ ನಡೆಯಲಿರುವ ಕಾರ್ಯವೆಂದು ಸ್ನಾನಿಕನಾದ ಯೋಹಾನನು ಹೇಳಿದ್ದನು. ಮತ್ತು ಈ ಕಾರ್ಯವು ಇನ್ನೂ ಪೂರ್ಣಗೊಂಡಿಲ್ಲ. ನಮ್ಮ ಕರ್ತನು ಯಜ್ಞದ ಕುರಿಯಾಗಿ ಸತ್ತನು, ಆತನ ಯಜ್ಞವು ನಿಜವಾಗಿ ಪೂರ್ಣ ಫಲದಾಯಕವಾಗಿದ್ದು ತಂದೆಗೆ ತೃಪ್ತಿಕರವಾಗಿತ್ತು. ಇದು ಆತನು ಸತ್ತವರೊಳಗಿಂದ ಪುನರುತ್ಥಾನವಾಗಿ ಪ್ರಭಾವಾಧಿಕಾರ ಸ್ಥಾನಕ್ಕೆ ಏರಿಸಲ್ಪಟ್ಟಿರುವುದರಲ್ಲಿ ವ್ಯಕ್ತವಾಗಿರುವುದು. ಅದರೆ ಲೋಕದ ಪಾಪವನ್ನು ತೆಗೆದುಹಾಕುವ ಕಾರ್ಯವು ದೇವರ ಸಂಕಲ್ಪಾನುಸಾರವಾಗಿ ಎರಡು ಭಾಗವಾಗಿ ಮಾಡಲ್ಪಟ್ಟಿರುವುದು: (1) ಯಾರ ಹೃದಯಗಳು ದೇವರೊಂದಿಗೆ ಸಂಧಾನವಾಗಿ ಪಾಪಕ್ಷಮೆಹೊಂದಿ ನೀತಿ ಸತ್ಯ ನ್ಯಾಯ ಹಾಗು ಒಳ್ಳೆಯ ವಿಷಯಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಹಾತುರವಾಗಿದೆಯೋ ಅವರ ಪಾಪಗಳನ್ನು ತೆಗೆದುಹಾಕುವುದು. ನಂಬಿದವರೆಂದು ಕರೆಯಲ್ಪಡುವ ಇವರಿಗೆ ತಮ್ಮ ಪಾಪಗಳು ತೆಗೆದು ಹಾಕಲ್ಪಟ್ಟವೆಂದು ಪರಿಗಣಿಸಲಾಗುವದು; ಅಥವಾ, ಅಪೋಸ್ತಲರು ಮತ್ತು ಪ್ರವಾದಿಗಳು ವ್ಯಕ್ತಪಡಿಸಿರುವಂತೆ, ಇವರ ಪಾಪಗಳು ದೇವರ ದೃಷ್ಟಿಯಲ್ಲಿ ಕ್ರಿಸ್ತನ ನೀತಿವಸ್ತ್ರದ ಮೂಲಕವಾಗಿ "ಮುಚ್ಚಲ್ಪಟ್ಟಿರುವುದು"; ಅವರು ತಮ್ಮ ಜೀವಿತಾವಧಿಯನ್ನು ನಂಬಿಗಸ್ತರಾಗಿ ಮುಗಿಸಿ ನಿತ್ಯಜೀವಕ್ಕೆ ಸೇರಲು ಯೋಗ್ಯರೆಂದು ಎಣಿಸಲ್ಪಟ್ಟಾಗ ಅವರ ಪಾಪಗಳು ಪೂರ್ಣವಾಗಿ ಅಳಿಸಲ್ಪಡುವವು. ಆಗ ಅಲ್ಲಿ ಅವರಿಗೆ ಹೊಸ ದೇಹವು ಕೊಡೋಣವಾಗಿ ಆನಂತರದಲ್ಲಿ ಅವರಿಗೆ ಮುಚ್ಚಲು ಯಾವ ದೋಷವು ಯಾವ ಪಾಪಗಳೂ ಇಲ್ಲದೆ ಅವರ ಎಲ್ಲಾ ಪಾಪಗಳನ್ನು ಅಳಿಸಿಹಾಕಲಾಗುವುದು. ಆಗ ಕ್ರಿಸ್ತನ ಮತ್ತು ಆತನ ಮದಲಗಿತ್ತಿಯಾದ ಮಹಿಮೆ ಹೊಂದಿದ ಸಭೆಯ ಆಳ್ವಿಕೆಯು ಆರಂಭವಾಗುವುದು. ಅದು ಲೋಕವನ್ನು ಆಶೀರ್ವದಿಸುವ ಸಾವಿರ ವರುಷದ ಆಳ್ವಿಕೆಯ ಪರಲೋಕ ರಾಜ್ಯವಾಗಿ ಅಲ್ಲಿ ನೀತಿಯ ಆಡಳಿತವಿರುವುದು. (2) ಆದರೆ ಆ ಆಳ್ವಿಕೆಯು ಆರಂಭವಾಗುವ ಮೊದಲು ಹದಿನೆಂಟು ಶತಮಾನಗಳ ಹಿಂದೆ ಲೋಕವನ್ನು ವಿಮೋಚಿಸಿರುವ ದೇವರು ನೇಮಿಸಿದ ಯಜ್ಞದ ಕುರಿಯಾದಾತನ ಯಜ್ಞಫಲವನ್ನು ಮೊದಲನೆಯದಾಗಿ ಮತ್ತು ಆತನ ದೇಹವಾಗಿರುವ ಸಭೆಯ (ತನ್ನ ಯಜ್ಞದ ಮೂಲಕವಾಗಿ ಯೋಗ್ಯವಾದದ್ದಾಗಿ ಅಂಗೀಕಾರವಾದ) ಯಜ್ಞಫಲವನ್ನು ಎಲ್ಲಾ ಜನರ ಪರವಾಗಿ ದೋಷಪರಿಹಾರ ಮಹಾದಿನದ ಎರಡನೆಯ ಯಜ್ಞವನ್ನಾಗಿ ಅರ್ಪಣೆಮಾಡುವನು.–ಯಾಜಕಕಾಂಡ ಅದ್ಯಾಯ 16.

ಕರ್ತನು ದಿವಾರೋಹಣವಾಗಿ ಅರ್ಪಿಸಿದ ತನ್ನ ಯಜ್ಞವು ತಂದೆಯಿಂದ ಅಂಗೀಕಾರವಾಗಿ ಅದರ ಆಶೀರ್ವಾದವು ನಂಬಿಕೆಯುಳ್ಳವರ ಮನೆತನವಾದ ಸಭೆಯ ಮೇಲೆ ಬಂದಂತೆಯೇ ಖಂಡಿತವಾಗಿಯೂ ಈ ಸುವಾರ್ತಾಯುಗದ ಅಂತ್ಯದಲ್ಲಿ ಮಾಡುವ ಆ ಶ್ರೇಷ್ಠ ಮಹಾಯಾಜಕನ ಎರಡನೆಯ ಅರ್ಪಣೆಯು ತಂದೆಯಿಂದ ಸಮಸ್ತ ಲೋಕದ ಅಂದರೆ ಎಲ್ಲಾ ಜನರ ಪಾಪಗಳಿಗಾಗಿ ಅಂಗೀಕಾರವಾಗುವದು. ಆನಂತರ ದೇವರ ಕ್ಷಮೆ ಹಾಗೂ ಆದಾಮನ ಮೂಲಕ ಬಂದ ಪಾಪಾಪರಾಧ ಬಲಹೀನತೆಗಳ ನೀಗಿಸಲ್ಪಡುವಿಕೆಯು ಎಲ್ಲಾ ಜೀವಿಗಳಿಗೂ ದೊರಕುವುದು. ಮತ್ತು ಮಾಡಿದ ಅಪರಾಧಗಳು ಎಷ್ಟರ ಪ್ರಮಾಣದಲ್ಲಿ ಮನಃಪೂರ್ವಕವಾಗಿದ್ದಿತೋ ಆ ಪ್ರಮಾಣದಲ್ಲಿ "ನೀತಿಶಿಕ್ಷೆ" ನೀಡಲಾಗುವುದು. (ಲೂಕ 12:47,48) ಸಾವಿರ ವರುಷದ ಆಳ್ವಿಕೆಯ ಪ್ರಭಾವ ಮಹಿಮೆಗಳೆಲ್ಲವನ್ನೂ ದೇವರ

ಮತ್ತು ಆತನ ಯೋಜನೆಗಳ ವಿಷಯವಾದ ಪರಿಜ್ಞಾನ ಹೊಂದುವವರನ್ನು ಆಶೀರ್ವದಿಸಿ ಅವರನ್ನು ಉತ್ತಮ ಸ್ಥಿತಿಗೆ ತರುವ ಕಾರ್ಯಗಳಿಗೆ ವಿನಿಯೋಗಿಸಲಾಗುವುದು. ಅಲ್ಲಿ ನೀಡಲಾಗುವ ಪೆಟ್ಟುಗಳು ನೀತಿಶಿಕ್ಷೆಗಳು ನ್ಯಾಯನಿರ್ಣಯಗಳು ಸಹ ಲೋಕದವರಿಗೆ ಸಹಾಯಕವಾಗಿ ಅವರನ್ನು ನೀತಿಯ ವಿಷಯದಲ್ಲಿ ತಿದ್ದುಪಡಿಮಾಡುವ ಉದ್ದೇಶಕ್ಕಾಗಿರುವದು. ಹೀಗೆ ಸಾವಿರ ವರುಷದ ಆಳ್ವಿಕೆಯ ಅಂತ್ಯದಲ್ಲಿ ಲೋಕದ ಪಾಪಗಳನ್ನು ಹೊತ್ತ ದೇವರು ನೇಮಿಸಿದ ಯಜ್ಞದ ಕುರಿಯ ಮೂಲಕವಾಗಿ ದೇವಾಶೀರ್ವಾದವು ಎಲ್ಲರಿಗೂ ಆಶ್ಚರ್ಯಕರವೂ ಭಾಗ್ಯಕರವೂ ಆಗಿ ಪರಿಣಮಿಸಿ ಎಲ್ಲರೂ ಮನುಷ್ಯಸ್ವಭಾವದಲ್ಲಿ ಪರಿಪೂರ್ಣತೆಗೆ ಪುನಃ ತಲುಪುವಂತೆ ಮಾಡುವುದು. ಆದರೆ ಆಗ ಅಲ್ಲಿ ತಿದ್ದುಪಾಟಿ ಹೊಂದಲಾಗದವರು ಜನರೊಳಗಿಂದ ಸಂಪೂರ್ಣವಾಗಿ ನಾಶವಾಗುವರು. – ಅ.ಕೃ. 3:23

## ಯೋಹಾನನ ನಂಬಿಗಸ್ತಿಕೆಯುಳ್ಳ ಸಾಕ್ಷಿ

ಯೋಹಾನನ ಸಂದೇಶದಲ್ಲಿ ಸ್ವಲ್ಪವೂ ಸ್ವಾರ್ಥವಿಲ್ಲದಿರುವುದನ್ನು ನಾವು ನೋಡುತ್ತೇವೆ. ಇದು (ಸ್ವಾರ್ಥ) ಕರ್ತನ ಜನರಲ್ಲಿ ಹಲವರಿಗೆ ಎಡವುವ ಕಲ್ಲಾಗಿದ್ದು ಅವರನ್ನು ಮುನ್ನಡೆಯದಂತೆ ಮಾಡಿ ಕರ್ತನಿಗೆ ಉಪಯುಕ್ತರಾಗಿ ಇತರರು ಅವರಿಂದ ಆಶೀರ್ವಾದ ಹೊಂದಲು ಮತ್ತು ಅವರು ಸತ್ಯಕ್ಕೆ ಸಾಕ್ಷಿಯಾಗಲು ಸಾಧ್ಯವಾಗದಂತೆ ಮಾಡಿರುವುದು. ಯೋಹಾನನು ಅರಿಕೆ ಮಾಡಿದ್ದೇನೆಂದರೆ, ಯೇಸುವು ತನಗಿಂತಲೂ ಅತಿಶ್ರೇಷ್ಠನಾಗಿದ್ದು ತನಗಿಂತಲೂ ಆತನಿಗೆ ಪ್ರಾಶಸ್ತ್ಯವಿರಬೇಕು, ಏಕೆಂದರೆ ತನಗಿಂತ ಮೊದಲು ಆತನು ಇದ್ದನು. ಅತನು (ಯೇಸುವು) ತಂದೆಯೊಡನೆ ಪೂರ್ವಾಸ್ತಿತ್ವದಲ್ಲಿದ್ದನೆಂಬ ಅರ್ಥದಲ್ಲಿ ಆತನಿಗಿಂತ (ಯೋಹಾನನಿಗಿಂತ) ಮೊದಲಿನವನಾಗಿದ್ದನು ಮಾತ್ರವಲ್ಲದೆ ಆತನು (ಯೇಸುವು) ನಿರಂತರವೂ ಉನ್ನತ ಸ್ಥಾನದಲ್ಲಿದ್ದು ಪರಿಪೂರ್ಣನಾಗಿದ್ದ ಅರ್ಥದಲ್ಲಿಯೂ ಈತನಿಗೆ (ಯೋಹಾನನಿಗೆ) ಮೊದಲಿನವನಾಗಿದ್ದನು. ಯೋಹಾನನೋ ಇತರ ಮನುಷ್ಯರಂತೆ ಶಾರೀರಿಕ ರೀತಿಯಲ್ಲಿ ಅಪೂರ್ಣತೆಯಲ್ಲಿದ್ದವನು.

"ನನಗೂ ಆತನ ಗುರುತಿರಲಿಲ್ಲ" ಎನ್ನುವ ಹೇಳಿಕೆಯನ್ನು ಅತನು ಯೇಸುವಿನೊಂದಿಗೆ ಬಳಕೆಯಾಗಿರಲಿಲ್ಲವೆಂದು ಅರ್ಥಮಾಡಿಕೊಳ್ಳಬಾರದು ಏಕೆಂದರೆ ಅವರಿಬ್ಬರೂ ಪೂರ್ಣ ರೀತಿಯ ದಾಯಾದಿಗಳು. ನಿಜವಾಗಿಯೂ ಯೇಸುವೇ ಮೆಸ್ಸೀಯ ನೆಂಬುದು ಆತನಿಗೆ ತಿಳಿದಿರಲಿಲ್ಲವೆನ್ನುವುದು ಇದರಲ್ಲಿರುವ ಅಂಶ. ಆತನು ತನಗೆ ದಾಯಾದಿಯೆಂದು ತಿಳಿದಿತ್ತು, ಆತನು ಆಶ್ಚರ್ಯವಾದ ಬಾಲಕನೆಂದು ಒಬ್ಬ ಅದ್ಭುತ ರೀತಿಯ ಮನುಷ್ಯನೆಂಬುದು ತನಗೆ ತಿಳಿದಿತ್ತು, ಆತನಲ್ಲಿ ಪಾಪವಿಲ್ಲದ್ದರಿಂದ ತನ್ನಿಂದ ಸ್ನಾನದೀಕ್ಷೆ ಹೊಂದತಕ್ಕ ಮನುಷ್ಯನಲ್ಲವೆಂದು ಆತನಿಗೆ ಮೊದಲಿನಿಂದಲೇ ತಿಳಿದಿತ್ತು. ಆದರೆ ತಾನು ಸ್ನಾನದೀಕ್ಷೆ ಹೊಂದುವ ಮೂಲಕ ತಂದೆಯ ಚಿತ್ತವನ್ನು ಪೂರೈಸಿ ಎಲ್ಲಾ ಧರ್ಮವನ್ನು ಹೀಗೆ ನೆರವೇರಿಸಬೇಕಾಗಿರುವುದೆಂದು ಹೇಳಿ ಒತ್ತಾಯಿಸಿದ್ದರಿಂದ ಯೋಹಾನನು ಅವನಿಗೆ ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿದನು. ಅತನು ನಮಗೆ ಹೇಳಿರುವುದೆಂದರೆ, ಆ ಕ್ಷಣದಲ್ಲೇ ಅಲ್ಲಿ ಯೇಸುವು ಮೆಸ್ಸೀಯನೆಂದು ದೇವರಿಂದ ಸಾಕ್ಷಿಯನ್ನು ಹೊಂದಿದನು. ತಾನು ಮೆಸ್ಸೀಯನ್ನು ಮತ್ತು ಪರಲೋಕ ರಾಜ್ಯವನ್ನು ಪ್ರಕಟಿಸಬೇಕಾಗಿರುವುದೆಂದು ಹಾಗೂ ದೇವರಾತ್ಮವು ಪಾರಿವಾಳದ ಹಾಗೆ ಆತನ ಮೇಲೆ ಇಳಿದು ಬಂದು ನೆಲೆಸಿರುವುದನ್ನು ನೋಡುವುದರ ಮೂಲಕ ಆತನೇ ದೇವಕುಮಾರನೆಂದು ತಿಳಿದುಬರುವುದೆಂದು ತನಗೆ ಮೊದಲೇ ತಿಳಿಸಲಾಗಿತ್ತು. ಆದರೆ ಈ ರೀತಿಯ ಪ್ರದರ್ಶನವು ತಾನು ಸ್ನಾನ ದೀಕ್ಷೆ ನೀಡಿದವನ ವಿಷಯವಾಗಿ ಉಂಟಾಗುವುದೆಂದು ಆತನು ನಿರೀಕ್ಷಿಸಿರಲಿಲ್ಲ. ಕರ್ತನ ಮೇಲೆ ಆತ್ಮವು ಇಳಿದು ಬಂದದ್ದನ್ನು ಕಂಡಾಗ ಅತನಿಗೇ ಆಶ್ಚರ್ಯವಾಯಿತು. ಆಗ ಆತನು ಯೇಸುವೇ ದೇವಕುಮಾರನಾದ ಮೆಸ್ಸೀಯನು, [ಯಜ್ಞಕ್ಕೆ] ದೇವರು ನೇಮಿಸಿದ ಕುರಿ ಎಂದು ಜನರಿಗೆ ಸಾರಿ ಹೇಳಿದನು. ಯೋಹಾನನು ಯೇಸುವನ್ನೇ ತಂದೆಯೆಂದು ಸಾರಲಿಲ್ಲ ಆದರೆ ಅವನು ದೇವರ ಮಗನೆಂದು ಹೇಳಿದನು. ಇದನ್ನೇ ನಮ್ಮ ಕರ್ತನು ಸ್ವತಃ ಪ್ರಕಟಿಸಿ ಹೇಳಿದುದು, ಅಪೋಸ್ತಲರು ಪ್ರಕಟಮಾಡಿದುದು; ಹಾಗೂ ನಮ್ಮ ಸಾಕ್ಷಿಯೂ ಇದರ ಅನುಗುಣವಾಗಿಯೇ ಇರಬೇಕು. ತಂದೆಯನ್ನಾಗಲೀ ಇಲ್ಲವೇ ಮಗನನ್ನಾಗಲೀ ಇಲ್ಲವೇ ಇವರಿಬ್ಬರ ನಡುವೆ ಇರುವ ಸಂಬಂಧವನ್ನಾಗಲೀ ಅಥವಾ ಇವರಿಬ್ಬರ ನಡುವೆ ಇರುವ ಐಕ್ಯತೆಯನ್ನಾಗಲೀ ಅಲಕ್ಷಿಸುವಂತಿಲ್ಲ. ಇದನ್ನು ನಮ್ಮ ಕರ್ತನೇ ತನ್ನ ಪ್ರಾರ್ಥನೆಯಲ್ಲಿ ತಾನೂ ತಂದೆಯೂ ಒಂದಾಗಿರುವ ಪ್ರಕಾರ ಸಭೆಯವರೂ ಒಂದಾಗಿರಬೇಕೆಂದು ವಿವರಿಸಿ ಹೇಳಿದ್ದಾನೆ. ಇವರಿಬ್ಬರು ಒಂದೇ ವ್ಯಕ್ತಿಯಲ್ಲ ಆದರೆ ಇವರ ಮನಸ್ಸು ಮತ್ತು ಉದ್ದೇಶಗಳು ಐಕ್ಯವಾಗಿದ್ದು ಒಂದೇ ಆಗಿರುವುದು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ. ಶ. 29, ಹಿಮಕಾಲ | ಯೋರ್ದನ್ ಮೇಲಿನ ತಗ್ಗು ಪ್ರದೇಶ | ಯೇಸುವಿನ ಮೊದಲ ಶಿಷ್ಯರು | -- | -- | -- | 1:35–51 |

## ಯೋಹಾನ 1:35–51

ಮರುದಿನ ತಿರಿಗಿ ಯೋಹಾನನು ಅವನ ಶಿಷ್ಯರಲ್ಲಿ ಇಬ್ಬರೂ ನಿಂತುಕೊಂಡಿದ್ದಾಗ ಯೋಹಾನನು ಅಲ್ಲಿ ತಿರುಗಾಡುತ್ತಿರುವ ಯೇಸುವನ್ನು ನೋಡಿ–ಅಗೋ, ಯಜ್ಞಕ್ಕೆ ದೇವರು ನೇಮಿಸಿದ ಕುರಿ ಅಂದನು. ಆ ಇಬ್ಬರು ಶಿಷ್ಯರು ಅದನ್ನು ಕೇಳಿ ಯೇಸುವಿನ ಹಿಂದೆ ಹೋದರು. ಯೇಸು ಹಿಂತಿರುಗಿ ಅವರು ತನ್ನ ಹಿಂದೆ ಬರುವದನ್ನು ಕಂಡು––ನಿಮಗೆ ಏನು ಬೇಕಾಗಿದೆ ಎಂದು ಕೇಳಲು ಅವರು–ರಬ್ಬಿಯೇ, ನೀನು ಇಳುಕೊಂಡಿರುವುದು ಎಲ್ಲಿ? ಅಂದರು. (ರಬ್ಬಿ ಅಂದರೆ ಗುರು) ಆತನು–ಬಂದು ನೋಡಿರಿ ಅಂದಾಗ ಅವರು ಬಂದು ಆತನು ಇಳುಕೊಂಡಿದ್ದ ಸ್ಥಳವನ್ನು ನೋಡಿ ಆ ದಿವಸ ಆತನ ಸಂಗಡ ಇದ್ದರು. ಆಗ ಹೆಚ್ಚು ಕಡಿಮೆ ಸಾಯಂಕಾಲ ನಾಲ್ಕು ಘಂಟೆಯಾಗಿತ್ತು. ಯೋಹಾನನ ಮಾತನ್ನು ಕೇಳಿ ಯೇಸುವನ್ನು ಹಿಂಬಾಲಿಸಿದ ಆ ಇಬ್ಬರಲ್ಲಿ ಸೀಮೋನ್ ಪೇತ್ರನ ತಮ್ಮನಾದ ಆಂದ್ರೆಯನು ಒಬ್ಬನು. ಇವನು ಮೊದಲು ತನ್ನ ಅಣ್ಣನಾದ ಸೀಮೋನನ್ನು ಕಂಡುಕೊಂಡು ಅವನಿಗೆ–ಮೆಸ್ಸೀಯನು ನಮಗೆ ಸಿಕ್ಕಿದನು ಎಂದು ಹೇಳಿ ಅವನನ್ನು ಯೇಸುವಿನ ಬಳಿಗೆ ಕರಕೊಂಡು ಬಂದನು. (ಮೆಸ್ಸೀಯನು ಅಂದರೆ ಕ್ರಿಸ್ತನು) ಯೇಸು ಅವನನ್ನು ನೋಡಿ––ನೀನು ಯೋಹಾನನ ಮಗನಾದ ಸೀಮೋನನು; ಇನ್ನು ಮೇಲೆ ಕೇಫನೆನಿಸಿಕೊಳ್ಳುವಿ ಅಂದನು. (ಕೇಫನೆಂದರೆ ಪೇತ್ರ) ಮರುದಿನ ಯೇಸು ಗಲಿಲಾಯಕ್ಕೆ ಹೊರಟುಹೋಗಬೇಕೆಂದಿರುವಾಗ ಫಿಲಿಪ್ಪನನ್ನು ಕಂಡುಕೊಂಡು––ನನ್ನನ್ನು ಹಿಂಬಾಲಿಸು ಅಂದನು. ಈ ಫಿಲಿಪ್ಪನು ಬೇತ್ಸಾಯಿದವನು, ಅಂದರೆ ಅಂದ್ರೆಯ ಪೇತ್ರರ ಊರಿನವನು. ಫಿಲಿಪ್ಪನು ನತಾನಯೇಲನನ್ನು ಕಂಡುಕೊಂಡು ಅವನಿಗೆ–ಯಾವನ ವಿಷಯವಾಗಿ ಮೋಶೆಯು ಧರ್ಮಶಾಸ್ತ್ರದಲ್ಲಿ ಬರೆದನೋ ಮತ್ತು ಪ್ರವಾದಿಗಳು ಬರೆದರೋ, ಆತನು ನಮಗೆ ಸಿಕ್ಕಿದನು; ಆತನು ಯಾರೆಂದರೆ ಯೋಸೇಫನ ಮಗನಾದ ನಜರೇತಿನ ಯೇಸು ಎಂದು ಹೇಳಿದನು. ನತಾನಯೇಲನು–ಒಳ್ಳೆಯದೇನಾದರೂ ನಜರೇತಿನಿಂದ ಬರುವುದುಂಟೇ? ಅಂದಾಗ ಫಿಲಿಪ್ಪನು––ಬಂದು ನೋಡು ಅಂದನು. ಯೇಸು ತನ್ನ ಕಡೆಗೆ ಬರುವ ನತಾನಯೇಲನನ್ನು ಕಂಡು ಅವನ ವಿಷಯವಾಗಿ–ಇಗೋ ಇವನು ನಿಜವಾದ ಇಸ್ರಾಯೇಲನು; ಇವನಲ್ಲಿ ಕಪಟವಿಲ್ಲ ಅಂದನು. ನತಾನಯೇಲನು––ನನ್ನನ್ನು ನೀನು ಹೇಗೆ ಬಲ್ಲೆ? ಎಂದು ಯೇಸುವನ್ನು ಕೇಳಿದ್ದಕ್ಕೆ ಆತನು––ಫಿಲಿಪ್ಪನು ನಿನ್ನನ್ನು ಕರೆಯುವುದಕ್ಕಿಂತ ಮುಂಚೆ ನೀನು ಆ ಅಂಜೂರದ ಮರದ ಕೆಳಗೆ ಇದ್ದಾಗ ನಿನ್ನನ್ನು ನೋಡಿದೆನು ಅಂದನು. ಅದಕ್ಕೆ ನತಾನಯೇಲನು–ಗುರುವೇ, ನೀನು ದೇವಕುಮಾರನು ಸರಿ; ನೀನೇ ಇಸ್ರಾಯೇಲಿನ ಅರಸನು ಅಂದನು. ಅದಕ್ಕೆ ಯೇಸು–ಆ ಅಂಜೂರದ ಮರದ ಕೆಳಗೆ ನಿನ್ನನ್ನು ನೋಡಿದೆನೆಂದು ನಾನು ನಿನಗೆ ಹೇಳಿದ ಮಾತ್ರದಿಂದ ನಂಬುತ್ತೀಯೋ? ಇದಕ್ಕಿಂತ ಹೆಚ್ಚಿನ ಕಾರ್ಯಗಳನ್ನು ನೋಡುವಿ ಅಂದನು. ಇದಲ್ಲದೆ ಅವನಿಗೆ––ನಾನು ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಪರಲೋಕವು ತೆರೆದಿರುವುದನ್ನೂ ಮನುಷ್ಯಕುಮಾರನ ಮೇಲೆ ದೇವದೂತರು ಏರಿಹೋಗುತ್ತಾ ಇಳಿದುಬರುತ್ತಾ ಇರುವದನ್ನೂ ನೋಡುವಿರಿ ಎಂದು ಹೇಳಿದನು.

# ಕರ್ತನ ಆಭರಣರತ್ನಗಳನ್ನು ಕಂಡುಕೊಳ್ಳುವುದು

**ರೀಪ್ರಿಂಟ್ ಪುಟ 4115**

## ಯೋಹಾನ 1:35–51

**"ಯಾವನ ವಿಷಯವಾಗಿ ಮೋಶೆಯು ಧರ್ಮಶಾಸ್ತ್ರದಲ್ಲಿ ಬರೆದನೋ ಮತ್ತು ಪ್ರವಾದಿಗಳು ಬರೆದರೋ, ಆತನು ನಮಗೆ ಸಿಕ್ಕಿದನು; ಆತನು ಯಾರೆಂದರೆ ಯೋಸೇಫನ ಮಗನಾದ ನಜರೇತಿನ ಯೇಸು"**

ನಮ್ಮ ಹಿಂದಿನ ಪಾಠವು ಯೇಸುವನ್ನು ಆತನ ಪ್ರತಿಷ್ಠೆಯ ಸಮಯದಲ್ಲಿ ಮತ್ತು ಸ್ನಾನದೀಕ್ಷೆಯಲ್ಲಿ ಅದನ್ನು ಸಾಂಕೇತಿಕವಾಗಿ ನೆರವೇರಿಸಿ ಪವಿತ್ರಾತ್ಮವನ್ನು ಪಡೆದಾಗ ಸ್ನಾನಿಕನಾದ ಯೋಹಾನನು ಆತನು ಮೆಸ್ಸೀಯನೆಂಬುದಕ್ಕೆ ಗುರುತಾಗಿದ್ದನೆಂದು ನಮಗೆ ತೋರಿಸಿತ್ತು. ಇದಾದ ನಂತರವೇ ಯೇಸುವು ನಾಲ್ವತ್ತು ದಿನಗಳು ಅರಣ್ಯದಲ್ಲಿ ಒಂಟಿಯಾಗಿದ್ದು ತಾನು ಆಗಷ್ಟೇ ಪಡೆದ ಪವಿತ್ರಾತ್ಮನ ಪ್ರಭಾವದಿಂದ ಉಂಟಾದ ಅರಿವಿನ ಮೂಲಕ ದೇವರ ಯೋಜನೆಯನ್ನು ವಿಶೇಷವಾಗಿ ಅದರಲ್ಲಿರುವ ತನ್ನ ಪಾಲನ್ನು ಅಧ್ಯಯನ ಮಾಡಿದ್ದನು. ದೇವರ ವಾಕ್ಯದಲ್ಲಿ ಹೇಳಲ್ಪಟ್ಟು ಪವಿತ್ರಾತ್ಮನಿಂದ ಆಗತಾನೇ ತೋರಿಸಲಾದ ವಿಧಾನಗಳಿಂದ ಬಿನ್ನವಾದುದನ್ನು ವಿರೋಧಿಯಾದ ಸೈತಾನನಿಂದ ಸೂಚಿಸುವುದರ ಮೂಲಕ ಪರೀಕ್ಷೆ ಪರಿಶೋಧನೆಗಳನ್ನು ಸಹ ಇದು ತರುವಂತಾದುದನ್ನು ನಾವು ನೋಡುತ್ತೇವೆ. ನಮ್ಮ ಕರ್ತನು ಆ ಪರಿಶೋಧನೆಗಳಲ್ಲೆಲ್ಲಾ ಯಶಸ್ವಿಯಾಗಿ ದಾಟಿಬಂದು ಜಯಶಾಲಿಯಾಗಿ ತನ್ನ ಮೂರುವರೆ ವರುಷದ ಮರಣಪರ್ಯಂತರವಾದ ಸ್ವಯಂಪ್ರೇರಿತ ಯಜ್ಞಾರ್ಪಣಾ ಕಾರ್ಯವನ್ನು ಆರಂಭಿಸಿದನು. ಸಹಜವಾಗಿಯೇ ಆತನು ಯೋಹಾನನು ದೀಕ್ಷಾಸ್ನಾನ ಮಾಡಿಸುತ್ತಾ ಬೋಧಿಸುತ್ತಾ ಇದ್ದ ಸ್ಥಳಕ್ಕೆ ಹಿಂದಿರುಗಿ ಹೋದನು. ಯೋಹಾನನೊಂದಿಗೆ ಆತನು ಎಷ್ಟರ ಮಟ್ಟಿಗೆ ಅನ್ಯೋನ್ಯತೆಯಲ್ಲಿದ್ದನೆಂದಾಗಲೀ ಇಲ್ಲವೇ ಅಲ್ಲಿ ಆತನು ಎಷ್ಟು ಕಾಲ ಆ ಸುತ್ತುಮುತ್ತಣ ಪ್ರದೇಶದಲ್ಲಿದ್ದನೆಂದಾಗಲೀ ಹೇಳಲಾಗಿಲ್ಲ. ಕೇವಲ ಬಹು ಸುಲಭವಾಗಿ ಗ್ರಹಿಸುವಂಥ ಸಂಗತಿಗಳನ್ನು ಗಮನಕ್ಕೆ ತರಲಾಗಿದೆ.

ಯೇಸುವು ಅಡವಿಯಲ್ಲಿದ್ದು ದೂರದಲ್ಲಿರುವಾಗ ಫರಿಸಾಯರು ಮತ್ತು ಶಾಸ್ತ್ರಿಗಳು ಬಂದು ಯೋಹಾನನ್ನು ತಾನು ಮೆಸ್ಸೀಯನೋ ಅಲ್ಲವೋ ಎಂದು ಕೇಳಿದ್ದು ಮತ್ತು ತಾನು ಆತನಲ್ಲವೆಂದೂ ಆ ಪ್ರವಾದನೆಗಳನ್ನು ನೆರವೇರಿಸಲಿದ್ದ ಶ್ರೇಷ್ಠನಾದ ಮೆಸ್ಸೀಯನಿಗೆ ಪಾದರಕ್ಷೆಹೊರುವ ದಾಸನಾಗಿರಲೂ ತಾನು ಯೊಗ್ಯನೂ ಅಲ್ಲವೆಂಬ ದಿಟ್ಟವಾದ ಉತ್ತರವನ್ನು ಆತನಿಂದ ಸಾಕ್ಷಿಯಾಗಿ ಹೊಂದಿದ್ದರು. ಇದು ಯೇಸು ಮರಳಿ ಬರುವುದಕ್ಕೆ ಕೇವಲ ಹಿಂದಿನ ದಿನ ನಡೆದಿತ್ತು. ಮತ್ತು ಮಾರಣೆಯ ದಿನ ಯೇಸುವು ಅರಣ್ಯದಿಂದ ಹಿಂದಿರುಗಿದವನಾಗಿ ಜನರೊಂದಿಗೆ ಕೂಡಿಕೊಂಡು ಯೋಹಾನನ ಉಪದೇಶ ಮುಂತಾದವುಗಳನ್ನು ಕೇಳುತ್ತಿರುವಾಗ ಯೋಹಾನನು ಆತನ ವಿಷಯವಾಗಿ ಹೇಳಿ, "ಅಗೋ, [ಯಜ್ಞಕ್ಕೆ] ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆಮಾಡುವವನು" ಎಂದೂ ಪವಿತ್ರಾತ್ಮನು ಪಾರಿವಾಳದ ಹಾಗೆ ಇಳಿದು ಬಂದು ಆತನ ಮೇಲೆ ನೆಲೆಸಿದುದಕ್ಕೆ ಸಾಕ್ಷಿಯಾಗಿದ್ದುದಾಗಿಯೂ ಬಹಿರಂಗಪಡಿಸಿದನು. ಅದರ ಮಾರಣೆಯ ದಿನ, ನಮ್ಮ ಪಾಠದಲ್ಲಿ ನಾವು ಓದಿರುವಂತೆ, ಯೋಹಾನನು ತನ್ನ ಇಬ್ಬರು ಶಿಷ್ಯರೊಡನೆ ನಿಂತಿರುವಾಗ ಅಲ್ಲಿ ದೂರದಲ್ಲಿ ತಿರುಗಾಡುತಿದ್ದ ಯೇಸುವನ್ನು ತೋರಿಸಿ "ಅಗೋ, ದೇವರು ಯಜ್ಞಕ್ಕೆ ನೇಮಿಸಿದ ಕುರಿ" ಎಂದು ಅವರಿಗೆ ಹೇಳಿದನು.

## "ನನ್ನ ಹಿಂದೆ ಒಬ್ಬನು ಬರುತ್ತಾನೆ"

ಸ್ನಾನಿಕನಾದ ಯೋಹಾನನಲ್ಲಿದ್ದ ಸೊಗಸಾದ ರೀತಿಯ ಸರಳತೆ ಮತ್ತು ಪ್ರಾಮಾಣಿಕತೆಗಳು ಗಮನಾರ್ಹವಾದುದು ಯಾಕೆಂದರೆ ಅದು ಅಪರೂಪ. ಉದಾರ ಮನಸ್ಸಿನ ಬಹು ಪಾಲು ಜನರಲ್ಲಿರುವಂತೆ ಕಾಣುವ ಸ್ವಾರ್ಥದ, ಎಲ್ಲವನ್ನು ಸೆಳೆದುಕೊಳ್ಳುವ ಮನೋಭಾವವು ಅವರನ್ನು ಯೋಹಾನನಿಗೆ ವಹಿಸಿದ ರೀತಿಯ ಸೇವೆಗೆ ಅನರ್ಹರನ್ನಾಗಿಸುವುದು. ಇತರರ ವಿಷಯವಾಗಿ ಏನನ್ನಾದರೂ ಹೇಳುವಾಗ ತಮ್ಮ ಸ್ಥಾನಮಾನ ಸೇವೆಗಳನ್ನು ಅತಿಶಯವಾಗಿ ಹೊಗಳಿಕೊಳ್ಳುವುದನ್ನು ತಪ್ಪಿಸಲು ಬಹುಪಾಲಿನ ಜನರಿಗೆ ಪೂರ್ಣವಾಗಿ ಅಸಾಧ್ಯವೆಂಬುದು ಸ್ಪಷ್ಟ. ಆದರೆ ಯೋಹಾನನು ತನ್ನನ್ನು ತಾನು ಪೂರ್ಣವಾಗಿ ಕಡೆಗಾಣಿಸಿ ಕೊಂಡಂತೆ ತೋರುತ್ತದೆ. ಅಡವಿಯಲ್ಲಿ ಕೂಗುವವನ ಶಬ್ದವಾಗಿದ್ದ ಆತನಿಗೆ ತನ್ನ ಜವಾಬ್ದಾರಿಗಳಲ್ಲಿ ಒಂದೇ ಎಂದರೆ ಮೆಸ್ಸೀಯನನ್ನು ಪ್ರಕಟಿಸುವುದು ಎಂದು ಆತನು ಭಾವಿಸಿದ್ದನು. ತನ್ನ ವಿಶಿಷ್ಟಸ್ಥಾನದ ಗೌರವವನ್ನು ಅಲಕ್ಷಿಸಿಕೊಂಡು ಎಲ್ಲರ ಹೃದಯಗಳ ಭಕ್ತಿಭಾವನ್ನು ಯೇಸುವಿನ ಕಡೆಗೆ ತಿರುಗಿಸಿದ್ದನು. ಗೌರವಾನ್ವಿತರಾದ ಕರ್ತನ ಸೇವಕರಿಗೆ ಇದೇ ಸರಿಯಾದ ಮನೋಭಾವವೆಂದು ಪ್ರತಿಯೊಬ್ಬನೂ ತನ್ನ ತನ್ನ ಹೃದಯದಲ್ಲಿ ಇದಕ್ಕೆ ಒತ್ತುಕೊಡೋಣ. ನಮ್ಮನ್ನು ನಾವು ಗೌರವಿಸಿಕೊಳ್ಳದೆ ತಂದೆಯು ಗೌರವಿಸಿದ ನಮ್ಮ ಕರ್ತನೂ ಶಿರಸ್ಸೂ ಆದವನಿಗೆ ಗೌರವಿಸೋಣ. ಈ ಸೇವೆಯಲ್ಲಿ ನಾವು ಎಷ್ಟರ ಮಟ್ಟಿಗೆ ನಂಬಿಗಸ್ತರಾಗಿ ನಮ್ಮನ್ನು ಹೊಗಳಿಕೊಳ್ಳವುದನ್ನು ಬಿಟ್ಟು ನಮ್ಮ ಒಡೆಯನ ಘನತೆಗೌರವಗಳನ್ನು ಕೊಂಡಾಡಿ ದೇವರ ಯೋಜನೆಗಳೆಲ್ಲವುಗಳೂ ಆತನಲ್ಲಿ ಕೇಂದ್ರೀಕೃತವಾಗಿರುವುದೆಂದು ತೋರಿಸಿಕೊಡುವೆವೋ ಅಷ್ಟರ ಮಟ್ಟಿಗೆ ನಾವು ನಮ್ಮಲ್ಲಿರುವ ಮನೋಭಾವಗಳನ್ನು ಪ್ರದರ್ಶಿಸುವೆವು. ಈ ಮನೋಭಾವವನ್ನೇ ಕರ್ತನು ಅಂಗೀಕರಿಸಿ ಅದಕ್ಕೆ ಪ್ರತಿಫಲವಾಗಿ ಪರಲೋಕರಾಜ್ಯ ಮತ್ತು ಅದರ ಮಹಿಮೆಯಲ್ಲಿ ಪಾಲನ್ನು ನೀಡುವನು. ಈ ಮನೋಭಾವವನ್ನು ನಾವು ಅಭ್ಯಾಸಮಾಡಿಕೊಂಡು ಅದನ್ನು ನಮ್ಮ ಹೃದಯಗಳಲ್ಲಿ ಹೊಂದದೇ ಹೋದಲ್ಲಿ ನಾವು ಆ ರಾಜ್ಯಕ್ಕೆ ಅನರ್ಹರಾಗಿ ಪ್ರಭಾವ ಮಾನ ನಿರ್ಲಯತ್ವಗಳನ್ನು ಪಡೆಯಲು ಅನರ್ಹರಾಗುವೆವು. "ನನ್ನನ್ನು ಸನ್ಮಾನಿಸುವವನನ್ನು ನಾನು ಸನ್ಮಾನಿಸುವೆನು," "ಯಾರು ನನಗೂ ಮತ್ತು ನನ್ನ ಮಾತುಗಳಿಗೂ ನಾಚಿಕೊಳ್ಳುವನೋ ಅವನಿಗೂ ಮನುಷ್ಯಕುಮಾರನು ನಾಚಿಕೊಳ್ಳುವನು," "ತನ್ನನ್ನು ಹೆಚ್ಚಿಸಿಕೊಳ್ಳುವ (ಹೊಗಳಿ ಕೊಳ್ಳುವ) ಪ್ರತಿಯೊಬ್ಬನೂ ತಗ್ಗಿಸಲ್ಪಡುವನು; ತನ್ನನ್ನು ತಗ್ಗಿಸಿ ಕೊಳ್ಳುವವನು ಹೆಚ್ಚಿಸಲ್ಪಡುವನು."–1 ಸಮುವೇಲ 2:30; ಲೂಕ 9:26; 14:11.

## "ಜನರೆಲ್ಲರೂ (ಆತನ) ನಿರೀಕ್ಷೆಯಲ್ಲಿರುವರು"

ಆ ಸಮಯದಲ್ಲಿ ಇಸ್ರಾಯೇಲ್ ಜನರೆಲ್ಲರೂ ಮೆಸ್ಸೀಯನು ಬರುವುದನ್ನು ನಿರೀಕ್ಷಿಸುತ್ತಿದ್ದರೆಂದು ಸತ್ಯವೇದವು ನಮಗೆ ತಿಳಿಸುತ್ತದೆ. ಇದು ನಮ್ಮ ಕರ್ತನ ಜನನ, (ಪಂಡಿತರಿಗೆ) ಹೆರೋದನ ಮನವಿ, ಬೇತ್ಲೆಹೇಮಿನಲ್ಲಿ ಮಕ್ಕಳು ಕೊಲ್ಲಲ್ಪಟ್ಟ ಕಾಲಗಳಿಗೆ ಸಂಬಂಧಿಸಿದುದೆಂದು ಸತ್ಯವೇದದ ದಾಖಲೆಗಳು ತೋರಿಸಿಕೊಡುತ್ತವೆ. ಡಾಕ್ಟರ್ ಫೆರಾರ್ ಎಂಬುವರು ಇದೇ ವಿಧದಲ್ಲಿ ಗಮನಿಸಿ ಹೇಳಿದ್ದಾರೆ:

"ಹಿಂದಿನ ಕಾಲದ ಪ್ರವಾದನೆಗಳ ಮೂಲದಿಂದ ಪಡೆದ ತೀವ್ರವಾದ ಒಂದು ಗಾಢನಂಬಿಕೆ ಆ ಕಾಲದಲ್ಲಿ ಪೌರಾತ್ಯ ದೇಶಗಳ ಪರ್ಯಂತರ ಪ್ರಚಲಿತವಾಗಿದ್ದುದೇನೆಂದರೆ, ಸ್ವಲ್ಪ ಸಮಯದಲ್ಲಿ ಯೂದಾಯ ದೇಶದಲ್ಲಿ ಒಬ್ಬ ಪ್ರಬಲನಾದ ಅಧಿಪತಿಯು ಎದ್ದು ಲೋಕದಲ್ಲೆಲ್ಲಾ ಪ್ರಭುತ್ವವನ್ನು ಗಳಿಸಿಕೊಳ್ಳು ವನು ಎಂದು ಟ್ಯಾಸಿಟಸ್, ಸ್ಯುಟೊನಿಯಸ್ ಮತ್ತು ಜೋಸೆಫಸ್ ಎಂಬುವರ ಮೂಲಕವಾಗಿ ನಾವು ತಿಳಿಸಲ್ಪಟ್ಟಿದ್ದೇವೆ."

ಸಾದಾರಣವಾಗಿ ಜನರಲ್ಲಿದ್ದ ಈ ನಿರೀಕ್ಷೆಯಾನುಸಾರವೇ ಮೆಸ್ಸೀಯನ ರಾಜ್ಯವು ಹತ್ತಿರವಾಗಿದೆಯೆಂಬ ಯೋಹಾನನ ಉಪದೇಶವು ಅಂಥ ದೊಡ್ಡ ಗುಂಪನ್ನು ಸೆಳೆದುಕೊಂಡಿತು. ಯಾರು ತಮ್ಮ ಪಾಪಗಳನ್ನು ಅರಿಕೆಮಾಡಿ ಅದಕ್ಕೆ ಪಶ್ಚಾತ್ತಾಪ ಪಟ್ಟು ಮಾನಸಾಂತರವಾಗಿ ಆ ರಾಜ್ಯದಲ್ಲಿ ಪಾಲು ಹೊಂದಲು ಸಿದ್ಧರಾಗಿದ್ದರೋ ಅವರೆಲ್ಲರನ್ನೂ ಇದರ ಸಂಕೇತವಾಗಿ ಸ್ನಾನದೀಕ್ಷೆ ಪಡೆಯಲು ಅಹ್ವಾನಿಸಲಾಯಿತು. ಆದರೆ ಇದು ಕೇವಲ ಯೆಹೂದ್ಯರಿಗೆ ಅನ್ವಯವಾಗಿದ್ದು ಧರ್ಮಶಾಸ್ತ್ರ ನಿಯಮದ ಪ್ರಕಾರ ವರುಷ ವರುಷವೂ ಹೋರಿ ಹೋತಗಳ ರಕ್ತದ ಮೂಲಕ ಪರಿಹಾರವಾಗುತ್ತಿದ್ದ (ಆದಾಮನ) ಮೂಲ ಪಾಪಗಳಿಗೋಸ್ಕರವಲ್ಲದೆ ಧರ್ಮಶಾಸ್ತ್ರವಿಧಿಗಳಿಗೆ ವಿರೋಧವಾಗಿ ಮಾಡಿದ್ದ ವೈಯುಕ್ತಿಕವಾದ ಉಲ್ಲಂಘನೆ ಅಕೃತ್ಯಗಳಿಗಾದ ಪಶ್ಚಾತಾಪದ ಕಾರಣಕ್ಕಾಗಿತ್ತು. ಯೋಹಾನನ ಸಂದೇಶವನ್ನು ಜನರು ಎಷ್ಟರ ಮಟ್ಟಿಗೆ ನಂಬಿ ನಡೆದರೋ ಅಷ್ಟರ ಮಟ್ಟಿಗೆ ಅವರು ತನ್ನ ಸೇವೆಗೆ ಮತ್ತು ಸುವಾರ್ತಾಭಿವೃದ್ಧಿಗೆ ಸಿದ್ಧರಾಗಿರುವರೆಂದು ನಮ್ಮ ಕರ್ತನು ನಮಗೆ ಸಾಕ್ಷಿ ನುಡಿದಿದ್ದಾನೆ. ಆದುದರಿಂದ

ಯಾರು ನಮ್ಮ ಕರ್ತನ ಶಿಷ್ಯರಾದರೋ ಅವರು ಹಿಂದೆ ಯೋಹಾನ ಮತ್ತು ಆತನ ಉಪದೇಶಗಳನ್ನು ತಿಳಿದಿದ್ದು ಅದರಲ್ಲಿ ಅವರಿಗೆ ಪೂರ್ಣ ಸಹಾನುಭೂತಿಯಿತ್ತೆಂಬುದಕ್ಕೆ ನಮಗೆ ಆಶ್ಚರ್ಯವಾಗದು. ತಿಳುವಳಿಕೆ ಶ್ರದ್ಧೆಭಕ್ತಿಯ ವಿಷಯದಲ್ಲಿ ಇಡುವ ಒಂದು ಹೆಜ್ಜೆಯು ಮತ್ತೊಂದು ಹೆಜ್ಜೆಗೆ ನಡೆಸುವುದೆಂಬುದು ದೇವರ ಏರ್ಪಾಟಿನಲ್ಲಿರುವ ಒಂದು ನಿಯಮವಲ್ಲವೆ? ಇದರ ಅನುಸಾರವಾಗಿಯೇ ಸ್ನಾನಿಕನಾದ ಯೋಹಾನನ ಶಿಷ್ಯರ ಗಮನವನ್ನು ಮೊದಲು ಮೆಸ್ಸೀಯನ ಕಡೆಗೆ ಹೀಗೆ ಸೆಳೆದಾಗ ಅವರಿಗೆ ಯೇಸುವಿನ ಶಿಷ್ಯರಾಗುವ ಬಾಗಿಲು ತೆರೆಯಲಾಯಿತು.

## ಯೇಸುವಿನೊಡನೆ ಅನ್ಯೋನ್ಯತೆ ಬಯಸುವುದು

ಯಾವ ಇಬ್ಬರು ಶಿಷ್ಯರಿಗೆ ಸ್ನಾನಿಕನಾದ ಯೋಹಾನನು "ಇಗೋ, ದೇವರು ನೇಮಿಸಿದ ಯಜ್ಞದ ಕುರಿ" ಎಂದು ಅವರ ಗಮನಕ್ಕೆ ತಂದನೋ ಆ ಕ್ಷಣವೇ ಅವರು ಯೋಹಾನನು ಪರಿಚಯಿಸಿದ್ದ ಆ ಮೆಸ್ಸೀಯನ್ನು ತಾವು ಕಂಡುಕೊಂಡದ್ದೇ ಯಾದಲ್ಲಿ ಅದು ಆತನ ಅನ್ಯೋನ್ಯತೆಯನ್ನು ಬಯಸುವ ಸಮಯವಾಗಿದ್ದು, ಸಾಧ್ಯವಾದಲ್ಲಿ ಆತನ ಸೇವೆಯಲ್ಲಿ ತಮ್ಮನ್ನು ಗುರುತಿಸಿಕೊಳ್ಳಬೇಕೆಂದು ತೀರ್ಮಾನಿಸಿದ್ದರು. ತನ್ನೊಡನೆ ಸಹಕರಿಸುವುದನ್ನು ಬಿಟ್ಟ ಅವರ ವಿರೋಧವಾಗಿ ಸ್ನಾನಿಕನಾದ ಯೋಹಾನನು ಸ್ವಲ್ಪವೂ ಬಹಿರಂಗವಾಗಿ ಪ್ರತಿಭಟಿಸಲಿಲ್ಲವೆಂದು ತೋರುತ್ತದೆ. ಈ ಇಬ್ಬರಲ್ಲಿ ಒಬ್ಬರ ಹೆಸರನ್ನು ವಿವರಣೆಯಲ್ಲಿ ಕೊಡಲಾಗಿದೆ, ಅದು ಅಂದ್ರೆಯ; ಮತ್ತೊಬ್ಬನ ಹೆಸರನ್ನು ಬಿಡಲಾಗಿದೆ. ಆದರೆ ಅದು ಸುವಾರ್ತೆಯ ಲೇಖಕನಾದ ಯೋಹಾನನೆಂದು ಭಾವಿಸಲಾಗಿದೆ. ಬೇರೊಂದು ಸಂದರ್ಭ ದಲ್ಲೂ "ಯೇಸುವಿಗೆ ಪ್ರಿಯನಾಗಿದ್ದ ಶಿಷ್ಯನೆಂದು" ತನ್ನನ್ನು ಸೂಚಿಸಿಕೊಂಡು ತನ್ನ ಹೆಸರನ್ನು ಕೊಡದಿದ್ದುದು ಈ ವಿಷಯಗಳಲ್ಲಿದ್ದ ಆತನ ವಿನಮ್ರತೆಯನ್ನು ತೋರಿಸಲಾಗಿದೆ. ಈ ವಿನಮ್ರತೆಯು ಎಷ್ಟು ಮಧುರ! ಯೋಹಾನನ ಗುಣವು ನಮ್ಮಲ್ಲಿ ಎಷ್ಟು ಪ್ರೀತಿಯನ್ನು ಗಳಿಸಿರುವುದು. ವಿನಮ್ರತೆಯಲ್ಲಿ ಕಡಿಮೆ ಯಾಗಿರುವ ಮನುಷ್ಯನು ಈ ವಿಷಯವನ್ನು ಬರೆಯುವಾಗ ಮೊದಲು ತಾನು ಹೇಗೆ ಯೇಸುವಿನ ಶಿಷ್ಯನಾಗಲು ಯೋಚಿಸಿದ್ದನೆಂದು ಹೇಳಿ ನಂತರ ಆಂದ್ರೇಯನು ತನ್ನ ಜೊತೆಯಲ್ಲಿ ಬರಲು ಆಹ್ವಾನಿಸಿದ್ದೆನೆಂದು ಹೇಳುವ ಸಂಭವವಿತ್ತು. ಯೋಹಾನನ ಈ ದೀನತೆಯ ಗುಣದ ನಿಮಿತ್ತ ನಾವು ಆತನನ್ನು ಹೆಚ್ಚಾಗಿ ಪ್ರೀತಿಸುವುದು ಮಾತ್ರವಲ್ಲದೆ ಆತನು ಬರೆದ ವಿಷಯಗಳೆಲ್ಲವುಗಳಲ್ಲಿ ನಮಗೆ ಇದರಂತೆಯೇ ಹೆಚ್ಚಾದ ಬರವಸೆ ಮೂಡುತ್ತದೆ. ಅಂದರೆ ತನ್ನ ಆಕಾಂಕ್ಷೆಯ ನಿಮಿತ್ತ ಆತನು ವಿವರಿಸಿ ಬರೆದ ಸಂಗತಿಗಳನ್ನು ವಿರೂಪಗೊಳಿಸುವುದಾಗಲಿ ಅಥವಾ ವರ್ಣರಂಜಿತವಾಗಿ ಹೇಳುವುದಾಗಲೀ ಇರುವುದಿಲ್ಲ.

ಕರ್ತನನ್ನು ಹಿಂಬಾಲಿಸಲು ಅವರು ದಿಟ್ಟತನದಿಂದ ಅವನಿಗೆ "ಸ್ವಾಮಿ, ನಾವು ಸ್ನಾನಿಕನಾದ ಯೋಹಾನನ ಅತಿ ಪ್ರಮುಖರಾದ ಶಿಷ್ಯರಲ್ಲಿ ಬಹು ಗೌರಯುತವಾದ ವಿಶೇಷ ಸ್ಥಾನಹೊಂದಿದವರಾಗಿ ಈಗ ನಮ್ಮನ್ನು ನಿನಗೆ ಪರಿಚಯ ಮಾಡಿಕೊಳ್ಳುತ್ತೇವೆ" ಎಂದು ಹೇಳಿ ಆತನನ್ನು ಸಮೀಪಿಸುವ ವಿಧಾನವನ್ನು ಅನುಸರಿಸಿದೆ ಇರುವಲ್ಲಿ ಈ ಇಬ್ಬರು ಮನುಷ್ಯರ ವಿನಮ್ರತೆಯು ಇನ್ನೂ ಹೆಚ್ಚು ಆದರ್ಶಪ್ರಾಯವಾಗಿರುವುದು. ಬದಲಾಗಿ ಅವರು ನಿಶ್ಶಬ್ಧವಾಗಿ ಆತನ್ನು ಹಿಂಬಾಲಿಸುತ್ತಾ ನಮ್ಮ ಕರ್ತನು ಇಳುಕೊಂಡಿರುವುದು ಎಲ್ಲಿ ಹಾಗೂ ನಾವು ಮುನ್ನುಗ್ಗ ದೆಯೇ ಹೇಗೆ ಆತನೊಡನೆ ಪರಿಚಯಸ್ಥರಾಗ ಬಹುದೆಂಬುದನ್ನು ಆಶ್ಚರ್ಯದಿಂದ ಯೋಚಿಸುತಿದ್ದರು. ಆತನ ಮೇಲಿನ ತಮ್ಮ ಭಯಭಕ್ತಿ ಹಾಗೂ ತಮ್ಮ ವಿಷಯವಾದ ವಿನಮ್ರವಾದ ಅಭಿಪ್ರಾಯಗಳು ಅವರನ್ನು ಅಸಭ್ಯರಾಗಿ ವರ್ತಿಸದಂತೆ ತಡೆದವು. ಹೀಗಿರುವಲ್ಲಿ ಕರ್ತನು ತಾನು ಇಳಿದುಕೊಂಡಿದ್ದ ಸ್ಥಳಕ್ಕೆ ಹೋಗುವಾಗ ಆತನನ್ನು ಸುಮಾರು ದೂರದವರೆಗೆ ಹಿಂಬಾಲಿಸುತ್ತಿದ್ದ ಅವರಿಗೆ ತಿರುಗಿಕೊಂಡು ಕೇಳಿದ್ದು, "ನಿಮಗೆ ಏನು ಬೇಕಾಗಿದೆ? ಎಂದು. ಅಥವಾ ನಾವು ಇದನ್ನು ಈಗಿನ ಭಾಷೆಯಲ್ಲಿ ಹೀಗೆ ಅನುವಾದಿಸಿ ಹೇಳಬಹುದು, "ನಾನು ನಿಮಗೇನಾದರೂ ಮಾಡಬೇಕಿರುವುದೋ?" ಆವರು ಆಶ್ಚರ್ಯ ಚಕಿತರಾಗಿ ಗುರುವಿಗೆ ಕೇವಲ ಉತ್ತರಿಸಿದುದು, "ಗುರುವೇ ನೀನು ಇಳುಕೊಂಡಿದುವುದು ಎಲ್ಲಿ ಎನ್ನುವುದು ನಮಗೆ ಕುತೂಹಲ ವಾಗಿದೆ." ನಮ್ಮ ಕರ್ತನು ಉತ್ತರವಾಗಿ ಹೇಳಿದ್ದು, "ಬಂದು ನೋಡಿರಿ" ಮತ್ತು ಅವರು ಅತನೊಡನೆ ಹೋಗಿ ಮಿಕ್ಕ ಆ ದಿನವನ್ನು ಅಲ್ಲಿ ಅವನೊಡನೆ ಕಳೆದರು (ಏಕೆಂದರೆ ಆಗಲೇ ಅದು ನಾಲ್ಕು ಗಂಟೆಯಾಗಿತ್ತು). ಆ ಮದ್ಯಾಹ್ನ ಮತ್ತು ಸಾಯಂಕಾಲ ದಲ್ಲಿ ಅವರು ಕೇಳಿದ ಪ್ರಶ್ನೆಗಳು ಮತ್ತು ಅದಕ್ಕೆ ನಮ್ಮ ಕರ್ತನ ಉತ್ತರಗಳು ನಮ್ಮ ಕಲ್ಪನೆಗೆ ಬಿಟ್ಟದ್ದು ಏಕೆಂದರೆ ಅದರ ದಾಖಲೆ ಗಳು ಇರುವುದಿಲ್ಲ. ನಿಸ್ಸಂದೇಹವಾಗಿ ಅವರು ಆತನ ವಿಷಯ ವಾಗಿ ಸ್ನಾನಿಕನಾದ ಯೋಹಾನನಿಂದ ಕೇಳಿದ್ದನ್ನು ವಿವರಿಸಿ ಆತನ ಮುಂದಿನ ಕಾರ್ಯಗಳ ಮತ್ತು ರಾಜ್ಯದ ಬಗ್ಗೆ ಅವರು ವಿಚಾರಿಸಿ ರುವರು. ನಮ್ಮ ಕರ್ತನು ಅವರಿಗೆ ಕೇವಲ ಬಾಗಶಃ ಸತ್ಯವನ್ನು ಹೇಳಿರಬಹುದೆನ್ನುವುದು ಖಚಿತ; ಇದರ ಅನುಸಾರವಾಗಿಯೇ ಆತನು ಮುಂದೆ ತನ್ನ ಎಲ್ಲಾ ಶಿಷ್ಯರಿಗೆ ಹೇಳಿದ್ದು, "ನಾನು ನಿಮಗೆ ಹೇಳಬೇಕಾದುದು ಇನ್ನೂ ಬಹಳ ಉಂಟು; ಆದರೆ ಸದ್ಯಕ್ಕೆ ಅದನ್ನು ಹೊರಲಾರಿರಿ." – ಯೋಹಾನ 16:12

## ಹೊಸ ಸೃಷ್ಟಿಗಳಿಗೆ ಇದರಲ್ಲಿರುವ ಪಾಠ

ಹಲವಾರು ಪಾಠಗಳು ಇಲ್ಲಿರುವುವು; ನಮಗೆ ಅವು ಪ್ರಯೋಜನವಾಗಬಹುದು: (1) (ಕರ್ತನನ್ನು) ಸಮೀಪಿ – ಸುವಲ್ಲಿ ಕಂಡುಬಂದ ಶಿಷ್ಯರ ದೀನತೆ (2) ಯೋಹಾನನ ಶಿಷ್ಯರಾಗಿದ್ದರಿಂದ ಯೇಸುವಿನ ಶಿಷ್ಯರಾಗುವುದಕ್ಕೆ ತಾವು ಮುಂದುವರಿದುದರಲ್ಲಿ, ದೇವರು ತಮಗೆ ಒದಗಿಸಿದವು ಗಳನೆಲ್ಲಾ ಪಡಕೊಂಡು ಅದನ್ನು ಸದುಪಯೋಗಪಡಿಸಿ ಕೊಳ್ಳುವುದರಲ್ಲಿ ತೋರಿಬಂದ ಅವರ ಯೋಗ್ಯವಾದ ಅಕಾಂಕ್ಷೆ. (3) ಕರ್ತನಿಗೆ ಅಡ್ಡಲಾಗಿ ಬರದಂತೆ ನೋಡಿಕೊಂಡು ಆತನ ಅನ್ಯೋನ್ಯತೆಯನ್ನು ಬಯಸಿ ಆತನನ್ನು ಉತ್ತಮವಾದ ರೀತಿಯಲ್ಲಿ ತಿಳಿದುಕೊಳ್ಳಲು ಅವರು ಅನುಸರಿಸಿದ ವಿಧಾನ. (4) ನಮ್ಮ ಕರ್ತನು ಅವರಿಗೆ ನೀಡಿದ ಆದರಪೂರ್ಣವಾದ ಸ್ವಾಗತ ಮತ್ತು ಅವರನ್ನು

ಉಪಚರಿಸ ಸಲುವಾಗಿ ತನ್ನ ಮನೆಗೆ ಬರಮಾಡಿಕೊಂಡುದು. (5) ಪರಲೋಕದ ವಿಷಯವಾಗಲೀ ಅಥವಾ ಲೋಕದಲ್ಲಿ ಸಂಭವಿಸಲಿರುವ ಕಷ್ಟಪರಿಶೋಧನೆಗಳ ವಿಷಯವಾದ ಸತ್ಯವನ್ನು ಅವರಿಗೆ ಸಂಪೂರ್ಣವಾಗಿ ತಿಳಿಸದಿರುವಲ್ಲಿ ಕಂಡುಬಂದ ನಮ್ಮ ಕರ್ತನ ಜ್ಞಾನವಿವೇಕಗಳು. ಅಪೋಸ್ತಲನು ಮಾಡಿರುವ ಶಿಫಾರಸ್ಸಿನಂತೆ, ಹೊತ್ತುಹೊತ್ತಿಗೆ ಅವರವರಿಗೆ ತಕ್ಕಷ್ಟು ಮಾತ್ರ ಅಹಾರವನ್ನು, ಅಂದರೆ ಶಿಶುಗಳಿಗೆ ಹಾಲು ಚೆನ್ನಾಗಿ ಬೆಳೆದವರಿಗೆ ಗಟ್ಟಿಯಾದ ಅಹಾರವನ್ನು ಮಾತ್ರ ಒದಗಿಸುವುದು ಸತ್ಯವೇದದಲ್ಲಿನ ಕ್ರಮ.

ಈ ವಿವಿಧ ಪಾಠಗಳನ್ನು ಕರ್ತನ ಪ್ರಿಯ ಹಿಂಬಾಲ – ಕರು ತಮ್ಮ ಹೃದಯಗಳಲ್ಲಿ ಅನುಭವಗಳಲ್ಲಿ ಮತ್ತು ಅಭ್ಯಾಸಗಳಲ್ಲಿ ಅಳವಡಿಸಿಕೊಳ್ಳುವುದು ಎಷ್ಟು ಅಗತ್ಯ! ನಮ್ಮಲ್ಲಿ ಎಷ್ಟು ಮಂದಿ ಜ್ಞಾನರಹಿತವಾದ ಉತ್ಸಾಹದಿಂದ ಕೂಡಿದ್ದು ಹೊಸದಾಗಿ ಆರಂಭಿಸಿರುವವರಿಗೆ ಗಟ್ಟಿಯಾದ ಆಹಾರವನ್ನು ತಿನ್ನಿಸಿ ಅವರ ಆಸಕ್ತಿಯನ್ನು ಕುಂಟಿತಗೊಳಿಸದಿದ್ದರೂ ಅವರನ್ನು ಕಷ್ಟಕ್ಕೆ ಒಳಪಡಿಸಿ ಅಡ್ಡಿಯುಂಟು ಮಾಡಿರುವೆವು. ಆದರೆ ನಾವೆಲ್ಲರೂ (ಕ್ರಿಸ್ತನ) ಅನುಯಾಯಿಗಳೇ ಆಗಿದ್ದು ನೊಡಿ ಗ್ರಹಿಸಲು ಸಿದ್ಧವಿರುವವರಿಗೆ ಮುತ್ತುಗಳನ್ನು ತೋರಿಸುವಲ್ಲಿಯೂ ಮತ್ತು ಹಂದಿಯ ಸ್ವಭಾವವಿದ್ದು ಸಿದ್ಧರಲ್ಲದವರಿಗೆ ಅದನ್ನು ತೋರದಿರುವಲ್ಲಿಯೂ ಪ್ರಾಮಾಣಿಕರಾಗಿದ್ದು ಸರ್ಪಗಳಂತೆ ಜಾಣರಾಗಿ ಪಾರಿವಾಳಗಳಂತೆ ನಿಷ್ಕಪಟಿಗಳಾಗಿರುವುದನ್ನು ಹೆಚ್ಚುಹೆಚ್ಚಾಗಿ ಕಲಿತುಕೊಳ್ಳೋಣ.

## "ನಿಮಗೆ ಏನು ಬೇಕಾಗಿದೆ?"

ಈ ಕೇಳುವಿಕೆಯಲ್ಲಿ ವಿಶೇಷವಾದ ಬಲವಿರುವುದು ಹಾಗೂ ಇದನ್ನು ನಮ್ಮ ಕರ್ತನು ಮೊದಲು ತನ್ನ ಜೊತೆಯಲ್ಲಿ ಸೇರಬಯಸಿದ ಆ ಇಬ್ಬರ ಈ ಚಿಂತನೆಯನ್ನು ಜಾಗೃತಗೊಳಿಸುವ ಉದ್ದೇಶದಿಂದ ಇದನ್ನು ಉಪಯೋಗಿಸಿರುವಲ್ಲಿ ಸಂದೇಹವಿಲ್ಲ. ತಮ್ಮನ್ನು ತಾವೇ ಕೇಳಿಕೊಳ್ಳಲು ಮತ್ತು ಈಗಿನ ಕಾಲದ ಸತ್ಯವನ್ನು ತಿಳಿಯುವ ಆಸಕ್ತಿಯುಳ್ಳವರಿಗೆ ಸರಿಯಾದ ಸಮಯದಲ್ಲಿ ಇದನ್ನು ಸಲಹೆಯ ರೂಪದಲ್ಲಿ ಕೇಳಲು ಇದು ಒಂದು ಒಳ್ಳೆಯ ಪ್ರಶ್ನೆ. ನಾವು ಏನನ್ನು ಹುಡುಕುತ್ತಿರುವೆವು? ನಾವು ಏನನ್ನು ಎದುರು ನೋಡುತ್ತಿರುವೆವು? ಲೋಕವು ಏನನ್ನು ಹುಡುಕುತ್ತಿರುವುದೆಂದು ನಮಗೆ ತಿಳಿದಿದೆ; ಅದು ಐಶ್ವರ್ಯ ಮಾನ ಕೀರ್ತಿ ಕಷ್ಟವಿಲ್ಲದಿರುವುದು ಇತ್ಯಾದಿ. ಕರ್ತನ ಕಡೆಗೆ ತಿರುಗಿರುವ ಹಲವರಲ್ಲಿಯೂ ಲೌಕೀಕಭಾವವಿರುವುದು ನಮಗೆ ತಿಳಿದಿದೆ. ಅವರು ಕರ್ತನ ಶಿಷ್ಯರಾಗಿರಲು ಬಯಸಿದರೂ ಅವರಲ್ಲಿ ಹೆಚ್ಚುಕಡಿಮೆ ಪ್ರಾಪಂಚಿಕವಾದ ಆಕಾಂಕ್ಷೆ ನಿರೀಕ್ಷೆಗಳಿದ್ದು ಅವುಗಳನ್ನು ಬೆಳೆಸಿಕೊಂಡು ಅವುಗಳಲ್ಲಿ ಅನಂದಿಸುವರು. ನಾವು ಒಡೆಯನ (ಯೇಸುವಿನ) ಮಾತುಗಳನ್ನು ನಮ್ಮಲ್ಲಿ ಪ್ರತಿಯೊಬ್ಬನಿಗೂ ಹೇಳಿದೆಯೋ ಎಂಬಂತೆ ಅದಕ್ಕೆ ಲಕ್ಷ್ಯಕೊಡಬೇಕಿರುವುದು ಯುಕ್ತವಾದುದು. ನೀವು ಏನನ್ನು ಹುಡುಕುತ್ತಿರುವಿರಿ? ಇದಕ್ಕೆ ನಮ್ಮ ಒಡೆಯನಿಗೆ ನಮ್ಮ ಹೃದಯದ ಮೂಲಕವಾಗಿಯೂ ನಮ್ಮ ಪ್ರಾರ್ಥನೆಯ ಮೂಲಕವಾಗಿಯೂ ಉತ್ತರಿಸೋಣ. ನಾವು ಉತ್ತರಿಸುವ ಮೊದಲು ಇದು ಸತ್ಯವುಳ್ಳದ್ದೆಂಬುದನ್ನು ಚೆನ್ನಾಗಿ ವಿವೇಚಿಸಿ ನೋಡೋಣ, ಏಕೆಂದರೆ ನಾವು ನಿಜವಾಗಿಯೂ ಮೋಸ ಹೋಗಿರಬಹುದು. ಆದರೆ ನಾವು ಯಾವಾತನ ಮುಂದೆ ನಡೆದುಕೊಳ್ಳಬೇಕಾಗಿರುವುದೋ ಆತನಿಗೆ ಮೋಸಮಾಡಲು ಸಾಧ್ಯವಿಲ್ಲ. ನಾವು ಆ ರಾಜ್ಯವನ್ನು ಹುಡುಕುವುದು ಸರಿಯೇ. ಮತ್ತು ದೇವರು ಏರ್ಪಾಡು ಮಾಡಿರುವ ಹಾಗೆ ಇದರ ಜೊತೆಗೆ ವಿಶೇಷವಾದ ಗೌರವ ಮಹಿಮೆ ಹಾಗೂ ಘನತೆಗಳಿರುವುದನ್ನು ನಾವು ತಿಳಿಯಬೇಕು. ಈ ವಿಧದಲ್ಲಿ ನಾವು "ಪ್ರಭಾವ ಮಾನ ನಿರ್ಲಯತ್ವಗಳನ್ನು ಹುಡುಕುವವರಾಗಬಹುದು." ಆದರೆ ಅ ರಾಜ್ಯವನ್ನು ಈ ರೀತಿಯಲ್ಲಿ ಹುಡುಕುವಾಗ ಇದರ ಜೊತೆಗೆ ನಾವು ನೆನಪಿನಲ್ಲಿಡಬೇಕಾದುದೆಂದರೆ, ನಾವು ಮೊದಲು ದೇವರ ರಾಜ್ಯಕ್ಕಾಗಿಯೂ ಮತ್ತು ಆತನ ನೀತಿಗಾಗಿಯೂ ತವಕಪಡುವವರಾಗಬೇಕು ಎಂದು ನಮ್ಮ ಒಡೆಯನು ಬೇರೊಂದು ಸಂದರ್ಭದಲ್ಲಿ ಹೇಳಿದ ಮಾತು.

ನಾವು ನೆನಪಿನಲ್ಲಿಡಬೇಕಾದುದೆಂದರೆ, ಆ ರಾಜ್ಯವನ್ನು ಅನೀತಿಮಾರ್ಗದಿಂದ ಸೇರಲಾಗದು. ಅನ್ಯಾಯ ಅಕ್ರಮ ಸ್ವೇಚ್ಛಾಚಾರ ಸ್ವಪ್ರತಿಷ್ಠೆ ಸ್ವಾರ್ಥ ಇವುಗಳು ಯಾವ ರೂಪದಲ್ಲಿಯೇ ಇರಲಿ ಇವು ನಮ್ಮನ್ನು ಬೇರೆ ದಿಕ್ಕಿಗೆ ನಡೆಸುವ ಮಾರ್ಗಗಳು. ನಮ್ಮ ಒಡೆಯನು ತನ್ನ ನಡೆನುಡಿಗಳ ದೃಷ್ಟಾಂತಗಳಿಂದ ನಮಗೆ ತೊರಿಸಿಕೊಟ್ಟಿರುವುದೆಂದರೆ, ಈಗಿನ ಕಾಲದಲ್ಲಿ ಸದ್ಭಕ್ತರಾಗಿ ಜೀವಿಸಲು ಕೆಲವು ಮಟ್ಟಿನ ಹಿಂಸೆವಿರೋಧಗಳನ್ನು ಎದುರಿಸುವುದು ಒಳಗೊಂಡಿರುತ್ತದೆಂಬುದನ್ನೂ ಮತ್ತು ಲೋಕಸಮ್ಮತಿಯ ವಿಷಯದಲ್ಲಿ ದಣಿಗಿಂತ ಆಳು ದೊಡ್ಡವನಲ್ಲವೆಂಬುದನ್ನೂ ನಾವು ನೆನಪಿನಲ್ಲಿಡಬೇಕಾಗುವುದು. ಅದುದರಿಂದ ಆ ರಾಜ್ಯವನ್ನು ಹುಡುಕುತಿದ್ದೇವೆಂಬುದರ ಅರ್ಥ ನಾವು ತಮ್ಮನ್ನು ನಿರಾಕರಿಸಿಕೊಳ್ಳುವ ಇಕ್ಕಟ್ಟಾದ ಮಾರ್ಗದ ಕಡೆಗೆ ನಡೆಸುವ ಹಾದಿಯಲ್ಲಿರುವೆವೆನ್ನುವುದು. ಇದರ ಅರ್ಥ ಕರ್ತನ ಸೈನ್ಯಕ್ಕೆ ನಮ್ಮ ಹೆಸರು ಬರೆಯಿಸಿಕೊಂಡು ನಾವು ಕ್ರಿಸ್ತನ (ಶಿಲುಬೆಯ) ಒಳ್ಳೆಯ ಸೈನಿಕರಾಗಿ ಶ್ರಮೆಯನ್ನು ಅನುಭವಿಸಿ ಪಾಪಕ್ಕೆ ವಿರೋಧವಾಗಿ ಹೋರಾಡುವಾಗ ಆತನ ಕಡೆಗಿರುವ ನಮ್ಮ ನಿಷ್ಠೆಯ ದೆಸೆಯಿಂದ ಲೋಕದ ಶರೀರದ ಮತ್ತು ಸೈತಾನನ ಮೂಲಕವಾದ ವಿರೋಧಗಳು ನಮಗೆ ಎದುರಾಗುವುದೆಂಬ ಪೂರ್ಣ ತಿಳುವಳಿಕೆಯಿರುವುದು. ಯಾರು ಕಪಟಸ್ವಾರ್ಥಗಳಿಲ್ಲದೆ ಪ್ರಾಮಾಣಿಕತೆ ನಿಷ್ಠೆಗಳ ಮೂಲಕವಾಗಿ ಕರ್ತನನ್ನು ಹುಡುಕುವರೋ ಅವರು ಆತನ ಅನ್ಯೋನ್ಯತೆಯನ್ನು ಹೊಂದಿ ಆತನ ನಿಜವಾದ ಶಿಷ್ಯರಾಗುವರು; ಹಾಗೂ ಕಡೆಯಲ್ಲಿ ಅತನ ರಾಜ್ಯದಲ್ಲಿ ಆತನೊಡನೆ ಸಹಬಾಧ್ಯರಾಗುವರು.

## "ಮೊದಲು ಆತನು ತನ್ನ ಸ್ವಂತ ಸಹೋದರನನ್ನು ಕಂಡುಕೊಂಡದ್ದು"

ಯೋಹಾನನ ಮಾತಿನ ಮೂಲಕವಾಗಿ ಯೇಸುವನ್ನು ಹಿಂಬಾಲಿಸಿದ ಆ ಇಬ್ಬರು ಶಿಷ್ಯರಲ್ಲಿ ಸೀಮೋನ ಪೇತ್ರನ ತಮ್ಮನಾದ ಅಂದ್ರೆಯನು ಒಬ್ಬನು. "ಮೊದಲು ಇವನು ತನ್ನ ಸ್ವಂತ ಅಣ್ಣನನ್ನು ಕಂಡುಕೊಂಡನು." "ರಿವೈಸ್ಡ್ ವರ್ಶನ್" ಎಂಬ ಸತ್ಯವೇದ ಭಾಷಾಂತರದ ಪ್ರಕಾರ ಆ ಇಬ್ಬರೂ ತಮ್ಮ

ಸಹೋದರರನ್ನು ಹುಡುಕಿದರು ಆದರೆ ಆಂದ್ರೆಯನು ಮೊದಲು ತನ್ನ ಸಹೋದರನನ್ನು ಕಂಡುಕೊಂಡನು. ಆಗಲೇ ಕಲ್ಪಿಸಿಕೊಂಡಿರುವಂತೆ, ಯೋಹಾನು ಆ ಬೇರೊಬ್ಬ ಶಿಷ್ಯನಾಗಿದ್ದರೆ ಅವನಿಗೆ ಯಾಕೋಬನೆಂಬ ಅಣ್ಣನಿದ್ದನೆಂದು ನಮಗೆ ತಿಳಿದಿರುವುದು. ನಂತರದಲ್ಲಿ ಅವನು ತನ್ನ ಅಣ್ಣನನ್ನು ಕರ್ತನ ಬಳಿಗೆ ಕರೆತಂದನು. ನಾವು ಇಲ್ಲಿ ಒತ್ತಿಹೇಳಲು ಬಯಸುವ ವಿಶೇಷ ಅಂಶವೆಂದರೆ ನಮಗೆ ಇಲ್ಲಿ ಅಡಕವಾಗಿರುವ ವಿಶೇಷವಾಗಿ ಪ್ರಸಂಶನೀಯವೂ ಸೂಕ್ತವೂ ಆದ ಪಾಠವು, ಈ ಶಿಷ್ಯರು ಸತ್ಯದ ವಿಷಯವಾದ ಸೇವೆಯನ್ನು ಆರಂಭಿಸುವಾಗ ಮೊದಲು ತಮ್ಮ ಸ್ವಂತ ಸಹೋದರ ಬಳಿಗೆ ಹೋದ ಸಂಗತಿ. ಅವರ ಹೃದಯಗಳಲ್ಲಿ ಸಹೋದರ ಪ್ರೀತಿಯಿತ್ತೆಂಬುದು ಇಲ್ಲಿ ಸೂಚಿತವಾಗಿರುವುದು. ಯೇಸುವಿನ ಶಿಷ್ಯರಾಗಲು ಯೋಗ್ಯರಾಗಿ ಕಂಡುಬರುವವರಲ್ಲಿ ಇದನ್ನು ನಿರೀಕ್ಷಿಸಬೇಕಾಗುವುದು ನಮಗೆ ಸೂಕ್ತ. ಇವರಿಗೆ ತಮ್ಮ ಸಹೋದರ ಮೇಲೆ ಧರ್ಮದ ವಿಷಯದಲ್ಲಿ ತಮ್ಮ ಪ್ರಭಾವವಿತ್ತೆಂಬುದು ಸೂಚಿತವಾಗಿರುವುದು. ಅವರು ತಮ್ಮ ಗುಣನಡತೆ ಹಾಗೂ ನೀತಿಗಳ ವಿಷಯದಲ್ಲಿ ವಿಶೇಷವಾದ ವರೆಂಬುದು ತಮ್ಮ ಸಂಬಂಧಿಗಳಿಗೆ ತಿಳಿಯದಿದ್ದಲ್ಲಿ ಇದು ಅವರ ವಿಷಯವಾಗಿ ನಿಜವೆನ್ನುವ ಸಂಭವವಿರುತ್ತಿರಲಿಲ್ಲ. ಆದುದರಿಂದ ಕರ್ತನ ಜನರಲ್ಲಿ ಯಾರಾದರೂ ಶುಭವಾರ್ತೆಯನ್ನು ತೆಗೆದು ಕೊಂಡು ಮೊದಲು ಅನ್ಯರ ಬಳಿಗೆ ಹೋಗುವ ಒತ್ತಾಯವಿರುವು ದೆಂದು ಭಾವಿಸಿದಲ್ಲಿ ಇವರು ಯೋಗ್ಯರೆಂದು ಅನ್ಯರು ಎಣಿಸದಿದ್ದಲ್ಲಿ ಇದು ಅವರ ಕಾರ್ಯಗಳಿಗೆ ಅನುಕೂಲಕರವಲ್ಲದ ಸಂಕೇತ. ಆದರೂ ಆರಂಭದಲ್ಲಿ ಈ ಅನುಕೂಲಕರ ಸನ್ನಿವೇಶಗಳು ದೊರೆಯದಿದ್ದಲ್ಲಿ ತಮಗೆ ನಿರುತ್ಸಾಹವಾಯಿತೆಂದು ಅವರು ಭಾವಿಸದಿರಲಿ. ದೇವರಾದುಕೊಂಡವರಲ್ಲಿ ಕುಲೀನರು ಘನವಂತರು ಪ್ರಭಾವ ಹೊಂದಿದವರು ಅನೇಕರಿಲ್ಲ ಆದರೆ ಅವರೆಲ್ಲರೂ ಮುಖ್ಯವಾಗಿ ಗಣನೆಗೆ ಬಾರದವರು ಎಂದು ಭರವಸೆಯಿಂದ ಅಪೋಸ್ತಲನು ಹೇಳಿರುವುದನ್ನು ನೆನೆಯೋಣ.

ಕರ್ತನು ತನ್ನ ಅನ್ಯೋನ್ಯತೆಗೆ ಸೇರುವ ಸೌಭಾಗ್ಯವನ್ನು ನಮಗೆ ದಯಪಾಲಿಸಿದ್ದಾನೆಂಬ ಅಂಶವು ಭರವಸ ನೀಡುವು ದೆಂದರೆ, ನಮ್ಮಲ್ಲಿದ್ದ ಕೆಲವು ಸಂಗತಿಗಳನ್ನು ಆತನು ತಿರಸ್ಕರಿಸದೆ ನಮ್ಮನ್ನು ತನ್ನ ಸತ್ಯ ಹಾಗು ಕೃಪೆಯ ಮೂಲಕ ಆಕಾರಕೊಟ್ಟು ರೂಪಿಸಿ ಕಡೆಯದಾಗಿ ಮೊದಲನೇ ಪುನರುತ್ಥಾನದಲ್ಲಿ ಪ್ರಭಾವ ವುಳ್ಳವರನ್ನಾಗಿ ಮಾರ್ಪಡಿಸಿ ನಮ್ಮನ್ನು ಯಾವ ಖಂಡನಾ ದೋಷವೂ ಇಲ್ಲದೆ (ಗುಣ)ಸೌಂದರ್ಯವಂತರನ್ನಾಗಿ ತಂದೆಯ ಮುಂದೆ ಅರ್ಪಿಸುವನು. ಆದರೂ ಮತ್ತೆ ನಾವು ನಮ್ಮ ಬಂಧುಗ ಳನ್ನು ಪ್ರೀತಿಸುವ ವಿಷಯಕ್ಕೆ ಒತ್ತುಕೊಟ್ಟು ನಮ್ಮ ಎಲ್ಲಾ ಸಾಮರ್ಥ್ಯದ ಮೂಲಕವಾಗಿ ಅವರಿಗೆ (ಶುಭವಾರ್ತೆ ಸಾರುವ) ಈ ಸಂಗತಿಗಳಲ್ಲಿ ನಾವು ಸಹಾಯಮಾಡೋಣ. ಈ ಒಂದು ನಿಯಮವು ಸಹೋದರರ ವಿಷಯದಲ್ಲಿ ಪ್ರಚಲಿತವಾಗಿರು ವಂತೆಯೇ ಗಂಡಹೆಂಡತಿಯರ ತಂದೆತಾಯಿಗಳ ಮತ್ತು ಮಕ್ಕಳ ವಿಷಯದಲ್ಲಿಯೂ ಇರಬೇಕು. ಹೆಂಡತಿಯು ಸತ್ಯವನ್ನು ಹೊಂದಿದ್ದೇಯಾದರೆ ಅದನ್ನು ಸಾಧ್ಯವಾದಲ್ಲಿ ಮೊದಲು ತನ್ನ ಗಂಡನ ಗಮನಕ್ಕೆ ತರುವುದಕ್ಕೆ ಸಂತೋಷಿಸಬೇಕು. ಗಂಡನು ಸತ್ಯವನ್ನು ಹೊಂದಿದ್ದೇಯಾದರೆ ಸಾಧ್ಯವಾದಲ್ಲಿ ಅದನ್ನು ಮೊದಲು ತನ್ನ ಹೆಂಡತಿಯ ಗಮನಕ್ಕೆ ತರಲು ಸಂತೋಷಿಸಬೇಕು. ತಂದೆತಾಯಿಗಳ ಮತ್ತು ಮಕ್ಕಳ ನಡುವೆಯೂ ಹೀಗೆಯೇ ಇರಬೇಕು. ಈ ಪ್ರಸ್ತುತಕಾಲದ ಸತ್ಯದ ಬೆಳಕಿಗೆ ಸೇರಿದವರಿಗೆ ಬಹು ಸಹಜವಾಗಿಯೂ ಬಹು ಸಮಂಜಸವಾಗಿಯೂ ತೋರುವ ಈ ವಿಧಾನವನ್ನು ಅನುಸರಿಸಲು ಅನೇಕ ಸಂದರ್ಭಗಳಲ್ಲಿ ಸಲಹೆ ನೀಡಲಾಗುತ್ತಿಲ್ಲವೆಂಬುದಕ್ಕೆ ಕೆಲವೊಂದು ಸಾರಿ ನಮಗೆ ಆಶ್ಚರ್ಯವಾಗುವುದೆಂದು ಒಪ್ಪುತ್ತೇವೆ.

ಎಲ್ಲಿ ಬೇರೊಂದು ವಿಧಾನವನ್ನು ಅನುಸರಿಸಲಾಗು ವುದೋ ಅದು ಒಂದು ವೈವಿಧ್ಯತೆಯ ಕಾರಣಕ್ಕಾಗಿರುವು ದೆಂಬುದು ನಾವು ನೀಡುವ ಸಲಹೆ, ಗಂಡನು ತನ್ನ ಹೆಂಡತಿಯ ಒಳಿತಿಗಾಗಿ ಯೋಚಿಸಲಿ ಮತ್ತು ಆಕೆಯ ಗೃಹಕೃತ್ಯಗಳ ಸಂಬಂಧವಾಗಿ ಏರ್ಪಾಡುಮಾಡಿ ಆಕೆಯು ಸತ್ಯವನ್ನು ಅಧ್ಯಯನ ಮಾಡಲು ಪ್ರಾರ್ಥನಾ ಕೂಟ ಮುಂತಾದವುಗಳಲ್ಲಿ ಭಾಗವಹಿಸಲು ಅನುಕೂಲಮಾಡಿಕೊಡಲಿ. ಸತ್ಯಕ್ಕೆ ಸೇರಿದವಳಾದ ಹೆಂಡತಿಯು ತನ್ನ ಗಂಡನ ವಿಷಯಗಳಿಗೆ ಜಾಗರೂಕತೆಯಿಂದ ಗಮನ ಕೊಟ್ಟು ಆತನೂ ಸಹ (ಸತ್ಯವೇದದ) ಅಧ್ಯಯನ ಮುಂತಾದ ವಿಷಯಗಳಲ್ಲಿ ಆಶೀರ್ವಾದ ಹೊಂದುವಂತೆ ಏರ್ಪಾಟು ಮಾಡಿಕೊಡಲಿ. “ಪ್ರೀತಿಯೆಂಬುದು ಮನೆಯಲ್ಲಿ ಆರಂಭವಾಗು ವುದು” ಎಂಬ ಮಾತು ಇತರ ವಿಷಯಗಳಲ್ಲಿ ಇದ್ದಂತೆಯೇ ಧಾರ್ಮಿಕವಾದ ಪ್ರೀತಿಯ ವಿಷಯದಲ್ಲೂ ನಿಜವಾಗಿರುವುದು. “ಗಂಡಂದಿರೇ ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ”; ನಿಮ್ಮ ಎಲ್ಲಾ ಸಾಮರ್ಥ್ಯದ ಮೂಲಕವಾಗಿ ಅವರು ಆಶೀರ್ವಾದ ಪಡೆಯಲು, ವಿಶೇಷವಾಗಿ ಅವರ ಆತ್ಮಿಕ ವಿಷಯಗಳಲ್ಲಿ ಉತ್ಕೃಷ್ಟವಾದ ಆಸಕ್ತಿ ಹೊಂದಿ ಅದರಲ್ಲಿ ಅವರೂ ಸಂತೋಷಗಳಲ್ಲಿ ಉತ್ಕೃಷ್ಟವಾದ ದ್ದನ್ನು ಆನಂದಿಸುವಂತೆ ಮಾಡಲಿ. “ಹೆಂಡತಿಯರೇ, ನಿಮ್ಮ ಗಂಡಂದಿರಿಗೆ ಮರ್ಯಾದೆಯನ್ನು ಸಲ್ಲಿಸಿರಿ”; ಅವರನ್ನು ಪ್ರಶಂಸಿಸಿ ಅವರು ಎಲ್ಲಾ ಒಳ್ಳೆಯವುಗಳನ್ನು ಪಡೆಯುವಂತೆ ನಿಮ್ಮ ಉತ್ತಮವಾದ ಪ್ರಭಾವವನ್ನು ಬಳಸಿ ಅವರಿಗೆ ಸಹಾಯಕರಾಗಿರಿ.

## “ಮೆಸ್ಸೀಯನು ನಮಗೆ ಸಿಕ್ಕಿದನು”

ಈ ವಾರ್ತೆಯೊಂದಿಗೆ ಅವರು ತಮ್ಮ ಸಹೋದರರನ್ನು ವಂದಿಸಿದರು. ಈ ಪಠ್ಯಭಾಗದಲ್ಲಿ ವಿವರಿಸಿರುವಂತೆ ಮೆಸ್ಸೀಯನೆಂಬ ಇಬ್ರೀಯ ಶಬ್ಧವು ಗ್ರೀಕ್ ಭಾಷೆಯ ಕ್ರಿಸ್ತನೆಂಬ ಶಬ್ಧಕ್ಕೆ ಸರಿಹೊಂದುವುದು. ಅನೇಕ ಶತಮಾನಗಳಿಂದಲೂ ಮೆಸ್ಸೀಯನು ವಾಗ್ದಾನ ಮಾಡಲ್ಪಟ್ಟು ಆ ಜನಾಂಗವು ತಮ್ಮ ಅನೇಕ ವಿಧವಾದ ನೋವುಸಂಕಟಗಳಲ್ಲಿಯೂ ಆತನನ್ನು ನಿರೀಕ್ಷಿಸುತ್ತಾ ತಮ್ಮ ಪ್ರಾರ್ಥನೆಗಳ ಮೂಲಕವಾಗಿ ಆತನು ಬಂದು ಅರಸನಾಗಿ ತಮ್ಮ ಜನಾಂಗವನ್ನು ಕೇಡುವಿಪತ್ತುಗಳಿಂದ ಬಿಡಿಸಿ ತಮ್ಮನ್ನು ಉನ್ನತಸ್ಥಿತಿಗೆ ತಂದು ದೇವರ ಬಲದ ಮೂಲಕವಾಗಿ ಲೋಕಕ್ಕೆ ಬೆಳಕಾಗಿ ತಮ್ಮ ಮೂಲಕವಾಗಿ ಎಲ್ಲಾ ಜನಾಂಗಗಳಿಗೆ ಆಶೀರ್ವಾದ ಉಂಟಾಗುವುದನ್ನು ಎದುರುನೋಡುತ್ತಿದ್ದರು. ಆ ಇಬ್ಬರು ಯೇಸುವಿನೊಂದಿಗೆ ಕಳೆದ ಮಧ್ಯಾಹ್ನವು “ದೇವರು ನೇಮಿಸಿದ ಯಜ್ಞದ ಕುರಿ, ಲೋಕದ ಪಾಪವನ್ನು ನಿವಾರಣೆಮಾಡುವನು” ಎಂದು ಹೇಳಿದ ಸ್ನಾನಿಕನಾದ ಯೋಹಾನನ ಮಾತು ನಿಜವಾಗಿತ್ತೆಂಬುದನ್ನು ಮನಗಂಡರು.

ಪೇತ್ರನು ಹೇಗೆ ಈ ವಾರ್ತೆಯನ್ನು ಹೊಂದಿದನೆಂದು ವಿವರಿಸಲಾಗಿಲ್ಲ; ಆದರೆ ಅತನು ಮುಂದೆ ನಡಕೊಂಡ ರೀತಿ ಯಿಂದ ತೀರ್ಮಾನಿಸುವುದೆಂದರೆ ಆತನು ಈ ವಿಷಯದಲ್ಲಿ ತೀರ್ಮಾನಕ್ಕೆ ಬರಲು ಆತುರದಿಂದ (ಯೇಸುವನ್ನು) ನೋಡಿ ತಿಳಿದುಕೊಳ್ಳಲು ಬಂದನೆಂದು ನಾವು ಭಾವಿಸಬೇಕು. ಯೇಸುವು ಆತನಿಗೆ ನೀಡಿದ ಸಾಕ್ಷ್ಯಧಾರಗಳು ಯಾವ ಸಂಬಂಧವಾದು ದೆಂದು ಹೇಳಲಾಗಿಲ್ಲ. ಅದರೆ ಅವನು ಆತನನ್ನು ನಂಬಿ ಆತನಿಗೆ ಶಿಷ್ಯನಾದನು ಹಾಗು ಒಂದು ಹೊಸ ಹೆಸರನ್ನು ಪಡೆದನು; ಅದು ಅವನ ಹೆಸರಿಗೆ ಸೇರಿಸಲ್ಪಟ್ಟಿತು. ಅವನು ಯೋನನ ಮಗನಾದ ಸೀಮೋನನಾಗಿದ್ದನು ಅಥವಾ ಸೀಮೋನನು ಯೋನನ ಮಗನು ಎಂದು ಕರೆಯಲ್ಪಟ್ಟಿದ್ದನು. ಈಗ ಇನ್ನು ಮುಂದೆ ಅವನು ಸೀಮೋನ್ ಪೇತ್ರನೆಂಬ ಶಿಷ್ಯನು ಎಂದು ವಿಶೇಷವಾಗಿ ಪರಿಚಿತ ನಾಗುವನು; ಅಂದರೆ ಸೀಮೊನನು ಒಂದು ಗುಂಡು ಕಲ್ಲು ಎಂದು ಅರ್ಥ. ಹೀಗೆ ಯೇಸುವು ಈ ಮನುಷ್ಯನ ಬಗ್ಗೆ ತನಗಿರುವ ತಿಳುವಳಿಕೆಯನ್ನು ಆರಂಭದಲ್ಲಿಯೇ ಸೂಚಿಸಿ ಹೇಳಿದ್ದನು. ಈ ಅಪೋಸ್ತಲನು ತಾನೇ ನಂತರದಲ್ಲಿ ವಿವರಿಸಿ ಹೇಳಿರುವ ಹಾಗೆ ಆತನನ್ನು ಮುಂದಿನ ವೈಭವವಾದ ದೇವಾಲಯದಲ್ಲಿನ ಜೀವವುಳ್ಳ ಕಲ್ಲೆಂಬ ಮಾನ್ಯತೆ ಪಡೆದನು. – 1 ಪೇತ್ರ 2:4,5

## "ಮುಂದೆ ಆತನು ಗಲಿಲಾಯಕ್ಕೆ ಹೋದುದು"

ಮಾರಣೆಯ ದಿನ ಯೇಸುವು ಗಲಿಲಾಯಕ್ಕೆ ಹೊರಟನು ಮತ್ತು ಹೋಗುವಾಗ ದಾರಿಯಲ್ಲಿ ಫಿಲಿಪ್ಪನನ್ನು ಕಂಡುಕೊಂಡು ತಾನೇ ಅವನನ್ನು ತನ್ನ ಹಿಂಬಾಲಕನಾಗಲು ಆಹ್ವಾನಿಸಿದನು. ಆನಂತರದಲ್ಲಿ ಫಿಲಿಪ್ಪನು ಶೀಘ್ರವಾಗಿ ನತಾನಯೇಲನನ್ನು ಕಂಡುಕೊಂಡನು. ಈತನನ್ನು ಸತ್ಯವೇದದಲ್ಲಿ ಬಾರ್ತೊಲೋಮಾ ಯನೆಂದು ಸಹ ತಿಳಿಸಲಾಗಿದೆ.

ಶಿಷ್ಯರನ್ನು ಹೀಗೆ ಕಂಡುಕೊಂಡದ್ದು ಯೇಸುವು ಮನೆಮಾಡಿಕೊಂಡಿದ್ದ ಬೇತ್–ಬಾರಾ ಎಂಬಲ್ಲಿ ಎಂದು ವಿವರಿಸಲಾಗಿರುವುದು. ಸತ್ಯವೇದ ಪುನರ್ವಿಮರ್ಶಕರು ಇದನ್ನು ಬೆಥನಿ ಎಂದು ಕರೆದಿರುವರು. ಹೀಗೆ ನಮ್ಮ ಕರ್ತನು ತಾನು ಸೇವೆಯನ್ನು ಆರಂಭಿಸುವ ಮೊದಲೇ ಲಾಜರನು ಮಾರ್ಥಳು ಮತ್ತು ಮರಿಯಳ ಕುಟುಂಬದೊಂದಿಗೆ ಬಳಕೆಯಾಗಿದ್ದನೆಂದೂ ಹಾಗೂ ಆ ಶಿಷ್ಯರು ಯೋಹಾನನು ಸ್ನಾನಮಾಡಿಸುತ್ತಿದ್ದ ಯೊರ್ದಾನ್ ಹೊಳೆಯ ತಗ್ಗು ಪ್ರದೇಶದಿಂದ ಈ ಸ್ಥಳಕ್ಕೆ ಆತನನ್ನು ಹಿಂಬಾಲಿಸಿದ್ದರೆಂದು ಸಲಹೆಯಾಗಿ ಹೇಳಲಾಗಿರುವುದು. ಯೋಹಾನನ ಉಪದೇಶವು ಕಲೆಹಾಕಿದ ಅತಿ ಶ್ರದ್ಧೆಯುಳ್ಳವರಲ್ಲಿ ಕೆಲವರನ್ನು ಕಂಡುಕೊಳ್ಳಲು ಯೋಹಾನನು ಸೇವೆಮಾಡುತಿದ್ದ ಸ್ಥಳದ ಸಮೀಪದಲ್ಲಿ ನಮ್ಮ ಕರ್ತನು ಕೆಲವು ಕಾಲ ತಂಗಿದ್ದನೆಂಬುದು ಸ್ಪಷ್ಟವಾಗುತ್ತದೆ.

ಇಲ್ಲಿ ಹೇಳಲಾದ ಶಿಷ್ಯರೆಲ್ಲರೂ ಅಂದರೆ ಯೋಹಾನ ಮತ್ತು ಯಾಕೋಬ, ಅಂದ್ರೆಯ ಮತ್ತು ಸೀಮೋನ ಪೇತ್ರ, ಫಿಲಿಪ್ಪ ಮತ್ತು ಬಾರ್ತೋಲೋಮಾಯ (ಯೂದನೊಬ್ಬನೇ ಯೂದಾಯದವನು) ಇವರೆಲ್ಲರೂ ಗಲಿಲಾಯದಿಂದ ಬಂದವರೆಂದು ಗಮನಿಸಲಾಗುವ ಸಂಗತಿ. ತಮ್ಮ ಮನೆಗಳಿಂದ ಇಷ್ಟು ದೂರದಲ್ಲಿದ್ದುಕೊಂಡು ಈ ಜನರು ಮಾಡುತ್ತಿದ್ದುದಾದರೂ ಏನು? ನಾವು ಕೇವಲ ಬಾವಿಸಬಹುದಾದುದೆಂದರೆ, ಇವರು ಯೋಹಾನನ್ನೂ ಆತನ ಉಪದೇಶವನ್ನು ಕೇಳಲು ಬಂದ ಜನಸಮೂಹದಲ್ಲಿ ಸೇರಿದವರಾಗಿದ್ದು ಮೆಸ್ಸೀಯನ ಬರುವಿಕೆ ಯಲ್ಲಿ ತೀವ್ರವಾದ ಆಸಕ್ತಿಯುಳ್ಳವರಾಗಿದ್ದರು. ಇದಕ್ಕಾಗಿ ಅವರು ತಮ್ಮ ಮನೆಮಾರುಗಳನ್ನು ಬಿಟ್ಟು ಅಗಿನ ಕಾಲಕ್ಕೆ ಹೇಳಬೇಕಾದರೆ ಬಹು ದೂರದ ಪ್ರಯಾಣಮಾಡಿ ಯೋಹಾನನು ಹೇಳುವುದು ಏನೆಂಬುದನ್ನು ಕೇಳಿ ಆತನ ಶಿಷ್ಯರಾಗಿ ಆತನೊಡನೆ ಸೇರಿ ಮೆಸ್ಸೀಯನಿಗೆ ಮಾರ್ಗವನ್ನು ಸಿದ್ಧಮಾಡಲು ಸಹಾಯಮಾಡ ಮನಸ್ಸುಳ್ಳವರಾಗಿದ್ದರು. ಕರ್ತನು ಹೇಗೆ ಸತ್ಯದ ವಿಷಯವಾದ ಒಂದು ಸೇವೆಯನ್ನು ದೃಷ್ಟಾಂತವನ್ನಾಗಿ ಉಪಯೋಗಿಸಿ ನಮ್ಮ ಹೃದಯಗಳನ್ನು ಒಂದು ಪೂರ್ಣವಾದ ಸೇವೆಗೆ ಸಿದ್ಧಮಾಡು ವನು! ಈ ಶಿಷ್ಯರು ಯೇಸುವಿನ ಬಳಿಗೆ ಬರುವುದಕ್ಕೆ ಮೊದಲು ನಿಜವಾಗಿಯೂ ದೇವಭಯವುಳ್ಳವರಾಗಿ ಪ್ರತಿಷ್ಠಿತವಾದ ಜನರಾಗಿ ದ್ದರೆಂಬ ಅಭಿಪ್ರಾಯ ಬರುವಂತೆ ಕರ್ತನು ಪ್ರಾರ್ಥನೆಯಲ್ಲಿ ಹೇಳಿದವುಗಳನ್ನು ಇದು ಪುಷ್ಟೀಕರಿಸುತ್ತದೆ. ಆ ಪ್ರಾರ್ಥನೆಯಲ್ಲಿ ಯೇಸುವು ಹೇಳಿದುದು, "ಇವರು ನಿನ್ನವರಾಗಿದ್ದರು, ನೀನು ಇವರನ್ನು ನನಗೆ ಕೊಟ್ಟೆ;" (ಯೋಹಾನ 17:6) ನಮಗೆ ಇದರಲ್ಲಿ ರುವ ಪಾಠವೆಂದರೆ, ನಮಗೆ ದೊರೆತ ಸತ್ಯದ ಪ್ರತಿಯೊಂದು ಅಂಶಗಳಿಗೆ ನಾವು ನಂಬಿಗಸ್ತರಾಗಿದ್ದು ಆ ವಿಷಯದಲ್ಲಿ ಉತ್ಸಾಹ ವುಳ್ಳವರಾಗಿದ್ದಲ್ಲಿ ಆ ಅಂಶಗಳನ್ನು ಹೊಂದಿ ಅದರ ಬಗ್ಗೆ ಕಾರ್ಯ ಪ್ರವೃತ್ತರಾದ ರೀತಿಯಲ್ಲಿಯೇ ಅದು ನಮ್ಮನ್ನು ಮತ್ತೊಂದು ಕಾರ್ಯಕ್ಕೆ ಸಿದ್ಧಮಾಡುವದು. ಈ ಜನರಿಗೆ ಪ್ರತಿಷ್ಠೆಯ ಮನೋ – ಭಾವ ಇಲ್ಲದ್ದಿದ್ದಲ್ಲಿ ಅವರು ತಮ್ಮ ವ್ಯವಹಾರಗಳನ್ನೆಲ್ಲಾ ಬಿಟ್ಟು ಯೋಹಾನನೊಡನೆ ಆತನ ಸೇವೆಯಲ್ಲಿ ಸೇರಲು ಆಗುತ್ತಿರಲಿಲ್ಲ. ಅಲ್ಲದೆ ಆಗ ಯೇಸುವಿನ ಗೌರವಾನ್ವಿತ ಶಿಷ್ಯರೆನ್ನಿಸಿಕೊಳ್ಳುವುದಕ್ಕೆ ಚೆನ್ನಾಗಿ ಸಿದ್ಧರಾಗಲೂ ಅವರಿಗೆ ಸಾಧ್ಯವಾಗದೇ ಇರಬಹುದಿತ್ತು.

## "ನೀನು ನನ್ನನ್ನು ಹೇಗೆ ಬಲ್ಲೆ?"

ನತಾನಯೇಲನನ್ನು ಕರೆಯಲ್ಪಟ್ಟ ಸಂಗತಿಯು ವಿಶೇಷವಾಗಿ ಒಂದು ಕುತೂಹಲಕಾರಿಯಾದ ವೃತ್ತಾಂತ. ಈ ವಿವರಣೆಯಲ್ಲಿ ಹೇಳದೆ ಬಿಟ್ಟಿರುವುದನ್ನು ಕಲ್ಪಿಸಿಕೊಳ್ಳುವುದು ನಮಗೆ ಕಷ್ಟವಲ್ಲ. ಫಿಲಿಪ್ಪನು ಸ್ವತಃ ನಮ್ಮ ಕರ್ತನ ಆಕರ್ಷಕ ಪ್ರಭಾವಕ್ಕೆ ಒಳಗಾಗಿದ್ದು ಆತನ ಶಿಷ್ಯನಾಗುವುದು ಒಂದು ಆಶೀರ್ವಾದಕರ ಭಾಗ್ಯವೆಂಬುದನ್ನೂ ಹಾಗೂ ಆತನೇ ನಿಜವಾಗಿಯೂ ಬಹು ಕಾಲದಿಂದ ನಿರೀಕ್ಷಿತನಾದ ಮೆಸ್ಸೀಯನಿರ ಬೇಕೆಂಬುದನ್ನೂ ಮನಗಂಡಿದ್ದನು. ಈ ಬಗೆಯ ಪೂರ್ಣ ವಿಶ್ವಾಸದಿಂದ ಆತನು ತನ್ನ ಮಿತ್ರನಾದ ನತಾನಿಯೇಲನನ್ನು ಹುಡುಕುತ್ತಿದ್ದನು. ಕರ್ತನಿಗೆ ಸೇವೆಮಾಡುವ ಬಯಕೆಯನ್ನು ಹೊಂದಿ ಮೆಸ್ಸೀಯನ ರಾಜ್ಯಕ್ಕೆ ಸಿದ್ಧನಿರುವಲ್ಲಿ ಈತನು ತನ್ನಂತೆಯೇ ಒಂದೇ ಮನಸ್ಸು ಒಂದೇ ಭಾವವುಳ್ಳವನಾಗಿ ದ್ದನೆಂದು ತಿಳಿದಿದ್ದನು. ಆತನನ್ನು ಕಂಡುಕೊಂಡು ಆತನಿಗೆ ವಂದಿಸಿ––"ಯಾವನ ವಿಷಯವಾಗಿ ಮೋಶೆಯು ಮತ್ತು ಪ್ರವಾದಿಗಳು ಬರೆದರೋ, ಆತನು ನಮಗೆ ಸಿಕ್ಕಿದನು; ಆತನು ಯಾರೆಂದರೆ ಯೋಸೇಫನ (ದತ್ತು) ಮಗನಾದ ನಜರೇತಿನ ಯೇಸು" ಎಂದು ಹೇಳಿದನು. ಎಲ್ಲರೂ ತಿಳಿದಿರುವಂತೆ

ನತಾನಯೇಲನು ಒಬ್ಬ ಸೂಕ್ಷ್ಮ ಬುದ್ಧಿಶಕ್ತಿಯುಳ್ಳ ಮನುಷ್ಯನಾಗಿದ್ದನು. ತನ್ನ ಸ್ನೇಹಿತನು ಬಹು ಆತುರದಿಂದ ಕೆಲವು ಸಂಗತಿಗಳನ್ನು ಅಂಗೀಕರಿಸಿದ್ದು ಒಬ್ಬ ಸುಳ್ಳುಗಾರನಿಂದ ಮೋಸ ಹೋಗಿರುವನೆಂದು ಅವನು ಭಾವಿಸಿದ್ದನು. ಆ ಕ್ಷಣವೇ ಆತನು ಮಾಡಿದ್ದ ಆಕ್ಷೇಪಣೆಯೆಂದರೆ, "ನಜರೇತಿನಿಂದ ಏನಾದರೂ ಒಳ್ಳೆಯದು ಬರುವುದುಂಟೇ?" ಆತನು ಇದನ್ನು ಹೀಗೆ ಹೇಳಿ ದಂತ್ತಿತ್ತು–"ಇದು ಒಂದು ಕೆಟ್ಟದಾದ ಪಟ್ಟಣ; ಹೆಸರುವಾಸಿಯಾದ ಯಾವ ಮಹಾ ಪುರುಷರು ಎಂದೂ ಇದರಿಂದ ಬಂದಿಲ್ಲ; ನಮಗೆ ತಿಳಿದಿರುವಂತೆ ಇದುವರೆಗೂ ಯಾವ ಪ್ರವಾದನೆಯಲ್ಲೂ ಈ ಪಟ್ಟಣದ ವಿಷಯವಾಗಿ ಉಲ್ಲೇಖವಾಗಿಲ್ಲ. ನಿನ್ನ ಈ ಮೆಸ್ಸೀಯನ ಬಗ್ಗೆ ನೀನು ಹೇಳಿರುವುದು ಆತನ ವಿಷಯವಾದ ನನ್ನ ಕಲ್ಪಿತಾಭಿಪ್ರಾಯಕ್ಕೆ ವಿರೊಧವಾಗಿರುವುದು.

ಮತ್ತು ಈ ದಿನದಲ್ಲಿಯೂ ಕರ್ತನು ಪ್ರಭಾವವುಳ್ಳ ದೊಡ್ಡ ಅರಸನಾಗಿ ಎರಡನೆಯ ಸಾರಿ ಬರುವುದನ್ನು ಎದುರು ನೋಡುತ್ತಿರುವ ಆತನ ನಿಜವಾದ ಅನುಯಾಯಿಗಳ ವಿಷಯ ದಲ್ಲೂ ಹೀಗೆಯೇ ಇರುವುದು. ಈ ವಿಷಯವಾಗಿ ನಾವು– ಸತ್ಯವನ್ನು ಕಂಡುಕೊಂಡಿದ್ದೇವೆಂದನ್ನು ಮೋಶೆಯ ಧರ್ಮಶಾಸ್ತ್ರ ಮತ್ತು ಪ್ರವಾದಿಗಳೆಲ್ಲರೂ ನಾವು ಈಗ (ಸುವಾರ್ತಾಯುಗದ) ಸುಗ್ಗಿಯ ಕಾಲದಲ್ಲಿ ಮನುಷ್ಯ ಕುಮಾರನ "ಪರೋಷಿಯ" ಎಂಬ ಆತನ ಪ್ರತ್ಯಕ್ಷತೆಯಲ್ಲಿ ಜೀವಿಸುತ್ತಿದ್ದೇವೆಂಬ ಅಂಶವನ್ನು ಸಮರ್ಥಿಸಿರುವರೆಂದು–ಅವರಿಗೆ ತಿಳಿಸಿದಾಗ ಅವರು ನಮ್ಮ ಹುರುಪು ಉತ್ಸಾಹಗಳ ಬಗ್ಗೆ ವ್ಯಂಗ್ಯಮಾಡಿ ನಾವು ಮೋಸ ಹೋಗದಂತೆ ಬಹು ಎಚ್ಚರಿಕೆಯುಳ್ಳವರಾಗಿರಬೇಕೆಂದು ಹೇಳಿ ನಮ್ಮನ್ನು ಸಾಗಕಳುಹಿಸುವರು. ಪರೋಷಿಯವೆಂಬ ಉಪದೇಶವು ಎಲ್ಲಿಂದ ಬಂತೆಂದು ಅವರು ಕೇಳುವರು. ಅವರಿಗೆ ನಾವು: ಇದು ಈಗಿನ ಕಾಲದಲ್ಲಿನ ಶ್ರೇಷ್ಠರೂ, ಜ್ಞಾನಿಗಳೂ, ಶಕ್ತಿಶಾಲಿಗಳೂ ಆದವರಿಂದಾಗಲೀ ಸತ್ಯವೇದದ ಪಂಡಿತರ ಮೂಲಕವಾಗಲೀ ಬಂದಿರದೆ ಸಾಧಾರಣವಾದವರ ಮೂಲಕವಾಗಿ ನಮಗೆ ಬಂದಿರುವುದೆಂದು ಹೇಳಿದಾಗ ಅವರು ಕೇಳುವುದು–"ಅಂಥವರ ಮೂಲಕವಾಗಿ ನೀವು ಏನನ್ನು ನಿರೀಕ್ಷಿಸಲು ಸಾಧ್ಯ? ನೀವು ಇದರ ವಿಷಯವಾಗಿ ಈಗಿನ ಕಾಲದ ಶಾಸ್ತ್ರಿಗಳು ಫರಿಸಾಯರು ಮತ್ತು ಧರ್ಮಶಾಸ್ತ್ರ ಬೋಧಕರನ್ನು ವಿಚಾರಿಸಬೇಕೆಂದು ತಿಳಿಸುವರು.

"ಬಂದು ನೋಡು" ಎಂದು ಫಿಲಿಪ್ಪನು ನತಾನಯೇಲನಿಗೆ ಉತ್ತರ ಕೊಟ್ಟ ರೀತಿಯಲ್ಲೇ ನಾವು ಸಂದೇಹ ಪಡುವಂಥ ಸಹೋದರರಿಗೆ ಹೀಗೆ ಉತ್ತರ ಕೊಡೋಣ: ಈ ವಿಷಯದಲ್ಲಿ ನೀವು ವಿಚಾರಣೆಮಾಡಿ, ಅದನ್ನು ದೇವರ ವಾಕ್ಯದ ಮೂಲಕ ಪರೀಕ್ಷಿಸಿನೋಡಿ. ನತಾನಯೇಲನು ಫಿಲಿಪ್ಪನ ಸಂಗಡ ಹೋಗಿರಲಾರನೆಂಬುದು ಸ್ಪಷ್ಟ. ಫಿಲಿಪ್ಪನು ದುಃಖವುಳ್ಳವನಾಗಿ ತನ್ನ ದಾರಿಯನ್ನು ಹಿಡಿದಿರಬಹುದು, ಯಾಕೆಂದರೆ ತಾನು ಯಾರನ್ನು ನಿಜವಾದ ದೇವರ ಸೇವಕನೆಂದು ತಿಳಿದು ಗೌರವಿಸಿದ್ದನೋ ಅವನಿಗೆ ಇದನ್ನು ಕೇಳಿ ವಿಚಾರಣೆಮಾಡಲು ಮನಸ್ಸಿರಲ್ಲ. ಆದರೆ ನತಾನಯೇಲನಿಗೆ ಆ ಕ್ಷಣವೇ ಈ ಆಹ್ವಾನವನ್ನು ಒಪ್ಪಿಕೊಂಡು ಅದರಂತೆ ನಡೆಯದಿರಲು ತನ್ನದೇ ಆದ ಕಾರಣಗಳಿದ್ದವು. ಇದು ಬಹು ಮುಖ್ಯವಾದ ವಿಷಯಗಳಲ್ಲಿ ಒಂದಾಗಿದ್ದು ಇದು ಕೇವಲ ತನ್ನ ಸ್ವಂತ ಹಿತಾಸಕ್ತಿಗಳ ಮೇಲೆ ಪ್ರಭಾವ ಬೀರುವುದು ಮಾತ್ರವಲ್ಲದೆ ತನ್ನ ಸ್ನೇಹಿತರ ಹಿತಾಸಕ್ತಿಗಳ ಮೇಲೂ ಹಾಗೂ ಒಟ್ಟಾರೆ ಇದು ಕರ್ತನ ಧ್ಯೇಯೋದ್ದೇಶದ ಮೇಲೂ ಪ್ರಭಾವ ಬೀರುವದಿತ್ತು. ಆತನು ಈ ವಿಷಯವಾಗಿ ಎಚ್ಚರದಿಂದಿರಬೇಕು. ಈತನು ಯೇಸುವಿನ ಬಗ್ಗೆ ಆಗಲೇ ಕೇಳಿದ್ದು ಫಿಲಿಪ್ಪನು ತನ್ನ ಬಳಿಗೆ ಬರುವದಕ್ಕೆ ಮೊದಲಿನಿಂದಲೂ ಈ ವಿಷಯದಲ್ಲಿ ವಿಚಾರಮಾಡುತ್ತಾ ಪ್ರಾರ್ಥಿಸುತ್ತಿದ್ದನು. ನಟನೆಗಾರರ ಮೂಲಕ ಮೋಸ ಹೋಗದಂತೆ ತನ್ನ ತೀರ್ಮಾನಗಳು ಕರ್ತನಿಂದ ಮಾರ್ಗದರ್ಶನ ಹೊಂದಿ, ತಾನು ಭ್ರಾಂತುಗಳಿಂದಲೂ ಪಾಶಗಳಿಂದಲೂ ಕಾಪಾಡಲ್ಪಡಬೇಕೆಂದು ಬೇಡಿಕೊಂಡಿದ್ದನು. ಬೇಡಿದ್ದ ದೇವಾಶೀರ್ವಾದವನ್ನು ಆತುಕೊಂಡು ತನ್ನ ಸ್ವಕಲ್ಪಿತಾಭಿಪ್ರಾಯದಿಂದ ಬಿಡುಗೆಯಾಗಿ ಈ ವಿಷಯದಲ್ಲಿನ ಅರ್ಹತೆ ಅನರ್ಹತೆಗಳ ಬಗ್ಗೆ ತೀರ್ಮಾನಕ್ಕೆ ಬರಲು ಪ್ರಯತ್ನಮಾಡಿ ಈ ವಿಷಯದಲ್ಲಿ ಸ್ವಲ್ಪ ಸಮಯದ ನಂತರ ತಾನು ಮುಂದುವರಿಯಲಿದ್ದನು.

ನಮ್ಮ ಪ್ರಿಯ ಸ್ನೇಹಿತರೆಲ್ಲರೂ, ನಾವು ಇದುವರೆಗೂ ವಿಚಾರಣೆಮಾಡಿ ನೋಡಿರುವಂತೆ, ನಿಜವಾಗಿ ಕರ್ತನ ನಿಷ್ಠೆಯುಳ್ಳ ಸೇವಕರಾಗಿ ನಾತಾನಯೇಲನು ಅನುಸರಿಸಿದ ವಿಧಾನವನ್ನು ತಾವೂ ಅನುಸರಿಸಿ ಅತನನ್ನು ಹುಡುಕಿ ಆತನಿಂದ ರಕ್ಷಣೆಯ ಬಗೆಗೆ ಮಾರ್ಗದರ್ಶನ ಪಡೆದು ಆನಂತರದಲ್ಲಿ ಇದರ ಬಗ್ಗೆ ವಿಚಾರಣೆ ಮಾಡಲು ಎಲ್ಲವನ್ನೂ ದೇವರ ವಾಕ್ಯದ ಮೂಲಕ ಪ್ರಮಾಣಿಸಿ ನೋಡುವದನ್ನು ವ್ಯಕ್ತಪಡಿಸಿದ್ದೇಯಾದರೆ ನಮಗೆ ಎಷ್ಟೋ ಆನಂದವಾಗುವದು. ಕೆಲವರು ನತಾನಯೇಲನು ಅನುಸರಿಸಿದ ವಿಧಾನವನ್ನು ತಾವೂ ತಕ್ಷಣಕ್ಕೆ ಅನುಸರಿಸಲಾರದೆ ಹೋದರೂ ನಿಜವಾಗಿಯೂ ಜಯಶಾಲಿಗಳಾಗುವ ಗುಂಪಿಗೆ ಸೇರಿದವರೆಲ್ಲರೂ ಕಡೆಯಲ್ಲಿ ಇದನ್ನು ಅನುಸರಿಸುವವರಾಗಿ ಅದಕ್ಕೆ ಮಾರ್ಗದರ್ಶನ ಪಡೆಯುವರೆಂಬುದು ನಮಗೆ ಖಚಿತ. ಹೀಗೆ ಅವರು ನಿಜವಾದ ರೀತಿಯಲ್ಲಿ ಪ್ರಸ್ತುತ ಕಾಲದ ಸತ್ಯದ ವಿಷಯಗಳ ಸಂಪರ್ಕವಾಗಿ, ಪರೋಷಿಯವೆಂಬ ನಮ್ಮ ಕರ್ತನ ಪ್ರತ್ಯಕ್ಷತೆ ಮತ್ತು ಕ್ರೈಸ್ತಸಭೆಯಲ್ಲಿ ಆತನು ಮಾಡುತ್ತಿರುವ ಸುಗ್ಗಿಯ ಕಾರ್ಯ ಮತ್ತು ಕೊಯ್ಲಿಗೆ ಬಂದ ಗೋದಿಕಾಳುಗಳನ್ನು ಕಣಜಕ್ಕೆ ತುಂಬುತ್ತಾ ಅವುಗಳು ತನ್ನೊಡನೆ ರಾಜ್ಯಪ್ರಭಾವದಲ್ಲಿ ಸೇರಿ ಪ್ರಕಾಶಿಸುವವರಾಗಿ ಭೂಲೋಕದ ಎಲ್ಲಾ ಕುಲಗಳವರನ್ನು ಆಶೀರ್ವದಿಸುವ ಕಾರ್ಯಕ್ಕೆ ಸಿದ್ಧರಾಗುತ್ತಿರುವುದು ಇವುಗಳನ್ನು

## ನಿಮ್ಮ ಕಣ್ಣು ನಿಮ್ಮ ಕಿವಿಯು ಧನ್ಯವಾದವುಗಳು

ಈ ಪಾಠದಲ್ಲಿ ನಾವು ನಮ್ಮ ಕರ್ತನು ನತಾನಯೇಲನನ್ನು ಬರಮಾಡಿಕೊಂಡ ರೀತಿಯನ್ನು ಮತ್ತು ಆತನು ತನ್ನಲ್ಲಿ ತಪ್ಪು ಕಂಡುಹಿಡಿಯಲು ಬಂದ ಫರಿಸಾಯರು ಶಾಸ್ತ್ರಿಗಳು ಹಾಗೂ ಧರ್ಮಶಾಸ್ತ್ರ ಬೋಧಕರಲ್ಲಿ ಕೆಲವರನ್ನು ಬರಮಾಡಿಕೊಳ್ಳಲು ಅನುಸರಿಸಿದ ಬೇರೆ ವಿಧವಾದ ರೀತಿಯಲ್ಲಿರುವ ವ್ಯತ್ಯಾಸಗಳನ್ನು ತೋರಿಸಿಕೊಡುವ ಒತ್ತಾಯದಲ್ಲಿರುವೆವು. ಇವರಿಗೆ ಆತನು ಸಾಮ್ಯದ ಮತ್ತು ಒಗಟುಗಳ ಮೂಲಕವಾಗಿ ಮಾತನಾಡಿದನು. ಇವುಗಳು ಅವರಿಗೆ ಅರ್ಥವಾಗುವುದೆಂಬುದನ್ನು ಮತ್ತು ಇವು

ಅವರಿಗೆ ಮನವರಿಕೆಯಾಗುವುದೆಂಬುದನ್ನು ಅತನು ನಿರೀಕ್ಷಿಸಲಿಲ್ಲ. ಆದರೆ ನತಾನಯೇಲನಂಥವರಿಗೆ ನಮ್ಮ ಕರ್ತನು ಅತಿ ದಯೆಯುಳ್ಳವನಾಗಿದ್ದನು. ಏಕೆಂದರೆ ಎಲ್ಲರ ಹೃದಯಗಳನ್ನು ತಿಳಿದವನಾಗಿದ್ದು ಅವುಗಳಿಗೆ ತಕ್ಕಂತೆ ವಿವೇಚಿಸಿ ನಡೆಯುವ ಜ್ಞಾನ ಸಾಮರ್ಥ್ಯಗಳು ಆತನಲ್ಲಿದ್ದವು. ನಮಗೆ ಆ ವಿಧದ ಸ್ವಾತಂತ್ರ್ಯವನ್ನು ಬಳಸಲಾಗದಿರಬಹುದು ಏಕೆಂದರೆ ಅಂಥ ತಿಳುವಳಿಕೆಯು ನಮ್ಮಲ್ಲಿರುವುದಿಲ್ಲ. ನಾವು ತಾಳ್ಮೆಯುಳ್ಳವರಾಗಿ ಎಲ್ಲರೊಡನೆಯೂ ವಿನಯವುಳ್ಳವರಾಗಿ ಎಲ್ಲರೂ ಸತ್ಯವನ್ನು ಅರಿತುಕೊಳ್ಳಲು ನಮಗೆ ಸಾಧ್ಯವಾದುದೆಲ್ಲವನ್ನು ಮಾಡಿ ಅವರಿಗೆ ನೆರವಾಗಬೇಕಿರುವುದು. ಅವರು ಕೇಳಲಿ ಇಲ್ಲವೇ ಅವರು ಸಹಿಸಿಕೊಳ್ಳಲಿ ಹೇಗಿದ್ದರೂ ಕೇವಲ ನಿಜವಾದ ಇಸ್ರಾಯೇಲ್ಯನು ಇದನ್ನು ಕೇಳುವಲ್ಲಿ ಸಫಲನಾಗಿ ಕರೆಯನ್ನು ಅಂಗೀಕರಿಸಿ ಅದರಿಂದ ಪ್ರಯೋಜನ ಹೊಂದಿ ಅದರ ಪ್ರತಿಫಲವನ್ನು ಪಡೆಯುವನೆಂಬುದನ್ನು ನಾವು ಮನದಟ್ಟುಮಾಡಿಕೊಳ್ಳಬೇಕು.

ನತಾನಯೇಲನು ಯೇಸುವನ್ನು ಸಮೀಪಿಸುವಕ್ಕೆ ಮೊದಲೇ ತನ್ನೊಂದಿಗಿದ್ದವರಿಗೆ ಆತನು (ನತಾನಯೇಲನು) ಕೇಳಿಸಿಕೊಳ್ಳುವಂತೆ ಒಡೆಯನು ಹೇಳಿದ್ದು, "ಇಗೋ, ಇವನು ನಿಜವಾದ ಇಸ್ರಾಯೇಲನು; ಇವನಲ್ಲಿ ಕಪಟವಿಲ್ಲ." ಅದ್ಭುತವಾದ ಶ್ಲಾಘನೆ ಇದು! ನತಾನಯೇಲನು ಆ ಚಿಕ್ಕ ಹಿಂಡಿನವರಲ್ಲಿ ಒಬ್ಬನಾಗಲು ಯೋಗ್ಯನೆಂಬುದರಲ್ಲಿಯೂ ಅಪೋಸ್ತರಲ್ಲಿ ಒಬ್ಬನಾಗಲು ಯೋಗ್ಯನೆಂಬುದರಲ್ಲಿಯೂ ಆಶ್ಚರ್ಯವಿಲ್ಲ. ಫಿಲಿಪ್ಪನು ಆತನೊಡನೆ ಸೆಣಸಾಡಿ ಆತನನ್ನು ಬಂದು ನೋಡಲು ಬೇಡಿಕೊಂಡದ್ದರಲ್ಲಿಯೂ ಆಶ್ಚರ್ಯವೇನಿಲ್ಲ. ತನ್ನ ಹೃದಯದ ಪ್ರಾಮಾಣಿಕತೆಯು ಆಗಿದ್ದ ತನ್ನ ಜನಾಂಗದವರಲ್ಲಿ ಬಹುಜನರು ಹೊಂದಲು ಸಾಧ್ಯವಾಗದ ಆಶೀರ್ವಾದಕ್ಕೆ ತನ್ನನ್ನು ಯೋಗ್ಯನನ್ನಾಗಿ ಮಾಡಿತು. ಯೋಹಾನ 1:11,12ರಲ್ಲಿ ನಾವು ಓದಿರುವಂತೆ, ಯೇಸುವು "ತನ್ನ ಸ್ವಾಸ್ಥ್ಯಕ್ಕೆ ಬಂದನು; ಆದರೆ ಸ್ವಂತಜನರು ಅತನನ್ನು ಅಂಗೀಕರಿಸಲಿಲ್ಲ. ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ, ಅವರಿಗೆ ದೇವರ ಮಕ್ಕಳಾಗುವ ಅಧಿಕಾರಕೊಟ್ಟನು." ಮತ್ತು ಆತನು ಹೃದಯದಲ್ಲಿ ಸರಿಯಾದ ಮನೋಭಾವವುಳ್ಳವರಿಗೆ ತನ್ನನ್ನು ಅಂಗೀಕರಿಸಲು ಸಹಾಯಮಾಡಿದನು; ನಂಬಿದವರಾಗಲು ಅವರಿಗೆ ಸಹಕರಿಸಿ ವಿಶ್ವಾಸ ಹೊಂದಲು ಅವರನ್ನು ಪ್ರೋತ್ಸಾಹಿಸಿ, ನಮಗೆ ನೆನಪಿರುವಂತೆ, ಅವರಲ್ಲಿ ಒಬ್ಬನಿಗೆ, "ನಂಬದವನಾಗಿರಬೇಡ, ನಂಬುವವನಾಗು" ಎಂದು ಹೇಳಿರುವನು. –ಯೋಹಾನ 20:27.

ನತಾನಯೇಲನು ತಾನು ಒಬ್ಬ ಪ್ರಾಮಾಣಿಕನೂ ನಿಜವಾದ ಇಸ್ರಾಯೇಲನೂ ದೇವರು ತನ್ನ ನಂಬಿಗಸ್ತರಿಗೆ ಏನೆಲ್ಲಾ ಕೊಡುವನಿದ್ದನೋ ಅದನ್ನು ತಾನು ಹುಡುಕುವವನೂ ಆಗಿದ್ದುದನ್ನು ಮನಗಂಡಿದ್ದಾಗ್ಯೂ ಈ ಸಾಕ್ಷಿಯಿಂದ ತೃಪ್ತನಾಗಲಿಲ್ಲ; ಏಕೆಂದರೆ ಇಂಥ ಒಂದು ಪ್ರಸಂಶೆಯನ್ನು ಬೇರೆಯವರು ಹೊಗಳುವುದಕ್ಕಾಗಿ ಮಾಡಿರಬಹುದು. ಅವನು ಕರ್ತನಿಗೆ ಪ್ರತಿಯಾಗಿ ಪ್ರಶ್ನಿಸುವವನಾಗಿ ಹೀಗಂದನು, "ನೀನು ನನ್ನನ್ನು ಹೇಗೆ ಬಲ್ಲೆ?" ನೀನು ಒಂದು ಹೇಳಿಕೆಯನ್ನು ನೀಡಿರುವಿ, ಅದಕ್ಕೆ ನಿನಗೆ ಯಾವ ಅಧಿಕಾರವಿರುವುದು? ನೀನು ನನ್ನನ್ನು ಎಂದಾದರೂ ಬೇಟಿಯಾಗಿರುವಿಯೆಂದು ನನಗೆ ತಿಳಿದಿಲ್ಲ. ಯೇಸು ಉತ್ತರವಾಗಿ ಹೇಳಿದ್ದು, "ಫಿಲಿಪ್ಪನು ನಿನ್ನನ್ನು ಕರೆಯುವದಕ್ಕಿಂತ ಮುಂಚೆ ನೀನು ಆ ಅಂಜೂರದ ಮರದ ಕೆಳಗೆ ಇದ್ದಾಗ ನಿನ್ನನ್ನು ನೋಡಿದೆನು." ಅಹಾ, ನತಾನಯೇಲನು ಹೇಗೆ ತಾನು ಕೆಳಮಟ್ಟದಲ್ಲಿ ಹರಡಿಕೊಂಡಿದ್ದ ಅಂಜೂರದ ಕೊಂಬೆಗಳ ಅಡಿಯಲ್ಲಿ ನುಸುಳಿ ತಾನು ಹೇಗೆ ತಂದೆ ದೇವರಿಗೆ ಪ್ರಾರ್ಥಿಸುತ್ತಾ ಈ ವಿಷಯವನ್ನು ಅರಿಯಲು ತನಗೆ ಜ್ಞಾನವನ್ನು ಮತ್ತು ಇದನ್ನು ನಂಬಲು ಸೂಕ್ತ ಪ್ರಮಾಣಗಳನ್ನು ನೀಡಬೇಕಾಗಿ ಬೇಡುತ್ತಿದ್ದನೆಂಬುದನ್ನು ಸರಿಯಾಗಿ ನೆನಪಿಸಿಕೊಂಡನು. ಇಲ್ಲಿ ತನ್ನ ಪ್ರಾರ್ಥನೆಗೆ ತಕ್ಕ ಉತ್ತರವು ದೊರೆಯಿತು. ಈ ಪ್ರಾರ್ಥನೆಯ ಬಗ್ಗೆ ತಿಳಿಯಲು ಸಾಧ್ಯವಿದ್ದುದು ಈತನೊಬ್ಬನಿಗೇ ಮತ್ತು ಅದಕ್ಕಾಗಿಯೇ ಈತನು ಹೀಗೆ ಉತ್ತರಿಸಿ ತಾನು ನಿಜವಾಗಿಯೂ ಮನುಷ್ಯರಿಗಿಂತ ಶ್ರೇಷ್ಠ ಸಾಮರ್ಥ್ಯವುಳ್ಳವನಾಗಿದ್ದೇನೆಂಬುದನ್ನೂ, ಈ ಎಲ್ಲಾದರಲ್ಲಿಯೂ ತಾನೇ ಮೆಸ್ಸೀಯನೆಂಬುದನ್ನೂ ತೋರ್ಪಡಿಸಿಕೊಂಡನು. ನತಾನಯೇಲನ ನಂಬಿಕೆ ಕೂಡಲೇ ಕಾರ್ಯಪ್ರವೃತ್ತವಾಯಿತು ಮತ್ತು ಅತನು ಇದಕ್ಕೆ ಸ್ಪಂದಿಸುತ್ತಾ– "ರಬ್ಬೀಯೇ, (ಗುರುವೇ) ನೀನು ದೇವಕುಮಾರನು ಸರಿ; ನೀನೇ ಇಸ್ರಾಯೇಲಿನ ಅರಸನು" ಅಂದನು.

ಈ ದಿನದಲ್ಲೂ ನಮ್ಮ ಕರ್ತನು ನಡಕೊಳ್ಳುವ ರೀತಿ ಬಹುಮಟ್ಟಿಗೆ ಹೀಗೆ ಅಲ್ಲವೇ? ಈಗಲೂ ಕೆಲವರು ನಂಬಿಕೆಯುಳ್ಳವರಾಗಿ ಪ್ರಾರ್ಥನೆಯಲ್ಲಿ ದೇವರ ಯೋಜನೆಯ ಗುಣಲಕ್ಷಣಗಳ ಹಾಗೂ ಅದು ನೆರವೇರುವ ಕಾಲಸಮಯಗಳ ವಿಷಯವಾಗಿ ಅರಿತುಕೊಳ್ಳಲು ಮತ್ತು ಸುಗ್ಗಿ ಕಾರ್ಯದ ಬಗ್ಗೆ ತಿಳುವಳಿಕೆ ಹೊಂದಲು ಬಯಸುವರಾಗಿ ಇರುವರೆಂಬುದು ನಿಜವಲ್ಲವೇ? ಇವರು ಕರ್ತನಿಂದ ವಿಶೇಷವಾಗಿ ಸಹಾಯ ಹೊಂದುವರೆಂಬುದು ನಿಜವಲ್ಲವೇ? ಅವರ ಮನಸ್ಸಿಗೆ ಸತ್ಯವನ್ನು ವಿಶೇಷವಾಗಿ ಸ್ಪಷ್ಟವಾಗ ಮಾಡುವುದಿಲ್ಲವೇ? ಬೇರೆಯವರು ಬಹುಶಃ ಈ ವಿಷಯವನ್ನು ಕೇವಲ ಕುತೂಹಲಕ್ಕಾಗಿ ತಿಳಿಯಲು ಅಥವಾ ಅರ್ಧ ನಂಬಿಕೆಯಿಂದ ಬರಲಿರುವ ಕಷ್ಟಸಂಕಟಗಳಿಗೆ ಭಯಪಟ್ಟು ಇದರಿಂದ ಹೇಗೆ ತಪ್ಪಿಸಿಕೊಳ್ಳಬಹುದೆಂಬುದನ್ನು ತಿಳಿಯ ಬಯಸಿ ಬರುವರೋ ಆ ಮಟ್ಟಿಗೆ ಇವರೆಲ್ಲರೂ ಕತ್ತಲೆಯಲ್ಲಿ ಬಿಡಲ್ಪಡುವರು. ಕರ್ತನು ತನ್ನ ಮೊದಲ ಬರುವಿಕೆಯಲ್ಲಿ ಆದುಕೊಂಡ ಶಿಷ್ಯವರ್ಗದವರಲ್ಲಿದ್ದ ಸೊಗಸಾದ ಗುಣವಿಶೇಷತೆಗಳನ್ನು ಮತ್ತು ಉತ್ತಮ ಸ್ವಭಾವಗಳನ್ನು ತಿಳಿದವರಾದ ನಾವಾದರೋ ಅದೇ ಗುಣಸ್ವಭಾವಗಳನ್ನು ನಮಲ್ಲಿ ಬೆಳೆಸಿಕೊಳ್ಳುವ ಹಾಗೆ ನೋಡಿಕೊಳ್ಳೋಣ. ಹಾಗೂ ಯಾರು ಸಾತ್ವಿಕಭಾವ ನಂಬಿಕೆ ಮತ್ತು ದೇವರಲ್ಲಿ ನಿಷ್ಠೆಗಳಿರುವದನ್ನು ರುಜುವಾತುಪಡಿಸುವರೊ ಅವರ ಗಮನಕ್ಕೆ ಸತ್ಯವನ್ನು ತರುವಲ್ಲಿ ನಮ್ಮಲ್ಲಿರುವ ವಿಶೇಷ ಶಕ್ತಿಸಾಮರ್ಥ್ಯಗಳನ್ನು ವ್ಯಯಮಾಡೋಣ.

## "ನೀನು ಇದಕ್ಕಿಂತಲೂ ಹೆಚ್ಚಿನ ಕಾರ್ಯಗಳನ್ನು ನೋಡುವಿ"

ನತಾನಯೇಲನು ತನ್ನ ನಂಬಿಕೆಯನ್ನು ಅರಿಕೆಮಾಡಿದ ಕೂಡಲೇ ಕರ್ತನು ಅವನಿಗೆ ಭರವಸೆ ನೀಡಿ ಹೇಳಿದ್ದೇನೆಂದರೆ, ಯಾವ ಸಂಗತಿಯನ್ನು ಆತನು ಈಗಾಲೇ ಮನಗಂಡಿರುವನೋ

ಅದನ್ನು ತನ್ನ ಶಿಷ್ಯನಾಗಿ ಮುಂದೆ ಹಂತಹಂತವಾಗಿ ತಿಳಿದು ಗ್ರಹಿಸಿಕೊಳ್ಳುವ ಇನ್ನೂ ಹೆಚ್ಚಿನ ಸಂಗತಿಗಳಿಗೆ ಹೋಲಿಸಿದಲ್ಲಿ ಇದು ಅತ್ಯಲ್ಪ. ಮತ್ತು ಈ ದಿನದಲ್ಲೂ ನಮ್ಮ ವಿಷಯಗಳಲ್ಲಿ ಇದು ಸತ್ಯವಲ್ಲವೇ? ಪ್ರಾರಂಭದಲ್ಲಿ ಕರ್ತನನ್ನು ಅರಿತುಕೊಳ್ಳಲು ಬಂದು ದೇವರ ಯೋಜನೆಯ ವಿಷಯವಾಗಿ ಸ್ಪಷ್ಟವಾದ ಗ್ರಹಿಕೆ ಉಂಟಾದಾಗ ನಮ್ಮ ಹೃದಯಗಳಲ್ಲಿ ತುಂಬಿದ ಆನಂದ ವಿಶ್ವಾಸ ನಿರೀಕ್ಷೆಗಳು ನಮ್ಮ ಕರ್ತನಿಂದ ಸತತವಾಗಿ ಹೆಚ್ಚಿಸಲ್ಪಡುತ್ತಾ ಬಂದು ನಾವು ಮೊದಲು ಕಂಡು ಸಂತೋಷಿಸಿದ ಆ ಸಂಗತಿಗಳನ್ನು ನಮ್ಮ ಮನೋನೇತ್ರಗಳ ಮೂಲಕ ಈಗ ಪ್ರಕಟವಾಗಿರುವ ಆತನ ಪ್ರೀತಿಕೃಪೆ ಹಾಗೂ ದಯೆಕನಿಕರಗಳ ವಿಷಯವಾದ ಐಶ್ವರ್ಯಗಳಿಗೆ ಹೋಲಿಸಿದ್ದಲ್ಲಿ ಅವುಗಳು ಅಲ್ಪವಾಗಿ ತೋರುವವು. ನಮ್ಮ ಮನೋದೃಷ್ಟಿಯು ವಿಶಾಲವಾದಷ್ಟೂ ನಮ್ಮ ನಿರೀಕ್ಷೆಗೂ ಮೀರಿದ ದೇವರ ಪ್ರೀತಿಯ ಉದ್ದ ಅಗಲ ಆಳ ಮತ್ತು ಎತ್ತರಗಳನ್ನು ತಿಳಿಯುತ್ತಾ ಹೋಗುತ್ತೇವೆ.–ಎಫೆಸ್ಸ 3:18,19

ಹಾಗೂ ನಮ್ಮ ಕರ್ತನು ನತಾನಯೇಲನಿಗೆ ತಿಳಿಸಿರುವಂತೆ ಯೇಸುವೇ ನಿಜರೂಪದಲ್ಲಿ ಯಾಕೋಬನು ಕಂಡ ಏಣಿ ಎಂಬುದನ್ನು ನಾವು ನಂಬಿಕೆಯ ಮೂಲಕವಾಗಿ ನೋಡಬಹುದು. ಯಾಕೋಬನು ತನ್ನ ಕನಸಿನಲ್ಲಿ ಒಂದು ಏಣಿಯು ಭೂಲೋಕದಿಂದ ಪರಲೋಕದವರೆಗೂ ಹಾಕಲ್ಪಟ್ಟು ಅದರ ಮೂಲಕವಾಗಿ ಸಂಪರ್ಕಗಳು ನಡೆಯುವುದನ್ನು ಕಂಡಂತೆಯೇ ನಾವು ಸಹ, ಈಗ ತೆರೆದು ಪ್ರಕಟಗೊಳ್ಳುತ್ತಿರುವ ದೇವರ ಯೋಜನೆಯ ಬೆಳಕಿನಡಿಯಲ್ಲಿ ದೃಷ್ಟಿಸಿ ನೋಡಿದಾಗ, ನಮ್ಮ ಕರ್ತನಾದ ಯೇಸು ಮತ್ತು ಜೊತೆಗೂಡಿರುವ ಆತನ ಸಭೆಯು ದೇವರ ಮತ್ತು ಮನುಷ್ಯರ ನಡುವಿನ ಸಂಪರ್ಕವಾಗಿ ಏರ್ಪಟ್ಟು (ಕ್ರಿಸ್ತನ) ಆ ಸಾವಿರ ವರುಷದ ಆಳ್ವಿಕೆಯಲ್ಲಿ ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸಲು ಉಪಯೋಗಿಸಲ್ಪಡುವ ಕೃಪಾಸಾಧನಗಳಾಗುವರು ಎಂಬುದನ್ನು ನೋಡುತ್ತೇವೆ. ಅದರಂತೆಯೇ ಈಗ ಆತನ ಮನುಷ್ಯ ಸೃಷ್ಟಿಗಳಲ್ಲಿ ಪ್ರಥಮ ಫಲವಾಗಿ ಆಯಲ್ಪಟ್ಟವರು (ಸಭೆಯು) ಮನುಷ್ಯರೊಳಗಿಂದ ಒಟ್ಟುಗೂಡಿಸಲ್ಪಡುತ್ತಿದ್ದು ಮುಂದೆ ಅವರು ತಮ್ಮ ಮೊದಲನೇ ಪುನರುತ್ಥಾನದ ಮೂಲಕವಾಗಿ ಒಂದು ಕ್ಷಣದಲ್ಲಿ ರೆಪ್ಪೆ ಬಡಿಯುವಷ್ಟರೊಳಗೆ ಮಾರ್ಪಟ್ಟು ದೇವರಿಗೆ ಬಾಧ್ಯರು ಕ್ರಿಸ್ತನೊಂದಿಗೆ ಸಹ–ಬಾಧ್ಯರೂ ಆಗಿರಲು ದೇವರ ಬಳಿಗೆ ಪ್ರಭಾವಸ್ಥಾನಕ್ಕೆ ಎತ್ತಲ್ಪಡುವರು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ. ಶ. 29, ಹಿಮಕಾಲ | ಗಲಿಲಾಯದ ಕಾನಾ ಊರು, ಕಪೆರ್ನೌಮ್ | ಯೇಸುವಿನ ಮೊದಲನೇ ಅದ್ಭುತಕಾರ್ಯ; ಆತನು ಕಪೆರ್ನೌಮಿಗೆ ಭೇಟಿ ನೀಡುವುದು | –– | –– | –– | 2:1–12 |

## ಯೋಹಾನ 2:1–12

ಮೂರನೆಯ ದಿನದಲ್ಲಿ ಗಲಿಲಾಯದ ಕಾನಾ ಊರಿನಲ್ಲಿ ಒಂದು ಮದುವೆ ಆಯಿತು; ಯೇಸುವಿನ ತಾಯಿ ಅಲ್ಲಿ ಇದ್ದಳು; ಯೇಸುವನ್ನೂ ಆತನ ಶಿಷ್ಯರನ್ನೂ ಮದುವೆಗೆ ಕರೆದರು. ದ್ರಾಕ್ಷಾರಸವು ಸಾಲದೆ ಹೋಗಲಾಗಿ ಯೇಸುವಿನ ತಾಯಿ ಆತನಿಗೆ–ಅವರಲ್ಲಿ ದ್ರಾಕ್ಷಾರಸವಿಲ್ಲ ಎಂದು ಹೇಳಿದಳು. ಯೇಸು ಆಕೆಗೆ–ಅಮ್ಮಾ, ನನ್ನ ಗೊಡವೆ ನಿನಗೇಕೆ? ನನ್ನ ಸಮಯವು ಇನ್ನೂ ಬಂದಿಲ್ಲ ಎಂದು ಹೇಳಲು ಆತನ ತಾಯಿಯು ಕೆಲಸದವರಿಗೆ–ಆತನು ನಿಮಗೆ ಏನು ಹೇಳುವನೋ ಅದನ್ನು ಮಾಡಿರಿ ಅಂದಳು. ಯೆಹೂದ್ಯರ ಶುದ್ಧಾಚಾರದ ಪದ್ಧತಿಯ ಪ್ರಕಾರ ಎರಡು ಮೂರು ಕೊಳಗ ನೀರು ಹಿಡಿಯುವ ಆರು ಕಲ್ಲಿನ ಬಾನೆಗಳು ಅಲ್ಲಿ ಇಟ್ಟಿದ್ದವು. ಯೇಸು ಅವರಿಗೆ–ಆ ಬಾನೆಗಳಲ್ಲಿ ನೀರು ತುಂಬಿರಿ ಅನ್ನಲು ಅವುಗಳನ್ನು ಕಂಠದ ಮಟ್ಟಿಗೆ ತುಂಬಿದರು. ಆಗ ಅವರಿಗೆ–ಈಗ ಅದನ್ನು ತೋಡಿಕೊಂಡು ಹೋಗಿ ಔತಣದ ಪಾರುಪತ್ಯಗಾರನಿಗೆ ಕೊಡಿರಿ ಎಂದು ಹೇಳಿದಾಗ ತಕ್ಕೊಂಡು ಹೋಗಿ ಕೊಟ್ಟರು. ಅದು ಎಲ್ಲಿಂದ ಬಂತೋ ನೀರನ್ನು ತೋಡಿದ ಕೆಲಸದವರಿಗೆ ತಿಳಿದಿತ್ತೇ ಹೊರತು ಔತಣದ ಪಾರುಪತ್ಯಗಾರನಿಗೆ ತಿಳಿಯದಿರಲಾಗಿ ಅವನು ಅಷ್ಟರೊಳಗೆ ದ್ರಾಕ್ಷಾರಸವಾದ ಆ ನೀರನ್ನು ರುಚಿ ನೋಡಿದಾಗ ಮದಲಿಂಗನನ್ನು ಕರೆದು–ಎಲ್ಲರು ಹಿರಿದಿನ ದ್ರಾಕ್ಷಾರಸವನ್ನು ಮೊದಲು ಕೊಟ್ಟು ಅಮಲೇರಿದ ಮೇಲೆ ಕಿರಿದಿನ ದ್ರಾಕ್ಷಾರಸವನ್ನು ಕೊಡುತ್ತಾರೆ; ನೀನು ಹಿರಿದಿನ ದ್ರಾಕ್ಷಾರಸವನ್ನು ಇದುವರೆಗೂ ಇಟ್ಟುಕೊಂಡಿದ್ದೀ ಅಂದನು. ಯೇಸು ಈ ಮೊದಲನೆಯ ಸೂಚಕಕಾರ್ಯವನ್ನು ಗಲಿಲಾಯದ ಕಾನಾ ಊರಿನಲ್ಲಿ ಮಾಡಿ ತನ್ನ ಮಹಿಮೆಯನ್ನು ತೋರ್ಪಡಿಸಿದನು, ಮತ್ತು ಆತನ ಶಿಷ್ಯರು ಆತನಲ್ಲಿ ನಂಬಿಕೆಯಿಟ್ಟರು. ಇದಾದ ಮೇಲೆ ಅತನೂ ಆತನ ತಾಯಿಯೂ ತಮ್ಮಂದಿರೂ ಆತನ ಶಿಷ್ಯರೂ ಘಟ್ಟಾ ಇಳಿದು ಕಪೆರ್ನೌಮಿಗೆ ಹೋಗಿ ಅಲ್ಲಿ ಕೆಲವು ದಿವಸ ಇದ್ದರು.

# (ನೀರು) ತುಂಬಲ್ಪಟ್ಟದ್ದು ಮತ್ತು (ದ್ರಾಕ್ಷಾರಸವಾಗಿ) ಮಾರ್ಪಾಡಾದುದು

**ರೀಪ್ರಿಂಟ್ ಪುಟ 3484**

## ಯೋಹಾನ 2:1-11

**"ಆತನು ನಿಮಗೆ ಏನು ಹೇಳುವನೋ ಅದನ್ನು ಮಾಡಿರಿ"**

ಗಲಿಲಾಯದ ಕಾನಾ ಎಂಬುದು ಕರ್ತನ ಶಿಷ್ಯರಲ್ಲಿ ಹೊಸದಾಗಿ ಸೇರಿದವರಲ್ಲಿ ಒಬ್ಬನಾದ ನತಾನಯೇಲನು ವಾಸವಾಗಿದ್ದ ಊರು. ಅವನು ಯೇಸುವನ್ನು ಮೆಸ್ಸೀಯನೆಂದು ಅತನನಿಗೆ ಹೊಂದಿಕೊಂಡಿರಲು ಬಂದ ಆ ಆರು ಮಂದಿಯಲ್ಲಿ ಒಬ್ಬನು.  ನತಾನಯೇಲನು ನಮ್ಮ ಕರ್ತನನ್ನು ಆತನ ಇತರ ಶಿಷ್ಯರನ್ನು ವಿವಾಹದ ಔತಣಕೂಟವು ನಡೆಯಲಿದ್ದ ಕಾನಾ ಊರಿಗೆ ಬಂದು ತನ್ನ ಅತಿಥಿಗಳಾಗಿರಲು ಆಹ್ವಾನಿಸಿದ್ದನು. ಯೇಸುವಿನ ತಾಯಿಯಾದ ಮರಿಯಳು ಆ ಔತಣಕೂಟದಲ್ಲಿ ಇದ್ದಳು. ದ್ರಾಕ್ಷಾರಸವು ಅಲ್ಲಿ ಸಾಲದೆ ಹೊಗಿರುವುದು ಆಕೆಗೆ ಮುಂದಾಗಿ ತಿಳಿದು ಬಂದಿರುವಲ್ಲಿ ಅದು ಈಕೆಯ ಕುಟುಂಬಕ್ಕೆ ಬಹು ಹತ್ತಿರದ ಸ್ನೇಹವಿರುವವರ ಮನೆಯಾಗಿರುವಲ್ಲಿ ಸಂಶಯವಿಲ್ಲ. ಯೆಹೂದ್ಯರ ಪದ್ದತಿಯ ಪ್ರಕಾರ ಇಂಥ ಸಂದರ್ಭ ಗಳಲ್ಲಿ ಅತಿಥಿಗಳಿಗೆ ತಮ್ಮಲ್ಲಿರುವ ಯಥೇಚ್ಛವಾದವುಗಳ ಮೂಲಕ ಸತ್ಕರಿಸಬೇಕಿದ್ದು ಅದರಲ್ಲಿ ಏನಾದರೂ ಸಾಲದೇ ಬಂದಲ್ಲಿ ಅದು ಗಂಭೀರವಾದ ಲೋಪವಾಗುತ್ತಿತ್ತು.  ಆ ಔತಣಕೂಟಗಳಿಗೆ ತಮ್ಮ ನೆರೆಹೊರೆಯವರನ್ನು ಮತ್ತು ಅಲ್ಲಿ ಹಾದುಹೋಗುವರನ್ನೂ ಸಹ ಮದಲಿಂಗನ ಹೆಸರಿನಲ್ಲಿ ತಮ್ಮ ಸತ್ಕಾರವನ್ನು ಧಾರಾಳವಾಗಿ ಹೊಂದಲು ಬಲವಂತ ಮಾಡಲಾಗುತ್ತಿತ್ತು.  ಯೇಸು ಮತ್ತು ಆತನ ಶಿಷ್ಯರು ಅಲ್ಲಿ ವಿಶೇಷ ಆಹ್ವಾನದ ಅತಿಥಿಗಳಾಗಿದ್ದರು.

ನಮ್ಮ ಕರ್ತನ ತಾಯಿಯು ದ್ರಾಕ್ಷಾರಸವು ಸಾಲದೇ ಬಂದಿರುವುದನ್ನು ಆತನ ಗಮನಕ್ಕೆ ತಂದಳು. ಈ ಮೂಲಕ ಆಕೆಯು ಅದ್ಭುತಕಾರ್ಯವನ್ನು ನಿರೀಕ್ಷಿಸಿದಳೆಂದು ಭಾವಿಸಲಾಗಿರುವುದು. ಆಕೆಯು ಅದ್ಭುತವನ್ನು ನಿರೀಕ್ಷಿಸದ್ದಳೆಂಬ ಈ ಸಲಹೆಯು ಸಮರ್ಥನೀಯವೆಂದು ನಮಗೆ ಒಪ್ಪಲಾಗದು. ಏಕೆಂದರೆ ಈ ಸಂದರ್ಭದಲ್ಲಿ ದ್ರಾಕ್ಷಾರಸವನ್ನು ಅದ್ಭುತವಾಗಿ ಉಂಟುಮಾಡಿರುವುದು ಯೇಸುವಿನ ಅದ್ಭುತಕಾರ್ಯಗಳ ಪ್ರಾರಂಭವೆಂದು ನಿರ್ದಿಷ್ಟವಾಗಿ ಹೇಳಲಾಗಿದೆ. ಆದುದರಿಂದ ನಾವು ಇಲ್ಲಿ ಭಾವಿಸಿಕೊಳ್ಳಬೇಕಿರುವುದೆಂದರೆ, ಮರಿಯಳು ತನ್ನ ಮಗನೊಂದಿಗಿದ್ದ ದೀರ್ಘಕಾಲದ ಒಕ್ಕುಬಳಕೆ ಮತ್ತು ಆತನ ಮೇಲಿನ ಅವಲಂಬಿಕೆಯ ಮೂಲಕವಾಗಿ ಆಕೆಯು ಆತನು ಎಲ್ಲಾ ಸಂಗತಿಗಳ ವಿಷಯವಾಗಿಯೂ ಮತ್ತು ಎಲ್ಲಾ ಸಂದರ್ಭ ಗಳಲ್ಲಿಯೂ ಆತನು ತೆಗೆದುಕೊಳ್ಳುತ್ತಿದ್ದ ಉತ್ಕೃಷ್ಟವಾದ ತೀರ್ಮಾನಗಳ ಮತ್ತು ಅದಕ್ಕೆ ಆತನಲ್ಲಿದ್ದ ವ್ಯವಹಾರ ಕೌಶಲ್ಯಗಳ ಬಗ್ಗೆ ಆಕೆಗೆ ಅರಿವಿತ್ತು. ಅಲ್ಲಿದ್ದುದು ಆಕೆಯ ಕೈಮೀರಿದ ವಿಷಯವಾಗಿತ್ತು. ಮತ್ತು ಬಹುತೇಕ ಸಾಧಾರಣವಾದ ಸ್ಥಿತಿಯಲ್ಲಿರುವವರೆಲ್ಲರ ಸಂಗತಿಗಳಂತೆ ಮದಲಿಂಗನು ಮದುವೆಯ ಸಿದ್ಧತೆಗಾಗಿ ಖರ್ಚುಮಾಡಲು ತನಗೆ ಸಾಧ್ಯವಾದಷ್ಟು ಎಲ್ಲವನ್ನೂ ಖರ್ಚುಮಾಡಿರುವ ಸಂಭವವಿರುವುದು. ಅಲ್ಲದೆ ನಮ್ಮ ಕರ್ತನು ಆ ಮದುವೆಯ ಔತಣಕೂಟಕ್ಕೆ ಬರುವ ನಿರೀಕ್ಷೆಯಿದ್ದದರಿಂದ ಈ ಅಪರಿಚಿತ ವ್ಯಕ್ತಿಯ ಬಗ್ಗೆ ನತಾನಯೇಲನು ಮತ್ತು ಇತರರಿಂದ ಹೆಚ್ಚುಕಡಿಮೆ ಸಾಧಾರಣ ವಾಗಿ ಕೇಳಿರುವ ನೆರೆಹೊರೆಯವರನ್ನು ಈ ಕಾರಣಕ್ಕಾಗಿ ದೊಡ್ಡ ಸಂಖ್ಯೆಯಲ್ಲಿ ಕರೆದಿರುವ ಸಂಭವವೂ ಇತ್ತು.

## ಆ ಮನೆಯಲ್ಲಿ ಯೇಸುವಿನ ಸೌಹಾರ್ದತೆ

ಈ ಘಟನೆಯ ವಿವರಣೆಯು ನಮಗೆ ನಮ್ಮ ಕರ್ತನ ಗುಣದಲ್ಲಿನ ಸಾಮಾಜಿಕ ಮುಖದ ಒಂದು ಮಿಣುಕುನೋಟವನ್ನು ನೀಡುತ್ತದೆ.  ಮತ್ತು ಇದು ನಮಗೆ ಕ್ರೈಸ್ತ ಸನ್ಯಾಸಿಗಳು ಮತ್ತು ಸನ್ಯಾಸಿನಿಯರು ದೃಷ್ಟಾಂತವಾಗಿ ಹೇಳುವಂಥ ವೈರಾಗ್ಯಜೀವನವು ಆತನು, ನುಡಿಯಿಂದಾಗಲೀ ನಡೆಯಿಂದಾಗಲೀ, ಮಾಡಿದ ಬೊಧನೆಯ ಅಂಶವಲ್ಲವೆಂಬುದನ್ನು ಮನದಟ್ಟು ಮಾಡಿಕೊಡು ತ್ತದೆ.  ಆತನು ತನ್ನ ಪ್ರತಿಷ್ಠಿತ ಜೀವಿತವನ್ನು ನಡೆಸಿದುದು ಯಾವುದೇ ನೈತಿಕ ಹಾಗು ಧಾರ್ಮಿಕ ಸಮುದಾಯಕ್ಕೆ ಸೇರಿದ ಮನುಷ್ಯನ ಸಾಮಾನ್ಯವಾದ ಸಾಮಾಜಿಕ ಸನ್ನಿವೇಶಗಳಲ್ಲಿದ್ದ ರೀತಿಯಲ್ಲಿತ್ತು.  ನಮ್ಮ ಕರ್ತನು ಬಹು ಮೋಜಿನಲ್ಲಿ ಇಲ್ಲವೇ ಅವಿವೇಕತನದಲ್ಲಿ ನಡೆದಿರುವ ಸೂಚನೆಗಳಿಲ್ಲ.  ಆದರೆ ಆತನು ಆ ಮದುವೇ ಔತಣದ ಸಂದರ್ಭಕ್ಕೆ ಸೂಕ್ತವಾದ ಉಲ್ಲಾಸಕೂಟಗಳಲ್ಲಿ ಮತ್ತು ಅಲ್ಲಿ ದೊರೆಯುವ ಸೂಕ್ತವಾದ ಸಾಮಾಜಿಕ ಸೌಲಭ್ಯಗಳಲ್ಲಿ ಭಾಗವಹಿಸಿರುವನೆಂಬುದನ್ನು ಭಾವಿಸಿಕೊಳ್ಳುವುದು ನಮಗೆ ಉಚಿತವಾದದ್ದು.  ಇದು ಆತನು–"ಸಂತೋಷಪಡುವವರ ಸಂಗಡ ಸಂತೋಷಿಸಿರಿ ಮತ್ತು ಅಳುವವರ ಸಂಗಡ ಅಳಿರಿ" ಎಂದು ತನ್ನ ಹಿಂಬಾಲಕರಿಗೆ ಅಧಿಕಾರಯುತವಾಗಿ ತಾನೇ ಹೇಳಿರುವುದಕ್ಕೆ ಅನುಸಾರವಾಗಿತ್ತು.  ಪ್ರತಿಯೊಂದು ಮನೆಗೂ ಬೇಕಿರುವುದು ಕೇವಲ ಅವನ ಒಂದು ಬೇಟಿಯಲ್ಲ ಅದರೆ ಅದು ಆತನ ಮನೆಯಾಗಬೇಕು.  ನಮ್ಮ ಕರ್ತನು ಮತ್ತೆ ಶರೀರದಲ್ಲಿ ಬಂದದ್ದೇಯಾದರೆ ಆತನು ಹೋಗುತಿದ್ದನೆಂದು ನಂಬಲು ಸೂಕ್ತವಾದ ಕಾರಣಗಳಿರುವುದೆಂದು ಭಾವಿಸುವ ಸ್ಥಳಗಳಿಗೆ ತಾವು ಹೋಗಬೇಕೆಂಬ ನಿಯಮವು ಕರ್ತನ ಹಿಂಬಾಲಕರೆಲ್ಲರ ಜೀವಿತಗಳಿಗೆ ಕ್ಷೇಮಕರ. ನಮ್ಮ ಕರ್ತನು ನಮ್ಮ ಬದಲು ಇಲ್ಲಿರುತ್ತಿ ದ್ದರೆ ಆತನು ಮಾಡುತ್ತಿದ್ದದ್ದನ್ನು ಮಾಡಬೇಕೆಂಬುದೂ ಮತ್ತು ಆತನು ಹೇಳುತ್ತಿದ್ದದ್ದನ್ನು ಹೇಳಬೇಕೆಂಬ ನಿಯಮವು ನಮಗೆ ಕ್ಷೇಮಕರ. ಪ್ರಿಯ ಒಡೆಯನು ಹೋದಲ್ಲೆಲ್ಲಾ ಆತನೊಡನೆ ಆಶೀರ್ವಾದಗಳು ಹೋಗುವುದು, ವಿಶೇಷವಾಗಿ ತಮ್ಮ ಹೃದಯ ಗಳಲ್ಲಿ ಕಪಟವಿಲ್ಲದಿರುವ ನಿಜವಾದ ಇಸ್ರಾಯೇಲ್ಯನಾದ ನತಾನಯೇಲನಂತಿರುವವರಿಗೆ ಹೋಗುವುದು ನಮಗೆ ಖಚಿತ.

ಶಿಷ್ಯನು ಎಂಬ ಪದದ ಅರ್ಥವು ವಿದ್ಯಾರ್ಥಿ ಅಥವಾ ಕಲಿಯುವವನು ಎನ್ನುವುದನ್ನೂ, ಮತ್ತು ಆತನ ಜನರೆಲ್ಲರೂ

ಆತನ ಶಿಷ್ಯರೆಂಬುದನ್ನೂ, ಪ್ರತಿಯೊಬ್ಬ ಶಿಷ್ಯನೂ ಕರ್ತನನ್ನು ಪ್ರತಿನಿಧಿಸುವವನಾಗಿದ್ದು ತಾನು ಹೋದಲ್ಲೆಲ್ಲಾ ಆತನೂ ಹೋಗುವನೆಂಬುದನ್ನು ನಾವು ಜ್ಞಾಪಿಸಿಕೊಳ್ಳುವಾಗ ಅದು ನಮಗೆ ನಾವು ಆತನ ಪ್ರತಿನಿಧಿಗಳು ಇಲ್ಲವೇ "ರಾಯಭಾರಿಗಳು" ಎಂಬ ಸಲಹೆಯನ್ನು ನೀಡುವುದು. ಈ ಅಂಶವು ನಮ್ಮ ಮನಸ್ಸಿನಲ್ಲಿದ್ದಲ್ಲಿ ಮಹಿಮೆಯುಳ್ಳ ನಮ್ಮ ಕರ್ತನನ್ನು ಸೂಕ್ತವಾಗಿ ಪ್ರತಿನಿಧಿಸುವುದರಲ್ಲಿ, ಅಂದರೆ "ನಮ್ಮನ್ನು ಕತ್ತಲೆಯೊಳಗಿಂದ ಬಿಡಿಸಿ ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರಮಾಡುವವರಾಗಲು, ನಾವು ಎಷ್ಟು ಜಾಗರೂಕರಾಗಿರಬೇಕು. ಈ ನಿಟ್ಟಿನಲ್ಲಿ ನಾವು ನಮ್ಮ ಬಾಯಿಂದ ಮಾತ್ರವಲ್ಲದೆ ಹೃದಯದ ಮೂಲಕವಾಗಿಯೂ ಅಂದರೆ, "ನಮ್ಮ ಕರ್ತನೇ, ನಮ್ಮ ಶರಣನೇ ನಮ್ಮ ವಿಮೋಚಕನೇ, ನಮ್ಮ ಮಾತುಗಳು ಮತ್ತು ನಮ್ಮ ಹೃದಯದ ಧ್ಯಾನಗಳೂ ನಿನಗೆ ಸಮರ್ಪಕವಾಗಿರಲಿ" ಎಂದು ಪ್ರಾರ್ಥಿಸುವುದು ಎಷ್ಟು ಅವಶ್ಯವಲ್ಲವೇ. ನಿಜವಾಗಿಯೂ "ಕ್ರಿಸ್ತನು ಎಂಥವನಾಗಿದ್ದಾನೋ ನಾವು ಅಂಥವರಾಗಿಯೇ ಈ ಲೋಕದಲ್ಲಿದ್ದೇವೆ" (1 ಯೋಹಾನ 4:7) "ಲೋಕವು ನಮ್ಮನ್ನು ತಿಳಿದುಕೊಳ್ಳುವುದಿಲ್ಲ, ಅದು ಅತನನ್ನು ತಿಳಿದುಕೊಳ್ಳಲಿಲ್ಲವಲ್ಲ" ಆದರೆ ನಮ್ಮ ಕರ್ತವ್ಯವು ಎಲ್ಲಾ ಸಂದರ್ಭಗಳಲ್ಲಿಯೂ ಕೇವಲ ಒಂದೇ ರೀತಿಯದ್ದಾಗಿರುತ್ತದೆ: ಆತನು ನೀಡಿದ ಸಂದೇಶವೆಂದರೆ, ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ, ಹೀಗಾದರೆ ಅವರು ನಿಮ್ಮ ಒಳ್ಳೆಯ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಮ್ಮ ತಂದೆಯನ್ನು ಕೊಂಡಾಡುವರು.

## "ಈ ಮನೆಗೆ ಶುಭವಾಗಲಿ"

ಕರ್ತನ ಶಿಷ್ಯರೊಡನೆ ಹೋಗುವ ಪ್ರಭಾವಗಳ ವಿಷಯವಾಗಿ, ಅಂದರೆ ನಾವು ನಂಬಿರುವಂತೆ, ಆ ಪ್ರಭಾವಗಳೊಡನೆ ಅಂಥ ಎಲ್ಲಾ ಸನ್ನಿವೇಶಗಳಲ್ಲಿ ನಿಜವಾಗಿಯೂ ಆತನ ಪ್ರಸನ್ನತೆಯೇ ಹೋಗುವ ವಿಷಯವು ತನ್ನ ಅಪೊಸ್ತಲರನ್ನು ಕಳುಹಿಸಿಕೊಡುವಾಗ ಅವರಿಗೆ ಕೊಟ್ಟ ಆದೇಶದಲ್ಲಿ ಸೂಚಿತವಾಗಿರುವ ಒಂದು ಸಲಹೆ ಇರುವುದು. ಅವರು ಒಳಗೆ ಹೊಗುವ ಮೊದಲು "ಈ ಮನೆಗೆ ಶುಭವಾಗಲಿ" ಎಂದು ಹೇಳಬೇಕಿತ್ತು. ನಾವು ಯಾವ ಮನೆಗೆ ಹೋಗುವಾಗಲೂ ಮೊದಲು ಬಹಿರಂಗವಾದ ರೀತಿಯಲ್ಲಿ ಔಪಚಾರಿಕವಾಗಿ ಇದನ್ನು ಹೇಳಬೇಕು ಎನ್ನುವ ಒಂದು ಆಜ್ಞೆಯನ್ನಾಗಿ ಇದನ್ನು ತೆಗೆದುಕೊಳ್ಳಬಾರದು. ಆದರೆ ಇದು ಕರ್ತನ ಪ್ರತಿಷ್ಠಿತ ಜನರೆಲ್ಲರ ಹೃದಯದ ಭಾವನೆಯಾಗಿರಬೇಕೆನ್ನುವುದು ನಮ್ಮ ನಂಬಿಕೆ. ಅಂದರೆ ಅವರು ಎಲ್ಲಿಗೆ ಹೋದರೂ ಆಶೀರ್ವಾದ ಶುಭಗಳು ಅವರೊಡನೆ ಹೋಗಬೇಕೆಂಬುದು ಅವರ ಬಯಕೆ ಅವರ ಪ್ರಯತ್ನ ಮತ್ತು ಅವರ ಗುರಿಯಾಗಿ, ಅವರು ಸಂಪರ್ಕಿಸಲಿರುವ ನರಳುತ್ತಿರುವ ನಿಸ್ಸಹಾಯಕ ಜೀವಿಗಳ ಹೃದಯಗಳನ್ನು ವಿಶ್ರಮಗೊಳಿಸುವ, ಅವರಿಗೆ ಪುನಶ್ಚೈತನ್ಯ ತರುವ ಹಾಗೂ ಅವರನ್ನು ಉದ್ಧಾರ ಮಾಡುವಂತಿರಬೇಕು.

ಲೋಕದಲ್ಲಿ ಜಗಳ ಬಿತ್ತುವವರು ಬಹು ಮಂದಿಯಿರುವರು; ಇವರು ಯಾವ ಮನೆಯ ಬಾಗಿಲಿನೊಳಗೆ ಸೇರಿದರೂ ಅವರು ಅದನ್ನು ಅರಿಯಲಿ ಅಥವಾ ಹೇಳಲಿ ಇಲ್ಲವೇ ಬಿಡಲಿ ಆ ಮನೆಯ ಗೋಡೆಗಳೊಳಗೆ ಜಗಳಭಿನ್ನಾಭಿಪ್ರಾಯಗಳು ಉಂಟಾಗಿರುತ್ತವೆ. ತಮ್ಮೊಳಗೆ ಹೇರಳವಾಗಿರುವ ಕೋಪ ಅಸೂಯೆ ಹಗೆತನ ಜಗಳದ ಮೂಲಕವಾಗಿ ಅವರ ಹೃದಯಗಳು ನುಡಿಯಲಾರಂಭಿಸಿ ಅಲ್ಲಿ ಅತೃಪ್ತಿ ಅಸಂತೋಷಗಳನ್ನು ಬಿತ್ತುತ್ತವೆ. ತಮ್ಮ ಆತ್ಮಗಳಲ್ಲಿನ ಅಸೂಯೆ ಜಗಳಬಿನ್ನಾಭಿಪ್ರಾಯಗಳ ಈ ಅಹಿತಕರ ಸ್ಥಿತಿಯಿಂದ ದಾಟಿ ಬಂದಿರುವವರು, ಕರ್ತನ ಹೆಜ್ಜೆಯ ಜಾಡಿನಲ್ಲಿ ಅಂದರೆ ಶರೀರಭಾವವನ್ನು ಅನುಸರಿಸದೆ ಆತ್ಮನನ್ನನುಸರಿಸಿ ನಡೆಯಲು ನಿರ್ಧಾರ ಮಾಡಿರುವುದರಿಂದ ತಮ್ಮ ಶರೀರಭಾವದ ಮತ್ತು ತಮ್ಮಲ್ಲಿರುವ ಸೈತಾನನ ಕೃತ್ಯಗಳನ್ನು ತೆಗೆದುಹಾಕಿರುವರು. ತಾವು ಪ್ರೀತಿಯ ಆತ್ಮವನ್ನು ಹೊಂದುವದಕ್ಕೆ ಮೊದಲು ಅವರೂ ಸಹ ಕೆಲವು ಸಾರಿ ಹಿಂದೆ ಸರಿದು ಖಂಡಿತವಾಗಿಯೂ ಬಿದ್ದು ಹೋಗಿರುವರು. ಹೀಗೆ ಈ ಮಧ್ಯದಲ್ಲಿ, ಅವರು ಸಂತೋಷ ಸಮಾಧಾನ ಮುಂತಾದ ಪವಿತ್ರಾತ್ಮನ ಫಲಗಳಿಂದ ಭರಿತರಾಗಿ ಅವರು ಹೋದಲ್ಲೆಲ್ಲಾ ಆಶೀರ್ವಾದಗಳು ಹೋಗುವದಕ್ಕೆ ಮೊದಲು, ಕೆಲವು ಸಮಯಗಳಲ್ಲಿ ಅವರಲ್ಲಿಯೂ ಸಹ ವಂಚನೆಯ ಮಾತುಗಳು ಚಾಡಿಹೇಳುವುದು ಕುಚೋದ್ಯ ಮಾಡುವುದು ಕೆಟ್ಟದ್ದಾಗಿ ಅನುಮಾನಿಸುವುದು ಕರುಣೆಯಿಲ್ಲದಿರುವುದು ನಡೆನುಡಿಗಳಲ್ಲಿ ನಯವಿನಯವಿಲ್ಲದಿರುವುದು ಅಸಹನೆ ಮುಂತಾದುವುಗಳು ತೋರಿಬರುತ್ತಿದ್ದವು.

ಇಂಥವರ ಪ್ರಭಾವವು ಅವರು ಕ್ರಿಸ್ತನ ಶಿಷ್ಯರಾಗಿದ್ದರೂ ಅದು ಒಂದು ಶಾರೀರಿಕವಾದ ಪ್ರಭಾವವಾಗಿದ್ದು ಆತ್ಮಿಕ ಬೆಳವಣಿಗೆಗೆ ತೀವ್ರ ಹಾನಿಕರವಾದದ್ದು. ಅದು ವಿವಿಧ ಆತ್ಮೀಕ ವರಗಳ ಬೆಳವಣಿಗೆಯನ್ನು ನಿಲ್ಲುವಂತೆ ಮಾಡಿ ತಮ್ಮ ಹೃದಯದ ಸಂತೋಷ ಸಮಾಧಾನಗಳನ್ನು ಕೆಡಿಸಿ ಮತ್ತು ಕರ್ತನ ಸರಿಯಾದ ಮಾರ್ಗಗಳನ್ನು ಹುಡುಕುತ್ತಿರುವ ಇತರರ ಹೃದಯಗಳನ್ನು ಕೆಡಿಸಲು ಲೆಕ್ಕಾಚಾರ ಹಾಕಿರುವಂತದ್ದು. ಕರ್ತನ ಹಿಂಬಾಲಕರಾದ ನಮಗಿರುವ ಪಾಠವೆಂದರೆ, ನಾವು ಪಾಪದಿಂದ ನೀತಿಗೂ ಮತ್ತು ಕೋಪ ಕ್ರೋದ ಅಸೂಯೆಗಳಿಂದ ಪ್ರೀತಿಗೆ ತಿರುಗಿಕೊಳ್ಳುವುದು ಮಾತ್ರವಲ್ಲದೆ ನಮ್ಮ ಹೃದಯಗಳಲ್ಲಿ ಪ್ರೀತಿಯು ಪೂರ್ಣವಾಗಿ ತುಂಬಲ್ಪಟ್ಟು ಆ ಹೇರಳವಾದ ಪ್ರೀತಿ ಸಂತೋಷ ಸಮಾದಾನಗಳ ಮೂಲಕ ನಮ್ಮ ಬಾಯಿ ನುಡಿದು ಮತ್ತು ನಮ್ಮ ನಡವಳಿಕೆಗಳು ನಮ್ಮ ಕರ್ತನಿಗಿರುವ ನಮ್ಮ ಸಂಬಂಧವನ್ನು ಮತ್ತು ನಮ್ಮಲ್ಲಿರುವ ಆತನ ಹೋಲಿಕೆಗಳನ್ನು ತೋರಿಸುವಂತಾಗಬೇಕು. ಆಗ ಜನರು ನಾವು ಯೇಸುವಿನೊಡನೆ ಇದ್ದವರೆಂಬುದನ್ನು ಮತ್ತು ಆತನಿಂದ ಕಲಿತಿರುವರೆಂಬುದನ್ನು ತಿಳಿದುಕೊಳ್ಳುವರು.

## "ನಿನ್ನ ತಂದೆತಾಯಿಗಳನ್ನು ಸನ್ಮಾನಿಸಬೇಕು"

ತನ್ನ ತಾಯಿಯ ಸಲಹೆಗೆ ನಮ್ಮ ಕರ್ತನು ಕೊಟ್ಟ ಉತ್ತರದಲ್ಲಿ ನಿಜವಾಗಿಯೂ ಅನುಕಂಪವಿಲ್ಲದಂತೆಯೂ ಮತ್ತು ಅದು ಕಠಿಣವಿದ್ದಂತೆಯೂ ತೋರುತ್ತದೆ. ಆದರೆ ಇದು ಬಹುತೇಕ ಆತನು ಪರಿವರ್ತನೆ ಹೊಂದಿದುದರ ಪರಿಣಾಮ. "ಸ್ತ್ರೀಯೇ (ವುಮನ್, ಅಮ್ಮಾ)" ಎನ್ನುವುದು ಸರಿಯಾದ ಭಾಷಾಂತರವಾಗಿದ್ದರೂ ಇದು ಯಜಮಾನಿ (ಲೇಡಿ) ಎಂಬ ಗ್ರೀಕ್ ಮೂಲದ ಸೊಗಸಿನ ವರ್ಣನಾರ್ಥವನ್ನು ಮತ್ತು ಇದರ (ಆಂಗ್ಲಭಾಷೆಯ 'ಲೇಡಿ' ಪದದ) ಸಮೀಪ ಅರ್ಥದ ಮಹತ್ವವನ್ನು ಸೂಚಿಸು

ವುದಿಲ್ಲ. ದೃಷ್ಟಾಂತವಾಗಿ ಹೇಳವುದಾದರೆ, ರೋಮ್ ಸಾಮ್ರಾಜ್ಯದ ಚಕ್ರವರ್ತಿಯು ಐಗುಪ್ತ ದೇಶದ ರಾಣಿಯನ್ನು "ಧೈರ್ಯವನ್ನು ತಂದುಕೊ, ಓ ಸ್ತ್ರೀಯೇ" ಎಂದು ಪ್ರಶಂಸಾತ್ಮಕವಾಗಿ ಸಂಭೋಧಿಸುವಾಗ ಅಲ್ಲಿ ಇದೇ ಶಬ್ದವಿದೆ. ನಮಗೆ ಖಚಿತವಾಗಿರುವುದೆಂದರೆ, ನಮ್ಮ ಕರ್ತನು ತನ್ನ ನಡೆಯಿಂದಾಗಲೀ ನುಡಿಯಿಂದಾಗಲೀ–"ನಿನ್ನ ತಂದೆತಾಯಿಗಳನ್ನು ಸನ್ಮಾನಿಸಬೇಕು" ಎಂಬ ಧರ್ಮಶಾಸ್ತ್ರದ ನಿಯಮವನ್ನು ಉಲ್ಲಂಘಿಸಿಲ್ಲದಿರುವುದು. ತನ್ನ ನಡೆನುಡಿಗಳಲ್ಲಿ ಮತ್ತು ತನ್ನ ಬೋಧನೆಗಳಲ್ಲಿ ಒತ್ತಿ ಹೇಳಿರುವ ಸಾತ್ವಿಕತ್ವ ವಿನಯ ತಾಳ್ಮೆ ಮತ್ತು ಪ್ರೀತಿ ಇವುಗಳಿಗೆ ತಾನೇ ಒಂದು ಒಳ್ಳೆಯ ಮಾದರಿಯಾಗಿದ್ದನು.

"ನನ್ನ ಗೊಡವೆ ನಿನಗೇಕೆ?" ಎಂಬುದರಲ್ಲಿ ವ್ಯಕ್ತವಾಗಿರುವುದು, "ನನಗೆ ಆದೇಶ ನೀಡಲು ಪ್ರಯತ್ನಿಸಬೇಡ, ಸರಿಯಾದ ಸಮಯವು ಬಂದಾಗ ನಾನು ಏನು ಮಾಡಬೇಕೆಂಬುದು ನನಗೆ ಗೊತ್ತಿದೆ." ಎಂಬ ಮಾತಿನಲ್ಲಿ ಬಹು ಸಮಂಜಸವಾಗಿ ಸೂಚಿತವಾಗಿರುವುದೆಂದು ತೋರುತ್ತದೆ. ಮರಿಯಳಿಗೆ ದ್ರಾಕ್ಷಾರಸವು ಕಡಿಮೆಯಾಗಿರುವ ವಿಷಯವನ್ನು ಮುಚ್ಚಿಡುವ ಉದ್ದೇಶವಿರುವ ಸಂಭವವಿತ್ತು. ಇದರ ಬದಲಾಗಿ ಯೇಸುವು ತಾನು ಮಾಡಲಿರುವ ಅದ್ಭುತಕಾರ್ಯವು ಮದಲಿಂಗನ ಸಹಾಯಕ್ಕಾಗಿ ಸ್ವಲ್ಪ ಮಾತ್ರವಾಗಿದ್ದು, ಆದರೂ ಅದು ಹೆಚ್ಚಾಗಿ ಆ ಸೇವಕರ ಮೂಲಕವಾಗಿ ಅಲ್ಲಿ ಕೂಡಿರುವವರೆಲ್ಲರಿಗೆ ಒಂದು ವಿಶೇಷ ಪಾಠಕ್ಕಾಗಿರುವುದೆಂದು ತಿಳಿದುಕೊಂಡಿದ್ದನು. ಆದುದರಿಂದ ಅದ್ಭುತವಾಗಿ ಉಂಟಾಗುವ ಹೊಸ ದ್ರಾಕ್ಷಾರಸವು ಹಳೆಯದರೊಂದಿಗೆ ಮಿಶ್ರಿಸಲ್ಪಟ್ಟು ಆ ಅದ್ಭುತದ ಪರಿಣಾಮವು ಕಡಿಮೆಯಾಗಬಾರದೆಂದು ಯೇಸುವು ದ್ರಾಕ್ಷಾರಸವು ಕಡಿಮೆಯಾಗಲು ಮಾತ್ರವಲ್ಲದೆ ಅದು ಮುಗಿದು ಹೋಗಿ ಅಲ್ಲಿ ದ್ರಾಕ್ಷಾರಸವು ಇಲ್ಲದೇ ಹೋಗುವವರೆಗೂ ಕಾದಿದ್ದನು.

"ಆತನು ನಿಮಗೆ ಏನು ಹೇಳುವನೋ ಅದನ್ನು ಮಾಡಿರಿ" ಎಂದು ಮರಿಯಳು ಸೇವಕರಿಗೆ ಹೇಳಿದ ಮಾತಿನಲ್ಲಿ ಆ ಮನೆಯವರಲ್ಲಿ ಆಕೆಗೆ ಬಹು ಹತ್ತಿರದ ಪರಿಚಯವಿತ್ತೆಂಬುದು ಮತ್ತೂ ಸ್ಪಷ್ಟವಾಗುತ್ತದೆ. ಆ ಸೇವಕರಿಗೆ ಅಂಥ ಒಂದು ಆದೇಶವು ಅವಶ್ಯವಿತ್ತಷ್ಟೆ. ಏಕೆಂದರೆ ಅವರು ಬಂದಿರುವ ಅತಿಥಿಗಳಲ್ಲಿ ಒಬ್ಬರ ಆದೇಶವನ್ನು ತೆಗೆದುಕೊಳ್ಳಲು ಸಿದ್ಧರಿರಲಿಲ್ಲ. ಕರ್ತನು ಆ ಸೇವಕರಿಗೆ ಏನು ಮಾಡಲು ಆಜ್ಞಾಪಿಸುವನೆಂಬುದು ಮರಿಯಳಿಗೆ ತಿಳಿದಿರಲಿಲ್ಲ. ಆದರೆ, ಆಗಲೇ ಸೂಚಿಸಿರುವಂತೆ, ಆಕೆಗೆ ತನ್ನ ಮಗನ ಜ್ಞಾನಕೌಶಲ್ಯಗಳಲ್ಲಿ ಭರವಸೆಯಿದ್ದು ಮತ್ತು ಅಲ್ಲಿ ಸತ್ಕರಿಸಲು ದ್ರಾಕ್ಷಾರಸವು ಸಾಲದೇ ಹೊಗತ್ತಿರಲು ಆತನು ಅತಿಥಿಗಳಲ್ಲಿ ಒಬ್ಬನಾಗಿ ಮತ್ತೆ ಅದನ್ನು ಒದಗಿಸಿಕೊಡಲು ಕೆಲವು ಕ್ರಮಗಳನ್ನು ತೆಗೆದುಕೊಳ್ಳಲು ಇಷ್ಟಪಡುವನೆಂದು ತಿಳಿದಿದ್ದಳು.

ಯೇಸುವು ಮತ್ತು ಆತನ ಶಿಷ್ಯರು ಕುಡಿಯಲು ಮದಲಿಂಗನು ಒದಗಿಸಿದ ದ್ರಾಕ್ಷಾರಸವು ಯಾವ ವಿಧವಾದುದು ಹಾಗು ನಂತರದಲ್ಲಿ ಕರ್ತನು (ಅದ್ಭುತವಾಗಿ) ಉಂಟುಮಾಡಿ ಅದರಲ್ಲಿ ಕುಡಿದ ದ್ರಾಕ್ಷಾರಸವು ಯಾವ ವಿಧವೆಂಬ ಒಂದು ಪ್ರಶ್ನೆ ಇಲ್ಲಿ ಏಳುವುದು. ಇದು ಹುಳಿ ಬೆರಸದಿರುವ ದ್ರಾಕ್ಷೇಹಣ್ಣಿನ ರಸವಾಗಿತ್ತೆಂದು ತಿಳಿಯಲು ನಮಗೆ ಯಾವ ಸೂಚನೆಗಳೂ ಇರುವುದಿಲ್ಲ. ಆದರೆ ಎಲ್ಲವೂ ಇದಕ್ಕೆ ವಿರುದ್ಧವಾಗಿದ್ದು, ಅದರಲ್ಲಿ ಸ್ವಲ್ಪ ಹುಳಿಮದ್ಯದ ಅಂಶವಿತ್ತೆಂದು ಬೋಧಿಸಿ ಹೇಳಿರುವುದಾಗಿ ತೋರುತ್ತದೆ. "ಕಿರಿದಿನ ದ್ರಾಕ್ಷಾರಸ" ವೆಂದು ಕರೆಯಲ್ಪಡುವ ದ್ರಾಕ್ಷಾರಸವನ್ನು ಅದರಲ್ಲಿ ಸಣ್ಣ ಪ್ರಮಾಣದ ಹುಳಿಮದ್ಯ ಬೆರೆಸುವ ಮೂಲಕ ತಯಾರು ಮಾಡಲಾಗುತ್ತಿತ್ತು. ಯೇಸುವು ಉಂಟು ಮಾಡಿದ ದ್ರಾಕ್ಷಾರಸವನ್ನು ಕುಡಿದು ನೋಡಿ ಅದರ ವಿಷಯವಾಗಿ ಔತಣದ ಪಾರುಪತ್ಯಗಾರನು––ಇದು ಮೊದಲು ಕೊಟ್ಟದ್ದಕಿಂತ ಉತ್ತಮವಾಗಿರುವುದೆಂದು ಗಮನಿಸಿ ಹೇಳಿರುವಲ್ಲಿ ಈ ಸಿದ್ಧಾಂತಕ್ಕೆ ಆಧಾರವಿದೆಯೆಂದು ನಮಗೆ ಅನಿಸುವುದು. ಆದರೂ ಜನರು ಕುಡಿದು ಅಮಲೇರಿ ರುಚಿಸಿ ನೋಡಿ ತೀರ್ಮಾನಿಸುವ ಶಕ್ತಿಕಳೆದುಕೊಂಡಿದ್ದರೆಂಬ ಅಂಶವು ಇಲ್ಲಿ ಅಡಕವಾಗಿರುವುದಿಲ್ಲ.

ನಮ್ಮ ದೃಷ್ಟಿಯಲ್ಲಿ ಹೇಳುವುದಾದರೆ, ಇಂದಿನ ಪರಿಸ್ಥಿತಿಗಳಿಗೂ ಮತ್ತು ನಮ್ಮ ಕರ್ತನ ಕಾಲದ ಪರಿಸ್ಥಿತಿಗಳಿಗೂ ಬಹು ವ್ಯತ್ಯಾಸವಿತ್ತು. ಇಂದು ನಾವು ನೀರು ಕಾಫಿ ಟೀ ಮುಂತಾದುವುಗಳನ್ನು ಕುಡಿಯುವ ಹಾಗೆ ಉಷ್ಣದೇಶಗಳ ಜನರಿಗೆ ಸಣ್ಣ ಪ್ರಮಾಣದ ಮದ್ಯಬೆರೆಸಿದ ದ್ರಾಕ್ಷಾರಸವನ್ನು ಕುಡಿಯುವ ರೂಢಿಯಿತ್ತು. ಯೂರೋಪಿನ ಕೆಲವು ಭಾಗದ ಜನರ ವಿಷಯದಲ್ಲಿ ಇದನ್ನೇ ಹೇಳಬಹುದು. ಅಲ್ಲದೆ ಅದು ಮಂದಗತಿಯಲ್ಲಿ ಅಭಿವೃದ್ಧಿಯಾಗುತ್ತಿದ್ದ ಕಾಲವಾಗಿದ್ದು ಆಗಿನ ಜನರು ಎಲ್ಲಾ ವಿಷಯಗಳಲ್ಲೂ ಮಿತವಾಗಿರುತ್ತಿದ್ದರು. ನಮ್ಮ ಕಾಲವು ಎಲ್ಲವನ್ನೂ ಒತ್ತಡದಿಂದಲೂ ನರೋದ್ರೇಕತೆಯಿಂದಲೂ ನಡೆಸಲ್ಪಡುವ ಕಾಲವಾಗಿದ್ದು ಮದ್ಯದಿಂದ ಪಡೆಯುವ ಉತ್ತೇಜನವು ಬಹು ಜನರಿಗೆ ವಿಷಕಾರಿಯಾಗಿ ತೋರಿಬಂದಿರುವುದು. ಕೆಲವರಿಗಂತೂ ಇಂಥ ಉತ್ತೇಜನಕಾರಕವನ್ನು ಮಿತವಾಗಿ ಬಳಸುವುದು ಅಸಾಧ್ಯವೆಂಬಂತೆ ತೋರುತ್ತದೆ.

ಕೇವಲ ಈ ಒಂದು ಕಾರಣಕ್ಕಾಗಿಯೇ ಮದ್ಯವನ್ನು ಪೂರ್ಣವಾಗಿ ವರ್ಜಿಸುವುದನ್ನು ಶಿಫಾರಸ್ಸು ಮಾಡಬಹುದು; "ಇಂದಿನ ಕಷ್ಟಸಂಕಟದ" ಕಾಲಗಳ ಕಾರಣವಾಗಿ, ನರೋದ್ರೇಕ ವಸ್ತುಗಳ ಮೇಲಿನ ಖರ್ಚು ಹೆಚ್ಚಾಗುತ್ತಿರುವ ಕಾರಣಗಳ ಅದರ ಪರಿಣಾಮವಾಗಿ ಪಾನಮತ್ತತೆಯ ಅಪಾಯಗಳು ಹೆಚ್ಚುತ್ತಿರುವ ಕಾರಣವಾಗಿ ಹೊರತು ಇದು ಸತ್ಯವೇದದಲ್ಲಿ ಪೂರ್ಣ ಮದ್ಯಪಾನ ವರ್ಜನೆಯನ್ನು ವಿಶೇಷವಾಗಿ ಸೇರಿಸಿರುವ ಕಾರಣವಾಗಿಲ್ಲ. ನಮ್ಮ ಇಂದಿನ ಪರಿಸ್ಥಿತಿ ಸನ್ನಿವೇಶಗಳಲ್ಲಿ ಕರ್ತನು ಶಾರೀರಿಕವಾಗಿ ನಮ್ಮ ಮಧ್ಯದಲ್ಲಿ ಇದ್ದುದೇ ಆದಲ್ಲಿ ಆತನು ಅತಿ ಮಿತಾಹಾರಿಗಳ ಪಂಕ್ತಿಯಲ್ಲಿ ಒಬ್ಬನಾಗಿರುತ್ತಿದ್ದನು; ಏಕೆಂದರೆ ಇಂಥ ವರ್ಜನೆಗಳು ತನಗೆ ಅವಶ್ಯವಿಲ್ಲದಿದ್ದರೂ, ನಾವು ನಂಬಿರುವಂತೆ, ಬಲಹೀನರೂ (ಪರಿಪೂರ್ಣತೆಯಿಂದ) ಬಿದ್ದುಹೋಗಿರುವವರೂ ಆದ ಮಾನವ ಸಂತತಿಯ ಮೇಲಿನ ಪ್ರೀತಿ ಅನುಕಂಪಗಳು ಆತನನ್ನು ಅವರಿಗೆ ವಿಘ್ನಕರವಾಗಿರುವಂಥ ಯಾವುದೇ ಸಂಗತಿಗಳಿಂದ ದೂರವಾಗಿರುವಂತೆ ಬಲವಂತ ಮಾಡುತ್ತಿದ್ದವು.

## ನೀರಿನ ಬಾನೆಗಳು ಪೂರ್ಣವಾಗಿ ತುಂಬಲ್ಪಟ್ಟದ್ದು

ಆ ದಿನಗಳಲ್ಲಿ ಅವರಿಗೆ ನೀರಿನ ಕೊಳಾಯಿಗಳು ಪಂಪುಗಳು ಮುಂತಾದ ವ್ಯವಸ್ಥೆಗಳು ಇರಲಿಲ್ಲ. ಆದರೆ ಮನೆಯ

ಉಪಯೋಗಕ್ಕಾಗಿ ನೀರಿನ ಮಡಕೆಗಳು ಎನ್ನಿಸಿಕೊಳ್ಳುವ ಮಣ್ಣಿನ ದೊಡ್ಡ ಪಾತ್ರೆಗಳಲ್ಲಿ ನೀರನ್ನು ಇಟ್ಟುಕೊಳ್ಳುತ್ತಿದ್ದರು. ಇಂಥ ಒಂದು ವಿವಾಹ ಸಂದರ್ಭಗಳಲ್ಲಿ ನೀರು ಹೆಚ್ಚಾಗಿ ಬೇಕಾಗುತ್ತಿತ್ತು ಮತ್ತು ಇದಕ್ಕಾಗಿ ನೀರಿನ ದೊಡ್ಡ ಪಾತ್ರೆಗಳನ್ನು ನೆರೆಹೊರೆಯವರಿಂದ ಕೇಳಿತರಲಾಗುತ್ತಿತ್ತು. ಅವುಗಳು ಬೇರೆ ಬೇರೆ ಗಾತ್ರದವುಗಳಾಗಿ ರುತ್ತಿದ್ದವು; ಎರಡು ಕೊಳಗ ಎನ್ನುವುದು ಹದಿನೆಂಟು ಗ್ಯಾಲನ್‌ಗಳಿಗೆ ಸಮ, ಮೂರು ಕೊಳಗವು ಇಪ್ಪತ್ತೇಳು ಗ್ಯಾಲನ್‌ಗಳಿಗೆ ಸಮನಾಗುವುದು ಇಲ್ಲವೇ ಪ್ರತಿಯೊಂದು ಕೊಳಗವು ಒಂಬತ್ತು ಗ್ಯಾಲನ್‌ಗಳು. ಹೀಗೆ ತಂದ ನೀರನ್ನು ವಿಶೇಷವಾಗಿ ಮನೆ ಬಳಕೆಯ ಪಾತ್ರೆಗಳನ್ನು ತೊಳೆಯಲು, ಬರುವ ಅತಿಥಿಗಳ ಕೈಕಾಲುಗಳನ್ನು ತೊಳೆಯಲು ಉಪಯೋಗಿಸುವುದು ವಾಡಿಕೆಯಾಗಿತ್ತು; ಹೀಗೆ ಬಹು ಹೆಚ್ಚು ನೀರಿನ ಅವಶ್ಯಕತೆ ಅಲ್ಲಿ ಇರುತ್ತಿತ್ತು.

ಅದ್ಭುತಕಾರ್ಯವನ್ನು ಮಾಡಲು ಸೂಕ್ತ ಸಮಯವು ಬಂದಾಗ ನಮ್ಮ ಕರ್ತನು ನೀರನ್ನು ತಂದು ಆ ಆರು ನೀರಿನ ಬಾನೆಗಳಲ್ಲಿ ಕಂಟದ ಮಟ್ಟಿಗೂ ತುಂಬಲು ಸೂಚಿಸಿದನು. ಈ ಸಾಮನ್ಯವಾದ ನೀರಿನ ಜಾಡಿಗಳನ್ನು ಉಪಯೋಗಿಸಿದುದು ಅವುಗಳಲ್ಲಿ ಯಾವುದಾದರೂ ಪುಡಿಗಳನ್ನು ಅಥವಾ ಮಿಶ್ರಣಗಳನ್ನು ಹಾಕಿದ್ದು ಅದು ಅದ್ಭುತಕ್ಕೆ ಕಾರಣವಿರಬಹುದೆಂಬ ಸಂಶಯವಿಲ್ಲದಂತಾಗುತ್ತದೆ ಮತ್ತು ಅವುಗಳನ್ನು ಹೀಗೆ ಕಂಟದವರೆಗೂ ತುಂಬುವುದು ನಮ್ಮ ಕರ್ತನು ಏನನ್ನಾದರೂ ಅದಕ್ಕೆ ಸೇರಿಸಿರಬಹುದೆಂದು ಯಾರೂ ಆಲೋಚಿಸದಂತೆ ಮಾಡುವುದಕ್ಕಾಗಿತ್ತು. ಅಲ್ಲದೆ ಮೇಲಿನವರೆಗೂ ನೀರನ್ನು ತುಂಬಿರುವುದರಿಂದ ಅದರಲ್ಲಿರುವ ಸ್ವಚ್ಛತೆ ಶುದ್ಧತೆಗಳನ್ನು ಸ್ಪಷ್ಟವಾಗಿ ಕಾಣಲು ಸಾಧ್ಯವಾಗುವದು.

ನೀರು ದ್ರಾಕ್ಷಾರಸವಾಗಿ ಮಾರ್ಪಾಡಾದುದು ತಕ್ಷಣವೇ ಎಂಬುದು ಸ್ಪಷ್ಟ; ಏಕೆಂದರೆ ನಮ್ಮ ಕರ್ತನು ಅವರಿಗೆ ಕೂಡಲೇ ದ್ರಾಕ್ಷಾರಸವನ್ನು ತೋಡಿಕೊಂಡು, ಈ ಹೊಸದಾಗಿ ದೊರಕಿಸಲಾಗಿರುವುದರ ಬಗ್ಗೆ ಅವನಿಗೆ ತಿಳಿದಿರಲು, ಮೊದಲು ಅದನ್ನು ಔತಣದ ಪಾರುಪತ್ಯಗಾರನಿಗೆ ಕೊಡಲು ಆದೇಶವಿತ್ತನು. ಆವನು (ಪಾರುಪತ್ಯಗಾರನು) ಆ ಹೊಸ ದ್ರಾಕ್ಷಾರಸದ ವಿಷಯವಾಗಿ ಅದು ಉತ್ತಮವಾದುದೆಂದು ಟೀಕೆಮಾಡಿ ಮದಲಿಂಗನಿಗೆ–ಕುಡಿಯುವವರು ಅದರ ಗುಣದ ಬಗ್ಗೆ ಕಂಡುಕೊಳ್ಳಲು ಬಹು ಉತ್ಸುಕರಾಗಿರುವಾಗ ಯಾವಾಗಲೂ ಮೊದಲು ಹಿರಿದಿನ ದ್ರಾಕ್ಷಾರಸವನ್ನು ಕೊಡುವರೆಂದು ಆಕ್ಷೇಪಿಸಿದನು. ಯೇಸುವು ಉಂಟುಮಾಡಿದ ದ್ರಾಕ್ಷಾರಸವು ಅತ್ಯುತ್ತಮವಾದ ಗುಣಮಟ್ಟದ್ದು ಎಂಬುದಕ್ಕೆ ಇದು ಸಾಕ್ಷಿಯಾಗಿತ್ತು. ಸಾಧಾರಣವಾದ ಒಂದು ಔತಣಕೂಟದಲ್ಲಿ ಸರಳವಾದ ದ್ರಾಕ್ಷೇಹಣ್ಣಿನ ರಸವನ್ನು ಅತ್ಯುತ್ತಮ ದ್ರಾಕ್ಷಾರಸವೆಂದು ಪರಿಗಣಿಸಲಾಗುವುದೆಂದು ನಾವು ಯೋಚಿಸುವದಕ್ಕಾಗದು; ಇಲ್ಲದಿದ್ದಲ್ಲಿ ಯೇಸುವು ಉಂಟುಮಾಡಿದ ದ್ರಾಕ್ಷಾರಸದಲ್ಲಿ ಮದ್ಯದ ಪರಿಮಾಣವು ಅದನ್ನು ಉಪಯೋಗಿಸುವವರಿಗೆ ಹಾನಿಮಾಡುವ ಮಟ್ಟದಲ್ಲಿತ್ತೆಂದು ನಾವು ಊಹಿಸುವ ಅಗತ್ಯವಿಲ್ಲ.

ಆ ಬಾನೆಗಳಲ್ಲಿ ಕಂಟದ ಮಟ್ಟಿಗೆ ಶುದ್ಧವಾದ ನೀರು ತುಂಬಲ್ಪಟ್ಟಿದ್ದಕ್ಕೆ ಬೇರೊಂದು ಕಾರಣವಿತ್ತು; ಏನೆಂದರೆ ಅದು ಸಾಂಕೇತಿಕವಾಗಿ ಈಗಿನ ಕಾಲದಲ್ಲಿರುವ ಕರ್ತನ ಜನರನ್ನು ಸೂಚಿಸುತ್ತಿತ್ತು. ನೀರು ಸತ್ಯವೇದದಲ್ಲಿ ಜೀವಕ್ಕೆ ಸಂಕೇತವಾಗಿ, ಅಂದರೆ ಜೀವಜಲವೆಂದು, ಉಪಯೋಗಿಲ್ಪಟ್ಟಿರುವುದು. ಅದು ಸ್ವಾಭಾವಿಕವಾದ ಮನುಷ್ಯ ಜೀವಿತಕ್ಕೆ ನಿರ್ದಿಷ್ಟವಾದ ಸೂಚನೆಯಾಗಿ ಅಥವಾ ನಿದರ್ಶನವಾಗಿರುವುದು. ದೃಷ್ಟಾಂತವಾಗಿ ಹೇಳುವುದಾದರೆ ಪ್ರಕಟಣೆ 22:17ರಲ್ಲಿ ಆತ್ಮನು ಮತ್ತು ಮದಲಗಿತ್ತಿಯು ಆ ಸಾವಿರ ವರುಷದ ಆಳ್ವಿಕೆಯಲ್ಲಿ ಲೋಕದ ಜನರಿಗೆ, "ಬನ್ನಿರಿ, ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಿ" ಎಂದು ಹೇಳಿರುವುದರಲ್ಲಿ ಇದನ್ನು ಸೂಚಿಸಲಾಗಿರುವುದು. ಇದು (ಕೆಟ್ಟುಹೋಗಿರುವ ಸಮಸ್ತವನ್ನು) ಸರಿಮಾಡುವ ಕಾರ್ಯವನ್ನು, ಮನುಷ್ಯ ಸಂತತಿಯನ್ನು ಮರಣದ ಅಧಿಕಾರದಿಂದ ಬಿಡಿಸಿ ಪುನರುದ್ಧಾರ ಮಾಡುವುದಕ್ಕೆ, ಅವರಲ್ಲಿ ಜೀವ ತುಂಬಿ ಅದನ್ನು ಅವರ ಪುನರ್ವಶಕ್ಕೆ ತರುವುದನ್ನು ಸೂಚಿಸುವುದು.

## ಮಣ್ಣಿನ ಘಟಗಳಲ್ಲಿರುವ ನಮ್ಮ ನಿಕ್ಷೇಪಗಳು

ಆ ಮಣ್ಣಿನ ಮಡಕೆಗಳಲ್ಲಿ ನೀರು ಗಣನೀಯವಾಗಿ ಬರಿದಾಗುತ್ತಾ ಬಂದು, ಪ್ರತಿಯೊಂದು ಮಡಕೆಗಳಲ್ಲಿಯೂ ಸ್ವಲ್ಪ ಮಾತ್ರವೇ ಉಳಿದಿತ್ತು. ಹಾಗೆಯೇ ನಮ್ಮಲ್ಲಿಯೂ ಸಹ ಮಾನವ ಕುಲದ ಸದಸ್ಯರಾಗಿ (ಪರಿಪೂರ್ಣತೆಯಿಂದ) ಬಿದ್ದುಹೋಗಿರುವ ಕಾರಣದಿಂದ ಜೀವ ಚೈತನ್ಯಗಳು ಬಹುಮಟ್ಟಿಗೆ ಬರಿದಾಗುತ್ತಾ ಬಂದಿವೆ. ಯೆಹೂದ್ಯರು ಛಾಯಾರೂಪವಾದ ಆಜ್ಞೆಯ ಸಂಬಂಧದ ಒಡಂಬಡಿಕೆಯ ಮೂಲಕವಾಗಿ ದೇವಾನುಗ್ರಹ ಹೊಂದಿದ ಜನರಾಗಿ ಕೆಲವು ಮಟ್ಟಿಗೆ ನೀತಿ ನಿರ್ಣಯ ಹೊಂದಿದವರಾದರೂ ಆ ಪದದ ಪೂರ್ಣವಾದ ಅರ್ಥದಲ್ಲಿ ಜೀವದ ಹಕ್ಕಿಗೆ ಯೋಗ್ಯರಾಗಲಿಲ್ಲ. ಹೀಗೆ ನೀರಿನ ಪಾತ್ರೆಗಳಲ್ಲಿ ಕಂಟದ ಮಟ್ಟಿಗೆ ತುಂಬುವುದು ಪೂರ್ಣವಾದ ರೀತಿಯಲ್ಲಿ ಜೀವದ ಹಕ್ಕಿಗೆ ಯೋಗ್ಯರಾಗುವುದರ ನಿದರ್ಶನವಾಗಿ ಅಥವಾ ಮುನ್ಸೂಚನೆಗಾಗಿರುವುದು. ಕರ್ತನ ಹಿಂಬಾಲಕರಾಗುವವರಿಗೆ ಇದು ಮಾನವ ಜೀವದ ಹಕ್ಕುಬಾಧ್ಯತೆಗಳೆಲ್ಲವನ್ನು ಹೊಂದಿದವರಾಗಿ ಎಣಿಸಲ್ಪಡುವುದನ್ನು ಸೂಚಿಸುವುದು. ಅಪೋಸ್ತಲನು ಇದನ್ನು ವ್ಯಕ್ತಪಡಿಸಿ ಹೇಳಿರುವುದು–"ನಂಬಿಕೆಯ ಮೂಲಕ ನೀತಿವಂತರಾಗಿರಲಾಗಿ ದೇವರೊಂದಿಗೆ ಉಂಟಾದ ಸಮಾಧಾನಕ್ಕೆ ಸೇರೋಣ."

ಅಲ್ಲದೆ ಈ ಸಾಂಕೇತಿಕ ವರ್ಣನೆಯು ಅಥವಾ ನಿದರ್ಶನವು ಮುಂದುವರಿದು ನೀತಿವಂತರೆಂದು ನಿರ್ಣಯ ಹೊಂದಿದವರ ಜೀವಿತಗಳು ಮಾರ್ಪಾಡಾಗುವುದನ್ನು ಅಂದರೆ ಅದ್ಭುತವಾದ ರೀತಿಯಲ್ಲಿ ಬದಲಾವಣೆ ಹೊಂದಿ ನೂತನ ಸ್ವಭಾವದಲ್ಲಿ ಪಾಲುಗಾರರಾಗುವುದನ್ನು ನಮಗೆ ತೋರಿಸುವುದು. ನಮ್ಮ ಮನಸ್ಸುಗಳನ್ನು ನವೀಕರಿಸಿಕೊಳ್ಳುವುದರ ಮೂಲಕ ನಾವು ಮಾರ್ಪಾಟು ಹೊಂದಿ ನೂತನ ಸೃಷ್ಟಿಗಳಾಗುವೆವೆಂದು ಅಪೋಸ್ತಲನು ಹೇಳಿರುವದರಲ್ಲಿ ಈ ಆಂಶವು ವ್ಯಕ್ತವಾಗಿದೆ.

ಆದುದರಿಂದ ನೀರು ಧ್ರಾಕ್ಷಾರಸವಾಗಿ ಬದಲಾದುದು ನೀತಿನಿರ್ಣಯ ಹೊಂದಿದವರು ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಾಗಿ

ರಚಿತಗೊಳ್ಳುವದನ್ನು ಸೂಚಿಸುವುದು. ನೀರು ನೀತಿವಂತರೆಂದು ನಿರ್ಣಯಹೊಂದುವುದನ್ನು ಸೂಚಿಸುವ ರೀತಿಯಲ್ಲಿ ದ್ರಾಕ್ಷಾರಸವು ನಂಬಿಕೆಯ ಮತ್ತು ಪೂರ್ಣ ಪ್ರತಿಷ್ಠೆಯ ಮೂಲಕ ಪವಿತ್ರಾತ್ಮನಿಂದ ಅಂಕುರಿಸಲ್ಪಟ್ಟವರಾಗಿ ಆತ್ಮೀಕ ಕುಟುಂಬ ವರ್ಗಕ್ಕೆ ಸೇರಿ ಪವಿತ್ರಾತ್ಮನಿಂದಾಗುವ ಶ್ರೇಷ್ಠ ಆನಂದವನ್ನು ಅನುಗ್ರಹಿಸಲ್ಪಟ್ಟವರಿಗೆ ಸೂಚಿತವಾಗಿರುವುದು. ಈಗ ದೊರೆತಿರುವ ಈ ಆನಂದಗಳು ಮುಂದೆ ಕಡೆಯದಾಗಿ ಹೊಂದಲಿರುವ ನಿಜವಾದ ಆನಂದಕ್ಕೆ ಸಮವಲ್ಲವೆಂಬುದು ಸತ್ಯ. ಅಪೋಸ್ತಲನು ಪ್ರಕಟಿಸಿ ಹೇಳಿರುವಂತೆ ಅವುಗಳು ನಮ್ಮ ಈ ಮಣ್ಣಿನ ಮಡಕೆಗಳಲ್ಲಿ ಈಗ ನಿರೀಕ್ಷಿಸಿ ಎದುರು ನೋಡುತ್ತಿರುವ (ಮುಂದಿನ ಕಾಲದ) ಆನಂದಗಳು. ಹೇಗೂ ಕರ್ತನ ವಾಗ್ದಾನುಸಾರವಾಗಿ ಆತನಿಗಾದ ಪುನರುತ್ಥಾನದಲ್ಲಿ ಪಾಲನ್ನು ಹೊಂದುವ ಮೂಲಕ ನಮಗೆ ನೂತನವಾದ ಮಡಕೆಗಳು ಅಂದರೆ ಚಿನ್ನದ ಮಡಕೆಗಳು ಕೊಡಲ್ಪಡುವವು. ಆ ಪರಿಪೂರ್ಣತೆಯ ಸ್ಥಿತಿಯಲ್ಲಿರುವಾಗ ನಮಲ್ಲಿರುವ ಆನಂದ ಅನುಗ್ರಹಗಳು ನಮಗೆ ಗ್ರಹಿಕೆಯಾಗಿ ಅದರ ಪೂರ್ಣಾನುಭವ ಉಂಟಾಗುವದು. ನಮ್ಮ ಕರ್ತನು ಕಡೆಯ ಭೋಜನದಲ್ಲಿ ಪ್ರಕಟಮಾಡಿ ಹೇಳಿದ ಸಂಗತಿಯಲ್ಲಿ ಇದರ ಒಂದು ಸುಳಿವು ಇರುವುದು; ಅದೇನೆಂದರೆ ಯಾರು ಈಗ ಆತನ ಶ್ರಮಸಂಕಟ ಮತ್ತು ಸ್ವಾರ್ಥತ್ಯಾಗಳನ್ನು ಸೂಚಿಸುವ ಪಾತ್ರೆಯಲ್ಲಿ ಕುಡಿಯುವವರೋ ಅವರು ಮುಂದೆ ದೈವಸ್ವಭಾವ ಮತ್ತು ಜೀವ ಹಾಗೂ ಆ ರಾಜ್ಯದಲ್ಲಿನ ಆನಂದಗಳನ್ನು ಸೂಚಿಸುವ ಹೊಸ ದ್ರಾಕ್ಷಾರಸದಲ್ಲಿ ಆತನೊಡನೆ ಪಾಲನ್ನು ಹೊಂದುವರು.

ದ್ರಾಕ್ಷಾರಸದ ವಿಷಯದಲ್ಲಿರುವ ಆತ್ಮಿಕ ಮಹತ್ವಗಳ ಗ್ರಹಿಕೆಯು ಈ ನಮ್ಮ ಪಾಠದ ಕಡೆಯ ವಾಕ್ಯದಲ್ಲಿ ಹೇಳಿರುವುದಕ್ಕೆ ಪೂರ್ಣ ಹೊಂದಾಣಿಕೆಯಾಗಿರುವುದು. ಅದು ನಮಗೆ ಖಚಿತಪಡಿಸುವುದೇನೆಂದರೆ, ನಮ್ಮ ಕರ್ತನ ಅದ್ಭುತ ಕಾರ್ಯ ಮುಂತಾದವುಗಳಲ್ಲಿ ಮುಂದೆ ಬರುವ ಆತನ ಪ್ರಭಾವಮಹಿಮೆ ಮತ್ತು ಆತನು ತನ್ನಲ್ಲಿ ನಂಬಿಗಸ್ತರಾದವರಿಗೆ ದಯಪಾಲಿಸಲಿರುವ ಆಶೀರ್ವಾದಗಳನ್ನು ಮುಂದಾಗಿ ತೋರ್ಪಡಿಸಲಾಗಿರುವುದು.

"ಅತ್ಯುತ್ತಮವಾದುದು ಮುಂದೆ ಬರಲಿದೆ, ಜೀವಿತದಲ್ಲಿ ಕಡೆಯದಾಗಿ ದೊರೆಯಲಿರುವ ಆ ಅತ್ಯುತ್ತಮವಾದುದಕ್ಕೆ ಮೊಟ್ಟ ಮೊದಲನೆಯದಾಗಿ ಯೋಜನೆ ಹಾಕಲಾಗಿತ್ತು."

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ. ಶ. 30, ಪಸ್ಕಹಬ್ಬ | ಯೆರೂಸಲೇಮ್ | ಪಸ್ಕಹಬ್ಬದ ಆಚರಣೆ, ದೇವಾಲಯದಲ್ಲಿ ಮಾರುವವರನ್ನು ಹೊರದೂಡಿದುದು | -- | -- | -- | 2:13–35 |

# ಯೋಹಾನ 2:13–35

ಆಗ ಯೆಹೂದ್ಯರ ಪಸ್ಕಹಬ್ಬವು ಹತ್ತರ ಬಂದದರಿಂದ ಯೇಸು ಯೆರೂಸಲೇಮಿಗೆ ಹೋದನು. ಅಲ್ಲಿ ದೇವಾಲಯ ದೊಳಗೆ ದನ ಕುರಿ ಪಾರಿವಾಳ ಮಾರುವವರನ್ನೂ ಕೂತಿರುವ ಚಿನಿವಾರರನ್ನೂ ಕಂಡು ಹಗ್ಗದಿಂದ ಕೊರಡೆ ಮಾಡಿ ಅದರಿಂದ ಕುರಿ ದನ ಸಹಿತ ಎಲ್ಲರನ್ನು ದೇವಾಲಯದ ಹೊರಕ್ಕೆ ಅಟ್ಟಿ ಚಿನಿವಾರರ ರೊಕ್ಕವನ್ನು ಚೆಲ್ಲಿ ಮೇಜುಗಳನ್ನು ಕೆಡವಿದನು. ಪಾರಿವಾಳ ಮಾರುವವರಿಗೆ–ಇವುಗಳನ್ನು ಇಲ್ಲಿಂದ ತಕ್ಕೊಂಡು ಹೋಗಿರಿ; ನನ್ನ ತಂದೆಯ ಮನೆಯನ್ನು ಸಂತೆ ಮಾಡಬೇಡಿರಿ ಎಂದು ಹೇಳಿದನು. ಆಗ––ನಿನ್ನ ಆಲಯಾಭಿಮಾನವು ಬೆಂಕಿಯಂತೆ ನನ್ನನ್ನು ದಹಿಸುತ್ತದೆ ಎಂದು ಬರೆದ ಮಾತು ಶಿಷ್ಯರ ನೆನಪಿಗೆ ಬಂತು. ಯೆಹೂದ್ಯರು ಆತನನ್ನು––ನಿನಗೆ ಇದನ್ನೆಲ್ಲಾ ಮಾಡುವ ಅಧಿಕಾರ ಉಂಟೆಂಬುದಕ್ಕೆ ಏನು ಸೂಚಕ ಕಾರ್ಯವನ್ನು ತೋರಿಸುತ್ತೀ? ಎಂದು ಕೇಳಿದಕ್ಕೆ ಯೇಸು–ಈ ದೇವಾಲಯವನ್ನು ಕೆಡವಿರಿ; ನಾನು ಮೂರು ದಿನದಲ್ಲಿ ಅದನ್ನು ಎಬ್ಬಿಸುವೆನು ಅಂದನು. ಅದಕ್ಕೆ ಯೆಹೂದ್ಯರು–ಈ ದೇವಾಲಯವನ್ನು ಕಟ್ಟುವದಕ್ಕೆ ನಲವತ್ತಾರು ವರುಷ ಹಿಡಿಯಿತು; ನೀನು ಮೂರು ದಿನದಲ್ಲಿ ಅದನ್ನು ಎಬ್ಬಿಸುವಿಯೋ? ಅಂದರು. ಆದರೆ ಆತನು ತನ್ನ ದೇಹವೆಂಬ ದೇವಾಲಯದ ವಿಷಯವಾಗಿ ಆ ಮಾತನ್ನು ಹೇಳಿದ್ದನು. ಆದದರಿಂದ ಆತನು ಸತ್ತು ಬದುಕಿ ಎದ್ದ ಮೇಲೆ ಈ ಮಾತು ಆತನ ಶಿಷ್ಯರ ನೆನಪಿಗೆ ಬಂದು ಶಾಸ್ತ್ರದಲ್ಲಿ ಬರೆದದ್ದನ್ನೂ ಆತನ ಮಾತನ್ನೂ ಅವರು ನಂಬುವ ವರಾದರು. ಆತನು ಪಸ್ಕಹಬ್ಬದ ಜಾತ್ರೆಯಲ್ಲಿ ಯೆರೂಸಲೇಮಿ ನೊಳಗೆ ಇದ್ದಾಗ ಬಹು ಜನರು ಆತನು ಮಾಡಿದ ಸೂಚಕ ಕಾರ್ಯಗಳನ್ನು ನೋಡಿ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರು. ಆದರೆ ಯೇಸು ಎಲ್ಲರನ್ನೂ ಬಲ್ಲವನಾದ್ದರಿಂದ ಅವರಿಗೆ ವಶವಾಗಲಿಲ್ಲ. ಆತನು ಪ್ರತಿ ಮನುಷ್ಯನ ಆಂತರ್ಯವನ್ನು ತಿಳಿದವನಾದ ಕಾರಣ ಯಾವನೂ ಯಾವ ಮನುಷ್ಯನ ವಿಷಯದಲ್ಲಿಯೂ ಅತನಿಗೆ ಸಾಕ್ಷಿಕೊಡಬೇಕಾದ ಅವಶ್ಯವಿರಲಿಲ್ಲ.

# ಯೇಸು ದೇವಾಲಯವನ್ನು ಶುದ್ಧಿಮಾಡಿದುದು

**ರೀಪ್ರಿಂಟ್ ಪುಟ 1695**

## ಯೋಹಾನ 2:13–25

**"ನನ್ನ ತಂದೆಯ ಮನೆಯನ್ನು ಸಂತೆ ಮಾಡಬೇಡಿರಿ"**

ನಮ್ಮ ಕರ್ತನ ಈ ಕಾರ್ಯಸಂಬಂಧವಾಗಿ ಬೇರೆ ಸೌವಾರ್ತಿಕರು ನೀಡಿರುವ ಹಲವು ವಿವರಣೆಗಳು ಆತನ ಸೇವಾವಧಿಯ ಕಡೆಯ ಭಾಗದ ಹತ್ತಿರಕ್ಕೆ ಇದನ್ನು ತಪ್ಪಿಲ್ಲದ ರೀತಿಯಲ್ಲಿ ಸೇರಿಸಿರುವುದಾದರೂ ಯೋಹಾನನು ಇದನ್ನು ಆತನ ಸಾರ್ವಜನಿಕ ಸೇವೆಯ ಆರಂಭದಲ್ಲಿ ನಡೆದ ಸಂಗತಿಯನ್ನಾಗಿ ತಿಳಿಸಿರುವನು. ಹೀಗಿದ್ದರೂ ಎಲ್ಲರೂ ಉಲ್ಲೇಖಿಸಿರುವ ಈ ಒಂದು ಘಟನೆಯನ್ನು ಯೋಹಾನನ ಕಡೆಯ ಮಾತುಗಳು, ಇತರ ಎಲ್ಲರಂತೆ, ಆತನ ಜೀವವನ್ನು ತೆಗೆಯಲು ಬಯಸಿದ ಹಲವಾರು ವಿರೋಧಿಗಳ ದ್ವೇಷಮನೋಭಾವವನ್ನು ತೋರಿಸಿರುವಂತೆ ಕಾಣುತ್ತದೆ. ಅವರ ಈ ಮನೋಭಾವವು ಆತನ ಸೇವೆಯ ಆರಂಭದಲ್ಲಿ ತೋರಿಬಂದಿರಲಿಲ್ಲ.

ಯೇಸುವಿನ ಈ ಅಧಿಕಾರಯುತವಾದ ಕಾರ್ಯವು ಆತನ ಸೇವಾವಧಿಯ ಕಡೆಯ ಭಾಗಕ್ಕೆ ಒಂದು ಛಾಯಾ ರೂಪದಲ್ಲಿ ವಿಶೇಷವಾಗಿಹೊಂದಿಕೆಯಾಗುತ್ತದೆ. "ನೋಡು, ನಿನ್ನ ಅರಸನು ನಿನ್ನ ಬಳಿಗೆ ಬರುತ್ತಾನೆ;" (ಜೆಕರ್ಯ 9:9) ಎಂಬ ಪ್ರವಾದನೆಯು ನೆರವೇರುವಂತೆ ಆತನು ಜಯೋತ್ಸವದೊಡನೆ ಯೆರೂಸಲೇಮಿಗೆ ಸೇರಿದ ಕೂಡಲೇ ಈ ಕಾರ್ಯವು ನಡೆಯಿತು. ದೇವಾಲಯದಲ್ಲಿ ನಡೆದ ಈ ಕಾರ್ಯವು ಆತನು ಇಸ್ರಾಯೇಲಿನ ಅರಸನಾಗಿ ಅಧಿಕಾರವನ್ನು ತೆಗೆದುಕೊಂಡ ನಂತರದಲ್ಲಿ ತನ್ನ ಅರಸುತನದ ಹಕ್ಕುಸಾಧಿಸಲು ಮಾಡಿದ ಒಂದು ಕಾರ್ಯವಿಧಾನವಾಗಿದ್ದರೂ ಯೆಹೂದ್ಯರು ಇದನ್ನು ನಿರಾಕರಿಸಿದರು. "ಆತನು ತನ್ನ ಸ್ವಾಸ್ಥ್ಯಕ್ಕೆ ಬಂದನು; ಆದರೆ ಸ್ವಂತಜನರು ಆತನನ್ನು ಅಂಗೀಕರಿಸಲಿಲ್ಲ" (ಯೋಹಾನ 1:12) ಹೀಗೆ ಅವರು ದೇವರ ಅನುಗ್ರಹವನ್ನು ತಳ್ಳಿಬಿಟ್ಟು ತಮ್ಮನ್ನು ಅದಕ್ಕೆ ಅಯೋಗ್ಯರೆಂಬುದನ್ನು ಪ್ರಮಾಣಮಾಡಿ ತೋರಿಸಿದಾಗ ಆತನು ಇದನ್ನು ಕಂಡು ತನ್ನ ಹೆಸರಿಗಾಗಿ ಒಂದು ಜನವನ್ನು ಆರಿಸಿಕೊಳ್ಳಲು ಆತನು ಅನ್ಯಜನರ ಕಡೆಗೆ ತಿರುಗಿಕೊಂಡನು. ಈ ಒಂದು ಆಯ್ಕೆಗೆ ಸುವಾರ್ತಾಯುಗದ ಹದಿನೆಂಟು ಶತಮಾನಗಳು ಅವಶ್ಯವಾದವು. ಅಲ್ಲದೆ ಶಾರೀರಿಕವಾದ ಈ ಇಸ್ರಾಯೇಲ್ಯರ ಮನೆತನ ಹಾಗೂ ಆತ್ಮಸಂಬಂಧವಾದ ಮನೆತನವಾದ ಸುವಾರ್ತಾಯುಗದ ಕ್ರೈಸ್ತಸಭೆ ಇವೆರಡೂ ತಮ್ಮ ಕಾಲ ಮತ್ತು ಸನ್ನಿವೇಶಗಳಿಗೆ ತಕ್ಕಂತೆ ಒಂದಕ್ಕೊಂದು ಛಾಯಾರೂಪದಲ್ಲಿನ ಮತ್ತು ನಿಜರೂಪದಲ್ಲಿನ ಸಂಬಂಧಗಳನ್ನು ಹೊಂದಿರುವುದು. ತನ್ನ ಶಿಲುಬೆಯ ಮರಣಕ್ಕೆ ಸ್ವಲ್ಪ ಸಮಯದ ಮುಂಚೆ ನಡೆದ ಒಂದು ಘಟನೆಯಾಗಿ ಈ ಆಲಯದ ಶುದ್ಧೀಕರಣಕ್ಕೆ ನಿಜರೂಪವಾಗಿ, ಇದಕ್ಕೆ ಸರಿ ಹೊಂದುವ ದಿನಾಂಕವಾದ 1878 ರಿಂದ ಪ್ರಾರಂಭವಾಗಿರುವ, ಇದೇ ರೀತಿಯ ಕೆಲಸವು ಇಲ್ಲಿ ನಡೆಯುತ್ತಿರುವುದಾಗಿ ಕಂಡುಬಂದಿರುವುದು. (ಸತ್ಯವೇದಾಧ್ಯಯನ ಪಾಠಮಾಲೆಯ ಎರಡನೇ ಗ್ರಂಥದ ಪುಟ 239 ನೋಡಿ) ಅಂದರೆ (ತನ್ನ ದೇಹವಾಗಿರುವ ಪ್ರತಿಷ್ಠಿತರಾದ ಸಭೆಯು ಆತ್ಮಿಕವಾದ ದೇವಾಲಯದಲ್ಲಿ) ಯಾರು ತನ್ನ ದೇಹದ ಅಂಗಗಳಾಗಿರಲು ಯೋಗ್ಯರಾಗಿಲ್ಲವೋ ಅವರನ್ನು ಹೊರಹಾಕುತ್ತಿರುವುದು. ಹೀಗಿರುವಲ್ಲಿ ಹೃದಯದಲ್ಲಿ ಶುದ್ಧರಾಗಿ ಯೋಗ್ಯರೆನಿಸಿಕೊಂಡವರನ್ನು ಅದಕ್ಕನುಗುಣವಾಗಿ ಆಶೀರ್ವಾದ ಹೊಂದುತ್ತಿರುವರು.

ಸಣ್ಣ ಹಗ್ಗಗಳಿಂದ ಮಾಡಿದ ಕೊರಡೆಯು ಒಂದಕ್ಕೊಂದು ಹೊಂದಾಣಿಕೆಯಾಗಿರುವ ಕ್ರಿಸ್ತನ ಬೋಧನೆಗಳಿಗೆ ಒಂದು ಸೂಕ್ತವಾದ ಸಂಕೇತವಾಗಿರುವುದು. ಅದು ಈಗ ಶುದ್ಧೀಕರಣ ಕಾರ್ಯವನ್ನು ನೆರವೇರಿಸುತ್ತಿರುವುದು.

ಯಾವ ಅಧಿಕಾರದಿಂದ ಇದನ್ನು ಮಾಡುತ್ತಿರುವಿ ಎಂಬುದಕ್ಕೆ ಒಂದು ಸೂಚಕ ಕಾರ್ಯವನ್ನು ತೋರಿಸಲು ಕೇಳಿದಾಗ ಯೇಸುವು ಮುಂದೆ ತನ್ನ ಮರಣ ಪುನರುತ್ಥಾನದ ನಂತರ ತನಗೆ ದೊರೆಯಲಿರುವ ಅಧಿಕಾರವನ್ನು ಸೂಚಿಸಿ ಹೇಳಿದನು. (ವಾಕ್ಯ 18–21) ಕೇವಲ ಛಾಯಾರೂಪದಲ್ಲಿ ಮಾಡಿದ ಈ ಕಾರ್ಯವನ್ನು ನಿಜರೂಪದಲ್ಲಿ ಆರಂಭಿಸಲು ಆಗ ತನಗೆ ಅಧಿಕಾರವಿಲ್ಲದೇ ಹೋಗಿದ್ದಲ್ಲಿ ಅದು ನಮ್ಮ ಪ್ರಯೋಜನಕ್ಕಾಗಿಯೇ ಹೊರತು ಅವರಿಗಲ್ಲವಾಗುತ್ತಿತ್ತು.

ವಚನ 23 ರಿಂದ 25 ವರೆಗಿರುವುದು (ಡಯಾಗ್ಲಟ್ ಭಾಷಾಂತರದ ಪ್ರಕಾರ) ಹೀಗಿರುವುದು: ಜನರು ಆ ಸಮಯದಲ್ಲಿ ಆತನು ಮಾಡಿದ ಅದ್ಭುತಕಾರ್ಯದಿಂದ ಬಹುವಾಗಿ ಪ್ರಭಾವಿತರಾದಂತೆ ಕಾಣಬಂದು ಆತನೆದುರಿನಲ್ಲಿ ಹೊಸಾನ್ನ ಎಂದು ಕೂಗುತ್ತಾ ಆತನ್ನು ಮೆಸ್ಸೀಯನೆಂದು ಅಂಗೀಕರಿಸಿ ಆ ಕೂಡಲೆ ಆತನನ್ನು ಅರಸನೆಂದು ಘೋಷಿಸುವುದಕ್ಕೆ ಸಿದ್ಧರೆಂದು ತೋರಿಬಂದರೂ (ಮತ್ತಾಯ 21:9–11 ಸಹ ನೋಡಿ) ಯೇಸುವಿಗೆ ಅವರ ಮೇಲೆ ಭರವಸವಿರಲಿಲ್ಲ ಏಕೆಂದರೆ ಅವರ ಮನಸ್ಸಿನ ಚಂಚಲತೆಯು ಆತನಿಗೆ ತಿಳಿದಿತ್ತು; ಮತ್ತು ಎಲ್ಲರ ಆಂತರ್ಯವನ್ನು ತಿಳಿದುಕೊಳ್ಳುವ ವರವು ಆತನಲ್ಲಿದ್ದದರಿಂದ ಯಾವನೂ ಯಾವ ಮನುಷ್ಯನ ವಿಷಯದಲ್ಲಿಯೂ ಆತನಿಗೆ ಸಾಕ್ಷಿ ಕೊಡಬೇಕಾದ ಅವಶ್ಯವಿರಲಿಲ್ಲ. –– ಲೂಕ 20:41–47

"ನನ್ನ ತಂದೆಯ ಮನೆಯನ್ನು ಸಂತೆ ಮಾಡಬೇಡಿರಿ" ಎಂಬ ಈ ಸುವರ್ಣಮಯ ಪಠ್ಯಭಾಗವನ್ನು ನಿಜವಾದ ದೇವಾಲಯವಾದ ಆತನ (ಕ್ರಿಸ್ತನ) ಪ್ರತಿಷ್ಠಿತರ ಮನೆತನದವರೆಂದು ತಮ್ಮನ್ನು ತೋರ್ಪಡಿಸಿಕೊಳ್ಳುವವರೆಲ್ಲರೂ ಬಹು ಜಾಗರೂಕತೆಯಿಂದ ಪರಿಗಣನೆಗೆ ತೆಗೆದುಕೊಳ್ಳಬೇಕು. ದೇವಾಲಯವನ್ನು ಶೋಧಿಸಿ ಸ್ವಚ್ಛಗೊಳಿಸಿ ಪವಿತ್ರಗೊಳಿಸುತ್ತಿರುವ ಕಾಲದಲ್ಲಿ ದೇವರ ಪವಿತ್ರ ವಸ್ತುಗಳನ್ನು ಯಾವ ವಿಧದಲ್ಲಿಯಾದರೂ ಮಾರಾಟದ ಸರಕುಗಳನ್ನಾಗಿ ಮಾಡಿಕೊಳ್ಳುವವರನ್ನು ಅಲ್ಲಿ ಉಳಿದುಕೊಳ್ಳಲು ಬಿಡಲಾಗುವುದಿಲ್ಲ.

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ. ಶ. 30, ಪಸ್ಕಹಬ್ಬ | ಯೆರೂಸಲೇಮ್ | ನಿಕೊದೇಮನೊಡನೆ ಯೇಸುವಿನ ಸಂಭಾಷಣೆ | –– | –– | –– | 3:1–21 |

## ಯೋಹಾನ 3:1–21

ಫರಿಸಾಯರಲ್ಲಿ ಯೆಹೂದ್ಯರ ಹಿರೀಸಭೆಯವನಾದ ನಿಕೊದೇಮನೆಂಬ ಒಬ್ಬ ಮನುಷ್ಯನಿದ್ದನು. ಅವನು ರಾತ್ರಿಯಲ್ಲಿ ಯೇಸುವಿನ ಬಳಿಗೆ ಬಂದು ಆತನಿಗೆ–ಗುರುವೆ, ನೀನು ದೇವರ ಕಡೆಯಿಂದ ಬಂದ ಬೋಧಕನೆಂದು ಬಲ್ಲೆವು. ನೀನು ಮಾಡುವಂಥ ಈ ಸೂಚಕಕಾರ್ಯಗಳನ್ನು ದೇವರ ಸಹಾಯವಿಲ್ಲದೆ ಮಾಡುವದು ಯಾರಿಂದಲೂ ಆಗದು ಎಂದು ಹೇಳಿದನು. ಅದಕ್ಕೆ ಯೇಸು––ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು ಅಂದನು. ನಿಕೊದೇಮನು ಆತನನ್ನು–ಮನುಷ್ಯನು ಮುದುಕನಾದ ಮೇಲೆ ತಾಯಿಯ ಗರ್ಭದಲ್ಲಿ ತಿರಿಗಿ ಸೇರಿ ಹುಟ್ಟುವದಾದೀತೇ? ಎಂದು ಕೇಳಿದನು. ಅದಕ್ಕೆ ಯೇಸು––ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು. ದೇಹದಿಂದ ಹುಟ್ಟಿದ್ದು ದೇಹವೇ; ಆತ್ಮನಿಂದ ಹುಟ್ಟಿದ್ದು ಆತ್ಮವೇ. ನೀವು ಹೊಸದಾಗಿ ಹುಟ್ಟಬೇಕು ಎಂದು ನಾನು ನಿನಗೆ ಹೇಳಿದ್ದರಿಂದ ಆಶ್ಚರ್ಯಪಡಬೇಡ. ಗಾಳಿಯು ಮನಸ್ಸು ಬಂದ ಕಡೆ ಬೀಸುತ್ತದೆ; ಅದರ ಸಪ್ಪಳವನ್ನು ಕೇಳುತ್ತಿ; ಅದರೆ ಅದು ಎಲ್ಲಿಂದ ಬರುತ್ತದೋ ಎಲ್ಲಿಗೆ ಹೊಗುತ್ತದೊ ನಿನಗೆ ತಿಳಿಯದು; ಆತ್ಮನಿಂದ ಹುಟ್ಟಿದವರೆಲ್ಲರು ಅದರಂತೆಯೇ ಅಂದನು. ಅದಕ್ಕೆ ನಿಕೊದೇಮನು–ಇದು ಆಗುವದು ಹೇಗೆ? ಅಂದಾಗ ಯೇಸು ಅವನಿಗೆ ಹೇಳಿದ್ದೇನಂದರೆ–ಇಸ್ರಾಯೇಲ್ ಜನಕ್ಕೆ ಬೋಧಕನಾಗಿರುವ ನಿನಗೆ ಇದು ತಿಳಿಯುವದಿಲ್ಲವೋ? ನಿನಗೆ ನಿಜನಿಜವಾಗಿ ಹೇಳುತ್ತೇನೆ, ತಿಳಿದದ್ದನ್ನು ಹೇಳುತ್ತೇವೆ, ನೋಡಿದ್ದಕ್ಕೆ ಸಾಕ್ಷಿಕೊಡುತ್ತೇವೆ; ನೀವು ನಮ್ಮ ಸಾಕ್ಷಿಯನ್ನು ಒಪ್ಪುವದಿಲ್ಲ. ನಾನು ಭೂಲೋಕದಲ್ಲಿ ನಡೆಯುವ ಕಾರ್ಯವನ್ನು ಕುರಿತು ನಿಮಗೆ ಹೇಳುವಾಗ ನೀವು ನಂಬದೆಹೋದರೆ ಪರಲೋಕದ ಕಾರ್ಯಗಳನ್ನು ಕುರಿತು ಹೇಳಿದರೆ ಹೇಗೆ ನಂಬೀರಿ? ಪರಲೋಕದಿಂದ ಇಳಿದು ಬಂದವನೇ ಅಂದರೆ ಮನುಷ್ಯಕುಮಾರನೇ ಹೊರತು ಮತ್ತಾರೂ ಪರಲೊಕಕ್ಕೆ ಏರಿಹೋದವನಲ್ಲ. ಇದಲ್ಲದೆ (ಜನರು ನೋಡಿ ಜೀವದಿಂದು – ಳಿಯಬೇಕೆಂದು) ಮೋಶೆಯು ಅಡವಿಯಲ್ಲಿ ಆ ಸರ್ಪವನ್ನು ಎತ್ತರದಲ್ಲಿಟ್ಟ ಹಾಗೆಯೇ ಮನುಷ್ಯಕುಮಾರನು ತನ್ನನ್ನು ನಂಬುವವರೆಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಎತ್ತರದಲ್ಲಿಡಬೇಕು. ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು. ದೇವರು ತನ್ನ ಮಗನ ಮುಖಾಂತರ ಲೋಕಕ್ಕೆ ರಕ್ಷಣೆಯಾಗಬೇಕೆಂದು ಆತನನ್ನು ಕಳುಹಿಸಿಕೊಟ್ಟನೇ ಹೊರತು ತೀರ್ಪುಮಾಡುವದಕ್ಕಾಗಿ ಕಳುಹಿಸಲಿಲ್ಲ. ಆತನನ್ನು ನಂಬುವವನಿಗೆ ತೀರ್ಪು ಆಗುವುದಿಲ್ಲ; ಆದರೆ ನಂಬದವನಿಗೆ ದೇವರ ಒಬ್ಬನೇ ಮಗನ ಹೆಸರನ್ನು ನಂಬದೆ ಹೋದದರಿಂದ ಆಗಲೇ ತೀರ್ಪು ಆಗಿಹೋಯಿತು. ಆ ತೀರ್ಪು ಏನಂದರೆ––ಬೆಳಕು ಲೋಕಕ್ಕೆ ಬಂದಿದ್ದರೂ ಮನುಷ್ಯರ ಕೃತ್ಯಗಳು ಕೆಟ್ಟವುಗಳಾಗಿರುವದರಿಂದ ಅವರು ಬೆಳಕಿಗಿಂತ ಕತ್ತಲೆಯನ್ನೇ ಹೆಚ್ಚಾಗಿ ಪ್ರೀತಿಸಿದರು. ಕೆಟ್ಟದ್ದನ್ನು ಮಾಡುವವರು ಬೆಳಕನ್ನು ಸಹಿಸುವುದಿಲ್ಲ. ತಮ್ಮ ಕೃತ್ಯಗಳು ದುಷ್ಕೃತ್ಯಗಳಾಗಿ ತೋರಿಬಂದಾವೆಂದು ಬೆಳಕಿಗೆ ಬರುವದಿಲ್ಲ; ಆದರೆ ಸತ್ಯವನ್ನು ಅನುಸರಿಸಿ ನಡಯುವವನು ತಾನು ದೇವರಿಂದ ನಡಿಸಿಕೊಂಡು ತನ್ನ ಕೃತ್ಯಗಳನ್ನು ಮಾಡಿದ್ದೇನೆಂದು ತೋರಿಬರುವಂತೆ ಬೆಳಕಿಗೆ ಬರುತ್ತಾನೆ.

# ಹೊಸದಾಗಿ ಹುಟ್ಟುವುದು ಮತ್ತು ದೇವರರಾಜ್ಯ

## ಯೋಹಾನ 3:1–21

**"ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು."—ಯೋಹಾನ 3:16**

ಈ ಪಾಠವು ಕ್ರೈಸ್ತ ಸಮುದಾಯದಲ್ಲಿ ಸಾಮಾನ್ಯವಾಗಿ ಎಲ್ಲಾ ಕಡೆಯಲ್ಲೂ ಪ್ರಚಲಿತವಾಗಿರುವ ಸತ್ಯವೇದಾನುಸಾರವಲ್ಲದ ತಪ್ಪಾದ ಆಲೋಚನಾಪ್ರವೃತ್ತಿ ಹಾಗೂ ಸತ್ಯವೇದದ ತಪ್ಪಾದ ವ್ಯಾಖ್ಯಾನಗಳಿಗೆ ಒಳ್ಳೆಯ ನಿದರ್ಶನ ನೀಡುತ್ತದೆ. ಈ ವಿಷಯಗಳಿಗೆ ಸಂಬಂಧಿಸಿರುವ ಅಸಾಧಾರಣವಾದ ವಿಚಿತ್ರ ಸಂಗತಿಯೆಂದರೆ ಬೇರೆ ಎಲ್ಲಾ ವಿಷಯಗಳಲ್ಲಿ ಸ್ಪಷ್ಟವಾದ ವಿವೇಚನಾಸಾಮರ್ಥ್ಯವನ್ನು ತೋರುವ ಜನರು ದೇವರ ವಾಕ್ಯದ ಅಧ್ಯಯನದಲ್ಲಿ ತಮ್ಮ ಎಲ್ಲಾ ತರ್ಕವಿವೇಚನಾಶೀಲತೆಯನ್ನು ತ್ಯಜಿಸುವುದು. ಈ ಪಾಠದ ವಿಷಯದಲ್ಲಿ ಸಾಧಾರಣವಾಗಿ ನೀಡುವ ವ್ಯಾಖ್ಯಾನವೆಂದರೆ ಯೇಸುವು ನಿಕೊದೇಮನಿಗೆ ತಾನು

ಸ್ಥಾಪಿಸಲಿರುವ ಒಂದು ಸಭೆಯ ವಿಷಯವಾಗಿ ತಿಳಿಸಿ ಅದು ದೇವರ ರಾಜ್ಯವೆಂದು ಕರೆಯಲ್ಪಟ್ಟು ಅದಕ್ಕೆ ಈ ಲೋಕದ ಯಾವ ರಾಜ್ಯಗಳಿಗೂ ಹೋಲಿಕೆಯಿರುವುದಿಲ್ಲವೆಂದೂ ಇಲ್ಲವೇ ಯಾವ ಬಗೆಯ ಆಡಳಿತಗಳಿಗೂ ಇದು ಸಂಬಂಧಿಸಿರುವುದಿಲ್ಲವೆಂದು ಬೋಧಿಸಿದ್ದು. ಆತನ ಸಭೆಯನ್ನು ರಾಜ್ಯವೆಂದು ಪರಿಗಣಿಸ ಬೇಕಾಗುವದು. ಏಕೆಂದರೆ ಅದು ಕಾಲಕ್ರಮೇಣ ಭೂಲೋಕ ವನ್ನೆಲ್ಲಾ ವ್ಯಾಪಿಸಿಕೊಂಡು ಆ ಮೂಲಕವಾಗಿ ದೇವರ ಚಿತ್ತವು ಪರಲೋಕದಲ್ಲಿ ನೆರವೇರುವಂತೆ ಭೂಲೋಕದಲ್ಲಿಯೂ ನೆರವೇರುವುದು ಎಂಬುದನ್ನು ನಿಕೊದೇಮನು ಅರ್ಥಮಾಡಿ ಕೊಳ್ಳಬೇಕೆಂದು ನಮ್ಮ ಕರ್ತನು ಉದ್ದೇಶಿಸಿದ್ದನೆಂದು ಹೇಳಿಕೊಳ್ಳ ಲಾಗಿರುವುದು. ನಂತರದಲ್ಲಿ ಈ ವ್ಯಾಖ್ಯಾನವನ್ನು ಇನ್ನೂ ಹೆಚ್ಚು ಅಸಂಬದ್ಧವಾಗಿಸಲು ಅವರು ಈ ರಾಜ್ಯದ ಬಗ್ಗೆ ಗ್ರಹಿಸಲು ಕೇವಲ ಮೊದಲು ಪವಿತ್ರಾತ್ಮನಿಂದ ಹುಟ್ಟಿದವರಿಗೇ ಮಾತ್ರವೇ ಹೊರತು ಬೇರೆ ಯಾರಿಗೂ ಇದು ಸಾಧ್ಯವಿಲ್ಲವೆಂಬುದನ್ನು ನಮ್ಮ ಕರ್ತನು ಪ್ರಕಟಿಸಿರುವನೆಂದು ಒಪ್ಪಿಕೊಳ್ಳುವರು. ಈಗ ಇವೆಲ್ಲವುಗಳಲ್ಲಿರುವ ಅಸಂಬದ್ಧತೆಗಳನ್ನು ಗಮನಿಸಿ:

ಸುಮಾರು ಹತ್ತೊಂಬತ್ತು ಶತಮಾನಗಳ ನಂತರವೂ ಕೆಥೋಲಿಕರು ಮತ್ತು ಪ್ರೊಟೆಸ್ಟೆಂಟರ ಒಟ್ಟು ಸಂಖ್ಯೆಯು ಹೆಚ್ಚುಕಡಿಮೆ ನಾನೂರು ಮಿಲಿಯನ್. ಇದು ಕ್ರೈಸ್ತಸಮುದಾಯ ವೆಂದು ಅನುಚಿತವಾದ ಶೈಲಿಯಲ್ಲಿ ಕರೆಯಲಾಗಿದ್ದು, ಇದರಲ್ಲಿ ಗೆರೆಗೆರೆ ಮೈಯುಳ್ಳವರು, ಕಲೆಗಳ ಮೈಯುಳ್ಳವರು ಮತ್ತು ಕರಿವರ್ಣಿಯರು ಅಂದರೆ ನಾಗರಿಕ ಜಗತ್ತಿನ ಎಲ್ಲಾ ನಯವಿಲ್ಲದವರು ಪುಂಡರು ಒರಟುನಡೆಯವರು ಇದರಲ್ಲಿ ಸೇರಿರುವರು. ಮಾನವ ಸಂತತಿಯವರಲ್ಲಿ ಉಳಿದವರು ಅಂದರೆ ಸಾವಿರದ ಇನ್ನೂರು ಮಿಲಿಯನ್ ಜನರು ಕರ್ತನಾದ ಯೇಸುವಿನ ವಿಷಯವಾಗಿ ಎಂದೂ ಕೇಳಿರಲಾರರು ಇಲ್ಲವೇ ಕೇಳಿ ಆತನ್ನು ತಿರಸ್ಕರಿಸಿರುವವರು. ಅದುದರಿಂದ ಈ ದಿನಗಳಲ್ಲಿರುವ (ಕ್ರೈಸ್ತೇತರರಾದ) ಅನ್ಯಜನಗಳ ಸಂಖ್ಯೆಯು ಕರ್ತನು ನಿಕೊದೇಮನೊಡನೆ ಸಂಭಾಷಿಸಿದ ಕಾಲದಲ್ಲಿ ಪ್ರಪಂಚಲ್ಲಿ ಇದ್ದ ಪೂರ್ಣ ಜನಸಂಖ್ಯೆಗಿಂತಲೂ ಹಲವು ಪಟ್ಟು ಹೆಚ್ಚಾಗಿರುವುದು. ಈ ಲೋಕವು (ದೇವರ) ಆ ರಾಜ್ಯವೇ ಆದಲ್ಲಿ ಈ ಮಾತಿನ ಅರ್ಥದಲ್ಲಿ ಅದು ತನ್ನನ್ನು ತಾನು ಜಯಿಸುತ್ತಿರು ವುದೇ? ಖಂಡಿತವಾಗಿಯೂ ಇಲ್ಲ! ಆದರೆ ಈಗ ನಾವು ಕ್ರೈಸ್ತ ಸಮುದಾಯವೆಂದು ಕರೆಯಲ್ಪಡುವ ನಾನೂರು ಮಿಲಿಯನ್ ಜನರ ವಿಷಯವಾಗಿ ನೋಡಿ ಅವರ ಕ್ರೈಸ್ತನಟನಾವೃತ್ತಿಯನ್ನು ಹೊರತುಪಡಿಸಿ ಅವರು ಯಾರು ಮತ್ತು ನಿಜವಾಗಿಯು ಅವರು ಏನಾಗಿರುವರೆಂಬುದನ್ನು ನಮಗೆ ಸಾಧ್ಯವಾದಷ್ಟೂ ಉತ್ತಮ ರೀತಿಯಲ್ಲಿ ನಿರ್ಣಯಿಸೋಣ. ಅವರಲ್ಲಿ ಎಷ್ಟು ಮಂದಿ ಮೇಲಿನಿಂದ ಹುಟ್ಟಿದವರಾಗಿ ಪುನರ್ಜನ್ಮ ಪಡೆದು ಪವಿತ್ರಾತ್ಮನ ಮೂಲಕವಾಗಿ ನವೀಕರಿಸಿಕೊಂಡು ಹೊಸದಾಗಿ ಹುಟ್ಟಿರುವುದನ್ನು ಸ್ವಲ್ಪವಾದರೂ ತೋರ್ಪಡಿಸುವರು? ಕಾರ್ಯರೂಪದಲ್ಲಿ ಒಬ್ಬರೂ ಇರುವುದಿಲ್ಲ. ನಿಜವಾಗಿಯೂ ನಮ್ಮ ಕರ್ತನ ದಿನದಲ್ಲಿದ್ದಂತೆ ಅದು ಒಂದು **"ಚಿಕ್ಕ ಹಿಂಡು"** ಮಾತ್ರ.

ಈ ವಿಷಯದಲ್ಲಿ ಯಾವನಿಗಾದರೂ ಸಂದೇಹವಿದ್ದಲ್ಲಿ ಅವನು ತನ್ನ ಕ್ರೈಸ್ತ ಸ್ನೇಹಿತರಲ್ಲಿ ಹಾಗೂ ನೆರೆಹೊರೆಯವರಲ್ಲಿ ಹೊಸದಾಗಿ ಹುಟ್ಟುವ ಮತ್ತು ಪವಿತ್ರಾತ್ಮನ ಮೂಲಕವಾಗಿ ಅಂಕುರಿಸಲ್ಪಡುವ ವಿಷಯವಾಗಿ ವಿಚಾರಿಸಲಿ. ಅವನು ಪೂರ್ಣವಾದ ಪ್ರತಿಷ್ಠೆ, ತನ್ನ ಸಮಯ ಸಾಮರ್ಥ್ಯ ನಮ್ಮಲ್ಲಿರು ವುದೆಲ್ಲವನ್ನು ದೇವರಿಗೆ ಮತ್ತು ಆತನ ಸೇವೆಗೆ ಮುಡುಪಾಗಿ ಡುವುದು, ಹೊಸದಾಗಿ ಹುಟ್ಟುವಿಕೆ ಹಾಗೂ ಪವಿತ್ರಾತ್ಮನಿಂದಾದ ಅಭಿಷೇಕ ಇವುಗಳ ಮೂಲಕ ಉಂಟಾದ ಹೃದಯದ ಪರಿವರ್ತನೆ ಅಂದರೆ ಏನೆಂಬುದನ್ನು ಅವರಿಗೆ ವಿವರಿಸಿ, ಆನಂತರ ತನ್ನ ಸ್ನೇಹಿತರಲ್ಲಿ ನೆರೆಹೊರೆಯವರಲ್ಲಿ ಎಷ್ಟು ಮಂದಿ ಈ ರೀತಿಯಲ್ಲಿ ಪ್ರತಿಷ್ಠೆಮಾಡಿಕೊಂಡು ಪವಿತ್ರಾತ್ಮದಾನವನ್ನು ಹೊಂದಿರುವರೆಂದು ಅವರನ್ನು ಕೇಳಲಿ. ಅವನು ಈ ರೀತಿಯ ವಿಚಾರಣೆಯಲ್ಲಿ ಸ್ವಲ್ಪ ಮುಂದೆ ಸಾಗುವಷ್ಟರೊಳಗೇ ಅವರಲ್ಲಿ ದೇವರ ರಾಜ್ಯದ ವಿಷಯದ ಸಾಧಾರಣವಾದ ಅಭಿಪ್ರಾಯಗಳಲ್ಲಿ ದೊಡ್ಡ ತಪ್ಪುಗ್ರಹಿಕೆಗಳಿದ್ದು ಅವುಗಳು ಅಸಮರ್ಥನೀಯವೆಂಬುದನ್ನು ನಮ್ಮ ಕರ್ತನು ಹೇಳಿರುವ ಅರ್ಥದಲ್ಲಿರುವುದಿಲ್ಲವೆಂಬುದನ್ನು ಅವನು ಪೂರ್ಣವಾಗಿ ಮನವರಿಕೆ ಮಾಡಿಕೊಳ್ಳುವನು.

ಹೀಗೆ ಈ ಪಾಠಗಳ ವಿಷಯವಾದ ಸಾಮಾನ್ಯ ಗ್ರಹಿಕೆ ಯಲ್ಲಿ ಆಮೂಲಾಗ್ರವಾಗಿ ತಪ್ಪಿಹೋಗಿರುವುದನ್ನು ಮನದಟ್ಟು ಮಾಡಿಕೊಂಡು ನಾವು ಜಾಗರೂಕತೆಯಿಂದಲೂ ಪ್ರಾರ್ಥನಾ ಪೂರ್ವಕವಾಗಿಯೂ ಸ್ವಚ್ಛಂದವಾದ ಮನಸ್ಸಿನಿಂದಲೂ ಈ ನಮ್ಮ ಪಾಠದಲ್ಲಿನ ಪ್ರತಿಯೊಂದು ವಚನವನ್ನು ಗಮನಿಸೋಣ. ಹೀಗೆ ನಾವು ಸತ್ಯವನ್ನು ತಿಳುಕೊಂಡವರಾಗಿ ಆ ಸತ್ಯದ ಮೂಲಕವಾಗಿ ತಪ್ಪಾಭಿಪ್ರಾಯದಿಂದಲೂ ಮೂಢನಂಬಿಕೆಯಿಂದಲೂ ನಾವು ಬಿಡುಗಡೆ ಹೊಂದಿ ಆ ಮೂಲಕವಾಗಿ ಜ್ಞಾನಪ್ರಕಾಶ ಸಂತೋಷ ಮತ್ತು ಸಹಾಯಗಳನ್ನು ನಾವು ಹೊಂದುವಂತಾಗುವದು.

## ನಿಕೊದೇಮನು ಮತ್ತು ಆ ಶ್ರೇಷ್ಠ ಬೋಧಕನು

ಯೆಹೂದ್ಯರಲ್ಲಿ ಪ್ರಭಾವಶಾಲಿಯೂ ಸನ್‌ಹೆದ್ರೀನ್ ಸಭೆಯ ಸದಸ್ಯನೂ ಪವಿತ್ರತೆಯ ಪ್ರತಿಪಾದಕನು ಎಂದು ಎಲ್ಲೆಲ್ಲಿಯೂ ಪರಿಚಿತನಾದ ನಿಕೊದೇಮನೆಂಬುವನು ದೇವರಿಗೆ ಪ್ರತಿಷ್ಠಿತನಾದ ಒಬ್ಬ ಫರಿಸಾಯನಾಗಿದ್ದು ರಾತ್ರಿಯಲ್ಲಿ ಅವನು ಯೇಸುವಿನ ಬಳಿಗೆ ಬಂದನು. ಯೆಹೂದ್ಯರ ಭಯದಿಂದ ಆತನಿಗೆ ಹೀಗೆ ಮಾಡುವ ಅಗತ್ಯವಿರಲಿಲ್ಲ; ಅದು ತನ್ನ ಮತ್ತು ಇತರರ ಹಿತಾಸಕ್ತಿಗಳನ್ನು ವಿವೇಕಯುತವಾಗಿ ಪರಿಗಣನೆಗೆ ತೆಗೆದು ಕೊಂಡು ಹೀಗೆ ಮಾಡಲು ಜ್ಞಾನವು ಅತನನ್ನು ನಡೆಸಿರುವ ಸಂಭವವಿತ್ತು. ಗುರುವಿನೊಡನೆ ವೈಯುಕ್ತಿಕವಾಗಿ ಸಂವಾದ ಮಾಡಲು ರಾತ್ರಿಯಲ್ಲಿ ತನಗೆ ಉತ್ತಮವಾದ ಅವಕಾಶವಿರುವ ಕಾರಣ ಅವನು ಆಗ ಬಂದಿರುವ ಸಂಭವವಿತ್ತು. ಏನೇ ಸಂಗತಿಯಿರಲಿ ಅತನು ಬಹು ಭಯಭಕ್ತಿಯುಳ್ಳವನು ವಿನಯ ಶೀಲನು ಎಂದು ನಮಗೆ ಕಂಡುಬರುವುದು. ಅವನು ನಮ್ಮ ಕರ್ತನನ್ನು ರಬ್ಬೀ ಅಥವಾ ಬೋಧಕನೆಂದು ಸಂಭೋದಿಸಿ ಆತನು ದೇವರ ಕಡೆಯಿಂದ ಬಂದಿರುವ ಒಬ್ಬ ದೇವಸೇವಕನೆಂಬುದನ್ನೂ ಅತನು ಮಾಡುವ ಅದ್ಭುತಕಾರ್ಯಗಳಿಂದ ದೇವರು ಆತನಲ್ಲಿ

ಸಂತೋಷಿಸುವವನಾಗಿರುವುದು ಸ್ಪಷ್ಟವಾಗಿ ವ್ಯಕ್ತವಾಗಿದೆಯೆಂಬುದನ್ನು ತಾನು ನಂಬಿರುವುದಾಗಿ ಪ್ರಕಟಿಸಿದನು. ಆ ಸಂಜೆಯಲ್ಲಿ ನಡೆದ ಸಂಭಾಷಣೆಯ ಕೇವಲ ಸ್ವಲ್ಪ ಭಾಗ ಮಾತ್ರ ಕೊಡಲಾಗಿದೆ. ಯೋಹಾನನು ಮತ್ತು ಆತನ ಶಿಷ್ಯರು ನಂತರದಲ್ಲಿ ಯೇಸುವು ಮತ್ತು ಆತನ ಶಿಷ್ಯರು ಸಹ ಸಾರುತ್ತಿದ್ದುದಾಗಿ ತಾನು ತಿಳಿದ ಆ ದೇವರ ರಾಜ್ಯದ ವಿಷಯವಾಗಿ ಪ್ರಶ್ನೆಮಾಡಲು ನಿಕೊದೇಮನು ಬಂದನೆಂದು ನ್ಯಾಯವಾಗಿ ನಾವು ಊಹಿಸಿಕೊಳ್ಳಬಹುದು. ಆತನು ಸತ್ಯವೇದ ವಿದ್ಯಾರ್ಥಿಯಾಗಿ ಆ ರಾಜ್ಯವನ್ನು ಎದುರು ನೋಡಲು ಮತ್ತು ಇಸ್ರಾಯೇಲನ್ನು ಆಶೀರ್ವದಿಸಿ ಅವರನ್ನು ಉನ್ನತಸ್ಥಿತಿಗೆ ತರಲು ಇದು ದೇವರು ಮಾಡಿರುವ ಏರ್ಪಾಟಾಗಿದ್ದು ಕಡೆಯಲ್ಲಿ "ನಿನ್ನ ಸಂತತಿಯ ಮೂಲಕವಾಗಿ ಭೂಲೋಕದ ಎಲ್ಲಾ ಕುಲಗಳವರು ಆಶೀರ್ವದಿಸಲ್ಪಡುವರು" ಎಂಬ ದೇವರ ವಾಗ್ದಾನವು ನೆರವೇರುವುದನ್ನು ಎದುರು ನೋಡಲು ತಿಳಿದಿದ್ದನು. ಯೇಸುವಿನಲ್ಲಿ ಭರವಸೆಯುಳ್ಳವನಾಗಿ ತಾನು ಈ ರಾಜ್ಯದ ವಿಷಯದಲ್ಲಿ ವಿವರಗಳನ್ನು ಕಲಿತುಕೊಳ್ಳಲು ಆಶಿಸಿದ್ದನು. ಯಾಕೆಂದರೆ ಆ ರಾಜ್ಯವು ಹೇಗೆ ಉಂಟಾಗುವದು ಅದರ ಸೈನಿಕರನ್ನು ಹೇಗೆ ಕೂಡಿಸಲಾಗುವದು ಅವರ ತರಬೇತಿಕವಾಯಿತು ಮತ್ತು ಸೇನಾನಿರ್ವಹಣೆ ಹೇಗೆ ನಡೆಸಲಾಗುವುದು ಹಾಗು ಯುದ್ಧೋಪಕರಣಗಳು ಎಲ್ಲಿಂದ ಬರುವುದು ಅಲ್ಲದೆ ಒಂದು ಸೈನ್ಯವನ್ನು ಸಜ್ಜುಗೊಳಿಸಿ ಅದರ ಅಗತ್ಯತೆಗಳನ್ನು ಪೂರೈಸಲು ದೊಡ್ಡ ಮೊತ್ತದ ಹಣ ಬೇಕಾಗಿದ್ದು ಇವುಗಳಿಗೆ ಪುರಾವೆಗಳನ್ನು ಹಾಗೂ ಇವುಗಳ ಸೂಚನೆಯನ್ನು ಸ್ನಾನಿಕನಾದ ಯೋಹಾನನಾಗಲೀ ಇಲ್ಲವೇ ಯೇಸುವಾಗಲೀ ನೀಡಿರಲಿಲ್ಲ. ಇಂಥ ಒಂದು ಪ್ರಶ್ನೆಯು ಸೂಚಿತವಾಗಿರುವುದು ನಮ್ಮ ಕರ್ತನ ಈ ಹೇಳಿಕೆಯಲ್ಲಿ: "ನಿನಗೆ ನಿಜನಿಜವಾಗಿ ಹೇಳುತ್ತೇನೆ ಒಬ್ಬನು (ಮತ್ತೆ) ಹೊಸದಾಗಿ ಹುಟ್ಟದಿದ್ದರೆ ದೇವರ ರಾಜ್ಯವನ್ನು ಕಾಣಲಾರನು."

ನಿಕೊದೇಮನಿಗಿದ್ದ ಗೊಂದಲಗಳನ್ನು ನಾವು ಊಹಿಸಿ ಕೊಳ್ಳಲು ಸಾದ್ಯ; ಅವನು ಹಿಂದಿದ್ದ ಯಾವ ಅರಸನಿಗಿಂತಲೂ ಬಹು ಪ್ರಭಾವವುಳ್ಳ ಒಬ್ಬ ಅರಸನನ್ನು ಮತ್ತು ಒಂದು ವೈಭವ ಯುತವಾದ ಪರಿವಾರದವರನ್ನು ಆತನು ಎದುರು ನೋಡುತ್ತಿದ್ದನು; ಕಾರಣ ಬರಲಿದ್ದ ಅರಸನಾದ ಮೆಸ್ಸೀಯನು ಮನುಷ್ಯರ ಮೇಲೆ ಪರಲೋಕದಿಂದ ಕೊಡಲ್ಪಡುವ ಅಧಿಕಾರ ಸಾಮರ್ಥ್ಯಗಳನ್ನು ಪ್ರತಿನಿಧಿಸುವನಾಗಿದ್ದನು. ಒಬ್ಬನು ಮತ್ತೆ ಹೊಸದಾಗಿ ಹುಟ್ಟದಿದ್ದಲ್ಲಿ ಅಂದರೆ ಮೇಲಿನಿಂದ ಹುಟ್ಟದಿದ್ದಲ್ಲಿ ಆ ರಾಜ್ಯವನ್ನು ಕಾಣಲು ಸಾಧ್ಯವಿಲ್ಲವೆಂದು ಆತನಿಗೆ ಹೇಳಿದಾಗ ಅತನಿಗಾದ ಗೊಂದಲ ಹೇಗಿದ್ದಿರಬಹುದೆಂಬುದನ್ನು ವಿಚಾರ ಮಾಡಿ ನೋಡಿ. ಆತನ ಗೊಂದಲಮಯವಾದ ಅಲೋಚನೆಗಳು ಆತನು ಅದಕ್ಕೆ ಮತ್ತೆ ಕೂಡಿಸಿದ ಈ ಪ್ರಶ್ನೆಯಲ್ಲಿ ಕಾಣುವುದು: ಮನುಷ್ಯನು ಮುದುಕನಾದ ಮೇಲೆ ಮುಪ್ಪಿನಲ್ಲಿ ಮತ್ತೆ ಹುಟ್ಟುವುದಕ್ಕಾದೀತೆ? ನಮ್ಮ ಕರ್ತನ ಉತ್ತರದ ಮೂಲಕವಾಗಿ ಅವನು ಆ ವಿಷಯದಲ್ಲಿ ಸ್ವಲ್ಪ ಬೆಳಕನ್ನು ಪಡೆಯಲಾರಂಭಿಸಿದನು. ಯೇಸು ಹೇಳಿದ್ದು: "ನಾನು ನಿನಗೆ (ನಿಜನಿಜವಾಗಿ) ಹೇಳುವುದೇನೆಂದರೆ ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು. ದೇಹದಿಂದ ಹುಟ್ಟಿದ್ದು ದೇಹವೇ; ಆತ್ಮನಿಂದ ಹುಟ್ಟಿದ್ದು ಆತ್ಮವೇ."

ನಿಕೊದೇಮನು ಕೆಲವು ಬಹು ಗಟ್ಟಿಯಾದ ಅಹಾರವನ್ನು ಕೇವಲ ಕೆಲವೇ ಮಾತಿನಲ್ಲಿ ಪಡೆದನು. ಆ ರಾಜ್ಯವು ಶಾರೀರಿಕ ಸಂಬಂಧವಾದ ಇಲ್ಲವೇ ಲೋಕಸಂಬಂಧವಾದುದು ಆಗಿರದೆ ಅದು ಆತ್ಮಿಕ ಸಂಬಂಧವಾದ ಪರಲೋಕರಾಜ್ಯ ಎಂಬುದನ್ನು ಅವನು ಈ ಹೇಳಿಕೆಯಿಂದ ಅರ್ಥಮಾಡಿಕೊಳ್ಳುವನು. ಶರೀರದಲ್ಲಿ ಸಹಜವಾಗಿ ಹುಟ್ಟುವುದು ಆತ್ಮಿಕವಾಗಿ ಹೊಸದಾಗಿ ಹುಟ್ಟುವುದಕ್ಕೆ ಒಂದು ಸೂಚನೆ ಅಥವಾ ಸಂಕೇತವೆಂಬುದನ್ನು ಹಾಗೂ ದೇವರ ರಾಜ್ಯವು ಯಾವುದೇ ಭೂಲೋಕದ ರಾಜ್ಯಕ್ಕಿಂತಲೂ ಉನ್ನತಸ್ಥಿಯಲ್ಲಿದ್ದು ಅದು ಆತ್ಮಿಕ ಸಂಬಂಧವಾಗಿರಲು ಮನುಷ್ಯರು ಸಾಮಾನ್ಯವಾಗಿ ಅದನ್ನು ನೋಡಲೂ ಅದಕ್ಕೆ ಸೇರಿ ಅದರ ಅಂಗಗಳಾಗಲು ಸಾದ್ಯವಾಗದು ಎಂಬ ಅರ್ಥದಲ್ಲಿ ನಮ್ಮ ಕರ್ತನು ಹೇಳಿದನೆಂಬುದನ್ನು ಅವನು ಗ್ರಹಿಸಿಕೊಂಡನು. ಯಾರು ಪವಿತ್ರಾತ್ಮನಿಂದ ಅಂಕುರಿಸಲ್ಪಟ್ಟು ಆ ಆತ್ಮನ ಮೂಲಕವಾಗಿ ಹುಟ್ಟಿರುವವರೊ ಅವರು ಮಾತ್ರ ಆ ಆತ್ಮಿಕ ಸಂಬಂಧವಾದ ರಾಜ್ಯವನ್ನು ನಿಜವಾಗಿ ನೋಡುವರು ಅಥವಾ ಅದರಲ್ಲಿ ಸೇರುವರು. ಆದರೆ ನಮ್ಮ ಕರ್ತನು ಅದಕ್ಕೆ "ನೀರಿನಿಂದಲೂ ಆತ್ಮನಿಂದಲೂ ಹುಟ್ಟುವುದು" ಎಂಬ ಅಂಶವನ್ನು ಸೇರಿಸಿದನು. ನೀರನ್ನು ಉಲ್ಲೇಖಿಸಿರುವುದು ಸ್ನಾನಿಕನಾದ ಯೋಹಾನನು ಮತ್ತು ಅವನ ಶಿಷ್ಯರು ಉಪದೇಶವಾಗಿ ಹೇಳುತ್ತಿದ್ದ ಪಾಪಗಳ ಪರಿಹಾರಕ್ಕಾಗಿ ನೀರಿನಲ್ಲಿ ಸ್ನಾನಮಾಡಿಸಿಕೊಳ್ಳುವುದನ್ನು ಮತ್ತು ಅದರ ಸೂಚನೆಯಾಗಿ ದೇವರ ಕಡೆಗೆ ತಿರುಗಿಕೊಳ್ಳುವುದನ್ನೂ ನಿಕೊದೇಮನ ಮನಸ್ಸಿಗೆ ನೆನಪುಮಾಡಿರುವ ಸಂಭವವಿತ್ತು.

ಪಂಚಾಶತ್ತಮ ದಿನದ ನಂತರದಲ್ಲಿ ಜೀವಿಸುತ್ತಿರುವ ಮತ್ತು ಈ ಕಾರಣದಿಂದ ಪವಿತ್ರಾತ್ಮನ ನಡಿಸುವಿಕೆಯ ವಿಷಯವಾದ ಬೋಧನೆಯ ಮೂಲಕ ದೇವರ ಗಾಢವಾದ ವಿಷಯಗಳ ಬಗ್ಗೆ ಸ್ಪಷ್ಟವಾದ ಗ್ರಹಿಕೆ ಹೊಂದಿರುವ ನಮಗೆ ನಮ್ಮ ಕರ್ತನು ನೀರಿನ ವಿಷಯವಾಗಿ ಹೇಳಿರುವುದರಲ್ಲಿ ಇನ್ನೂ ಪೂರ್ಣವಾದ ಮಹತ್ವವಿರುವುದನ್ನು ತಿಳಿದಿದ್ದೇವೆ. ಸಾಂಕೇತಿಕವಾದ ನೀರು ಸತ್ಯವನ್ನು ಸೂಚಿಸುತ್ತದೆಂಬುದನ್ನು ಮತ್ತು ಪವಿತ್ರಾತ್ಮನ ಅಂಕುರದ ಮೂಲಕವಾದ ನಮ್ಮ ಹುಟ್ಟುವಿಕೆಯು ಅಪೋಸ್ತಲನು ಹೇಳಿರುವಂತೆಯೂ ಸಹ "ಸತ್ಯವಾಕ್ಯದ ಮೂಲಕವಾದ ಹುಟ್ಟಿಸುವಿಕೆ." (ಯಾಕೋಬ 1:18) ಎಂಬುದನ್ನು ನಾವು ನೋಡುತ್ತೇವೆ. ಇದೇ ಅಂಶವನ್ನು ಅಪೋಸ್ತಲನಾದ ಪೌಲನು ವ್ಯಕ್ತಪಡಿಸಿ ಹೀಗೆ ಹೇಳಿರುವನು: "ಆತನ ಕರುಣೆಯಲ್ಲಿಯೇ ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕವಾಗಿಯೂ ಪವಿತ್ರಾತ್ಮನು ನಮ್ಮಲ್ಲಿ ನೂತನಸ್ವಭಾವವನ್ನು ಉಂಟು ಮಾಡುವುದರ ಮೂಲಕವಾಗಿಯೂ ಅತನು ನಮ್ಮನ್ನು ರಕ್ಷಿಸಿದನು." (ತೀತ 3:3–5) ಈ ವಿಷಯಗಳನ್ನು ಒಟ್ಟಿಗೆ ಕೂಡಿಸಿದ್ದಲ್ಲಿ, ಅಂದರೆ ನಾವು ಹೊಂದಿದ ನೂತನಸ್ವಭಾವ ಅಥವಾ ಪವಿತ್ರಾತ್ಮದಿಂದ ಪುನಜನ್ಮ ಪಡೆಯುವುದು ಮತ್ತು ಪುನಜನ್ಮದಿಂದ ಪುನಶ್ಚೇತನ ಹೊಂದಿ ನವೀಕರಿಸಲ್ಪಡುವುದು ಈ ಎಲ್ಲಾ ಅಂಶಗಳೂ ದೈವಸಂದೇಶವಾದ ಸತ್ಯವನ್ನು ಅಂಗೀಕರಿಸಿದ ಪರಿಣಾಮವಾಗಿ ಅದು ನಮ್ಮಲ್ಲಿ ಉಂಟುಮಾಡುವ ಶುಚಿಮಾಡಿಕೊಳ್ಳುವಿಕೆ ಅಥವಾ ಶುದ್ಧೀಕರಿಸಿಕೊಳ್ಳುವಿಕೆ ಎಂಬ ಕಾರ್ಯಗಳಲ್ಲಿ ನಮಗೆ ಸೇರಿದವುಗಳಾಗಿ ಬರುವುದು. ಇದು ಇಸ್ರಾಯೇಲ್ಯರ ದೇವದರ್ಶನ ಗುಡಾರದ ಸೇವಾಕಾರ್ಯದಲ್ಲಿ

ಸೊಗಸಾಗಿ ಸೂಚಿತವಾಗಿರುವುದು. ಅದರಲ್ಲಿ ಯಾಜಕನು ಪರಿಶುದ್ಧಸ್ಥಳಕ್ಕೆ ಹೋಗುವ ಮೊದಲು ಮತ್ತು ಹೀಗೆ ಛಾಯಾರೂಪದಲ್ಲಿ ನೂತನಸೃಷ್ಟಿಯಾಗುವ ಮೊದಲು ಸತ್ಯವೆಂಬ ದೇವರ ವಾಕ್ಯವನ್ನು ಹಾಗೂ ಪುನರ್ಜನ್ಮವನ್ನು ಸೂಚಿಸುವ ಗಂಗಾಳದ ನೀರಿನಿಂದ ತನ್ನನ್ನು ತೊಳಕೊಳ್ಳುವನು. ಈ ಮೂಲಕವಾಗಿ ನಾವು ಕರ್ತನಿಗೆ ಪ್ರತಿಷ್ಠೆಮಾಡಿಕೊಂಡಿರುವ ಸ್ಥಿತಿಗೆ ಬಂದಾಗ ಆತನು ನಮ್ಮನ್ನು ಸಂತೋಷದಿಂದ ಅಂಗೀಕರಿಸಿ ನಮಗೆ ಪುತ್ರಭಾವವನ್ನು ಅನುಗ್ರಹಿಸಿ ನಮ್ಮನ್ನು ತನ್ನ ಪರಲೋಕದ ಅಥವಾ ಆತ್ಮಿಕ ಮನೆತನದವರನ್ನಾಗಿ ಮಾಡಿಕೊಳ್ಳುವನು.

## "ಆತ್ಮನಿಂದ ಹುಟ್ಟಿದವರೆಲ್ಲರೂ ಅದರಂತೆಯೇ"

ಆ ರಾಜ್ಯದ ಹಾಗು ಅದನ್ನು ನೋಡುವ ಮತ್ತು ಅದರಲ್ಲಿ ಸೇರುವ ವಿಧಾನಗಳು ಮತ್ತು ಅದಕ್ಕಿರುವ ಷರತ್ತುಗಳ ವಿಷಯವಾಗಿ ನಿರೂಪಣೆ ನೀಡಿದಾಗ ನಿಕೊದೇಮನಿಗೆ ಆಶ್ಚರ್ಯವಾಯಿತು. ನಮ್ಮ ಕರ್ತನು ಮತ್ತೂ ಇದಕ್ಕೆ ಸೇರಿಸಿ ಹೇಳಿದ್ದು, ನೀವು ಹೊಸದಾಗಿ ಹುಟ್ಟಬೇಕು ಎಂದು ನಾನು ನಿನಗೆ ಹೇಳಿದ್ದರಿಂದ ಆಶ್ಚರ್ಯಪಡಬೇಡ. ಆನಂತರದಲ್ಲಿ ಆತನು ಅವನಿಗೆ ಆತ್ಮನಿಂದ ಹುಟ್ಟಿರುವರು ಹೇಗಿರುವರೆಂಬುದಕ್ಕೆ ಒಂದು ನಿದರ್ಶನವನ್ನು ಕೊಟ್ಟನು. ಆತ್ಮಿಕ ಜೀವಿಗಳು ಕಣ್ಣಿಗೆ ಕಾಣದಿದ್ದರೂ ಅವರ ಇರುವಿಕೆಯ ನಿಜಾಂಶದ ಬಗ್ಗೆ ಅವನ ಗಮನಸೆಳೆದನು. ಆತನು ಗಾಳಿಯ ವಿಷಯವಾಗಿ ಒಂದು ನಿದರ್ಶನವನ್ನು ತೆಗೆದು ಕೊಂಡು–ಅದು ಕಣ್ಣಿಗೆ ಕಾಣದು, ಅದು ಎಲ್ಲಿಂದ ಬರುತ್ತದೋ ಎಲ್ಲಿಗೆ ಹೋಗುತ್ತದೋ ನಮಗೆ ತಿಳಿಯದು; ಆದರೆ ನಾವು ಅದರ ಬಲವನ್ನು ತಿಳಿದಿದ್ದೇವೆ, ಅದರ ಸಪ್ಪಳವನ್ನು ಕೇಳಿದ್ದೇವೆ, ಅದು ಬೀಸಿದುದರ ಪರಿಣಾಮಗಳನ್ನು ನೋಡಿದ್ದೇವೆ. ನಮ್ಮ ಕರ್ತನು ಪ್ರಕಟಿಸಿ ಹೇಳಿದಂತೆ, ಇದು ನಿಕೊದೇಮನಿಗೆ ಆತ್ಮನಿಂದ ಹುಟ್ಟಿದವರ ವಿಷಯವಾಗಿ ಒಂದು ನಿದರ್ಶನವನ್ನು ನೀಡುವುದು. ಅವರು ಬಲಶಾಲಿಗಳಾಗಿ (ನಮ್ಮೊಡನೆ) ಇರುವರಾದರೂ ಅವರನ್ನು ಮುಟ್ಟಲಾಗದು ನೋಡಲಾಗದು. ಆ ರಾಜ್ಯವು ಸ್ಥಾಪನೆಗೊಂಡಾಗ ಅದೂ ಹೀಗೆಯೇ ಇರುವುದು. ನಮ್ಮ ಕರ್ತನ ಭಾಷೆಯ ಶೈಲಿಯನ್ನು ನಾವು ಬಹು ಜಾಗರೂಕತೆಯಿಂದ ಗಮನಿಸಬೇಕು, ಇಲ್ಲದಿದ್ದಲ್ಲಿ ಇಷ್ಟರಲ್ಲೇ ಇದರ ಬಗೆಗೆ ಇರುವ ತಪ್ಪಾದ ಅಭಿಪ್ರಾಯಗಳು ನಮಗೆ ಗೊಂದಲವನ್ನು ಉಂಟುಮಾಡುವವು. ಇವುಗಳಲ್ಲಿ ಯಾವುದೂ ನಮ್ಮನ್ನು ಸತ್ಯವೇದ ವಾಕ್ಯಗಳನ್ನು ತಿರುಚಿ ಮತ್ತು ಅದರ ಅರ್ಥಗಳನ್ನು ತಿರುಗಿಸಿ ಅದರಿಂದ ನಮ್ಮ ಕರ್ತನು ಹೇಳದೇ ಇರುವ ಕೆಲವು ಅಂಶಗಳು ಇದರಲ್ಲಿ ಇರುವುದೆಂದು ನಾವು ಹೇಳುವವರಾಗುವಂತೆ ಮಾಡಲು ಅವುಗಳನ್ನು ಬಿಡಬಾರದು. ನಮ್ಮನ್ನು (ಹೊಸದಾಗಿ) ಹುಟ್ಟಿಸಲಿರುವ ಆತ್ಮನು ನಮಗೆ ಅಗೋಚರವೆಂಬ ಅರ್ಥದಲ್ಲಿ ಆತನು ಹೇಳಿರುವುದು ಸತ್ಯವಾದರೂ ನಮ್ಮ ಕರ್ತನು ಹೇಳುತ್ತಿರುವ ವಿಷಯವು ಇದಾಗಿರುವುದಿಲ್ಲವೆಂಬ ಸಲಹೆಯನ್ನು ನಾವು ಹಿಮ್ಮೆಟ್ಟಿಸಬೇಕು. ಇಲ್ಲವೆ ನಮ್ಮ ಮನಸ್ಸುಗಳು ತಪ್ಪು ದಾರಿಗೆಳೆಯಲ್ಪಟ್ಟು–– ಪವಿತ್ರಾತ್ಮವು ಲೋಕದಲ್ಲೆಲ್ಲಾ ಅತ್ತಿತ್ತ ಸಂಚರಿಸಿ ಕೆಲವರನ್ನು ಹೊಸದಾಗಿ ಹುಟ್ಟುವಂತೆ ಮಾಡಿ ಕೆಲವರನ್ನು ದಾಟಿ ಹೋಗುವುದು ಮತ್ತು ಯಾರು ಪವಿತ್ರಾತ್ಮದಿಂದ ಹುಟ್ಟಿದವರು ಯಾರು ಇಲ್ಲವೆಂಬುದನ್ನು ನಮಗೆ ತಿಳಿಯಲಾಗದೆಂಬುದು ನಮ್ಮ ಕರ್ತನ ಮಾತಿನ ಅರ್ಥವೆಂದು ನಾವು ಭಾವಿಸುವಂತಾಗಲು ಬಿಡಬಾರದು. ಇವೆಲ್ಲವೂ ಗೊಂದಲಮಯವಾಗಿದ್ದು ಪೂರ್ಣವಾಗಿ ಲಿಖಿತವಾದವುಗಳಿಗೆ ಅನುಸಾರವಾಗಿಲ್ಲದಿರು ವಂಥವುಗಳು. ಯಾರಾರು ನಮ್ಮ ಒಡೆಯನ ಬೋಧನೆಗಳನ್ನು ಸರಿಯಾದ ರೀತಿಯಲ್ಲಿ ಸ್ಪಷ್ಟವಾಗಿ ಗ್ರಹಿಸಿರುವರೋ ಅವರು ಈ ಮಾತುಗಳಿಗೆ ತೀವ್ರವಾದ ಗಮನ ನೀಡಬೇಕು. ನಮ್ಮ ನಿರ್ಲಕ್ಷ್ಯದ ಮೂಲಕವಾಗಿಯೂ ಮತ್ತು ಇತರರು ದೇವರ ವಾಕ್ಯವನ್ನು ಅದರ ಅರ್ಥದ ಪ್ರಕಾರದಲ್ಲಿ ಇಲ್ಲದ ರೀತಿಯಲ್ಲಿ ಓದುವುದಕ್ಕೆ ಬಿಡುವುದರ ಮೂಲಕವಾಗಿಯೂ ನಾವು ಈಗಾಗಲೇ ಸಾಕಷ್ಟು ದೀರ್ಘ ಕಾಲವನ್ನು ಕತ್ತಲಿನಲ್ಲಿ ಕಳೆದಿದ್ದೇವೆ. ನಾವು ದೇವರ ವಾಕ್ಯಕ್ಕೆ ಯಾವುದನ್ನೂ ಕೂಡಿಸಬಾರದು ಅದರಿಂದ ಯಾವುದನ್ನೂ ತೆಗೆಯಬಾರದು ಅಲ್ಲದೆ ಯಾವನು ಈ ರೀತಿಯಲ್ಲಿ ಮಾಡುವನೋ ಅವನು ಸತ್ಯದ ಸೇವೆಯಲ್ಲಿ ಅಪನಂಬಿಗಸ್ತನಾಗಿದ್ದು ಕರ್ತನಿಗೆ ಅಪನಂಬಿಗಸ್ತನಾದ ರಾಯಭಾರಿಯೂ ವಕ್ತಾರನೂ ಆಗಿ ತನ್ನಲ್ಲಿರುವ ಗೊಂದಲವನ್ನು ಅಧಿಕಮಾಡಿಕೊಳ್ಳುವನು.

ತಾನು ಕೇಳಿದ್ದ ಸಂಗತಿಯ ಬಗ್ಗೆ ವಿಸ್ಮಯಪಟ್ಟು ನಿಕೊದೇಮನು ಉದ್ಗಾರವೆತ್ತಿ ಹೇಳಿದ್ದು, "ಇವುಗಳು ಹೇಗಾದೀತು?" ಶತಮಾನಗಳಿಂದಲೂ ಧರ್ಮಶಾಸ್ತ್ರ ಮತ್ತು ಪ್ರವಾದಿಗಳ ಗ್ರಂಥಗಳನ್ನು ಅಧ್ಯಯನಮಾಡುತ್ತಿರುವವರು ಇಷ್ಟು ಘೋರವಾದ ತಪ್ಪುಮಾಡಲು ಸಾಧ್ಯವೇ? ಇಸ್ರಾಯೇಲ್ಯರ ಬೋಧಕನಾಗಿರುವವನಿಗೆ ಈ ಸಂಗತಿಗಳನ್ನು ತನ್ನ ಗಮನಕ್ಕೆ ತಂದಕೂಡಲೇ ಇದರ ಅರ್ಥವನ್ನು ಗ್ರಹಿಸಲು ಸಮರ್ಥನಿರಬೇಕೆಂದು ನಮ್ಮ ಕರ್ತನು ಉತ್ತರಿಸಿದನು. ಧರ್ಮಶಾಸ್ತ್ರ ಮತ್ತು ಪ್ರವಾದಿಗಳ ಗ್ರಂಥಗಳನ್ನು ಅಧ್ಯಯನ ಮಾಡುತ್ತಿರುವ ಚಿಂತನಾಪರ ವಿಧ್ಯಾರ್ಥಿಯಾದ ನಿಕೊದೇಮನಿಗೆ ದೇವರ ರಾಜ್ಯವು ಭೂಲೋಕ ಸಂಬಂಧವಾದುದೆಂದು ಪ್ರಚಲಿತವಾಗಿದ್ದ ಆಲೋಚನೆಯಲ್ಲಿ ತೊಡೆದುಹಾಕಲಾಗದ ತಪ್ಪುಗಳಿರುವುದನ್ನು ಕಾಣಬೇಕಿತ್ತು. ಆದುದರಿಂದ ದೇವರ ರಾಜ್ಯವು ಆತ್ಮಸಂಬಂಧವಾಗಿರುವುದೆಂಬ ಪ್ರಕಟನೆ ಆಗುವಾಗ ಅದನ್ನು ಅಂಗೀಕರಿಸಲು ಆತನು ಸೂಕ್ತ ರೀತಿಯಲ್ಲಿ ಸಿದ್ಧನಾಗಿರಬೇಕಿತ್ತು. ಕರ್ತನು ಬೇರೊಂದು ಸಂದರ್ಭದಲ್ಲಿ ವಿವರಿಸಿ ಹೇಳಿರುವಂತೆ ಅದು ಪ್ರತ್ಯಕ್ಷವಾಗಿ ಬರುವಂಥದಲ್ಲ. "ಇಗೋ, ಇಲ್ಲಿ ಇದೆ" ಅಥವಾ "ಅಗೋ, ಅಲ್ಲಿ ಇದೆ" ಎಂದು ಜನರು ಅದರ ವಿಷಯವಾಗಿ ಹೇಳುವದಕ್ಕಾಗದು. ಅದು ಮನುಷ್ಯರ ಮಧ್ಯದಲ್ಲಿರುವುದು; ಅದು ಅದೃಷ್ಯವಾಗಿರುವು ದಾದರೂ ಬಹು ಬಲವುಳ್ಳದ್ದಾಗಿರುವುದು.

ನಾವು ಮತ್ತೊಂದು ಕಡೆ (ಸತ್ಯವೇದಾಧ್ಯಯನ ಪಾಠಮಾಲೆಯ 5ನೇ ಗ್ರಂಥದ 189, 192ನೇ ಪುಟಗಳಲ್ಲಿ) ತೋರಿಸಿರುವಂತೆ ದೇಹದಿಂದ ಹುಟ್ಟಿದ್ದು ದೇಹವೇ ಮತ್ತು ಆತ್ಮನಿಂದ ಹುಟ್ಟಿದ್ದು ಆತ್ಮವೇ ಎಂದು ನಮ್ಮ ಕರ್ತನು ಈ ವಿಷಯದಲ್ಲಿ ಹೇಳಿರುವ ಮಾತುಗಳಲ್ಲಿ ಒಂದು ನಿರ್ದಿಷ್ಟ ರೀತಿಯ

ಹೊಂದಿಕೆಯಿರುವುದು. ಯಾವ ರೀತಿಯಲ್ಲಿ ಶರೀರದ ಮೂಲಕ ಅಂಕುರಿಸಲ್ಪಡದೆ ಶಾರೀರಿಕ ಜನನವನ್ನು ಪಡೆಯಲಾಗದೋ ಹಾಗೆಯೇ ಆತ್ಮನ ಮೂಲಕ ಅಂಕುರಿಸಲ್ಪಡದೆ ಆತ್ಮದ ಜನನವನ್ನು ಪಡೆಯಲಾಗದು. ಆತ್ಮನ ಮೂಲಕವಾದ ಅಂಕುರಿಸಲ್ಪಡು ವಿಕೆಯು ದೇವರ ವಾಕ್ಯದ ಮೂಲಕ ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಸಂಬಂಧವಾಗಿ ಬರುವುದು ಮತ್ತು ಅವು ಈಗಿನ ಜೀವಿತಕ್ಕೆ ಸಂಬಂಧಿಸಿದ ವಿಷಯಗಳಾಗಿರುವವು. ನಾವು ಹೊಸ ಸೃಷ್ಟಿಗಳಾಗಿ ಪುನಶ್ಚೇತನಹೊಂದಿ ಕರ್ತನ ಸೇವೆಯಲ್ಲಿ ಕ್ರೀಯಾಶೀಲರಾಗುವ ಹಂತವನ್ನು ಮುಟ್ಟುವವರೆಗೂ ಆತ್ಮಿಕವಾಗಿ ಅಭಿವೃದ್ಧಿಯಾಗುತ್ತಾ ಬರುವೆವು. ಹೀಗೆ (ಪವಿತ್ರಾತ್ಮನ) ಅಂಕುರವನ್ನು ಪಡೆದು ಪುನಶ್ಚೇತನ ಹೊಂದಿದವರಲ್ಲಿ ನೂತನ ಚಿತ್ತವು ಮರಣಪರ್ಯಂತರ ನಂಬಿಗಸ್ತಿಕೆಯಿಂದಿದ್ದು ಪುನರುತ್ಥಾನ ದಲ್ಲಿ ಆತ್ಮನಿಂದ (ಪೂರ್ಣ ರೀತಿಯಲ್ಲಿ) ಹುಟ್ಟಿದವರಾಗುವರು. ಅವರು ಆತ್ಮಿಕ ಜೀವಿಗಳಾಗಿ ಮರಣದಿಂದ ಎಬ್ಬಿಸಲ್ಪಡುವರು. ಹೀಗೆ ನಮ್ಮ ಕರ್ತನು ತನ್ನ ಸ್ನಾನದೀಕ್ಷೆಯ ಸಮಯದಲ್ಲಿ ಪವಿತ್ರಾತ್ಮನಿಂದ ಅಂಕುರಿಸಲ್ಪಟ್ಟನು; ಆದರೆ ತನ್ನ ಪುನರುತ್ಥಾನದಲ್ಲಿ ಆತನು ಆತ್ಮನಿಂದ (ಪೂರ್ಣ ರೀತಿಯಲ್ಲಿ) ಹುಟ್ಟಿದನು. ಈ ರೀತಿಯಲ್ಲಿ ಆತನು ತನ್ನ ಸಹೋದರರಲ್ಲಿ ಪ್ರಮುಖನಾಗುವಂತೆ ಮರಣದಿಂದ ಎದ್ದು ಬಂದು ಜೇಷ್ಠಪುತ್ರನ ಸ್ಥಾನಹೊಂದಿದನು. ಹೀಗೆಯೇ ಅತನ ಸಹೋದರರಾಗಿ ಆತನ ರಾಜ್ಯಕ್ಕೆ ಸಹಬಾಧ್ಯರಾಗುವವರು ಈಗ ಪುನರ್ಜನ್ಮವನ್ನು ಸೂಚಿಸುವ ಸ್ನಾನದಲ್ಲಿ ಪವಿತ್ರಾತ್ಮನಿಂದ ಅಂಕುರಿಸಲ್ಪಟ್ಟು ನಂಬಿಸ್ತರಾಗಿ ಮುಂದುವರಿದಲ್ಲಿ ತಮ್ಮ ಪುನರುತ್ಥಾನದಲ್ಲಿ ಅವರು ಮಾರ್ಪಾಡು ಹೊಂದಿ (ಆತ್ಮನಿಂದ ಪೂರ್ಣವಾದ ರೀತಿಯುಲ್ಲಿ) ಹುಟ್ಟಿದವರಾಗುವರು. ಆಗ ನಿರ್ಬಲಾವಸ್ಥೆಯಲ್ಲಿ ಬಿತ್ತಲ್ಪಡುವರು ಬಲಾವಸ್ಥೆಯಲ್ಲಿ ಎದ್ದು ಬರುವುದು; ಪ್ರಾಕೃತ ದೇಹವಾಗಿ ಬಿತ್ತಲ್ಪಡುತ್ತದೆ ಆತ್ಮೀಕದೇಹವಾಗಿ ಎದ್ದುಬರುವುದು. ಹೀಗೆ ಅವರು ಮೊದಲನೇ ಪುನರುತ್ಥಾನದಲ್ಲಿ ನಮ್ಮ ಕರ್ತನೊಡನೆ ಆತ್ಮೀಕದ ಸ್ವಭಾವ, ಪ್ರಭಾವ, ಮಾನ, ನಿರ್ಲಯತ್ವಗಳಲ್ಲಿ ಪಾಲುಗಾರರಾಗು ವರು. ಹಲವರಿಗೆ ಇಲ್ಲಿ ಗೊಂದಲವಾಗಿರುವ ಕಾರಣ ಅವರು "ಜೆನ್ನಾವೊ" (gennao) ಎಂಬ ಒಂದೇ ಗ್ರೀಕ್ ಶಬ್ಧವನ್ನು ಗರ್ಭಾಂಕುರ ಮತ್ತು ಜನನ ಈ ಎರಡು ಕಾರ್ಯಗಳನ್ನು ಸೂಚಿಸಲು ಬಳಸಿರುವುದನ್ನು ಗಮನಿಸುವುದರಲ್ಲಿ ವಿಫಲರಾಗಿರು ವುದು ಎಂಬುದನ್ನು ಇಲ್ಲಿ ನಾವು ಗಮನಿಸುವುದು ಸೂಕ್ತ.

## "ತಿಳಿದದ್ದನ್ನು ಹೇಳುತ್ತೇವೆ"

ನಿಕೊದೇಮನ ಸಂದೇಹಗಳಿಗೆ ಉತ್ತರವಾಗಿ ನಮ್ಮ ಕರ್ತನು ಆ ರಾಜ್ಯವು ಆತ್ಮಿಕ ಸಂಬಂಧವಾದುದೆಂದು ಅದರ ವಿಷಯವಾಗಿ ಕೊಟ್ಟ ಸಾಕ್ಷಿಯು ಒಂದು ಶೂನ್ಯ ಕಲ್ಪನೆಯಲ್ಲ ವೆಂದು ಆಶ್ವಾಸನೆಯಿತ್ತನು. ತಾನು ಸಾಕ್ಷಿ ನೀಡಿರುವುದು ಸತ್ಯವೆಂಬುದೂ ಮತ್ತು ನಿಕೊದೇಮನಲ್ಲಿರುವ ತೊಂದರೆ ಎಂದರೆ ಆತನು ಕಲಿತುಕೊಳ್ಳಲು ಸಿದ್ಧನಿಲ್ಲವೆಂಬುದು ನಮ್ಮ ಕರ್ತನಿಗೆ ತಿಳಿದಿತ್ತು. ಅವನು ನಮ್ಮ ಕರ್ತನನ್ನು ಬೋಧಕನೆಂದು ಕರೆದಿದ್ದನು ಮತ್ತು ಆತನು ದೇವರ ಕಡೆಯಿಂದ ಬಂದವನೆಂದು ತಾನು ನಂಬಿರುವುದಾಗಿ ಪ್ರಕಟಮಾಡಿದ್ದನು; ಆದರೂ ಆತನು ತನ್ನ ಪೂರ್ವಕಲ್ಪಿತ ಭಾವನೆಗಳಿಗೆ ಎಷ್ಟು ಕಟ್ಟುಬಿದ್ದಿದ್ದನೆಂದರೆ ತನ್ನನ್ನು ಉಪದೇಶಿಸಲು ಸಮರ್ಥನಾದ ಆ ಒಬ್ಬನೇ ಒಬ್ಬನ ಸಾಕ್ಷಿಯನ್ನು ತೆಗೆದುಕೊಳ್ಳಲು ತಾನು ಸಿದ್ಧನಿರಲಿಲ್ಲ. ಪರಲೋಕ ರಾಜ್ಯದ ಬಗ್ಗೆ ಬಹಳ ವಿಷಯಗಳನ್ನು ಹೇಳಲು ತನಗೆ ಸಾಧ್ಯ ಆದರೆ ತನ್ನನ್ನು ಕೇಳುವವರಿಗೆ ಆತ್ಮಿಕ ಸಂಗತಿಗಳನ್ನು ತಿಳಿದುಕೊಳ್ಳುವ ಸ್ಥಿತಿಯಲ್ಲಿಲ್ಲದ ಕಾರಣ ಹಾಗೆ ಮಾಡುವುದು ತನಗೆ ಸರಿಯಲ್ಲ ವೆಂದು ಆತನು ತಿಳಿಸಿದ್ದನು. "ನಾನು ಭೂಲೋಕದಲ್ಲಿ ನಡೆಯುವ ಕಾರ್ಯಗಳನ್ನು ಕುರಿತು ನಿಮಗೆ ಹೇಳುವಾಗ ನೀವು ನಂಬದೆ ಹೋದರೆ ಪರಲೋಕದ ಕಾರ್ಯಗಳನ್ನು ಕುರಿತು ನಿಮಗೆ ಹೇಳಿದರೆ ಹೇಗೆ ನಂಬೀರಿ?" ನಮ್ಮ ಒಡೆಯನ ಮಾತುಗಳನ್ನು ಅಪೋಸ್ತಲನಾದ ಪೌಲನು ನೀಡಿರುವ ಬುದ್ಧಿವಾದದ ಬೆಳಕಿನಲ್ಲಿ ನೋಡಿದಾಗ ಅದು ಗದರಿಕೆಯಲ್ಲವೆಂದೂ ಆದರೆ ಅದು ನಿಜಾಂಶದ ಪ್ರಕಟನೆಯೆಂಬುದನ್ನು ನಾವು ನೋಡುತ್ತೇವೆ. ಏಕೆಂದರೆ ಅಪೋಸ್ತಲನು ಸಾರಿ ಹೇಳಿರುವುದು ಪವಿತ್ರಾತ್ಮನಿಂದ ಹುಟ್ಟದಿರುವ ಪ್ರಾಕೃತ ಮನುಷ್ಯನಿಗೆ ಆತ್ಮಿಕ ಸಂಗತಿಗಳನ್ನು ಅರ್ಥಮಾಡಿ ಕೊಳ್ಳುವುದು ಅಸಾಧ್ಯವೆಂದು. ಆದುದರಿಂದ ತನ್ನ ಶಿಷ್ಯರಿಗಾಗಲೀ ಅಥವಾ ಇತರರಿಗಾಗಲೀ ತನ್ನ ಸೇವೆಯಲ್ಲಿ ಅತಿ ಹೆಚ್ಚಾಗಿ ಬೋಧಿಸಲು ಯೇಸುವಿಗೆ ಸಾಧ್ಯವಾಗಿದ್ದುದು ಕೇವಲ ಭೂಲೋಕ ಸಂಬಂಧವಾದ ವಿಷಯಗಳನ್ನೇ. ತನ್ನ ಹಿಂಬಾಲಕರು ಪಂಚಾಶತ್ತಮ ದಿನದಂದು ಪವಿತ್ರಾತ್ಮನ ಮೂಲಕವಾದ ಹುಟ್ಟುವಿಕೆಯನ್ನು ಪಡೆದು ಪರಲೋಕ ಸಂಬಂಧವಾದ ಆತ್ಮಿಕ ಸಂಗತಿಗಳನ್ನು ಅರಿಯಲು ಯೋಗ್ಯರಾಗಿ ಅರ್ಹತೆ ಪಡೆದು ಸಿದ್ಧರಾಗುವವರೆಗೂ ಆತನು ದೇವರ ಯೋಜನೆಯ ಆಳವಾದ ವಿಷಯಗಳ ವಿವರಣೆ ನೀಡುವುದನ್ನು ತಡೆದುಬಿಟ್ಟಿದ್ದನು. –1 ಕೊರಿಂಥ 2:14

ನಿಸ್ಸಂದೇಹವಾಗಿಯೂ ಈ ದಿನಗಳಲ್ಲಿನ ಬಹು ಪಾಲು ಜನರಲ್ಲಿಯೂ ಇರುವ ತೊಂದರೆಯು ಸಹ ಇದೇ. ಅವರು ಪವಿತ್ರಾತ್ಮನಿಂದ ಅಂಕುರಿಸಲ್ಪಟ್ಟವರಾಗಿ ಮರು ಹುಟ್ಟುವಿಕೆ ಪಡೆದಿಲ್ಲವಾದ್ದರಿಂದ, ಅವರು ಆತ್ಮಿಕ ಸಂಗತಿಗಳನ್ನು ಅರ್ಥಮಾಡಿ ಕೊಳ್ಳಲು ಅಸಮರ್ಥರು. ಅದುದರಿಂದ ನಾವು ಪದೇ ಪದೇ ಮಾಡುತ್ತಿರುವ ಶಿಫಾರಸನ್ನು ಮತ್ತೆ ಹೇಳುತ್ತಿದ್ದೇವೆ. ಅದೇನಂದರೆ ಸತ್ಯವನ್ನು ಕೇಳುವ ಕಿವಿಯಿಲ್ಲದವರನ್ನು ಕಂಡುಕೊಂಡಾಗ ಅದನ್ನು ಅವರಿಗೆ ಹೇರಲು ಯತ್ನಿಸಬಾರದು; ಆದರೆ ನಾವು ಸೂಕ್ತವಾದ ಬೇರೊಂದು ವಿಧಾನವನ್ನು ಅನುಸರಿಸಿ ಅವರು ಈಗಾಗಲೇ ಕಂಡು ಕೇಳಿ ಗ್ರಹಿಸಶಕ್ತರಾಗಿರುವ ವಿಷಯಗಳ ಮೂಲಕ ತಾವು ಕರ್ತನಿಗೂ ಮತ್ತು ಆತನ ಸೇವೆಯಲ್ಲಿಯೂ ಸಂಪೂರ್ಣ ರೀತಿಯಲ್ಲಿ ಪ್ರತಿಷ್ಠೆಮಾಡಿಕೊಳ್ಳುವುದರ ಔಚಿತ್ಯವನ್ನು ಅವರಿಗೆ ವಿವರಿಸಿ ಅವರು ತಮ್ಮನ್ನು ಪ್ರತಿಷ್ಠಿಕೊಳ್ಳಲು ಪ್ರಯತ್ನಿಸ ಬೇಕು. ಅವರು ತಮ್ಮನ್ನು ಪ್ರತಿಷ್ಠೆ ಮಾಡಿಕೊಂಡು ಪವಿತ್ರಾತ್ಮನಿಂದ ಅಂಕುರಿಸಲ್ಪಟ್ಟದ್ದೇಯಾದಲ್ಲಿ ದೇವರ ಆಳವಾದ ವಿಷಯಗಳು ಅವರದ್ದಾಗುವವು ಆಗ ಅವರು ಅವುಗಳನ್ನು ಅರ್ಥ ಮಾಡಿ ಕೊಳ್ಳಬಹುದು. ಈ ಕಾರಣಕ್ಕಾಗಿಯೇ ಜ್ಞಾನವು ಹೇಳುವುದು ಆಳವಾದ ಆತ್ಮಿಕ ಸಂಗತಿಗಳಾದ ದೈವೀಕವಾದ ಸತ್ಯಾರ್ಥ ಗಳನ್ನೊಳಗೊಂಡ ಮುತ್ತುಗಳನ್ನು ಹೊಸದಾಗಿ ಹುಟ್ಟದವರ ಮುಂದೆ ಚೆಲ್ಲಬಾರದು. ಬದಲಾಗಿ ಅದು ಹೇಳುವುದು ಲೋಕದ ಜನರಿಗಿರುವ ದೇವರ ಯುಗಾಂತರಗಳ ಯೋಜನೆಯು ಕೇವಲ ಸಾಮಾನ್ಯವಾದ ಹೊರನೋಟಗಳ ವಿಷಯವಾಗಿ ಅವರಿಗೆ

ಉಪದೇಶಿಸಿ ಅವರು ದೇವರ ಕೃಪೆಯನ್ನು ವ್ಯರ್ಥಮಾಡಿಕೊಳ್ಳಬಾರದೆಂಬ ಬುದ್ಧಿಮಾತನ್ನು ಹೇಳಿ, ಮೇಲಿನಿಂದ ಬರುವ ಜ್ಞಾನವು ಮತ್ತು ಅಳವಾದ ವಿಷಯಗಳನ್ನು ಅರಿತುಕೊಳ್ಳುವ ಸಾಮರ್ಥ್ಯಗಳು ದೊರಕುವದು ಕೇವಲ ತಮ್ಮನ್ನು ದೇವರ ಮಕ್ಕಳ ಸಂಬಂಧವಾದ ಆತ್ಮಿಕ ಒಡಂಬಡಿಕೆಯನ್ನು ಮಾಡಿಕೊಂಡು ಹೊಸ ಸೃಷ್ಟಿಗಳಾಗುವವರಿಗೆ ಎಂಬುದನ್ನು ಬರವಸೆಯನ್ನು ನೀಡಿ ಹೇಳಬೇಕು.

## "ಯಾರೂ ಪರಲೋಕಕ್ಕೆ ಏರಿಹೋದವರಲ್ಲ"

ನಮ್ಮ ಕರ್ತನಿಂದ ಬಂದ ಈ ಹೇಳಿಕೆಯು ನಿಕೊದೇಮನಲ್ಲಿ ಯಾವ ವಿಶೇಷವಾದ ಆಶ್ಚರ್ಯವನ್ನು ಉಂಟುಮಾಡಿರಲಾರದು; ಯಾಕೆಂದರೆ ಮೋಶೆಯ ಧರ್ಮಶಾಸ್ತ್ರದಲ್ಲಿಯಾಗಲೀ ಪ್ರವಾದಿಗಳ ಗ್ರಂಥಗಳಲ್ಲಿಯಾಗಲೀ ಇಲ್ಲವೇ ಸಾಂಪ್ರದಾಯಕವಾದ ಯೆಹೂದ್ಯಮತದ ಬೋಧನೆಗಳಲ್ಲಿಯಾಗಲೀ ಸತ್ತವರು ಹಿಂದೆಂದೂ ಇರದ ರೀತಿಯಲ್ಲಿ ಜೀವಂತವಾಗಿರುವರು ಎಂಬ ಅನ್ಯಜನರಲ್ಲಿ ಪ್ರಚಲಿತವಾಗಿರುವ ಮನೋಭಿಪ್ರಾಯವನ್ನು ಎಂದು ಪ್ರತಿಪಾದಿಸಿಲ್ಲ. ಸತ್ತವರು ಸತ್ತವರಾಗಿಯೇ ಇರುವರು ಮತ್ತು ಅವರಿಗಿರುವ ನಿರೀಕ್ಷೆ ಪುನರುತ್ಥಾನದ ಮೇಲಿರುವುದು. ಇದು ಯಾವಾಗ ನೆರವೇರುವುದೆಂದರೆ ಮನುಷ್ಯರ ಮೇಲಿರುವ ಶಾಪವನ್ನು ತೆಗೆದುಹಾಕಿ ಅವರನ್ನು ಉನ್ನತಸ್ಥಿತಿಗೆ ತಂದು ದೇವರೊಂದಿಗೆ ಅವರನ್ನು ಸಂಧಾನ ಪಡಿಸಲು ಅವರ ಮಧ್ಯದಲ್ಲಿ ಪರಲೋಕ ರಾಜ್ಯವನ್ನು ಸ್ಥಾಪಿಸುವದಕ್ಕಾಗಿ ಮೆಸ್ಸೀಯನು ಬರಬೇಕಾದ ಸಮಯದಲ್ಲಿ ಎಂಬುದು ಅವರಿಗೆ ತಿಳಿದಿತ್ತು. ಆದರೆ ಈ ದಿನದಲ್ಲಿ ಸತ್ತವರು ಜೀವಿಸುವವರಿಗಿಂತ ಅಧಿಕವಾಗಿ ಜೀವಂತವಾಗಿರುವರೆಂಬ ಅನ್ಯಜನರಲ್ಲಿರುವ ತಪ್ಪಾಭಿಪ್ರಾಯದ ಪ್ಲೇಟೋವಿನ ತತ್ವಶಾಸ್ತ್ರದ ಬೋಧನೆ ಹಾಗೂ ಇಂತಹ ಹೇಳಿಕೆಯಲ್ಲಿ ಅಡಕವಾಗಿರುವ ನಿರರ್ಥಕ ವಿಷಯಗಳು ಕ್ರೈಸ್ತ ಸಮುದಾಯವನ್ನು ಕಟ್ಟಿಹಾಕಿವೆ. ಬೇರೆ ವಿಷಯದಲ್ಲಿ ಸ್ವಸ್ಥಚಿತ್ತರೂ ತರ್ಕಬದ್ಧರೂ ಆದ ಜನರು ತಾವು ಸತ್ತವರ ಪುನರುತ್ಥಾನವನ್ನು ನಂಬುವುದಾಗಿ ಹೇಳಿ ಅದೇ ಉಸುರಿನಲ್ಲಿ ಸತ್ತವರು ಸತ್ತವರಾಗಿರುವುದಿಲ್ಲವೆಂದೂ ನಮಗೆ ಹೇಳುವರು. ಯಾರೂ ಸತ್ತಿಲ್ಲವಾದರೆ ಸತ್ತವರ ಪುನರುತ್ಥಾನವು ಹೇಗೆ ಸಾಧ್ಯವೆಂಬುದನ್ನು ಹೇಳಲು ಅವರು ವಿಫಲರಾಗಿರುವರು. ಆ ಒಡೆಯನಿಗೆ ಕಲಿಸುವುದನ್ನು ಬಿಟ್ಟು ಅತನಿಂದ ನಿಜವಾಗಿ ಕಲಿಯುವ ಬಯಕೆಯಿಂದ ಈ ಪಾಠವನ್ನು ಅಧ್ಯಯನ ಮಾಡುವವರು "ಯಾರೂ ಪರಲೋಕಕ್ಕೆ ಏರಿಹೋದವರಲ್ಲ" ಎಂಬ ಕರ್ತನ ಮಾತನ್ನು ಲಕ್ಷ್ಯಕ್ಕೆ ತಂದುಕೊಳ್ಳಲಿ. (ಈ 13ನೇ ವಚನದಲ್ಲಿರುವ ಮೊದಲನೇ ನಾಲ್ಕು ಪದಗಳಾದ "ಪರಲೋಕದಿಂದ ಇಳಿದು ಬಂದವನೇ ಹೊರತು" ಎಂಬುದು ಪುರಾತನ ಗ್ರೀಕ್ ಮೂಲಪ್ರತಿಗಳಲ್ಲಿ ಇರುವುದಿಲ್ಲ. ಮತ್ತು ಇದು ಸ್ಪಷ್ಟವಾಗಿ ಈ ಸಂಭಾಷಣೆಯ ಭಾಗವಾಗಿರುವುದಿಲ್ಲ.)

## "ಅಡವಿಯಲ್ಲಿನ ಸರ್ಪ"

ಈ ಪಾಠದ ಉಳಿದ ಭಾಗವು, ನಮ್ಮ ತೀರ್ಮಾನದಂತೆ, ನಿಕೊದೇಮನಿಗೆ ಹೇಳಿರುವ ಮಾತುಗಳಲ್ಲ; ಆದರೆ ಈ ಸುವಾರ್ತಾ ಲೇಖಕನು ನಮ್ಮ ಕರ್ತನ ಬೇರೆಬೇರೆ ಬೋಧನೆಗಳನ್ನು ಅನುಕೂಲಕ್ಕಾಗಿ ಒಂದುಗೂಡಿಸಿ ಹೇಳಿರುವುದು.

14ನೇ ವಚನಲ್ಲಿರುವ ಉಲ್ಲೇಖವು ಅಂದರೆ ಅಡವಿಯಲ್ಲಿ ತಾಮ್ರದ ಸರ್ಪವನ್ನು ಎತ್ತರದಲ್ಲಿಟ್ಟದ್ದು ಮತ್ತು ಇದು ನಮ್ಮ ಕರ್ತನನ್ನು ಶಿಲುಬೆಗೆ ಹಾಕಿದ ಉದ್ದೇಶಕ್ಕೆ ಒಂದು ಛಾಯಾರೂಪವಾಗಿರುವುದೆಂದು ಪ್ರಕಟಿಸಿರುವುದು ಒಂದು ಬಹು ಮುಖ್ಯವಾದ ವಿಷಯ. ತಮ್ಮ ಪಾಪದ ದೆಸೆಯಿಂದ ಇಸ್ರಾಯೇಲ್ಯರು ಉರಿಮಂಡಲ ಸರ್ಪಗಳಿಂದ ಕಚ್ಚಿಸಿಕೊಂಡವರಾಗಿ ಮತ್ತು ದೇವರ ಆದೇಶದ ಮೇರೆಗೆ ಮೋಶೆಯು ತಾಮ್ರದ ಸರ್ಪವನ್ನು ಕಂಬದ ಮೇಲೆ ಇಡುವವರೆಗೂ ಅವರು ಬಹಳ ನೋವಿನಿಂದ ಎಷ್ಟು ನರಳಿ ಸಾಯುತ್ತಿದ್ದರೆಂಬುದು ನಮ್ಮ ನೆನಪಿಗೆ ಬರುತ್ತದೆ. ಇದರ ತರುವಾಯ ಆ ಸರ್ಪವನ್ನು ನಂಬಿಕೆಯಿಂದ ನೋಡಿದ ಪ್ರತಿಯೊಬ್ಬ ಇಸ್ರಾಯೇಲನು ಸ್ವಸ್ಥನಾದನು. ಇದರ ನಿಜರೂಪವನ್ನು ನಾವು ನೋಡುವೆವು. ಅಪೋಸ್ತಲನು ಪ್ರಕಟಮಾಡಿ ಹೇಳಿರುವಂತೆ ಇಡೀ ಲೋಕವೆಲ್ಲಾ ಪಾಪದಿಂದ ಕಚ್ಚಿಸಿಕೊಂಡು ವೇದನೆನೋವುಗಳಿಂದ ನರಳುತ್ತಿದ್ದು ಎಲ್ಲರೂ ಸಾಯುತ್ತಿರುವರು. (ರೋಮಾ. 8:33) ಹದಿನೆಂಟು ಶತಮಾನಗಳ ಹಿಂದೆ ಮನುಷ್ಯ ಕುಮಾರನಾದ ಯೇಸುವು ಕಲ್ವಾರಿಯಲ್ಲಿ ಎತ್ತರದಲ್ಲಿ ಇಡಲ್ಪಟ್ಟನು. ಆತನು ಒಬ್ಬ ಪಾಪಿಯಂತೆ ನಡೆಸಲ್ಪಟ್ಟನು. ಆತನಲ್ಲಿರುವ ನೀತಿಯನ್ನು ಹೊಂದಿ ತಾವು ಸ್ವಸ್ಥರಾಗಿ ನಿತ್ಯಜೀವವನ್ನು ಅನುಗ್ರಹವಾಗಿ ಪಡೆಯ ಬಯಸುವವರೆಲ್ಲರಿಗೂ ಅದನ್ನು ಒದಗಿಸುವ ಹಕ್ಕನ್ನು ಪಡೆಯಲು ನಮ್ಮೆಲ್ಲರ ಪಾಪಗಳೆಲ್ಲವನ್ನು ಆತನ ಮೇಲೆ ಹೊರಿಸಲಾಯಿತು.

ಈ ವಿಷಯವನ್ನು ವಿವರಿಸುತ್ತಾ ನಮ್ಮ ಕರ್ತನು ಸಾರಿ ಹೇಳಿದ್ದೇನೆಂದರೆ, ತನ್ನನ್ನು ನಂಬುವ ಪ್ರತಿಯೊಬ್ಬನೂ ನಾಶವಾಗದೆ ನಿತ್ಯಜೀವವನ್ನು ಹೊಂದಬೇಕೆಂಬ ಉದ್ದೇಶಕ್ಕಾಗಿ ಮನುಷ್ಯ ಕುಮಾರನು ಎತ್ತರದಲ್ಲಿಡಬೇಕು. ಕೇವಲ ಸ್ವಲ್ಪ ಜನರು ಮಾತ್ರ ಅದುವರೆಗೂ ಆತನಲ್ಲಿ ನಂಬಿಕೆ ಇಡುವ ಅವಕಾಶವನ್ನು ಪಡೆದಿದ್ದರು. ನಮ್ಮ ಕರ್ತನ ಕಾಲದಲ್ಲಿ ಹಾಗೂ ಅಲ್ಲಿಂದೀಚೆಗೆ ದೊಡ್ಡ ಪಾಲು ಜನರು ವಿಮೋಚಕನ ಮತ್ತು ಆತನ ಯಜ್ಞದ ಹಾಗೂ ಆತನನ್ನು ನೋಡುವುದರಿಂದ ಪಡೆಯುವ ಆಶೀರ್ವಾದದ ಬಗ್ಗೆ ಸಂಪೂರ್ಣವಾಗಿ ಜ್ಞಾನವೇ ಇಲ್ಲದಿರುವರು. ಆದರೆ ಅವರು ಎಂದೂ ನೋಡುವುದಿಲ್ಲವೇ? ಅವರು ಎಂದೂ ತಿಳಿದುಕೊಳ್ಳುವುದಿಲ್ಲವೇ? ಅವರು ಎಂದಿಗೂ ನಿತ್ಯಜೀವವ ಪಡೆಯುವದಿಲ್ಲವೇ? ಕೇವಲ ಈ ಸುವಾರ್ತಾಯುಗದಲ್ಲಿ ವಿಶೇಷ ಅನುಗ್ರಹ ಹೊಂದಿದವರಾಗಿ ಆಯಲ್ಪಟ್ಟ ಸಭೆಯು ಮಾತ್ರ ಈ ಶ್ರೇಷ್ಠ ಅವಕಾಶವನ್ನು ಹೊಂದಿರುವರೋ? ಖಂಡಿತವಾಗಿಯೂ ಇಲ್ಲ! ಸೂಕ್ತವಾದ ಸಮಯದಲ್ಲಿ ದೇವರು ತನ್ನ ಕೃಪೆಯ ವಿಷಯವಾದ ಪರಿಜ್ಞಾನವನ್ನು ಮಾನವ ಕುಲದ ಪ್ರತಿಯೊಬ್ಬನೂ ಹೊಂದುವಂತೆ ಮಾಡುವನು. ಖಂಡಿತವಾಗಿಯೂ ಇದು ನಮ್ಮ ಒಡೆಯನು ಈ ಮುಂದೆ ಹೇಳಿದ ಮಾತಿನ ಅಭಿಪ್ರಾಯ, "ಯಾಕೆಂದರೆ ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು." (ಯೋಹಾನ 3:16)

ಆಹಾ, ಹೌದು! ಇದು ಒಂದು ಭಾಗ್ಯಕರವಾದ ಬರವಸೆಯಾಗಿರುವುದು. ದೇವರ ಕೃಪೆಯಿಂದ ಯೇಸುವು "ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಲೇಬೇಕಾಗಿತ್ತು." (ಇಬ್ರೀಯ 2:9) ಎಂಬುದು ನಮಗೆ ಸಂತೋಷಕರವಾದ ವಿಷಯ. ಆತನು ನಮ್ಮ ಪಾಪಗಳ ಅಂದರೆ ಸಭೆಯ ಪಾಪಗಳ ಪರಿಹಾರ ಯಜ್ಞವಾಗಿರುವನೆಂಬುದಕ್ಕೆ ನಮಗೆ ಸಂತೋಷ. ನಮಗೆ ಮತ್ತೂ ಸಂತೋಷವೆಂದರೆ ಆತನು ಸಮಸ್ತ ಲೋಕದ ಪಾಪ ಪರಿಹಾರ ಯಜ್ಞವಾಗಿದ್ದಾನೆಂಬುದು. (1 ಯೋಹಾನ 2:1) ಮತ್ತು ಸಮಸ್ತ ಲೋಕದವರೆಲ್ಲರೂ ತಮ್ಮ ಕಣ್ಣು ಹಾಗು ಕಿವಿಗಳು ತೆರೆಯಲ್ಪಟ್ಟವರಾಗಿ ಕ್ರಿಸ್ತನಲ್ಲಿರುವ ದೇವರ ಕೃಪಾ ಐಶ್ವರ್ಯಗಳನ್ನು ಕಂಡು ಅದನ್ನು ಗ್ರಹಿಸಿಕೊಳ್ಳುವ ಸೌಭಾಗ್ಯ ಮತ್ತು ಸದವಕಾಶವನ್ನು ಅಂತಿಮವಾಗಿ ಪಡೆಯುವರು.

"ದೇವರು ತನ್ನ ಮಗನ ಮುಖಾಂತರ ಲೋಕಕ್ಕೆ ರಕ್ಷಣೆಯಾಗಬೇಕೆಂದು ಆತನನ್ನು ಕಳುಹಿಸಿಕೊಟ್ಟನೇ ಹೊರತು ತೀರ್ಪುಮಾಡುವದಕ್ಕಾಗಿ ಕಳುಹಿಸಲಿಲ್ಲ." ಎಂಬುದನ್ನು ನಾವು ಎಂಥಾ ಉಲ್ಲಾಸದಿಂದ ಓದುತ್ತೇವೆ. ಲೋಕವು ಆಗಲೇ ಖಂಡನೆಗೊಳಗಾಗಿತ್ತು; ಯಾಕೆಂದರೆ ಮೂಲಪಿತನಾದ ಆದಾಮನ ಸಂತತಿಯಾಗಿ ಆತನಿಗೆ ಉಂಟಾದ ಖಂಡನೆಯಲ್ಲಿ ಪಾಲನ್ನು ಹೊಂದಿತ್ತು. ಅದಕ್ಕೆ ಇನ್ನೂ ಹೆಚ್ಚಿನ ಖಂಡನೆಯ ಅಗತ್ಯವಿರಲಿಲ್ಲ. ಆದರೆ ತನ್ನ ಮೇಲಿರುವ ಆದಾಮನಿಗುಂಟಾದ ಖಂಡನೆಯಿಂದ ರಕ್ಷಣೆಹೊಂದುವ ಅಗತ್ಯವಿತ್ತು. ಅದಕ್ಕೆ ಮಾನಸಿಕವಾದ ನೈತಿಕವಾದ ಶಾರೀರಿಕವಾದ ಕೆಟ್ಟತನವೆಂಬ ದಾಸತ್ವದಿಂದ ಬಿಡುಗಡೆ ಹೊಂದುವುದು ಅವಶ್ಯವಾಗಿದ್ದಿತು. ಮತ್ತು ಇದನ್ನು ನೆರವೇರಿಸುವದಕ್ಕಾಗಿಯೇ ಯೇಸುವು ಬಂದನು. ಕ್ರೈಸ್ತಪಂಗಡ ಸಿದ್ದಾಂತಗಳಲ್ಲಿ ಹೇಳಿರುವುದಕ್ಕಿಂತಲೂ ಈ ಒಡೆಯನು ನೀಡಿರುವ ನಿರೂಪಣೆಯು ಎಷ್ಟೋ ಭಿನ್ನವಾಗಿದೆ. "ಅಂಧಕಾರದ ಯುಗ" ಎಂದು ಕರೆಯಲ್ಪಡುವ ಅಜ್ಞಾನದ ಕಾಲಗಳಲ್ಲಿನ ಸಿದ್ಧಾಂತಗಳು ಹೇಳಿಕೊಳ್ಳುವುದೇನೆಂದರೆ, "ಆಯಲ್ಪಟ್ಟಿರುವ ಸಭೆಗೆ" ಸಂಬಂಧಿಸದೆ ಇರವವರೆಲ್ಲರೂ ನಿತ್ಯಯಾತನೆಯ ಖಂಡನೆಗೆ ಗುರಿಯಾಗಿದ್ದರೆಂಬುದು. ತನ್ನಲ್ಲಿರುವ ಅಂಧಕಾರ ಅಜ್ಞಾನ ಮೂಢನಂಬಿಕೆಯ ದೆಸೆಯಿಂದ ಮಾನವ ಸಂತತಿಯು ಒಟ್ಟಾರೆ ದೇವರ ಕೃಪೆಯನ್ನು ಈವರೆಗೂ ಪಡೆದಿಲ್ಲ ಇಲ್ಲವೇ ಅದನ್ನು ಹೊಂದುವ ಅವಕಾಶವನ್ನೂ ಸಹ ಪಡೆದಿಲ್ಲವೆಂಬುದು ತಿಳಿದುಬಂದಿದೆ. ಅದು ಹೇಳಿಕೊಂಡಿದ್ದು: ಲೋಕವು ಎಂದೂ ದೇವಾನುಗ್ರಹ ಹೊಂದಿರಲಿಲ್ಲವೆಂದೂ, ಲೋಕವನ್ನು ರಕ್ಷಿಸುವ ಉದ್ದೇಶ ದೇವರಿಗೆ ಎಂದೂ ಇರಲಿಲ್ಲವೆಂದೂ, ಮತ್ತು ಕ್ರಿಸ್ತನು ಸತ್ತದ್ದು ಲೋಕಕ್ಕಾಗಿರದೆ ಅದು ಆಯಲ್ಪಟ್ಟವರಾದ ಸಭೆಗಾಗಿ. ಈ (ಸುವಾರ್ತಾ ಯುಗದ) ಸುಗ್ಗಿಯ ಕಾಲದಲ್ಲಿ ದೇವ ವಾಕ್ಯದ ಮೂಲಕ ತೋರಿಬಂದಿರುವ ದೈವ ಪ್ರೀತಿಜ್ಞಾನಗಳ ಉದ್ದ ಮತ್ತು ಅಗಲ ಮತ್ತು ಎತ್ತರ ಮತ್ತು ಆಳವು ಎಷ್ಟೋ ಪ್ರಭಾವವುಳ್ಳದ್ದು. ಒಂದು "ಕ್ಲುಪ್ತ ಕಾಲದಲ್ಲಿ" (ವಿಧೇಯತೆಗೆ) ಇಚ್ಛಿಸುವ ಲೋಕದವರೆಲ್ಲರನ್ನು ಆಶೀರ್ವದಿಸಿ ಜ್ಞಾನಪ್ರಕಾಶ ನೀಡಿ ಉನ್ನತಸ್ಥಿತಿಗೆ ತಂದು ಅವರನ್ನು ಸರಿಪಡಿಸುವ ಮಹಾ ಕಾರ್ಯಕ್ಕೆ ಸಭೆಯ ಆಯಲ್ಪಡುವಿಕೆಯು ಕೇವಲ ಒಂದು ಮುನ್ಸೂಚನೆ. ಹೀಗಿದ್ದರೂ ಯಾವನಾದರೂ ಬೆಳಕನ್ನು ನೋಡಿಯೂ ಅದನ್ನು ತಿರಸ್ಕರಿಸಿರುವ ಪ್ರಮಾಣದಲ್ಲಿ ಖಂಡನೆಯ ಪ್ರಮಾಣವೂ ಹೆಚ್ಚಿರುವುದು. ಇದು ನಮ್ಮ ಕರ್ತನು ಹೇಳಿರುವಂತೆ, "ಆ ತೀರ್ಪು ಏನೆಂದರೆ--ಬೆಳಕು ಲೋಕಕ್ಕೆ ಬಂದಿದ್ದರೂ ಮನುಷ್ಯರ ಕೃತ್ಯಗಳು ಕೆಟ್ಟವುಗಳಾಗಿರುವದರಿಂದ ಅವರು ಬೆಳಕಿಗಿಂತ ಕತ್ತಲೆಯನ್ನೇ ಹೆಚ್ಚಾಗಿ ಪ್ರೀತಿಸಿದರು." (ಯೋಹಾನ 3:19) ಇದರ ಅರ್ಥವು ಸ್ಪಷ್ಟ; ಅದೇನೆಂದರೆ ನಮ್ಮ ಕರ್ತನ ಮೊದಲನೇ ಬರುವಿಕೆಯು ಆದಾಮನಿಗಾದ ಖಂಡನೆಯನ್ನು ಹೆಚ್ಚಿಸುವದಕ್ಕಾಗಿರದೆ ಅದನ್ನು ಕ್ರಮೇಣ ರದ್ದುಮಾಡಲು ಪರಿಣಾಮಕಾರಿಯಾದ ಯಜ್ಞವನ್ನರ್ಪಿಸ ಸಲುವಾಗಿರುವುದು. ಹೀಗಿರುವಲ್ಲಿಯೂ ಲೋಕದಲ್ಲಿ ಆಗ ಆತನ ಪ್ರತ್ಯಕ್ಷತೆಯು ಮತ್ತು ಆ ಮೂಲಕವಾಗಿ ಅನಂತರದಲ್ಲಿಯೂ ಹೊಳೆಯುತ್ತಿರುವ ಬೆಳಕು ತನ್ನೊಡನೆ ಕೆಲವು ಪ್ರಮಾಣದ ಜವಾಬ್ದಾರಿಯನ್ನೂ ಹೊತ್ತು ಕೊಂಡು ಬಂದಿರುವುದು. ಅದೇನೆಂದರೆ ಆ ಬೆಳಕನ್ನು ಪ್ರತಿರೋಧಿಸಿದವೆಲ್ಲರೂ ಆ ಒಂದು ಪ್ರಮಾಣದಲ್ಲಿ ಖಂಡನೆಗೊಳಗಾಗಿರುವರು.

ಹೀಗಿರುವಲ್ಲಿ ಈ ಖಂಡನೆಯು ಆದಾಮನಿಗೆ ಉಂಟಾದ ಖಂಡನೆಗಿಂತಲೂ ಭಿನ್ನವಾದದ್ದು; ಆದಾಮನ ಖಂಡನೆಯು ವಂಶಪಾರಂಪರ್ಯವಾಗಿ ಬಂದಿದ್ದು ಅದು ನಮ್ಮ ಪಾಪಗಳಿಗೆ ನೀಡಿದ ಕ್ರಿಸ್ತನ ಯಜ್ಞದ ಮೂಲಕ ಕಡೆಯಲ್ಲಿ ರದ್ದುಪಡಿಸಲಾಗುವುದು. ಬೆಳಕನ್ನು ಬುದ್ಧಿಪೂರ್ವಕವಾಗಿ ತಿರಸ್ಕರಿಸಿರುವ ಫಲವಾದ ಈ ಖಂಡನೆಯು ಒಂದು ವೈಯುಕ್ತಿಕವಾದ ಶಿಕ್ಷೆಯನ್ನು ಒಳಗೊಂಡಿದ್ದು, ಅದು ಹೀಗೆ ಅಪನಂಬಿಗಸ್ತನಾದವನಿಗೆ ಈಗಾಗಲೀ ಅಥವಾ ಮುಂದೆಯಾಗಲೀ ಪೆಟ್ಟುಗಳನ್ನು ನೀಡಲಾಗುತ್ತದೆ. ಈ ಪೆಟ್ಟುಗಳನ್ನು ನೀಡುವಲ್ಲಿ ವಂಶಪಾರಂಪರ್ಯವಾದ ಬಲಹೀನತೆಗಳು ಶೋಧನೆಗಳಲ್ಲಿ ವಂಚಿತರಾಗಿರುವುದು ಮೊದಲಾದವುಗಳಿಗೆ ವಿನಾಯಿತಿಯಿರುವುದೆಂಬ ಭರವಸೆ ನಮಗೆ ನೀಡಲಾಗಿದೆ. ಆದಾಮನು (ಪರಿಪೂರ್ಣತೆಯಿಂದ) ಬಿದ್ದುಹೊದುದರ ಪರಿಣಾಮವಾಗಿ ಬಂದಿರುವ ದೋಷಗಳಿಗೆ ನ್ಯಾಯವಾಗಿ ಆರೋಪಿಸಲಾಗುವ ಲೋಪದೋಷಗಳನ್ನು ಕ್ರಿಸ್ತನ ಯಜ್ಞಫಲದ ಮೂಲಕವಾಗಿ ಅಳಿಸಿಬಿಡಲಾಗುವುದು. ಪೆಟ್ಟುಗಳು ಕೇವಲ ಒಬ್ಬ ವ್ಯಕ್ತಿಯ ಸ್ವಂತ ದುರ್ಬಳಕೆಗಳಿಗೆ ಸೀಮಿತವಾಗಿರುವುದು ಮತ್ತು ಸತ್ಯದ ಬೆಳಕಿಗೆ ವಿರೋಧವಾಗಿ ನಡೆಯುವುದು ಪೂರ್ಣ ರೀತಿಯಲ್ಲಿ ಮುಂದುವರಿಸಿದ್ದೇಯಾದಲ್ಲಿ ಅದಕ್ಕಾಗುವ ಶಿಕ್ಷೆಯು ಎರಡನೇ ಮರಣ.

## ಆಯಲ್ಪಡುವ ವಿಧಾನ

ಮೇಲೆ ಹೇಳಿರುವವುಗಳಿಂದ ನಾವು ಗ್ರಹಿಸಿಕೊಳ್ಳುವುದೇನೆಂದರೆ: ಸುವಾರ್ತೆಯ ಪ್ರಕಾಶವು ಎಲ್ಲೆಲ್ಲಿ ಹೊಳೆದಿರುವುದೋ ಅಲ್ಲೆಲ್ಲಾ ಅದೇ ಪ್ರಮಾಣದಲ್ಲಿ ಜವಾಬ್ದಾರಿಯೂ ಸೇರಿ ಬಂದಿರುತ್ತದೆ ಮತ್ತು ಅದು ಹೆಚ್ಚು ಕಡಿಮೆ ಆಯಲ್ಪಡುವ ಸನ್ನಿವೇಶದ ಅನುಸಾರವಾಗಿರುವುದು. ನಮ್ಮ ಕರ್ತನು ಪ್ರಕಟಿಸಿರುವಂತೆ ಯಾರು ಆ ಬೆಳಕಿನಲ್ಲಿ ಕೆಟ್ಟದ್ದನ್ನು ಮನಃಪೂರ್ವಕವಾಗಿ ನಡೆಸುವರೋ ಆ ಮೂಲಕವಾಗಿ ಅವರು ಬೆಳಕಿನ ವಿಷಯದಲ್ಲಿರುವ ತಮ್ಮ ಹಗೆಯ ಮನೋಭಾವವನ್ನು ತೋರ್ಪಡಿಸುವರು. ಮತ್ತು ಅದು ತಮ್ಮಲ್ಲಿರುವ ತಪ್ಪುಗಳನ್ನು

ತೋರ್ಪಡಿಸುವುದೆಂದು ಅರಿತು ಅಂಥವರು ಆ ಬೆಳಕಿನಿಂದ ದೂರವಿರುವರು. ಯಾವ ಪಾಪಗಳು ಅವರಲ್ಲಿರುವುದಾಗಿ ಗುರುತು ಹಚ್ಚಲಾಗುವುದೋ ಅವರು ಅವುಗಳನ್ನು ಕನಿಷ್ಠ ಪಕ್ಷದಲ್ಲಿ ಕೆಲವು ಮಟ್ಟಿನಲ್ಲಿಯಾದರೂ ಪ್ರೀತಿಸಿರುವರು. ಅವರು ಆ ಬೆಳಕನ್ನು ಹಗೆಮಾಡಿ ಅದರಿಂದ ದೂರವಿರುವ ಕಾರಣ ಅವುಗಳು ಅವರಲ್ಲಿರುವ ಕತ್ತಲನ್ನು ಅವರ ತಪ್ಪುಗಳನ್ನು ಅವರ ಪಾಪಗಳನ್ನು ಖಂಡನೆಮಾಡುವುದು. ಪ್ರತಿಯಾಗಿ, ಯಾರು ಆ ಬೆಳಕೆಂಬ ಸತ್ಯವನ್ನು ಸೇವಿಸುವರೋ ಅವರು ಅದನ್ನು ಕಂಡು ಕೊಂಡಂತೆಲ್ಲಾ ಅದರ ಹತ್ತಿರ ಹತ್ತಿರಹತ್ತಿರಕ್ಕೆ ಹೋಗಲು ಸಂತೋಷಿಸುವರು. ತಮ್ಮ ಶಕ್ತ್ಯಾನುಸಾರ ದೇವರ ಚಿತ್ತವನ್ನು ನೆರವೇರಿಸಲು ಯತ್ನಿಸುತ್ತಿರುವುದನ್ನು ತಮ್ಮ ಜೀವಿತದ ಪಥವು ತೋರ್ಪಡಿಸುತ್ತಿರುವುದಾಗಿ ಎಲ್ಲರೂ ತಿಳಿಯಬೇಕೆಂದು ಅವರು ಬಯಸುವರು. ಮತ್ತು ಒಂದು ವೇಳೆ ತಮ್ಮ ನಡವಳಿಕೆಯ ಲ್ಲಿಯಾಗಲೀ ಇಲ್ಲವೇ ತಮ್ಮ ಸಿದ್ಧಾಂತದ ಮೂಲಕವಾಗಲೀ ಕೆಲವು ಸಂಗತಿಗಳು ದೇವರ ಚಿತ್ತಕ್ಕೆ ವಿರೋಧವಾಗಿರುವುದು ತೋರಿಬಂದದ್ದೇ ಆದರೆ ಅದು ಅವರಿಗೆ ತಮ್ಮನ್ನು ತಿದ್ದಿಕೊಳ್ಳಲು ಒಂದು ಅವಕಾಶವಾಗಿರುವುದೆಂದು ಆ ವಿಷಯದಲ್ಲಿಯೂ ಸಹ ಅವರು ಸಂತೋಷವುಳ್ಳವರಾಗಿರುವರು.

ಈ ಆಯ್ದು ಬೇರ್ಪಡಿಸುವ ಕಾರ್ಯವು ಅನ್ಯಜನರ ಮಧ್ಯೆ ನಡೆಯದೆ ಕ್ರೈಸ್ತ ಸಮುದಾಯದಲ್ಲಿ ನಡೆಯುತ್ತಿರುವುದು; ಅದು ವಿಶೇಷವಾಗಿ ಕ್ರೈಸ್ತ ಸಮುದಾಯದ ದೊಡ್ಡ ಗುಂಪಿನ ನಡುವೆ ಇರದೆ ಮುಖ್ಯವಾಗಿ ನಮ್ಮ ಕರ್ತನ ದಿನದಲ್ಲಿ ಯೆಹೂದ್ಯರು ಮಾಡಿದಂತೆ ತಾವು ಕತ್ತಲಿನಿಂದ ಬೆಳಕಿನೆಡೆಗೆ ತಿರುಗಿಕೊಂಡು ತಮ್ಮನ್ನು ದೇವ ಜನರೆಂದು ತೋರ್ಪಡಿಸಿಕೊಳ್ಳುತ್ತಿರುವವರ ಮಧ್ಯದಲ್ಲಿ ಇದು ನಡೆಯುತ್ತಿರುವುದು. ಈ ನಿಜ ಪರಿಸ್ಥಿತಿಯನ್ನು ಅರಿತವರಾಗಿರಲಾಗಿ ನಮ್ಮ ಹೃದಯದ ಮತ್ತು ಜೀವಿತದ ಮೇಲೆ ಬೀಳುತ್ತಿರುವ ದೇವರ ಯೋಜನೆಯ ಪ್ರತಿಯೊಂದು ಬೆಳಕಿನ ಕಿರಣದ ವಿಷಯವಾಗಿ ಉತ್ಸಾಹವುಳ್ಳವರಾಗಿರೋಣ. ಸತ್ಯವನ್ನು ತಿಳಿದು ಅದು ನಮ್ಮನ್ನು ಎಲ್ಲಾ ವಿಧವಾದ ದಾಸತ್ವದೊಳಗಿಂದ ಬಿಡಿಸಿ ಕ್ರಿಸ್ತನಲ್ಲಿರುವ ದೇವರ ಚಿತ್ತಕ್ಕೆ ಹೆಚ್ಚುಹೆಚ್ಚಾಗಿ ಅಧೀನತೆಗೆ ತರುವಂತಾಗವಾಡಲು ಅಧಿಕ ಅಧಿಕವಾಗಿ ಅದನ್ನು ಬಯಸೋಣ. ಬೆಳಕಿನ ಮಕ್ಕಳಾಗಿ ನಾವು ಕತ್ತಲೆಗನುಗುಣವಾದ ನಿಷ್ಪ್ರಯೋಜನಕರ ಕಾರ್ಯಗಳಲ್ಲಿ, ಅದು ಬೋಧನೆಗಳಾಗಲೀ ಇಲ್ಲವೇ ಬೇರೆ ಯಾವುದೇ ಆಗಿರಲಿ, ಅದರಲ್ಲಿ ನಮಗೆ ಯಾವ ಅನ್ಯೋನ್ಯತೆಯೂ ಇರುವುದಿಲ್ಲ. ನಮಗೆ ಬೆಳಕು ಮತ್ತು ಕತ್ತಲು, ಸತ್ಯ ಮತ್ತು ಅಸತ್ಯ, ನೀತಿ ಮತ್ತು ಪಾಪ ಇವುಗಳ ನಡುವೆ ಇರುವ ವ್ಯತ್ಯಾಸಗಳನ್ನು ತೋರಿಸಿ ನಮ್ಮ ದೃಷ್ಟಿಗೆ ಹೆಚ್ಚಾದ ಸ್ಪಷ್ಟೀಕರಣ ನೀಡುವ ದೇವರ ವಾಕ್ಯದ ವಿಷಯವಾಗಿ ಅಧಿಕಾಧಿಕವಾದ ನಿಷ್ಠೆಯುಳ್ಳ ನಮ್ಮ ನಿಲುವನ್ನು ಮುಂದುವರಿಸೋಣ.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ. ಶ. 30, ಪಸ್ಕಹಬ್ಬ | ಯೂದಾಯದ ಐನೋನ್ | ಯೇಸುವಿನ ಶಿಷ್ಯರು ದೀಕ್ಷಾಸ್ನಾನ ಮಾಡಿಸುವುದು, ಯೋಹಾನನು ಕಡಿಮೆಯಾಗುವುದು | -- | -- | -- | 3:22–36 |
| | ತಿಬೇರಿಯ | ಯೋಹಾನನು ಸೆರೆಯಾದುದು, ಯೇಸುವು ಗಲಿಲಾಯಕ್ಕೆ ಹೊರಟುಹೋದುದು. | 4:12; 14:3–5 | 1:14; 6:17–20 | 3:19,20; 4:14 | 4:1–3 |

## ಯೋಹಾನ 3:22–36

ಆ ಮೇಲೆ ಯೇಸು ತನ್ನ ಶಿಷ್ಯರೊಡನೆ ಯೂದಾಯ ದೇಶಕ್ಕೆ ಬಂದು ಅಲ್ಲಿ ಅವರ ಕೂಡ ಇದ್ದು ದೀಕ್ಷಾಸ್ನಾನ ಮಾಡಿಸುತ್ತಿದ್ದನು. ಯೋಹಾನನೂ ಸಲೀಮೂರಿನ ಹತ್ತಿರವಿರುವ ಐನೋನೆಂಬ ಸ್ಥಳದಲ್ಲಿದ್ದು ದೀಕ್ಷಾಸ್ನಾನ ಮಾಡಿಸುತ್ತಿದ್ದನು; ಅಲ್ಲಿ ಬಹಳ ನೀರಿತ್ತು; ಜನರು ಬಂದು ಸ್ನಾನಮಾಡಿಸಿಕೊಳ್ಳುತ್ತಾ ಇದ್ದರು; ಆ ಕಾಲದಲ್ಲಿ ಯೋಹಾನನು ಇನ್ನೂ ಸೆರೆಯಲ್ಲಿ ಹಾಕಲ್ಪಟ್ಟಿರಲಿಲ್ಲ. ಹೀಗಿರಲಾಗಿ ಯೋಹಾನನ ಶಿಷ್ಯರಲ್ಲಿ ಕೆಲವರಿಗೂ ಒಬ್ಬ ಯೆಹೂದ್ಯನಿಗೂ ಶುದ್ಧಾಚಾರವನ್ನು ಕುರಿತು ವಿಚಾರ ನಡೆಯಿತು. ಆಗ ಅವರು ಯೋಹಾನನ ಬಳಿಗೆ ಬಂದು ಅವನಿಗೆ–ಗುರುವೇ, ಯೊರ್ದನ್ ಹೊಳೆಯ ಆಚೆ ನಿನ್ನ ಬಳಿಯಲ್ಲಿದ್ದ ಒಬ್ಬನ ವಿಷಯದಲ್ಲಿ ನೀನು ಸಾಕ್ಷಿಕೊಟ್ಟಿಯಲ್ಲಾ; ಅವನೂ ಸ್ನಾನಮಾಡಿಸುತ್ತಾನೆ, ಅವನ ಬಳಿಗೆ ಎಲ್ಲರೂ ಹೋಗುತ್ತಾರೆ ಎಂದು ಹೇಳಲು ಯೋಹಾನನು–– ಪರಲೋಕದಿಂದ ಅನುಗ್ರಹಿಸೋಣವಾದದ್ದನ್ನೇ ಹೊರತು ಮನುಷ್ಯನು ಹೆಚ್ಚೇನು ಹೊಂದಲಾರನು. ನಾನು ಕ್ರಿಸ್ತನಲ್ಲ. ಆತನ ಮುಂದೆ ಕಳುಹಿಸಲ್ಪಟ್ಟವನಾಗಿದ್ದೇನೆ ಎಂದು ನಾನು ಹೇಳಿದ್ದಕ್ಕೆ ನೀವೇ ಸಾಕ್ಷಿ. ಮದಲಗಿತ್ತಿಯುಳ್ಳವನೇ ಮದಲಿಂಗನು; ಆದರೂ ಮದಲಿಂಗನ ಗೆಳೆಯನು ಅವನ ಹತ್ತರ ನಿಂತುಕೊಂಡು ಅವನ ಮಾತುಗಳನ್ನು ಕೇಳಿ ಮದಲಿಂಗನ ಧ್ವನಿಗೆ ಬಹು ಸಂತೋಷ ಪಡುತ್ತಾನಲ್ಲವೇ. ಇದರಂತೆ ನನಗಿರುವ ಸಂತೋಷ; ಅದು

ನೆರವೇರಿತು. ಆತನು ವೃದ್ಧಿಯಾಗಬೇಕು; ನಾನು ಕಡಿಮೆಯಾಗಬೇಕು ಅಂದನು. ಮೇಲಣಿಂದ ಬರುವವನು ಎಲ್ಲರ ಮೇಲೆ ಇದ್ದಾನೆ; ಭೂಲೋಕದಿಂದ ಹುಟ್ಟಿದವನು ಭೂಲೋಕದವನಾಗಿದ್ದು ಭೂಲೋಕದ ಮಾತನ್ನು ಆಡುತ್ತಾನೆ; ಪರಲೋಕದಿಂದ ಬರುವವನು ಎಲ್ಲರ ಮೇಲೆ ಇದ್ದಾನೆ. ತಾನು ನೋಡಿ ಕೇಳಿದ್ದಕ್ಕೆ ಸಾಕ್ಷಿಕೊಡುತ್ತಾನೆ; ಆದರೆ ಆತನ ಸಾಕ್ಷಿಯನ್ನು ಯಾರೂ ಒಪ್ಪುವುದಿಲ್ಲ. ಆತನ ಸಾಕ್ಷಿಯನ್ನು ಒಪ್ಪಿದವನು ದೇವರು ಸತ್ಯವಂತನೆಂಬ ಮಾತಿಗೆ ಮುದ್ರೆಹಾಕಿದವನಾಗಿದ್ದಾನೆ. ಹೇಗೆಂದರೆ ದೇವರು ಯಾರನ್ನು ಕಳುಹಿಸಿದ್ದಾನೋ ಆತನಿಗೆ ಆತ್ಮವರವನ್ನು ಅಳತೆಮಾಡದೆ ಅನುಗ್ರಹಿಸುವದರಿಂದ ಆತನು ದೇವರ ಮಾತುಗಳನ್ನೇ ಆಡುತ್ತಾನೆ. ತಂದೆಯಾದ ದೇವರು ತನ್ನ ಮಗನನ್ನು ಪ್ರೀತಿಸಿ ಎಲ್ಲವನ್ನೂ ಆತನ ಕೈಯಲ್ಲಿ ಕೊಟ್ಟಿದ್ದಾನೆ. ಆತನ ಮಗನನ್ನು ನಂಬುವವನಿಗೆ ನಿತ್ಯಜೀವ ಉಂಟು; ಮಗನಿಗೆ ಒಳಗಾಗದವನು ಜೀವವನ್ನು ಕಾಣುವುದೇ ಇಲ್ಲ; ದೇವರ ಕೋಪವು ಅವನ ಮೇಲೆ ನೆಲೆಗೊಂಡಿರುವದು.

## ಯೋಹಾನ 4:1–3

ಯೇಸು ಯೋಹಾನನಿಗಿಂತ ಹೆಚ್ಚು ಶಿಷ್ಯರನ್ನು ಮಾಡಿಕೊಂಡು ಅವರಿಗೆ ದೀಕ್ಷಾಸ್ನಾನ ಮಾಡಿಸುತ್ತಾನೆಂಬ ಸುದ್ದಿಯನ್ನು ಫರಿಸಾಯರು ಕೇಳಿದರೆಂದು ಕರ್ತನಿಗೆ ತಿಳಿದಾಗ ಆತನು ಯೂದಾಯವನ್ನು ಬಿಟ್ಟು ಗಲಿಲಾಯಕ್ಕೆ ತಿರಿಗಿ ಹೋದನು. (ಆದರೊ ಸ್ನಾನಮಾಡಿಸುತ್ತಿದ್ದವನು ಯೇಸುವಲ್ಲ; ಅತನ ಶಿಷ್ಯರೇ ಮಾಡಿಸುತ್ತಿದ್ದರು.)

## ಮತ್ತಾಯ 4:12

ಯೋಹಾನನು ಸೆರೆಗೆ ಬಿದ್ದನೆಂದು ಯೇಸು ಕೇಳಿ ಆ ಸ್ಥಳವನ್ನು ಬಿಟ್ಟು ಗಲಿಲಾಯ ಸೀಮೆಗೆ ಹೊರಟು ಹೋದನು. (14:3–5) ಹೆರೋದನು ಹೆರೋದ್ಯಳ ನಿಮಿತ್ತ ಯೋಹಾನನನ್ನು ಹಿಡಿದು ಕಟ್ಟಿಸಿ ಸೆರೆಯಲ್ಲಿ ಹಾಕಿಸಿದ್ದನು. ಆ ಹೆರೋದ್ಯಳು ಹೆರೋದನ ಅಣ್ಣನಾದ ಫಿಲಿಪ್ಪನ ಹೆಂಡತಿ. ಯೋಹಾನನು ಹೆರೋದನಿಗೆ––ನೀನು ಇವಳನ್ನು ಇಟ್ಟುಕೊಂಡಿರುವದು ಧರ್ಮವಲ್ಲವೆಂದು ಹೇಳುತ್ತಿದ್ದನು. ಹೆರೋದನು ಅವನನ್ನು ಕೊಲ್ಲಿಸಬೇಕೆಂದಿದ್ದರೂ ಜನರು ಅವನನ್ನು ಪ್ರವಾದಿಯೆಂದು ಎಣಿಸಿದ್ದರಿಂದ ಅವರಿಗೆ ಭಯಪಟ್ಟು (ಕೊಲ್ಲಿಸಲಿಲ್ಲ.)

## ಮಾರ್ಕ 1:14–15

ಯೋಹಾನನು ಸೆರೆಗೆ ಬಿದ್ದ ಮೇಲೆ ಯೇಸು ಗಲಿಲಾಯ ಸೀಮೆಗೆ ಬಂದು–ಕಾಲ ಪರಿಪೂರ್ಣವಾಯಿತು, ದೇವರ ರಾಜ್ಯ ಸಮೀಪಿಸಿತು, ದೇವರ ಕಡೆಗೆ ತಿರುಗಿಕೊಂಡು ಸುವಾರ್ತೆಯನ್ನು ನಂಬಿರಿ ಎಂದು ದೇವರ ಸುವಾರ್ತೆಯನ್ನು ಸಾರಿ ಹೇಳಿದನು. (6:17–20) ಹೆರೋದನು ತಾನು ಇಟ್ಟುಕೊಂಡಿದ್ದ ಹೆರೋದ್ಯಳ ನಿಮಿತ್ತ ಯೋಹಾನನ್ನು ಹಿಡಿತರಿಸಿ ಸೆರೆಯಲ್ಲಿ ಕಟ್ಟಿಹಾಕಿಸಿದ್ದನು. ಆ ಹೆರೋದ್ಯಳು ಹೆರೋದನ ಅಣ್ಣನಾದ ಫಿಲಿಪ್ಪನ ಹೆಂಡತಿ. ಯೋಹಾನನು ಹೆರೋದನಿಗೆ––ನಿನ್ನ ಅಣ್ಣನ ಹೆಂಡತಿಯನ್ನು ಇಟ್ಟುಕೊಂಡಿರುವದು ಧರ್ಮವಲ್ಲವೆಂದು ಹೇಳುತ್ತಿದ್ದನು. ಇದಕ್ಕೆ ಹರೋದ್ಯಳು ಅವನ ಮೇಲೆ ದ್ವೇಷವಿಟ್ಟುಕೊಂಡು ಅವನನ್ನು ಕೊಲ್ಲಿಸಬೇಕೆಂದಿದ್ದರೂ ಆಗದೆಹೋಯಿತು. ಹೆರೋದನು ಯೋಹಾನನು ನೀತಿವಂತನೆಂದೂ ದೇವಭಕ್ತನೆಂದೂ ತಿಳಿದು ಅಂಜಿಕೊಂಡು ಅವನಿಗೆ ಯಾವ ಅಪಾಯವೂ ಬಾರದಂತೆ ಇಟ್ಟಿದ್ದನು. ಇದಲ್ಲದೆ ಯೋಹಾನನು ಹೇಳಿದ್ದನ್ನು ಅವನು ಕೇಳಿದಾಗ ಮನಸ್ಸಿನಲ್ಲಿ ಬಹು ಗಲಿಬಿಲಿ ಹುಟ್ಟಿದರೂ ಅವನ ಮಾತನ್ನು ಸಂತೋಷದಿಂದ ಕೇಳುತ್ತಿದ್ದನು.

## ಲೂಕ 3:19–20

ಆದರೆ ಉಪರಾಜನಾದ ಹೆರೋದನು ತನ್ನ ಅಣ್ಣನ ಹೆಂಡತಿಯಾದ ಹೆರೋದ್ಯಳ ನಿಮಿತ್ತವಾಗಿಯೂ ತಾನು ಮಾಡಿದ್ದ ಎಲ್ಲಾ ದುಷ್ಕೃತ್ಯಗಳ ನಿಮಿತ್ತವಾಗಿಯೂ ಯೋಹಾನನಿಂದ ಗದರಿಸಲ್ಪಟ್ಟವನಾಗಿ ಅವನನ್ನು ಸೆರೆಮನೆಯಲ್ಲಿ ಹಾಕಿಸಿ ತನ್ನ ದುಷ್ಕೃತ್ಯಗಳ ಲೆಕ್ಕವನ್ನು ಇನ್ನೂ ಹೆಚ್ಚಿಸಿದನು. (4:14) ತರುವಾಯ ಯೇಸು ಪವಿತ್ರಾತ್ಮ ಶಕ್ತಿಯಿಂದ ಕೂಡಿದವನಾಗಿ ತಿರಿಗಿ ಗಲಿಲಾಯಕ್ಕೆ ಹೋದನು; ಆತನ ಸುದ್ದಿಯು ಸುತ್ತಲಿರುವ ಪ್ರಾಂತ್ಯದಲ್ಲೆಲ್ಲಾ ಹಬ್ಬಿಕೊಂಡಿತು.

# ಗಲಿಲಾಯದ ಪ್ರವಾದಿ

**ರಿಪ್ರಿಂಟ್ಸ್, ಪುಟ 4556**

## ಯೋಹಾನ 3:1–21

**"ಕತ್ತಲಲ್ಲಿ ವಾಸಿಸಿದ ಈ ಸೀಮೆಗಳ ಜನರಿಗೆ ದೊಡ್ಡ ಬೆಳಕು ಕಾಣಿಸಿತು" –ಮತ್ತಾಯ 4:16.**

ಪಾಲೆಸ್ತೀನಾ ದೇಶವು (ಯೇಸುವಿನ) ಮೊದಲನೆ ಬರುವಿಕೆಯ ಸಮಯದಲ್ಲಿ ನಾಲ್ಕು ಪ್ರಾಂತ್ಯಗಳಿಂದ ಕೂಡಿತ್ತು. ಯೂದಾಯವು ಮುಖ್ಯವಾಗಿದ್ದು ಸಮಾರ್ಯವು ಉತ್ತರಕ್ಕೂ ಪೆರೀಯವು ಪೂರ್ವಕ್ಕೂ ಗಲಿಲಾಯವು ಸಮಾರ್ಯದ ಹಿಂದೆ ಇನ್ನೂ ಉತ್ತರದಲ್ಲಿತ್ತು. ಯೇಸುವು ಯೂದಾಯದಲ್ಲಿ ಉಪದೇಶಮಾಡಿ ಅಲ್ಲಿ ಕೆಲವು ಮಹತ್ಕಾರ್ಯಗಳನ್ನು ಮಾಡಿದ್ದನು; ಮತ್ತು ಪೆರೀಯದಲ್ಲಿಯೂ. ಆತನ ಪ್ರಮುಖವಾದ ಸೇವೆಯು ಗಲಿಲಾಯದಲ್ಲಿತ್ತು; ಹೀಗಾಗಿ ಅವನೂ ಮತ್ತು ಅವನ ಶಿಷ್ಯರೂ ಗಲಿಲಾಯುದವರೆಂದು ತಿಳಿಯುಲಾಗಿತ್ತು. ಬೆತ್ಲೇಹೇಮಿನಲ್ಲಿ ಹುಟ್ಟಿದ್ದರೂ ಆತನು ನಜರೇತಿನಲ್ಲಿ ಬೆಳೆದನು,

"ಅವನಿಗೆ ನಜರಾಯನೆಂಬ ಹೆಸರು ಬಂತು"—ಅವನಿಗೆ "ದಾವೀದ ನಗರದವನೆಂಬ" ಗೌರವವು ಇಲ್ಲದೇ ಹೋದರೂ "ಅ ಕೆಟ್ಟ ಹೆಸರಿನ ಪಟ್ಟಣದವನೆಂಬ" ಅಪ್ರಿಯವಾದ ಹೆಸರು ಬಂದಿತು. ಲೂಕ 23:5–6, 49,55 ಇವುಗಳನ್ನು ಹೋಲಿಸಿ ನೋಡಿ. ಹೀಗೆ ನಮ್ಮ ಕರ್ತನ ಬಹು ಪಾಲಿನ ಅದ್ಭುತ ಕಾರ್ಯಗಳು ಮತ್ತು ಬೋಧನೆಗಳು ಗಲಿಲಾಯದವರಿಗಾಗಿತ್ತು. ಮತ್ತು ಯೂದಾಯದಲ್ಲಿನ ಆತನ ಪ್ರಮುಖವಾದ ಸೇವೆಗಳು ಆತನು ವರುಷದಲ್ಲಿ ಪಸ್ಕಹಬ್ಬದ ಮತ್ತು ಪರ್ಣಶಾಲೆಹಬ್ಬದ ಸಂಬಂಧವಾದ ಭೇಟಿಯ ಸಮಯಗಳಲ್ಲಿ ಇರುತ್ತಿದ್ದವು. ಸಮಾರ್ಯದ ವಿಷಯವಾಗಿ ಹೇಳುವುದೆಂದರೆ, ಅದರ ಜನರು ಯೆಹೂದ್ಯ ಸಂತತಿಯಲ್ಲಿ ಮಿಶ್ರಿತವಾಗಿ ಹುಟ್ಟಿದ ಅನ್ಯಜನಗಳಾಗಿದ್ದರು. ಯೇಸುವು ತನ್ನ ಶಿಷ್ಯರಿಗೆ ಆ ಪ್ರಾಂತದಲ್ಲಿ ಉಪದೇಶ ಮಾಡಬಾರದೆಂದು ಎಚ್ಚರಿಕೆ ನೀಡಿದ್ದನು, "ಅನ್ಯಜನಗಳ ಕಡೆಗೆ ಹೋಗಬೇಡಿರಿ; ಸಮಾರ್ಯದ ಊರೊಳಗೆ ಕಾಲಿಡಬೇಡಿರಿ; ಇವರನ್ನು ಬಿಟ್ಟು ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲನ ಮನೆತನದವರ ಬಳಿಗೆ ಹೋಗಿರಿ." (ಮತ್ತಾಯ 10:5,6) ಗಲಿಲಾಯದವರು ಯೂದಾಯದವರಿಂದ ತಮ್ಮ ಕುಲದಲ್ಲಿ ಹುಟ್ಟಿದ ಕೀಳುಜನರೆಂಬ ಕೀಳಾದ ಭಾವನೆಯಿಂದ ಕಾಣಲ್ಪಡುತ್ತಿದ್ದರು. "ನಜರೇತಿನಿಂದ ಏನಾದರೂ ಒಳ್ಳೆಯದು ಬರುವದುಂಟೇ?" ಎಂಬ ಮಾತು ಗಲಿಲಾಯವೆಲ್ಲಕ್ಕೂ ಅನ್ವಯವಾಗಿತ್ತು.

ಸುವಾರ್ತೆಯ ಪ್ರಕಾಶವು ಮೊದಲು ಗಲಿಲಾಯದಲ್ಲಿ ಹೊಳೆಯಬೇಕೆಂದು ಯೆಶಾಯನ ಪ್ರವಾದನೆಯ ಮೂಲಕವಾಗಿ ತಿಳಿಸಲಾಗಿದೆ, "ಕತ್ತಲಲ್ಲಿ ವಾಸಿಸಿದ ಈ ಸೀಮೆಗಳ ಜನರಿಗೆ ದೊಡ್ಡ ಬೆಳಕು ಕಾಣಿಸಿತು; ಕಾರ್ಗತ್ತಲಾದ ದೇಶದಲ್ಲಿದ್ದವರಿಗೆ ಸೂರ್ಯೋದಯವಾಯಿತು." ಪ್ರವಾದಿಯು ಗಲಿಲಾಯ ಸಮುದ್ರದ ಸುತ್ತಲಿರುವ ಇಸ್ರಾಯೇಲಿನ ಹನ್ನೆರಡು ಕುಲಗಳಲ್ಲಿ ಎರಡು ಕುಲಗಳಾದ ಜೆಬುಲೂನ್ ಮತ್ತು ನಫ್ತಾಲೀ ಕುಲಗಳನ್ನು ಹೆಸರಿಸಿದ್ದಾನೆ. ಗಲಿಲಾಯ ಎನ್ನುವ ಶಬ್ಧವು ಸುತ್ತಾಕಾರವನ್ನು ಸೂಚಿಸುತ್ತದೆ. ಅದುದರಿಂದ ಈ ಪ್ರವಾದನೆಯಲ್ಲಿ ಅಡಕವಾಗಿರುವುದು ಈ ಭೂಮಿಯು ಅನ್ಯಜನರಿಂದ ಸುತ್ತುವರಿಯಲ್ಪಟ್ಟಿರುವುದೆನ್ನುವುದು. ಮತ್ತು ಅದು ಹಾಗೆಯೇ ಇತ್ತು; ಸಮಾರ್ಯರು ಇದರ ದಕ್ಷಿಣದಲ್ಲಿದ್ದು ಇದನ್ನು ಯೂದಾಯದಿಂದ ಬೇರ್ಪಡಿಸಲಾಗಿತ್ತು. ಅದರ ಜನರು ಹೀಗೆ ತಮ್ಮ ಕಾಲದಲ್ಲಿನ ಶ್ರೇಷ್ಠವಾದ ಧಾರ್ಮಿಕ ಕೇಂದ್ರದಿಂದ ಬೇರ್ಪಟ್ಟಿದ್ದವರಾಗಿ ತಮ್ಮ ಸಹೋದರರಲ್ಲಿದ್ದುದಕ್ಕಿಂತಲೂ ಗಾಢವಾದ ಕತ್ತಲಿನಲ್ಲಿದ್ದರು. ಅದು ಅನ್ಯಜನರ ಮೇಲಿದ್ದ ಮರಣಾಂಧಕಾರದ ನೆರಳು. ಹೀಗಿದ್ದರೂ ಈ ಕಾರಣಕ್ಕಾಗಿಯೇ ಅವರು ಹೆಚ್ಚು ಧಾರ್ಮಿಕರೂ ಹೆಚ್ಚು ತಿಳುವಳಿಕೆಯುಳ್ಳವರೂ ಮತ್ತು ಹೆಚ್ಚು ಯಾಜಕರಿಂದ ಆವೃತರಾದ ಯೂದಾಯದ ಹಲವು ಸಹೋದರರಿಗಿಂತಲೂ ಅವರು ಯೇಸುವಿನ ಬೋಧನೆ ಹೊಂದಲು ಹೆಚ್ಚು ಅನುಕೂಲಕರವಾದ ಸ್ಥಿತಿಯಲ್ಲಿದ್ದರು.

ಗಲಿಲಾಯದ ಮುಖ್ಯ ಪಟ್ಟಣಗಳಾದ ಕಪೇರ್ನೌಮ್, ಬೇತ್ಸಾಯಿದ, ಖೋರಾಜಿನ್ ಮತ್ತು ನಜರೇತ್ ಎಂಬಲ್ಲಿ ಅಧಿಕವಾಗಿ ಹೊಳೆಯಲಾದ ಆ ದೊಡ್ಡ ಬೆಳಕು ಈ ಸ್ಥಳಗಳನ್ನು ಸಾಂಕೇತಿಕವಾಗಿ, ಅವುಗಳ ಮೇಲೆ ವಿಶೇಷ ಗೌರವ ಸೌಭಾಗ್ಯಗಳನ್ನು ತಂದಿರುವ ಅರ್ಥದಲ್ಲಿ, ಪರಲೋಕಕ್ಕೆ ಏರಿಸಿತ್ತು. ಆದರೆ ಅವರು ಸುವಾರ್ತೆಯನ್ನು ಸ್ವೀಕರಿಸದ ಕಾರಣ ಇದಕ್ಕೆ ಪ್ರತಿಯಾಗಿ ನರಕವೆಂಬ ಪಾತಾಳಕ್ಕೆ ದೊಬ್ಬಲ್ಪಟ್ಟರು. (ಮತ್ತಾಯ 11:20–24) ಆ ಬೆಳಕು ಕತ್ತಲಲ್ಲಿ ಹೊಳೆದು ಆಶೀರ್ವದಿಸಿ "ಆಯಲ್ಪಟ್ಟವರಾದ" ಕೆಲವರನ್ನು ಒಟ್ಟುಗೂಡಿಸಿ, ಈ ಸುವಾರ್ತಾ ಯುಗದ ಪರ್ಯಂತರವಾಗಿ ನಡೆಯುತ್ತಿರುವ ಹಾಗೆ, ಇತರರನ್ನೂ ಆಶೀರ್ವದಿಸಿ ಒಟ್ಟುಗೂಡಿಸಲು ಮುಂದುವರಿಯುತ್ತಿರುವುದು. ಸರ್ವಲೋಕವನ್ನು ಇನ್ನೂ ಅಧಿಕವಾದ ಜ್ಞಾನ ಪ್ರಕಾಶಕ್ಕೆ ತರುವ ಸಮಯವು ಇನ್ನೂ ಮುಂದಿರುವುದು. ಸಾವಿರ ವರುಷದ ಉದಯದಲ್ಲಿ ವಿಮೋಚಕನು ಮತ್ತು ಆಯಲ್ಪಟ್ಟವರಾದ ಆತನ ಸಭೆಯು ಇಸ್ರಾಯೇಲ್ಯರು ಹಾಗೂ ಸಮಸ್ತ ಲೋಕದ ಜನರನ್ನು ಜ್ಞಾನಪ್ರಕಾಶಕ್ಕೆ ತಂದು ಆಶೀರ್ವದಿಸಲು ಸ್ವಸ್ಥತೆಯೆಂಬ ಕಿರಣಗಳನ್ನುಳ್ಳ ನೀತಿಸೂರ್ಯನಾಗಿ ಹೊಳೆಯುವರು. ಇದರಲ್ಲಿ ನರಕವೆಂಬ ಗೋರಿಗಳಲ್ಲಿ ಸೇರಿ ಮರಣದಸ್ಥಿತಿಗೆ ಇಳಿದು ಹೋಗಿರುವ ಕೋಟ್ಯಾಂತರ ಜನರೂ ಸೇರಿರುವರು.

## ಆ ರಾಜ್ಯವು ಸಮೀಪವಾಯಿತು

ಅನ್ಯಜನರೊಡನೆ ನಿಕಟವಾದ ಸಂಪರ್ಕ ಹೊಂದಿರುವ ಗಲಿಲಾಯದ ಯೆಹೂದ್ಯರು ಬಹಳ ಕಾಲದಿಂದಲೂ ವಾಗ್ದಾನ ಮಾಡಲ್ಪಟ್ಟ ದೇವರ ರಾಜ್ಯದ ಅಗತ್ಯವಿರುವುದನ್ನು ಕಾಣಲು ಸಿದ್ಧರಿದ್ದು ಅವರು ಯೂದಾಯದ ಯೆಹೂದ್ಯರಿಗಿಂತಲೂ ಹೆಚ್ಚಾಗಿ ಅದಕ್ಕೆ ಲಕ್ಷ್ಯಕೊಡಲು ತಮ್ಮನ್ನು ಸಿದ್ಧಮಾಡಿಕೊಂಡಿದ್ದರು. ಈ ಎರಡನೆಯವರು ದೇವಾಲಯದಲ್ಲಿ ನಡೆಯುವ ಆಡಂಬರದ ಆಚಾರವಿಧಿಗಳ, ಭವ್ಯ ವಸ್ತ್ರಧಾರಿಗಳಾದ ಲೌಕಿಕವಾದ ಯಾಜಕರುಗಳ ಹಾಗೂ ಸೊಲೋಮೋನನ ದೇವಾಲಯಕ್ಕಿಂತಲೂ ವೈಭವಯುತವಾದ ದೇವಾಲಯದ ಸಂಪರ್ಕದ ದೆಸೆಯಿಂದ ತಾವು ಆತ್ಮಿಕ ರಾಜ್ಯದ ಪ್ರಸ್ತಾಪಕ್ಕೆ ಕಿವಿಗೊಡಲು ಅಲ್ಪ ಒಲವು ಉಳ್ಳವರಾಗಿದ್ದರು. ಈ ಎರಡನೆಯವರಿಗೆ (ಯೂದಾಯದ ಯೆಹೂದ್ಯರಿಗೆ) ತಮ್ಮ ಧಾರ್ಮಿಕವ್ಯವಸ್ಥೆಯಲ್ಲಿ ಬಹಿರಂಗ ರೀತಿಯಲ್ಲಿ ಆಡಂಬರವಾಗಿ ಏಳಿಗೆಯಾಗುವುದು ಒಂದು ಭ್ರಾಂತಿಯಾಗಿಯೂ ಒಂದು ಆಮಿಷವಾಗಿಯೂ ಇದ್ದು ಅವರಿಗೆ ಇವುಗಳು (ಆ ಆತ್ಮಿಕ ರಾಜ್ಯವನ್ನು ಕಾಣಲು) ಅಡ್ಡಿಯುಂಟುಮಾಡಿದ್ದವು. ಈ ವಿಷಯಗಳು ಯಾವಾಗಲೂ ಹೀಗೆಯೇ. ದೇವರ ಕೃಪೆಯ ವಿಷಯವಾದ ವಾರ್ತೆಯು ಬಡವರೂ ತಿರಸ್ಕಾರ ಹೊಂದಿದವರೂ ಆಗಿರುವವರೊಳಗೆ ತನಗೆ ಕಿವಿಗೊಡುವ ಕೆಲವು ನಿಷ್ಠಾವಂತ ಮಿತ್ರರನ್ನು ಕಂಡುಕೊಂಡಿದೆ. ಅದಲ್ಲದೆ ಕಪೇರ್ನೌಮ್ ಪಟ್ಟಣವು ಅನ್ಯಜನಗಳ ಜಗತ್ತಿನೊಡನೆ, ಅವರ ಒಳ್ಳೆಯ ಹಾಗೂ ಕೆಟ್ಟವಿಷಯಗಳಲ್ಲಿ, ಯೆರೂಸಲೇಮಿಗಿಂತಲೂ ಹೆಚ್ಚು ನಿಕಟವಾದ ಬಳಕೆಯಲ್ಲಿತ್ತು.

ಅಬ್ರಹಾಮನ ಸಂತತಿಯವರಿಗೆ ದೇವರ ರಾಜ್ಯವನ್ನು ಔಪಚಾರಿಕವಾಗಿ ನೀಡಲು ಯೇಸುವು ಪ್ರತ್ಯಕ್ಷನಾಗಿದ್ದನೆಂಬ ಅರ್ಥದಲ್ಲಿ ಪರಲೋಕರಾಜ್ಯವು (ಅವರಿಗೆ) ಸಮೀಪವಾಗಿತ್ತು. ಅವರು ಆ ಅರಸನನ್ನು ತಿರಸ್ಕರಿಸಿದಾಗ ಆ ರಾಜ್ಯವನ್ನೂ

ತಿರಸ್ಕರಿಸಿದ್ದರು. ಹೀಗಿರಲು ಯಾರು ಆತನನ್ನು ಅಂಗೀಕರಿಸಿದರೋ ಅವರು ಆಶೀರ್ವದಿಸಲ್ಪಟ್ಟು ಈ ಹಿಂದೆಯೇ ಉದ್ದೇಶಿಸಿ ವಾಗ್ದಾನ ಮಾಡಲ್ಪಟ್ಟಂತೆ ಅವರು ಅತನ ಆತ್ಮಿಕ ರಾಜ್ಯದ ಕೇಂದ್ರ ಭಾಗದವರಾದರು. ಆನಂತರದಲ್ಲಿ ನಂಬಿ ಪ್ರತಿಷ್ಠಿತರಾಗುವವರ ಸಂಖ್ಯೆಯು ಪೂರ್ಣವಾಗಲು ಅನ್ಯಜನರಿಂದ ಕರೆಯಲ್ಪಡುತ್ತಿರುವರು. ಒಂದೇ ಮಾತಿನಲ್ಲಿ ಹೇಳುವುದಾದರೆ, ದೇವರ ಏರ್ಪಾಟು ಏನೆಂದರೆ ಯೇಸುವಿಗೆ ತನ್ನ ರಾಜ್ಯಕ್ಕೆ ಸಹಕಾರಿಗಳಾಗಲು ಮೊದಲು "ರಾಜವಂಶಸ್ತರಾದ ಯಾಜಕರು" ಎನ್ನಿಸಿಕೊಳ್ಳುವ ಒಂದು ಆತ್ಮಿಕ ವರ್ಗವನ್ನು ಆದುಕೊಂಡು ಆನಂತರ ಈ (ಸುವಾರ್ತಾ) ಯುಗದ ಅಂತ್ಯದಲ್ಲಿ ಬಲದಿಂದಲೂ ಮಹಾ ಪ್ರಭಾವದೊಡನೆಯೂ ಆ ಆತ್ಮಿಕ ರಾಜ್ಯವನ್ನು ಸ್ಥಾಪಿಸುವುದು ಮತ್ತು ಅದರಲ್ಲಿ ಇಸ್ರಾಯೇಲ್ಯರಿಗೆ ವಿಶೇಷವಾದ ಜ್ಞಾನಪ್ರಕಾಶ ಮತ್ತು ಅವಕಾಶ ನೀಡಿ ಆಶೀರ್ವದಿಸುವುದು ಹಾಗೂ ಅವರ ಮೂಲಕ ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸುವುದು.

ತನ್ನ ಹಿಂಬಾಲಕರಾಗಿ "ಆದುಕೊಳ್ಳತಕ್ಕವರನ್ನು" ಕರೆಯಲ್ಪಡುವ ಕಾರ್ಯದಲ್ಲಿ ತನ್ನೊಡನೆ ಜೊತೆಗೂಡಿ ಹಾಗೂ ನಂಬಿಗಸ್ತರಾಗಿದ್ದಲ್ಲಿ ಮುಂದೆ ಆ "ಆದುಕೊಂಡವರಲ್ಲಿ" ಭಾಗಿಗಳಾಗಿ ತನ್ನೊಡನೆ ಸಿಂಹಾಸನದಲ್ಲಿ ಕುಳಿತುಕೊಳ್ಳಲು ಮೀನುಗಾರರಾದ ಪೇತ್ರ ಅಂದ್ರೆಯರು ಮತ್ತು ಯಾಕೋಬ ಯೋಹಾನರು ಆ ದೊಡ್ಡ ಪ್ರವಾದಿಯಿಂದ ಆಹ್ವಾನಿಸಲ್ಪಟ್ಟರು. ಆತನನ್ನು ಹಿಂಬಾಲಿಸಲು ಅವರು ತಮ್ಮದೆಲ್ಲವನ್ನು ಬಿಟ್ಟುಬಿಟ್ಟರು. ಇವು ಆತನ ನಿಬಂಧನೆಗಳಾಗಿದ್ದವು, "ಯಾವನಾದರೂ ನನ್ನ ಶಿಷ್ಯನಾಗಬೇಕೆಂದಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ." ಈ ರೀತಿಯಲ್ಲಿ ಸತ್ಯದ ವಿಷಯದಲ್ಲಿ ಪ್ರಮುಖ ಸೇವಕರಾಗಲು ಈ ಸುವಾರ್ತಾಯುಗದ ಪರ್ಯಂತರ ತನ್ನ ಎಲ್ಲಾ ಶಿಷ್ಯರಿಗೂ ಈ ಅವಕಾಶದ ಬಾಗಿಲನ್ನು ತೆರೆಯಲಿಲ್ಲ. ಆದರೂ ಆತನ್ನು ಹಿಂಬಾಲಿಸಲು ತಮ್ಮದೆಲ್ಲವನ್ನು ಬಿಟ್ಟುಬಿಟ್ಟವರನ್ನು ಹೊರತು ಮತ್ತಾರನ್ನೂ ಅತನು ತನ್ನ ಶಿಷ್ಯರನ್ನಾಗಿ ಅಂಗೀಕರಿಸುವುದಿಲ್ಲ. ಆತನನ್ನು ಹಿಂಬಾಲಿಸಲು ಅವರು ತಮ್ಮ ಹೃದಯಗಳಲ್ಲಿ ತಮಗಿರುವುದೆಲ್ಲವಂಥದನ್ನು ಬಿಟ್ಟುಬಿಡಬೇಕು. ಅವರು ಶಿಷ್ಯತನ ಹಾಗೂ ಸ್ವಾರ್ಥ–ತ್ಯಾಗದ ಮನೋಭಾವವನ್ನು ಹೊಂದಿರುವರು ಮತ್ತು ತಮಗೆ ಅವಕಾಶದ ಬಾಗಿಲು ನಿಜವಾಗಿಯೂ ತೆರೆದಲ್ಲಿ ಅವರು ತಮ್ಮದೆಲ್ಲವನ್ನು ಸಂತೋಷವಾಗಿ ಬಿಟ್ಟುಕೊಡುವರು.

ಯೇಸುವಿನ ಅಪೋಸ್ತಲರ ಉಪದೇಶವೂ ಸಹ ಆತನ ರೀತಿಯದ್ದೇ ಆಗಿತ್ತು. ಅದು "ಆ ರಾಜ್ಯದ ವಿಷಯವಾದ ಸುವಾರ್ತೆ (ಶುಭವಾರ್ತೆ)." ಆತನು ತನ್ನ ಅಪೋಸ್ತಲರಿಗೆ ತಾನು ಉಪಯೋಗಿಸಿದ ರೋಗದ ಮೇಲಿನ ಅದೇ ಅಧಿಕಾರವನ್ನು ಕೊಟ್ಟಿದ್ದನು. ಅದು ದೆವ್ವಗಳನ್ನು ಹೊರಡಿಸುವ ಅಧಿಕಾರವೂ ಸಹ ಒಳಗೊಂಡಿತ್ತು. ಈ ಅದ್ಭುತ ಕಾರ್ಯಗಳು ಕೇವಲ ಆ ಪ್ರವಾದಿಯ ಮತ್ತು ಆತನ ಉಪದೇಶದ ಕಡೆಗೆ ಗಮನವನ್ನು ಸೆಳೆಯುವಕ್ಕಾಗಿದ್ದವು. ರೋಗಿಗಳೆಲ್ಲರನ್ನು ವಾಸಿಮಾಡುವ ಇಲ್ಲವೇ ಸತ್ತವರೆಲ್ಲರನ್ನು ಎಬ್ಬಿಸುವ ಉದ್ದೇಶವಿರಲಿಲ್ಲ. ಆದರೆ ಆ ಅದ್ಭುತ ಕಾರ್ಯಗಳು ಆ ರಾಜ್ಯವು ಸ್ಥಾಪನೆಯಾದಾಗ ಮನುಷ್ಯರ ನಡುವೆ ಉಂಟಾಗುವ ಪ್ರಭಾವಪೂರಿತವಾದ ಆಶೀರ್ವಾದಗಳನ್ನು ಮುಂದಾಗಿ ಪ್ರಕಟಿಸುವಂಥವುಗಳಾಗಿದ್ದವು.–ಯೋಹಾನ 2:11.

ಹೀಗೆ ಯೇಸುವಿನ ಕೀರ್ತಿಯು ಹರಡಿಕೊಂಡಿತು. ರೋಗಿಗಳು ಆತನ ಬಳಿಗೆ ತರಲ್ಪಟ್ಟು ಸ್ವಸ್ಥರಾದರು. ಮತ್ತು ಆತನ ಶಿಷ್ಯರಲ್ಲಿ ಪಾಲೆಸ್ತೀನಾ ದೇಶದ ಎಲ್ಲಾ ಪ್ರಾಂತಗಳಲ್ಲಿನ ಭಕ್ತ ಜನರು ಕಂಡುಬಂದರು. ನಿಜವಾಗಿಯೂ ರಾತ್ರಿಯ ಕತ್ತಲಿನಲ್ಲಿದ್ದ ಗಲಿಲಾಯದವರಿಗೆ ತಮ್ಮ ಮಧ್ಯದಲ್ಲಿ ಹೊಳೆದ ಆ ದೊಡ್ಡ ಬೆಳಕಿನಿಂದ ಆಶಿರ್ವಾದವಾಯಿತು. ಆದರೆ, ಸತ್ಯದ ವಿಷಯದಲ್ಲಿ ಯಾವಾಗಲೂ ನಡೆಯುವಂತೆ, ಅವರಿಗೆ ಆ ಬೆಳಕಿನ ಮೂಲಕವಾಗಿ ಪರೀಕ್ಷೆಯಾಯಿತು. ಕೆಲವೇ ಕೆಲವರಾದ ಬೆಳಕಿನ ಮಕ್ಕಳು ಕಂಡುಬಂದವರಾಗಿ ಅವರು ಅಂಧಕಾರದಲ್ಲಿರುವ ಮಕ್ಕಳಿಂದ ಅಂದರೆ ಅವಿಧೇಯ ಮಕ್ಕಳಿಂದ ಬೇರ್ಪಟ್ಟರು. ಇದರಂತೆಯೇ ಈ ದಿನದಲ್ಲಿ ನಾವುಗಳು. ಈಗ ದೇವರ ವಾಕ್ಯದ ಮೇಲೆ ಹೊಳೆಯುತ್ತಿರುವ ವಿಶೇಷವಾದ ಬೆಳಕಿನಲ್ಲಿ, ಅಂದರೆ ವಿದ್ಯುತ್–ಪ್ರವಾಹದ ಬೆಳಕಿನಲ್ಲಿ, ಹೆಚ್ಚಾದ ಹೊಣೆಗಾರಿಕೆ ಹೊಂದಿದವರಾಗಿ, ನಾವು ಬೆಳಕಿನ ಮಕ್ಕಳಾಗಿ ಅದನ್ನು ಪ್ರತಿಪಾದಿಸುವವರಾಗಿಯೋ ಅಥವಾ ಅಂಧಕಾರದ ಮಕ್ಕಳಾಗಿ ಅದನ್ನು ವಿರೋಧಿಸುವವರಾಗಿಯೋ ನಮ್ಮ ನಿಲುವನ್ನು ತೆಗೆದುಕೊಳ್ಳುವವರಾಗಿದ್ದೇವೆ.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ. ಶ. 30, ಪಸ್ಕಹಬ್ಬ | ಸಮಾರ್ಯದಲ್ಲಿನ ಸುಖರ್ | ಗಲಿಲಾಯಕ್ಕೆ ಹೊರಟು ಹೋಗುವಾಗ ಯೇಸು ಸಮಾರ್ಯದವರಿಗೆ ಬೋಧಿಸಿದುದು | –– | –– | –– | 4:4–43 |

## ಯೋಹಾನ 4:4–43

ಅತನು ಸಮಾರ್ಯ ಸೀಮೆಯನ್ನು ಹಾದು ಹೋಗಬೇಕಾಯಿತು. ಹೋಗುವಾಗ ಸಮಾರ್ಯ ಸೀಮೆಗೆ ಸೇರಿದ ಸುಖರೆಂಬ ಊರಿಗೆ ಬಂದನು. ಆದು ಯಾಕೋಬನು ತನ್ನ ಮಗನಾದ ಯೋಸೇಫನಿಗೆ ಕೊಟ್ಟ ಭೂಮಿಯ ಹತ್ತರದಲ್ಲಿತ್ತು; ಅಲ್ಲಿ ಯಾಕೊಬನು ತೆಗೆಸಿದ ಬಾವಿಯಿತ್ತು. ಯೇಸು ದಾರಿ ನಡೆದು ದಣಿದು ಆ ಬಾವಿಯ ಬಳಿಯಲ್ಲಿ ಹಾಗೆ ಕೂತುಕೊಂಡನು; ಹೆಚ್ಚುಕಡಿಮೆ ಮಧ್ಯಾಹ್ನವಾಗಿತ್ತು. ಆತನ ಶಿಷ್ಯರು ಊಟಕ್ಕೆ ಬೇಕಾದುದನ್ನು ಕೊಂಡುಕೊಳ್ಳುವುದಕ್ಕಾಗಿ ಊರೊಳಗೆ ಹೋಗಿರಲು ಸಮಾರ್ಯದವಳಾದ ಒಬ್ಬ ಹೆಂಗಸು

ನೀರು ಸೇದುವದಕ್ಕೆ ಬಂದಳು. ಯೇಸು ಆಕೆಯನ್ನು–ಅಮ್ಮಾ, ನೀರು ಕುಡಿಯುವುದಕ್ಕೆ ಕೊಡು ಎಂದು ಕೇಳಿದನು. ಯೆಹೂದ್ಯರಿಗೂ ಸಮಾರ್ಯದವರಿಗೂ ಬಳಕೆಯಿಲ್ಲದಿರಲಾಗಿ ಆ ಸಮಾರ್ಯದವಳು ಆತನಿಗೆ––ಯೆಹೂದ್ಯನಾದ ನೀನು ಸಮಾರ್ಯದವಳಾದ ನನ್ನನ್ನು ನೀರು ಬೇಡುವುದು ಹೇಗೆ ಎಂದು ಹೇಳಿದಳು. ಅದಕ್ಕೆ ಯೇಸು––ದೇವರು ಕೊಡುವ ವರವೇನೆಂಬುದೂ ಕುಡಿಯುವದಕ್ಕೆ ನೀರುಕೊಡು ಎಂದು ನಿನಗೆ ಹೇಳಿದವನು ಯಾರೆಂಬುದೂ ನಿನಗೆ ತಿಳಿದಿದ್ದರೆ ನೀನು ಅವನನ್ನು ಬೇಡಿಕೊಳ್ಳುತ್ತಿದ್ದೆ, ಅವನು ನಿನಗೆ ಜೀವಕರವಾದ ನೀರನ್ನು ಕೊಡುತ್ತಿದ್ದನು ಅಂದನು. ಆ ಹೆಂಗಸು ಆತನಿಗೆ–ಅಯ್ಯಾ, ಸೇದುವುದಕ್ಕೆ ನಿನ್ನಲ್ಲಿ ಏನೂ ಇಲ್ಲ, ಬಾವಿ ಆಳವಾಗಿದೆ; ಹೀಗಿರುವಾಗ ಆ ಜೀವಕರವಾದ ನೀರು ನಿನಗೆ ಎಲ್ಲಿಂದ ಬಂತು? ನಮ್ಮ ಹಿರಿಯನಾದ ಯಕೋಬನಿಗಿಂತ ನೀನು ದೊಡ್ಡವನೋ? ಅವನೇ ಈ ಬಾವಿಯನ್ನು ನಮಗೆ ಕೊಟ್ಟವನು; ಅವನೂ ಅವನು ಸಾಕಿದೆಲ್ಲವು ಸಹಿತವಾಗಿ ಇದೇ ಬಾವಿಯ ನೀರು ಕುಡಿದರು ಅನ್ನಲು ಯೇಸು ಆಕೆಗೆ––ಈ ನೀರನ್ನು ಕುಡಿಯುವವರೆಲ್ಲರಿಗೆ ತಿರಿಗಿ ನೀರಡಿಕೆಯಾಗುವುದು; ನಾನು ಕೊಡುವ ನೀರನ್ನು ಕುಡಿದವನಿಗೆ ಎಂದಿಗೂ ನೀರಡಿಕೆಯಾಗುವುದಿಲ್ಲ; ನಾನು ಅವನಿಗೆ ಕೊಡುವ ನೀರು ಅವನಲ್ಲಿ ಉಕ್ಕುವ ಒರತೆಯಾಗಿದ್ದು ನಿತ್ಯಜೀವವನ್ನು ಉಂಟುಮಾಡುವದು ಎಂದು ಹೇಳಿದನು. ಆ ಹೆಂಗಸು––ಅಯ್ಯಾ, ನನಗೆ ಅ ನೀರನ್ನು ಕೊಡು; ಕೊಟ್ಟರೆ ಇನ್ನು ಮೇಲೆ ನನಗೆ ನೀರಡಿಕೆಯಾಗಲಿಕ್ಕಿಲ್ಲ; ನೀರು ಸೇದುವದಕ್ಕೆ ಇಷ್ಟು ದೂರ ಬರಬೇಕಾದದ್ದೂ ಇರುವದಿಲ್ಲ ಅನ್ನಲು ಯೇಸು ಅವಳಿಗೆ––ಹೋಗಿ ನಿನ್ನ ಗಂಡನ್ನು ಇಲ್ಲಿಗೆ ಕರಕೊಂಡು ಬಾ ಎಂದು ಹೇಳಿದನು. ಆದಕ್ಕೆ ಆ ಹೆಂಗಸು––ನನಗೆ ಗಂಡನಿಲ್ಲ ಅಂದಳು. ಯೇಸು ಆಕೆಗೆ – ನನಗೆ ಗಂಡನಿಲ್ಲವೆಂದು ನೀನು ಹೇಳಿದ್ದು ಸರಿಯಾದ ಮಾತು; ನಿನಗೆ ಐದುಮಂದಿ ಗಂಡಂದಿರಿದ್ದರು, ಈಗ ಇರುವವನು ನಿನಗೆ ಗಂಡನಲ್ಲ; ನೀನು ಹೇಳಿದ್ದು ನಿಜವಾದ ಸಂಗತಿ ಅಂದನು. ಆ ಹೆಂಗಸು ಆತನಿಗೆ––ಅಯ್ಯಾ, ನೀನು ಪ್ರವಾದಿಯೆಂದು ನನಗೆ ಕಾಣುತ್ತದೆ. ನಮ್ಮ ಹಿರಿಯರು ಈ ಬೆಟ್ಟದಲ್ಲಿ ಆರಾಧನೆಮಾಡುತ್ತಿದ್ದರು; ಆದರೆ ನೀವು ಆರಾಧನೆ ಮಾಡತಕ್ಕ ಸ್ಥಳವು ಯೆರೂಸಲೇಮಿನಲ್ಲಿ ಅದೆ ಅನ್ನುತ್ತೀರಿ ಎಂದು ಹೇಳಿದಾಗ ಯೇಸು ಅಕೆಗೆ–ಅಮ್ಮಾ, ನಾನು ಹೇಳುವ ಮಾತನ್ನು ನಂಬು; ಒಂದು ಕಾಲ ಬರುತ್ತದೆ, ಆ ಕಾಲದಲ್ಲಿ ನೀವು ತಂದೆಯನ್ನು ಆರಾಧಿಸಬೇಕಾದರೆ ಈ ಬೆಟ್ಟಕ್ಕೂ ಹೋಗುವುದಿಲ್ಲ, ಯೆರೂಸಲೇಮಿಗೂ ಹೋಗುವುದಿಲ್ಲ. ಬರಬೇಕಾದ ರಕ್ಷಣೆಯು ಯೆಹೂದ್ಯರೊಳಗಿಂದ ಬರುತ್ತದಷ್ಟೆ. ಆದದರಿಂದ ನಾವು ಅರಿತಿರುವುದನ್ನೇ ಆರಾಧಿಸುವವರಾಗಿದ್ದೇವೆ; ನೀವು ಅರಿಯದೆ ಇರುವಂಥದನ್ನು ಆರಾಧಿಸುವವರು. ಅದಿರಲಿ: ಸತ್ಯಭಾವದಿಂದ ದೇವಾರಾಧನೆಮಾಡುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ತಂದೆಯನ್ನು ಆರಾಧಿಸುವ ಕಾಲ ಬರುತ್ತದೆ; ಅದು ಈಗಲೇ ಬಂದಿದೆ; ತಂದೆಯು ತನ್ನನ್ನು ಆರಾಧಿಸುವವರು ಇಂಥವರೇ ಆಗಿರಬೇಕೆಂದು ಅಪೇಕ್ಷಿಸುತ್ತಾನಲ್ಲವೇ. ದೇವರು ಆತ್ಮಸ್ವರೂಪನು; ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು ಅಂದನು. ಆ ಹೆಂಗಸು ಅತನಿಗೆ–ಮೆಸ್ಸೀಯನು ಅಂದರೆ ಕ್ರಿಸ್ತನು ಬರುತ್ತಾನೆಂದು ಬಲ್ಲೆನು; ಆತನು ಬಂದ ಮೇಲೆ ನಮಗೆ ಎಲ್ಲಾ ತಿಳಿಸುವನು ಎಂದು ಹೇಳಲು ಯೇಸು ಆಕೆಗೆ––ನಿನ್ನ ಸಂಗಡ ಮಾತಾಡುತ್ತಿರುವ ನಾನೇ ಆ ಮೆಸ್ಸೀಯನು ಎಂದು ಹೇಳಿದನು. ಅಷ್ಟರೊಳಗೆ ಆತನ ಶಿಷ್ಯರು ಬಂದು ಆತನು ಒಬ್ಬ ಹೆಂಗಸಿನ ಸಂಗಡ ಮಾತಾಡುತ್ತಿರುವದನ್ನು ಕಂಡು ಆಶ್ಚರ್ಯಪಟ್ಟರು. ಆದರೂ––ನಿನಗೆ ಏನು ಬೇಕು? ಆಕೆಯ ಸಂಗಡ ಯಾಕೆ ಮಾತಾಡುತ್ತೀ? ಎಂದು ಒಬ್ಬರೂ ಕೇಳಲಿಲ್ಲ. ಆಗ ಆ ಹೆಂಗಸು ತನ್ನ ಕೊಡವನ್ನು ಅಲ್ಲೇ ಬಿಟ್ಟು ಊರೊಳಕ್ಕೆ ಹೋಗಿ ಜನರಿಗೆ––ಅಲ್ಲಿ ಒಬ್ಬನಿದ್ದಾನೆ, ನಾನು ಇದುವರೆಗೆ ಮಾಡಿದ್ದನ್ನೆಲ್ಲಾ ನನಗೆ ಹೇಳಿದನು; ಬಂದು ಅವನನ್ನು ನೋಡಿರಿ; ಬರತಕ್ಕ ಕ್ರಿಸ್ತನು ಅವನೇ ಏನೋ? ಎಂದು ಹೇಳಲು ಆತನ ಬಳಿಗೆ ಬರುವದಕ್ಕೆ ಊರೊಳಗಿಂದ ಹೊರಟರು. ಅಷ್ಟರೊಳಗೆ ಶಿಷ್ಯರು––ಗುರುವೇ, ಊಟಮಾಡು ಎಂದು ಆತನನ್ನು ಬೇಡಿಕೊಂಡರು. ಆದರೆ ಆತನು ಅವರಿಗೆ––ನಿಮಗೆ ತಿಳಿಯದಂಥ ಆಹಾರವು ನನಗುಂಟು ಎಂದು ಹೇಳಲು ಶಿಷ್ಯರು––ಆತನಿಗೆ ಯಾರಾದರೂ ಊಟಕ್ಕೆ ತಂದುಕೊಟ್ಟರೋ ಏನೋ ಎಂದು ತಮ್ಮತಮ್ಮೊಳಗೆ ಮಾತಾಡಿಕೊಂಡರು. ಯೇಸು ಅವರಿಗೆ––ನನ್ನನ್ನು ಕಳುಹಿಸಿದಾತನ ಚಿತ್ತದಂತೆ ಮಾಡಿ ಆತನ ಕೆಲಸವನ್ನು ಪೂರೈಸುವುದೇ ನನ್ನ ಆಹಾರವು. ಇನ್ನು ನಾಲ್ಕು ತಿಂಗಳಿಗೆ ಸುಗ್ಗಿ ಬರುವುದೆಂದು ನೀವು ಹೇಳುವುದುಂಟಷ್ಟೆ. ನಿಮ್ಮ ಕಣ್ಣೆತ್ತಿ ಹೊಲಗಳನ್ನು ನೋಡಿರಿ; ಅವು ಬೆಳ್ಳಗಾಗಿ ಕೊಯ್ಲಿಗೆ ಬಂದವೆಂದು ನಿಮಗೆ ಹೇಳುತ್ತೇನೆ. ಕೊಯ್ಯುವವನಿಗೆ ಈಗಲೇ ಕೂಲಿ ದೊರೆಯುತ್ತದೆ; ಅವನು ನಿತ್ಯಜೀವಕ್ಕೆ ಫಲವನ್ನು ಕೂಡಿಸಿಡುತ್ತಾನೆ; ಹೀಗೆ ಬಿತ್ತುವವನಿಗೂ ಕೊಯ್ಯುವವನಿಗೂ ಕೂಡ ಸಂತೋಷವಾಗುವದು. ಬಿತ್ತುವವನೊಬ್ಬ, ಕೊಯ್ಯುವವನೊಬ್ಬ ಎಂಬ ಗಾದೆಯಂತೆ ಆಯಿತು. ನೀವು ಕಷ್ಟಮಾಡದಂಥ ಬೆಳೆಯನ್ನು ಕೊಯ್ಯುವುದಕ್ಕೆ ನಾನು ನಿಮ್ಮನ್ನು ಕಳುಹಿಸಿದೆನು; ಬೇರೊಬ್ಬರು ಕಷ್ಟಮಾಡಿದ್ದಾರೆ; ನೀವು ನಡುವೆ ಅವರ ಕಷ್ಟದಲ್ಲಿ ಸೇರಿದ್ದೀರಿ ಎಂದು ಹೇಳಿದನು. ನಾನು ಮಾಡಿದ್ದನ್ನೆಲ್ಲಾ ಆತನು ನನಗೆ ಹೇಳಿದನೆಂಬದಾಗಿ ಸಾಕ್ಷಿಕೊಡುತ್ತಿರುವ ಆ ಹೆಂಗಸಿನ ಮಾತಿನ ಮೇಲೆ ಆ ಊರಿನ ಸಮಾರ್ಯರಲ್ಲಿ ಅನೇಕರು ಆತನನ್ನು ನಂಬುವವರಾದರು. ಆದ್ದರಿಂದ ಆ ಸಮಾರ್ಯರು ಆತನ ಬಳಿಗೆ ಬಂದು––ನೀನು ನಮ್ಮಲ್ಲಿ ಇರಬೇಕೆಂದು ಆತನನ್ನು ಬೇಡಿಕೊಳ್ಳಲು ಆತನು ಎರಡು ದಿವಸ ಅವರಲ್ಲೇ ಇದ್ದನು. ಹೆಚ್ಚು ಜನರು ಆತನ ವಾಕ್ಯವನ್ನು ಕೇಳಿ ನಂಬಿ ಆ ಹೆಂಗಸಿಗೆ––ನಾವು ಆತನನ್ನು ನಂಬಿರುವುದು ಇನ್ನು ಮೇಲೆ ನಿನ್ನ ಮಾತಿನ ಮೇಲೆ ಅಲ್ಲ; ನಾವು ಕಿವಿಯಾರೆ ಕೇಳಿ ಈತನು ಲೋಕರಕ್ಷಕನೇ ಹೌದೆಂದು ತಿಳುಕೊಂಡಿದ್ದೇವೆ ಎಂದು ಹೇಳಿದರು. ಆ ಎರಡು ದಿವಸಗಳಾದ ಮೇಲೆ ಆತನು ಅಲ್ಲಿಂದ ಹೊರಟು ಗಲಿಲಾಯಕ್ಕೆ ಹೋದನು.

# ಸೇದುವುದಕ್ಕೆ ನಿನ್ನಲ್ಲಿ ಏನೂ ಇಲ್ಲ, ಬಾವಿ ಆಳವಾಗಿದೆ

### ರಿಪ್ರಿಂಟ್ಸ್, ಪುಟ 2574

## ಯೋಹಾನ 4:5–26

**“ದೇವರು ಆತ್ಮಸ್ವರೂಪನು; ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು”**

ಸಮಾರ್ಯವು ಯೂದಾಯ ಮತ್ತು ಗಲಿಲಾಯ ಪ್ರಾಂತಗಳ ನಡುವೆ ಚಾಚಿಕೊಂಡಿರುವ ಭೂಪ್ರಾಂತ್ಯದ ಹೆಸರಾಗಿತ್ತು; ಅದನ್ನು ನಾವು ಒಂದು ದೇಶವೆಂದು ಕರೆಯ ಬಹುದು ಮತ್ತು ಅದರ ಮುಖ್ಯ ಪಟ್ಟಣದ ಹೆಸರು ಅದೇ ಆಗಿದ್ದು ಅದು ಅದರ ಆಡಳಿತ ಕೇಂದ್ರವಾಗಿತ್ತೆಂದು ಹೇಳಬಹುದು. ಅದರ ನಿವಾಸಿಗಳು ಸಮಾರ್ಯರೆಂದು ಕರೆಯಲ್ಪಡುತ್ತಿದ್ದರು ಹಾಗೂ ಯೆಹೂದ್ಯರು ಅವರೊಡನೆ ವ್ಯಾಪಾರ ವ್ಯವಹಾರಗಳನ್ನು ಮಾಡುತ್ತಿದ್ದರೂ ಸಾಮಾಜಿಕವಾದ ಮತ್ತು ಧಾರ್ಮಿಕವಾದ ಹೊಕ್ಕುಬಳಕೆಯಲ್ಲಿರಲ್ಲಿಲ್ಲ. ಅವರೊಡನೆ ಸಮಾನ್ಯವಾಗಿ ಎಲ್ಲಾ ವಿಧದಲ್ಲೂ “ಇಸ್ರಾಯೇಲ್ಯರ ಹಕ್ಕಿನಲ್ಲಿ ಪಾಲಿಲ್ಲದವರೂ ಜನ್ಮದಿಂದ ಅನ್ಯರೂ ಪರದೇಶದವರೂ ದೇವರನ್ನರಿಯದವರೂ ಅಗಿದ್ದು” ದೇವರ ಕೃಪೆಗೆ ಹೊರತಾದ ಅನ್ಯಜನರೊಂದಿಗೆ ನಡೆದುಕೊಳ್ಳುವಂತೆ ಅವರು ನಡೆದುಕೊಳ್ಳುತ್ತಿದ್ದರು. (ಎಫೆಸ 2:12) ಈ ಸವಾರ್ಯದವರ ಪೂರ್ವಜರು ಅನ್ಯದೇಶಸ್ತರಾಗಿದ್ದು ಶತಮಾನಗಳ ಹಿಂದೆ ನೆಬುಕದ್ನೇಚ್ಚರನು ಇಸ್ರಾಯೇಲ್ಯರನ್ನು ಬಾಬೇಲಿಗೆ ಕರೆದೊಯ್ದಾಗ ಇವರನ್ನು ಸಮಾರ್ಯಕ್ಕೆ ರವಾನಿಸಿದ್ದನು. (2 ಅರಸುಗಳು 17:24–41) ಈ ಅನ್ಯಜನರು ಯೆಹೂದ್ಯರೊಂದಿಗೆ ಸಂಪರ್ಕ ಹೊಂದಿದವರಾಗಿ ಮತ್ತು ಕೆಲವು ಧರ್ಮಭ್ರಷ್ಟರಾದ ಯೆಹೂದ್ಯರೊಡನೆ ಪರಸ್ಪರ ಮದುವೆ ಮಾಡಿಕೊಡುವ ಮಾಡಿಕೊಳ್ಳುವುದರ ಮೂಲಕ ಯೆಹೂದ್ಯರ ನಿರೀಕ್ಷೆ ಅವರ ದೇವಾರಾಧನ ಕ್ರಮಗಳ ವಿಷಯವಾಗಿ ಅಲ್ಪಸ್ವಲ್ಪ ತಿಳುವಳಿಕೆ ಪಡೆದು ಇವುಗಳಿಗೆ ತಮ್ಮದೇ ಆದ ತಪ್ಪಾದ ಧಾರ್ಮಿಕ ವಿಚಾರಗಳನ್ನೂ ಕೆಲವು ಮಟ್ಟಿಗೆ ಸೇರಿಸಿದ್ದರು. ಈ ಜನರ ವಿಷಯವಾಗಿ ಅವರು ದೇವರನ್ನು ಹುಡುಕುವವರಾಗಿ ಒಂದು ವೇಳೆ ತಡವಾಡಿಯಾದರೂ ಆತನನ್ನು ಕಂಡುಕೊಳ್ಳುವಂತೆ ಮಾಡಲಾಗಿದ್ದವರೆಂದು ಅಪೋಸ್ತಲನು ಹೇಳಿರುವ ಮಾತಿರುವುದು. (ಅಪೋಸ್ತಲರ ಕೃತ್ಯಗಳು 17:27) ಆದರೆ ಲೋಕಕ್ಕೆ ದೇವರು ತನ್ನನ್ನು ಪ್ರಕಟಮಾಡಿಕೊಳ್ಳುವ ಸಮಯವು ಅಥವಾ ಅನ್ಯಜನರನ್ನು ಯಾವುದೇ ಆರ್ಥದಲ್ಲಿ ಅಂಗೀಕರಿಸಲು ಸಮಯವು ಅಗ ಇನ್ನೂ ಬಂದಿರಲಿಲ್ಲ; ಆವರೆಗೂ ದೇವರ ಕೃಪೆಗಳೆಲ್ಲವೂ ಅಬ್ರಹಾಮನ ಸಂತತಿಯಾದ ಇಸ್ರಾಯೇಲ್ಯರಲ್ಲಿ ಯಾರು ಸುನ್ನತಿಯುಳ್ಳವರಾಗಿ ತಮ್ಮ ಒಡಂಬಡಿಕೆಯಲ್ಲಿ ನೆಲೆಗೊಂಡಿದ್ದರೋ ಅವರ ಮೇಲೆ ಕೇಂದ್ರೀಕೃತವಾಗಿತ್ತು. ಆದುದರಿಂದ ಯೆಹೂದ್ಯರು ಸಮಾರ್ಯರನ್ನು ಒಪ್ಪಿಕೊಳ್ಳದವರಾಗಿ ಅವರೊಡನೆ ಧಾರ್ಮಿಕವಾಗಿ ಬಳಕೆಯಾಗಿರದೆ ಇಲ್ಲವೇ ಸಾಮಾಜಿಕವಾಗಿ ಮದುವೆಯಲ್ಲಿ ಕೊಟ್ಟುಕೊಳ್ಳುವುದನ್ನು ಇಟ್ಟುಕೊಳ್ಳದಿದ್ದುದು ಅವರಿಗೆ ಸಮಂಜಸವಾಗಿತ್ತು. ಇದು ಅವರಿಗೆ ಒಂದು ಮತಾಂಧತೆಯ ವಿಷಯವಾಗಿರದೆ ದೈವಿಕ ನಿಯಮವೂ ಮತ್ತು ನಿಷೇಧವೂ ಆಗಿದ್ದವು. (ಧರ್ಮೋ. 7:1–6)

ನಮ್ಮ ಕರ್ತನು ತನ್ನ ಶಿಷ್ಯರನ್ನು ದೇವರ ರಾಜ್ಯದ ಸುವಾರ್ತೆಯನ್ನು ಸಾರಲು ಕಳುಹಿಸುವಾಗ ಈ ವಿಷಯಕ್ಕೆ ಸ್ಪಷ್ಟವಾಗಿ ತನ್ನ ಒಪ್ಪಿಗೆ ನೀಡಿರುವುದು ನೆನಪಿಗೆ ಬರುವುದು. ಆತನು ಅವರಿಗೆ ಹೇಳಿದ್ದು, “ಅನ್ಯಜನರ ಕಡೆಗೆ ಹೋಗಬೇಡಿರಿ, ಸಮಾರ್ಯದ ಊರೊಳಗೆ ಕಾಲಿಡಬೇಡಿರಿ; ಯಾಕೆಂದರೆ ನಾನು ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲ್ಯರ ಮನೆತನದವರ ಬಳಿಗೆ ಕಳುಹಿಸಲ್ಪಟ್ಟಿದ್ದೇನೆ.” ಅಪೋಸ್ತಲರಾದ ಯಾಕೋಬ ಯೋಹಾನರು ಸಮಾರ್ಯದ ಪಟ್ಟಣಗಳ ವಿಷಯವಾಗಿ ಹೀಗೆ ನುಡಿದಿರುವುದನ್ನು ಸಹ ನೆನಪಿಸಿಕೊಳ್ಳುವೆವು: “ಸ್ವಾಮೀ, ಆಕಾಶದಿಂದ ಬೆಂಕಿಬಿದ್ದು ಇವರನ್ನು ನಾಶಮಾಡಲಿ ಎಂದು ಹೇಳುವುದಕ್ಕೆ ನಿನಗೆ ಮನಸ್ಸುಂಟೋ?” ಇದಕ್ಕೆ ಯೇಸು ಉತ್ತರಿಸಿದ್ದು, “ನೀವು ಎಂಥ ಆತ್ಮವುಳ್ಳವರಾಗಿದ್ದೀರೆಂಬುದು ನಿಮಗೆ ತಿಳಿಯದು; ಮನುಷ್ಯರ ಪ್ರಾಣಗಳನ್ನು ನಾಶಮಾಡಲು ಮನುಷ್ಯಕುಮಾರನು ಬರಲಿಲ್ಲ ಅದರೆ ಅವರನ್ನು ರಕ್ಷಿಸಲು ಬಂದನು.” ಹೀಗಿದ್ದರೂ ಯೇಸುವು ಸಮಾರ್ಯರ ರೋಗಿಗಳನ್ನು ಸ್ವಸ್ಥಮಾಡುವ ಅದ್ಭುತ ಕಾರ್ಯವನ್ನು ಮಾಡಲಿಲ್ಲ, ಮತ್ತು ಈ ಕಾರಣಕ್ಕಾಗಿಯೇ ಸಮಾರ್ಯರು ಅತನನ್ನು ತಾವು ಸೇರಿಸಿಕೊಳ್ಳಲಿಲ್ಲ ಇಲ್ಲವೇ ತಮ್ಮ ಊರಿನ ಮೂಲಕ ಪ್ರಯಾಣಮಾಡಲು ಬಿಡಲಿಲ್ಲವೆಂಬುದು ನಮಗೆ ನೆನಪಾಗುವುದು.––ಲೂಕ 9:51–56

ಯೂದಾಯದಿಂದ ಗಲಿಲಾಯಕ್ಕೆ ಸಮಾರ್ಯದ ಮೂಲಕವಾಗಿ ಮಾಡಿದ ಹಲವಾರು ಪ್ರಯಾಣಗಳಲ್ಲಿ ಒಂದಾಗಿದ್ದರಲ್ಲಿ ನಮ್ಮ ಕರ್ತನು ಬೋಧನೆ ಮಾಡುವುದರ ಲ್ಲಿಯೂ ಅಲ್ಲದೆ ರೊಗಿಗಳನ್ನು ಸ್ವಸ್ಥಮಾಡುವಾಗ ತನ್ನ ಶಕ್ತಿಯನ್ನು ಕಳಕೊಂಡವನಾಗಿಯೂ ಹಾಗೂ ಪ್ರಯಾಣ ಮಾಡುವುದರ ಲ್ಲಿಯೂ ದಣಿದವನಾಗಿ ಯಾಕೋಬನು ತೆಗೆಸಿದ ಬಾವಿಯ ಬಳಿಯಲ್ಲಿ ವಿಶ್ರಮಿಸಿಕೊಂಡನು; ಆ ಸಮಯದಲ್ಲಿ ಆತನ ಶಿಷ್ಯರು ಆಹಾರ ಕೊಳ್ಳುವುದಕ್ಕಾಗಿ ಬೇರೆಡೆ ಇರುವ ಒಂದು ಹಳ್ಳಿಗೆ ಹೋಗಿದ್ದರು.

ಯಾಕೋಬನು ತೆಗೆಸಿದ ಬಾವಿಗೆ ಅದರ ನೀರಿನ ಶುದ್ಧತೆಯ ಕಾರಣ ಆ ಸೀಮೆಯಲ್ಲೆಲ್ಲಾ ಒಂದು ವಿಶೇಷವಾದ ಹೆಸರಿತ್ತು. ಅದು ಸುಣ್ಣದ ಕಲ್ಲಿನಿಂದ ಕೂಡಿದ ದೇಶವಾಗಿರಲಾಗಿ ಅಲ್ಲಿ ಸಿಗುತಿದ್ದ ನೀರು ಉಪ್ಪಾಗಿರುತ್ತಿತ್ತು; ಆದರೆ ಯಾಕೋಬನ ಬಾವಿಯು ನೂರು ಅಡಿಗಿಂತಲೂ ಆಳವಾಗಿಯೂ ಸುಮಾರು ಎಂಟು ಅಡಿ ಅಗಲವಾಗಿಯೂ ಇದ್ದು ಕಲ್ಲಿನಲ್ಲಿ ಕೊರೆದದ್ದಾಗಿರಲಾಗಿ ಕುಡಿಯಲು ಯೋಗ್ಯವಾದ ನೀರನ್ನು ಅಧಿಕವಾಗಿ ಒದಗಿಸುತ್ತಿತ್ತು. ನಾವು ಮತ್ತೂ ಸಹ ನೆನೆಯಲಿರುವುದೆಂದರೆ, ದೇಶದ ಆ ಭಾಗದಲ್ಲಿ ವಿಶೇಷವಾಗಿ

ವರ್ಷದ ಕೆಲವು ಸಮಯಗಳಲ್ಲಿ ಇರುತ್ತಿದ್ದ ನೀರಿನ ಕೊರತೆಯ ಅಂಶವು ನಮ್ಮ ಈ ಪಾಠದಲ್ಲಿನ ಆ ಸ್ತ್ರೀಯು ತನಗೆ ಬೇಕಿರುವ ನೀರಿಗಾಗಿ ಎಂದೂ ಬತ್ತಿಹೋಗದ ಒಳ್ಳೆಯ ಬುಗ್ಗೆಯಿರುವ ಈ ಬಾವಿಗೆ ಅಷ್ಟು ದೂರ ನಡೆದು ಬರಬೇಕಿದ್ದ ಕಾರಣವನ್ನು ತೋರಿಸುತ್ತದೆ. ಆಕೆಯು ಬಂದಾಗ ಆ ಬಾವಿಯ ಕಟ್ಟೆಯ ಮೇಲೆ ಕುಳಿತು ವಿಶ್ರಮಿಸುತ್ತಿದ್ದ ಯೇಸುವು ಒಬ್ಬ ಯೆಹೂದ್ಯನೆಂದು ಆ ಸ್ತ್ರೀಯು ತಕ್ಷಣವೇ ಗುರುತು ಹಿಡಿದಳು ಮತ್ತು ಆಕೆಯೂ ಒಬ್ಬ ಸಮಾರ್ಯಳೆಂದು ಯೇಸುವು ಆ ಕ್ಷಣವೇ ಗುರುತು ಹಿಡಿದನು. ಇದು ಅವರ ಮುಖಚರ್ಯೆಗಳ ಮೂಲಕ ಮಾತ್ರವಲ್ಲದೆ ಅವರು ತೊಟ್ಟ ಉಡುಪಿನ ವಿಶೇಷ ಲಕ್ಷಣದ ಮೂಲಕವಾಗಿಯೂ ತಿಳಿಯುತ್ತಿತ್ತು; ಯಾಕೆಂದರೆ ಯೆಹೂದ್ಯರು ತಮ್ಮ ಉಡುಪಿಗೆ ಒಂದು ಬಿಳಿಯ ಅಂಚನ್ನು ಹೊಂದಿದ್ದು ಸಮಾರ್ಯರು ನೀಲಿಯ ಅಂಚನ್ನು ಉಪಯೋಗಿಸುತ್ತಿದ್ದರು.

ಒಬ್ಬ ಯೆಹೂದ್ಯನಿಗೆ ಸಮಾರ್ಯನಲ್ಲಿ ದಯೆಯನ್ನು ಕೋರುವುದು ಅಪರೂಪವಾಗಿತ್ತು. ಇದರ ಪರಿಣಾಮವಾಗಿ ಯೇಸುವು ಆ ಸ್ತ್ರೀಯು ಸೇದುತ್ತಿದ್ದ ನೀರಿನಲ್ಲಿ ಕುಡಿಯಲು ಕೇಳಿದ್ದು ಆಕೆಯು ವಿಸ್ಮಯದಿಂದ ಯೇಹೂದ್ಯನಾದ ಈತನು ಸಮಾರ್ಯಳಾದ ತನ್ನನ್ನು ಕೇಳಿಕೊಳ್ಳಲು ಹೇಗೆ ಸಾಧ್ಯವೆಂಬುದನ್ನು ವಿಚಾರಿಸುವಂತಾಯಿತು. ಆಕೆಯು ಕೇಳಿದ ಪ್ರಶ್ನೆಯಲ್ಲಿ ಧೈರ್ಯದ ಅಂಶವು ಸೇರಿತ್ತು; ಮುಂದೆ ಮಾತನಾಡುವಾಗ ತಾನು ಒಬ್ಬ ಒಳ್ಳೆಯ ಗುಣದವಳಲ್ಲ ವೆಂಬುದನ್ನು ಒಪ್ಪಿಕೊಂಡು ಹೇಳಿದ್ದರಲ್ಲಿ ಇದು ತೋರಿಬರುತ್ತದೆ. ಇವೆಲ್ಲಗಳಲ್ಲಿಯೂ ನಮ್ಮ ಕರ್ತನು ಆಕೆಯೊಡನೆ ಬಳಕೆಯಾಗಿರಲು ತನ್ನನ್ನು ತಗ್ಗಿಸಿಕೊಂಡನೆಂಬುದು ಗಮನಾರ್ಹ. ಹೀಗಿರುವಲ್ಲಿ, "ದೀನರ ಸಂಗಡ ಬಳಕೆಯಾಗಿರ್ರಿ" ಎಂಬ ಅಪೋಸ್ತಲನ ಈ ಮಾತಿನ ಅನುಸಾರವಾಗಿ ಇಲ್ಲಿ ನಮಗೆ ಒಂದು ಪಾಠವಿರುವುದು. ಕ್ರೈಸ್ತರಲ್ಲಿ ಹಲವು ಜನರು ಇಂಥ ಒಂದು ಹೆಂಗಸಿನೊಡನೆ ಮಾತನಾಡಲು ತೀವ್ರವಾದ ಅಸಡ್ಡೆ ತೋರುವದರ ಕಾರಣವನ್ನು ಊಹಿಸುವುದನ್ನು ತಪ್ಪಿಸಲು ನಮಗೆ ಸಾಧ್ಯವಾಗದು. ಅವರು ಬಹುತೇಕ ತಮಗರಿವಿಲ್ಲದೆಯೇ ತಮ್ಮ ಧಾರ್ಮಿಕ ಬೋಧನೆಗಳನ್ನು ಅಳವಡಿಸಿಕೊಂಡಿರುವರು. ಆದು ಹೇಳುವುದೇನೆಂದರೆ, ದೇವರು ಅಂಥ ವ್ಯಕ್ತಿಯನ್ನು ಎಷ್ಟು ಹೇಸಿಕೊಳ್ಳುವನೆಂದರೆ ಆತನು ಆಕೆಯನ್ನು ಸೈತಾನನಿಗೆ ಒಪ್ಪಿಸಿಕೊಡಲು ಆಕೆಯು ಸತ್ತ ಕೂಡಲೇ ನಿತ್ಯಯಾತನೆಯನ್ನು ಅನುಭವಿಸಲು ಅವನ ವಶಕ್ಕೆ ಬರುವಳು. ದೇವರಿಂದ ಅಷ್ಟು ಅಸಹ್ಯಿಸಲ್ಪಟ್ಟ ಇಂಥ ಒಬ್ಬರು ಮನುಕುಲದಿಂದ ದೂರಮಾಡಲ್ಪಟ್ಟು ತಿರಸ್ಕಾರಹೊಂದಬೇಕೆಂದು ಬಹುಮಟ್ಟಿಗೆ ಅರಿವಿಲ್ಲದೆಯೇ ಅವರು ವಾದಿಸುವರು. ಪಾಪಿಗಳ ಕಡೆಗಿರುವ ದೇವರ ಮನೋಬಾವ, ಯಾರೂ ನಾಶವಾಗುವುದನ್ನು ಅತನು ಇಚ್ಛಿಸದಿರುವುದು, ತನ್ನ ದಯೆಕರುಣೆಗಳೆಲ್ಲವನ್ನು ತಿರಸ್ಕರಿಸಿ ಮನಃಪೂರ್ವಕವಾಗಿ ದುಷ್ಟತನ ನಡೆಸಿದವರನ್ನು ಯಾತನೆಗೆ ಗುರಿಮಾಡದೆ ಅವರ ಜೀವಾಸ್ತಿತ್ವವನ್ನು ಅಳಿಸಿಹಾಕುವುದರ ವಿಷಯವಾಗಿ ಅವರಿಗೆ ಸ್ಪಷ್ಟವಾದ ತಿಳುವಳಿಕೆಯ ಅಗತ್ಯವಿರುವುದು. (2 ಪೇತ್ರ 3:9, ಅಪೊಸ್ತಲರ ಕೃತ್ಯಗಳು 3:23) ದೇವರ ಗುಣಲಕ್ಷಣಗಳು ಮತ್ತು ಆತನ ಯೋಜನಗಳ ವಿಷಯವಾದ ನಿಜಾಭಿಪ್ರಾಯಗಳನ್ನು ಹೊಂದಿರುವುದು ದೇವ ಜನರಿಗೆ ತಮ್ಮ ಜೀವಿತವನ್ನು ಸರಿಯಾಗಿ ರೂಪಿಸಿಕೊಳ್ಳಲು ಬಹು ಸಹಾಯಕಾರಿ.

ಆ ಸಮಯದಲ್ಲಿ ಕರ್ತನೊಡನೆ ಮಾತನಾಡಲು ಯೆಹೂದ್ಯರ ಗುಂಪೇನಾದರೂ ಅಲ್ಲಿ ಇದ್ದಿದ್ದಲ್ಲಿ ಅವರ ಪರವಾಗಿ ತನ್ನ ಶಕ್ತಿಯನ್ನು ವಿನಿಯೋಗಿಸುವವನಾಗಿ ಅಪಕೀರ್ತಿಯುಳ್ಳ ಆ ಸಮಾರ್ಯದವಳನ್ನು ಅಲಕ್ಷಿಸುತ್ತಿದ್ದನೆಂದು ನಾವು ಊಹಿಸಲು ಬದ್ಧರಾಗಿದ್ದೇವೆ. ಆದರೆ ಆ ಸಮಯದಲ್ಲಿ "ಪೋಷಣೆ" ಹೊಂದ ತಕ್ಕ "ಮಕ್ಕಳು" ಯಾರು ಅಲ್ಲಿಲ್ಲದ್ದರಿಂದ ಅತನು ತಿಳುವಳಿಕೆಯ ಕೆಲವು ತುಣುಕುಗಳನ್ನು "ಮಕ್ಕಳು" ಎನ್ನಿಸಿಕೊಳ್ಳದವರೂ ಹೋಲಿಕೆಯಲ್ಲಿ "ನಾಯಿಗಳೂ" ಆಗಿ ಅನ್ಯಜನರಂತಿದ್ದ ಆ ಸಮಾರ್ಯರ ಮುಂದೆ ಬೀಳಮಾಡಿದನು. ನಮ್ಮ ಕರ್ತನು ಅನುಸರಿಸಿದ ವಿಧಾನವು ಆತನ ಹಿಂಬಾಲಕರಿಗೆ ಒಂದು ಉಪದೇಶವಾಗಿಯೂ, ಅಪೋಸ್ತಲನು ಹೇಳಿದ ಮಾತಿಗೆ ಒಂದು ದೃಷ್ಟಾಂತವಾಗಿಯೂ ಇರುವುದು; ಅದೇನೆಂದರೆ "ಸಮಯವಿರಲಾಗಿ ನಾವು ಎಲ್ಲರಿಗೂ ಒಳ್ಳೆಯದನ್ನು ಮಾಡೋಣ ಮುಖ್ಯವಾಗಿ ಒಂದೇ ಮನೆಯಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ ಮಾಡೋಣ." ಇಷ್ಟೇ ಅಲ್ಲದೆ, ಇದು ನಮ್ಮ ಕರ್ತನು ಸ್ವತಃ ಪ್ರಕಟಮಾಡಿ ಹೇಳಿರುವ ವಿಷಯಕ್ಕೆ ಒಂದು ನಿದರ್ಶನ ನೀಡುತ್ತದೆ; ಅದೇನಂದರೆ, ತಂದೆಯ ವಿಷಯವಾದ ಕಾರ್ಯದಲ್ಲಿ ತೊಡಗಿಸಿಕೊಂಡು ಆ ತಂದೆಯ ಚಿತ್ತವನ್ನು ನೆರವೇರಿಸುವುದೇ ಆತನ ಆಹಾರವೆಂಬುದು. ಆತನಿಗೆ ದಣಿವಾಗಿದ್ದರೂ ಮತ್ತು ಮುಂದೆ ಮಾತಾಡುವುದು ತಾನು ವಿಶ್ರಮಿಸಿ ದಣಿವಾರಿಸಿಕೊಳ್ಳುವುದಕ್ಕೆ ಅಡ್ಡಿಯಾಗುವುದೆಂದು ತಿಳಿದಿದ್ದರೂ ಆತನು ಇತರರಿಗೆ, ಸಾಮಾಜಿಕವಾಗಿ ಬಹಿಷ್ಕರಿ ಸಲ್ಪಟ್ಟವರಿಗೂ ಸಹ, ಸಹಾಯಕಾರಿಯಾಗಲು ತನ್ನ ಸ್ವಂತ ಅನುಕೂಲಗಳನ್ನು ತ್ಯಜಿಸುವುದಕ್ಕೆ ಸಿದ್ಧನಿದ್ದನು. ಅಪೋಸ್ತಲನು ದೇವಜನರಿಗೆ ಬುದ್ಧಿಮಾತಾಗಿ ಹೀಗೆ ಹೇಳಿರುವನು: "ಅನುಕೂಲದ ಸಮಯಗಳಲ್ಲಿಯೂ ಅನುಕೂಲವಲ್ಲದ ಸಮಯ ಗಳಲ್ಲಿಯೂ" ಕೇಳುವ ಕಿವಿಯುಳ್ಳವರಿಗೆ ಉಪದೇಶಿಸು.

ನಮ್ಮ ಕರ್ತನು ಆ ಹೆಂಗಸಿಗೆ ತನ್ನನ್ನು ಪರಿಚಯ ಮಾಡಿಕೊಂಡ ವಿಧಾನದಲ್ಲಿ ಜ್ಞಾನವಿತ್ತು. ಆಕೆಯು ನೆರವೇರಿಸಲು ಕಷ್ಟವಾಗದ ಕೋರಿಕೆಯನ್ನು ಅತನು ಮಾಡಿದನು ಮತ್ತು ಅದೇ ಸಮಯದಲ್ಲಿ ಆಕೆಯು ಆತನಿಗೆ ಕಟ್ಟುಬೀಳುವಂತೆಯೂ ಮಾಡಿದನು. ತಗ್ಗಿದ ಮನೋಭಾವದಿಂದ ಇತರರಲ್ಲಿರುವ ಔದಾರ್ಯದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸಿ ಇದಕ್ಕೆ ಪ್ರತಿಯಾಗಿ ಅವರು ಯಾವ ವಿಧದಲ್ಲಿಯಾದರೂ ಕೇಳಿಕೊಂಡದ್ದನ್ನು ಅನುಗ್ರಹಿಸುವ ಮನಸ್ಸು ಉಂಟಾಗುವಂತೆ ಮಾಡುವುದು ಎಲ್ಲರನ್ನು ಸಮೀಪಿಸಲು ಒಂದು ಅತ್ಯುತ್ತಮ ವಿಧಾನವೆಂದು ಅನುಭವವು ತೋರಿಸಿಕೊಡುತ್ತದೆ.

ತನ್ನ ಕೋರಿಕೆಗೆ ಆ ಹೆಂಗಸು ಕೊಟ್ಟ ಉತ್ತರದಲ್ಲಿನ ಒರಟುತನವನ್ನು ಲಕ್ಷ್ಯಮಾಡದೆ ನಮ್ಮ ಕರ್ತನು ಯಾಕೋಬನ ಆಳವಾದ ಬಾವಿಯಲ್ಲಿನ ಒಳ್ಳೆಯ ನೀರಿನ ದೃಷ್ಟಾಂತವನ್ನು ಉಪಯೋಗಿಸಿಕೊಂಡು ದೇವರ ಕೃಪಾವರದ ವಿಷಯವಾಗಿ ಒಂದು ಪಾಠವನ್ನು ಬೋಧಿಸಲು ಮುಂದಾದನು. ಆ ಹೆಂಗಸಿಗೆ

ಹೇಳಿದ್ದು: ತನಗೆ ದೊರೆತ ಸೌಭಾಗ್ಯವನ್ನು ಅರ್ಥಮಾಡಿ ಕೊಂಡಿದ್ದೇಯಾದರೆ ಆಕೆಯು ಪ್ರತಿಯಾಗಿ "ಜೀವಕರವಾದ ನೀರನ್ನು" ಕೇಳಿಕೊಳ್ಳುತ್ತಿದ್ದಳು. ಏಕೆಂದರೆ ಹರಿಯುವ ನೀರು, ನಿಂತ ನೀರಿನಂತಲ್ಲದೆ, ಯಾವಾಗಲೂ ಶುದ್ಧವಾಗಿರುತ್ತದೆ. ನಮ್ಮ ಕರ್ತನ ಮಾತುಗಳಿಗೆ ಕೆಲವು ಗಾಢವಾದ ಅರ್ಥಗಳಿರುವುದನ್ನು ಆಕೆಯು ಗ್ರಹಿಸಿಕೊಂಡಳು. ಆತನು ಯಾಕೋಬನ ಬಾವಿಯ ವಿಷಯವಾಗಿ ಉಲ್ಲೇಖಮಾಡಲು ಸಾಧ್ಯವಿರಲಿಲ್ಲ ಯಾಕೆಂದರೆ ಆತನಲ್ಲಿ ಸೇದುವದಕ್ಕೆ ಚರ್ಮದ ಹಿಡಿಯ ಪಾತ್ರೆಯಾಗಲೀ ಹಗ್ಗವಾಗಲೀ ಇರಲಿಲ್ಲ. ಆದುದರಿಂದ ಆಕೆ ವಿಚಾರಣೆ ಮಾಡಲು ಕೇಳಿದ್ದು: ಜೀವಕರವಾದ ನೀರು ನಿನಗೆ ಎಲ್ಲಿಂದ ಬರುವದು? ತಂದೆಯಾದ ಯಾಕೋಬನು ಈ ಬಾವಿಯನ್ನು ಒದಗಿಸಿಕೊಟ್ಟಿದ್ದನು ಮತ್ತು ಇದಕ್ಕಿಂತಲೂ ಉತ್ತಮವಾದ ನೀರು ಆತನಿಗಾಗಲೀ ಮತ್ತು ಆತನ ಕುಟುಂಬದವರಿಗಾಗಲೀ ದೊರೆಯುವುದಿಲ್ಲವೆಂಬುದು ಆತನಿಗೆ ತಿಳಿದಿತ್ತು. ಇದಕ್ಕಿಂತಲೂ ಉತ್ತಮವಾದ ನೀರನ್ನು ಒದಗಿಸಿಕೊಡಲು ನಿನಗೆ ಸಾಮರ್ಥ್ಯವಿದೆಯೇ? ಆತನಿಗಿಂತಲೂ ನೀನು ದೊಡ್ಡವನೋ? ಆಗ ನಮ್ಮ ಕರ್ತನು ಆತ್ಮಿಕ ಸಂಗತಿಗಳನ್ನು ತೋರಿಸಿ ನಡೆಸುವಲ್ಲಿ ಮತ್ತೊಂದು ಹೆಜ್ಜೆಯನ್ನು ಇಟ್ಟನು. ಹೀಗೆ ಆಕೆಗೆ ಭರವಸೆ ನೀಡಿ ಹೇಳಿದ್ದು, ಆತನು ಕೊಡುವ ನೀರು ಬೇರೆ ವಿಧವಾದದ್ದು; ಅದು ಆ ಕ್ಷಣದ ಬಾಯಾರಿಕೆಯನ್ನು ನೀಗುವುದು ಮಾತ್ರವಲ್ಲದೆ ಅದು ಅವರಲ್ಲಿ ಉಕ್ಕುವ ಒರತೆಯಾಗಿ ಅವರಿಗೆ ನಿರಂತರವಾಗಿ ತೃಪ್ತಿಯನ್ನು ನೀಡುತ್ತಿರುವುದು.

ನೀರು, ಜೀವಕರವಾದ ನೀರು, ಶುದ್ಧ ನೀರು, ಇದು ಪ್ರತಿಯೊಬ್ಬರಿಗೂ ಸ್ಪಷ್ಟವಾಗಿ ವ್ಯಕ್ತವಾಗುವಂಥ ಅದ್ಭುತವಾಗಿರುವ ಒಂದು ಸಂಕೇತ; ಮತ್ತು ಬಾಯಾರಿಕೆಯೆಂಬುದು ಇನ್ನೊಂದು. ಬಾಯಾರಿಕೆಯೆಂಬುದು ಬಯಸುವಿಕೆ, ಹಂಬಲಿಸುವಿಕೆ, ಹಾತೊರೆಯುವಿಕೆಗಳನ್ನು ಸೂಚಿಸುವುದು. ಶಾರೀರಿಕವಾದ ಬಾಯಾರಿಕೆಯು ಶಾರೀರಿಕವಾದ ಹಸಿವಿಗಿಂತಲೂ ತೀಕ್ಷಣವಾದು ದೆಂದು ಹೇಳಲಾಗುವುದು. ಹಸಿವೆಯು ಬಲವನ್ನು ಕುಂದಿಸುತ್ತಾ ಕ್ರಮೇಣ ನಿಶ್ಯಕ್ತರನ್ನಾಗಿ ಮಾಡುವುದು; ಆದರೆ ಬಾಯಾರಿಕೆಯು ಕಡೆಯ ಉಸುರಿನವರೆಗೂ ಮುಂದುವರಿದು ಗಂಟೆ ಗಂಟೆಗೂ ತೀವ್ರವಾಗುತ್ತಾ ಹೋಗುವದು. ನೀರು ಪ್ರಕೃತಿದತ್ತವಾದ ಈ ಬೇಡಿಕೆಯನ್ನು ಶಮನಗೊಳಿಸಿ ತೃಪ್ತಿನೀಡುವುದು. ಮತ್ತು ಇದರಂತೆಯೇ ಆತ್ಮದ ದಾಹದ ವಿಷಯವು; ಜೀವಕರವಾದ ನೀರೊಂದೇ ಇದನ್ನು ತೃಪ್ತಿಪಡಿಸಬಲ್ಲದು.

ಪ್ರತಿಯೊಂದು ಬಯಕೆ ಮತ್ತು ಆಸೆಯೂ ಒಂದು ದಾಹವೇ. ಪ್ರತಿಯೊಬ್ಬ ಮನುಷ್ಯನ ವಿಶೇಷತೆ, ಆತನ ವಕ್ತಿತ್ವವು (1) ಆತನಲ್ಲಿರುವ ಬಯಕೆ ಅಥವಾ ಆಸೆಯ ಸಂಖ್ಯೆಗಳ ಮೂಲಕವಾಗಿ, (2) ಆ ದಾಹದ ಅಥವಾ ಬಯಕೆಯ ಗುಣ ಅಥವಾ ಅದರ ಲಕ್ಷಣದ ಮೂಲಕವಾಗಿ, (3) ಆ ದಾಹಗಳ ಅಥವಾ ಬಯಕೆಗಳ ಸಾಮರ್ಥ್ಯ ಮತ್ತು ತೀವ್ರತೆಯ ಮೂಲಕವಾಗಿ ಅಳೆಯಲಾಗುವದು. ಅಲ್ಲದೆ ನಿಜವಾದ ಶಿಕ್ಷಣವು ಮನುಷ್ಯರಿಗೆ ಅವರಲ್ಲಿರುವ ಯೋಗ್ಯ ಮತ್ತು ಯೋಗ್ಯವಲ್ಲದ ಬಯಕೆ ಅಥವಾ ದಾಹಗಳ ವಿಷಯವಾಗಿ ಮತ್ತು ಅವುಗಳಲ್ಲಿ ಯಾವುದನ್ನು ತೃಪ್ತಿಗೊಳಿಸಬೇಕು ಮತ್ತು ಅವುಗಳನ್ನು ಬಹು ಬುದ್ಧಿವಂತಿಕೆಯಿಂದ ಹೇಗೆ ಮಾಡಬೇಕೆನ್ನುವುದರ ವಿಷಯವಾಗಿ ತಿಳುವಳಿಕೆ ನೀಡುವುದು. ಯಾವನಿಗೆ ಬಯಕೆಗಳಿರುವುದಿಲ್ಲವೋ ಅವನಿಗೆ ತೃಪ್ತಿಗೊಳ್ಳಲು ಏನೂ ಇರುವುದಿಲ್ಲ ಮತ್ತು ಕಾರ್ಯತಃ ಅವನಿಗೆ ಯಾವ ಅಸ್ತಿತ್ವವಿರುವುದಿಲ್ಲ. ಜೀವನವು ಕಲಿಸುವ ಪಾಠವೆಂದರೆ ನಾವು ಬಯಕೆಯಿಲ್ಲದಿರಬೇಕು ಎಂಬುದಲ್ಲ ಮತ್ತು ಅದು ಹೆಚ್ಚು ಇರಬಾರದೆಂಬುದೂ ಅಲ್ಲ; ಆದರೆ ಅದು ಆ ಬಯಕೆಗಳನ್ನು ಪಾಪದ ಸಂಗತಿಗಳಿಂದ ನೀತಿಯುಳ್ಳ ಸಂಗತಿಗಳಿಗೆ, ಪಾಪದ ವಿಷಯದ ಮೇಲಿನ ಹಂಬಲಿಕೆಯಿಂದ ಪವಿತ್ರವಾದ ವಿಷಯಗಳ ಮೇಲಿನ ಹಂಬಲಿಕೆಗೆ ಮಾರ್ಪಡಿಸುವ ವಿಷಯವಾಗಿರುವುದು. ಈ ವಿಧವಾಗಿ ಕರ್ತನ ಹಿಂಬಾಲಕರು ನೀತಿಗೆ ಹಸಿದು ಬಾಯಾರಿದವರಾಗಿರಬೇಕು ಮತ್ತು ಅವರು ಅವುಗಳಿಂದ ತುಂಬಿದವರಾಗಿ ತೃಪ್ತಿಹೊಂದಬೇಕು. ಅಂದರೆ ತಮ್ಮಲ್ಲಿರುವ ಬಯಕೆಗಳನ್ನು ಬಿಟ್ಟುಬಿಡುವುದರ ಮೂಲಕವಾಗಿ ಅಲ್ಲ; ಆದರೆ ಅವುಗಳನ್ನು (ಯೊಗ್ಯವಾದ ರೀತಿಯಲ್ಲಿ) ಕೈಗೂಡಿಸಿ ಕೊಳ್ಳಬೇಕು. ಅಂದರೆ ಕರ್ತನಲ್ಲಿ ಹೇರಳವಾಗಿಯೂ ನಿರಂತರ ವಾಗಿಯೂ ಒದಗುವ ಕೃಪಾನುಗ್ರಹಗಳನ್ನು ವಿನಿಯೋಗಿಸಿ ಕೊಂಡು ಯೋಗ್ಯವಾದ ಹಂಬಲಿಕೆಗಳೆಲ್ಲವನ್ನೂ ತೃಪ್ತಿಪಡಿಸಿ ಕೊಳ್ಳಬೇಕು. ಯೋಗ್ಯವಲ್ಲದ ಹಂಬಲಿಕೆಗಳನ್ನು ತಡೆಹಿಡಿದು ನಿಯಂತ್ರಿಸಿ ಅವುಗಳನ್ನು ಬುಡಸಹಿತವಾಗಿ ಕಿತ್ತೊಗೆಯಬೇಕು. ಆದಾಗ್ಯೂ ಯೋಗ್ಯವಾದ ಹಂಬಲಿಕೆಗಳನ್ನು ಕಲ್ಪಿಸಿಕೊಂಡು ಬೆಳೆಯಮಾಡಿ ಅವುಗಳಿಂದ ಪೋಷಣೆ ಹೊಂದಿ ನಿರಂತರವೂ ಅವುಗಳನ್ನು ಅನುಭವಿಸಿ ಆನಂದಿಸುವವರಾಗಬೇಕು.

ತೃಪ್ತಿದಾಯಕವಾದ ಈ ಜೀವಜಲವನ್ನು ನಮ್ಮ ವಿಮೋಚಕನ ಮೂಲಕವಲ್ಲದೆ ಬೇರೆಲ್ಲಿಂದಲೂ ಪಡೆಯಲಾಗದು. ಇದನ್ನು ಹೀಗೆ ಹೇರಳವಾಗಿ ಪಡೆದವರು ಇದಕ್ಕೆ ಪ್ರತಿಯಾಗಿ ಸಾಕಾಗುವಷ್ಟು ಕೃತಜ್ಞರಾಗಿ ನಡೆಯಲು ಸಾಧ್ಯವಾಗದೆಂಬುದನ್ನು ತಿಳಿದಿರುವರು. ಏಕೆಂದರೆ ತಮ್ಮ ಹೃದಯಗಳನ್ನು ಕಾಯುವ ಎಲ್ಲಾ ಗ್ರಹಿಕೆಯನ್ನು ಮೀರುವ ದೇವರ ಶಾಂತಿಯು ಇದರಲ್ಲಿ ಅಡಕವಾಗಿರುವುದು. ಅವರು ಮನುಷ್ಯರಿಂದ ಪಡೆಯುವ ಗೌರವಕ್ಕೆ ದಾಹಗೊಳ್ಳುವ ಬದಲು ಪರಲೋಕದಲ್ಲಿರುವ ತಮ್ಮ ತಂದೆಯ ಹಾಗೂ ವಿಮೋಚಕನಲ್ಲಿ ಅನ್ಯೋನ್ಯವಾಗಿದ್ದು ಅವರಿಂದ ಗೌರವ ಹೊಂದುವಕ್ಕೆ ದಾಹವುಳ್ಳವರಾಗಿರುವರು. ಅವರು ಭೂಲೋಕ ಸಂಪತ್ತಿನ ವಿಷಯವಾಗಿ ದಾಹಗೊಳ್ಳುವ ಬದಲು ಪರಲೋಕದಲ್ಲಿರುವ ಸಂಪತ್ತುಗಳನ್ನು ಪಡೆಯಲು ದಾಹವುಳ್ಳವರಾಗಿರುವರು. ಅವರು ಶಾರೀರಿಕವಾದ ಸುಖಭೋಗಗಳಿಗೆ ದಾಹಗೊಳ್ಳುವ ಬದಲು ತಮ್ಮ ಬಯಕೆಗಳನ್ನು ಮುಖ್ಯವಾಗಿ ಆತ್ಮಿಕ ವಿಷಯಗಳಲ್ಲಿ ಸಂತೋಷಿಸಿ ಉಲ್ಲಾಸ ಪಡುವ ಬಯಕೆಗಳನ್ನಾಗಿ ಮಾರ್ಪಡಿಸಿಕೊಳ್ಳುವರು. ಸತ್ಯದ ವಾಕ್ಯಗಳಿಂದಲೂ ಮತ್ತು ಪವಿತ್ರವಾಗಿರುವ ಸತ್ಯದ ಆತ್ಮನಿಂದಲೂ ಪುನಶ್ಚೇತನ ಹೊಂದುವುದರ ಮೂಲಕವಾಗಿ ಈ ಎಲ್ಲಾ ವಿಧವಾದ ದಾಹಗಳು ಹೇರಳವಾಗಿಯೂ ನಿರಂತರವಾಗಿಯೂ ತೃಪ್ತಿಗೊಳ್ಳುತ್ತಿರುವುದು. ನಮ್ಮ ವಿಮೋಚಕನ ಮೂಲಕವಾಗಿ ನಮಗೆ ಈ ಜೀವಕರವಾದ ನೀರಿನ ಸಂಪರ್ಕವಾಗಿ ಪ್ರತಿಯೊಬ್ಬನಲ್ಲಿಯೂ ಇದು ಸದಾ ಉಕ್ಕುವ ಜೀವದ ಬುಗ್ಗೆಯಾಗಿರುವುದು.

ಆ ಸಮಾರ್ಯದ ಹೆಂಗಸು ನಮ್ಮ ಕರ್ತನ ಮಾತಿನ ಅರ್ಥವನ್ನು ಗ್ರಹಿಸಲಿಲ್ಲವೆಂಬುದು ಸಹಜವೇ. ಅಂತಹ ಸನ್ನಿವೇಶದಲ್ಲಿ ನಮಗೂ ಅದು ಸಾಧ್ಯವಿರುತ್ತಿರಲಿಲ್ಲ. ಯಾಕೆಂದರೆ ನಮ್ಮ ಕರ್ತನು ನಮಗೆ ಕುಡಿಯಲು ಕೊಟ್ಟ ಬಾವಿ ಆಳವಾದುದು. ಆ ಸಮಾರ್ಯದ ಹೆಂಗಸಿಗಾಗಲೀ ಇಲ್ಲವೇ ನಮಗಾಗಲೀ ಆದರಿಂದ ನೀರು ಸೇದುವುದಕ್ಕೆ ಯಾವುದೂ ಇರುವುದಿಲ್ಲ. ಹೀಗಿದ್ದರೂ ಪವಿತ್ರಾತ್ಮನ ಮೂಲಕವಾದ ಹೊಸ ದೈವೀಕ ವ್ಯವಸ್ಥೆಯಲ್ಲಿ ಜೀವಿಸುತ್ತಿರುವ ನಮಗೆ ಅದನ್ನು ಹೇರಳವಾಗಿ ಒದಗಿಸಲಾಗಿದೆ. ಏಕೆಂದರೆ ಅಪೋಸ್ತಲನು ಸಾರಿ ಹೇಳಿದಂತೆ, "... ಆ ಆತ್ಮನು ಎಲ್ಲಾ ವಿಷಯಗಳನ್ನು, ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ.... ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು ತಿಳುಕೊಳ್ಳುವು ದಕ್ಕಾಗಿ (ಗ್ರಹಿಸಿಕೊಂಡು ತೃಪ್ತಿಹೊಂದಲು) ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು."–1 ಕೊರಿಂಥ 2:10,12

ನಿಜವಾಗಿರುವ ಜೀವಕರವಾದ ನೀರಿಗಾಗಿ ಆ ಹೆಂಗಸು ಮಾಡಿದ ಕೋರಿಕೆಗೆ ನಮ್ಮ ಕರ್ತನು ಉತ್ತರಿಸಲಿಲ್ಲ, (1) ಯಾಕೆಂದರೆ ಪವಿತ್ರವಾದ ಸತ್ಯದ ಆತ್ಮವನ್ನು ದಯಪಾಲಿಸುವ ಕಾಲವು ಇನ್ನೂ ಬಂದಿರಲಿಲ್ಲ ಮತ್ತು ಅದು ಕಲ್ವಾರಿಯಲ್ಲಿ ಆ ಶ್ರೇಷ್ಠ ಯಜ್ಞವು ಅರ್ಪಣೆಯಾಗಿ ನಂತರ ಪಂಚಾಶತ್ತಮ ದಿನವು ಬರುವವರೆಗೂ ಸಾಧ್ಯವಿರಲಿಲ್ಲ; (2) ಯಾಕೆಂದರೆ ಆಕೆಯು ಸಮಾರ್ಯದವಳಾಗಿರಲು ದೇವರ ಕೃಪಾನುಗ್ರಹವಾಗಲೀ ಪವಿತ್ರಾತ್ಮದಾನವಾಗಲೀ ಹೊಂದಲು ಅಗ ಅದು ನೇಮಿತವಾದ ಕಾಲವಾಗಿರಲಿಲ್ಲ. ಅದು ದೇವಾನುಗ್ರಹ ಹೊಂದುವ ಅವಕಾಶದ ಬಾಗಿಲು ಅನ್ಯಜನರೆಲ್ಲರಿಗೆ ತರೆಯಲ್ಪಡುವವರೆಗೆ ಅಂದರೆ ಪಂಚಾಶತ್ತಮ ದಿನದ ನಂತರ ಮೂರುವರೆ ವರುಷದ ಕಾಲಗಳವರೆಗೆ ಉಂಟಾಗುತ್ತಿರಲಿಲ್ಲ. ಹೀಗಿದ್ದರೂ ಆ ಹೆಂಗಸಿನ ಆಸಕ್ತಿ ನಂಬಿಕೆಗಳು ಮತ್ತು ಆಕೆಯ ಊರಿನ ಜನರ ನಂಬಿಕೆಯು ನಮ್ಮ ಕರ್ತನಿಗೆ ಅವರ ಹೃದಯದಲ್ಲಿನ ಪ್ರಾಮಾಣಿಕತೆಗೆ ಸೂಚನೆಯಾಗಿ ಕಂಡುಬಂದು ಅತನನ್ನು ಸಂತೋಷಗೊಳಿಸಿತು. ಈ ಕಾರಣದಿಂದ ಆತನು ಸಂತೈಸುವಿಕೆ ನೀಡುವ ಸತ್ಯದ ವಿಷಯವಾದ ಕೆಲವು ತುಣುಕುಗಳನ್ನು ಅವರ ಮುಂದೆ ಬೀಳಮಾಡಿದನು. ಅದು ಮುಂದೆ ಅನ್ಯಜನರೆಲ್ಲರಿಗೂ ಸುವಾರ್ತೆ ಕೇಳುವ ಅವಕಾಶವು ಪೂರ್ಣವಾಗಿ ತೆರೆಯಲ್ಪಡುವಾಗ ಅದನ್ನು ಅಂಗೀಕರಿಸಲು ಅವರನ್ನು ಸಿದ್ಧವಾಗುವಂತೆ ಮಾಡುವದಿತ್ತು. (3) ಯಾಕೆಂದರೆ ಆ ಹೆಂಗಸು ಇನ್ನೂ ಜೀವಕರವಾದ ನೀರನ್ನು ಸ್ವೀಕರಿಸುವ ಮನೋಸ್ಥಿತಿಯಲ್ಲಿರಲಿಲ್ಲ. ಆ ಹೆಂಗಸಿಗೆ ಮೇಲಿನ ಎರಡು ಕಾರಣಗಳನ್ನು ವಿವರಿಸಿ ಹೇಳುವ ಅಗತ್ಯವಿರಲಿಲ್ಲ. ಯಾಕೆಂದರೆ ಕಡೆಯದಾದ ಈ ಅಡಚಣೆಯ ವಿಷಯವಾಗಿ ಆಕೆಯು ಬಹು ಸುಲಭವಾಗಿ ಅರ್ಥಮಾಡಿಕೊಳ್ಳಬಹುದಾಗಿತ್ತು. ಈ ಕಾರಣಕ್ಕಾಗಿಯೇ ನಮ್ಮ ಕರ್ತನು ಆಕೆಯು ಪಾಪದಲ್ಲಿ ಜೀವಿಸುತ್ತಿರುವ ರೀತಿಯನ್ನು ಆಕೆಯ ಗಮನಕ್ಕೆ ತಂದಿದ್ದನು. ಈತನಿಗೆ ಪ್ರವಾದಿಗಳಿಗಿರುವಂತೆ ಅಂತರಂಗವನ್ನು ತಿಳಿದು ಕೊಳ್ಳುವ ವರವಿರುವುದನ್ನೂ ಮತ್ತು ಇದು ಈತನು ಒಬ್ಬ ಅನ್ಯನಾಗಿ ತನ್ನನ್ನು ಕೇಳದೆಯೇ ತನ್ನ ಪಾಪಭರಿತ ಜೀವಿತದ ವಿಷಯವಾಗಿ ತಿಳಿಯುವಂತೆ ಮಾಡಿತ್ತು ಎಂಬುದನ್ನೂ ಈಕೆಯು ಗ್ರಹಿಸಿಕೊಂಡಿದ್ದಳು.

ತಾನು ಕೊಡಬೇಕಿದ್ದ ಆಶೀರ್ವಾದವನ್ನು ಸ್ವೀಕರಿಸಲು ಸಿದ್ಧವಿಲ್ಲದ ಹೆಂಗಸಿಗೆ ನಮ್ಮ ಕರ್ತನು ಅದನ್ನು ಹೀಗೇಕೆ ದಯಪಾಲಿಸಿದನು ಮತ್ತು ಆಕೆಯು ಒಂದು ವೇಳೆ ಸಿದ್ಧಳಿದ್ದರೂ ಆಗ ಆತನು ಆ ಆಶೀರ್ವಾದವನ್ನು ಅವಳಿಗೆ ಕೊಡಲು ಸಾಧ್ಯವಿರುತ್ತಿರಲಿಲ್ಲವೆಂಬ ಪ್ರಶ್ನೆಬರಬಹುದು. ಇದಕ್ಕೆ ಉತ್ತರವು: (1) ಆತನು ತನಗೆ ದೊರೆತ ಅವಕಾಶದ ಪೂರ್ಣ ಪ್ರಯೋಜನ ಪಡೆಯಲು ಸಾದ್ಯವಾಗುವಂತೆ ಆ ಅವಕಾಶವನ್ನು ಉಪಯೋಗಿಸಿಕೊಂಡಿದ್ದನು. (2) ಆಕೆಯು ಪಾಪಭರಿತ ಜೀವಿತದಲ್ಲಿದ್ದಾಗ್ಯೂ ಸಹ ಆ ಹೆಂಗಸಿನ ಗುಣದಲ್ಲಿ ಪ್ರಾಮಾಣಿಕತೆಯ ವಿಶೇಷ ಲಕ್ಷಣವಿರುವುದನ್ನು ಆಕೆಯ ಮಾತಿನ ಮೂಲಕ ನಮ್ಮ ಕರ್ತನು ಕಂಡುಕೊಂಡಿದ್ದನು. (3) ಈ ತನ್ನ ಸಂಭಾಷಣೆಯ ಪ್ರಭಾವವು ಆಕೆಯನ್ನು ನೀತಿಯ ಮತ್ತು ಜೀವಕರವಾದ ನೀರಿನ ನಿಜವಾದ ಬಾಯಾರಿಕೆಯತ್ತ ನಡೆಸ ಬಹುದೆಂದು ಆತನು ಸೂಕ್ತವಾಗಿ ನಿರೀಕ್ಷಿಸಿದ್ದಿರಲೂ ಬಹುದು. ಅದು ಆರು ವರುಷಗಳ ನಂತರ ಸುವಾರ್ತೆಯು (ಯೆಹೂದ್ಯ ರನ್ನೂ ಬಿಡದೆ ಎಲ್ಲರಿಗೂ) ಸಾಧಾರಣವಾಗಿ ಸಾರಲ್ಪಡುವಾಗ, ಈ ಸಮಾರ್ಯರಲ್ಲಿ ಕೆಲವರಿಗೆ ಈ ಜೀವಕರವಾದ ನೀರಿನ ಬಾವಿಯು ಆಳವಾಗಿದ್ದು ಅದರಲ್ಲಿ ಸೇದಲು ತಮ್ಮಲ್ಲಿ ಏನೂ ಇಲ್ಲವೆಂಬುದನ್ನೂ ಹಾಗೂ ತಮಗೆ ಅದನ್ನು ತೃಪ್ತಿಕರವಾದಷ್ಟು ಹೊಂದಬೇಕಿದ್ದಲ್ಲಿ ತಾವು ಆ ಜೀವಕರವಾದ ನೀರನ್ನು ಕುಡಿಯಲು ಇಚ್ಛಿಸುವವರೆಲ್ಲರೂ ಹೊಂದುವದಕ್ಕಾಗಿ ತನ್ನ ಪ್ರಾಣವನ್ನು (ಯಜ್ಞವಾಗಿ) ನೀಡಿದಾತನ ಮೂಲಕವಾಗಿ ಒಂದು ವರದಾನವಾಗಿ ಅದನ್ನು ಪಡೆಯಬೇಕಾಗಿರುವುದೆಂಬ ಅಂಶದ ಅರಿವನ್ನು ಅದು ಉಂಟುಮಾಡುವುದು. ಅಲ್ಲದೆ ಸಮಾರ್ಯ ದವಳಾದ ಈ ಬಡ ಹೆಂಗಸಿಗೆ ಸುವಾರ್ತೆಯ ಪ್ರಭಾವಕ್ಕೆ ಒಳಗಾಗಿ ಈ ಜೀವಕರವಾದ ನೀರನ್ನು ಕುಡಿಯುವ ಸದವಕಾಶವು ಈಗ ಇಲ್ಲದೆಯೇ ಇರಬೇಕಾಗಿ ಬಂದದ್ದೇಯಾದಲ್ಲಿ ಆಕೆಯ ವಿಷಯ ವಾಗಿ ನಮಗೆ ದೇವರ ವಾಕ್ಯವು ಭರವಸೆ ನೀಡುವುದೆಂದರೆ ಈಗ ಯಾರಿಗೆಲ್ಲಾ ಇಂಥ ಅವಕಾಶವು ಹೊಂದಲು ಸಾದ್ಯವಾಗಿಲ್ಲವೋ ಅವರೆಲ್ಲರ ಜೊತೆಯಲ್ಲಿ ಈಕೆಗೂ ಮುಂದಿನ ಕಾಲದಲ್ಲಿ ಅದು ಅನುಗ್ರಹಿಸೋಣವಾಗುವದು.

ನಮಗೆ ತನ್ನ ವಾಕ್ಯದ ಮೂಲಕವಾಗಿ ಸಮರ್ಥ ರಾಗುವಂತೆ ತಿಳುವಳಿಕೆಯನ್ನು ದೊರೆಯ ಮಾಡಿದುದಕ್ಕಾಗಿ ಕರ್ತನಿಗೆ ಸ್ತೋತ್ರ. ಅದೇನೆಂದರೆ, ಜೀವಕರವಾದ ಆ ನೀರನ್ನು ಈಗ ವೈಯುಕ್ತಿಕವಾಗಿ ನೀಡಲಾಗಿದ್ದು ಅದರ ರುಚಿಯನ್ನು ಕೇವಲ "ಎಷ್ಟು ಮಂದಿಯನ್ನು ದೇವರಾದ ಕರ್ತನು ಕರೆದಿರುವನೋ" ಆ "ಕರೆಯಲ್ಪಟ್ಟರು" ಅನುಭವಿಸುತ್ತಿರುವಾರದೂ ಅದು ಹೀಗೆ ಇನ್ನು ದೇವ ಜನರಲ್ಲಿ ಉಕ್ಕುತ್ತಿರುವ ಒರತೆಯ ಬಾವಿಯಾಗಿರದೆ ಇರುವ ಆ ಕಾಲವು ಬರುತ್ತಿದೆ. ಆ ಸಾವಿರ ವರುಷದ ಕಾಲದಲ್ಲಿ ಅದು ವಿಶಾಲವುಳ್ಳದ್ದಾಗಿಯೂ ಪೂರ್ಣವಾಗಿ ತುಂಬಿ ಸ್ಫಟಿಕದಂತೆ ನಿರ್ಮಲವಾಗಿ ಹರಿಯುವ ಜೀವಜಲದ ನದಿಯಾಗಿರುವುದು; ಅದು ದೇವರ ಸಿಂಹಾಸನದಿಂದಲೂ, ಮತ್ತು ಯಜ್ಞದ ಕುರಿಯಾದಾತನ ಸಿಂಹಾಸನದಿಂದಲೂ, ಮತ್ತು ಯಜ್ಞದ ಕುರಿಯ ಹೆಂಡತಿಯೂ ಆತನೊಡನೆ ಸಹ–ಬಾಧ್ಯಳೂ ಆಗತಕ್ಕ ಮದಲಗಿತ್ತಿಯ ಸಿಂಹಾಸನದೊಳಗಿಂದಲೂ ಭೂಲೋಕದ ಎಲ್ಲಾ ಕುಲಗಳಿಗೋಸ್ಕರವಾಗಿ ಹರಿದು ಬರುವುದು. ಮತ್ತು ಆಗ ಅಲ್ಲಿ

ಸಮಸ್ತ ಜನಾಂಗಗಳು ಕಳೆದುಕೊಂಡದ್ದನ್ನು ಹಿಂದಿರುಗಿಸಿ ಅವುಗಳನ್ನು ಸ್ವಸ್ಥಮಾಡುವ ಎಲೆಗಳುಳ್ಳ ಜೀವವೃಕ್ಷಗಳು ಮಾತ್ರವಿರದೆ ಅಲ್ಲಿ ಆತ್ಮನೂ (ಆಗ ಮಹಿಮಾ ಪದವಿಗೆ ಸೇರಿದ) ಮದಲಗಿತ್ತಿಯೂ––ಬಾ ಅನ್ನುತ್ತಾರೆ, ಕೇಳುವವನೂ–ಬಾ ಅನ್ನಲಿ. ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ.–– ಪ್ರಕಟಣೆ 22:17

ಆ ಸಮಾರ್ಯದ ಹೆಂಗಸು ತನ್ನ ನಡತೆಯ ಮತ್ತು ಜೀವಿತದ ವಿಷಯವಾಗಿ ಚರ್ಚೆಮಾಡುವುದರಿಂದ ತಪ್ಪಿಸಿ ಕೊಳ್ಳಲು ಕಾತುರವಾಗಿದ್ದಳೆಂದು ತೋರುತ್ತದೆ. ಅಂತೆಯೇ ಆಕೆಯು ಕುಶಲತೆಯಿಂದ ಪ್ರಶ್ನೆಯನ್ನು ದಾರ್ಮಿಕ ವಿಷಯಗಳ ಕಡೆಗೆ ತಿರುಗಿಸಿ ದೇವಾರಾಧನೆಯ ಮತ್ತು ಅದನ್ನು ಮಾಡುವ ಸೂಕ್ತ ಸ್ಥಳದ ವಿಷಯವಾಗಿ ಯೆಹೂದ್ಯರಲ್ಲಿರುವ ಅಥವಾ ಸಮಾರ್ಯರಲ್ಲಿರುವ ವಿವಿಧ ದೃಷ್ಟಿಗಳು ಸರಿಯೋ ಎಂಬುದನ್ನು ವಿಚಾರಿಸತೊಡಗಿದಳು. ಹೀಗೆ ಮಾನವರ ಸ್ವಭಾವಗಳು ಈ ದಿನದಲ್ಲೂ ಅದೇ ರೀತಿಯಲ್ಲಿರುವುದನ್ನು ಇಲ್ಲಿ ನಾವು ನೋಡುತ್ತೇವೆ. ಈ ದಿನದಲ್ಲೂ ಪುರುಷರು ಮತ್ತು ಸ್ತ್ರೀಯರು ತಮ್ಮ ದೃಷ್ಟಿಯನ್ನು ತಮ್ಮ ಆಂತರ್ಯದ ವಿಷಯಗಳಿಗೆ ತಿರುಗಿಸಿ ಕೊಂಡು ತಮ್ಮ ಜೀವಿತದಲ್ಲಿರುವ ಏರುಪೇರಾದ ಸಂಗತಿಗಳನ್ನು ತಿಳಿದುಕೊಂಡು ಅವುಗಳನ್ನು ತಿದ್ದಿಸರಿಪಡಿಸಿ ಕೊಳ್ಳುವ ಬದಲು ಅವರು ಧಾರ್ಮಿಕ ಸಮಸ್ಯೆಗಳನ್ನು ಹಾಗೂ ಕ್ರೈಸ್ತ ಪಂಗಡಗಳ ಲ್ಲಿರುವ ವಿವಾದಗಳ ವಿಷಯವಾಗಿ ಚರ್ಚಿಸಲು ಬಯಸುವರು. ನಮ್ಮ ಕರ್ತನೂ ಸಹ ತಾನು ಪ್ರಾಮಾಣಿಕವಾಗಿ ಕೇಳಿದ ಆ ನೈತಿಕ ಪ್ರಶ್ನೆಯನ್ನು ಬಹು ಬಲವಂತವಾಗಿ ಮುಂದುವರೆಸಿ ಅದನ್ನು ಸ್ವಲ್ಪ ಮಟ್ಟಿನ ಸೂಕ್ಮ ವಿಚಾರವನ್ನಾಗಿ ಮಾಡಲಿಲ್ಲ. ಮತ್ತು ಆತನು ಅನುಸರಿಸಿದ ಈ ವಿಧಾನವು ತನ್ನ ಹಿಂಬಾಲಕರಿಗೆ ಒಂದು ಪಾಠವಾಗಿರಬೇಕು. ಆ ಒಂದು ತಪ್ಪಿನ ಕಡೆಗೆ ಗಮನ ಹರಿಯುವಂತೆ ಮಾಡಿದರಷ್ಟೇ ಸಾಕು. ಇದು ಅವರನ್ನು ಅಗೌರವವಾಗಿ ದೂರುವುದರ ಮೂಲಕ ಅವಹೇಳನಮಾಡಿ ಕೋಪವನ್ನೆಬ್ಬಿಸಿ ಅವರು ತಮ್ಮನ್ನು ರಕ್ಷಿಸಿಕೊಳ್ಳತೊಡಗುವಂತೆ ಮಾಡುವುದಕ್ಕಿಂತಲೂ ಬಹು ಪರಿಣಾಮಕಾರಿಯಾದುದು.

ನಮ್ಮ ಕರ್ತನು ದೇವರನ್ನು ಸರಿಯಾಗಿ ಆರಾಧಿಸುವುದರ ವಿಷಯವಾದ ಶ್ರೇಷ್ಠವಾದ ಪಾಠವನ್ನು ಕೆಲವು ಮಾತುಗಳಲ್ಲಿ ಸಂಕ್ಷೇಪಿಸಿ ಹೇಳಿದನು. ಆತನು ಆ ಹೆಂಗಸಿಗೆ ಬಹು ನಾಟುವ ರೀತಿಯಲ್ಲಿ ಹೇಳಿದ್ದೇನೆಂದರೆ: ಸಮಾರ್ಯರಿಗೆ ಈ ವಿಷಯದಲ್ಲಿ ಯಾವ ಪಾತ್ರವೂ ಪಾಲೂ ಇರುವುದಿಲ್ಲ ಮತ್ತು ಅವರು ತಾವು ತಿಳಿಯದಿರುವುದನ್ನು ಆರಾಧಿಸುವವರಾಗಿರುವರು; ಆದರೆ ಇದಕ್ಕೆ ಪ್ರತಿಯಾಗಿ ಯಹೂದ್ಯರು ದೇವರ ನಿಯಮವನ್ನು ಅನುಸರಿಸುವವರಾಗಿದ್ದರು. ಹೀಗಿರುವಲ್ಲಿ ಆತನು ಆರಾಧನಾ ಕ್ರಮವಿಧಾನಗಳಲ್ಲಿ ದೊಡ್ಡ ಬದಲಾವಣೆಗಳು ಉಂಟಾಗುವ ಕಾಲವು ಸಮೀಪಿಸುತ್ತಿರುವ ಅಂಶದ ಕಡೆಗೆ ಅವರ ಗಮನವನ್ನು ಸೆಳೆದು, ಅಲ್ಲಿ ಆರಾಧನೆಯ ಸ್ಥಳ ಹಾಗೂ ಅದರ ವಿಧಾನಗಳಲ್ಲಿರುವ ಎಲ್ಲಾ ವೈವಿಧ್ಯತೆಗಳು ಮತ್ತು ಅಡೆತಡೆಗಳು ತೆಗೆಯಲ್ಪಟ್ಟು ಅವು ಇಲ್ಲದಂತಾಗುವುದಾಗಿಯೂ ಮತ್ತು ದೇವರ ಕೃಪೆಯ ವಿಷಯವಾಗಿ ಕೇಳುವ ಕಿವಿಯುಳ್ಳವರು ಮತ್ತು ಕಾಣುವ ಕಣ್ಣುಳ್ಳವರೆಲ್ಲರೂ ದೇವರನ್ನು ಎಲ್ಲಿಯಾದರೂ ಆರಾಧಿಸುವಂತೆ ಮಾಡಲಾಗುವುದು ಎಂದು ಹೇಳಿದನು. ಆದರೆ ಅದು ಕೇವಲ ಆತ್ಮಿಯ ರೀತಿಯಲ್ಲಿ (ಹೃದಯಪೂರ್ವಕವಾಗಿ ಪ್ರಾಮಾಣಿಕತೆ ಯಿಂದ) ಸತ್ಯಕ್ಕೆ ತಕ್ಕ ಹಾಗೆ ನಿಜವಾದ ರೀತಿಯಲ್ಲಿ ದೇವರ ನೇಮಾನುಸಾರ ಮಾರ್ಗವೂ ಸತ್ಯವೂ ಜೀವವೂ ಆಗಿರುವ ಕ್ರಿಸ್ತನ ಮೂಲಕವಾಗಿರುವುದು. ಜೀವಕರವಾದ ನೀರನ್ನು ಸಂಗ್ರಹಿಸಿರು ವಾತನೂ ಅದನ್ನು ವಿತರಿಸುವಾತನೂ ಆದ ಮೆಸ್ಸೀಯನೊಬ್ಬನ ಮೂಲಕವಾಗಿಯೇ ತಂದೆಯ ಬಳಿಗೆ ಹೋಗುವ ಮಾರ್ಗವು ಇರುವುದು.

ಪೌರಾತ್ಯ ದೇಶದವರ ಒಂದು ಕಟ್ಟುಕತೆಯು ಹೇಳುವಂತೆ ವಿಶಿಷ್ಟ ಶಕ್ತಿಯಿಂದ ಕೂಡಿದ ನೀರಿನ ಒಂದು ಬುಗ್ಗೆಯಿದ್ದು ಅದರ ಹನಿಯು ಬರಡಾದ ಭೂಮಿಯ ಮೇಲೆ ಎಲ್ಲೆಲ್ಲಿ ಬಿದ್ದಿತೋ ಅಲ್ಲಲ್ಲಿ ಒಂದು ಹೊಸ ಬುಗ್ಗೆಯು ಚಿಮ್ಮುವಂತಾಯಿತು. ಈ ಮೂಲಕವಾಗಿ ಆ ಅಡವಿಯು ಎಷ್ಟು ವಿಸ್ತಾರವಾಗಿಯೂ ಬರಡಾಗಿಯೂ ಇದ್ದರೂ ಅದನ್ನು ಹಾದು ಹೋಗುವ ಪ್ರಯಾಣಿಕರಿಗೆ ಯಾವಾಗಲೂ ನೀರು ದೊರಕಿ ಅದರಿಂದ ಅವರು ಪುನಶ್ಚೇತನ ಹೊಂದುವಂತಾಗಿತ್ತು.

ವಿರಳವೂ ಸ್ವಾರಸ್ಯಪೂರ್ಣವೂ ಆದ ದಂಥಕತೆ;
ಅರ್ಥಗಳಾದರೂ ಮೇಲಲ್ಲದಿರಬಹುದು,
ಬರಲಿರುವ ಮೇಲುಗಳ ದರ್ಶನಗಳು,
ಅಡಗಿಹುದೇ ಅದರ ನೆಳಲಿನಲ್ಲಿ?
ಉತ್ತಮ ಚಿಲುಮೆಯ ಛಾಯೆ,
ಈಗ ಮರ್ತ್ಯರಿಗೆ ತೆರೆದಿಹುದು,
ನಮ್ಮ ಕರ್ತನಾದ ಕ್ರಿಸ್ತನಲ್ಲಿನ ಪೂರ್ಣವೂ
ಉಚಿತವೂ ಆದ ರಕ್ಷಣೆ ಕಾಣತೊಡಗಿಹುದು

ಶಿಲುಬೆಯಡಿಯಲಿ ಅಡಗಿಹುದು ಆ ಜಲವು,
ಕಂಡಾತನು, ಅವುಗಳನ್ನು ಅಲ್ಲಿ,
ಹೊರುವನು ಅರಣ್ಯ ಪಯಣದ ಜೀವಿತವಿಡೀ
ಜೀವದ ಬುಗ್ಗೆಯ ಅಲ್ಲಿ,
ಶುಭವು ಹಿಂದೋಗುವವು ಆತನ ಹೆಜ್ಜೆಯ,
ಆತನು ಹೋಗಲಿರುವಲ್ಲಿ
ಬರಿದಾದಂತಿದ್ದ ನೀತಿ ಚಿಗುರಿ
ಗುಲಾಬಿಯಂತೆ ಅರಳುವದು ಅಲ್ಲಿ

*****

# “ನನಗೆ ಕುಡಿಯುವುದಕ್ಕೆ ಕೊಡು”

### ರಿಪ್ರಿಂಟ್ಸ್, ಪುಟ 4130

## ಯೊಹಾನ 4:19-29

**“ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಲಿ.” – ಯೋಹಾನ 7:39**

ಸ್ನಾನಿಕನಾದ ಯೋಹಾನನು ಯೇಸುವಿನ ವಿಷಯವಾಗಿ ಸಾಕ್ಷಿ ನುಡಿದು ಹೇಳಿದ್ದು, “ಆತನು ವೃದ್ಧಿಯಾಗಬೇಕು; ನಾನು ಕಡಿಮೆಯಾಗಬೇಕು.” (ಯೋಹಾನ 3:30) ಇದರ ಅನುಸಾರವೇ ನಾವು ಓದುವುದು: ಯೇಸುವು (ತನ್ನ ಶಿಷ್ಯರ ಮೂಲಕವಾಗಿ) ಯೋಹಾನನು ಮತ್ತು ಆತನ ಜೊತೆಗಾರರಿಗಿಂತಲೂ ಹೆಚ್ಚು ಜನರಿಗೆ ದೀಕ್ಷಾಸ್ನಾನ ಮಾಡಿಸುತ್ತಿದ್ದುದು. (ಯೋಹಾನ 4:1) ಬೆಳೆಯುತ್ತಿದ್ದ ಯೇಸುವಿನ ಜನಪ್ರಿಯತೆಯು ಶಾಸ್ತ್ರಿಗಳ ಮತ್ತು ಫರಿಸಾಯರಲ್ಲಿ ತೀವ್ರ ವಿರೋಧವನ್ನೆಬ್ಬಿಸಿತು ಮತ್ತು ಅವರು ಆತನನ್ನು ಕೊಲ್ಲಲು ನೋಡುತ್ತಿದ್ದರು. (ಯೋಹಾನ 7:1) ಅವರು ಯೋಹಾನನಿಗಿಂತಲೂ ಯೇಸುವಿನ ಮೇಲೆ ಅಧಿಕ ದ್ವೇಶವುಳ್ಳವರಾದರು. ಏಕೆಂದರೆ ಅವನು ತಮಗಿಂತಲೂ ಉತ್ಕೃಷ್ಟನಾಗಿರುವುದನ್ನು ಅವರು ತಿಳಿದಿದ್ದರು. ಕಾರಣ ತಿಳುವಳಿಕೆಯಿಲ್ಲದ ಸಾಮಾನ್ಯ ಜನರು ಸಂತೋಷದಿಂದ ಅತನ ಮಾತನ್ನು ಕೇಳುತ್ತಿದ್ದರು. ಅವರು ಹೇಳುತ್ತಿದ್ದುದು: “ಈ ಮನುಷ್ಯನು ಮಾತಾಡುವಂತೆ ಬೇರೆ ಯಾರೂ ಮಾತಾಡಿದ್ದಿಲ್ಲ.” ಇದಾದ ನಂತರ ಧರ್ಮನಿಯಮದ ಪ್ರಕಾರ ದೊಡ್ಡ ಜನಸಂದಣಿ ಕೂಡುತ್ತಿದ್ದ ಹಬ್ಬದ ಸಂದರ್ಭಗಳ ಹೊರತಾಗಿ ಯೇಸುವು ಯೆರೂಸಲೇಮಿನಲ್ಲಿ ಇರುತ್ತಿದ್ದುದನ್ನು ನಾವು ಕೇಳುವುದಿಲ್ಲ.

ತನ್ನ ಅಪೊಸ್ತಲರಲ್ಲಿ ಬಹು ಪಾಲಿನವರ ವಾಸದ ನಾಡಾದ ಗಲಿಲಾಯಕ್ಕೆ ಹೋಗುವ ಪ್ರಯಾಣವು ಅವರನ್ನು ಸಮಾರ್ಯದವರ ನಾಡಿನ ಮೂಲಕವಾಗಿ ಹೋಗುವಂತೆ ಮಾಡಿತು. ಆ ಸಮಾರ್ಯದವರ ವಿಷಯವಾಗಿ ನಮ್ಮ ಕರ್ತನು ಶಿಷ್ಯರಿಗೆ ಆಜ್ಞಾಪಿಸಿ ಹೇಳಿದ್ದು, “ಅನ್ಯಜನಗಳ ಕಡೆಗೆ ಹೋಗಬೇಡಿರಿ, ಸಮಾರ್ಯರ ಊರೊಳಗೆ ಕಾಲಿಡಬೇಡಿರಿ; ಇವರನ್ನು ಬಿಟ್ಟು ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲನ ಮನೆತನದವರ ಬಳಿಗೆ ಹೋಗಿರಿ.” (ಮತ್ತಾಯ 10:5,6) ಹೀಗೆ ಸಮಾರ್ಯದವರನ್ನು ಅನ್ಯಜನರ ವರ್ಗಕ್ಕೆ ಸೇರಿಸಲಾಗಿದ್ದು, ಅವರು ಅನ್ಯರೂ ಪರದೇಶಿಗಳೂ ಇಸ್ರಾಯೇಲ್ಯರ ಹಕ್ಕಿನಲ್ಲಿ ಪಾಲಿಲ್ಲದವರೂ ಆಗಿದ್ದರು. ಅವರ ಚರಿತ್ರೆಯನ್ನು ನೆನಪಿಗೆ ತಂದುಕೊಂಡು ನಾವು ಹೇಳುವುದೆಂದರೆ, ಬಾಬೇಲಿನ ಅರಸನಾದ ನೆಬುಕದ್ನೇಚ್ಚರನು ಇಸ್ರಾಯೇಲ್ಯರನ್ನು ಸೆರೆಗೆ ಹೊಯ್ಯುವಾಗ ಕೆಲವು ಅನ್ಯಜನರನ್ನು ಆತನು ಇಸ್ರಾಯೇಲಿನಲ್ಲಿ ವಲಸೆಗಾರರನ್ನಾಗಿ ತಂದಿರಿಸಿದನು. ತಮ್ಮ ಹಿಂದಿನ ವಿಗ್ರಹಾರಾಧನೆಗಳಿಂದ ಬೇರ್ಪಟ್ಟ ಈ ಜನರು ತಮ್ಮ ಹೊಸ ನಿವಾಸದ ದೇಶದ ಅದರ ಧರ್ಮಶಾಸ್ತ್ರ ಸಂಪ್ರದಾಯ ಧಾರ್ಮಿಕ ಮನೋಭಾವ ಮುಂತಾದ ವಿಷಯಗಳಲ್ಲಿ ಆಸಕ್ತಿಯುಳ್ಳವರಾದರು. ಇಷ್ಟೇ ಅಲ್ಲದೆ, ಯೆಹೂದ್ಯರಲ್ಲಿ ಶ್ರದ್ಧೆಯಿಲ್ಲದವರೂ ಅಜ್ಞಾನಿಗಳು ದುಷ್ಟರಾದವರಲ್ಲಿ ಕೆಲವರು ತಮ್ಮ ದೈವನಿಯಮವನ್ನು ಅಲಕ್ಷ್ಯಮಾಡಿ ಸಮಾರ್ಯದವರೊಡನೆ ಪರಸ್ಪರ ವಿವಾಹವಾದರು. ಹೀಗೆ ಯೆಹೂದ್ಯರ ರಕ್ತದ ಅಂಶವು ಅವರಲ್ಲಿ ಪರಸ್ಪರ ಬೆರೆತುಕೊಂಡಿತು. ಆವರು ತಮ್ಮನ್ನು ಯಾಕೋಬನ ಮಕ್ಕಳೆಂದು ಕರೆದುಕೊಂಡು ಇದು ತಮಗೆ ಕೆಲವು ವಿಶೇಷವಾದ ಆಶೀರ್ವಾದ ತರುವದೆಂಬುದರಲ್ಲಿ ಭರವಸೆಯನ್ನು ಹೊಂದಿದ್ದರು.

ಹೀಗೆ ಅವರ ಮತ್ತು ಯಾಕೋಬನ ಸಹಜ ಸಂತತಿಯಾದ ಯೆಹೂದ್ಯರ ನಡುವೆ ಒಂದು ತೀವ್ರವಾದ ಭಿನ್ನಾಭಿಪ್ರಾಯಗಳು ಏರ್ಪಟ್ಟವು. ಯೆಹೂದ್ಯರು ಮೋಶೆಯು ಕೊಟ್ಟ ನಿಯಮವನ್ನು ಅನುಸರಿಸುವವರಾಗಿ ಯೆರೂಸಲೇಮು ಮತ್ತು ಅದರ ಆಲಯವು ದೇವರಿಗೆ ಅಂಗೀಕೃತವಾದ ಆರಾಧನೆಗಳೆಲ್ಲವುಗಳಿಗೆ ಕೇಂದ್ರವೆಂಬದನ್ನು ಅಂಗೀಕರಿಸಿಕೊಂಡಿದ್ದರು. ಹೀಗಿರುವಲ್ಲಿ ಬೇರ್ಪಟ್ಟವರಾದ ಸಮಾರ್ಯರು ತಮ್ಮ ಸ್ವದೇಶಕ್ಕಿಂತಲೂ ಕೆಲವು ಉತ್ತಮವಾದುವುಗಳನ್ನು ಹೊಂದಿರುವುದಾಗಿ ಹೇಳಿಕೊಂಡರು. ಅದೇನೆಂದರೆ, ತಮ್ಮ ದೇಶದಲ್ಲೇ ಯಾಕೋಬನು ದೇವರಿಗೆ ಆರಾಧನೆಮಾಡುತ್ತಿದ್ದ ಬೆಟ್ಟವಿತ್ತು ಮತ್ತು ದೇವರಿಗೆ ಆರಾಧಿಸುವುದಕ್ಕಾಗಿ ಅವರು ಈ ಬೆಟ್ಟದ ಕಡೆಗೆ ಹೋಗುವವರಾದರು ಅಥವಾ ಅದನ್ನು ನೋಡುವವರಾದರು. ಅದು ಒಂದು ಸಹಜವಾದ ಮಹಾ ದೇವಾಲಯವಾಗಿ ಭೂಮಿಯಲ್ಲಿರುವವುಗಳೆಲ್ಲಕ್ಕಿಂತಲೂ ಉತ್ಕೃಷ್ಟವಾಗಿರುವುದೆಂದು ಅವರು ಅದಕ್ಕೆ ಮಾನ್ಯತೆ ನೀಡಿದ್ದರು. ಈ ಅಂಶಗಳು ಕರ್ತನು ಈ ಪಾಠಕ್ಕೆ ಸಂಬಂಧಿಸಿದಂತೆ ವ್ಯಕ್ತಪಡಿಸಿರುವ ವಿಷಯಗಳಿಗೆ ವಿವರಣೆ ನೀಡುತ್ತವೆ. ಮತ್ತು ದೇವರ ರಾಜ್ಯಕ್ಕೆ ಸೇರಲು ಮಾಡಿದ ಆಹ್ವಾನವು ಮತ್ತು ಅದಕ್ಕಾಗಿ ನೀಡುತ್ತಿದ್ದ ಕರೆಯುವಿಕೆಯ ವಿಷಯವಾದ ಆತನ ಸಂದೇಶವು ಯೆಹೂದ್ಯರಿಗೆ ಮಾತ್ರ ಸೀಮಿತವಾಗಿದ್ದು ಇದರಿಂದ ಸಮಾರ್ಯದವರು ಸಹಿತವಾಗಿ ಅನ್ಯಜನರು ಹೊರತಾಗಿದ್ದುದರ ಕಾರಣವನ್ನು ತೋರಿಸುತ್ತದೆ. ಒಂದು ಜನಾಂಗವಾಗಿ ಯೆಹೂದ್ಯರು ತಮಗೆ ದೊರೆತ ಈ ಸದವಕಾಶವನ್ನು ಅಲಕ್ಷ್ಯಮಾಡಿದವರಾಗಿ ದೇವರ ರಾಜ್ಯಕ್ಕೆ ಸಂಬಂಧಿಸಿದ ವಿಶೇಷ ಸೌಲಭ್ಯಸವಲತ್ತುಗಳನ್ನು ಅವರಿಂದ ತೆಗೆಯಲ್ಪಟ್ಟು ಅವುಗಳನ್ನು ಭೂಲೋಕದ ಸಕಲ ಜನಾಂಗ ಪ್ರಜೆ ಕುಲ ಭಾಷೆಯವರಲ್ಲಿ, ಸಮಾರ್ಯದವರನ್ನೂ ಒಳಗೊಂಡು, ಕೇಳುವ ಕಿವಿಯುಳ್ಳಂಥವರಿಗೆ ನೀಡುವವರೆಗೂ ಇದು ಹೀಗೆಯೇ ಇರುವುದು.

## “ನನಗೆ ಕುಡಿಯುವುದಕ್ಕೆ ಕೊಡು”

ಗಲಿಲಾಯಕ್ಕೆ ಹೊಗುವ ಮಾರ್ಗವು ಯಾಕೋಬನು ತೆಗೆಸಿದ ಬಾವಿಯ ಬಳಿಯಲ್ಲಿ ಕವಲೊಡಯುವುದು. ಶಿಷ್ಯರು ಆಹಾರವನ್ನು ಕೊಳ್ಳುವುದಕ್ಕಾಗಿ ಸುಖರೆಂಬ ಹತ್ತಿರದಲ್ಲಿದ್ದ ಸಮಾರ್ಯದ ಒಂದು ಹಳ್ಳಿಗೆ ಹೋದರು. ಆ ಬಾವಿಯು 75

ಅಡಿ ಆಳವಾಗಿದ್ದು ಮೇಲೆ ಅದರ ಬಾಯಿಗೆ ಕುಳಿತುಕೊಳ್ಳುವಷ್ಟು ಅಗಲವಿರುವ ವೃತ್ತಾಕಾರದ ಗೋಡೆಯನ್ನು ಹಾಕಲಾಗಿತ್ತು. ಆಗ ಯೇಸುವು ಬಾವಿಯ ಬಳಿಯಲ್ಲಿ ವಿಶ್ರಮಿಸಿದ್ದನು. ಹತ್ತಿರವಿದ್ದ ಹೊಲದಲ್ಲಿ ಕೆಲಸಮಾಡುತ್ತಿದ್ದ ಒಬ್ಬ ಸಮಾರ್ಯದ ಹೆಂಗಸು ನೀರು ಸೇದಲು ಬರಲಾಗಿ ಯೇಸು ಆಕೆಯನ್ನು ನೀರು ಕುಡಿಯಲು ಅನುಗ್ರಹಮಾಡುವಂತೆ ಕೇಳಿಕೊಂಡಾಗ ಆಕೆಯು ತೀವ್ರವಾಗಿ ಆಶ್ಚರ್ಯಪಟ್ಟಳು. ಅಂದಿನ ಸಾಮಾಜಿಕ ಶಿಷ್ಟಾಚಾರವು ಎಷ್ಟು ಕಟ್ಟುನಿಟ್ಟಾಗಿತ್ತೆಂದರೆ ಸಾಧಾರಣವಾದ ಸನ್ನಿವೇಶಗಳಲ್ಲಿ ಸ್ವಾಭಿಮಾನಿಯಾದ ಯಾವ ಯೆಹೂದ್ಯನೂ ಒಬ್ಬ ಸಮಾರ್ಯನಿಗೆ ಸಹಾಯವನ್ನು ವಿಶೇಷವಾಗಿ ಕುಡಿಯಲು ನೀರನ್ನು ಕೇಳಲಾರನು. ಆ ಕಾಲದಲ್ಲಿ ನೀರನ್ನಾಗಲೀ ಅಥವಾ ಆಹಾರವನ್ನಾಗಲೀ ಉಡುಗೊರೆಯಾಗಿ ನೀಡುವುದಾಗಲೀ ಅಥವಾ ತೆಗೆದುಕೊಳ್ಳುವುದಾಗಲೀ ಮಾಡಿದ್ದಲ್ಲಿ ಅದು ಒಂದು ಸದ್ಭಾವನೆಯ ಒಡಂಬಡಿಕೆಯಾಗಿ ಅನ್ಯೋನ್ಯತೆಗೆ ಸೂಚನೆ ಯಾಗಿತ್ತು. ಆ ಹೆಂಗಸು ಕರ್ತನ ಈ ವಿಶಿಷ್ಟವಾದ ನಡವಳಿಕೆಗೆ ಕಾರಣವನ್ನು ಕೇಳಿದಳು; ಅದರೆ ಅತನು ಏನನ್ನೂ ಹೇಳಲಿಲ್ಲ. ಇಡೀ ಸುವಾರ್ತೆಗಳಲ್ಲಿ ನಿರೂಪಿಸಿರುವ ಸಂಗತಿಗಳಿಂದ ನಾವು ಗ್ರಹಿಸುವುದು: ತಾನು ಯಾವ ವರ್ಗದವರೊಡನೆಯಾದರೂ, ಅವರು ಸುಂಕದವರೇ ಆಗಲೀ ಅಥವಾ ಪಾಪಿಗಳೇ ಆಗಿರಲಿ ಅವರಿಗೆ ಒಳ್ಳೆಯದನ್ನು ಮಾಡುವ ಯಾವುದೇ ಅವಕಾಶವನ್ನು ಅಲಕ್ಷ್ಯಮಾಡದೆ, ಅವರೊಂದಿಗೆ ಬೆರೆಯಲು ಸಿದ್ಧವಿರುವ ನಮ್ಮ ಕರ್ತನ ದೀನಭಾವ. ಹೀಗೆ ಆತನು ಶಾಸ್ತ್ರಿಗಳ ಮತ್ತು ಫರಿಸಾಯರಲ್ಲಿದ್ದ ಅವರ ಪ್ರತ್ಯೇಕವಾಗಿರುವ ಮನೋಭಾವವನ್ನು ಖಂಡಿಸಿ ಅದನ್ನು ತಿದ್ದಿಕೊಳ್ಳಲು ಹೇಳಿದ್ದನು. ಆತನ ಸಾಮ್ಯಗಳಲ್ಲಿ ಒಂದು ವಿಶೇಷವಾಗಿ ಹೊರನೋಟಕ್ಕೆ ತಮಗಿಂತಲೂ ಹೆಚ್ಚು ಕೀಳಾದವರ ವಸ್ತ್ರವನ್ನಾದರೂ ಮುಟ್ಟಲು ಹಿಂಜರಿಯುವ ಸ್ವನೀತಿಯುಳ್ಳವರ ವಿಷಯವನ್ನು ತೋರಿಸಿ ಹೇಳಿದ್ದಾಗಿತ್ತು. ನಮ್ಮ ಕರ್ತನು ಹೊರನೋಟಕ್ಕೆ ಕೀಳಾಗಿರುವುದನ್ನು ಮಾನ್ಯಮಾಡದೆ ದೇವರು ಹೃದಯವನ್ನು ನೋಡುವವನಾಗಿದ್ದಾನೆಂತಲೂ ಹಾಗೂ ಮನುಷ್ಯರ ದೃಷ್ಟಿಯಲ್ಲಿ ಅಧಿಕ ಮಾನ್ಯತೆ ಪಡೆದಿರುವ ಕೆಲವರು ತನ್ನ ದೃಷ್ಟಿಯಲ್ಲಿ ಮನುಷ್ಯರಲ್ಲಿ ತಿರಸ್ಕರಿಸಲ್ಪಟ್ಟ ಕೆಲವರಿಗಿಂತಲೂ ಅಸಹ್ಯವಾಗಿರುವರೆಂತಲೂ ತೋರಿಸಿಕೊಟ್ಟನು.

## ಯುಕ್ತಿವಂತಿಕೆಯ ದೃಷ್ಟಾಂತ

ನಮ್ಮ ಕರ್ತನು ವಿಶೇಷ ಯುಕ್ತಿಬುದ್ಧಿವಂತಿಕೆಗಳನ್ನು ಪ್ರದರ್ಶಿಸಿದ್ದನು. ಆ ಹೆಂಗಸಿನ ವಿಚಾರಣೆಗೆ ಉತ್ತರಿಸುವ ಬದಲು ಆತನು ಗಾಢವಾದ ಸತ್ಯದ ವಿಷಯದ ಕಡೆಗೆ ಆಕೆಯ ಗಮನವನ್ನು ಸೆಳೆದನು. ಯುಕ್ತಿವಂತಿಕೆಗಳ ವಿಷಯದಲ್ಲಿನ ಈ ಪಾಠವು ಕರ್ತನ ಜನರಲ್ಲಿ ಹಲವರಿಗೆ ಅಗತ್ಯವಿದೆ. ತಾವು ಯುಕ್ತಿಯನ್ನು ಉಪಯೋಗಿಸಬಾರದೆಂಬ ತಪ್ಪಾದ ನಂಬಿಕೆಯು ಕೆಲವರಲ್ಲಿರುವುದು ನಮಗೆ ತಿಳಿದಿದೆ. ಹಾಗೆ ಮಾಡಿದಲ್ಲಿ ಅದು ಅಪ್ರಮಾಣಿಕತೆಯಾಗುವುದೆಂಬುದು ಅವರ ನಂಬಿಕೆ. ಆದುದರಿಂದ ಅವರು ಪದೇಪದೇ ಇತರರ ಭಾವನೆಗಳಿಗೆ ನಿರ್ದಾಕ್ಷಿಣ್ಯವಾಗಿ ಕೆಲವು ಮಟ್ಟಿಗೆ ಹಾನಿಯುಂಟುಮಾಡಿ ತಮ್ಮಲ್ಲಿರುವ ಉಪಯುಕ್ತತೆ ಸ್ವಭಾವಗಳಿಗೆ ಅಡ್ಡಿಯನ್ನು ಉಂಟುಮಾಡಿಕೊಳ್ಳುತ್ತಾರೆ. ಅಂಥವರು ಇಲ್ಲಿರುವ ಪಾಠವನ್ನೂ ಹಾಗು ಬಹುಮಂದಿ ಇತರರು ನಮ್ಮ ಕರ್ತನ ಯುಕ್ತಿವಂತಿಕೆ ಯನ್ನು ಗಮನಿಸಬೇಕು. ಆ ಹೆಂಗಸಿನ ಪ್ರಶ್ನೆಗೆ ಉತ್ತರಿಸಬೇಕೆಂದು ಆತನಿಗೆ ಅನ್ನಿಸಲಿಲ್ಲ. ಅದಕ್ಕೆ ಪ್ರತಿಯಾಗಿ ಆತನು ಹೇಳಿದ್ದು "ದೇವರು ಕೊಡುವ ವರವೇನೆಂಬುದನ್ನೂ ಕುಡಿಯುವುದಕ್ಕೆ ನೀರುಕೊಡು ಎಂದು ನಿನಗೆ ಹೇಳಿದವರು ಯಾರೆಂಬುದನ್ನು ನಿನಗೆ ತಿಳಿದಿದ್ದರೆ ನೀನು ಅವನನ್ನು ಬೇಡಿಕೊಳ್ಳುತ್ತಿದ್ದಿ, ಅವನು ನಿನಗೆ ಜೀವಕರವಾದ ನೀರನ್ನು ಕೊಡುತ್ತಿದ್ದನು.." (ಯೋಹಾನ 4:10) ಇದೇ ರೀತಿಯಲ್ಲಿ ನಮಗೆ ಸಂಪರ್ಕವಿರುವರೆಲ್ಲರೊಡನೆ ಜೀವಿತದ ಎಲ್ಲಾ ಸಂಗತಿಗಳಲ್ಲಿಯೂ ಅವರ ಗಮನವನ್ನು ಪರಲೋಕದ ಕಡೆಗೆ ಅಂದರೆ ಆತ್ಮಿಕ ಸಂಗತಿಗಳಿಗೆ ತಿರುಗಿಸಲು ಯತ್ನಿಸೋಣ. ಹಾಗೆಂದಲ್ಲಿ ಇದು ನಾವು ಪ್ರತಿಯೊಂದು ಸಂದರ್ಭಗಳಲ್ಲಿಯೂ ಧಾರ್ಮಿಕ ವಿಷಯಗಳನ್ನು ಬಲವಂತ ವಾಗಿ ಹೇರಬೇಕೆಂತಲ್ಲ; ಅಲ್ಲದೆ ನಮ್ಮ ಕರ್ತನೂ ಸಹ ಹಾಗೆ ಮಾಡುತ್ತಿರಲಿಲ್ಲ. ಆತನು ಸಂಭೋಧಿಸಿ ಮಾತನಾಡಿಸಿದ್ದ ಸ್ತ್ರೀಯ ಗುಣದಲ್ಲಿ ಪ್ರಾಮಾಣಿತೆಯ ಯಾವುದೋ ಕೆಲವು ಆಂಶಗಳನ್ನು ಕಂಡಿರುವ ಬಹುಮಟ್ಟಿನ ಸಾಧ್ಯತೆಗಳಿವೆ; ಇಲ್ಲವಾದಲ್ಲಿ ಆತನು ಆಕೆಯೊಡನೆ ಸಂಬಾಷಣೆ ಮಾಡುತ್ತಿರಲಿಲ್ಲ. ಆದುದರಿಂದ ನಾವೂ ಇತರರಿಗೆ ಸಹಾಯಕರಾಗಿರಲು ಸಮಯೋಚಿತವಾದ ಮಾತುಗಳನ್ನಾಡುವ ಮೂಲಕ ಕರ್ತನಿಗೆ ಘನಪಡಿಸುವ ಅವಕಾಶವನ್ನು ಎದುರು ನೋಡುವವರಾಗಿರಬೇಕು.

ಆ ಹೆಂಗಸು "ಜೀವಕರ ನೀರು" ಎಂದು ವಕ್ತಪಡಿಸಿರು ವಲ್ಲಿ ನಿಂತ ಜಡನೀರಿಗಿಂತಲೂ ಭಿನ್ನವಾಗಿರುವ ಶುದ್ಧ ಸಿಹಿನೀರು ಎಂದರ್ಥ ಎಂಬುದಾಗಿ ಗ್ರಹಿಸಿಕೊಂಡಿದ್ದಳು. ನೀರನ್ನು ಸೇದಲು ಅವಶ್ಯವಿರುವ ಕೊಡವಾಗಲೀ ಒಂಟೆಯ ಕೂದಲಿನ ಹಗ್ಗವಾಗಲೀ ನಮ್ಮ ಕರ್ತನು ಹೊಂದಿಲ್ಲದಿರುವುದನ್ನು ತನ್ನೊಳಗೆ ತಿಳಿದುಕೊಂಡು ಆತನಿಗೆ ಹೇಳಿದ್ದು, ನನಗೆ ಕುಡಿಯಲು ಕೊಡಲು ನೀನೇನಾದರೂ ಬಯಸಿದ್ದಲ್ಲಿ, ಸೇದಲು ನಿನ್ನಲ್ಲಿ ಏನೂ ಇಲ್ಲದಿರುವುದರಿಂದಲೂ ಬಾವಿಯು ಆಳವಾಗಿರುವುದರಿಂದಲೂ ನಿನ್ನನ್ನು ನಾನು ಕೇಳಿ ಪ್ರಯೋಜನವಿಲ್ಲ; ಇದಕ್ಕಿಂತಲೂ ಉತ್ತಮವಾದ ನೀರು ನಿನಗೆ ಬೇರೆ ಎಲ್ಲಿಯೂ ದೊರೆಯದು. ನೀನು ಅದನ್ನು ಎಲ್ಲಿಂದ ತರುವಿ? "ನಮ್ಮ ಹಿರಿಯನಾದ ಯಾಕೋಬನಿಗಿಂತ ನೀನು ದೊಡ್ಡವನೋ? ಅವನೇ ಈ ಬಾವಿಯನ್ನು ನಮಗೆ ಕೊಟ್ಟವನು; ಅವನೂ ಅವನ ಮಕ್ಕಳೂ ಅವನು ಸಾಕಿದ್ದೆಲ್ಲವು ಸಹಿತವಾಗಿ ಇದೇ ಬಾವಿಯಲ್ಲಿ ಕುಡಿದರು." (ಯೋಹಾನ 4:12) ಆ ಹೆಂಗಸಿಗೆ ಮೋಸಮಾಡದೆ ಇಲ್ಲವೇ ಆ ಹೆಂಗಸಿನಿಂದ ತಾನು ಯಾವ ಲಾಭವೂ ಪಡೆಯದೆ ಆಕೆಯ ಪ್ರಯೋಜನಕ್ಕಾಗಿ ಆಕೆಯ ದೃಷ್ಟಿಯಿಂದ ನಮ್ಮ ಕರ್ತನು ಪುನಃ ಈ ಪ್ರಶ್ನೆಯನ್ನು ಸಂಪೂರ್ಣವಾಗಿ ಅಲಕ್ಷ್ಯಮಾಡಿದನು. ಆಕೆಯ ಮನಸ್ಸನ್ನು ಸಹಜವಾದ ಆ ನೀರಿನ ಕಡೆಯಿಂದ ಆತ್ಮಿಕವಾದುದರ ಕಡೆಗೆ, ಸಹಜವಾದ ಅಸ್ತಿವಾರದವುಗಳ ಕಡೆಯಿಂದ ಆತ್ಮಿಕವಾದ ವುಗಳ ಕಡೆಗೆ ನಡೆಸಲು ಆತನು ಅಕೆಗೆ ಉಪದೇಶಮಾಡುತ್ತಿದ್ದನು. ಆತನು ಹೇಳಿದ್ದು, "ನಾನು ಕೊಡುವ ನೀರನ್ನು ಕುಡಿದವನಿಗೆ ಎಂದಿಗೂ ನೀರಡಿಕೆಯಾಗುವುದಿಲ್ಲ; ನಾನು ಅವನಿಗೆ ಕೊಡುವ ನೀರು ಅವನಲ್ಲಿ ಉಕ್ಕುವ ಒರತೆಯಾಗಿದ್ದು ನಿತ್ಯಜೀವವನ್ನು ಉಂಟು ಮಾಡುವದು." (ವಚನ 14)

ನಮ್ಮ ಕರ್ತನು ಮಾತನಾಡಿದ್ದುದು ಸಾಮಾನ್ಯವಾದ ಹೆಂಗಸಿನೊಡನೆ ಅಲ್ಲವೆಂಬುದು ಆತನು ಹೇಳಿದ್ದನ್ನು ಆಕೆಯು ಶೀಘ್ರವಾಗಿ ಗ್ರಹಿಸಿದ ರೀತಿಯಿಂದಲೂ ಆತನು ವಿವರಿಸಿ ಹೇಳಿದ್ದ ಆ ಜೀವಕರ ನೀರನ್ನು ಪಡೆಯಬೇಕೆಂಬುದರಲ್ಲಿ ಆಕೆಯು ತೋರಿದ ಶ್ರದ್ಧೆಯಿಂದಲೂ ಸ್ಪಷ್ಟವಾಗುತ್ತದೆ. ಆಕೆ ಹೇಳಿದ್ದು "ಅಯ್ಯಾ, ನನಗೆ ಆ ನೀರನ್ನು ಕೊಡು; ಕೊಟ್ಟರೆ ಇನ್ನು ಮೇಲೆ ನನಗೆ ನೀರಡಿಕೆಯಾಗಲಿಕ್ಕಿಲ್ಲ; ನೀರು ಸೇದುವುದಕ್ಕೆ ಇಷ್ಟು ದೂರ ಬರಬೇಕಾದ್ದೂ ಇರುವುದಿಲ್ಲ." (ವಚನ 15) ಮತ್ತೆ ನಾವು ನಮ್ಮ ಕರ್ತನ ಯುಕ್ತಿವಂತಿಕೆಯನ್ನು ಗಮನಿಸುವೆವು. ಆತನು ವಿಷಯವನ್ನು ತಿರುಗಿಸಿದನು. ಆ ಹೆಂಗಸು ತಾನು ಒಬ್ಬ ಪಾಪಿಯಾಗಿರುವಳೆಂಬ ಮತ್ತು ಮರಣವಿಧಿಯ ಅಡಿಯಲ್ಲಿದ್ದು ತನಗೆ ನಿತ್ಯಜೀವ ಕೊಡುವ ನೀರಿನ ಅಗತ್ಯವಿರುವುದೆಂಬ ಅಂಶವನ್ನು ಆಕೆಯು ಅರಿತಿರುವದು ಅವಶ್ಯವಾಗಿತ್ತು. ಅದನ್ನು ಕೇವಲ ದೇವರೇ ಕೊಡಲು ಸಾಧ್ಯವಿದ್ದು ಅದನ್ನು ಆತನು ಜೀವದ ಬುಗ್ಗೆಯಾಗಿರುವ ಯೇಸುವಿನಲ್ಲಿ ದೊರಕಿಸಿಕೊಟ್ಟಿದ್ದಾನೆ. ನಮ್ಮ ಕರ್ತನು ಬಹು ತ್ವರಿತವಾಗಿ ಆಕೆಯ ಆಲೋಚನೆಗಳನ್ನು ಅಂತರಂಗದ ಕಡೆಗೆ ತಿರುಗಿಸಿ ಹೇಳಿದ್ದು, "ಹೋಗಿ ನಿನ್ನ ಗಂಡನನ್ನು ಕರೆದುಕೊಂಡು ಬಾ." ಆಗ ಬಂದ ಉತ್ತರ "ನನಗೆ ಗಂಡನಿಲ್ಲ." (ವಚನ 17) ಈ ಉತ್ತರದ ಜೊತೆಯಲ್ಲಿ ಯೋಚನೆಗಳು ಪ್ರವಾಹದೋಪಾದಿಯಲ್ಲಿ ಬರತೊಡಗಿತು; ಅದನ್ನು ನಮ್ಮ ಕರ್ತನು ಆಕೆಗೆ ನಾಟುವಂತೆ ಪ್ರಕಟಿಸಿ ಹೇಳಿದ್ದು, ನಿನಗೆ ಗಂಡನಿಲ್ಲವೆಂದು ಸರಿಯಾಗಿ ಹೇಳಿದ್ದೀ; ಯಾಕೆಂದರೆ ನಿನಗೆ ಐದು ಮಂದಿ ಗಂಡಂದಿರಿದ್ದರು; ಈಗ ನಿನಗಿರುವವನು ನಿನಗೆ ಗಂಡನಲ್ಲ. ಆ ಹೆಂಗಸಿಗೆ ತನ್ನೊಳಗಿರುವುದೆಲ್ಲವೂ ಪೂರ್ಣವಾಗಿ ಹೊರಬರತೊಡಗಿತು. ತನ್ನ ಹೃದಯದಲ್ಲಿರುವ ಆಳವಾದ ಗುಟ್ಟುಗಳನ್ನೆಲ್ಲಾ ಬಲ್ಲವನಾಗಿರುವವನ ಸಮಕ್ಷಮದಲ್ಲಿ ತಾನಿರುವುದನ್ನು ಅರಿತಳು. ಆಕೆಯು ಆತನಿಗೆ ಹೆದರಲಿಲ್ಲ. ಆತನೆದುರಿನಿಂದ ಆಕೆಯು ಓಡಿಹೋಗಲೂ ಇಲ್ಲ. ಆತನ ಕರುಣೆ ಆತನ ನಯವಿನಯ ಸಮಾರ್ಯದ ಹೆಂಗಸಿನೋಡನೆ ಮಾತನಾಡಲು ಇಚ್ಛಿಸಿರುವುದು "ಒಬ್ಬ ಒಳ್ಳೆಯ ಸ್ನೇಹಿತ, ಓಹ್ ಎಂಥ ಸ್ನೇಹಿತ" ಎಂಬುದನ್ನು ತೋರಿಸಿಕೊಟ್ಟಿತ್ತು. ಆಕೆಯು ಕೊಟ್ಟ ಉತ್ತರ "ಅಯ್ಯಾ, ನೀನು ಒಬ್ಬ ಪ್ರವಾದಿಯೆಂದು ನನಗೆ ಕಾಣುತ್ತದೆ."

ಆ ಹೆಂಗಸು ಆಗ ಸಂಭಾಷಣೆಯನ್ನು ತನ್ನ ಅತಿ ವೈಯುಕ್ತಿಕ ವಿಷಯಗಳಿಂದಲೂ ಅತಿ ಗಂಭೀರವಾದವುಗಳಿಂದಲೂ ಅತಿ ಸೂಕ್ಷ್ಮವಾದವುಗಳಿಂದಲೂ ಚತುರತೆಯಿಂದ ಬೇರೆಡೆಗೆ ಕೊಂಡೊಯ್ದಳು ಮತ್ತು ನಮ್ಮ ಕರ್ತನು ಆ ವಿಷಯವನ್ನು ಮುಂದುವರಿಸದೆ ಬಿಟ್ಟುಬಿಟ್ಟನು. ಆತನ ಹಿಂಬಾಲಕರಲ್ಲಿ ಹಲವರಿಗೆ ಈ ಪಾಠದ ಅಗತ್ಯವಿದೆ; ಅದೇನೆಂದರೆ ಮೊದಲು ಅವರು ತಮ್ಮನ್ನು ಕೇಳುವವರ ಹೃದಯಗಳಲ್ಲಿ ಅವರಲ್ಲಿರುವ ಪಾಪಗಳ ಅರಿವು ಉಂಟಾಗುವಂತೆ ಮಾಡಿ ಆನಂತರ ಅದು ನಿಧಾನವಾಗಿ ಅವರು ದುಃಖಪಟ್ಟು ಪಶ್ಚಾತ್ತಾಪವಾಗಿ ಮಾನಸಾಂತರ ಹೊಂದಲು ಕಾರ್ಯ ನಡೆಸುವದಕ್ಕೆ ಬಿಡಬೇಕು. ನಮ್ಮ ಸುತ್ತಲಿರುವವರ ಮನಸ್ಸುಗಳನ್ನು ಒಡೆಯುವಂತೆ ಮಾಡುವುದಲ್ಲ, ಆದರೆ ಮನಮುರಿದವರನ್ನು ಕಂಡುಕೊಳ್ಳುವುದು ನಮ್ಮ ಕೆಲಸ. "ಮನಮುರಿದವರನ್ನು ಕಟ್ಟುವುದು" (ಯೆಶಾಯ 61:1) ನಮಗಿರುವ ಆಜ್ಞಾಪನೆ. ಹಲವು ಸಂದರ್ಭಗಳಲ್ಲಿ, ಇದರಲ್ಲಿರುವಂತೆಯೇ, ಮುರಿದ ಹೃದಯವನ್ನು ಮುಟ್ಟಿ ವಾಸಿಮಾಡುವ ಅಂದರೆ ಕೃಪೆ ಮತ್ತು ಸತ್ಯವೆಂಬ ನೋವು ನಿವಾರಕಗಳನ್ನು ಹಚ್ಚಿ ವಾಸಿಮಾಡುವ ಕಾರ್ಯದ ಅಗತ್ಯವಿರುವುದು. ಆದರೆ ಈ ಮನಮುಟ್ಟುವಿಕೆಯ ಕಾರ್ಯವನ್ನು ನಯವಿನಯವಾಗಿ ಮಾಡಬೇಕು. ಇನ್ನೂ ಹೆಚ್ಚಿನ ಮನಮುರಿಯುವಿಕೆಯು ಬೇಕಾಗಿದ್ದಲ್ಲಿ ಅದನ್ನು ಮಾಡುವುದು ನಮ್ಮ ಕೆಲಸವಲ್ಲ.

## ರಕ್ಷಣೆಯು ಬರಲಿರುವುದು ಯೆಹೂದ್ಯರಿಂದಲೇ

ತನ್ನ ವೈಯಕ್ತಿಕ ಗುಣ ಮತ್ತು ನಡತೆಗಳ ವಿಷಯವಾಗಿ ವಿಚಾರ ಮಾಡುವುದರಿಂದ ತಪ್ಪಿಸಿಕೊಳ್ಳುವುದು ಮಾತ್ರವಲ್ಲದೆ ಆ ಹೆಂಗಸು ತನ್ನ ಮನಸ್ಸಿನಲ್ಲಿ ಬಹು ಕಾಲದಿಂದಲೂ ಪೀಡಿಸುತಿದ್ದ ಪ್ರಶ್ನೆಯನ್ನು ಒಬ್ಬ ಮಹಾ ಪ್ರವಾದಿಯೆಂದು ಪ್ರಮಾಣೀಕರಿಸಿ ಕಂಡುಕೊಂಡ ಈತನ ಮೂಲಕ ಬಗೆಹರಿಸಿಕೊಳ್ಳಲು ಈ ಅವಕಾಶವನ್ನು ಉಪಯೋಗಿಸಿಕೊಳ್ಳುವಳು. ಆ ಪ್ರಶ್ನೆ ಏನೆಂದರೆ, ತಮ್ಮ ಧರ್ಮ ಹಾಗೂ ದೇವಾರಾಧನೆಗಳ ವಿಷಯದಲ್ಲಿ ಯೆಹೂದ್ಯರು ಅಥವಾ ಸಮಾರ್ಯರು ಸರಿಯಾಗಿರುವರೋ ಎಂಬುದು. ತನ್ನ ಮುಂದಿದ್ದುದು ಪ್ರಮಾಣೀಕರಿಸಿ ಕಂಡುಕೊಳ್ಳಲಾದ ಒಬ್ಬ ಪ್ರವಾದಿ ಮತ್ತು ಆತನ ಮಾತಿನಲ್ಲಿ ಆಕೆಗೆ ಬಹು ವಿಶ್ವಾಸವಿತ್ತು; ಆದುದರಿಂದ ಆಕೆಯು ವಿಚಾರಿಸಿದ್ದು: ಈ ಬೆಟ್ಟವು ದೇವಾರಾಧನೆಯ ಸ್ಥಳವೆಂದು ಹೇಳಿಕೊಂಡ ನಮ್ಮ ಪಿತೃಗಳೋ ಅಥವಾ ಅದಕ್ಕೆ ಯೆರೂಸಲೇಮು ಒಂದೇ ಸೂಕ್ತವಾದ ಸ್ಥಳವೆಂದು ಹೇಳುವ ಯೆಹೂದ್ಯರಾದ ನೀವೋ, ಯಾರು ಸರಿ? ಆಕೆಯನ್ನು ಯೆಹೂದ್ಯ ಮತಾವಲಂಬಿಯನ್ನಾಗಿ ಮಾಡಲು ನಮ್ಮ ಕರ್ತನು ಆಸಕ್ತಿ ತೋರಲಿಲ್ಲ; ಅದು ಕಳೆದು ಹೋದ ಆ ಹಿಂದಿನ ಕಾಲದಲ್ಲಿ ಮಾಡುವ ವಿಷಯವಾಗಿತ್ತು; (ಯೆಹೂದ್ಯರ) ಸುಗ್ಗಿಕಾಲ ಆಗಲೇ ಬಂದಿತ್ತು. ಆವರೆಗೂ ದೇವರ ಕೃಪಾನುಗ್ರಹದ ವಿಷಯದಲ್ಲಿ ಯೆಹೂದ್ಯರಿಂದ ಬೇರೆಯವರೆಲ್ಲರನ್ನು ಪ್ರತ್ಯೇಕಿಸಿದ್ದ ಅಡ್ಡ ಗೋಡೆಯು ಕೆಡವಲ್ಪಡುವಾಗ ಆಕೆಯು ಪ್ರಯೋಜನ ಹೊಂದುವದಕ್ಕಾಗಿ ಮತ್ತು ಆಕೆಯ ಮೂಲಕವಾಗಿ ಮುಂದೆ ಸ್ವಲ್ಪ ಕಾಲದಲ್ಲಿ ಬೇರೆಯವರು ಪ್ರಯೋಜನ ಹೊಂದುವದಕ್ಕಾಗಿ ಕೆಲವು ಸಂಗತಿಗಳನ್ನು ಹೇಳುವನು. ಆದುದರಿಂದ ಆತನು ನೀಡಿದ ಉತ್ತರವು ಸುವಾರ್ತಾಯುಗದ ಸನ್ನಿವೇಶಕ್ಕೆ ಸಾಮಾನ್ಯವಾಗಿ ಅನ್ವಯವಾಗುವಂತೆಯೂ ಹಾಗು ಈಗಾಗಲೇ ಕೆಲವು ಯೆಹೂದ್ಯರ ವಿಷಯದಲ್ಲಿ ಪ್ರಾರಂಭವಾಗಿದ್ದು ಮುಂದೆ ಅದು ಸಮಾರ್ಯರಿಗೂ ಮತ್ತು ಅನ್ಯಜನರೆಲ್ಲರಿಗೂ ಅನ್ವಯವಾಗುವುದಿತ್ತು. ಆತನು ಹೇಳಿದ್ದು, "ಅಮ್ಮಾ, ನಾನು ಹೇಳುವ ಮಾತನ್ನು ನಂಬು; ಒಂದು ಕಾಲ ಬರುತ್ತದೆ. ಆ ಕಾಲದಲ್ಲಿ ನೀವು ತಂದೆಯನ್ನು ಆರಾಧಿಸಬೇಕಾದರೆ ಈ ಬೆಟ್ಟಕ್ಕೂ ಹೋಗುವುದಿಲ್ಲ, ಯೆರೂಸಲೇಮಿಗೂ ಹೋಗುವುದಿಲ್ಲ." –ವಚನ 21.

ಯೆಹೂದ್ಯರಿಗೆ ಅವರ ಆಲಯವು (ದೇವರ ಕೃಪಾನುಗ್ರಹವು ಇಲ್ಲವಾಗಿ) ಬರಿದಂತಾಗಿ (ಸುವಾರ್ತಾಯುಗದ) ಹೊಸ ವ್ಯವಸ್ಥೆಯು ಸ್ಥಾಪಿತವಾದಂದಿನಿಂದ ಆ ಕಾಲವು ಆರಂಭಗೊಂಡು ಈವರೆಗೂ ಮುಂದುವರೆಯುತ್ತಿರುವುದು.

ನಂಬಿಕೆಯುಳ್ಳವರು ನಮ್ಮ ವಿಮೋಚಕನ ಮೂಲಕವಾಗಿ ಜೀವಸ್ವರೂಪನಾದ ದೇವರ ಬಳಿಗೆ ಬರಲು ಯಾವ ಒಂದು ನಿಗದಿತ ಬೆಟ್ಟಕ್ಕೂ ಹೋಗಬೇಕಿಲ್ಲ, ಯಾವ ಒಂದು ನಿಗದಿತ ಸ್ಥಳಕ್ಕೂ ಹೋಗಬೇಕಿಲ್ಲ, ಯಾವ ಒಂದು ನಿಗದಿತ ಮನೆಗೂ ಹೋಗಬೇಕಿಲ್ಲ. ಆದರೆ ಅವರು ಆತನ್ನು ಯಾವ ಸ್ಥಳದಲ್ಲಿ ಯಾದರೂ ಕಂಡುಕೊಳ್ಳಬಹುದು. ಬರಲಿದ್ದ ಆ ಕಾಲವು ಆಗಲೇ ಆರಂಭವಾಗಿದ್ದು ಅದರಲ್ಲಿ ನಮ್ಮ ಕರ್ತನು ತಾನೇ ಪವಿತ್ರಾತ್ಮನಿಂದ ಹುಟ್ಟಿದವರಲ್ಲಿ ಮೊದಲಿಗನಾಗಿ; ಮತ್ತು ತನ್ನ ಮೂಲಕವಾಗಿ ತನ್ನ ಶಿಷ್ಯರು ತಂದೆಯಿಂದ ಅಂಗೀಕರಿಸ್ಪಟ್ಟವರಾಗಿ ಆತನನ್ನು ಕಂಡು ಕೊಳ್ಳಲು ಪ್ರಾರ್ಥಿಸಲು ಹುಡುಕಲು ಮತ್ತು (ಅವಕಾಶದ ಬಾಗಿಲನ್ನು) ತಟ್ಟಲು ಕಲಿಸಲ್ಪಟ್ಟಿರುವರು. ಆತ್ಮನು ಕಾರ್ಯ ಪ್ರವೃತ್ತನಾಗಿರುವ ಈ ಕಾಲದಲ್ಲಿ ಆತನನ್ನು ಆರಾಧಿಸುವವರು ಹಿಂದಿನ ರೀತಿಯಲ್ಲಿ ಆಗ ಸೂಚಿಸಿದ್ದ ಸ್ಥಳಗಳಲ್ಲಿ ಕುಲಗಳಾಗಿ ಜನಾಂಗವಾಗಿ ಆರಾಧಿಸುವುದಾದರೆ ಅದು ಅಂಗೀಕಾರ ವಾಗುವುದಿಲ್ಲ. ಅವರು ವೈಯುಕ್ತಿಕವಾಗಿ ಅತನು ನೇಮಿಸಿದ ಮಾರ್ಗದಲ್ಲಿ ಅಂದರೆ ವಿಮೋಚಕನ ಮೂಲಕವಾಗಿ ಬಂದಿರುವ ಕಾರಣ ಅವರು ಅಂಗಿಕರಿಸಲ್ಪಡುವರು. ಆವರು ಬಂದಿರುವುದು 'ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ತಂದೆಯನ್ನು ಆರಾಧಿಸಲು; ಯಾಕೆಂದರೆ ತಂದೆಯು ತನ್ನನ್ನು ಆರಾಧಿಸುವವರು ಇಂಥವರೇ ಆಗಿರಬೇಕೆಂದು ಅಪೇಕ್ಷಿಸುತ್ತಾನಲ್ಲವೆ." (ವಚನ 23) ಗತಿಸಿ ಹೋದ ಕಾಲದಲ್ಲಿ ನಿಜವಾಗಿಯೂ ಆತನು ಆರಾಧನೆ ಮಾಡುವ ವಿಧಾನವನ್ನು ಅದರ ಸಮಯವನ್ನು ಮತ್ತು ಆ ಆರಾಧನೆಯ ಸ್ಥಳವನ್ನು ಗೊತ್ತುಮಾಡಿದ್ದನು. ಆದರೆ ಈಗ ಕ್ರಿಸ್ತನ ಮೂಲಕವಾಗಿ "ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ" ತಂದೆಯ ಬಳಿಗೆ ಬರುವವರೆಲ್ಲರೂ ಅಂಗೀಕರಿಸಲ್ಪಡುವರು.

ಆರಾಧನೆಯ ಆಚರಣೆಗಳು ಮತ್ತು ಅದರ ವಿಧಾನಗಳ ವಿಷಯವಾಗಿ ಆದೇಶವೇನೂ ಇಲ್ಲದಿರುವುದು ಬಹು ಖಂಡಿತವಾದ ಸತ್ಯವಾಗಿರುವುದಾದರೂ ಹೃದಯಪೂರ್ವಕವಾದ ನಿಜವಾದ ಆರಾಧನೆಯ ವಿಷಯದಲ್ಲಿ ಈಗಲೂ ಕೆಲವರು ಆಚರಣೆಗಳು ಮತ್ತು ಅದರ ವಿಧಾನಗಳಿಗೆ ಸಂಬಂಧಿಸಿದಂತೆ ಅತಿಯಾದ ಗಮನಕೊಡುವುದರಿಂದ ಪ್ರಾರ್ಥನೆಯ ಮೂಲಕ ದೊರಕುವ ಆತ್ಮಿಕವಾದ ಆಶೀರ್ವಾದ ಅನ್ಯೋನ್ಯತೆಗಳ ಹೆಚ್ಚಿನ ಅಂಶವನ್ನು ಕಳಕೊಂಡಿರುವರು. ಆದರೆ ಇನ್ನೊಂದು ಬಗೆಯ ವರಲ್ಲಿ ಹೇಳುವುದಾದರೆ, ದೇವರಿಗೆ ಪ್ರಿಯರಾದ ಜನರು ದಿನನಿತ್ಯ ಪ್ರಾರ್ಥಿಸುವುದನ್ನು ಅಲಕ್ಷಿಸಿ, ಕೆಲವು ಸಾರಿ ಪರಲೋಕದ ಕೃಪಾಸನದ ಬಳಿಗೆ ಬಹು ಅಲ್ಪ ಪ್ರಮಾಣದ ಔಪಚಾರಿಕತೆ ಯುಳ್ಳವರಾಗಿ, ಅವಶ್ಯವಾಗಿರುವ ದೈನ್ಯತೆ ಭಯಭಕ್ತಿಗಳಿಲ್ಲದ ರೀತಿಯಲ್ಲಿ ಬರುವಂಥ ಅಪಾಯದಲ್ಲಿ ಬೀಳುವುದನ್ನು ನಾವು ಕಾಣುತ್ತಿರುವಂತೆ ತೋರುತ್ತದೆ. ತನ್ನ ಸಮಕ್ಷಮಕ್ಕೆ ನಮ್ಮನ್ನು ಅಂಗೀಕರಿಸಿಕೊಂಡು ನಮ್ಮ ವಿಜ್ಞಾಪನೆಗಳನ್ನು ಆಲಿಸುವ ಅತಿ ವಿಶೇಷವಾದ ಅನುಗ್ರಹವನ್ನು ಆತನು ದಯಪಾಲಿಸಿದ್ದಾನೆ. ನಾವು ಕರ್ತನಿಗೆ ಎಲ್ಲಾ ಸ್ಥಳಗಳಲ್ಲಿಯೂ ಯಾವ ವೇಳೆಯಲ್ಲಾದರೂ ಆತನ ಹೆಸರೆತ್ತಿ ಪ್ರಾರ್ಥಿಸಲು ನಮಗೆ ದೊರಕಿರುವ ಭಾಗ್ಯಕ್ಕೆ ಕೃತಜ್ಞತೆಯುಳ್ಳವರಾಗಿರುವಲ್ಲಿ ಆತನ ಅಂಗಳಗಳಿಗೆ ಭಯಭಕ್ತಿ ಯಿಂದಲೂ, ಅತ್ಯುನ್ನತದಲ್ಲಿರುವಾತನಿಗೆ ಸೂಕ್ತವಾಗಿ ರುವ ಭಕ್ತಿಪೂರ್ವಕ ಹೃದಯವುಳ್ಳವರಾಗಿ ದೈನ್ಯತೆ ಮತ್ತು ತಗ್ಗಿದ ಮನೋಭಾವದಿಂದ ಕೂಡಿದವರಾಗಿಯೂ ಬರೋಣ. ಹೀಗೆ ನಾವು ಸರ್ವಶಕ್ತನ ಶ್ರೇಷ್ಠತೆಗೂ ಮತ್ತು ನಾವು ಅತನ್ನು ಪೂರ್ಣವಾಗಿ ಅವಲಂಬಿಸಿರುವುದಕ್ಕೂ ಗುರುತಾಗಿರುವ ನಿಜವಾದ ಪ್ರಾರ್ಥನಾ ಭಾವದೊಳಗೆ ಸೇರುವೆವು.

## "ನಾವು ತಿಳಿದಿರುವುದನ್ನೇ ಆರಾಧಿಸುವವರಾಗಿದ್ದೇವೆ."

ನಮಗೆ ದೃಢವಾದಂತೆ, ನಮ್ಮ ಕರ್ತನು ಆ ಹೆಂಗಸಿಗೆ ಬಹು ನಾಟುವಂತಾಗಿದ್ದರೂ, ನಯವಾದ ರೀತಿಯಲ್ಲಿ ಸತ್ಯವನ್ನು ಪ್ರಕಟಿಸುತ್ತಾ ಹೀಗೆ ನುಡಿದನು, "ಆದದರಿಂದ ನಾವು ಅರಿತಿರುವದನ್ನೇ ಆರಾಧಿಸುವವರಾಗಿದ್ದೇವೆ; ನೀವು ಅರಿಯದೆ ಇರುವಂಥದನ್ನು ಆರಾಧನೆಮಾಡುವವರು." (ವಚನ 22) ಸಮಾರ್ಯದವರು ಇಸ್ರಾಯೇಲ್ ವಂಶಸ್ಥರಲ್ಲದವರಾದ್ದರಿಂದ ಅಬ್ರಹಾಮನ ಒಡಂಬಡಿಕೆಗೆ ಯಾವ ವಿಧದಲ್ಲೂ ಬಾಧ್ಯರಿರಲಿಲ್ಲ. ಸತ್ಯದ ಕೇಂದ್ರವಾಗಿರುವ ಈ ಅಂಶವನ್ನು ಅದರ ನಿಜವಾದ ಬೆಳಕಿನಲ್ಲಿ ಅರಿತುಕೊಳ್ಳಲಾರದೆ ಅವರು ದೇವರ ಯೋಜನೆಯ ಎಲ್ಲಾ ಮುಖ್ಯಲಕ್ಷಣಗಳ ವಿಷಯದಲ್ಲಿ ಗೊಂದಲಕ್ಕೀಡಾಗಿದ್ದರು. ಇದಕ್ಕೆ ಪ್ರತಿಯಾಗಿ, ಯೆಹೂದ್ಯರು ತಾವು ಶಾರೀರಿಕವಾಗಿ ಅಬ್ರಹಾಮನ ಸಂತತಿಯಾಗಿ ತಮ್ಮ ಮೂಲಕವೇ ಆ ಶ್ರೇಷ್ಠನಾದ ಮೆಸ್ಸೀಯನು ಬರಬೇಕಿರುವುದೆಂದೂ ಮತ್ತು ಕಡೆಯಲ್ಲಿ ಆತನ ಹಾಗೂ ತಮ್ಮ ಜನಾಂಗದವರಲ್ಲಿ ಕೆಲವರು ಆತನೊಡನೆ ಸಹಕಾರಿಗಳಾಗಿ ಕೂಡಿ ತಮ್ಮ ಮೂಲಕವಾಗಿ ಭೂಲೋಕದ ಎಲ್ಲಾ ಕುಲಗಳು ಆಶೀರ್ವಾದ ಹೊಂದಲಿರುವರೆಂದು ಅವರಿಗೆ ತಿಳಿದಿತ್ತು. ನಮ್ಮ ಕರ್ತನು ಹೇಳಿದ್ದು, "ಬರಬೇಕಾದ ರಕ್ಷಣೆಯು ಯೆಹೂದ್ಯರೊಳಗಿಂದ ಬರುತ್ತದಷ್ಟೆ." ಅದು ಯೆಹೂದ್ಯರಿಗೆ ಇಲ್ಲವೇ ಯೆಹೂದ್ಯರಿಗೋಸ್ಕರವಾಗಿ ಮಾತ್ರ ಪ್ರತ್ಯೇಕವಾಗಿರಿಸಿ ರುವುದೆಂದು ಹೇಳಲಿಲ್ಲ. ಆ ಒಡೆಯನು (ಕ್ರಿಸ್ತನು) ಶಾರೀರಿಕವಾಗಿ ಅವರ ಜನಾಂಗದವನಾಗಿರುವ ಅರ್ಥದಲ್ಲಿ ಅದು (ರಕ್ಷಣೆಯು) ಅವರ ಮೂಲಕವಾಗಿ ಬರುವದಾಗಿತ್ತು. ವಾಗ್ದಾನಗಳು ಆ ಜನಾಂಗದವರಿಗಾಗಿಯೇ ಪ್ರತ್ಯೇಕವಾಗಿತ್ತು; ಹೀಗಾಗಿ ಮೆಸ್ಸೀಯನು ಬೇರೆ ಯಾವುದೇ ಜನಾಂಗದಲ್ಲಿ ಹುಟ್ಟಿದ್ದಾಗ್ಯೂ ಆ ವಾಗ್ದಾನಗಳಿಗೆ ತಾನು ಭಾಧ್ಯನಾಗಿರಲು ಸಾಧ್ಯವಿರುತ್ತಿರಲಿಲ್ಲವೆಂಬ ಅರ್ಥದಲ್ಲಿ ಆ ರಕ್ಷಣೆಯು ಅವರದ್ದಾಗಿತ್ತು. ರಕ್ಷಣೆಯು ಸಹ ಅವರ ಮೂಲಕವಾಗಿಯೇ ಬರುವದಾಗಿತ್ತು ಅಂದರೆ ಅವರಿಂದಲೇ ನಮ್ಮ ಕರ್ತನು ತನ್ನ ದೇಹವಾಗಿರುವ ಸಭೆಯ ಮೊದಲ ಸದಸ್ಯರನ್ನು ಆದುಕೊಂಡು ಅವರ ಮೂಲಕವಾಗಿ ಈ ಕಾಲದಲ್ಲಿ (ಸುವಾರ್ತಾಯುಗದಲ್ಲಿ) ಪ್ರತಿಯೊಂದು ಜನಾಂಗ ಪ್ರಜೆ ಕುಲ ಮತ್ತು ಭಾಷೆಯವರಿಗೆ ಆ ದೇಹದ ಅಂಗಗಳಾಗುವದಕ್ಕೆ ಆಹ್ವಾನವನ್ನು ನೀಡಿದನು.

ಸಮಾರ್ಯದವರು ಒಂದು ವರ್ಗದ ಜನರಿಗೆ ಛಾಯೆ ಯಾಗಿದ್ದರೆಂದು ನಮಗೆ ಹೇಳಲಾಗದು; ಏಕೆಂದರೆ ಛಾಯೆ ಎಂಬುದು ಒಂದು ಅತಿ ಬಲವಾದ ಶಬ್ದ. ಹೀಗಿರುವಲ್ಲಿ ಛಾಯೆ ಯಲ್ಲಿ ನಿಜವಾದ ಇಸ್ರಾಯೇಲ್ಯರಿದ್ದರೆಂಬುದನ್ನೂ ಮತ್ತು ಇವರಿಗೆ

ಸೇರದ ಒಂದು ವರ್ಗದ ಜನರು ಇವರನ್ನು ಹೋಲುವರೆಂಬುದನ್ನೂ ನಾವು ನೋಡುವೆವು. ಹೀಗೆಯೇ ಆತ್ಮಿಕ ಇಸ್ರಾಯೇಲ್ಯರಲ್ಲಿ ಕೆಲವರು ಸಮಾರ್ಯದವರಂತೆ ಇರುವುದು ನಮಗೆ ಕಂಡು ಬರುತ್ತದೆ; ಅವರು ಈ (ಆತ್ಮಿಕ ಇಸ್ರಾಯೇಲ್) ಕುಲಕ್ಕೆ ಸೇರದವರಾಗಿ ಅಂದರೆ ಪವಿತ್ರಾತ್ಮನಿಂದ ಹೊಸದಾಗಿ ಹುಟ್ಟದವರಾಗಿ ಒಡಂಬಡಿಕೆ ವಾಗ್ದಾನಗಳಿಗೆ ಸಂಬಂಧಿಸದ ಅನ್ಯಜನರಾಗಿದ್ದಾರೆ. ಇವರಲ್ಲಿ ಕೆಲವರು ಭಕ್ತಿಯ ವೇಷವುಳ್ಳವರಾಗಿ ಗೌರವಿತ ಜನರೆಂದು ಮನ್ನಣೆ ಪಡೆದವರಾದರೂ ಭಕ್ತಿಯ ಬಲವನ್ನು ಅವರು ಬೇಡವೆನ್ನುವವರಾಗಿರುವರು. ಹೀಗೆ ಎಲ್ಲರೂ ಪವಿತ್ರಾತ್ಮನಿಂದ ಹುಟ್ಟಿದವರಾಗಿ ಆ ಮೂಲಕವಾಗಿ ಕರ್ತನಿಗೂ ಮತ್ತು ಆ ವಾಗ್ದಾನಗಳಿಗೂ ಸಂಬಂಧಿಸಿದವರಾದ ನಿಜವಾದ ಇಸ್ರಾಯೇಲ್ಯರಲ್ಲಿಯೂ ಎರಡು ವರ್ಗಗಳಿರುವುದು: ತಮ್ಮ ಪ್ರೀತಿ ಮತ್ತು ಆಸಕ್ತಿಯ ನಿಮಿತ್ತವಾಗಿ ಕರ್ತನಿಂದ ಮನ್ನಣೆ ಪಡೆದ ನಿಜವಾದ ಇಸ್ರಾಯೇಲ್ಯರಾದ "ಚಿಕ್ಕ ಹಿಂಡು" ಹಾಗೂ ತಮ್ಮ ಪ್ರೀತಿ ಆಸಕ್ತಿಗಳಲ್ಲಿ ಕೊರತೆಯುಳ್ಳವರಾಗಿ "ಪೂರ್ಣ ಜಯಶಾಲಿಗಳು" ಎಂಬ ವಿಶೇಷವಾದ ಬಿರುದನ್ನು ಹೊಂದಿ (ಕ್ರಿಸ್ತನೊಂದಿಗೆ) ಸಹಬಾಧ್ಯರಾಗಲು ಸಾಧ್ಯವಾಗದ (ಯಾರಿಂದಲೂ ಎಣಿಸಲಾಗದ) ಮಹಾ ಸಮೂಹ.

ಈ ಸಮಾರ್ಯರಿಗೆ ಹೋಲಿಕೆಯಾಗಿರುವ ಜನರೊಂದಿಗೆ ನಾವು ಧಾರ್ಮಿಕ ವಿಷಯಗಳನ್ನು ಚರ್ಚಿಸುವಾಗ, ಸರ್ಪದ ಜಾಣತನವನ್ನು ಪ್ರಯೋಗಿಸಿ "ನೀವು ಅರಿಯದೇ ಇರುವಂಥದ್ದನ್ನು ಆರಾಧನೆಮಾಡುವವರು" ಎಂದು ಹೇಳುವುದು ನಮ್ಮದಲ್ಲವಾಗಿದ್ದರೂ, ಖಂಡಿತವಾಗಿಯೂ ಇದು ಸತ್ಯ. ಹೀಗಿರುವಲ್ಲಿ ಈ ವರ್ಗದವರಲ್ಲಿ ಯಾರು ಸತ್ಯವನ್ನು ತಿಳಿಯುವ ಬಯಕೆಯನ್ನು ತೋರ್ಪಡಿಸುವರೋ ಅವರಿಗೆ ಪ್ರತಿಷ್ಠಿತ ಭಕ್ತರಾದ ಆತ್ಮಿಕ ಇಸ್ರಾಯೇಲ್ಯರ ಆಕಾಂಕ್ಷೆ ಮತ್ತು ನಿರೀಕ್ಷೆಗಳು ಹಾಗೂ ಅವರಿಗಿರುವ ವಾಗ್ದಾನಗಳು ತಾವು ತಿಳಿದಿರುವ ಇಲ್ಲವೇ ಆಲೋಚಿಸಿರುವ ಯಾವುದೇ ವಿಷಯಗಳಿಗಿಂತಲೂ ಎಷ್ಟು ಭಿನ್ನವಾದುದೆಂಬುದನ್ನು ತೋರಿಸಿಕೊಡಲು ಕನಿಕರದಿಂದ ಪ್ರಯತ್ನಿಸುವುದು ಯುಕ್ತವಾದುದು. ಇಸ್ರಾಯೇಲ್ಯರೊಂದಿಗೆ ಮತ್ತು ಇತರರೊಂದಿಗೆ ನಾವು ಮಾಡುವ ನಮ್ಮ ಎಲ್ಲಾ ನಡಾವಳಿಗಳಲ್ಲಿ ನಮ್ಮ ಒಡೆಯನ ಈ ಮಾತನ್ನು ನೆನಪಿಸಿಕೊಳ್ಳೋಣ, "ನೀವು ಸರ್ಪಗಳಂತೆ ಜಾಣರೂ ಪಾರಿವಾಳಗಳಂತೆ ನಿಷ್ಕಪಟಿಗಳೂ ಆಗಿರ್ರಿ."

## "ಮೆಸ್ಸೀಯನು ಬಂದಾಗ"

ಆ ಸಮಾರ್ಯದ ಹೆಂಗಸಿನ ಮನಸ್ಸು ಆಲೋಚನೆಯಲ್ಲಿ ಮುಂದುವರಿಯತೊಡಗಿತು. ದೇವರು ಅಭಿಷಕ್ತನಾದ ಶ್ರೇಷ್ಠ ಮೆಸ್ಸೀಯನನ್ನು ಒದಗಿಸಿಕೊಡುವನೆಂಬ ತನ್ನ ಸ್ವಜನರ ಹಾಗೂ ಯೆಹೂದ್ಯರ ನಿರೀಕ್ಷೆಗಳ ವಿಷಯವಾಗಿಯೂ ಅತನು ಬಂದು ಸಕಲ ಜ್ಞಾನ ಬಲದಿಂದ ಕೂಡಿದವನಾಗಿ ಎಲ್ಲಾ ಗೊಂದಲಗಳನ್ನು ನಿವಾರಿಸಿ ಎಲ್ಲಾ ಸಂಕಷ್ಟಗಳಿಂದ ಅವರನ್ನು ಬಿಡಿಸಿ ಮೇಲೆತ್ತುವನೆಂಬುದನ್ನೂ ಆಕೆಯು ನೆನಪಿಸಿಕೊಳ್ಳತೊಡಗಿದಳು. ತಾನು ಯಾವ ಪ್ರವಾದಿಯೂ ಬೋಧಕನೂ ಆಗಿರುವಾತನೊಡನೆ ಮಾತನಾಡುತ್ತಿರುವಳೋ ಅವನಿಗಿಂತಲೂ ಆ ಮೆಸ್ಸೀಯನು ಇನ್ನೂ ಅದ್ಭುತವಾದ ಜ್ಞಾನವುಳ್ಳವನಾಗಿರುವನೋ ಎಂದು ಆಶ್ಚರ್ಯಪಡುತಿದ್ದಳು. ಆಕೆಯು ನೇರವಾಗಿ ಪ್ರಶ್ನೆ ಕೇಳುವುದನ್ನು ಇಷ್ಟಪಡಲಿಲ್ಲವಾದರೂ ಅದನ್ನು ಸುತ್ತುಬಳಸಾದ ರೀತಿಯಲ್ಲಿ ಸಲಹೆಮಾಡಿ ಹೇಳಿದ್ದೇನೆಂದರೆ, "ಮೆಸ್ಸೀಯನು ಅಂದರೆ ಕ್ರಿಸ್ತನು ಬರುತ್ತಾನೆಂದು ಬಲ್ಲೆನು; ಆತನು ಬಂದ ಮೇಲೆ ನಮಗೆ ಎಲ್ಲಾ ತಿಳಿಸುವನು..." ಆಕೆಯ ಮನಸ್ಸು ಸಿದ್ಧವಾಗಿರುವುದನ್ನು ಕಂಡು ನಮ್ಮ ಕರ್ತನು ತಾನೇ ಆ ಮೆಸ್ಸೀಯನೆಂಬ ವಿಶೇಷವಾದ ಸತ್ಯಾಂಶವನ್ನು ಬಹುಶಃ ತನ್ನ ಸೇವೆಯಲ್ಲಿ ಯಾರೊಡನೆಯೂ ತೋರ್ಪಡಿಸದ ಬಹು ಸರಳವಾದ ರೀತಿಯಲ್ಲಿ ವ್ಯಕ್ತಪಡಿಸಿ ಹೇಳಿದನು: "ನಿನ್ನ ಸಂಗಡ ಮಾತಾಡುತ್ತಿರುವ ನಾನೇ ಆ ಮೆಸ್ಸೀಯನು." (ವಚನ 26)

ಶಿಷ್ಯರು ಆ ಸಮಯದಲ್ಲಿ ಹಿಂದಿರುಗಿ ಬಂದು ಆತನು ಆ ಹೆಂಗಸಿನೊಡನೆ ಮಾತಾಡುತ್ತಿರುವುದನ್ನು ಕಂಡು ಆಶ್ಚರ್ಯಪಟ್ಟವರಾದರೂ ಆತನ ಮೇಲಿರುವ ವಿಶೇಷವಾದ ಗೌರವದ ದೆಸೆಯಿಂದ ಆತನನ್ನು ಪ್ರಶ್ನೆಮಾಡಲಿಲ್ಲ. ಈ ಸುವಾರ್ತಾಯುಗದ ಪರ್ಯಂತರವಾಗಿ ಹಲವರು ಈ ಸಂಗತಿಯನ್ನು ಓದಿದ ನಂತರ ನಮ್ಮ ಒಡೆಯನಲ್ಲಿ ತೋರಿಬಂದ ದೀನತೆಯ ವಿಷಯವಾಗಿ ಆಶ್ಚರ್ಯಪಡುವರು. ಕೇಳುವವರು ಒಬ್ಬರೇ ಇದ್ದಾಗ್ಯೂ ಸತ್ಯವನ್ನು ಉಪದೇಶಿಸುವ ಸೇವೆಯಲ್ಲಿ ದೊರೆಯುವ ಅವಕಾಶವನ್ನು ಅಲಕ್ಷಿಸಬಾರದೆಂಬ ಒಂದು ಒಳ್ಳೆಯ ಪಾಠವನ್ನು ಕರ್ತನ ಹಿಂಬಾಲಕರಿಗೆ ಇದು ತಂದಿರುವುದು. ಮತ್ತು ನಿಜವಾಗಿಯೂ ಗಮನಕೊಡದ ಸಾವಿರ ಮಂದಿಗೆ ಹೇಳುವುದಕ್ಕಿಂತಲೂ ಶ್ರದ್ಧೆಯಿಂದ ಆಲಿಸುವ ಒಬ್ಬನಿಗೆ ಹೇಳುವ ಅವಕಾಶವು ಬಹು ವಿಶೇಷವೆಂದು ಎಣಿಸಬೇಕು. ನಿಸ್ಸಂದೇಹವಾಗಿ ತನ್ನ ಸಮಯ ಮತ್ತು ಶಕ್ತಿಯನ್ನು ಹೀಗೆ ಆಕೆಯ ಪರವಾಗಿ ವ್ಯಯಮಾಡಲು ಯೋಗ್ಯವಾದ ಕೆಲವು ವಿಶೇಷತೆಗಳು ಈ ಹೆಂಗಸಿನಲ್ಲಿ ಇರುವುದನ್ನು ನಮ್ಮ ಕರ್ತನು ಕಂಡಿದ್ದನು.

ಇನ್ನೊಂದು ದೃಷ್ಟಿಯಿಂದ ನೋಡುವುದಾದರೆ, ಆಕೆಯು ಪಡೆದಿದ್ದ ಯೋಗ್ಯತೆಯು ಏನು? ನಮ್ಮವರು ಸಹಜವಾಗಿ ಪಡೆದಿರುವ ಯೋಗ್ಯತೆ ಯಾವುದು? ಬಿದ್ದು ಹೋದುದಾಗಿಯೂ ಅಪರಿಪೂರ್ಣವಾದುದಾಗಿಯೂ ಇರುವಂಥ ಸ್ವಭಾವ. ಆದರೆ ಕರ್ತನಿಗೆ ಸಂತೋಷವುಂಟಾಗಲು ನಮ್ಮಲ್ಲಿ ಉಳಿದಿರುವ ಒಂದೇ ಒಂದು ವಿಷಯವೆಂದರೆ ಅದು ನಮ್ಮ ಹೃದಯದಲ್ಲಿನ ಪ್ರಾಮಾಣಿಕತೆ. ಆ ಹೆಂಗಸಿನಲ್ಲಿ ಪ್ರಾಮಾಣಿಕತೆ ಇದ್ದುದು ಸ್ಪಷ್ಟವಾಗಿತ್ತು. ಆದಕಾರಣ ಆಕೆಯು ಅನುಗ್ರಹ ಹೊಂದಿದವಳೆಂಬುದೂ ಮತ್ತು ಅಂದಿನಿಂದ ಈ ಕಾರಣದಿಂದಲೇ ಕರ್ತನಿಗೆ ಪ್ರಿಯರಾದ ಜನರು ಈ ಸಂದೇಶವನ್ನು ಹೊಂದುತ್ತಿರುವರೆಂಬುದೂ ನಮ್ಮ ನಂಬಿಕೆ. ಇಲ್ಲಿಯೂ ಸಹ ನಮಗೆ ಬರುವ ಪ್ರತಿಯೊಂದು ಅವಕಾಶವನ್ನು ಉಪಯೋಗಿಸಿಕೊಳುವುದರ ಪ್ರಾಮುಖ್ಯತೆಯ ಬಗ್ಗೆ ಇನ್ನೊಂದು ನಿದರ್ಶನವು ನಮಗಿರುವುದು. ಯೋಗ್ಯರಾದ ಕೆಲವರಿಗೆ ಸಹಕಾರಿಗಳಾಗುವ ವಿಷಯದಲ್ಲಿ ವಿನಿಯೋಗಿಸಲ್ಪಡುವ ಶಕ್ತಿಸಾಮರ್ಥ್ಯ ಸಮಯಗಳು, ಈ ವಿಷಯದಲ್ಲಿ ನಡೆದ ಹಾಗೆ, ಹೊರಟು ಬಂದು ನಮ್ಮ ಪ್ರಭಾವವು ಹಲವರಿಗೆ ವಿಸ್ತರಿಸಲ್ಪಡುವಂತೆ ಮಾಡಬಹುದು. ಕೇವಲ ಮುಂದೆ ಬರುವ ನಿತ್ಯಕಾಲ ಒಂದೇ ಕರ್ತನ ಹೆಸರಿನಲ್ಲಿ ಮಾಡಲಾದ ಅಲ್ಪ ಪರಿಶ್ರಮ ಪ್ರಯಾಸಗಳಿಂದ ಕೂಡಿದ ಕೆಲವು ಸಣ್ಣ ವಿಷಯಗಳ ಬೆಲೆಯನ್ನು ತೋರಿಸಿ ಕೊಡುವುದು. ಮತ್ತು ನಮ್ಮ ಕರ್ತನು ಅಲ್ಪ ವಿಷಯಗಳಲ್ಲಿ ತೋರಿದ ನಮ್ಮ ನಂಬಿಗಸ್ತಿಕೆ ಹಾಗೂ ನಮ್ಮ ದೊಡ್ಡದೊಡ್ಡ ಸಾಧನೆಗಳಿಗಿಂತಲೂ ದೊರೆತ ಸಣ್ಣ ಅವಕಾಶಗಳ ಬಗ್ಗೆ ನ್ಯಾಯ ವಿಚಾರಣೆ ಮಾಡುವನೆಂಬುದನ್ನು ಇದು ನಮ್ಮ

ನೆನಪಿಗೆ ತರುವುದು. ಆತನು ನುಡಿದದ್ದೇನೆಂದರೆ:" ಸ್ವಲ್ಪವಾದದ್ದರಲ್ಲಿ ನಂಬಿಗಸ್ತನಾದವನು ಬಹಳವಾದದ್ದರಲ್ಲಿಯೂ ನಂಬಿಗಸ್ತನಾಗುವನು; ಸ್ವಲ್ಪವಾದದ್ದರಲ್ಲಿ ಅನ್ಯಾಯಗಾರನಾದವನು ಬಹಳವಾದದ್ದರಲ್ಲಿಯೂ ಅನ್ಯಾಯಗಾರನಾಗುವನು." (ಲೂಕ 16:10) ಇದನ್ನು ನೆನಪಿನಲ್ಲಿಟ್ಟುಕೊಂಡು ನಮ್ಮಲ್ಲಿರುವ ಅಲ್ಪವಾದ ವಿಷಯಗಳ ಹಾಗೂ ದೊರೆಯುವ ಸಣ್ಣಸಣ್ಣ ಅವಕಾಶಗಳ ಮತ್ತು ಸಮಯ ಸಂದರ್ಭಗಳನ್ನು ಉಪಯೋಗಿಸುವುದರ ಬಗ್ಗೆ ನಾವು ಜಾಗರೂಕರಾಗಿರೋಣ. ಹೀಗೆ ನಾವು ಕರ್ತನ ಹಾಗೂ ಆತನ ಕಾರ್ಯಗಳ ಬಗ್ಗೆ ಆಸಕ್ತರೆಂಬುದನ್ನು ತೋರಿಸಿ ಅಂತ್ಯದಲ್ಲಿ ಆತನ ಮೆಚ್ಚುಗೆಯನ್ನೂ ಈಗಿನ ಕಾಲದಲ್ಲಿ ದೊರೆಯುವ ಆತನ ಆಶೀರ್ವಾದದ ಸಹಿತವಾಗಿ ಹೊಂದುವವರಾಗೋಣ.


## ಸುವಾರ್ತಾ ಪ್ರಚಾರದ ಮನೋಭಾವ

ತನ್ನ ನೀರಿನ ಕೊಡವನ್ನು ಅಲ್ಲೇ ಬಿಟ್ಟು ಆಕೆಯು ಕೂಡಲೇ ಊರಿಗೆ ಹೋಗಿ ತನ್ನ ಸ್ನೇಹಿತರು ಹಾಗೂ ನೆರೆಹೊರೆಯವರಿಗೆ ತಾನು ಒಬ್ಬ ಮಹಾ ಬೋಧಕನನ್ನು ಕಂಡುಕೊಂಡಿರುವುದಾಗಿಯೂ ಅತನೇ ಮೆಸ್ಸೀಯನಾಗಿರಬಹುದೋ ಏನೋ ಎಂದು ಹೇಳಿ ಅವರು ಬಂದು ಅತನ ಮಾತನ್ನು ಕೇಳುವ ಭಾಗ್ಯ ಪಡೆಯಲು ಕೇಳಿಕೊಂಡದ್ದರಲ್ಲಿ ಆಕೆಯ ಗುಣವು ಮತ್ತೂ ಅಧಿಕವಾಗಿ ಪ್ರದರ್ಶಿತವಾಗಿದೆ. ಈ ವಿಷಯವನ್ನು ತನ್ನಲ್ಲೇ ಇಟ್ಟುಕೊಳ್ಳುವಂತೆ ಮಾಡುವ ಸ್ವಾರ್ಥಮನೋಭಾವ ಅಥವಾ ನನ್ನ ಸ್ನೇಹಿತರೂ ಇದನ್ನು ಕೇಳಿದ್ದೇಯಾದಲ್ಲಿ ನನಗೆ ಸಂತೋಷವಾಗುತ್ತಿತ್ತು ಆದರೆ ತಾನೇ ಹೋಗಿ ಅವರಿಗೆ ಹೇಳಲು ತವಕಪಡುವುದು ನನಗಾಗದೆಂಬ ಸೋಮಾರಿತನದ ಉದಾಸೀನ ಮನೋಭಾವ ಇವೆರಡರಲ್ಲಿ ಯಾವುದೇ ಒಂದು ಆಕೆಗೆ ಇದದ್ದೇಯಾದಲ್ಲಿ ಅದು ಆಕೆಯು ಕರ್ತನ ಅನುಗ್ರಹ ಪಡೆಯಲು ಅನರ್ಹಳೆಂಬ ಗುರುತು ಹೊಂದುವವಳಾಗುವಂತೆ ಮಾಡುತ್ತಿತ್ತು. ಮತ್ತು ಇದು ಆಕೆಯ ಮನೋಭಾವದ ಪ್ರವೃತ್ತಿಯೇ ಆಗಿದ್ದಲ್ಲಿ ಕರ್ತನು ಆಕೆಯೊಡನೆ ಸಂಭಾಷಣೆ ಮಾಡುತಿದ್ದನೇನೋ ಎಂಬುದು ನಮಗೆ ಸಂಶಯ. ಮತ್ತು ಈಗಿನ ಕಾಲದಲ್ಲಿ ಪ್ರಕಟವಾಗಿರುವ ಸತ್ಯವನ್ನು ಹೊಂದಿರುವವರ ವಿಷಯವೂ ಹೀಗೆಯೇ. ಅವರು ಶ್ರದ್ಧೆ ಮತ್ತು ಪ್ರಾಮಾಣಿಕರು ಆಗಿರುವುದು ಮಾತ್ರವಲ್ಲದೆ ಅವರು ಉದಾರ ಮನೋಭಾವದವರಾಗಿ ತಮ್ಮ ನೆರೆಹೊರೆಯವರಿಗೂ ಈ ಒಳ್ಳೆಯ ಸಂಗತಿಗಳನ್ನು ನೀಡಲು ಇಷ್ಟಪಡುವವರೂ ಆಗಿರಬೇಕು. ಅಲ್ಲದೆ ಮನುಷ್ಯ ಕುಮಾರನ ಎರಡನೇ ಪ್ರತ್ಯಕ್ಷತೆಯ ವಿಷಯವಾಗಿ ಹಾಗೂ ದೇವರ ರಾಜ್ಯವು ಸ್ಥಾಪಿತವಾಗುವುದರ ವಿಷಯವಾಗಿ ಕೇಳಿ ಮತ್ತು ದೇವರ ಯೋಜನೆಯ ಸತ್ಯಾರ್ಥಗಳ ವಿಷಯವಾಗಿ ಹಿಂದೆಂದೂ ಇಲ್ಲದಂಥ ಸ್ಪಷ್ಟವಾದ ತಿಳುವಳಿಕೆಯನ್ನು ಹೊಂದಿರುವವರು ಅದರ ಸೇವೆಯಲ್ಲಿ ಅಂದರೆ "ಜನರಿಗೆಲ್ಲಾ ಮಹಾ ಸಂತೋಷವನ್ನುಂಟುಮಾಡುವ ಶುಭಸಮಾಚಾರವನ್ನು" (ಲೂಕ 2:10) ಪ್ರಚಾರಮಾಡುವಲ್ಲಿ ತಮ್ಮ ಜೀವವನ್ನು ಕೊಡಲೂ ಸಂತೋಷವುಳ್ಳವರಾಗುವರು. ಇದು ನಿಜವಾದ ಸುವಾರ್ತಾ ಪ್ರಚಾರ ಮನೋಭಾವ ಹಾಗೂ ಸ್ವನಾಡಿನಲ್ಲಿ ಸುವಾರ್ತಾಪ್ರಚಾರ ಮಾಡುವುದು ಮೊದಲು ಬರುತ್ತದೆ.

## "ನನ್ನ ಬಳಿಗೆ ಬಂದು ಕುಡಿಯಲಿ"

ನಮ್ಮ ಸುವರ್ಣ ಪಠ್ಯಭಾಗದ ವಿಷಯವು ಇಲ್ಲಿ ತಿಳಿಯಪಡಿಸಲಾದ ಪಾಠಕ್ಕೆ ಪೂರ್ಣವಾಗಿ ಹೊಂದಿಕೊಂಡಿರುವುದು; ಅದೇನೆಂದರೆ, ಯಾವನಾದರೂ ಕರ್ತನ ಬಳಿಗೆ ಬರುವುದಕ್ಕೆ ಮೊದಲು ಅವನು ಬಾಯಾರಿಕೆಯುಳ್ಳವನಾಗಿರಬೇಕು; ಕರ್ತನಿಂದ ಕೊಡಲ್ಪಟ್ಟು ನಿತ್ಯಜೀವವನ್ನುಂಟು ಮಾಡಿ ಪುನಶ್ಚೇತನಗೊಳಿಸುವ ನೀರಿನ ವಿಷಯವಾಗಿ ಗ್ರಹಿಸಿರುವಂತವನಾಗಿರಬೇಕು. ಇದರ ಅರ್ಥವೇನೆಂದರೆ, ತಾನು ಒಬ್ಬ ಪಾಪಿಯಾಗಿ ಮರಣ ದಂಡನೆಗೆ ಒಳಗಾಗಿರುವುದನ್ನೂ ಕ್ರಿಸ್ತನ ಮೂಲಕವಾಗಿ ಹೊರತು ಮುಂದಿನ ಒಂದು ಜೀವಿತಕ್ಕೆ ಯಾವ ನಿರೀಕ್ಷೆ ಇರುವುದಿಲ್ಲವೆಂಬುದನ್ನೂ ಅವನು ಕಲಿತುಕೊಂಡಿರಬೇಕು. ಕರ್ತನ ಬಳಿಗೆ ಬರುವುದೆಂದರೆ ನಂಬಿಕೆಯ ಮೂಲಕ ಆತನನ್ನು ಸಮೀಪಿಸುವುದು. ನಮ್ಮ ಬಾಯಾರಿಕೆಯೆಂಬುದು ನಮಗಿರುವ ಬಯಕೆ. "ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆಪಡಿಸು; ನಿನ್ನ ವಾಕ್ಯವೇ ಸತ್ಯವು." (ಯೋಹಾನ 17:17) ಎಂಬ ದೇವರ ಸಂದೇಶವನ್ನು ನಾವು ಕುಡಿಯುವೆವು ಅಥವಾ ನಮ್ಮದನ್ನಾಗಿ ಮಾಡಿಕೊಳ್ಳುವೆವು. ಮತ್ತು ನೀರು ಸತ್ಯಕ್ಕೆ ಸಂಕೇತವಾಗಿದೆ. "ನೀತಿಗಾಗಿ ಹಸಿದು ಬಾಯಾರಿದವರಿಗೆ" ಇರುವ ಆಶೀರ್ವಾದದ ವಾಗ್ದಾನವು ಪೂರ್ಣವಾಗಿ ಇದಕ್ಕನುಸಾರವಾಗಿರುವುದು. ಮತ್ತು ಆ ವಾಗ್ದಾನವೇನೆಂದರೆ; "ಅವರಿಗೆ ತೃಪ್ತಿಯಾಗುವುದು." ಇದೂ ಸಹ ನಮ್ಮ ಪಾಠದಲ್ಲಿರುವ ಕರ್ತನ ಹೇಳಿಕೆಗೆ ಅನುಸಾರವಾಗಿರುವುದು; ಅದೇನೆಂದರೆ, "ನಾನು ಕೊಡುವ ನೀರನ್ನು ಕುಡಿದವನಿಗೆ ಎಂದಿಗೂ ನೀರಡಿಕೆಯಾಗುವುದಿಲ್ಲ."–ವಚನ 14.

ಈಗಿನ ಕಾಲದಲ್ಲಿ, ನಮ್ಮ ಬಾಯಾರಿಕೆ ಎಂಬುದು ಒಂದು ಅರ್ಥದಲ್ಲಿ "ತಣಿಸಲಾಗದು" ಅಂದರೆ ನಮಗೆ ಎಂದೂ ತೃಪ್ತಿಯಾಗದು ಎಂದಾಗುತ್ತದೆ. ಇದು ಒಂದು ಅರ್ಥದಲ್ಲಿ ಕರ್ತನು ನೀಡುವ ಆಶೀರ್ವಾದಗಳು ಎಷ್ಟು ವಿಶೇಷವಾದವುಗಳು ಮತ್ತು ಎಷ್ಟು ಹಿತಕರವಾದವುಗಳೆಂದರೆ ಈ ದಿನಗಳಲ್ಲಿ ಮತ್ತು ಇಂದಿನ ಪರಿಸ್ಥಿತಿಗಳಲ್ಲಿ ನಮಗೆ ಸಾಕಾಗುವಷ್ಟನ್ನು ನಾವು ಎಂದೂ ಪಡೆಯಲಾಗದೆಂದಾಗುತ್ತದೆ. ನಾವು ಆತನ ಸ್ವರೂಪದಲ್ಲಿ ಎಚ್ಚೆತ್ತಾಗಲೇ ಪೂರ್ಣ ತೃಪ್ತರಾಗುವುದು. (ಕೀರ್ತನೆ 17:15) ಮೊದಲನೇ ಪುನರುತ್ಥಾನದಲ್ಲಿನ "ಮಾರ್ಪಡುವಿಕೆಯು" ನಾವು ಹೊಸ ಸೃಷ್ಟಿಗಳಾಗಿ ನಮ್ಮ ಕರ್ತನ ಸ್ವರೂಪಕ್ಕೆ ಅಂದರೆ "ಪ್ರಭಾವದಿಂದ ಪ್ರಭಾವಕ್ಕೆ" (2 ಕೊರಿಂಥ 3:18) ಪರಿವರ್ತನೆಗೊಂಡಾಗ ನೆರವೇರುವುದು. ಆದರೂ ಈಗಿನ ಕಾಲದಲ್ಲೂ ನಾವು ಕುಡಿಯುವುದರಿಂದ ಒಂದು ಪ್ರಮಾಣದ ತೃಪ್ತಿ ದೊರಕಿರುವುದು. ಹೇಗೆಂದರೆ ಇದು ಬುಗ್ಗೆಯ ಬಳಿಯಲ್ಲಿ ಒಬ್ಬ ಬಾಯಾರಿದವನು ನೀರನ್ನು ಇಷ್ಟದಿಂದ ಕುಡಿದು ಆಸ್ವಾದಿಸಿ ಸಂತೃಪ್ತನಾಗಿ ಇನ್ನೂ ಹೆಚ್ಚುಹೆಚ್ಚು ತೆಗೆದುಕೊಳ್ಳುವಂತಿರುವುದು. ಕರ್ತನವರಲ್ಲಿಯೂ ಇದು ಹೀಗೆಯೇ ಇರುವುದು. ತಮ್ಮ (ದೇಹವೆಂಬ) ಗುಡಾರದಲ್ಲಿ ವಾಸಿಸುತ್ತಿರುವ ಈ ಸಮಯಗಳಲ್ಲೂ ಆತನು ಹೇರಳವಾಗಿಯೂ ತೃಪ್ತಿಕರವಾಗಿಯೂ ಇರುವ ಆಶೀರ್ವಾದಗಳನ್ನು ಅವರ ಪಾತ್ರೆಗಳಲ್ಲಿ ಸುರಿಯುತ್ತಿದ್ದು ಅವುಗಳನ್ನು ಪದೇಪದೇ ತುಂಬಿಸುತ್ತಿರುವನು. ಜೀವಜಲವಾದ ಸತ್ಯವನ್ನು ನಾವು ಅಧಿಕಾಧಿಕವಾಗಿ ಆಸ್ವಾಧಿಸೋಣ; ಅದನ್ನು ನಾವು ಬುಗ್ಗೆಯಿಂದ ಶುದ್ಧವಾಗಿ ಪಡೆಯುವಂತೆ ನೋಡಿಕೊಳ್ಳೋಣ; ಜೀವಜಲದ ಬುಗ್ಗೆಯಾಗಿರುವ ಕರ್ತನಾದ ಯೇಸುವಿನಿಂದ ಹೊರತು ಬೇರೆ ಯಾವ ಮಾರ್ಗದಿಂದಾದರೂ ಅದು ನಮಗೆ ಬಂದರೂ, ಅದು ಎಷ್ಟು ಮನವರಿಕೆಯಾಗುವಂತಿದ್ದರೂ ನಾವು ಅದಕ್ಕೆ ಮನ್ನಣೆ ಮಾಡದೆ ಇರೋಣ.



**ಮಾರ್ಥಳ ಮತ್ತು ಮರಿಯಳ ಮನೆಯಲ್ಲಿ ಯೇಸು**

“ಮಾರ್ಥಳೇ, ಮಾರ್ಥಳೇ, ನೀನು ಅನೇಕ ವಿಷಯವಾಗಿ ಚಿಂತೆಯಲ್ಲಿಯೂ ಗಡಿಬಿಡಿಯಲ್ಲಿಯೂ ಸಿಕ್ಕಿಕೊಂಡಿದ್ದೀ. ಕೆಲವು ಮಾತ್ರ ಬೇಕಾದುದು, ಅಥವಾ ಒಂದೇ, ಮರಿಯಳು ಆ ಉತ್ತಮ ಭಾಗವನ್ನು ಆರಿಸಿಕೊಂಡಿದ್ದಾಳೆ; ಅದು ಆಕೆಯಿಂದ ತೆಗೆಯಲ್ಪಡುವುದಿಲ್ಲ.....” (ಲೂಕ 10:41,42)

# ಗಲಿಲಾಯದಲ್ಲಿ ನಡೆದ ಯೇಸುವಿನ ಮಹತ್ತರವಾದ ಸೇವಾಕಾರ್ಯಗಳು

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 30 | ಗಲಿಲಾಯ | "ಪರಲೋಕ ರಾಜ್ಯವು ಸಮೀಪವಾಯಿತು" ಎಂಬ ಮೊದಲ ಸಾರುವಿಕೆ | 4:7 | 1:14,15 | 4:14,15 | 4:44,45 |
| | ನಜರೇತ್, ಕಾನಾ, ಕಪೆರ್ನೌಮ್ | ಹುಡುಗನನ್ನು ಸ್ವಸ್ಥಮಾಡಿದುದು; ತನ್ನ ಕಾರ್ಯಭಾರದ ವಿಷಯವನ್ನು ಓದಿದುದು; ತಿರಸ್ಕರಿಸಲ್ಪಟ್ಟದ್ದು; ಕಪೆರ್ನೌಮಿಗೆ ಹೋದುದು. | 4:13–16 | –– | 4:16–31 | 4:46–54 |
| | ಗಲಿಲಾಯ ಸಮುದ್ರ, ಕಪೆರ್ನೌಮಿನ ಬಳಿ | ಸೀಮೋನ ಮತ್ತು ಅಂದ್ರೆಯ, ಯಾಕೋಬ ಮತ್ತು ಯೋಹಾನರನ್ನು ಕರೆದುದು. | 4:18–22 | 1:16–20 | 5:1–11 | –– |
| | ಕಪೆರ್ನೌಮ್ | ದೆವ್ವ ಹಿಡಿದವನನ್ನು ಸ್ವಸ್ಥಮಾಡಿದುದು, ಪೇತ್ರನ ಅತ್ತೆ ಹಾಗೂ ಬೇರೆ ಹಲವರನ್ನು ಸಹ | 8:14–17 | 1:21–34 | 4:31–41 | –– |
| | ಗಲಿಲಾಯ | ಆಗ ಕರೆಯಲ್ಪಟ್ಟ ನಾಲ್ವರೊಡನೆ ಗಲಿಲಾಯದಲ್ಲಿ ಮಾಡಿದ ಮೊದಲನೇ ಪ್ರವಾಸ | 4:23–25 | 1:35–39 | 4:42–43 | –– |
| | ಗಲಿಲಾಯ | ಕುಷ್ಠರೋಗಿಯನ್ನು ವಾಸಿಮಾಡಿದುದು; ದೊಡ್ಡ ಗುಂಪು ಯೇಸುವಿನ ಬಳಿಗೆ ಕೂಡಿಬಂದುದು | 8:1–4 | 1:40–45 | 5:12–16 | –– |
| | ಕಪೆರ್ನೌಮ್ | ಪಾರ್ಶ್ವವಾಯು ರೋಗಿಯನ್ನು ಸ್ವಸ್ಥಪಡಿಸಿದುದು | 9:1–8 | 2:1–12 | 5:17–26 | –– |
| | ಕಪೆರ್ನೌಮ್ | ಮತ್ತಾಯನನ್ನು ಕರೆದುದು; ಸುಂಕದವರೊಡನೆ ಔತಣ ಮಾಡಿದುದು | 9:9–17 | 2:13–22 | 5:27–39 | –– |
| | ಯೂದಾಯ | ಯೂದಾಯದ ಸಭಾಮಂದಿರಗಳಲ್ಲಿ ಉಪದೇಶ ಮಾಡಿದುದು | –– | –– | 4:44 | –– |
| ಕ್ರಿ.ಶ. 31 | ಯೆರೂಸಲೇಮ್ | ಹಬ್ಬಕ್ಕೆ ಹೋದುದು; ಒಬ್ಬ ಮನುಷ್ಯನನ್ನು ಸ್ವಸ್ಥಮಾಡಿದುದು; ಪರಿಸಾಯರನ್ನು ಗದರಿಸಿದುದು | –– | –– | –– | 5:1–47 |
| | ಯೆರೂಸಲೇಮಿನಿಂದ ಹಿಂದಿರುಗುವಾಗ (?) | ಸಬ್ಬತ್ ದಿನದಲ್ಲಿ ಶಿಷ್ಯರು ಕಾಳಿನ ತೆನೆಗಳನ್ನು ಮುರಿದುಕೊಂಡದ್ದು | 12:1–8 | 2:23–28 | 6:1–5 | –– |
| | ಗಲಿಲಾಯ; ಗಲಿಲಾಯ ಸಮುದ್ರ | ಸಬ್ಬತ್ತಿನಲ್ಲಿ ಕೈಯನ್ನು ಸ್ವಸ್ಥಮಾಡಿದುದು; ಸಮುದ್ರ ತೀರಕ್ಕೆ ತೆರಳಿದುದು; ಸ್ವಸ್ಥಮಾಡಿದುದು | 12:9–21 | 3:1–12 | 6:6–11 | –– |
| | ಕಪೆರ್ನೌಮಿನ ಸಮೀಪದ ಪರ್ವತ | ಹನ್ನೆರಡು ಜನರನ್ನು ಅಪೋಸ್ತಲರನ್ನಾಗಿ ಆದುಕೊಂಡದ್ದು | –– | 3:13–19 | 6:12–16 | –– |

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| | ಕಪೆರ್ನೌಮಿನ ಸಮೀಪ | ಪರ್ವತ ಪ್ರಸಂಗ | 5:1–7:29 | –– | 6:17–49 | –– |
| | ಕಪೆರ್ನೌಮ್ | ಶತಾಧಿಪತಿಯ ಆಳನ್ನು ಸ್ವಸ್ಥಮಾಡಿದುದು | 8:5–13 | –– | 7:1–10 | –– |
| | ನಾಯಿನ್ | ವಿಧವೆಯ ಮಗನನ್ನು ಎಬ್ಬಿಸಿದುದು | –– | –– | 7:11–17 | –– |
| | ಗಲಿಲಾಯ | ಯೋಹಾನನು ಸೆರೆಯಾದುದು, ಶಿಷ್ಯರನ್ನು ಯೇಸುವಿನ ಬಳಿಗೆ ಕಳುಹಿಸಿದ್ದು | 11:2–19 | –– | 7:18–35 | –– |
| | ಗಲಿಲಾಯ | ಪಟ್ಟಣಗಳನ್ನು ಖಂಡಿಸಿದುದು; ಬಾಲಕರಿಗೆ ಪ್ರಕಟಮಾಡುವುದು; ಮೃದುವಾದ ನೊಗ | 11:20–30 | –– | –– | –– |
| | ಗಲಿಲಾಯ | ದುರಾಚಾರಿಯಾದ ಹೆಂಗಸು ಪಾದಗಳಿಗೆ ತೈಲವನ್ನು ಹಚ್ಚಿದುದು; ಸಾಲಗಾರರ ದೃಷ್ಟಾಂತ | –– | –– | 7:36–50 | –– |
| | ಗಲಿಲಾಯ | ಹನ್ನೆರಡು ಮಂದಿಯೊಂದಿಗೆ ಗಲಿಲಾಯದಲ್ಲಿ ಮಾಡಿದ ಎರಡನೇ ಪ್ರವಾಸ | –– | –– | 8:1–3 | –– |
| | ಗಲಿಲಾಯ | ದೆವ್ವಹಿಡಿದವನು ಸ್ವಸ್ಥವಾದದ್ದು; ಬೆಲ್ಜೆಬೂಬನ ಸಹಾಯ ಪಡೆದ ಅಪವಾದ | 12:22–37 | 3:19–30 | –– | –– |
| | ಗಲಿಲಾಯ | ಶಾಸ್ತ್ರಿಗಳು ಮತ್ತು ಪರಿಸಾಯರು ಒಂದು ಸೂಚನೆ ಕೇಳಿಕೊಂಡದ್ದು | 12:38–45 | –– | –– | –– |
| | ಗಲಿಲಾಯ | ಕ್ರಿಸ್ತನ ಶಿಷ್ಯರು, ಆತನ ಸಮೀಪ ಬಂಧುಗಳು | 12:46–50 | 3:31–35 | 8:19–21 | –– |
| | ಗಲಿಲಾಯ ಸಮುದ್ರ | ಬಿತ್ತುವವನು, ಹಣಜಿ, ಬೇರೆಯವುಗಳ ದೃಷ್ಟಾಂತಗಳು; ವಿವರಣೆಗಳು | 13:1–53 | 4:1–34 | 8:4–48 | –– |
| ಕ್ರಿ.ಶ. 31 | ಗಲಿಲಾಯ ಸಮುದ್ರ | ಕೆರೆಯನ್ನು ದಾಟುವಾಗ ಬಿರುಗಾಳಿಯನ್ನು ನಿಲ್ಲಿಸಿದುದು | 8:18,23–27 | 4:35–41 | 8:22–25 | –– |
| | ಗದಾರ ಸೀಮೆ, ಗಲಿಲಾಯದ ಆಗ್ನೇಯ ಭಾಗ | ದೆವ್ವಹಿಡಿದ ಇಬ್ಬರು ಸ್ವಸ್ಥವಾದುದು; ಹಂದಿಗಳು ದೆವ್ವಗಳ ದಂಡಿನಿಂದ ಹಿಡಿಯಲ್ಪಟ್ಟುದುದು | 8:28–34 | 5:1–20 | 8:26–39 | –– |
| | ಬಹುಶಃ ಕಪೆರ್ನೌಮ್ | ಯಾಯೀರನ ಮಗಳು ಎಬ್ಬಿಸಲ್ಪಟ್ಟದ್ದು; ಹೆಂಗಸು ಸ್ವಸ್ಥವಾದುದು | 9:18–26 | 5:21–43 | 8:40–56 | –– |
| | ಕಪೆರ್ನೌಮ್ (?) | ಇಬ್ಬರು ಕುರುಡರು ಮತ್ತು ಒಂದು ಮೂಕ ದೆವ್ವ ಹಿಡಿದವನು ಸ್ವಸ್ಥವಾದುದು | 9:27–34 | –– | –– | –– |
| | ನಜರೇತ್ | ತಾನು ಬೆಳೆದ ನಜರೇತಿಗೆ ಪುನಃ ಭೇಟಿ ನೀಡಿದುದು ಮತ್ತೆ ತಿರಸ್ಕರಿಸಲ್ಪಟ್ಟದ್ದು | 13:54–58 | 6:1–6 | –– | –– |

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| | ಗಲಿಲಾಯ | ಗಲಿಲಾಯದಲ್ಲಿ ಮಾಡಿದ ಮೂರನೇ ಪ್ರವಾಸ, ಶಿಷ್ಯರನ್ನು ಕಳುಹಿಸಿಕೊಡುವ ಮೂಲಕ ಪ್ರವಾಸ ವಿಸ್ತರಿಸಲ್ಪಟ್ಟದ್ದು | 9:35–11:1 | 6:6–13 | 9:1–6 | –– |
| | ತಿಬೇರಿಯ | ಸ್ನಾನಿಕನಾದ ಯೋಹಾನನ ತಲೆಹೊಯ್ಯಲ್ಪಟ್ಟಿದ್ದು; ಹೆರೋದನ ಪಾಪಪ್ರಜ್ಞೆ ಭಯ | 14:1–12 | 6:6–13 | 9:7–9 | –– |
| ಕ್ರಿ.ಶ.32, ಪಸ್ಕದ ಸಮೀಪ | ಕಪೆರ್ನೌಮ್ (?); ಗಲಿಲಾಯ ಸಮುದ್ರದ ಈಶಾನ್ಯ ಭಾಗ | ಅಪೋಸ್ತಲರು ಸುವಾರ್ತಾ ಪ್ರವಾಸದಿಂದ ಹಿಂದಿರುಗಿದುದು, 5000 ಜನರಿಗೆ ಊಟ ಮಾಡಿಸಿದ್ದು | 14:13–21 | 6:30–44 | 9:10–17 | 6:1–13 |
| | ಗಲಿಲಾಯದ ಈಶಾನ್ಯ ಭಾಗ; ಗೆನೆಜರೇತ್ | ಯೇಸುವನ್ನು ರಾಜನನ್ನಾಗಿ ಮಾಡುವ ಪ್ರಯತ್ನ; ಆತನು ಸಮುದ್ರದ ಮೇಲೆ ನಡೆದುದು, ಸ್ವಸ್ಥಪಡಿಸಿದುದು | 14:22–36 | 6:45–56 | –– | 6:14–21 |
| | ಕಪೆರ್ನೌಮ್ | "ಜೀವ ಕೊಡುವ ರೊಟ್ಟಿ" ಎಂದು ಗುರುತಿಸಿಕೊಂಡದ್ದು; ಹಲವು ಶಿಷ್ಯರು ಹಿಂಜರಿದು ಹಿಂದೆ ಹೋದದ್ದು | –– | –– | –– | 6:22–71 |
| ಕ್ರಿ.ಶ. 32, ಪಸ್ಕದ ನಂತರ | ಬಹುಶಃ ಕಪೆರ್ನೌಮ್ | ಸಂಪ್ರದಾಯದ ನಿಮಿತ್ತ ದೇವರ ವಾಕ್ಯವು ನಿರರ್ಥಕ ಮಾಡಲ್ಪಟ್ಟದ್ದು | 15:1–20 | 7:1–23 | –– | 7:1 |
| | ಫೋಯಿನಿಕೆ; ದೆಕಪೊಲಿ ಸೀಮೆ | ತೂರ್ ಸೀದೋನ್ ಪಟ್ಟಣಗಳ ಸಮೀಪ; ಆನಂತರ ದೆಕಪೊಲಿಗೆ; 4000 ಜನರು ಊಟ ಮಾಡಿದುದು | 15:21–38 | 7:24–8:9 | –– | –– |
| | ಮಗದಾನ ಸೀಮೆ | ಸದ್ದುಕಾಯರು ಮತ್ತು ಪರಿಸಾಯರು ಪುನಃ ಸೂಚನೆ ಕೇಳಿಕೊಂಡದ್ದು | 15:39–16:4 | 8:10–26 | –– | –– |
| | ಗಲಿಲಾಯದ ಈಶಾನ್ಯ ಭಾಗ; ಬೇತ್ಸಾಯಿದ | ಪರಿಸಾಯರ ಹುಳಿಹಿಟ್ಟಿನ ಬಗ್ಗೆ ಎಚ್ಚರಿಕೆ ನೀಡಿದುದು; ಕುರುಡನನ್ನು ಸ್ವಸ್ಥಮಾಡಿದುದು | 16:5–12 | –– | –– | –– |
| | ಫಿಲಿಪ್ಪನ ಕೈಸರೆಯ ಪಟ್ಟಣ | ಯೇಸುವು ಮೆಸ್ಸೀಯನು; ಮರಣ ಪುನರುತ್ಥಾನಗಳನ್ನು ಮುಂತಿಳಿಸಿದುದು | 16:13–28 | 8:27–9:1 | 9:18–27 | –– |
| | ಬಹುಶಃ ಹೆರ್ಮೋನ್ ಪರ್ವತ | ಪೇತ್ರ ಯಾಕೋಬ ಯೋಹಾನರ ಎದುರಿನಲ್ಲಿ ರೂಪಾಂತರ | 17:1–13 | 9:2–13 | 9:28–36 | –– |
| | ಫಿಲಿಪ್ಪನ ಕೈಸರೆಯ ಪಟ್ಟಣ | ಶಿಷ್ಯರು ಸ್ವಸ್ಥಮಾಡಲಾಗದಿದ್ದ ದೆವ್ವ ಹಿಡಿದವನನ್ನು ಸ್ವಸ್ಥಮಾಡಿದುದು | 17:14–20 | 9:14–29 | 9:37–43 | –– |
| | ಗಲಿಲಾಯ | ತನ್ನ ಮರಣಪುನರುತ್ಥಾನಗಳನ್ನು ಮತ್ತೆ ಮುಂತಿಳಿಸಿದುದು | 17:22–23 | 9:30–32 | 9:43–45 | –– |

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| | ಕಪೆರ್ನೌಮ್ | ತೆರಿಗೆ ಹಣವನ್ನು ಅದ್ಭುತವಾಗಿ ಒದಗಿಸಿಕೊಟ್ಟದ್ದು | 17:24–27 | –– | –– | –– |
| | ಕಪೆರ್ನೌಮ್ | ದೇವರ ರಾಜ್ಯದಲ್ಲಿ ಹೆಚ್ಚಿನವನು; ತಪ್ಪುಗಳನ್ನು ತಿದ್ದಿ ಸರಿಪಡಿಸಿಕೊಳ್ಳುವುದು | 18:1–35 | 9:33–50 | 9:46–50 | –– |
| | ಗಲಿಲಾಯ; ಸಮಾರ್ಯ | ಪರ್ಣಶಾಲೆಯ ಹಬ್ಬಕ್ಕಾಗಿ ಗಲಿಲಾಯದಿಂದ ಹೊರಟ್ಟಿದ್ದು; ದೇವರ ಸೇವೆಗಾಗಿ ಎಲ್ಲವನ್ನೂ ಬದಿಗೊತ್ತಬೇಕೆಂಬುದು | 8:19–22 | –– | 9:51–62 | 7:2–10 |

## ಮತ್ತಾಯ 4:17

ಅಂದಿನಿಂದ ಯೇಸು––ಪರಲೋಕರಾಜ್ಯವು ಸಮೀಪಿಸಿತು; ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ಸಾರಿ ಹೇಳುವುದಕ್ಕೆ ಪ್ರಾರಂಭಿಸಿದನು.

## ಮಾರ್ಕ 1:14–15

ಯೋಹಾನನು ಸೆರೆಗೆ ಬಿದ್ದ ಮೇಲೆ ಯೇಸು ಗಲಿಲಾಯ ಸೀಮೆಗೆ ಬಂದು–ಕಾಲ ಪರಿಪೂರ್ಣವಾಯಿತು, ದೇವರ ರಾಜ್ಯವು ಸಮೀಪಿಸಿತು, ದೇವರ ಕಡೆಗೆ ತಿರುಗಿಕೊಂಡು ಸುವಾರ್ತೆಯನ್ನು ನಂಬಿರಿ ಎಂದು ದೇವರ ಸುವಾರ್ತೆಯನ್ನು ಸಾರಿಹೇಳಿದನು.

## ಲೂಕ 4:14–15

ತರುವಾಯ ಯೇಸು ಪವಿತ್ರಾತ್ಮನ ಶಕ್ತಿಯಿಂದ ಕೂಡಿದವನಾಗಿ ತಿರಿಗಿ ಗಲಿಲಾಯಕ್ಕೆ ಹೋದನು; ಆತನ ಸುದ್ದಿಯು ಸುತ್ತಲಿರುವ ಪ್ರಾಂತ್ಯದಲ್ಲೆಲ್ಲಾ ಹಬ್ಬಿಕೊಂಡಿತು. ಆತನು ಅವರ ಸಭಾಮಂದಿರಗಳಲ್ಲಿ ಬೋಧಿಸುತ್ತಾ ಬಂದನು; ಎಲ್ಲರೂ ಆತನನ್ನು ಹೊಗಳಿದರು.

## ಯೋಹಾನ 4:44–45

ಯಾಕೆಂದರೆ ಪ್ರವಾದಿಗೆ ಸ್ವದೇಶದಲ್ಲಿ ಮರ್ಯಾದೆಯಿಲ್ಲವೆಂದು ಯೇಸು ತಾನೇ ಹೇಳಿದನು. ಗಲಿಲಾಯದವರು ತಾವೂ ಯೆರೂಸಲೇಮಿನ ಜಾತ್ರೆಗೆ ಹೋಗಿ ಆತನು ಅಲ್ಲಿ ಮಾಡಿದ್ದನ್ನೆಲ್ಲಾ ನೋಡಿದ್ದರಿಂದ ಆತನು ಗಲಿಲಾಯಕ್ಕೆ ಬಂದಾಗ ಆತನನ್ನು ಆದರದಿಂದ ಅಂಗೀಕರಿಸಿದರು.

# ನಂಬಿಕೆಯು ನೀಡಿದ ಪ್ರತಿಫಲ––'ನಿನ್ನ ಮಗನು ಬದುಕುತ್ತಾನೆ."

**ರಿಪ್ರಿಂಟ್ಸ್, ಪುಟ 2424**

**"ಆಗ ನಿನ್ನ ಮಗನು ಬದುಕುತ್ತಾನೆಂದು ಯೇಸು ತನಗೆ ಹೇಳಿದ ತಾಸಿನಲ್ಲಿಯೇ ಅದಾಯಿತೆಂದು ತಂದೆಯು ತಿಳುಕೊಂಡದರಿಂದ ಅವನೂ ಅವನ ಮನೆಯವರೆಲ್ಲರೂ ಆತನನ್ನು ನಂಬಿದರು."**

ಪ್ರಧಾನನ ಮಗನನ್ನು ಸ್ವಸ್ಥಮಾಡುವುದಕ್ಕೆ ಮುನ್ನ ಸಮಾರ್ಯದ ಹೆಂಗಸಿಗೆ ಉಪದೇಶಮಾಡಿ ಗಲಿಲಾಯಕ್ಕೆ ಪ್ರಯಾಣ ಮಾಡಿ ಮುಗಿಸಲು, ಇತ್ಯಾದಿ, ಇತ್ಯಾದಿಗಳಿಗಾಗಿ ಎರಡು ದಿನಗಳು ಕಳೆದವು. ಗಲಿಲಾಯವು ಹಿಂದಿದ್ದ ಇಸ್ರಾಯೇಲ್ಯರ ಹತ್ತು ಕುಲಗಳ ರಾಜ್ಯದ ಒಂದು ಭಾಗವಾಗಿದ್ದು ಸಮಾರ್ಯವೆಂದು ಕರೆಯಲ್ಪಡುವ ಪ್ರಾಂತ್ಯವು ಗಲಿಲಾಯ ಮತ್ತು ಯೂದಾಯಗಳ ಮಧ್ಯಭಾಗದಲ್ಲಿತ್ತು. ನಮ್ಮ ಕರ್ತನು ನಾಡಿನ ಅತ್ತಿತ್ತ ಪ್ರಯಾಣಮಾಡುವಾಗ ಹನ್ನೆರಡು ಕುಲಗಳು ನೆಲೆಸಿದ್ದ ಪ್ರದೇಶದ ಹೊರಗೆ ಎಂದೂ ಹೋಗಲಿಲ್ಲವೆಂಬುದು ಗಮನಕ್ಕೆ ಬರುವ ಸಂಗತಿ. ಯೆರೂಸಲೇಮಿಗೆ ಬಹು ದೂರವಿರದ ಯೂದಾಯದ ಬೆತ್ಲೆಹೇಮಿನಲ್ಲಿ ಯೇಸುವು ಹುಟ್ಟಿದ್ದು ಮತ್ತು ಅತನ ತಂದೆತಾಯಿಗಳು ಆತನು ಹುಟ್ಟಿದ ಕೆಲ ಸಮಯದ ನಂತರ ಬೆತ್ಲೆಹೇಮಿನಲ್ಲಿ ಮಕ್ಕಳ ಸಂಹಾರಕ್ಕೆ ಮೊದಲು ದೇವರ ಸೂಚನೆಯ ಮೇರೆಗೆ ಐಗುಪ್ತಕ್ಕೆ ಓಡಿಹೋದದ್ದು ಇಲ್ಲಿ ನೆನಪಾಗುವದು. ಮತ್ತು ಐಗುಪ್ತದಿಂದ ಹಿಂದಿರುಗಿ ಬರುವಾಗ ಬೆತ್ಲೆಹೇಮಿಗೆ ಪುನಃ ಹೋಗುವುದರ ಬದಲು ಅವರು ಗಲಿಲಾಯದ ನಜರೇತಿನಲ್ಲಿ ನೆಲೆಯಾದರು. ಇದು "ನಜರಾಯನೆಂಬ ಹೆಸರು ಆತನಿಗೆ ಬರುವುದು..." ಮತ್ತು ಹೀಗೆ ಕರ್ತನಿಗೆ ಅಸಹಜವಾದ ಅಪ್ರಿಯ ಹೆಸರು ಬರುವಂತಾಗಿ ಇದು ಆತನ ಅದ್ಭತವಾದ ವ್ಯಕ್ತಿತ್ವ ಹಾಗೂ ಹಿಂದೆಂದೂ ಮತ್ತು ಮುಂದೆಯೂ ಇರದ, "ಮನುಷ್ಯರು ಎಂದೂ ಮಾತಾಡದ ರೀತಿಯಲ್ಲಿ" "ಆತನ ಬಾಯಿಂದ ಹೊರಡುತ್ತಿದ್ದ ಇಂಪಾದ ಮಾತುಗಳು" ಇಂಥವುಗಳ ಪ್ರಭಾವವನ್ನು ತಗ್ಗಿಸುವಂತಾಗಿತ್ತು. ಇದರ ಉದ್ದೇಶ ಕೇವಲ ನಿಜವಾದ ಇಸ್ರಾಯೇಲ್ಯರು ಮಾತ್ರ ಆ

ಮಾತನ್ನು ಅದರ ನಿಜಾರ್ಥದಲ್ಲಿ ಕೇಳಿ ಸ್ವಸ್ಥತೆಯನ್ನು ಹೊಂದಿ ಕೃಪಾ ಸಂಬಂಧವಾದ ಹೊಸ ಒಡಂಬಡಿಕೆಯ ಅಡಿಯಲ್ಲಿ ದೇವರ ಮಕ್ಕಳಾಗಿ ಅಂಗೀಕರಿಸಲ್ಪಡುವದಕ್ಕಾಗಿತ್ತು.

ನಮ್ಮ ಕರ್ತನ ಶಿಷ್ಯರು "ಗಲಿಲಾಯದವರು" ಎಂದು ಮತ್ತು ಆತನೇ "ಗಲಿಲಾಯದವನು" ಎಂದು ಪರಿಚಿತರಾಗಿದ್ದರೆಂಬುದು ನೆನಪಿಗೆ ಬರುತ್ತದೆ. "ಒಬ್ಬ ಪ್ರವಾದಿಗೆ ಸ್ವದೇಶದಲ್ಲಿ ಮರ್ಯಾದೆಯಿಲ್ಲ" ಎಂಬ ಗಾದೆಮಾತಿನ ಸತ್ಯಾಂಶವನ್ನು ಅರಿತವನಾಗಿದ್ದ ನಮ್ಮ ಕರ್ತನು ತನ್ನ ಸೇವೆಯನ್ನು ಗಲಿಲಾಯದಲ್ಲಿ ಪ್ರಾರಂಭಿಸಲಿಲ್ಲ, ಆದರೆ ಅದನ್ನು ಪ್ರಾರಂಭಿಸಿದ್ದು ಯೂದಾಯದಲ್ಲಿ. ತಾನು ಮಾಡಿದ ಮೊದಲನೇ ಅದ್ಭುತ ಕಾರ್ಯದ ನಂತರ ಆತನು ತನ್ನ ಶಿಷ್ಯರೊಡನೆ ಯೂದಾಯಕ್ಕೆ ಹೋದನು, ಮತ್ತು ಪಸ್ಕಹಬ್ಬದ ಸಮಯದಲ್ಲಿ ಅಲ್ಲಿದ್ದು ಹಲವು ಗಮನಾರ್ಹವಾದ ಅದ್ಭುತಕಾರ್ಯಗಳನ್ನು ಮಾಡಿದನು. ಈ ಕಾರಣದಿಂದ ಆತನ ಕೀರ್ತಿಯು ದೂರದವರೆಗೂ ಹಬ್ಬಿ ಯೂದಾಯದ ಪರ್ಯಂತರ ಮಾತ್ರವಲ್ಲದೆ ತನ್ನ ಸ್ವದೇಶವಾದ ಗಲಿಲಾಯದವರೆಗೂ ತಲುಪಿತು. ಭಕ್ತರಾದ ಯೆಹೂದ್ಯರು ದೊಡ್ಡ ಸಂಖ್ಯೆಯಲ್ಲಿ ಪಸ್ಕ ಹಬ್ಬಕ್ಕಾಗಿ ಪ್ರತಿ ವರುಷವೂ ಯೆರೂಸಲೇಮಿಗೆ ಹೊಗುವುದು ವಾಡಿಕೆಯಾಗಿತ್ತು. ಮತ್ತು ಗಲಿಲಾಯದಿಂದ ಬಂದಿದ್ದಂಥವರು ಹಿಂದಿರುಗುವಾಗ ತಮ್ಮ ನಾಡಿನವನು ಮಾಡಿದ ಕಾರ್ಯಗಳ ಮತ್ತು ಆತನ ಕೀರ್ತಿಯ ವಿಷಯವಾದ ಸಂಗತಿಗಳನ್ನು ತಮ್ಮೊಡನೆ ಕೊಂಡುತಂದಿದ್ದರು. ಹೀಗಾಗಿ ನಮ್ಮ ಕರ್ತನು ತನ್ನ ಸ್ವದೇಶಕ್ಕೆ ಹಿಂದಿರುಗಿದಾಗ, ಇತರೆಡೆ ಗಳಿಸಿದ ಕೀರ್ತಿಯಶಸ್ಸಿನ ಕಾರಣದಿಂದಾಗಿ, ಒಬ್ಬ ಮಹಾ ಪ್ರವಾದಿಯಾಗಿದ್ದನು.

ನಮ್ಮ ಕರ್ತನ ಅನುಭವವೂ ಸಾಮಾನ್ಯ ನಿಯಮಗಳಿಗೆ ಹೊರತಾಗಿರಲಿಲ್ಲ. ಮಾನವ ಸ್ವಭಾವದಲ್ಲಿರುವ ವಿಶೇಷ ಲಕ್ಷಣವೆಂದರೆ ನಾವು ಯಾವ ಸಂಗತಿಗಳನ್ನು ನಿಕಟವಾಗಿ ತಿಳಿದಿರುತ್ತೇವೋ ಆ ಸಂಗತಿಗಳನ್ನು ಹಗುರವಾಗಿ ತೆಗೆದುಕೊಳ್ಳುವುದು. "ಅಂತರವು ದೃಷ್ಟಿಸಾಮರ್ಥ್ಯವನ್ನು ಅಧಿಕಗೊಳಿಸುವುದು" ಒಬ್ಬನು ಪರ್ವತವನ್ನು ದೂರದಿಂದ ನೋಡಿದಾಗ ಅದರ ರೂಪರೇಖೆಗಳು ಮತ್ತು ಸಮತೋಲನದ ಭವ್ಯತೆಗಳು ಎದ್ದುಕಾಣುತ್ತವೆ. ಆದರೆ ಅವನು ಅದರ ಹತ್ತಿರ ಹೋಗುವಾಗ ಅದರ ಅಂದಚೆಂದಗಳು ಮತ್ತು ಗಾಂಭೀರ್ಯಗಳು ಆತನ ಎಣಿಕೆಯಲ್ಲಿ ಕ್ಷೀಣಿಸತೊಡಗುವ ಸ್ವಭಾವಕ್ಕೆ ಬರುವದು. ಯಾಕೆಂದರೆ ಆತನ ದೃಷ್ಟಿಯು ಸಣ್ಣಸಣ್ಣ ತುಂಡುತುಣುಕುಗಳ ಕೆಸರುಮಣ್ಣುಗಳ ಮತ್ತು ಚಿಲ್ಲಾಪಿಲ್ಲಿಯಾಗಿ ಬೆಳೆದಿರುವ ಕುರುಚಲು ಗಿಡಗಳ ಮೇಲೆ ಬೀಳುತ್ತದೆ. ಹೀಗಿದ್ದರೂ ಬಹು ದೂರದಿಂದ ಕಂಡುಬಂದ ಅದರ ದೃಶ್ಯ, ಅಲ್ಲಿ ಉಂಟಾದ ಆಲೋಚನೆಗಳು ನಿಜವಾದವುಗಳು ಹಾಗೂ ಸರಿಯಾದವುಗಳು. ಹೀಗೆಯೇ ಲೋಕದಲ್ಲಿ ಕೆಲವು ಒಳ್ಳೆಯ ವ್ಯಕ್ತಿತ್ವಗಳನ್ನು ಪಡೆದು ಶ್ರೇಷ್ಠರೆಂದು ಈಗ ಎಣಿಸಲಾಗಿದ್ದವರ ವಿಷಯವಾಗಿಯೂ ಸಹ; ತಮ್ಮ ಕಾಲದಲ್ಲಿ ಅವರು ತಮ್ಮೊಡನೆ ಬಹು ನಿಕಟವಾದ ಸಂಪರ್ಕ ಹೊಂದಿದ್ದವರಿಂದ ಲಘುವಾಗಿ ಎಣಿಸಲ್ಪಟ್ಟವರಾಗಿದ್ದರು. ಅವರ ವಿಷಯವಾದ ಈಗಿನ ಅಭಿಪ್ರಾಯಗಳು ತಪ್ಪಾದವುಗಳೆಂದಲ್ಲ, ಆದರೆ ಅವರೊಡನೆ ಬಹು ನಿಕಟವಾಗಿದ್ದವರು ಅವರ ದಿನನಿತ್ಯದ ಸಾಮಾನ್ಯವಾದ ನಡಾವಳಿಯಲ್ಲಿ ಅವರಿಂದ ತೊಂದರೆಗೊಳಗಾದವರು ಅವರನ್ನು ಸರಿಯಾಗಿ ಅರ್ಥಮಾಡಿಕೊಳ್ಳದ ಕಾರಣದಿಂದ. ಲೋಕದ ಗಣ್ಯವ್ಯಕ್ತಿಗಳ ಮನೆಯಲ್ಲಿ ಅವರ ಕುಟುಂಬದೊಡನೆ ಸಂಪರ್ಕವಿದ್ದವರ ವಿಷಯದಲ್ಲಿ ಅನೇಕ ವೇಳೆ ಇದು ಸತ್ಯ. ದೂರದಿಂದ ಮಾತ್ರ ನಿಜವಾಗಿಯೂ ಕಾಣಲಾಗುವ ವಿಶಾಲಮನೋಭಾವ ಗುಣಲಕ್ಷಣಗಳನ್ನು ನೋಡುವುದನ್ನು ಬಿಟ್ಟು ಜೀವಿತದ ಸಣ್ಣಸಣ್ಣ ಸಂಗತಿಗಳನ್ನು ನೋಡಿ ಅವುಗಳ ಮೂಲಕವಾಗಿ ಗುಣಗಳನ್ನು ಅಳೆಯಲಾಗುವುದು. ದೃಷ್ಟಾಂತವಾಗಿ ಹೇಳುವುದಾದರೆ, (ರೋಮ್ ಚಕ್ರವರ್ತಿಯಾದ) ಜೂಲಿಯಸ್ ಸೀಸರ್ ಲೋಕದವರೆಲ್ಲರಿಂದ ಮಹಾ ಪುರುಷನೆಂದು ಅಂಗಿಕರಿಸಲ್ಪಟ್ಟಿರುವರು. ಆದರೆ ಒಮ್ಮೆ ನೀರಿನಲ್ಲಿ ಮುಳುಗುತ್ತಿದ್ದಾಗ ಅತನ ಜೀವವನ್ನು ರಕ್ಷಿಸಿದ್ದು ಆತನ ಅಸ್ವಸ್ಥತೆಯಲ್ಲಿ ಆತನೊಡನಿದ್ದ ಆತನ ಸೇವಕನೂ ನಿಕಟವಾದ ಸ್ನೇಹಿತನೂ ಆದ ಕ್ಯಾಸಿಯಸ್ ಎಂಬಾತನು. ಆಗ ಮತ್ತು ಇತರ ಸನ್ನಿವೇಶಗಳಲ್ಲಿ ಆತನಲ್ಲಿದ್ದ ಬಲಹೀನತೆಗಳನ್ನು ನೋಡಿ, ಬೇರೆ ಸಂದರ್ಭಗಳಲ್ಲಿ ಆತನು ತೋರಿದ ಮನೋವಿಶಾಲತೆಗಳು ಗುಣಶ್ರೇಷ್ಠತೆಗಳನ್ನು ಬಿಟ್ಟು, ಆತನನ್ನು ಲಘುವಾಗಿ ಎಣಿಸಿದ್ದನು. ಉದಾಹರಣೆಗೆ, ಸೀಸರನು ಅಸ್ವಸ್ಥನಾಗಿದ್ದಾಗ ರೋಗಿಯಾದ ಒಬ್ಬ ಚಿಕ್ಕ ಹುಡುಗಿಯಂತೆ "ಟೈಟಾನಿಯಸ್ಸನೇ, ನನಗೆ ಕುಡಿಯಲು ಏನಾದರೂ ಕೊಡು" ಎಂದು ಕೂಗಿಕೊಂಡದ್ದನ್ನು ಅವನು ಗಮನಕ್ಕೆ ತಂದಿರುವನು. ಸೀಸರನೊಡನಿದ್ದ ಬಹು ನಿಕಟವಾದ ಸಂಬಂಧವು ಆತನಿಂದ ದೂರವಿದ್ದು ಕಡಿಮೆ ಸಂಬಂಧವಿದ್ದ ಇತರರು ಸೀಸರನಲ್ಲಿ ಕಂಡ ಶ್ರೇಷ್ಠತೆಗಳನ್ನು ಕಾಣಲು ಈತನಿಗೆ ಅಡ್ಡಿಯಾದವು. ಆ ಕ್ಷಣದಲ್ಲಿ ಕಂಡದ್ದನು ಅವನು ಹೀಗೆ ಹೇಳಿದ್ದಾನೆ:

"ಇದು ನನಗೆ ವಿಸ್ಮಯವಾಗುವುದು,
ಇಂಥ ದುರ್ಬಲವಾದ ಮನಃಸ್ಥಿತಿಯವನು ಹೇಗೆ
ಲೋಕಸಾಮ್ರಾಜ್ಯದ ವೈಭವಗಳನ್ನು ಆರಂಭ ಮಾಡಿ, ಮತ್ತು
ತಾನೊಬ್ಬನೇ ಆ ವಿಜಯದ ಗರಿಯನ್ನು ಹಿಡಿದಿದ್ದನೆಂಬುದು."

ಯೇಸುವಿನ ವಿಷಯವಾಗಿಯೂ ಹೀಗೆಯೇ: "...ಆತನ ಅಣ್ಣತಮ್ಮಂದಿರು ಸಹ ಆತನನ್ನು ನಂಬದೆ ಇದ್ದರು." (ಹಿಂದಿನ ಕಾಲದಲ್ಲಿ ಈ ಶಬ್ದಾರ್ಥವು ರಕ್ತಸಂಬಂಧಿಗಳನ್ನು, ಒಡಹುಟ್ಟಿದವರ ಸಹಿತವಾಗಿ ದಾಯಾದಿಗಳನ್ನೂ ಒಳಗೊಂಡಿರುತ್ತಿತ್ತು). ಆತನ ತಾಯಿಯಾದ ಮರಿಯಳನ್ನು ಅವರು ತಿಳಿದಿದ್ದರು, ಆತನ ಅಣ್ಣತಮ್ಮಂದಿರನ್ನು ಅವರು ತಿಳಿದಿದ್ದರು, ಅವರು ಮರಿಯಳ ಗಂಡನಾದ ಯೋಸೇಫನನ್ನು ತಿಳಿದಿದ್ದರು, ಯೇಸುವು ಯೋಸೇಫನ ಮಗನಲ್ಲವೆಂಬುದೂ ಅದರೆ ಯೋಸೇಫನು ಮರಿಯಳನ್ನು ತನ್ನ ಹೆಂಡತಿಯಾಗಿ ತೆಗೆದುಕೊಳ್ಳುವ ಮೊದಲೇ ಆಕೆಯು ಗರ್ಭವತಿಯಾಗಿದ್ದಳೆಂಬುದು ಅವರಿಗೆ ಸ್ಪಷ್ಟವಾಗಿ ತಿಳಿದಿತ್ತು. (ಮತ್ತಾಯ 1:18); ಯಾಕೆಂದರೆ ಇದು ಅವರು ಆತನೊಡನೆ ವಾಗ್ವಾದ ಮಾಡುವಾಗ "ನಾವು ಹಾದರಕ್ಕೆ ಹುಟ್ಟಿದವರಲ್ಲ" (ಯೋಹಾನ 8:41) ಎಂದು ಹೇಳಿ ಆತನನ್ನು ಹೀಯಾಳಿಸುವದರ ಸ್ಪಷ್ಟ ಉದ್ದೇಶವಾಗಿತ್ತೆಂಬುದು. ಆತನು ಯೌವನಸ್ಥನಾಗಿರುವಾಗ ಆತನನ್ನು ತಿಳಿದಿದ್ದರು; ಆತನು ಬಡಗಿಯಾಗಿ ಅವರ ಮಧ್ಯದಲ್ಲಿ ವರ್ಷಗಟ್ಟಲೆ ಕೆಲಸ ಮಾಡಿದ್ದಿರುವ ಸಂಭವವಿತ್ತು. ಆತನ ಸ್ವಂತ ಊರಾದ ನಜರೇತ್ ಪಟ್ಟಣವು ತನ್ನ ಸಂಪತ್ತಿಗಾಗಲೀ ಅಥವಾ ಕಲಿಯುವಿಕೆಗಾಗಲೀ ಹೆಸರಾದಂಥದ್ದಾಗಿರಲಿಲ್ಲ ಎಂಬುದು ಅವರಿಗೆ ತಿಳಿದಿತ್ತು. ಅದರ ನಿವಾಸಿಗಳು ಯೆಹೂದ್ಯಾಕಾಶದಲ್ಲಿ ಶೋಭಿಸಿದ್ದವರಲ್ಲ. ಆತನನ್ನು

ಚೆನ್ನಾಗಿ ಅರಿತಿರುವ ಇವರಿಗೆ ಮೋಶೆಯು ಮತ್ತು ಪ್ರವಾದಿಗಳು ಬರೆದು ತಿಳಿಸಿದ ಆ ಶ್ರೇಷ್ಠ ಪುರುಷನಿಗೆ ಈತನು ಸರಿಬೀಳುವ ನೆಂಬುದನ್ನು ಗ್ರಹಿಸಲು ಅವರಿಗೆ ಕಷ್ಟವಾಗಿತ್ತು.

ಆದುದರಿಂದ ತನ್ನ ಸ್ವಂತ ಊರಲ್ಲಿ ಅವರು "ಇವನಿಗೆ ಈ ಜ್ಞಾನವೂ ಈ ಮಹತ್ಕಾರ್ಯಗಳೂ ಎಲ್ಲಿಂದ ಬಂದಿದ್ದಾವು?" ಎಂದು ಇವನ ವಿಷಯವಾಗಿ ಹೇಳಿದರೂ "ಇವನು ಆ ಬಡಗಿಯ ಮಗನಲ್ಲವೇ, ಇವನ ತಾಯಿ ಮರಿಯಳಲ್ಲವೇ. ಯಾಕೋಬ ಯೋಸೇಫ ಸೀಮೋನ ಯೂದ ಇವರು ಇವನ ತಮ್ಮಂದಿ ರಲ್ಲವೇ. ಇವನ ತಂಗಿಯರು ನಮ್ಮಲ್ಲಿ ಇದ್ದಾರಲ್ಲವೇ?.....ಆತನ ವಿಷಯವಾಗಿ ಬೇಸರಗೊಂಡರು....ಅವರು ಆತನನ್ನು ನಂಬದೆ ಹೋದದರಿಂದ ಆತನು ಅಲ್ಲಿ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲ." (ಮತ್ತಾಯ 13:54–58).

ಆದರೆ, ನಮ್ಮ ಪಾಠವನ್ನು ಹಿಂದಿರುಗಿ ನೋಡಿದಾಗ: ಗಲಿಲಾಯದ ಆ ಮಹಾ ಪ್ರವಾದಿಯೂ ರೋಗಗಳನ್ನು ವಾಸಿ ಮಾಡುವಾತನು ತನ್ನ ಸ್ವಂತ ಊರಿಗೆ ಹಿಂದಿರುಗಿದ್ದಾನೆಂಬ ವರ್ತ ಮಾನವು ಕಾನಾ ಊರಿನಿಂದ ಕೇವಲ ಇಪ್ಪತ್ತು ಮೈಲು ದೂರವಿರುವ ಕಪೇರ್ನೌಮಿಗೂ ಬೇಗನೆ ತಲುಪಿತ್ತು; ಹಾಗೂ ಸಮಾಜದಲ್ಲಿ ಸ್ಥಾನಮಾನ ಹೊಂದಿ ಆ ಊರಿನ ಅಧಿಕಾರ ಸ್ಥಾನದಲ್ಲಿರುವ ಒಬ್ಬ ವ್ಯಕ್ತಿಯು ತನ್ನ ನಂಬಿಕೆಯನ್ನು ತೋರಿ ಅದರ ಅನುಸಾರವಾದ ಆಶೀರ್ವಾದವನ್ನು ಪಡೆದವರಲ್ಲಿ ಮೊದಲಿಗನಾಗಿದ್ದನು. ನಮ್ಮ ಕರ್ತನು ಯೂದಾಯದಿಂದ ಹಿಂದಿರುಗಿದ ತರುವಾಯ ಮಾಡಿದ "ಎರಡನೇ ಅದ್ಭುತ ಕಾರ್ಯವು" ಆತನ ಮಗನನ್ನು ಗುಣಪಡಿಸಿದ್ದುದು ಎಂದು ನಮಗೆ ತಿಳಿಸಲಾಗಿದೆ.

ನಮ್ಮ ಕರ್ತನು ಆತನಿಗೆ "ನಾನು ಮೆಸ್ಸೀಯನೆಂಬುದರಲ್ಲಿ ನಿನಗೆ ನಂಬಿಕೆಯಿಲ್ಲ; ನೀನು ಆಸಕ್ತನಾಗಿರುವುದು ನನ್ನ ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳಲ್ಲಿ" ಎಂಬ ಅರ್ಥ ಬರುವಂತೆ ಹೇಳಿ ಆತನ ಬೇಡಿಕೆಗೆ ಮೊದಲು ಆಕ್ಷೇಪಣೆ ಮಾಡಿ ದಂತೆ ಕಂಡುಬಂದುದು ನಿಸ್ಸಂಶಯವಾಗಿ ಆತನ ನಂಬಿಕೆಯನ್ನು ಪರೀಕ್ಷೆಮಾಡುವುದಕ್ಕಾಗಿತ್ತು. ಕಷ್ಟದಲ್ಲಿದ್ದ ಆ ಪ್ರೀತಿಯ ತಂದೆಯು ತನ್ನ ಉತ್ತರದಲ್ಲಿ ತೋರಿಸಿಕೊಟ್ಟದ್ದೇನೆಂದರೆ, ತಾನು ಆಸಕ್ತ ನಾಗಿರುವುದು ಕೇವಲ ಅದ್ಭುತವನ್ನು ನೋಡುವ ಕುತೂಹಲ ಬಯಕೆಗಳಾಗಿರದೆ ತನ್ನಲ್ಲಿರುವುದು ಕ್ರಿಸ್ತನ ಶಕ್ತಿಯಲ್ಲಿರುವ ನಿಜವಾದ ನಂಬಿಕೆ ಎಂಬುದು. "ಸ್ವಾಮೀ, ನನ್ನ ಮಗನು ಸಾಯುವುದಕ್ಕೆ ಮುಂಚೆ ನೀನು ಬರಬೇಕು" ಎಂದು ಹೇಳಿದ್ದರಲ್ಲಿ ತನ್ನ ಮಗನನ್ನು ಮರಣದಿಂದ ಪಾರು ಮಾಡಲು ಅವನು ಸಮರ್ಥನೆಂಬುದನ್ನು ಆತನು ಪ್ರಶ್ನಿಸಿರಲಿಲ್ಲ. ಆತನ ನಿಜವಾದ ನಂಬಿಕೆಯು ಅದರ ಪ್ರತಿಫಲವನ್ನು ಹೊಂದಿತ್ತು ಆದರೂ ಆತನು ತನ್ನ ನಂಬಿಕೆಯನ್ನು ಇನ್ನು ಮುಂದುವರೆಸಿ ತೋರಿಸಿಕೊಡುವ ಅಗತ್ಯವಿತ್ತು. ಹಲವು ಗಂಟೆಗಳವರೆಗೂ ಇದಕ್ಕೆ ಸಾಕ್ಷಿ ಪ್ರಮಾಣಗಳು ದೊರೆಯುವಂತಿಲ್ಲದಿದ್ದರೂ ತನ್ನ ವಿಜ್ಞಾಪನೆಯು ಈಡೇರುವುದೆಂಬುದನ್ನು ಆತನು ನಂಬಬೇಕಿತ್ತು. ಆತನು ತನ್ನ ದಾರಿಯನ್ನು ಹಿಡಿದು ಹೋದನು; ಅಲ್ಲಿ ಅತನ ನಂಬಿಕೆಗೆ ಮತ್ತೆ ಪರೀಕ್ಷೆಯಾಗಿ ಅದು ದೃಢವಾಯಿತು. ತನ್ನ ವಿಜ್ಞಾಪನೆ ಅನುಗ್ರಹ ವಾದ ಆ ಸಮಯದಲ್ಲೇ ತನ್ನ ಮಗು ಸ್ವಸ್ಥವಾಗತೊಡಗಿ ತೆಂಬುದು ನಂತರದ ವಿಚಾರಣೆಯಲ್ಲಿ ತಿಳಿದುಬಂತು. ಮತ್ತು ತನ್ನ ನಂಬಿಕೆಯು ಇನ್ನೂ ಅಧಿಕವಾದ ಆಶೀರ್ವಾದವನ್ನು ತನಗೆ ತಂದಿತ್ತು ಹೇಗೆಂದರೆ ತನ್ನ ಮಗನ ಶಾರೀರಿಕ ಆರೋಗ್ಯದಲ್ಲಿ ಸುಧಾರಣೆ ಉಂಟಾದುದಕ್ಕಿಂತಲೂ ಹೆಚ್ಚಾಗಿ ಅವನು ಮತ್ತು ಅವನ ಮನೆಯವರು ಮೆಸ್ಸೀಯನನ್ನು "ನಂಬುವವರಾದರು." ಮತ್ತು ಹೀಗೆ ಅದು ಯೋಹಾನ 1:12ರಲ್ಲಿ ಹೇಳಿರುವಂತೆ ಅವರನ್ನು ಪುತ್ರರ ಪದವಿಯನ್ನು ಪಡೆದು ಸಹ–ಬಾಧ್ಯತೆಯನ್ನು ಹೊಂದುವ ಸೌಭಾಗ್ಯದ ಸಮೀಪಕ್ಕೆ ತಲುಪುವಂತೆ ಮಾಡಿತು.

ಇಲ್ಲಿಯೂ ಮತ್ತು ಇತರ ರೋಗನಿವಾರಣಾ ಆದ್ಭುತ ಕಾರ್ಯಗಳನ್ನು ಮಾಡುವಲ್ಲಿ ನಮ್ಮ ಕರ್ತನ ಉದ್ದೇಶವು ಕೇವಲ ಅಸ್ವಸ್ಥರಾದವರನ್ನು ನೋವುವ್ಯಾಧಿಗಳಿಂದ ಗುಣಪಡಿಸುವುದು ಮಾತ್ರವಲ್ಲವೆಂಬುದು ಸ್ಪಷ್ಟ. ಇದು ಆತನ ಉದ್ದೇಶವಾಗಿದ್ದಲ್ಲಿ ಆತನು ಅಸ್ವಸ್ಥರೆಲ್ಲರೂ ಒಂದೇ ಉಸುರಿನಲ್ಲಿ ಸ್ವಸ್ಥರಾಗಲು ಆಜ್ಞಾಪಿಸಬಹುದಿತ್ತು. ಇದಕ್ಕೂ ಮಿಗಿಲಾಗಿ ಅತನು ಅಸ್ವಸ್ಥತೆ ಯುಂಟಾಗಲು ಕಾರಣವಾದ ಕೆಟ್ಟ ಪರಿಸರಗಳನ್ನು ಹೋಗಲಾಡಿಸಬಹುದಿತ್ತು. ಉದಾಹರಣೆಯಾಗಿ, ಆ ಘನವಂತನ ಮಗನಿಗೆ ಜ್ವರ ಬಂದಿತ್ತು ಅಲ್ಲದೆ ಕಪೇರ್ನೌಮಿನಲ್ಲಿ ಬೇರೆ ಹಲವರೂ ಹೀಗೆಯೆ ಬಾಧಿತರಾಗಿದ್ದ ಸಂಭವವಿತ್ತು. ಏಕೆಂದರೆ ಆ ಊರು ಒಂದು ತಗ್ಗಿನ ಜವುಗು ಪ್ರದೇಶದ ಸಮೀಪದಲ್ಲಿ ಕಟ್ಟಲ್ಪಟ್ಟಿದ್ದು ಅದು ಮಲೇರಿಯಾ ರೋಗಪೀಡಿತವಾದ ಅನಾರೋಗ್ಯಕರ ಸ್ಥಳವಾಗಿತ್ತು. ಕರ್ತನು ರೋಗಗಳೆಲ್ಲವನ್ನೂ ನಿವಾರಣೆಮಾಡುವ ಕಾರ್ಯವನ್ನು ಮಾಡಲ್ಲಿಲ್ಲ; ಆದರೆ ಇದು ಆತನಿಗೆ ಅನುಕಂಪವಿಲ್ಲವೆಂದಾಗಲೀ ಅಥವಾ ಆ ಸ್ಥಳವನ್ನು ಮತ್ತು ಭೂಮಿಯ ಇತರ ಭಾಗಗಳನ್ನು ಆರೋಗ್ಯಕರವನ್ನಾಗಿ ಮಾಡುವ ಅಗತ್ಯವಿರುವುದರ ಅರಿವು ಆತನಿಗೆ ಇರಲಿಲ್ಲ ವೆನ್ನುವುದಕ್ಕಾಗಲೀ ಇದು ಸಾಕ್ಷಿಯಲ್ಲ. ಹೀಗೆಯೇ ಸಾವಿರಾರು ವರುಷಗಳಿಂದಲೂ ಮಲೇರಿಯಾ ಮುಂತಾದ ರೋಗಕಾರಕ ಪರಿಸರಗಳು ಏರ್ಪಡುವಂತಾಗಿ ಅದರಿಂದ ಜಗತ್ತಿನಾದ್ಯಂತ ರೋಗ ಅಸ್ವಸ್ಥತೆಗಳು ಉಂಟಾಗಿರುವಲ್ಲಿ ಇದು ದೇವರ ವಿಷಯದಲ್ಲೂ ಆತನಿಗೆ ಇದರ ಕಾಳಜಿಯಿಲ್ಲವೆಂದು ಹೇಳಲಾಗದು. ಪ್ರತಿಯಾಗಿ, ದೇವರು ವ್ಯಾದಿಗಳ ವಿಷಯವಾಗಿ ಮುಂದಾಗಿ ತಿಳಿದಿದ್ದು ಈ ರೋಗಕಾರಕ ಸನ್ನಿವೇಶಗಳನ್ನು ಪಾಪಿಯಾದ ಮಾನವನ ವಿರುದ್ಧವಾಗಿರುವ ತೀರ್ಪಿಗೆ ಜೊತೆಗೂಡಿದವುಗಳಾಗುವಂತೆ ರೂಪಿಸಿರುವನು. ಮಾನವನ ಮೇಲಿರುವ ಮರಣದಂಡನೆಗೆ ಸಹಕಾರಿಗಳಾಗಿದ್ದು ಇವು ಆ ತೀರ್ಪುನ್ನು ಏಕಕಾಲದಲ್ಲಿ ಫಲಿಸುವಂತೆ ಮಾಡುವುದು.

ಮಾನವರನ್ನು ವಿಮೋಚಿಸಿರುವಾತನು ಮತ್ತು ತಾನು "ವಿಮೋಚಿಸಿ ಸಂಪಾದಿಸಿದ ತನ್ನ ಸ್ವಾಸ್ಥ್ಯವಾದ" ಈ ಭೂಮಿ ಯನ್ನು ಸಹ ಶಾಪದಿಂದ ವಿಮೋಚಿಸಿರುವಾತನು (ಎಫೆಸ 1:14) ಅದನ್ನು ಕೇಡನ್ನುಂಟು ಮಾಡುವ ಎಲ್ಲಾ ವಿನಾಶಕಾರೀ ಪ್ರಭಾವ ಗಳಿಂದ ಶುಚಿಗೊಳಿಸುವನು; ಆಗ ಅಲ್ಲಿ ಮರಣವಿರವುದಿಲ್ಲ, ನೋವುಗಳಿರುವುದಿಲ್ಲ, ವ್ಯಾಧಿಗಳಿರುವುದಿಲ್ಲ, ಗೋಳಾಟವಿರುವು ದಿಲ್ಲ; ಯಾಕೆಂದರೆ ಪೂರ್ವದ ಸ್ಥಿತಿಯು ಹೋಗಿ ಎಲ್ಲಾ ನೂತನ ವಾಗುವದು. ಮಾನವರ ಉಪಯೋಗಕ್ಕಾಗಿಯೂ ಅವರನ್ನು ಆಶೀರ್ವದಿಸ ಸಲುವಾಗಿರುವ ಈ ಭೂಮಿಯನ್ನೂ ಅದರಲ್ಲಿರುವ ಮಾನವರನ್ನೂ ಪುನಶ್ಚೇತನಗೊಳಿಸುವ ಸಮಯವನ್ನು ಸತ್ಯವೇದ ದಲ್ಲಿ "ಸಮಸ್ತವನ್ನು ಸರಿಮಾಡುವ ಕಾಲವು...ಆ ಕಾಲದ ವಿಷಯ ವಾಗಿ ದೇವರು ಪೂರ್ವದಲ್ಲಿದ್ದ ತನ್ನ ಪರಿಶುದ್ಧ ಪ್ರವಾದಿಗಳ

ಬಾಯಿಂದ ಹೇಳಿದ್ದಾನೆ." ಎಂದು ಹೆಸರಿಸಿ ಹೇಳಲಾಗಿ ರುವುದು. ಮತ್ತು ಪೇತ್ರನು ಪಂಚಾಶತ್ತಮ ದಿನದಂದು ಪವಿತ್ರಾತ್ಮ ಪ್ರೇರಿತನಾಗಿ ಈ ರೀತಿಯಾಗಿ ಸಮಸ್ತವನ್ನು ಸರಿ ಮಾಡುವುದನ್ನು ನಮ್ಮ ಕರ್ತನಾದ ಯೇಸುವು ತನ್ನ ಎರಡನೆಯ ಬರುವಿಕೆಯಲ್ಲಿ ಪ್ರಾರಂಭಿಸುವನೆಂದು ನಮಗೆ ಹೇಳಿರುವನು.–ಅ.ಕೃ. 3:19–23

ತನ್ನ ಮೊದಲನೇ ಬರುವಿಕೆಯಲ್ಲಿ ನಮ್ಮ ಕರ್ತನ ಕಾರ್ಯವು ಮುಖ್ಯವಾಗಿ ಲೋಕವನ್ನು ವಿಮೋಚಿಸುದಕ್ಕಾಗಿ ತನ್ನನ್ನು ಈಡು ಬೆಲೆಯಾಗಿ ಅರ್ಪಿಸಿಕೊಳ್ಳಲು, ಮತ್ತು ಎರಡನೆಯದಾಗಿ ಇದು ಒಂದು ವರ್ಗದವರಿಗೆ ತನ್ನಲ್ಲಿ ನಂಬಿಕೆ ಯಿಡುವುದಕ್ಕೆ ತನ್ನ ಬೋಧನೆಗಳಿಗೆ ಮತ್ತು ತಾನು ಮಾಡಲಿರುವು ಮುಂದಿನ ಕಾರ್ಯಗಳಿಗೆ ಸ್ಯಾಕ್ಷ್ಯಾಧಾರವನ್ನು ಒದಗಿಸುವುದಕ್ಕಾಗಿ ರುವುದು. ಇದರ ಉದ್ದೇಶವು ಈಗಿನ ಕಾಲದಲ್ಲಿ ಹೀಗೆ "ನಂಬಿರು ವಂಥವರು" ತಂದೆಯ ಬಳಿಗೆ ಬಂದು ಪುತ್ರರ ಪದವಿಯನ್ನು ಪಡೆದು ಆ ವಾಗ್ದಾನಗಳನ್ನು ಹೊಂದಿದವರಾಗಲು ಮತ್ತು ನಂಬಿಕೆ ಹಾಗೂ ವಿಧೇಯತೆಗಳಿಂದ ತಮ್ಮನ್ನು ಯಜ್ಞವನ್ನಾಗಿ ಅರ್ಪಿಸಿ ಕೊಳ್ಳುವುದರ ಮೂಲಕವಾಗಿ ಮೆಸ್ಸೀಯನೊಂದಿಗೆ ಸಹ– ಬಾಧ್ಯರಾಗಿ ಅತನು ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವ ದಿಸಲು ಮುಂದೆ ಮಾಡಲಿರುವ ಸಮಸ್ತವನ್ನು ಸರಿಮಾಡುವ ಕಾರ್ಯದಲ್ಲಿ ಪಾಲುಗಾರರಾಗುವದಕ್ಕಾಗಿರುವುದು.

ಈ ಸಂಗತಿಯನ್ನು ಒಬ್ಬ ವ್ಯಕ್ತಿಗೆ ಅನ್ವಯಮಾಡಿ ಹೇಳುವು ದಾದರೆ, ಘನವಂತನಾದ ಆ ಮನುಷ್ಯನು ಈ ಆಶೀರ್ವಾದವನ್ನು ನಂಬುವುದರ ಮೂಲಕವಾಗಿ ಪಡೆದನೆಂದು ನಾವು ಕಂಡು ಕೊಳ್ಳುತ್ತೇವೆ. ಅಲ್ಲದೆ ಆ ನಂಬಿಕೆಯು ಆತನ ನಡವಳಿಕೆಯ ಮುಲಕವಾಗಿ ಪ್ರಮಾಣೀಕರಿಸ್ಪಟ್ಟಿತು. ಯಾರು ದೇವರಿಂದ ಅಂಗೀಕರಿಸಲ್ಪಟ್ಟವರಾಗಿ ಸುವಾರ್ತೆಯ ಮೂಲಕವಾಗಿ ತಮ್ಮ ಮುಂದೆ ಇಟ್ಟಿರುವ ಶ್ರೇಷ್ಠವಾದ ಬಿರುದನ್ನು ಗೆಲ್ಲಬೇಕೆಂದಿ ರುವರೋ, ಅವರ ವಿಷಯವೂ ಹೀಗೆಯೇ ಇರುವುದು. "ಲೋಕವನ್ನು ಜಯಿಸುವಂಥದ್ದು ನಿಮ್ಮ ನಂಬಿಕೆಯೇ." ಆದರೆ "ಕ್ರಿಯೆಗಳಿಲ್ಲದ ನಂಬಿಕೆಯು ಸತ್ತದ್ದಾಗಿರುವುದು." ಕಾರ್ಯ ರೂಪದಲ್ಲಿ ತನ್ನನ್ನು ತೋರ್ಪಡಿಸಿಕೊಳ್ಳಲಾಗದ ನಂಬಿಕೆಯು ಜೀವಂತವಾಗಿರಲು ಸಾಧ್ಯವಾಗದು. ಕರ್ತನಿಗಾಗಿ ಮಾಡುವ ನಮ್ಮ ಎಲ್ಲಾ ಸೇವಾಕಾರ್ಯಗಳು ಅಮೂಲ್ಯವಾಗಿದ್ದು ಅವು ಪ್ರಾಮುಖ್ಯವಾಗಿ ಆತನ ವಾಗ್ದಾನದಲ್ಲಿ ನಮಗಿರುವ ನಂಬಿಕೆಗೆ ಸಾಕ್ಷ್ಯಾಧಾರ ನೀಡುವಂಥವುಗಳಾಗಿರುವದು.–1 ಯೋಹಾನ 5:4; ಯಾಕೋಬ 2:26; ಇಬ್ರಿಯ 11:6.

ನೆಪೋಲಿಯನ್ನನ ಸೈನ್ಯದಲ್ಲಿನ ಒಬ್ಬ ಖಾಸಗೀ ಸೈನಿಕನು ಆತನ ಮಾತಿನಲ್ಲಿ ನಂಬಿಕೆಯಿಟ್ಟು ಅದರಂತೆ ನಡಕೊಂಡುದರ ಫಲವಾಗಿ ಹೇಗೆ ತಾನು ಸೇನಾನಾಯಕನ ಸ್ಥಾನಕ್ಕೆ ಬಡ್ತಿಯನ್ನು ಪಡೆದನೆಂಬ ಒಂದು ಕಥೆಯು ಹೇಳಲ್ಪಟ್ಟಿದೆ. ಪ್ಯಾರೀಸ್ ನಗರದಲ್ಲಿ ನೆಪೋಲಿಯನ್ನನು ತನ್ನ ಸೈನ್ಯಪ್ರದರ್ಶನದಲ್ಲಿ ಪರಿಶೀಲನೆ ಮಾಡುತ್ತಿರಲು ಕುದುರೆಯ ಕಡಿವಾಣವು ತನ್ನ ಕೈಯಿಂದ ಬಿದ್ದು ಹೋದಾಗ ಆ ಕುದುರೆಯು ನಾಗಾಲೋಟವಾಗಿ ಓಡಲಾರಂಭಿ ಸಿತು. ಅಲ್ಲಿ ನಿಂತಿದ್ದ ಒಬ್ಬ ಸಾಮಾನ್ಯ ಸೈನಿಕನು ತನ್ನ ಸೇನಾ ದರ್ಜೆಯ ಸ್ಥಾನದಿಂದ ಹಾರಿಬಂದು ಆ ಕುದುರೆಯನ್ನು ಹಿಡಿದು ಅದರ ಕಡಿವಾಣವನ್ನು ನೆಪೋಲಿಯನ್ನನಿಗೆ ಹಿಂದಕ್ಕೆ ಒಪ್ಪಿಸಿದನು. ನೆಪೋಲಿಯನ್ನನು ಆತನಿಗೆ ಕೃತಜ್ಞತೆ ಸಲ್ಲಿಸುತ್ತಾ "ವಿಶೇಷವಾಗಿ ಅಭಾರಿಯಾದೆನು, ಸೇನಾನಾಯಕನೇ." ಎಂದು ಹೇಳಿದನು. ಆ ಸೈನಿಕನು ತಕ್ಷಣವೇ ಇದಕ್ಕೆ ಸ್ಪಂದಿಸುತ್ತಾ, "ಯಾವ ಸೇನಾಪಡೆಗೆ, ಸ್ವಾಮೀ?" ಎಂದು ಕೇಳಿದನು. ನೆಪೋಲಿಯನ್ನನು ಅವನ ಚುರುಕುತನ ವಿಶ್ವಾಸಗಳಿಗೆ ಮೆಚ್ಚಿದವನಾಗಿ "ಕಾವಲು ಪಡೆಗೆ" ಎಂದು ಉತ್ತರಿಸಿದನು. ತಾನು ಒಬ್ಬ ಖಾಸಗೀ ಸೈನಿಕನ ವಸ್ತ್ರಗಳನ್ನು ಧರಿಸಿದವನಾಗಿದ್ದು ತನ್ನ ಈ ನಂಬಿಕೆಗೆ ಅಲ್ಲಿರುವವರು ಹಾಸ್ಯಮಾಡಿದಾಗ್ಯೂ ಅದನ್ನು ಲಕ್ಷಿಸದೇ ಕೂಡಲೇ ಆ ಸೈನಿಕನು ಹೋಗಿ ಆಧಿಕಾರಿಗಳ ಸ್ಥಾನದಲ್ಲಿ ನಿಂತನು. ಅವನು ಚಕ್ರವರ್ತಿಯ ಮಾತನ್ನು ನಂಬಿ ಅದರಂತೆ ನಡಕೊಂಡು ಸೇನಾನಾಯಕನಾದನು. ಹೀಗೆಯೇ ನಮ್ಮ ದೇವರು ನಮಗೆ "ದೈವಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂಬ ಉದ್ದೇಶದಿಂದ ತನ್ನ ಪ್ರಭಾವಗುಣಾತಿಶಯಗಳಿಂದ ಅಮೂಲ್ಯ ವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳನ್ನು" ನೀಡಿರುವನು. ಮತ್ತು ದೇವರು ತನ್ನನ್ನು ಪ್ರೀತಿಸುವವರಾಗಿ ಅಂದರೆ ತನ್ನ ಮಾತನ್ನು ಅಂಗೀಕರಿಸಿ ಅದರಂತೆ ತನ್ನನ್ನು ಅನುಸರಿಸಿ ನಡೆಯುವವರಿಗಾಗಿ ಸಿದ್ದಮಾಡಿದ ಅಮೂಲ್ಯ ವಾಗಿಯೂ ಉತ್ಕೃಷ್ಟವಾಗಿಯೂ ಇರುವ ಸಂಗತಿಗಳನ್ನು ಪಡೆದುಕೊಳ್ಳುವರೋ, ಅವರು "ಬೆಳಕಿನ ಮಕ್ಕಳಾಗಿ" "ಬೆಳಕಿನಲ್ಲಿ ನಡೆಯುವರು." ಅಂಥವರು ಕಡೆಯಲ್ಲಿ ಪಾಪ ಮೂಢನಂಬಿಕೆ ದುಷ್ಟತ್ವವೆಂಬ ಅಂಧಕಾರವನ್ನು ಹೋಗಲಾಡಿಸಿ ಲೋಕವನ್ನು ಪುನಶ್ಚೇತನಗೊಳಿಸಿ ಆಶೀರ್ವದಿಸಲು ಸ್ವಸ್ಥತೆಯ ಕಿರಣಗಳುಳ್ಳ ವನಾಗಿ ಉದಯಿಸುವ ಆ ಮಹಾ ನೀತಿ ಸೂರ್ಯನ ದೇಹದಲ್ಲಿನ ಅಂಗಗಳಾಗುವರು. – ಮತ್ತಾಯ 13:43

ಆದರೆ ಕೆಲವರು ತಮ್ಮ ಮೇಲೆಯೇ ವಿಶೇಷವಾದ ನಂಬಿಕೆ ಯನ್ನಿಟ್ಟುಕೊಂಡು ತಾವು "ಆಯಲ್ಪಟ್ಟವರು" ಎನ್ನುವದಕ್ಕೆ ಇದು ಒಂದು ಸಾಕ್ಷಿಯಾಗಿರುವುದು ಎಂದು ಎಣಿಸಿಕೊಳ್ಳುವ ತಪ್ಪನ್ನು ನಾವು ಮಾಡದಂತೆ ನಮ್ಮನ್ನು ಕಾಪಾಡಿಕೊಳ್ಳೋಣ. ನೆಪೋಲಿಯ ನ್ನನಿಗೆ ಮಾಡಿದ ಸೇವೆಯ ಸಹಿತವಾಗಿ ಆತನನ್ನು ನಂಬಿದ ಕೇವಲ ಆ ಸೈನಿಕನು ಮಾತ್ರ ಪ್ರತಿಫಲವನ್ನು ಪಡೆದನು. ಆದುದ ರಿಂದ ಪ್ರತಿಯೊಬ್ಬನು ತನ್ನನ್ನೇ ಹೀಗೆ ಪ್ರಶ್ನಿಸಿಕೊಳ್ಳಬೇಕು– ಉತ್ಕೃಷ್ಟವೂ ಅಮೂಲ್ಯವೂ ಆದ ಆ ವಾಗ್ದಾನಗಳು ನನ್ನದಾಗಿ ದೆಯೋ? ಆ ವಾಗ್ದಾನಗಳಿಗೆ ಷರತ್ತುಗಳು ಸೇರಿದೆಯೋ? ಮತ್ತು ಹಾಗಿದ್ದಲ್ಲಿ ನಾನು ಕರೆಯಲ್ಪಟ್ಟದ್ದನ್ನು ಆಯಲ್ಪಟ್ಟದ್ದನ್ನು ದೃಢಪಡಿಸಿಕೊಳ್ಳುವ ಸಲುವಾಗಿ ಆ ಷರತ್ತುಗಳಿಗೆ ನಾನು ಸರಿಯಾಗಿ ನಡೆದುಕೊಳ್ಳುತ್ತಿರುವೆನೋ?

ತನ್ನ ಪ್ರಶ್ನೆಗಳಿಗೆ ಉತ್ತರ ಹೇಳಿ "ನಂಬಿಕೆಯಲ್ಲಿ ಪೂರ್ಣ ಬರವಸೆಯುಳ್ಳವರಾಗಲು" ಆತನು ಆ ವಾಗ್ದಾನಗಳು ಅದರ ಮಹತ್ವ ಹಾಗು ಅದಕ್ಕಿರುವ ಷರತ್ತುಗಳ ವಿಷಯವಾಗಿ ಶೋಧನೆ ಮಾಡಬೇಕು. ಆನಂತರ, ಆ ಬಿರುದನ್ನು ಗೆಲ್ಲಬೇಕಾದಲ್ಲಿ, ಅವುಗಳಿಗೆ ಅನುಸಾರವಾಗಿ ನಡೆದುಕೊಳ್ಳಬೇಕು. ಹೀಗೆ ಮಾಡು ವಾಗ ನಮ್ಮ ಕರ್ತನ ಈ ಮಾತನ್ನು ಅಂದರೆ: "ನನ್ನನ್ನು ಸ್ವಾಮೀ, ಸ್ವಾಮೀ ಅನ್ನುವವರೆಲ್ಲರು ಪರಲೋಕರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ; ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕರಾಜ್ಯಕ್ಕೆ ಸೇರುವನು" ಎಂಬುದನ್ನು ಆತನು ನೆನಪಿನಲ್ಲಿಟ್ಟುಕೊಳ್ಳಬೇಕು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 30 | ನಜ಼ರೇತ್; ಕಾನಾ: ಕಪೇರ್ನೌಮ್ | ಹುಡುಗನನ್ನು ಸ್ವಸ್ಥಮಾಡಿದುದು; ತನ್ನ ಕಾರ್ಯಬಾರದ ವಿಷಯವಾಗಿ ಓದಿದುದು; ತಿರಸ್ಕೃತನಾದದ್ದು; ಕಪೇರ್ನೌಮಿಗೆ ಹೋದುದು. | 4:13–16 | –– | 4:16–31 | 4:46–54 |

## ಮತ್ತಾಯ 4:13–16

ಬಳಿಕ ನಜರೇತೆಂಬ ಊರನ್ನು ಬಿಟ್ಟು ಜೆಬುಲೋನ್ ನೆಫ್ತಲೀಮ್ ಎಂಬ ನಾಡುಗಳಿಗೆ ಬಂದು ಸಮುದ್ರ ಹತ್ತರದಲ್ಲಿರುವ ಕಪೆರ್ನೌಮೆಂಬ ಊರಿನಲ್ಲಿ ಮನೆಮಾಡಿಕೊಂಡು ಇದ್ದನು. ಇದರಿಂದ ಯೆಶಾಯನೆಂಬ ಪ್ರವಾದಿಯ ಮುಖಾಂತರ ಹೇಳಿಸಿರುವ ಮಾತು ನರವೇರಿತು; ಆ ಮಾತು ಏನಂದರೆ– ಜೆಬುಲೋನ್ ಸೀಮೆ ಮತ್ತು ನೆಫ್ತಲೀಮ್ ಸೀಮೆ, ಯೊರ್ದನಿನ ಆಚೆ, ಸಮುದ್ರದ ಕಡೆಗಿರುವ ಸೀಮೆ, ಅನ್ಯಜನಗಳಿರುವ ಗಲಿಲಾಯ ಸೀಮೆ, ಕತ್ತಲಲ್ಲಿ ವಾಸಿಸಿದ ಈ ಸೀಮೆಗಳ ಜನರಿಗೆ ದೊಡ್ಡ ಬೆಳಕು ಕಾಣಿಸಿತು; ಕಾರ್ಗತ್ತಲಾದ ದೇಶದಲ್ಲಿದ್ದವರಿಗೆ ಸೂರ್ಯೋದಯವಾಯಿತು ಎಂಬುದು.

## ಲೂಕ 4:16–31

ಹೀಗಿರಲಾಗಿ ಆತನು ತಾನು ಬೆಳೆದ ನಜರೇತಿಗೆ ಬಂದು ತನ್ನ ವಾಡಿಕೆಯ ಪ್ರಕಾರ ಸಬ್ಬತ್ ದಿನದಲ್ಲಿ ಸಭಾಮಂದಿರಕ್ಕೆ ಹೋಗಿ ಓದುವದಕ್ಕಾಗಿ ಎದ್ದು ನಿಂತನು. ಆಗ ಯೆಶಾಯನೆಂಬ ಪ್ರವಾದಿಯ ಗ್ರಂಥದ ಸುರಳಿಯನ್ನು ಅತನ ಕೈಗೆ ಕೊಡಲಾಗಿ ಆತನು ಆ ಸುರಳಿಯನ್ನು ಬಿಚ್ಚಿ ಮುಂದೆ ಹೇಳುವ ಮಾತು ಬರೆದಿರುವ ಸ್ಥಳವನ್ನು ಕಂಡು ಓದಿದನು; ಆ ಮಾತೇನೆಂದರೆ– ಕರ್ತನ ಆತ್ಮವು ನನ್ನ ಮೇಲೆ ಅದೆ, ಆತನು ನನ್ನನ್ನು ಬಡವರಿಗೆ ಶುಭವರ್ತಮಾನವನ್ನು ಸಾರುವದಕ್ಕೆ ಅಭಿಷೇಕಿಸಿದನು. ಸೆರೆಯವರಿಗೆ ಬಿಡುಗಡೆಯಾಗುವದನ್ನು ಮತ್ತು ಕುರುಡರಿಗೆ ಕಣ್ಣು ಬರುವದನ್ನು ಪ್ರಸಿದ್ಧಿಪಡಿಸುವದಕ್ಕೂ ಮನಮುರಿದವರನ್ನು ಬಿಡಿಸಿ ಕಳುಹಿಸುವದಕ್ಕೂ ಕರ್ತನು ನೇಮಿಸಿರುವ ಶುಭವರ್ಷವನ್ನು ಪ್ರಚುರಪಡಿಸುವದಕ್ಕೂ ಆತನು ನನ್ನನ್ನು ಕಳುಹಿಸಿದ್ದಾನೆ ಎಂಬದು. ಓದಿದ ಮೇಲೆ ಆತನು ಆ ಸುರಳಿಯನ್ನು ಸುತ್ತಿ ಸಭಾಮಂದಿರದ ಆಳಿನ ಕೈಗೆ ಕೊಟ್ಟು ಕೂತುಕೊಂಡನು. ಅಲ್ಲಿದ್ದವರೆಲ್ಲರ ಕಣ್ಣುಗಳು ಆತನ ಮೇಲೆಯೇ ಬಿದ್ದಿರಲಾಗಿ ಆತನು ಅವರಿಗೆ—ಈ ಹೊತ್ತು ನೀವು ನನ್ನ ಮಾತನ್ನು ಕೇಳುವಲ್ಲಿ ಈ ವೇದೋಕ್ತಿ ನೆರವೇರಿದೆ ಎಂದು ಹೇಳುತ್ತಿರುವಾಗ ಎಲ್ಲರೂ ಅತನನ್ನು ಹೊಗಳಿ ಆತನ ಬಾಯಿಂದ ಹೊರಡುವ ಇಂಪಾದ ಮಾತುಗಳಿಗೆ ಆಶ್ಚರ್ಯಪಟ್ಟು ಇವನು ಯೋಸೇಫನ ಮಗನಲ್ಲವೇ ಎಂದು ಮಾತಾಡಿಕೊಂಡರು. ಆತನು ಅವರಿಗೆ––ನೀವಂತೂ ವೈದ್ಯನೇ, ನಿನ್ನನ್ನೇ ವಾಸಿಮಾಡಿಕೋ ಎಂಬ ಗಾದೆಯನ್ನು ನನಗೆ ಹೇಳಿ ಕಪೆರ್ನೌಮಿನಲ್ಲಿ ಎಂಥೆಂಥ ಕಾರ್ಯಗಳು ನಡೆದವೆಂದು ನಾವು ಕೇಳಿದೆವೋ ಅಂಥವುಗಳನ್ನು ಈ ನಿನ್ನ ಸ್ವಂತ ಸ್ಥಳದಲ್ಲಿ ಮಾಡು ಅನ್ನುವಿರಷ್ಟೆ. ಆದರೆ ಯಾವ ಪ್ರವಾದಿಯೂ ಸ್ವದೇಶದಲ್ಲಿ ಸಮ್ಮತನಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಕೇಳಿರಿ, ಎಲೀಯನ ಕಾಲದಲ್ಲಿ ಮೂರು ವರುಷ ಆರು ತಿಂಗಳು ಮಳೆಬಾರದೆ ದೇಶದಲ್ಲೆಲ್ಲಾ ದೊಡ್ಡ ಬರ ಉಂಟಾದಾಗ ಇಸ್ರಾಯೇಲ್ ಜನರಲ್ಲಿ ಎಷ್ಟೋ ಮಂದಿ ವಿಧವೆಯರು ಇದ್ದದ್ದು ನಿಜ; ಆದರೆ ಅವರಲ್ಲಿ ಒಬ್ಬರ ಬಳಿಗೂ ದೇವರು ಎಲೀಯನನ್ನು ಕಳುಹಿಸದೆ ಸೀದೋನ್ ದೇಶಕ್ಕೆ ಸೇರಿದ ಸರೆಪ್ತ ಊರಿನಲ್ಲಿದ್ದ ಒಬ್ಬ ವಿಧವೆಯ ಬಳಿಗೆ ಮಾತ್ರ ಕಳುಹಿಸಿದನು. ಮತ್ತು ಎಲೀಷನೆಂಬ ಪ್ರವಾದಿಯ ಕಾಲದಲ್ಲಿ ಇಸ್ರಾಯೇಲ್ ಜನರೊಳಗೆ ಎಷ್ಟೋ ಮಂದಿ ಕುಷ್ಠರೋಗಿಗಳು ಇದ್ದಾಗ್ಯೂ ಅವರಲ್ಲಿ ಒಬ್ಬನಾದರೂ ಶುದ್ಧನಾಗದೆ ಸುರಿಯ ದೇಶದವನಾದ ನಾಮಾನನು ಮಾತ್ರ ಶುದ್ಧನಾದನು ಎಂದು ಹೇಳಿದನು. ಸಭಾಮಂದಿರದಲ್ಲಿರುವವರೆಲ್ಲರು ಈ ಮಾತುಗಳನ್ನು ಕೇಳಿ ಬಹಳವಾಗಿ ಸಿಟ್ಟುಗೊಂಡು ಎದ್ದು ಆತನನ್ನು ಊರಹೊರಕ್ಕೆ ಅಟ್ಟಿ ತಮ್ಮ ಊರು ಕಟ್ಟಿದ್ದ ಗುಡ್ಡದ ಕಡಿದಾದ ಸ್ಥಳಕ್ಕೆ ನಡಿಸಿಕೊಂಡು ಹೋಗಿ ಅಲ್ಲಿಂದ ಕೆಳಕ್ಕೆ ದೊಬ್ಬಬೇಕೆಂದಿದ್ದರು. ಆದರೆ ಆತನು ಅವರ ಮಧ್ಯದಲ್ಲಿ ಹಾದು ಹೊರಟು ಹೋದನು. ಬಳಿಕ ಆತನು ಗಟ್ಟಾ ಇಳಿದು ಗಲಿಲಾಯಕ್ಕೆ ಸೇರಿದ ಕಪೆರ್ನೌಮೆಂಬ ಊರಿಗೆ ಬಂದನು.

## ಯೋಹಾನ 4:46–54

ಹೀಗಿರಲಾಗಿ ಯೇಸು, ತಾನು ನೀರನ್ನು ದ್ರಾಕ್ಷಾರಸವಾಗಿ ಮಾಡಿದ ಗಲಿಲಾಯದ ಕಾನಾ ಊರಿಗೆ ಮತ್ತೂ ಬಂದನು. ಅಲ್ಲಿದ್ದಾಗ ಅರಮನೆಯ ಒಬ್ಬ ಪ್ರಧಾನನ ಮಗನು ಕಪೆರ್ನೌಮಿನಲ್ಲಿ ಅಸ್ವಸ್ಥನಾಗಿದ್ದನು. ಯೇಸು ಯೂದಾಯದಿಂದ ಗಲಿಲಾಯಕ್ಕೆ ಬಂದ ಸುದ್ದಿಯನ್ನು ಆ ಪ್ರಧಾನನು ಕೇಳಿದಾಗ ತನ್ನ ಮಗನು ಸಾಯುವ ಹಾಗಿದ್ದದರಿಂದ ಯೇಸುವಿನ ಬಳಿಗೆ ಹೋಗಿ––ನೀನು ಇಳಿದು ಬಂದು ನನ್ನ ಮಗನನ್ನು ಸ್ವಸ್ಥಮಾಡಬೇಕೆಂದು ಬೇಡಿಕೊಂಡನು; ಯೇಸು ಅವನಿಗೆ–– ನೀವು ಸೂಚಕಕಾರ್ಯಗಳನ್ನೂ ಅದ್ಭುತಕಾರ್ಯಗಳನ್ನೂ ನೋಡದಿದ್ದರೆ ನಂಬುವದೇ ಇಲ್ಲವೆಂದು ಹೇಳಿದನು. ಆ ಪ್ರಧಾನನು––ಸ್ವಾಮೀ, ನನ್ನ ಮಗನು ಸಾಯುವದಕ್ಕೆ ಮುಂಚೆ ನೀನು ಬರಬೇಕು ಅನ್ನಲು ಯೇಸು ಅವನಿಗೆ––ನಿನ್ನ ಮಗನು ಬದುಕುತ್ತಾನೆ ಹೋಗು ಎಂದು ಉತ್ತರಕೊಟ್ಟನು. ಆ ಗೃಹಸ್ಥನು ಯೇಸು ತನಗೆ ಹೇಳಿದ ಮಾತನ್ನು ನಂಬಿ ಹೊರಟುಹೋದನು. ಅವನು ಇನ್ನೂ ಘಟ್ಟಾಯಿಳಿದು ಹೋಗುತ್ತಿರುವಲ್ಲಿ ಅವನ ಆಳುಗಳು ಅವನೆದುರಿಗೆ ಬಂದು––ನಿನ್ನ ಮಗನು ಬದುಕಿಕೊಂಡನು ಅಂದರು. ಎಷ್ಟು ಘಂಟೆಗೆ ಅವನಿಗೆ ರೋಗವು ಇಳಿತರವಾಯಿತೆಂದು ಅವನು ಅವರನ್ನು ಕೇಳಿದಾಗ ಅವರು–– ನಿನ್ನೆ ಮಧ್ಯಾಹ್ನದ ಒಂದು ಘಂಟೆಗೆ ಜ್ವರವು ಅವನನ್ನು ಬಿಟ್ಟಿತು ಅಂದರು. ಆಗ ನಿನ್ನ ಮಗನು ಬದುಕುತ್ತಾನೆಂದು ಯೇಸು ತನಗೆ ಹೇಳಿದ ತಾಸಿನಲ್ಲಿಯೇ ಅದಾಯಿತೆಂದು ತಂದೆಯು ತಿಳುಕೊಂಡದರಿಂದ ಅವನೂ ಅವನ ಮನೆಯವರೆಲ್ಲರೂ ಆತನನ್ನು ನಂಬಿದರು. ಯೇಸು ಯೂದಾಯದಿಂದ ಗಲಿಲಾಯಕ್ಕೆ ಬಂದ ಮೇಲೆ ಈ ಎರಡನೆಯ ಸೂಚಕಕಾರ್ಯವನ್ನು ಮಾಡಿದನು.

# ಆ ಬೋಧಕನು ಮತ್ತು ಅವನ ಸಂದೇಶವು ತಿರಸ್ಕೃತವಾದದ್ದು

**ರಿಪ್ರಿಂಟ್ಸ್, ಪುಟ 3300**

## ಲೂಕ 4:16–30

**"ಆತನು ತನ್ನ ಸ್ವಾಸ್ಥ್ಯಕ್ಕೆ ಬಂದನು; ಆದರೆ ಸ್ವಂತಜನರು ಆತನನ್ನು ಅಂಗೀಕರಿಸಲಿಲ್ಲ."–ಯೋಹಾನ 1:11**

ನಮ್ಮ ಕರ್ತನು ತನ್ನ ಸೇವೆಯನ್ನು ಯೂದಾಯದಲ್ಲಿ ಪ್ರಾರಂಭಿಸಿದನು ಮತ್ತು ತನ್ನ ಜೀವಿತದ ಬಹು ಕಾಲವನ್ನು ಕಳೆದಿದ್ದ ಪ್ರಾಂತ್ಯವಾದ ಗಲಿಲಾಯಕ್ಕೆ ಹೋಗುವ ಮೊದಲು ಅಲ್ಲಿ ಒಂದು ವರುಷ ಕಳೆದನೆಂದು ಭಾವಿಸಲಾಗಿದೆ. ಆತನು ತನ್ನ ಸ್ವದೇಶಕ್ಕೆ ಹೋಗುತ್ತಿದ್ದಾಗ ತನ್ನ ಸ್ವಂತ ಊರಾಗಿದ್ದ ನಜರೇತಿಗೆ ಹೋಗುವ ಮೊದಲು ತಾನು ಭೇಟಿ ನೀಡುವ ಸಲುವಾಗಿ ಕಪೆರ್ನೌಮನ್ನು ಆದುಕೊಂಡನು. ಸಾಮಾನ್ಯವಾಗಿ ಒಬ್ಬ ಪ್ರವಾದಿಯು ಪರಸ್ಥಳಗಳಿಗಿಂತ ತನ್ನ ಸ್ವಂತನಾಡಿನಲ್ಲಿ ಲಘುವಾಗಿ ಎಣಿಸಲ್ಪಡುವನೆಂಬುದನ್ನು ಗಣನೆಗೆ ತೆಗೆದುಕೊಂಡಾಗ ಇದು ಆತನ ಜಾಣತನದ ಒಂದು ವಿಧಾನವಾಗಿತ್ತು. ಹೀಗೆಯೇ ಯೂದಾಯದಲ್ಲಿನ ಹಾಗೂ ಇನ್ನೂ ಮುಂದೆ ಕಪೆರ್ನೌಮಿನಲ್ಲಿನ ಆತನ ಕೀರ್ತಿಯು ತಾನು ಸುಮಾರು ಮೂರು ವರುಷದವನಾಗಿದ್ದರಿಂದ ಮೂವತ್ತು ವಯಸ್ಸಿನವರೆಗೆ ಜೀವಿಸಿದ್ದ ನಜರೇತಿನ ಜನರಲ್ಲಿ ಆಸಕ್ತಿಮೂಡಿಸಿತ್ತು. ಹೀಗೆ ತಮ್ಮ ಊರಿನವನ ವಿಷಯವಾಗಿ ಅವರಲ್ಲಿ ಸ್ವಲ್ಪಮಟ್ಟಿನ ಹೆಮ್ಮೆಯು ಉಂಟಾಗಿರಲು, ನಮ್ಮ ಕರ್ತನು ನಜರೇತಿಗೆ ಬಂದ ನಂತರ ಮೊದಲ ಸಬ್ಬತ್ ದಿನದಲ್ಲಿ ಅಲ್ಲಿನ ಸಭಾಮಂದಿರದಲ್ಲಿ ದೊಡ್ಡದಾದ ಗುಂಪು ಸೇರಿತ್ತೆಂಬುದು ನಮಗೆ ಖಚಿತ.

ಆದರೆ ನಮ್ಮ ಕರ್ತನ ಸೇವೆಯ ಉದ್ದೇಶವು ತನ್ನ ಬೋಧನೆಯ ಮೂಲಕ ಪ್ಯಾಲೆಸ್ತೀನಾದ ಜನರೆಲ್ಲರೂ ಎಚ್ಚೆತ್ತು ಕೊಳ್ಳುವಂತೆ ಮಾಡಿ ಅವರಲ್ಲಿ ಅಸಕ್ತಿಮೂಡಿಸು ವುದಾಗಿದ್ದರೂ ಆ ಸಂದೇಶದ ಉದ್ದೇಶವು ಎಲ್ಲಾ ಜನರನ್ನು ಕರ್ತನ ಬಳಿಗೆ ಕೂಡಿಸುವುದಕ್ಕಾಗಿರದೆ ಗೋದಿಯನ್ನು ಹೊಟ್ಟನ್ನು ಬೇರೆಬೇರೆ ಮಾಡಿ ಗೋದಿಕಾಳನ್ನು ಯೇಸುವಿನ ಬಳಿಗೆ ಕೂಡಿಸಿ ಹೊಟ್ಟಿನ ವರ್ಗದವರನ್ನು ಸಹಜವಾಗಿ ವಿರೋಧೀ ವ್ಯೂಹವಾಗಿ ನಿಲ್ಲುವಂತೆ ಮಾಡುವದಾಗಿತ್ತು. ಮುಂದಾಗಿ ಹೇಳಿದ್ದ ನಮ್ಮ ಕರ್ತನ ಸೇವೆಯ ಈ ಪರಿಣಾಮವು ಪೂರ್ಣವಾಗಿ ಕೈಗೂಡಿತ್ತೆಂಬುದನ್ನು ನಾವು ನೋಡುತ್ತೇವೆ. "ಆತನು ತನ್ನ ಸ್ವಾಸ್ಥ್ಯಕ್ಕೆ (ಸ್ವಜನರ ಬಳಿಗೆ) ಬಂದನು; ಆದರೆ ಸ್ವಂತಜನರು ಆತನನ್ನು ಅಂಗೀಕರಿಸಲಿಲ್ಲ. ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ, ಅವರಿಗೆ ದೇವರ ಮಕ್ಕಳಾಗುವ ಅಧಿಕಾರ (ಸೌಭಾಗ್ಯ) ಕೊಟ್ಟನು." ಅವರು ಮೋಶೆಯು ಮುಖ್ಯಸ್ಥನಾಗಿದ್ದ ಸೇವಕರೆಂಬ ಮನೆತನದಿಂದ ನಮ್ಮ ಕರ್ತನಾದ ಯೇಸುವು ಮುಖ್ಯಸ್ಥನಾಗಿರುವ ಮಕ್ಕಳೆಂಬ ಮನೆತನಕ್ಕೆ ವರ್ಗಾಯಿಸಲ್ಪಡುವರು. ಹೇಗೂ ಈ ಸಂಬಂಧವಾಗಿ ನಾವು ಗಮನಿಸಿರುವುದೆಂದರೆ ನಮ್ಮ ಕರ್ತನ ಸೇವಾವಧಿಯಲ್ಲಿ ಸೇವಕರಾಗಿ ನಂಬಿಗಸ್ತರಾದವರು ಒಟ್ಟುಗೂಡಿಸಲ್ಪಟ್ಟಿರುವ ರಾದರೂ ಪಂಚಾಶತ್ತಮ ದಿನದವರೆಗೂ ಅವರಿಗೆ ಹೊಸದಾಗಿ ಹುಟ್ಟಲಾಗಲಿಲ್ಲ. ಅಂದು ಆಲ್ಲಿ ಸಿದ್ಧರಾದಂಥವರಿಗೆ ಪಂಚಾಶತ್ತಮ ದಿನವು ಪವಿತ್ರಾತ್ಮನಿಂದ ಹೊಸದಾಗಿ ಹುಟ್ಟುವುದನ್ನು ತಂದುಕೊಟ್ಟಿತು. ಪವಿತ್ರಾತ್ಮನ ಗುಣಗಳನ್ನು ಅಭಿವೃದ್ಧಿಪಡಿಸಿ ಕೊಳ್ಳಲು ಆನಂತರ ಕಡೆಯಲ್ಲಿ ಪುನರುತ್ಥಾನದಲ್ಲಿ ಆತ್ಮನಿಂದ (ಆತ್ಮಿಕ ದೇಹದಲ್ಲಿ) ಹುಟ್ಟುವುದಕ್ಕೆ ಹೊಸದಾಗಿ (ಪವಿತ್ರಾತ್ಮನಿಂದ ಅಂಕುರಿಸಲ್ಪಟ್ಟವರಾಗಿ) ಹುಟ್ಟುವುದು ಅಗತ್ಯ.

ಪ್ರತಿ ಸಬ್ಬತ್ತಿನಲ್ಲೂ ಸಭಾಮಂದಿರದಲ್ಲಿ ನಡೆಯುವ ಪ್ರಾರ್ಥನಾಕೂಟಕ್ಕೆ ಹಾಜರಾಗುವುದು ನಮ್ಮ ಕರ್ತನಿಗೆ ವಾಡಿಕೆಯಾಗಿತ್ತು. ಹಾಗೂ ಅಲ್ಲಿ ಸಭಿಕರಿಗಾಗಿ ಪಾರಾಯಣ ಮಾಡುವುದು ಆತನ ವಾಡಿಕೆಯಾಗಿತ್ತೆಂಬುದನ್ನು ನಮ್ಮ ಪಾಠದ ಮೊದಲನೇ ವಾಕ್ಯವು ತೋರಿಸಿಕೊಡುತ್ತದೆ. ಸಭಾಮಂದಿರದ ದೇವಾರಾಧನೆಯು ದೇವಾಲಯದಲ್ಲಿ ನಡೆಯುವ ಆರಾಧನೆ ಯಂತಿರಲಿಲ್ಲ. ದೇವಾಲಯವು ಒಂದು ಪ್ರಾರ್ಥನಾಲ ಯವಾಗಿದ್ದು ಅಲ್ಲಿ ಜನರ ಪಾಪಗಳಿಗಾಗಿ ಛಾಯಾರೂಪದಲ್ಲಿ ಹೋರಿಹೋತ, ಮುಂತಾದವುಗಳ ರಕ್ತದ ಮೂಲಕವಾಗಿ ದೋಷ ಪರಿಹಾರ ಮಾಡಲ್ಪಡುತ್ತಿತ್ತು. ಸಭಾಮಂದಿರವು ಬಹುತೇಕ ಈಗಿನ ಕಾಲದ ಸತ್ಯವೇದಾಧ್ಯಯನ ಕೂಟಗಳನ್ನು ಹೋಲುತ್ತಿತ್ತು. ಅಲ್ಲಿ ಶಾಸ್ತ್ರಚನಗಳ ಪಾರಾಯಣವಾಗಿ ಅದರ ವಿಷಯವಾಗಿ ಮುಕ್ತವಾಗಿ ಚರ್ಚೆ ನಡೆಯುತ್ತಿತ್ತು. ಇದನ್ನು ಮುಖ್ಯಸ್ಥನು ಮಾತ್ರ ನಡೆಸುವುದಲ್ಲದೆ ಅಲ್ಲಿ ಹಾಜರಿರುವವರಲ್ಲಿ ಚರ್ಚೆ ಮಾಡಬಯಸುವವರೆಲ್ಲರೂ ಅದರಲ್ಲಿ ಭಾಗವಹಿಸಬಹುದಿತ್ತು. ಈ ವ್ಯವಸ್ಥೆ ಯಲ್ಲಿ ಕೆಲವು ಒಳ್ಳೆಯ ಲಕ್ಷಣಗಳೂ ಇದ್ದವು; ಅದರಲ್ಲಿ ಸತ್ಯವೇದದ ಯಾವ ವಿಷಯಗಳ ಮೇಲಾದರೂ ಚರ್ಚೆ ನಡೆಸುವ ಅವಕಾಶ ಒದಗಿಸಲಾಗಿತ್ತು. ಸತ್ಯವೇದದ ಅಧ್ಯಯನ ಹಾಗೂ ಸತ್ಯವೇದದ ತರಗತಿಗಳು ಇದರ ವಿಧಾನಗಳು ಇಂದಿಗೂ ಕರ್ತನ ಜನರಿಗೆ ಸಮಂಜಸವಾಗಿದ್ದು ಇದು ಸತ್ಯವನ್ನು ಸ್ಪಷ್ಟವಾಗಿ ಅರಿತುಕೊಳ್ಳಲು ಸಹಾಯಕವಾಗಿರುತ್ತದೆಂದು ಈ ಬಗ್ಗೆ ನಾವು ಮನಃಪೂರ್ವಕವಾಗಿ ಶಿಫಾರಸು ಮಾಡುವೆವು.

## ಸತ್ಯವಾಕ್ಯವನ್ನು ಸರಿಯಾಗಿ ವಿಂಗಡಿಸುವುದು

ಯೆಹೂದ್ಯರು ಸಭಾಮಂದಿರದಲ್ಲಿ ಶಾಸ್ತ್ರವಚನಗಳನ್ನು ಓದಲು ಕೆಲವು ಕ್ರಮವನ್ನು ಇಟ್ಟುಕೊಂಡಿದ್ದರು. ಇದರ ಪ್ರಕಾರ ಯೆಶಾಯನ ಗ್ರಂಥವು ಈ ಸಂದರ್ಭಕ್ಕೆ ಸೂಕ್ತವಾದುದಾಗಿತ್ತು. ಕರ್ತನು ಈಗ ನಾವು ಕರೆಯುವ ಯೆಶಾಯನ ಗ್ರಂಥದ ಅರವತ್ತೊಂದನೇ ಅಧ್ಯಾಯದ ಕಡೆ ತಿರುಗಿಸಿಕೊಂಡು ಒಂದನೇ ವಚನ ಹಾಗೂ ಎರಡನೇ ವಚನದ ಕೆಲವು ಭಾಗವನ್ನು ಓದಿ ಆನಂತರ ಆ ಗ್ರಂಥವನ್ನು ಮುಚ್ಚಿಟ್ಟು ಕುಳಿತುಕೊಂಡು ಓದಲಾದ ಈ ವಾಕ್ಯಭಾಗದ ಮೇಲೆ ಕೆಲವು ವ್ಯಾಖ್ಯಾನ ಮಾಡಿದನು. ನಮ್ಮ

ಕರ್ತನು ವಿವೇಚನಾಪೂರ್ವಕವಾಗಿ ಅದನ್ನು ಓದಿದನೆಂದು ಅಥವಾ ಅಪೋಸ್ತಲನು ವ್ಯಕ್ತಪಡಿಸಿರುವಂತೆ ಆತನು "ಸತ್ಯ ವಾಕ್ಯವನ್ನು ಸರಿಯಾಗಿ ವಿಂಗಡಿಸಿ" ಓದಿದ್ದನೆಂದು ನಮಗೆ ಕಂಡುಬರುತ್ತದೆ. ಅತನು ಆ ಸಮಯಕ್ಕೆ ಸೂಕ್ತವಾದ ಭಾಗವನ್ನು ಓದಿದ್ದನು. ಆದರೆ (ದೇವರ) ಮುಯ್ಯಿತೀರಿಸುವ ದಿನದ ವಿಷಯವಾಗಿ ಓದಲಿಲ್ಲ. ಆತನು ಮಾಡಿದ ಬೋಧನೆಯು ಜನರನ್ನು ಪರೀಕ್ಷಿಸುವದಕ್ಕಾಗಿತ್ತು; ಅಂದರೆ ಆತನ ಸಂದೇಶವನ್ನು ಅವರು ಅಂಗೀಕರಿಸಿದ್ದೇಯಾದರೆ (ದೇವರ) ಮುಯ್ಯಿತೀರಿಸುವ ದಿನದ ವಿಷಯುವು ಅವಶ್ಯವಿರಲಿಲ್ಲ; ಅದನ್ನು ಅಂಗೀಕರಿಸಲಿಲ್ಲವಾದಲ್ಲಿ (ದೇವರ) ಮುಯ್ಯಿತೀರಿಸುವ ದಿನವು ಅವರನ್ನು ಹಿಂಬಾಲಿಸುವುದು. ಅದರಂತೆ ಆತನು ತಿರಸ್ಕರಿಸಲ್ಪಟ್ಟಾಗ ಅದು ಆ ಜನಾಂಗವನ್ನು ಹಿಂಬಾಲಿಸಿಕೊಂಡು ಬಂದಿತು. ಇದರ ವಿಷಯವಾಗಿ ಕರ್ತನ ಜನರಿಗೆ ಒಂದು ಪಾಠವಿರುವುದು: ಅದೇನೆಂದರೆ ನಾವು ಕರ್ತನ ಮಾತುಗಳನ್ನು ಅಧ್ಯಾಯವಾದ ಮೇಲೆ ಅಧ್ಯಾಯದಂತೆ ಸಾಂಪ್ರಾದಾಯಿಕವಾಗಿ ಓದುವುದಕ್ಕಿಂತಲೂ ಒಂದು ವಚನವನ್ನು ಓದಿ ಅರ್ಥಮಾಡಿಕೊಂಡು ಅದನ್ನು ಮನನಮಾಡಿಕೊಳ್ಳುವುದು ಉತ್ತಮ.

ನಮ್ಮ ಕರ್ತನು ತನ್ನ ಮಾತುಗಳನ್ನು ಕೇಳುತಿದ್ದವರಿಗೆ ಈ ವಾಕ್ಯಭಾಗದ ಅರ್ಥವನ್ನು ಮನಮುಟ್ಟುವಂತಾಗಲು ಮಾಡಿ ಹೀಗೆ ಹೇಳಿದನು: "ಈ ಹೊತ್ತು ನೀವು ನನ್ನ ಮಾತನ್ನು ಕೇಳುವಲ್ಲಿ ಈ ವೇದೋಕ್ತಿ ನೆರವೇರಿದೆ..." ಇವುಗಳು ಶತಮಾನಗಳ ಹಿಂದೆ ಬರೆಯಲ್ಪಟ್ಟಿದ್ದು ಮತ್ತು ನೂರಾರು ಸಾರಿ ಇವುಗಳು ಓದಲ್ಪಟ್ಟಿರುವುದು. ಆದರೆ ಈಗ ಅವರ (ಯೆಹೂದ್ಯರ ಯುಗ) ಕಾಲದ ಸುಗ್ಗಿಕಾರ್ಯವು ನಡೆಯುತ್ತಿರುವ ಸಮಯದಲ್ಲಿ ಮೊದಲನೆಯ ಸಾರಿ ಇದು ನೆರವೇರಿತೆಂದು ಹೇಳಲು ಸಾಧ್ಯವಾಯಿತು. ಸುಮಾರು ಒಂದು ವರುಷಗಳ ಹಿಂದೆ ಯೊರ್ದನಿನಲ್ಲಿ ತಾನು ಪ್ರತಿಷ್ಠೆಯನ್ನು ಮಾಡಿಕೊಂಡ ನಂತರ ಕರ್ತನಾದ ಯೇಸುವಿನ ಮೇಲೆ ಪವಿತ್ರಾತ್ಮ ಬಂದಿತ್ತು. ಇದು ಅತನಿಗೆ ಶಾಸ್ತ್ರಬದ್ಧವಾದ ಅಭೀಷೇಕವಾಗಿ ಪರಿಣಮಿಸಿತ್ತು. ಯೆಹೂದ್ಯರಿಗೆ ಅಭಿಷೇಕವೆಂಬುದು ರೂಢಿಯಲ್ಲಿದ್ದ ವಿಷಯ; ತಮ್ಮ ಮಹಾಯಾಜಕರುಗಳು ಅಭಿಷೇಕಿಸಲ್ಪಡುತ್ತಿದ್ದರು. ಇದು ಅವನಿಗೆ ಅಧಿಕೃತವಾಗಿ ಯಜ್ಞಗಳನ್ನು ಮಾಡಲು ಹಾಗೂ ದೇವರ ಮತ್ತು ಮನುಷ್ಯರ ನಡುವೆ ಮಧ್ಯಸ್ಥರಾಗಲು ದೇವರಿಂದ ದೊರೆತ ಅಧಿಕಾರ ಅಥವಾ ಆತನ ಮೇಲೆ ಬಂದಿರುವ ಆತ್ಮವನ್ನು ಸೂಚಿಸುವುದು. ಅವರ ರಾಜರುಗಳು ಅಭಿಷೇಕಿಸಲ್ಪಡುತ್ತಿದ್ದರು; ಇದು ಅವರಿಗೆ ಜನರನ್ನು ಆಳ್ವಿಕೆಮಾಡುವ ವಿಷಯದಲ್ಲಿ ದೇವರ ವಿಶೇಷ ಪ್ರತಿನಿಧಿಯಾಗಲು ಅಧಿಕೃತವಾಗಿ ದೊರೆತ ದೇವಾಧಿಕಾರ ಮತ್ತು ದೇವರ ನಡೆಸುವಿಕೆಗಳಿಗೆ ಸೂಚನೆಯಾಗಿತ್ತು.

ಅವರಿಗೆ ಕೊಡಲ್ಪಟ್ಟಿದ್ದ ವಾಗ್ದಾನವೇನೆಂದರೆ: ಮೆಸ್ಸೀಯನು ದೇವರ ಅಭಿಷಕ್ತನಾಗಿ ಕಾಲ ಕ್ರಮೇಣ ಭೂಮಿಯಲ್ಲಿ ನೀತಿಯುಳ್ಳ ಆಳ್ವಿಕೆಯನ್ನು ಸ್ಥಾಪಿಸಬೇಕಿರುವುದು, ಮತ್ತು ಈಗ ನಮ್ಮ ಕರ್ತನು ತಾನು ತಂದೆಯಿಂದ ಅಭೀಷೇಕ ಹೊಂದಿದವನೆಂದು ಪ್ರಕಟಿಸಿದನು. ಆತನು ಇದನ್ನು, "ನಾನು ಮೆಸ್ಸೀಯನು. ಯಾಜಕನಾಗಿ ರಾಜನಾಗಿ ಆಧಿಕಾರ ಪಡೆಯಲು ಯೆಹೋವನಿಂದ ಅಭಿಷೇಕಿಸಲ್ಪಟ್ಟವನು." ಎಂದು ಯಾವುದೇ ನಯವಿಲ್ಲದ ರೀತಿಯಲ್ಲಿ ಸೊಕ್ಕಿನಿಂದ ಹೇಳದೆ ಪ್ರವಾದನೆಗಳ ಬಗ್ಗೆ ಗಮನ ಸೆಳೆಯುತ್ತಾ ಇದು ಈಗ ನೆರವೇರಿತೆಂದು ಶಾಂತರೀತಿಯಲ್ಲಿ ಸೌಜನ್ಯವಾಗಿ ಪ್ರಕಟಿಸಿದನು. ಆ ಪ್ರಕಟನೆಯು ದೇವರು ತನ್ನನ್ನು ಆಳ್ವಿಕೆ ಮಾಡಲು ಅಭಿಷೇಕಿಸಿರುವನೆಂದು ತಿಳಿಸುವದಕ್ಕಾಗಿರಲಿಲ್ಲ; ಆದರೆ ತನ್ನ ಕಾರ್ಯಭಾರದ ಮೊದಲನೆ ಭಾಗವಾಗಿ ತಾನು ಮನುಷ್ಯರಿಗೆ (ಶುಭವಾರ್ತೆ ತಿಳಿಸಲು) ದೇವರ ಬಾಯಂತಿರುವೆನೆಂದು ಸಾರಿ ಉಪದೇಶಿಸುವದಾಗಿತ್ತು. ಆತನಲ್ಲಿ ಒಂದು ವಿಶೇಷ ಸಂದೇಶವಿತ್ತು; ಆದರೆ ಅದು ಆ ಸಮಯಕ್ಕೆ ಕೇಳುವ ಕಿವಿಯುಳ್ಳ ಕೆಲವರಿಗೆ ಮಾತ್ರ ಸೀಮಿತವಾಗಿತ್ತು.

ರಾಜ್ಯಾಧಿಕಾರದ ಗುಣಲಕ್ಷಣಗಳನ್ನು ಹೊರತುಪಡಿಸಿ ಪ್ರವಾದಿಯು ಇಲ್ಲಿ ಮೆಸ್ಸೀಯನ ಕಾರ್ಯವನ್ನು ಚಿತ್ರಿಸಿರುವುದಾಗಿ ಕಂಡುಬಂದಿರುವುದು ಅಲ್ಲದೆ ಒಂದು ಮಹಾ ಸೈನ್ಯವನ್ನು ಎಬ್ಬಿಸುವುದರ ಬದಲು ಒಂದು ಶುಭ ಸಂದೇಶವನ್ನು ಸಾರುವುದೂ, ತನ್ನ ಸುತ್ತಲೂ ಐಶ್ವರ್ಯವಂತರು ಜ್ಞಾನಿಗಳು ಹೆಮ್ಮೆಯುಳ್ಳವರನ್ನು ಒಟ್ಟುಗೂಡಿಸುವುದಕ್ಕೆ ಬದಲು ದೀನರೂ ಮತ್ತು ಬಡವರಿಗೆ ಉಪದೇಶಿಸುವುದು ಮೆಸ್ಸೀಯನ ಕಾರ್ಯವೆಂದು ಕರ್ತನು ಪ್ರಕಟಿಸಿದುದು ಹಲವರಿಗೆ ನಿಸ್ಸಂದೇಹ ವಾಗಿ ನಿರಾಶೆಯನ್ನುಂಟು ಮಾಡಿತ್ತು. ಬಹುಶಃ ಅವರು ಇತರ ಜನಾಂಗದಲ್ಲಿರುವ ಯುದ್ಧ ವೀರರಾದ ನಾಯಕರುಗಳಂತೆ ತಮಗೆ ಬಿಡುಗಡೆ ಉಂಟು ಮಾಡುವವನೂ ಸಹ ಬಹು ಪ್ರಾಣಗಳನ್ನು ನಷ್ಟಮಾಡಿದವನಾಗಿ ಬಹು ಜನರ ಮನಸ್ಸುಗಳನ್ನು ದುಃಖಪಡಿಸಿ ಕಷ್ಟವನ್ನುಂಟು ಮಾಡುವನೆಂದು ನಿರೀಕ್ಷಿಸಿದ್ದರು. ತಾವು ತಪ್ಪಾಗಿ ನಿರೀಕ್ಷಿಸಿದ್ದ ಕಾರಣ ತಮ್ಮ ಮನಸ್ಸುಗಳು ಕೆಲವು ಮಟ್ಟಿಗೆ ಒಡೆದುಹೋದಂತೆ ಕಂಡುಬಂದವರಲ್ಲಿಯೂ ಸಹ ಇಲ್ಲಿ ನಿರಾಶೆಯಾಗಿರುವ ಸಂಭವವಿತ್ತು.

ಸೆರೆಯವರಿಗೆ ಬಿಡುಗಡೆಯಾಗುವುದನ್ನು ಮತ್ತು ಬಂದಿಗಳಿಗೆ ಕದತೆರೆಯುವುದನ್ನು ಸಾರಲಾಗುವುದು ಎನ್ನುವುದು ನಮ್ಮ ಕರ್ತನನ್ನು ಆಲಿಸಿದವರಿಗೆ ಅರ್ಥವಾಗಲಿಲ್ಲ. ಆ ಸಮಯದಲ್ಲಿ ಸರೆಯಲ್ಲಿದ್ದ ಸ್ನಾನಿಕನಾದ ಯೋಹಾನನ ವಿಷಯವಾಗಿ ಅವರ ಆಲೋಚನೆಗಳು ಉಂಟಾಗಿ ಯೇಸುವು ಆತನನ್ನು ಬಿಡಿಸುವುದಕ್ಕೆ ಕೆಲವು ಕ್ರಮುಗಳನ್ನು ತೆಗೆದುಕೊಳ್ಳುವನೇನೋ ಎಂದು ಅವರು ಆಶ್ಚರ್ಯ ಪಟ್ಟಿರಬಹುದು. ಸೈತಾನನಿಂದ ಬಂದಿಸಲ್ಪಟ್ಟವರಿಗೆ ಪಾಪದ ದಾಸತ್ವದಿಂದ ಬಿಡುಗಡೆಯಾಗುವ ಮತ್ತು ಕಡೆಯದಾಗಿ ಲಕ್ಷಾಂತರ ಜನರು ಸೇರಿರುವ ಸಮಾಧಿಯೆಂಬ ಮರಣದ ಸೆರೆಮನೆಯಿಂದ ಬಿಡುಗಡೆಯಾಗುವುದನ್ನು ಸೂಚಿಸುವ ಸತ್ಯವೇದದ ಈ ವಾಕ್ಯಭಾಗದ ನಿಜಾರ್ಥದ ಬಗ್ಗೆ ಅವರಿಗೆ ಸ್ವಲ್ಪವೂ ಅರಿವಿಲ್ಲದಿರುವ ಸಂಭವವಿತ್ತು. ತನ್ನ ಸಂದೇಶವನ್ನು ಕೇಳುವ ಕಿವಿಯುಳ್ಳವರಾಗಿದ್ದು ಎಷ್ಟೇ ನಷ್ಟವಾದರೂ ಕರ್ತನ ಶಿಷ್ಯರಾಗಿ ಅದಕ್ಕೆ ಕಿವಿಗೊಟ್ಟು ನಡೆದುಕೊಳ್ಳ ಬಯಸಿದ್ದವರಿಗೂ ಈ ಸಮಯದಲ್ಲಿ ಕರ್ತನ ಕಾರ್ಯದ ಮಹತ್ವಗಳ ಬಗ್ಗೆ ಮನವರಿಕೆ ಯಾಗಿರಲು ಸಾಧ್ಯವಾಗಿರಲಿಕ್ಕಿಲ್ಲ. ಸಮಾಧಿಗಳಲ್ಲಿರುವವರೆಲ್ಲರೂ ಮನುಷ್ಯಕುಮಾರನ ಧ್ವನಿಯನ್ನು ಕೇಳಿ ಹೊರಬರುವರೆಂಬ ಪ್ರವಾದನೆಯ ವಾಕ್ಯಗಳ ಅರ್ಥವನ್ನು ಅವರಿಗೆ ಆತನು ಸ್ವಲ್ಪ ಸ್ವಲ್ಪವಾಗಿ ತಿಳಿಯಪಡಿಸಿ ವಿವರಿಸುತ್ತಾ ಬರಬೇಕಾಯಿತು.

# ಕರ್ತನು ನೇಮಿಸಿರುವ ಶುಭವರ್ಷ

ಪ್ರವಾದಿಯು ತಿಳಿಸಿರುವ **"ಕರ್ತನು ನೇಮಿಸಿರುವ ಶುಭವರ್ಷ (ಪ್ರಸನ್ನತೆಯ ಕಾಲ, ಅವಧಿ)"**–ಇದನ್ನೂ ಸಹ ಅರ್ಥಮಾಡಿ ಕೊಳ್ಳಲಾಗಲಿಲ್ಲ. ನಮ್ಮ ಕಣ್ಣುಗಳು ಧನ್ಯವಾದವುಗಳು ಏಕೆಂದರೆ ಆ ಶುಭವರ್ಷವು ಅಥವಾ ಆ ಶುಭ ಕಾಲವು ಅಥವಾ ಶುಭ ಅವಧಿಯು ಈ ಸುವಾರ್ತಾಯುಗವೆಂಬುದನ್ನು ನಾವು ಈಗ ನೋಡುತ್ತಿದ್ದೇವೆ. ಇದರಲ್ಲಿ ದೇವರು ಕ್ರಿಸ್ತನ ಮೂಲಕವಾಗಿ ತನ್ನ ಬಳಿಗೆ ಬರುವವರೆಲ್ಲರನ್ನೂ ಅಂಗೀಕರಿಸುವ ಅಂದರೆ ಅವರನ್ನು ಯೇಸುವಿನೊಂದಿಗೆ ಸಹ–ಯಜ್ಞಾರ್ಪಿತರೆಂದೂ ಆ ರಾಜವಂಶಸ್ಥನಾದ ಶ್ರೇಷ್ಠ ಯಾಜಕನ ದೇಹಕ್ಕೆ ಅಂಗಗಳಾಗುವಂತೆ ಅಂಗೀಕರಿಸುವ ಇಚ್ಛೆಯುಳ್ಳವನಾಗಿರುವನು. ನಿಜ, ಸಾವಿರ ವರುಷದ ಆಳ್ವಿಕೆಯ ಕಡೆಯಲ್ಲಿ ಆ ಶ್ರೇಷ್ಠ ವಿಮೋಚಕನು ಕಳೆದುಹೋಗಿದ್ದನ್ನು ಸರಿಪಡಿಸುವ ಕಾರ್ಯದ ಮೂಲಕವಾಗಿ ಮನುಕುಲದವರಲ್ಲಿ ಕ್ರಮೇಣ ದೇವರ ಪ್ರತಿರೂಪಕ್ಕೆ ಹಿಂದಿರುಗಿ ದೇವರೊಡನೆ ಹೃದಯ ಹೊಂದಾಣಿಕೆಗೆ ಬರುವವರೆಲ್ಲರನ್ನೂ ದೇವರು ಅಂಗೀಕರಿಸುವ ಇಚ್ಛೆಯುಳ್ಳವನಾಗಿರುವನು. ಆದರೆ ಕ್ರಿಸ್ತನು ಸಮಸ್ತವನ್ನು ಸರಿಪಡಿಸಿದ ನಂತರ ಲೋಕದವರನ್ನು ಅಂಗೀಕರಿಸುವ ಕಾರ್ಯವಿಧಾನವು ಈಗಿನ ಕಾಲದಲ್ಲಿ ಸಭೆಯನ್ನು ಅಂಗೀಕರಿಸುತ್ತಿರುವ ಕಾರ್ಯ ವಿಧಾನಕ್ಕಿಂತಲೂ ಬಹು ಭಿನ್ನವಾಗಿರುವುದು.

ಈಗ ನಾವು ಅಂಗೀಕಾರವಾಗಿರುವುದರ ಅರ್ಥವೇನೆಂದರೆ, ನಾವು ನೂತನ ಸ್ವಭಾವಕ್ಕೆ ಅಂದರೆ ಆತ್ಮಿಕ ಸ್ವಭಾವಕ್ಕೆ ಅಂಕುರಿಸಲ್ಪಡುವುದರ ಮೂಲಕವಾಗಿ ನಮ್ಮ ಸ್ವಭಾವದಲ್ಲಿ ಬದಲಾವಣೆ ಉಂಟಾಗಿರುವುದು. ಈ ಅಂಗೀಕಾರಕ್ಕೆ ವಿಧಿಸಲಾದ ಶರತ್ತುಗಳು ಯಾವುವೆಂದರೆ, ಅಪೋಸ್ತಲನು ವ್ಯಕ್ತಪಡಿಸಿರುವಂತೆ, ದೇವರ ಕೃಪೆಯಿಂದ ಕ್ರಿಸ್ತ ಯೇಸುವಿನಿಂದಾದ ವಿಮೋಚನೆಯ ಮೂಲಕವಾಗಿ ನಾವು ನೀತಿವಂತರೆಂದು ಉಚಿತವಾಗಿ ನಿರ್ಣಯಿಸಲ್ಪಟ್ಟಿರುವುದು; ಮತ್ತು ಎರಡನೆಯದಾಗಿ **"ನಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಕೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿಕೊಳ್ಳುವುದು ಹಾಗು ವಿವೇಕಪೂರ್ವಕವಾಗಿ ಆರಾಧಿಸುವುದು."** ಹೀಗಿರಲು ಈ (ಸುಪ್ರಸನ್ನತೆಯ) ಶುಭದಿನವೆಂದರೆ ನಮ್ಮ ಪರಲೋಕದಲ್ಲಿರುವ ತಂದೆಯು ಅಭಿಷೇಕಹೊಂದಿ ಪ್ರತಿಷ್ಠಿತರಾದವರ ಯಜ್ಞಾರ್ಪಣೆಗಳನ್ನು ಅಂಗೀಕರಿಸಲು ಇಚ್ಛಿಸುವ ದಿನ. ಆತನು ಯೇಸುವಿನ ಪ್ರತಿಷ್ಠಾರ್ಪಣೆಯ ಯಜ್ಞವನ್ನು ಕೇವಲ ಆರಂಭಿಕವಾಗಿ ಅಂಗೀಕರಿಸಿದ್ದನು. ಅದನ್ನು ನಮ್ಮ ಕರ್ತನು ಮುಂದೆ ಶಿಲುಬೆಯಲ್ಲಿ ನೆರವೇರಿಸಿ ಪೂರ್ಣಗೊಳಿಸಿದನು. ಈ ಆಧಾರದ ಮೇಲೆಯೇ ಪರಲೋಕದ ತಂದೆಯು ಆತನಿಗೆ ಪ್ರಭಾವ ಮಾನ ನಿರ್ಲಯತ್ವಗಳನ್ನು ಮೊದಲನೆಯ ಪುನರುತ್ಥಾನದಲ್ಲಿನ ಆಶೀರ್ವಾದಗಳ ರೂಪದಲ್ಲಿ ಉತ್ಕೃಷ್ಟವಾದ ಬಹುಮಾನವಾಗಿ ನೀಡಿದನು. ಇದರಂತೆಯೇ ರಕ್ಷಕನ ಹೆಜ್ಜೆಯಜಾಡನ್ನು ಹಿಡಿದು ಆತನನ್ನು ಹಿಂಬಾಲಿಸುತ್ತಿರುವ ಆತನ ದೇಹದ ಅಂಗಗಳಾಗಿರುವವರ ವಿಷಯಗಳು. ಆತನ ರಕ್ತದ ಮೂಲಕವಾಗಿ ನೀತಿನಿರ್ಣಯ ಹೊಂದಿದ ಅವರ ಯಜ್ಞಗಳು ಈ ನಿಜರೂಪದ ದೋಷಪರಿಹಾರಕ ಮಹಾದಿನದಲ್ಲಿ ತಂದೆ ದೇವರಿಗೆ ಅಂಗೀಕಾರವಾಗುವುದು. ಅಂದು ಛಾಯಾರೂಪದಲ್ಲಿನ ಹೋರಿಹೋತಗಳ ಯಜ್ಞಗಳು ಅರ್ಪಿತವಾಗಿ ಅವುಗಳು ಅಂಗೀಕಾರವಾದಂತೆ ಈ "ಉತ್ತಮವಾದ ಯಜ್ಞಗಳು" ಎಲ್ಲವೂ ಪೂರ್ಣಗೊಂಡ ನಂತರ ಮುಂದೆ ಯಾವ ಯಜ್ಞಗಳ ಅಗತ್ಯವೂ ಇರುವುದಿಲ್ಲ ಇಲ್ಲವೇ ಅವುಗಳು ಅಂಗೀಕರಿಸಲ್ಪಡುವುದೂ ಇಲ್ಲ.

ನಮ್ಮ ಕರ್ತನು ತಿಳಿಸಿರುವಂತೆ ಈ ಅದ್ಭುತವಾದ ಪ್ರವಾದನೆಯು ಆತನ ಸ್ವಂತ ವ್ಯಕ್ತಿತ್ವದಲ್ಲಿ ನೆರವೇರಲಾಗುತ್ತಿದ್ದು ಇನ್ನೂ ಅದು ಆತನ ದೇಹದ ಅಂಗಗಳಾಗಿ ನಿಜವಾದ ರೀತಿಯಲ್ಲಿ ಪ್ರತಿಷ್ಠಿತರಾಗಿರುವ ಆತನ ಹಿಂಬಾಲಕರ ವ್ಯಕ್ತಿತ್ವಗಳಲ್ಲಿ ನೆರವೇರುತ್ತಿರುವ ಹಂತದಲ್ಲಿದೆ. ಇದನ್ನು ಛಾಯಾರೂಪದಲ್ಲಿ ತೋರಿಸಲಾಗಿತ್ತು. ಪರಿಶುದ್ಧವಾದ ಅಭಿಷೇಕ ತೈಲವು ಆರೋನನ ತಲೆಯ ಮೇಲೆ ಹೊಯ್ಯಲ್ಪಟ್ಟು ಅದು ಆತನ ಅಂಗಿಯ ಕೊರಳ ಪಟ್ಟಿಯವರೆಗೂ ಹರಿದುಬಂದಿತ್ತು. ಹೀಗೆಯೇ ಆತನ ದೇಹದ ಅಂಗಗಳಾಗಿರುವವರ ಅಭಿಷೇಕದ ಸಂಗತಿ; ನಮ್ಮ ಸಂಗತಿಯೂ ಹೀಗೆಯೇ ಇರುವುದು. ನಾವು ಆ ಅಭಿಷಕ್ತನ ದೇಹದ ಅಂಗಗಳು ಮತ್ತು ನಮ್ಮ ಶಿರಸ್ಸಿನ ವಿಷಯವಾಗಿ ಯಾವುದು ಸತ್ಯವೋ ಅದು ನಮ್ಮಲ್ಲಿ ಪ್ರತಿಯೊಬ್ಬನ ವಿಷಯದಲ್ಲೂ ಒಂದು ಪ್ರಮಾಣದಲ್ಲಿ ಸತ್ಯವಾಗಿರುವುದು. ನಾವೆಲ್ಲರೂ ಸಾರುವುದಕ್ಕೆ ಅಭಿಷೇಕಿಸಲ್ಪಟ್ಟವರಾಗಿದ್ದು ಬರಲಿರುವ ರಾಜ್ಯದ ವಿಷಯವಾದ ಶುಭಸಮಾಚಾರವನ್ನು ದೀನರಿಗೆ ಮತ್ತು ಮನಮುರಿದವರಿಗೆ ಪ್ರಕಟಿಸಲು ನಮ್ಮ ಕರ್ತನಿಂದ ಅಧಿಕಾರ ಹೊಂದಿದವರಾಗಿದ್ದೇವೆ. ನಮಗೆ ಕಾರ್ಯಭಾರವನ್ನು ಮತ್ತು ಸುವಾರ್ತಾ ಸಂದೇಶನ್ನು ಕೊಟ್ಟಿರುವುದರಲ್ಲಿ ಕರ್ತನ ಉದ್ದೇಶವು ಮನುಷ್ಯರ ಹೃದಯಗಳನ್ನು ಒಡೆಯುವುದೆಂಬುದು ಒಂದು ತಪ್ಪಾದ ಭಾವನೆ. ನಾವು ವಿಶೇಷವಾಗಿ ವಕ್ರನಡತೆಯವರ ಬಳಿಗೆ ಹೋಗುವುದಕ್ಕೆ ನೇಮಿಸಲ್ಪಟ್ಟೆರೆಂದು ಭಾವಿಸುವುದು ಒಂದು ತಪ್ಪಾದ ಅಭಿಪ್ರಾಯ. ಎಲ್ಲರಿಗೂ ಸಾರಿಹೇಳಲು ನಮಗೆ ಕೊಡಲಾಗಿರುವ ಸಂದೇಶವು ದೀನರು ಮತ್ತು ಮನ ಮುರಿದವರನ್ನು ಬಿಟ್ಟು ಬೇರೆಯವರನ್ನು ಆಕರ್ಷಿಸುವಂತಿರಬಾರದು. ಕತ್ತಲಲ್ಲಿ ಹೊಳೆಯುತ್ತಿರುವ ಬೆಳಕು ಅಂಧಕಾರವನ್ನು ಖಂಡಿಸಿ, ಪಾಪ ನೀತಿ ಮತ್ತು ಬರಲಿರುವ ನ್ಯಾಯತೀರ್ವಿಕೆ ವಿಷಯವಾಗಿ ಮನವರಿಕೆ ಉಂಟಾಗುವಂತೆ ಮಾಡಿ, ಅಥವಾ ನೀತಿವಂತರ ಹಾಗೂ ಅನೀತಿವಂತರ ನಡುವಿನ ತಾರತಮ್ಯವನ್ನು ತೋರಿಸಿ ಕೊಡುವದಾದರೂ ಇದು ಒಂದು ಸಾಂದರ್ಭಿಕವಾಗಿ ನಡೆಯವ ಸಂಗತಿಗಳು. ಸುವಾರ್ತೆಯ ವಿಷಯವಾಗಿರುವ ನಿಜವಾದ ಕಾರ್ಯೋದ್ದೇಶವು ದೀನರ ಮತ್ತು ಮನಮುರಿದವರ ಪರವಾಗಿರುವುದು.

ಲೋಕದವರ ವಿಷಯವಾಗಿ ಸಾಮಾನ್ಯವಾಗಿರುವ ನಮ್ಮ ಸಂದೇಶವು, ಅವರು ಕೇಳಲು ಸಮರ್ಥರಾಗಿರುವಷ್ಟರ ಮಟ್ಟಿಗೆ, ಸೆರೆಯವರಿಗೆ ಬಿಡುಗಡೆಯಾಗುವುದನ್ನು ಮತ್ತು ಮರಣವೆಂಬ ಸೆರೆಮನೆಯ ಬಾಗಿಲು ಕಡೆಯಲ್ಲಿ ತೆರೆಯಲ್ಪಡುವುದನ್ನು, ಭೂಲೋಕದ ಎಲ್ಲಾ ಕುಲಗಳವರು ದೇವರಿಂದ ಆತನ ಅಭಿಷಕ್ತನ ಮೂಲಕವಾಗಿ ಸತ್ಯದ ಪರಿಜ್ಞಾನದ ವಿಷಯವಾದ ಶ್ರೇಷ್ಠವಾದ ಆಶೀರ್ವಾದವನ್ನು ಪಡೆಯುವುದು, ಮನೋನೇತ್ರಗಳು ತೆರೆಯಲ್ಪಡುವುದು, ಕಿವುಡರ ಕಿವಿ ತೆರೆಯಲ್ಪಡುವುದು, ಇವುಗಳನ್ನು ಸಾರಿಹೇಳುವುದು. ಇದರಿಂದ ಅವರು ತಮ್ಮ

ದೇವರ ವಿಷಯವಾಗಿ ತಿಳಿದುಕೊಂಡು ಪರಿಶುದ್ಧ ಮಾರ್ಗಕ್ಕೆ ಹಿಂದಿರುಗಲು ಸಮರ್ಥರಾಗಿ ಕಡೆಯಲ್ಲಿ ಸಾವಿರ ವರುಷದ (ಆಳ್ವಿಕೆಯ) ರಾಜ್ಯದಲ್ಲಿ ಸಮಸ್ತವನ್ನು ಸರಿಮಾಡುವ ಕಾರ್ಯದಲ್ಲಿ ಅವರು ಪಾಲನ್ನು ಹೊಂದುವರು. ಈಗ ಕೇಳುವ ಕಿವಿಯುಳ್ಳವರಿಗೆ ನಾವು ಇನ್ನೂ ಹೆಚ್ಚಾದುದನ್ನು ಮಾಡಲು ಸಾಧ್ಯವಿರುವುದು. ಅವರಿಗಿರುವ ಸ್ವಾತಂತ್ರ್ಯದ ವಿಷಯವಾಗಿ ಮತ್ತು ಸೈತಾನ ಪಾಪ ಶಾರೀರಿಕ ಬಲಹೀನತೆಗಳಿಂದ ಬಿಡುಗಡೆಯಾಗಿ ಅವರು ಸ್ವತಂತ್ರರಾಗುವುದರ ವಿಷಯವಾಗಿ ಹೇಳಲು ನಮಗೆ ಸಾಧ್ಯವಿರುವುದು. ನಮ್ಮ ದೇವರ ಹೆಸರಿನಲ್ಲಿ ಅವರಿಗೆ ಬರವಸೆಯಾಗಿ ಹೇಳಲು ಸಾಧ್ಯವಿರುವುದೆಂದರೆ: ಅವರು ಯೇಸುವಿನಲ್ಲಿ ಬರವಸೆಯಿಟ್ಟು ತಮ್ಮ ಶಕ್ತ್ಯಾನುಸಾರ ಶಾರೀರಿಕ ಅಭಿಲಾಶೆಗಳ ಪ್ರಕಾರ ನಡೆಯದೆ ಆತ್ಮನನ್ನು ಅನುಸರಿಸಿ ನಡೆಯಲು ಬಯಸುವುದಾದರೆ ಪಾಪಗಳಿಗಾಗಿ ನೀಡಿದ ನಮ್ಮ ರಕ್ಷಕನ ಶ್ರೇಷ್ಠವಾದ ಯಜ್ಞದ ಫಲವಾಗಿ ದೊರೆತ ಆಶೀರ್ವಾದದ ಮೂಲಕ ಅವರ ಹಿಂದಿನ ಪಾಪಗಳು ಕ್ಷಮಿಸಲ್ಪಟ್ಟು ಅವರ ಈಗಿನ ಶಾರೀರಿಕ ಬಲಹೀನತೆ ಮತ್ತು ಅಪೂರ್ಣತೆಗಳು (ಲೋಪ ದೋಷಗಳು) ಮುಚ್ಚಲ್ಪಡುವದೆಂಬುದನ್ನು ತಿಳಿಸುವುದು. ನಂಬಿಕೆಯ ಮೂಲಕವಾದ ಈ ನೀತಿ ನಿರ್ಣಯವು ಈಗ ಕರ್ತನ ಸೇವಕರು ಮತ್ತು ಸೇವಕಿಯರಿಗಾಗಿರುವುದು. ಆದರೆ ನಿಜವಾದ ನೀತಿನಿರ್ಣಯವು ಅಥವಾ ಪಾಪ ಮತ್ತು ಸೈತಾನನ ದಾಸತ್ವದಿಂದ ಬಿಡುಗಡೆಯಾಗುವುದು ಮುಂದೆ ಜನಾಂಗಗಳನ್ನು ಬರುವ ರಾಜ್ಯದಲ್ಲಿ ಲೋಕದವರಿಗೆ ಸಾಮಾನ್ಯವಾಗಿರುವಂತೆ ಮಾಡಿರುವ ಭವ್ಯವಾದ ಏರ್ಪಾಡು. ಅದು ಸೈತಾನನು ಬಂಧಿಸಲ್ಪಟ್ಟು ಅವನು ಇನ್ನು ಜನಾಂಗಗಳನ್ನು (ಜನರನ್ನು) ಮೋಸಗೊಳಿಸದ ಹಾಗೆ ಮಾಡುವಾಗ ನೆರವೇರುವುದು.

## ಸೌಜನ್ಯವಿಲ್ಲದ (ಕಠಿಣ) ಹೃದಯಿಗಳಿಗೆ ಹೇಳಲಾದ ಇಂಪಾದ ಮಾತುಗಳು

ಕರ್ತನಿಂದ ವಾಕ್ಯೋಪದೇಶವು ಕೊಡಲ್ಪಡಲಿಲ್ಲವಾದರೂ ಅದು ಆ ಒಂದು ಭವ್ಯವಾದ ಪಠ್ಯಭಾಗದ ಆಧಾರದ ಮೇಲೆ (ಆಡಿದ ಮಾತುಗಳಾಗಿ) ಅತ್ಯುತ್ತಮವಾಗಿತ್ತೆಂಬುದು ಪ್ರಶ್ನಾತೀತವಾದುದು. ಆ ವಾಕ್ಯವಿವರಣೆಯು ಹೇಳುವುದು, ಅಲ್ಲಿ ಕೂಡಿ ಬಂದಿದ್ದವರೆಲ್ಲರೂ ಆತನ ಬಾಯಿಂದ ಬಂದ ಇಂಪಾದ ಮಾತುಗಳಿಗೆ ಅಂದರೆ ಅನುಗ್ರಹಪೂರ್ವಕವೂ ಆಶೀರ್ವಾದಕರವೂ ಸಾಂತ್ವನದಾಯಕವೂ ಸಮಾಧಾನಕರವೂ ಆದ ಮಾತುಗಳಿಗೆ ಅವರು ಸಾಕ್ಷಿಯಾಗಿದ್ದರೆಂಬುದು. ಕರ್ತನು ತನ್ನ ಸಾವಿರ ವರುಷದ (ಆಳ್ವಿಕೆಯ) ರಾಜ್ಯದಲ್ಲಿ ತಾನು ನೆರವೇರಿಸುವ ವಿಮೋಚನಾಕಾರ್ಯದ ಮೂಲಕವಾಗಿ ಲೋಕಕ್ಕೆ ಉಂಟಾಗಲಿರುವ ಆಶೀರ್ವಾದಗಳನ್ನು ಎಷ್ಟರ ಮಟ್ಟಿಗೆ ವರ್ಣಿಸಿ ಹೇಳಿದ್ದನೆಂಬುದು ನಮಗೆ ತಿಳಿದಿಲ್ಲ. ಆತನ ಹಿಂದಿನ ನೆರೆಹೊರೆಯವರು ಮತ್ತು ಸ್ನೇಹಿತರು ಆತನ ವಿಷಯವಾಗಿ ಉನ್ನತವಾದ ರೀತಿಯಲ್ಲಿ ಆಲೋಚಿಸತೊಡಗಿದರು ಹಾಗೂ ಪ್ರವಾದಿಗೆ ಸ್ವಂತನಾಡಿನಲ್ಲಿ ಸ್ವಜನರ ನಡುವೆ ಮರ್ಯಾದೆಯಿಲ್ಲವೆಂಬ ಗಾದೆಯು ನಿಜವಲ್ಲವೆಂಬುದು ಸ್ಪಷ್ಟವಾಗಿ ತೋರಿಬರುವುದರಲ್ಲಿತ್ತು. ಆತನ ಸ್ವಂತ ಊರಿನವರು ಈತನು ನಿಜವಾಗಿಯೂ ಒಬ್ಬ ಮಹಾ ಪ್ರವಾದಿಯೆಂದು ಆತನನ್ನು ಅಂಗೀಕರಿಸಿ ಆತನಲ್ಲಿ ಸಂತೋಷಿಸಿ ಆತನು ತಮ್ಮ ಊರಿನವನಾಗಿರುವ ಕಾರಣ ನಜರೇತಿನ ಯೇಸುವೆಂದು ಅತನ ವಿಷಯವಾಗಿ ಹೆಮ್ಮೆಪಡುವುದರಲ್ಲಿದ್ದರು ಎಂಬುದು ಸಹ ಸ್ಪಷ್ಟವಾಗಿತ್ತು.

ಆದರೆ ಆತನ ವಿಷಯವಾಗಿ ಅವರು ಮಾಡಿದ ಪ್ರಸಂಶೆಯು ಎಷ್ಟು ಕ್ಷಣಿಕ! ಎಷ್ಟು ಬೇಗನೆ ಅವರ ಸಹಜವಾದ ಮನಸ್ಸು ಹಾಗು ಮೊಂಡಾಲೋಚನೆಗಳು ಎಲ್ಲವನ್ನೂ ತಲೆಕೆಳಗೆ ಮಾಡಿತು ಮತ್ತು ಆತನನ್ನು ಹೊಗಳಿದ ಅವರು ವೈರಿಗಳಾಗಿ ಆತನನ್ನು ಹಗೆಮಾಡಿ ಪ್ರಾಣತೆಗೆಯಲು ನೋಡುವವರಾದರು! ನಾವು ತಿಳಿದಿರುವ ಹಾಗೆ ಈತನು ಯೋಸೇಫನ ಮಗನಲ್ಲವೇ ಎಂದು ಹೇಳಲಾರಂಭಿಸಿದರು. ಆನಂತರ ಅವರು ಯೇಸುವಿನ ಮೂಲಕ ಯೂದಾಯದಲ್ಲಿಯೂ ಮತ್ತು ಹತ್ತಿರದ ಊರಾದ ಕಪೆರ್ನೌಮಿನಲ್ಲಿಯು ನಡೆದ ಮಹಾ ಅದ್ಭುತಕಾರ್ಯಗಳ ವಿಷಯವಾಗಿ ಕೇಳಿರಲಾಗಿ ಈತನು ತಮ್ಮ ಮಧ್ಯದಲ್ಲಿ ಯಾವ ಮಹತ್ಕಾರ್ಯವನ್ನು ಮಾಡುವನೋ ಎಂದು ಆಶ್ಚರ್ಯಪಡುವದಕ್ಕೆ ತೊಡಗಿದರು. ಅವರ ಆಲೊಚನೆಗಳನ್ನು ವ್ಯಾಖ್ಯಾನಮಾಡಿ ನಮ್ಮ ಕರ್ತನು ಹೇಳಿದ್ದು: "ನೀವಂತೂ ವೈದ್ಯನೇ, ನಿನ್ನನ್ನೇ ವಾಸಿಮಾಡಿಕೋ ಎಂಬ ಗಾದೆಯನ್ನು ನನಗೆ ಹೇಳಿ ಕಪೆರ್ನೌಮಿನಲ್ಲಿ ಎಂಥೆಂಥ ಕಾರ್ಯಗಳು ನಡೆದವೆಂದು ನಾವು ಕೇಳಿದೆವೋ ಅಂಥವುಗಳನ್ನು ಈ ನಿನ್ನ ಸ್ವಂತ ಸ್ಥಳದಲ್ಲಿ ಮಾಡು ಅನ್ನುವಿರಷ್ಟೆ."

ನಮ್ಮ ಕರ್ತನು ನಜರೇತಿನಲ್ಲಿ ಅದ್ಬುತಗಳನ್ನು ಏಕೆ ಮಾಡಲಿಲ್ಲವೆಂಬುದು ನಮಗೆ ತಿಳಿದುಬಂದಿಲ್ಲ. ಆದಾಗ್ಯೂ ನಾವು ಊಹಿಸಬಹುದೇನೆಂದರೆ, ಅದು ಆತನ ಸ್ವಂತ ಊರಾಗಿರಲಾಗಿ ಅಲ್ಲಿ ಆತನು ಚಿರಪರಿಚಿತನಾಗಿದ್ದನು ಮತ್ತು ನಿಸ್ಸಂದೇಹವಾಗಿ ಆತನು ಹಿಂದೆ ಸಭಾಮಂದಿರದಲ್ಲಿ ಓದುತ್ತಿದ್ದರಿಂದ ಜನರು ಸರಿಯಾದ ಮನೋಭಾವದಿಂದ ಶುಭವಾರ್ತೆಯನ್ನು ಅದ್ಬುತಗಳ ಸಾಕ್ಷ್ಯಾಧಾರವಿಲ್ಲದೆಯೇ ಅಂಗೀಕರಿಸಲು ಸಿದ್ಧರಿರಬೇಕಿತ್ತು; ಆದರೆ ಬೇರೆ ಊರುಗಳಲ್ಲಿ ಕರ್ತನ ಪರಿಚಯವಿರಲಿಲ್ಲದಿರಲಾಗಿ ಅದ್ಭುತಗಳು ಆತನಿಗೆ ಹೆಚ್ಚುಕಡಿಮೆ ರುಜುವಾತುಗಳಾಗಿ ಬೇಕಾಗುವ ಅಗತ್ಯವಿತ್ತು. ವೈಯುಕ್ತಿಕವಾಗಿ ಆತನ ಪರಿಚಯವಿಲ್ಲದೆಯೇ ಅಥವಾ ಅದ್ಭುತಗಳ ಸಾಕ್ಷ್ಯಾಧಾರವಿಲ್ಲದೆಯೇ ಆತನನ್ನು ಸೇರಿಸಿಕೊಂಡು ಆತನ ಬೋಧನೆಗಳನ್ನು ಅಂಗೀಕರಿಸುವುದನ್ನು ಯಾರೂ ನಿರೀಕ್ಷಿಸಲಾಗದು. ಇಲ್ಲಿ ಆಲೊಚನೆಗೆ ಬರುವ ವಿಷಯವೆಂದರೆ, ನಮ್ಮ ಕರ್ತನು ಮಾಡಿದ ಅದ್ಭುತಗಳು ಕೆಟ್ಟುಹೊದುದನ್ನು ಸರಿಪಡಿಸುವ ಕಾರ್ಯಗಳ ಆಶೀರ್ವಾದಗಳಾಗಿರುವ ಉದ್ದೇಶಕ್ಕಾಗಿರಲಿಲ್ಲ. ಯಾಕೆಂದರೆ ಕೆಟ್ಟುಹೋದುದನ್ನು ಸರಿಪಡಿಸುವ ಕಾಲಗಳು ಬಂದಿದ್ದಿರಲಿಲ್ಲ. ನಡೆಸಿದ ಅದ್ಭುತಗಳು ಕೇವಲ ನಮ್ಮ ಕರ್ತನ ಬೋಧನೆಗಳಿಗೆ ಸಾಕ್ಷಿಯಾಗಿ ದೃಢೀಕರಿಸಿ ರುಜುವಾತುಮಾಡಿ ಸಮರ್ಥಿಸುವುದಕ್ಕಾಗಿದ್ದವು. ಎರಡನೆಯದಾಗಿ ನಜರೇತಿನ ಜನರು ಅದ್ಬುತಗಳನ್ನು ಬಯಸಬಾರದಿತ್ತು. ಯೇಸುವಿನೊಡನೆ ಇದ್ದ ಪರಿಚಯವೇ ಅವರಿಗೆ ಸಾಕ್ಷಿಯಾಗಿರಲಾಗಿ ಇದಕ್ಕೆ ಬದಲಾಗಿ ಬೇರೆ ಅದ್ಭುತಗಳ ಅಗತ್ಯವಿರಲಿಲ್ಲ.

## ನಿನ್ನ ಹೆಸರಿನ ಮೇಲೆ ನಾವು ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲವೇ?

### ಮತ್ತಾಯ 7:22-23

ಈ ಸನ್ನಿವೇಶದಿಂದ ನಮ್ಮ ದಿನಕ್ಕೆ ಒಂದು ಪಾಠವನ್ನು ಕಂಡುಕೊಳ್ಳಬಹುದು. ಈ ದಿನಗಳಲ್ಲಿ ಕರ್ತನ ಜನರ ನಡುವೆ ಆದ್ಭುತಗಳ ಅಗತ್ಯವಿರುವುದಿಲ್ಲ; ಹಾಗಾಗಿ ಅವುಗಳು ಇಲ್ಲವಾಗಿವೆ. ಇದು ನಮ್ಮ ಕರ್ತನ ಶಕ್ತಿಯಲ್ಲಿ ಯಾವುದಾದರೂ ಕಡಿಮೆಯಾಯಿತೆಂದಲ್ಲ. ಆದರೆ ಕೆಟ್ಟುಹೋದುದನ್ನು ಸರಿಪಡಿಸುವ ಕಾಲವು ಇನ್ನೂ ಬಂದಿರಲಿಲ್ಲ ಹಾಗೂ ಸುವಾರ್ತೆಯ ಸಂದೇಶವನ್ನು ಪರಿಚಯಿಸುವುದಕ್ಕಾಗಿ ಅದ್ಭುತಗಳನ್ನು ತೋರ್ಪಡಿಸುವ ಅಗತ್ಯ ಇನ್ನು ಇರುವುದಿಲ್ಲ. ಹೀಗಿದ್ದರೂ ಈಗಿರುವ ಎಲ್ಲಾ ವಿಧವಾದ ವ್ಯಾಧಿಗಳನ್ನು ಗುಣಪಡಿಸಲು ದೇವರಿಗಿರುವ ಸಾಮರ್ಥ್ಯ ಬಗ್ಗೆ ಒಂದು ಕ್ಷಣವಾದರೂ ಸಂದೇಹಪಡದಿದ್ದರೂ ಈಗಿನ ಕಾಲದಲ್ಲಿ ನಡೆಯುತ್ತಿರುವ ಅದ್ಭುತವಾಗಿ ಗುಣಪಡಿಸುತ್ತಿರುವುದನ್ನು--ಅದು ಮಾರ್ಮನ್ನರಿಂದಾಗಿರಲಿ ಅಥವಾ ಕ್ರೈಸ್ತ ವಿಜ್ಞಾನಿಗಳಿಂದಾಗಿರಲಿ (ಕ್ರಿಸ್ಟಿಯನ್ ಸೈಂಟಿಸ್ಟ್) ಆಥವಾ ಆತ್ಮೀಕವಾದಿಗಳಿಂದಾಗಿರಲಿ ಅಥವಾ ಶ್ರೀ ಡೋವೆ ಮತ್ತು ಆತನ ಅನುಯಾಯಿಗಳಿಂದಾಗಿರಲಿ ಅಥವಾ ಇತರರಿಂದಾಗಲಿ, ಅದನ್ನು ಸಂಶಯದಿಂದ ನೋಡುವ ಪ್ರವೃತ್ತಿಯುಳ್ಳವರಾಗಿದ್ದೇವೆ. ಕೆಲವು "ಮಹತ್ಕಾರ್ಯಗಳನ್ನು" ಮಾಡುವವರಿಗೆ ತಾನು ನಿಮ್ಮನ್ನು ನಂಬಿಗಸ್ತರಾದ ನನ್ನ ಶಿಷ್ಯರೆಂದು ಮಾನ್ಯ ಮಾಡುವುದಿಲ್ಲ ಎಂದು ಹೇಳುವನೆಂದು ನಮ್ಮ ಕರ್ತನು ತಿಳಿಸಿರುವಂತೆ ನಾವು ಅದ್ಭುತಗಳ ವಿಷಯವನ್ನು ನೋಡುವ ಪ್ರವೃತ್ತರಾಗಿದ್ದೇವೆ.

ನಿಸ್ಸಂದೇಹವಾಗಿ ಸೈತಾನನು ಮತ್ತು ಆತನ ಕೆಲಸಗಳು ಜೀವ ಹಾಗು ಸ್ವಸ್ಥಗೊಳಿಸುವಿಕೆ, ಮುಂತಾದವುಗಳಿಗೆ, ವಿರೋಧ ವಾದವುಗಳು; ಹೀಗಿದ್ದರೂ ತನ್ನ ಅನುಕೂಲಗಳಿಗೆ ಚೆನ್ನಾಗಿ ಹೊಂದಿಕೊಳ್ಳುವಂತೆ ಮಾಡಲು ತಾನು ಬೋಧಕನಾಗುವ ಅಥವ ಸ್ವಸ್ಥಪಡಿಸುವವನಾಗುವ ಸಲುವಾಗಿ ತನ್ನ ಕಾರ್ಯವಿಧಾನಗಳನ್ನು ತಲೆಕೆಳಗು ಮಾಡಲು ಅತನು ಸಮರ್ಥನು ಹಾಗೂ ಅದನ್ನು ಇಚ್ಛಿಸುವವನಾಗಿರುವನು. ನಮ್ಮ ಕರ್ತನು ಈ ವಿಷಯವಾಗಿ ಮಾತನಾಡುವಾಗ ಸೈತಾನನು ಇಂಥ ವಿಧಾನಗಳನ್ನು ಅನುಸರಿಸು ವುದನ್ನು ಸೂಚಿಸಿ ಹೇಳಿರುವನು; ಆದರೆ ಇದು ಸೈತಾನನ ರಾಜ್ಯವು ಬಿದ್ದುಹೋಗುವುದರ ಆರ್ಥವೆಂಬುದನ್ನು ಅತನು ತಿಳಿಸಿದ್ದಾನೆ. ಇಂಥ ಪ್ರಯತ್ನಗಳು ಮಾನವರನ್ನು ಸತತವಾಗಿ ಮೂಢನಂಬಿಕೆ ಮತ್ತು ಅಂಧಕಾರದಲ್ಲಿ ಇಡಲು ಆತನಿಗೆ ಅವಶ್ಯವಿರುವುದೆಂಬುದನ್ನು ಸೂಚಿಸುತ್ತದೆ. ಈಗಿನ ಕಾಲದಲ್ಲಿ ಕರ್ತನ ನಿಜವಾದ ಪ್ರತಿಷ್ಠಿತರ ಹೃದಯ ಹಾಗು ಮನಸ್ಸುಗಳ ಮೇಲೆ ಕ್ರಮೇಣವಾಗಿ ಪ್ರಕಾಶಗೊಳ್ಳುತಿರುವ ಸತ್ಯಾರ್ಥಗಳ ಮಹಿಮಾ ಬೆಳಕಿನಿಂದ ಅವರ ಗಮನವನ್ನು ಬೇರೆಡೆ ಸೆಳೆಯಲು ಇಂಥ ವಿಧಾನಗಳು ಸೈತಾನನಿಗೆ ಅಗತ್ಯ.

ಕರ್ತನ ಜನರ ವಿಷಯದಲ್ಲಿ ಹೇಳುವುದಾದರೆ, ಈಗಿನ ಕಾಲವು ಅವರಿಗೆ ಯಜ್ಞಾರ್ಪಿತರಾಗುವ ಸಮಯ, ಬಿದ್ದುಹೋಗಿರುವುದನ್ನು ಸರಿಪಡಿಸುವ ಸಮಯವಲ್ಲ; ಇದು ತಮ್ಮ ಪ್ರಾಣಗಳನ್ನು ಕೊಡುವ ಸಮಯ ಅದನ್ನು ರಕ್ಷಿಸಿಕೊಳ್ಳುವ ಸಮಯವಲ್ಲ. ವಿರೂಪಗೊಂಡಿರುವ ತಮ್ಮ ದೇಹದ ಪ್ರಕೃತಿ ಯನ್ನು ಸರಿಪಡಿಸಿಕೊಳ್ಳುವ ಸಮಯವಲ್ಲದಿದ್ದರೂ ಇದು ಒಡೆದು ಹೋದ ತಮ್ಮ ಹೃದಯಗಳನ್ನು ಕಟ್ಟಿಗುಣಪಡಿಸಿಕೊಳ್ಳುವ ಸಮಯ. ಇದು ಅವರು ಪಾಪ ಮರಣಗಳಿಂದ ನಿಜವಾದ ರೀತಿ ಯಲ್ಲಿ ಬಿಡುಗಡೆ ಹೊಂದುವ ಸಮಯವಲ್ಲದಿದ್ದರೂ ಅವುಗಳಿಂದ ಬಿಡುಗಡೆಯಾಗಿದ್ದೇವೆಂದು ತಮ್ಮನ್ನು ಎಣಿಸಿಕೊಳ್ಳುವ ಸಮಯ. ಲೋಕದ ವಿಷಯವಾಗಿ ಹೇಳುವುದಾದರೆ, ಈಗಾಗಲೇ ಅದು ಮೆಸ್ಸೀಯನ ವಿಶೇಷತೆಗಳ ಹಾಗೂ ಬೋಧಕನಾಗಿ ಆತನ ಅರ್ಹತೆಗಳ ಬಗ್ಗೆ ಪ್ರತಿಯೊಂದು ಕಡೆಯಿಂದಲೂ ಸಾಕಷ್ಟು ಸಾಕ್ಷಿಯನ್ನು ಹೊಂದಿರುವುದು; ಈ ಉದ್ದೇಶಕ್ಕಾಗಿ ರೋಗಿಗಳನ್ನು ತಾತ್ಕಾಲಿಕವಾಗಿ ಗುಣಪಡಿಸುವ ಅಗತ್ಯವಿಲ್ಲ ಮತ್ತು ಲೋಕದಲ್ಲಿರುವ ವ್ಯಾಧಿಗಳನ್ನು ಶಾಶ್ವತವಾಗಿ ಗುಣಪಡಿಸುವ ಬಗ್ಗೆ ಹೇಳುವುದಾದರೆ, ಅದರ ಸಮಯವು ಇನ್ನೂ ಬಂದಿದ್ದಿಲ್ಲ; ಆದರೆ ಅಪೋಸ್ತಲನಾದ ಪೇತ್ರನು ತೋರಿಸಿಕೊಟ್ಟಿರುವಂತೆ ಕರ್ತನ ಎರಡನೆ ಬರುವಿಕೆಯಲ್ಲಿ ಅತನ ಸಾವಿರ ವರುಷದ ಆಳ್ವಿಕೆಯ ರಾಜ್ಯವು ಸ್ಥಾಪನೆಯಾದಾಗ ಅದು (ವ್ಯಾಧಿಗಳ ಗುಣಪಡಿಸು ವಿಕೆಯ ಸಮಯ) ಬರುವುದು. "ದೇವರು ಪೂರ್ವದಲ್ಲಿದ್ದ ತನ್ನ ಪರಿಶುದ್ಧ ಪ್ರವಾದಿಗಳ ಬಾಯಿಂದ ಹೇಳಿಸಿರುವ ಸಮಸ್ತವನ್ನು ಸರಿಮಾಡುವ ಕಾಲಗಳು" ಆಗ ಹಿಂಬಾಲಿಸಿಕೊಂಡು ಬರುವವು, ಮತ್ತು ನಿಜವಾಗಿಯೂ ಅವು ನಿಜವಾಗಿಯೂ "ಪುನಶ್ಚೇತನ ಗೊಳಿಸುವ ಕಾಲಗಳು."

ನಜರೇತಿನ ಜನರು ಯೇಸುವಿನ ವಿಷಯದಲ್ಲಿ ತೋರಿದ್ದ ಆಸಕ್ತಿಯು ತಮ್ಮ ಊರಿನ ಪ್ರತಿನಿಧಿಯೆಂದು ಆತನಲ್ಲಿ ಹೆಮ್ಮೆ ಪಡುವ ಸ್ವಾರ್ಥದೃಷ್ಟಿಯುಳ್ಳದ್ದಾಗಿತ್ತು ಮತ್ತು ಅತನು ಬೇರೆ ಊರುಗಳಲ್ಲಿ ಮಾಡಿದ ಮಹಾ ಅದ್ಭುತಗಳಿಗಿಂತಲೂ ಎರಡರಷ್ಟು ಹೆಚ್ಚಾಗಿ ತನ್ನ ಊರಿನಲ್ಲಿ ಮಾಡುವನೆಂದು ಅವರು ನಿರೀಕ್ಷಿಸಿದ್ದರು. ಹೀಗಾಗಿ ಆತನು ಅಂಥ ಅದ್ಭುತಗಳನ್ನು ಮಾಡುವುದಿಲ್ಲವೆಂದು ತಿಳಿಸಿದಾಗ ಅವರು ಆಶಾಭಂಗಪಟ್ಟು ಕಿಡಿಕಿಡಿಯಾದರು. ಆತನು ಇದೇ ರೀತಿಯ ಹಿಂದಿನ ಘಟನೆಗಳನ್ನು ಉಲ್ಲೇಖಿಸಿದಾಗ ಅದು ಅವರ ಕೋಪವನ್ನು ಯಾವ ಪ್ರಮಾಣದಲ್ಲಿಯೂ ಶಮನ ಗೊಳಿಸಲಿಲ್ಲ. ಅವರು ರೋಷವುಳ್ಳವರಾಗಿ ಎದ್ದು ಅತನನ್ನು ಊರಿನ ನಾಲ್ವತ್ತು ಅಥವಾ ಐವತ್ತು ಅಡಿ ಎತ್ತರವಾದ ಬೆಟ್ಟದ ಕಡೆಗೆ ನೂಕಿಕೊಂಡು ಹೋಗಿ ಅತನನ್ನು ಕೊಲ್ಲುವ ಅಥವಾ ಊನಗೊಳಿಸುವ ಸ್ಪಷ್ಟವಾದ ಉದ್ದೇಶದಿಂದ ಅಲ್ಲಿನ ಕಡಿದಾದ ಸ್ಥಳದಿಂದ ಅತನನ್ನು ತಳ್ಳಬೇಕೆಂದಿದ್ದರು.

## "ಲೋಕವು ನಿಮ್ಮ ಮೇಲೆ ದ್ವೇಷಮಾಡುವುದಾದರೆ ಅದಕ್ಕೆ ಆಶ್ಚರ್ಯಪಡಬೇಡಿರಿ"

ಪ್ರಾಕೃತ ಮನುಷ್ಯನಲ್ಲಿರುವ ತನ್ನ ಬಿದ್ದುಹೋದ ಸ್ಥಿತಿಯ ಎಂಥಾ ಒಂದು ಚಿತ್ರಣ ಇಲ್ಲಿ ನಮಗಿರುವುದು! ಒಂದು ಸಮಯದಲ್ಲಿ ಆ ಒಡೆಯನ ಇಂಪಾದ ಮಾತುಗಳಿಗೆ ಆನಂದ ಪಟ್ಟು ಮತ್ತೊಂದು ಸಮಯದಲ್ಲಿ ತಮ್ಮ ಸ್ವಾರ್ಥವುಳ್ಳ ನಿರೀಕ್ಷೆ ಮಹತ್ವಾಕಾಂಕ್ಷೆಗಳು ವಿಫಲಗೊಂಡಾಗ ಆತನನ್ನು ನಾಶಮಾಡ

ಬಯಸಿದ್ದರು. ಇದರಂತೆಯೇ ಅಂದಿನಿಂದಲೂ ಕರ್ತನ ಜನರ ವಿಷಯವಾಗಿ, ಮತ್ತು ಈ ಸುವಾರ್ತಾಯುಗದ ಸುಗ್ಗಿಯ ಕಾಲವಾಗಿರುವ ಈಗಿನ ಸಮಯದಲ್ಲಿ ಇದು ವಿಶೇಷವಾಗಿ ಸತ್ಯವಾಗಿದೆ. ಜನರಿಗೆಲ್ಲಾ ಮಹಾ ಸಂತೋಷವನ್ನುಂಟುಮಾಡುವ ಶುಭ ಸಮಾಚಾರವನ್ನು ಕೇಳಿದ ಹಲವರು ಅದನ್ನು ಕಲ್ಪಿಸಲಾದ ಅತಿ ಭವ್ಯವಾದ ಸುವಾರ್ತೆಯು ಸಂದೇಶವೆಂದು ಪ್ರಕಟಿಸುವರಾದರೂ ತಮ್ಮ ಸ್ವಾರ್ಥಭಾವ, ಅಂದರೆ ವಿಶೇಷವಾಗಿ ತಮ್ಮ ಪಂಗಡದ ಮೇಲಿನ ಅಭಿಮಾನ ಮತ್ತು ಈ ಸಂದೇಶಕ್ಕೆ ಬದಲಾಗಿ ತಮ್ಮ ಅತ್ಯಂತ ಪ್ರಿಯವಾದ ಪಂಗಡ ಅಥವಾ ಗುಂಪನ್ನು ಕಟ್ಟ ಬಯಸುವದು ಈ ಸಂದೇಶಕ್ಕೆ ಅಪಕೀರ್ತಿತರುವ ಪರಿಣಾಮವನ್ನುಂಟು ಮಾಡುವದು. ಅದು ಕೃಪಾಪೂರ್ಣವಾದ ಸಂದೇಶದಲ್ಲಿ ಹಿಂದೆ ಕೆಲವು ಕಾಲ ಸಂತೋಷಿಸಿದ್ದವರ ಮೇಲೆ ದುಷ್ಪರಿಣಾಮವನ್ನುಂಟು ಮಾಡುವಂತೆ ತೊರುವುದು.

ನಮ್ಮ ಕರ್ತನು ತನ್ನ ವಿರೋಧಿಗಳ ನಿಜವಾದ ಮನೋ ಭಾವವು ಸ್ಪಷ್ಟವಾಗಿ ಕಾಣಬರುವಂತೆ ಮಾಡಲು ಈ ಸಂಗತಿ ಯನ್ನು ಸಾಕಷ್ಟು ಮುಂದುವರಿಯಲು ಬಿಟ್ಟನು. ಆನಂತರ ತಾನು ತಿರುಗಿಕೊಂಡು ಅವರಲ್ಲಿ ಭೀತಿ ಉಂಟಾಗುವಂತೆ ತನ್ನ ಕಣ್ಣಿ ದೃಷ್ಟಿಯನ್ನು ಅವರ ಮೇಲೆ ಹಾಯಿಸಿ ಅವರು ತನ್ನ ಮೇಲೆ ಬಿದ್ದು ಪೀಡಿಸದಂತೆ ಅವರ ಮಧ್ಯೆಯಿಂದ ಹೊರಟು ಹೋದನು. ಅವನು ಈ ಶಕ್ತಿಯನ್ನು ಪ್ರಯೋಗಿಸಿದ ಕಾರಣ ತನ್ನ ಸಮಯವು ಇನ್ನೂ ಬಂದಿರಲಿಲ್ಲ. ಇದರಂತೆಯೇ ಸಹ ಆತನ ದೇಹದ ಅಂಗಗಳಾಗಿರುವವರ ಸಂಗತಿಯೆಂದು ನಾವು ಭಾವಿಸಬಹುದು. ಹೇಗೆ ತಂದೆಯು (ದೇವರು) ಕುಮಾರನಿಗೆ (ಯೇಸುವಿಗೆ) ತನ್ನ ಕಾರ್ಯಗಳನ್ನು ನೆರವೇರಿಸಲು ನಿಗದಿತ ಕಾಲವನ್ನು ಏರ್ಪಡಿಸಿ ದ್ದಾನೋ, ಹಾಗೆಯೇ ನಿಸ್ಸಂದೇಹವಾಗಿ ಕ್ರಿಸ್ತನ ದೇಹದ ಅಂಗಗಳಾಗಿರುವ ಪ್ರತಿಯೊಬ್ಬರಲ್ಲಿಯೂ ದೇವರ ದೃಷ್ಟಿಗೆ ಬೀಳದಂತೆ ಅವರ ತಲೆಯ ಒಂದು ಕೂದಲಾದರೂ ಉದುರಿ ಹೋಗದ ಹಾಗೆ ಎಲ್ಲಾ ಸಂಗತಿಗಳಲ್ಲಿ ಮಾರ್ಗದರ್ಶನ ಮಾಡಿ ಅದನ್ನು ಅವರಿಗೆ ಅನುಕೂಲಕರವಾಗಿ ಮಾರ್ಪಡುವಂತೆ ದೇವರ ಏರ್ಪಾಡುಗಳು ಮಾಡಲಾಗಿರುತ್ತವೆ. ಹೀಗೆ ಅವರ ಜೀವಗಳು ತಂದೆಯ ದೃಷ್ಟಿಯಲ್ಲಿ ಅಮೂಲ್ಯವಾಗಿದ್ದು ಕಾಲವು ಪ್ರಾಪ್ತವಾಗು ವುದಕ್ಕೆ ಮೊದಲು ಅವುಗಳನ್ನು ಅವರಿಂದ ಯಾವ ರೀತಿಯಿಂದಲೂ ತೆಗೆಯಲಾಗದು. ಹೀಗಿರಲು ತಂದೆಯು ಅವರಿಗಾಗಿ ನೇಮಿಸಿದ ಕಾರ್ಯಗಳನ್ನು ಅವರು ನೆರವೇರಿಸಿದ ಹೊರತು ಅಂದರೆ ಅವರೆಲ್ಲರೂ ಆ ರಾಜ್ಯಕ್ಕೆ ಯೋಗ್ಯರಾಗುವಂತೆ ಅವಶ್ಯವಾದ ಶಿಕ್ಷೆಯ ಹಾಗು ನಯಗೊಳಿಸುವಿಕೆಗಳ ಅನುಭವ ಗಳನ್ನು ಪಡೆಯುವವರೆಗೂ ಅಥವಾ ಅವರು ಮನಃಪೂರ್ವಕ ವಾಗಿ ತಮ್ಮ ಸಂಗತಿಗಳನ್ನು ಕರ್ತನ ಹಸ್ತ ಪರಿಪಾಲನೆಯಿಂದ ಹಿಂದೆಗೆದುಕೊಳ್ಳುವವರೆಗೂ ಅಥವಾ ಆತನ ಹೆಜ್ಜೆಯ ಜಾಡಿನಲ್ಲಿ ನಡೆಯಲು ನಿರಾಕರಿಸುವವರೆಗೂ ಅವರ ಜೀವವನ್ನು ಅವರಿಂದ ತೆಗೆಯಲಾಗದು.

## "ಆತನ ಸ್ವಂತ ಜನರು ಅತನನ್ನು ಅಂಗೀಕರಿಸಲಿಲ್ಲ ಆದರೆ......"

ಸುವರ್ಣಮಯವಾದ ಈ ನಮ್ಮ ಪಠ್ಯವಚನವು ನಮ್ಮ ಕರ್ತನನ್ನು ನಜರೇತಿನಲ್ಲಿ ತಿರಸ್ಕರಿಸಿದಾಗ ನೆರವೇರಲಿಲ್ಲ; ಆದರೆ ಇಸ್ರಾಯೇಲ್ ಜನಾಂಗವೆಲ್ಲವೂ ಅತನನ್ನು ತಿರಸ್ಕರಿಸಿದಾಗ ಇದು ನೆರವೇರಿತು. ಹೀಗಿರಲು, ಅಪೋಸ್ತಲನು ತೋರಿಸಿಕೊಟ್ಟಿರು ವಂತೆ, ಆ ಜನಾಂಗದವರೆಲ್ಲರೂ ಅತನನ್ನು ತಿರಸ್ಕರಿಸಿದಾಗ ಅಲ್ಲಿ ಅದಕ್ಕೆ ಕೆಲವು ವ್ಯಕ್ತಿಗಳು ಹೊರತಾಗಿದ್ದರು. ಆದುದರಿಂದ ಕರ್ತನು ಅವರನ್ನು ಜನಾಂಗವಾಗಿ ನಿರಾಕರಿಸಿದಾಗ ತನ್ನ ಶಿಷ್ಯರಾದ ಈ ನಂಬಿಗಸ್ತ ವ್ಯಕ್ತಿಗಳು ಆತನಿಂದ ಅಂಗೀಕರಿಸಲ್ಪಟ್ಟರು. ಅವರಿಗೆ ಮಕ್ಕಳೆಂಬ ಮನೆತನದ ಸದಸ್ಯರಾಗುವ ಸ್ವಾತಂತ್ರವು ಅನುಗ್ರಹಿಸಲ್ಪಟ್ಟು ಪಂಚಾಶತ್ತಮ ದಿನದಲ್ಲಿ ಅವರು ಪವಿತ್ರಾತ್ಮನ ಮೂಲಕವಾಗಿ ನೂತನ ಸ್ವಭಾವದಲ್ಲಿ ಹುಟ್ಟಿದವರಾಗಿ (ಅಂಕುರಿಸಲ್ಪಟ್ಟವರಾಗಿ) ಪುತ್ರಭಾವವನ್ನು (ಅಂದರೆ ಪುತ್ರರ ಅಧಿಕಾರವನ್ನು) ಪಡೆದರು.

ಶಾರೀರಿಕ ಸಂಬಂಧದ ಇಸ್ರಾಯೇಲ್ಯರಿಗಾದ ಈ ಅನುಭವಕ್ಕೆ ಇರುವ ಹೋಲಿಕೆಗಳನ್ನು ಹುಡುಕಬೇಕಾಗಿ ಬರುತ್ತದೆ; ಮತ್ತು ಹಾಗೆ ಮಾಡಿದಲ್ಲಿ ಇದಕ್ಕೆ ಸಮನಾದುವುಗಳು ನಿಜರೂಪದ ಇಸ್ರಾಯೇಲ್ಯರಲ್ಲಿ ಅಂದರೆ ಹೆಸರಿಗಾಗಿರುವ ಆತ್ಮಿಕ ಇಸ್ರಾಯೇಲ್ಯರಲ್ಲಿ ಇರುವುದನ್ನು ಸುಲಭವಾಗಿ ಕಂಡುಕೊಳ್ಳ ಬಹುದು. ತನ್ನ ಎರಡನೆಯ ಬರುವಿಕೆಯಲ್ಲಿ ನಮ್ಮ ಕರ್ತನು ಬಂದು ತೋರಿಕೆಗೆ ತನ್ನ ಜನರಂತಿರುವ ಕ್ರೈಸ್ತಸಮುದಾಯಕ್ಕೆ ಪ್ರತ್ಯಕ್ಷಪಡಿಸಿಕೊಳ್ಳುವನು; ಮತ್ತು ಪ್ರವಾದಿಗಳ ನುಡಿಗನುಸಾರವಾಗಿ ಆತನು ಮತ್ತೆ ತಿರಸ್ಕೃತನಾಗುವನು; ಆದರೆ ಎಲ್ಲರಿಂದಲೂ ಅಲ್ಲ. ಯೆಹೂದ್ಯರಲ್ಲಿ ಕೆಲವರು ಆತನನ್ನು ಸ್ವೀಕರಿಸಿ ಆತನ ಹೆಜ್ಜೆಯ ಜಾಡನ್ನು ಅನುಸರಿಸಲು ಸಿದ್ಧರಿದ್ದಂತೆಯೇ ಈ ದಿನಗಳಲ್ಲಿಯೂ ಈ ಮುಂದಿನ ಮಾತುಗಳು ಅನ್ವಯವಾಗುವ ಕೆಲವರು ಇರುವರು: "ನಿಮ್ಮ ಕಣ್ಣುಗಳು ಕಾಣುತ್ತವೆ, ನಿಮ್ಮ ಕಿವಿಗಳು ಕೇಳುತ್ತವೆ; ಆದುದರಿಂದ ನೀವು ಧನ್ಯರು." ಈಗ ಕರ್ತನನ್ನು ಅಂಗೀಕರಿಸುತ್ತಿರುವ ಆತ್ಮಿಕ ಮನೆತನದವರು ನಿಗಧಿತ ಕಾಲದಲ್ಲಿ ಒಂದು ವಿಶೇಷವಾದ ಆಶೀರ್ವಾದವನ್ನು ಅಂದರೆ ನಿಜರೂಪದ ಪಂಚಾಶತ್ತಮ ದಿನದ ಆಶೀರ್ವಾದವನ್ನು ಪಡೆಯುವರು; ಅದು ಅವರಿಗೆ ದೊರೆಯುವ ಪ್ರಭಾವ ಮಹಿಮೆಗಳು. ಈ ಸುವಾರ್ತಾ ಯುಗದಲ್ಲಿರುವ ಗೋದಿ ಕಾಳುಗಳೆಂಬ ವರ್ಗಕ್ಕೆ ಸೇರಿದವರು ಶೀಘ್ರವಾಗಿ ಆಶೀರ್ವದಿಸಲ್ಪಟ್ಟು ಮಾರ್ಪಾಡು ಹೊಂದಿ ಅವರು "ತಮ್ಮ ತಂದೆಯ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವರು." (ಮತ್ತಾಯ 13:43). ಹೀಗೆ ಕರ್ತನು ಶಾರೀರಿಕ ಹಾಗೂ ಆತ್ಮಿಕ ಇಸ್ರಾಯೇಲ್ಯರ ಮನೆತನದವರಿಬ್ಬರಿಗೂ ಎಡಹುವ ಕಲ್ಲಾಗುವವನು ಅದರೆ ಕೆಲವರಿಗೆ ಅಂದರೆ ನಂಬಿಗಸ್ತರಾದ ಪ್ರತಿಯೊಬ್ಬರಿಗೂ ಆಶೀರ್ವದಿಸುವವನಾಗುವನು. ಅವರು ಖಚಿತವಾಗಿ ಆಯಲ್ಪಟ್ಟವರೂ, ಆತನ ದೇಹದ ಅಂಗಗಳೂ, ಆತನ ಮದಲಗಿತ್ತಿಯೂ ಆಗುವರು. ಈಗಿನ ಕಾಲದಲ್ಲಿ ಅವರು ಅಭಿಷೇಕ ಹೊಂದುವುದರಲ್ಲಿಯೂ ಬಾಧೆಯನ್ನು ಅನುಭವಿಸುವುದರಲ್ಲಿಯೂ ಆತನಿಗೆ ಜೊತೆಗಾರರಾಗಿರುವುದು ಮಾತ್ರವಲ್ಲದೆ ಮುಂದೆ ಬರುವ ಕಾಲದಲ್ಲಿನ ಮಹಿಮೆಯಲ್ಲಿಯೂ ಅಂದರೆ ಭೂಲೋಕದ ಎಲ್ಲಾ ಕುಲಗಳನ್ನು, ಅವರು ಇಚ್ಛಿಸಿದಲ್ಲಿ, ದೇವರ ವಿಷಯವಾದ ಪರಿಜ್ಞಾನ ಹೊಂದಿ ದೇವಾನುಗ್ರಹಕ್ಕೆ ಹಿಂದಿರುಗುವ ಸದವಕಾಶವನ್ನು ಪಡೆದು ಆಶೀರ್ವದಿಸಲ್ಪಡುವ ಕಾರ್ಯದಲ್ಲಿಯೂ ಆತನಿಗೆ ಜೊತೆಗಾರರಾಗುವರು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 30 | ಕಪೆರ್ನೌಮಿನ ಹತ್ತಿರದ ಗಲಿಲಾಯ ಸಮುದ್ರ | ಸೀಮೋನ ಅಂದ್ರೆಯ ಮತ್ತು ಯಾಕೋಬ ಯೋಹಾನರನ್ನು ಕರೆದುದು | 4:18–22 | 1:16–20 | 5:1–11 | –– |

## ಮತ್ತಾಯ 4:18–22

ಹೀಗಿರುವಲ್ಲಿ, ಯೇಸು ಗಲಿಲಾಯ ಸಮುದ್ರದ ಬಳಿಯಲ್ಲಿ ತಿರುಗಾಡುತ್ತಿರುವಾಗ ಅಣ್ಣತಮ್ಮಂದಿರಿಬ್ಬರು ಬಲೆಬೀಸುವುದನ್ನು ಕಂಡನು; ಅವರು ಪೇತ್ರನೆನಿಸಿಕೊಳ್ಳುವ ಸೀಮೋನ ಮತ್ತು ಅವನ ತಮ್ಮನಾದ ಅಂದ್ರೆಯ. ಅವರು ಬೆಸ್ತರು. ಸಮುದ್ರದಲ್ಲಿ ಬಲೆ ಬೀಸುತಿದ್ದರು. ಅವರಿಗೆ ಆತನು––ನನ್ನ ಹಿಂದೆ ಬನ್ನಿರಿ; ಮನುಷ್ಯರನ್ನು ಹಿಡಿಯುವ ಬೆಸ್ತರನ್ನಾಗಿ ನಿಮ್ಮನ್ನು ಮಾಡುವೆನು ಎಂದು ಹೇಳುತ್ತಲೇ ಅವರು ತಮ್ಮ ಬಲೆಗಳನ್ನು ಬಿಟ್ಟು ಆತನ ಹಿಂದೆ ಹೋದರು. ಯೇಸು ಅಲ್ಲಿಂದ ಮುಂದೆ ಹೋಗಿ ಇನ್ನಿಬ್ಬರು ಅಣ್ಣತಮ್ಮಂದಿರನ್ನು ಅಂದರೆ ಜೆಬೆದಾಯನ ಮಗನಾದ ಯಾಕೋಬನನ್ನೂ ಅವನ ತಮ್ಮನಾದ ಯೋಹಾನನ್ನೂ ಕಂಡನು; ಇವರು ತಮ್ಮ ತಂದೆಯಾದ ಜೆಬೆದಾಯನ ಕೂಡ ದೋಣಿಯಲ್ಲಿ ತಮ್ಮ ಬಲೆಗಳನ್ನು ಸರಿಮಾಡುತ್ತಿದ್ದರು. ಅತನು ಇವರನ್ನೂ ಕರೆದನು. ಕೂಡಲೆ ಅವರು ದೋಣಿಯನ್ನೂ ತಮ್ಮ ತಂದೆಯನ್ನೂ ಬಿಟ್ಟು ಆತನನ್ನು ಹಿಂಬಾಲಿಸಿದರು.

## ಮಾರ್ಕ 1:16–20

ಹೀಗಿರುವಲ್ಲಿ ಆತನು ಗಲಿಲಾಯ ಸಮುದ್ರದ ಬಳಿಯಲ್ಲಿ ಹೋಗುತ್ತಿರುವಾಗ ಸೀಮೋನನೂ ಸೀಮೋನನ ತಮ್ಮನಾದ ಅಂದ್ರೆಯನೂ ಸಮುದ್ರದಲ್ಲಿ ಬಲೆ ಬೀಸುವುದನ್ನು ಕಂಡನು. ಅವರು ಬೆಸ್ತರು. ಯೇಸು ಅವರಿಗೆ––ನನ್ನ ಹಿಂದೆ ಬನ್ನಿರಿ; ಮನುಷ್ಯರನ್ನು ಹಿಡಿಯುವ ಬೆಸ್ತರನ್ನಾಗಿ ನಿಮ್ಮನ್ನು ಮಾಡುವೆನು ಎಂದು ಹೇಳುತ್ತಲೇ ಅವರು ತಮ್ಮ ಬಲೆಗಳನ್ನು ಬಿಟ್ಟು ಆತನ ಹಿಂದೆ ಹೋದರು. ಇನ್ನೂ ಸ್ವಲ್ಪ ಮುಂದೆ ಹೋಗಿ ಜೆಬೆದಾಯನ ಮಗನಾದ ಯಾಕೋಬನನ್ನೂ ಅವನ ತಮ್ಮನಾದ ಯೋಹಾನನ್ನೂ ಕಂಡನು. ಇವರು ದೋಣಿಯಲ್ಲಿ ತಮ್ಮ ಬಲೆಗಳನ್ನು ಸರಿಮಾಡುತ್ತಿದ್ದರು. ಕೂಡಲೆ ಇವರನ್ನೂ ಕರೆದನು. ಅವರು ತಮ್ಮ ತಂದೆಯಾದ ಜೆಬೆದಾಯನನ್ನು ಕೂಲಿಯಾಳುಗಳ ಸಂಗಡ ದೋಣಿಯಲ್ಲಿ ಬಿಟ್ಟು ಆತನ ಹಿಂದೆ ಹೋದರು.

## ಲೂಕ 5:1–11

ಒಂದಾನೊಂದು ದಿವಸ ಜನರು ಒತ್ತಾಗಿ ಬಂದು ಆತನ ಮೇಲೆ ಬಿದ್ದುಕೊಂಡು ದೇವರ ವಾಕ್ಯವನ್ನು ಕೇಳುತ್ತಿರಲು ಗೆನೇಜರೆತ್ ಕೆರೆಯ ಅಂಚಿನಲ್ಲಿ ನಿಂತಿದ್ದ ಆತನು ಆ ಕೆರೆಯ ದಡದಲ್ಲಿ ಎರಡು ದೋಣಿಗಳನ್ನು ಕಂಡನು. ಬೆಸ್ತರು ಅವುಗಳೊಳಗಿಂದ ಹೊರಗೆ ಬಂದು ತಮ್ಮ ಬಲೆಗಳನ್ನು ತೊಳೆಯುತ್ತಿದ್ದರು. ಆ ದೋಣಿಗಳಲ್ಲಿ ಸೀಮೋನನ ಒಂದು ದೋಣಿಯನ್ನು ಆತನು ಹತ್ತಿ ದಡದಿಂದ ಸ್ವಲ್ಪ ದೂರಕ್ಕೆ ನೂಕಬೇಕೆಂದು ಅವನನ್ನು ಕೇಳಿಕೊಂಡನು. ತರುವಾಯ ಆತನು ಕೂತುಕೊಂಡು ದೋಣಿಯೊಳಗಿಂದಲೇ ಆ ಜನರ ಗುಂಪಿಗೆ ಉಪದೇಶ ಮಾಡಿದನು. ಮಾತಾಡುವುದನ್ನು ಮುಗಿಸಿದ ಮೇಲೆ ಸೀಮೋನನಿಗೆ–– ಆಳವಾದ ಸ್ಥಳಕ್ಕೆ ದೋಣಿಯನ್ನು ನಡಿಸಿ ಮೀನು ಬೇಟೆಗಾಗಿ ನಿಮ್ಮ ಬಲೆಗಳನ್ನು ಹಾಕಿರಿ ಎಂದು ಹೇಳಿದನು. ಅದಕ್ಕೆ ಸೀಮೋನನು––ಗುರುವೇ, ನಾವು ರಾತ್ರಿಯೆಲ್ಲಾ ಪ್ರಯಾಸ ಪಟ್ಟರೂ ಏನೂ ಸಿಕ್ಕಲಿಲ್ಲ; ಆದರೆ ನಿನ್ನ ಮಾತಿನ ಮೇಲೆ ಬಲೆಗಳನ್ನು ಹಾಕುತ್ತೇವೆ ಅಂದನು. ಹಾಕಿದ ಮೇಲೆ ಮೀನುಗಳು ರಾಶಿರಾಶಿಯಾಗಿ ಸಿಕ್ಕಿಕೊಂಡು ಅವರ ಬಲೆಗಳು ಹರಿದುಹೋಗುತ್ತಿದ್ದವು. ಆಗ ಅವರು ಮತ್ತೊಂದು ದೋಣಿಯಲ್ಲಿದ್ದ ತಮ್ಮ ಪಾಲುಗಾರರಿಗೆ––ನೀವು ಬಂದು ನಮಗೆ ನೆರವಾಗಬೇಕೆಂದು ಸನ್ನೆ ಮಾಡಿದರು. ಅವರು ಬಂದು ಆ ಎರಡು ದೋಣಿಗಳಲ್ಲಿ ಮೀನುಗಳನ್ನು ತುಂಬಿಸಲು ಅವು ಮುಳುಗುವ ಹಾಗಾದವು. ಸೀಮೋನ್ ಪೇತ್ರನು ಇದನ್ನು ಕಂಡು ಯೇಸುವಿನ ಮೊಣಕಾಲಿಗೆ ಬಿದ್ದು––ಸ್ವಾಮೀ, ನಾನು ಪಾಪಾತ್ಮನು; ನನ್ನನ್ನು ಬಿಟ್ಟುಹೋಗಬೇಕು ಅಂದನು. ಯಾಕೆಂದರೆ ಅವನಿಗೂ ಅವನ ಸಂಗಡ ಇದ್ದವರೆಲ್ಲರಿಗೂ ತಾವು ಹಿಡಿದ ಮೀನುಗಳ ನಿಮಿತ್ತ ವಿಸ್ಮಯ ಹಿಡಿದಿತ್ತು; ಸೀಮೋನನ ಪಾಲುಗಾರರಾಗಿದ್ದಂಥ ಜೆಬೆದಾಯನ ಮಕ್ಕಳಾದ ಯಾಕೋಬ ಯೋಹಾನರೂ ಹಾಗೆಯೇ ವಿಸ್ಮಯಪಟ್ಟರು. ಯೇಸು ಸೀಮೋನನಿಗೆ– ಅಂಜಬೇಡ, ಇಂದಿನಿಂದ ನೀನು ಮನುಷ್ಯರನ್ನು ಹಿಡಿಯುವವನಾಗಿರುವಿ ಎಂದು ಹೇಳಿದನು. ಅವರು ತಮ್ಮ ದೋಣಿಗಳನ್ನು ದಡಕ್ಕೆ ತಂದು ಎಲ್ಲವನ್ನೂ ಬಿಟ್ಟು ಆತನನ್ನು ಹಿಂಬಾಲಿಸಿದರು.

# ಮನುಷ್ಯರನ್ನು ಹಿಡಿಯುವ ಬೆಸ್ತರು

**ರಿಪ್ರಿಂಟ್ಸ್, ಪುಟ 3307**

## ಲೂಕ 5:1–11

**"ನೀವು ನನ್ನ ವಾಕ್ಯದಲ್ಲಿ ನೆಲೆಗೊಂಡವರಾದರೆ ನಿಜವಾಗಿ ನನ್ನ ಶಿಷ್ಯರಾಗಿದ್ದು....." ಯೋಹಾನ 8:31**

ಕಪೆರ್ನೌಮು ಗಲಿಲಾಯ ಸಮುದ್ರ ತೀರದ ಹತ್ತಿರವಿವುದು. ನಾವು ಈ ಪಾಠದ ಮೂಲಕವಾಗಿ ತೀರ್ಮಾನಕ್ಕೆ ಬರುವ ಹಾಗೆ, ಗಲಿಲಾಯ ಸಮುದ್ರವು ಒಳ್ಳೆ ಜಾತಿಯ ಮೀನುಗಳಿರುವ ಒಂದು ಸೊಗಸಾದ ಸಣ್ಣ ಸರೋವರವಾಗಿದ್ದು ನಮ್ಮ ಕರ್ತನ ಜೊತೆಗಿನ ಸಂಬಂಧದ ದೆಸೆಯಿಂದ ಅದಕ್ಕೆ ಲೋಕಾದ್ಯಂತ ವಿಶೇಷವಾದ ಮನ್ನಣೆ ಗೌರವಗಳು ದೊರೆತಿವೆ. ನಜರೇತಿನಲ್ಲಿ ತಾನು ತಿರಸ್ಕೃತನಾದ ಬಳಿಕ ಯೇಸುವು ಕಪೆರ್ನೌಮಿನ ಈ ಸಮುದ್ರ ತೀರಕ್ಕೆ ಬಂದನು. ಇಲ್ಲಿ ಅವನು ಭಿನ್ನವಾದ ರೀತಿಯಲ್ಲಿ ಅಂಗೀಕರಿಸಲ್ಪಟ್ಟನು. ಕರ್ತನ ಮಾತುಗಳನ್ನು ಕೇಳಲು ಜನರು ಒತ್ತಾಗಿ ಆತನ ಮೇಲೆ ಬಿದ್ದುಕೊಂಡಿರುತ್ತಿದ್ದರು. ತನ್ನ ಮತ್ತು ಅವರ ಸೌಕರ್ಯದ ಸಲುವಾಗಿ ಯೇಸುವು ಜನರಿಗೆ ಫಲಕಾರಿಯಾಗಿ ಉಪದೇಶಮಾಡಲು ಸೀಮೋನ ಪೇತ್ರನಿಗೆ ಸೇರಿದ ದೋಣಿಯಲ್ಲಿ ಹತ್ತಿಕುಳಿತನು. ನಿಸ್ಸಂದೇಹವಾಗಿ ಜನರು ದಡದ ಮೇಲೆ ಕುಳಿತೋ ಅಥವಾ ನಿಂತುಕೊಂಡೋ ಇದ್ದರು.

ಸುವಾರ್ತೆಗಳು ನೀಡಿರುವ ವಿವರಗಳಲ್ಲಿ ನಮ್ಮ ಕರ್ತನು ಮಾಡಿದ ಉಪದೇಶದ ಬಹು ಭಾಗಗಳು ಸಂರಕ್ಷಿಸಲ್ಪಡದೆ ಇರುವುದು ನಮಗೆ ಅಗಾಗ್ಗೆ ಆಶ್ಚರ್ಯಪಡುವಂತೆ ಮಾಡಿದೆ. ನಮಗೆ ದೊರೆತಿರುವುದೆಲ್ಲಾ ಅಪೂರ್ಣವಾದ ತುಣುಕುಗಳಾಗಿದ್ದು, ಅದರಲ್ಲಿ ಪ್ರಮುಖವಾದುದು ಪರ್ವತ ಪ್ರಸಂಗ. ಯೇಸುವು ಮಾಡಿದ ಇತರ ಉಪದೇಶದ ವಿವರಗಳ ಬಗ್ಗೆ ಹೇಳುವುದಾದರೆ ಅವು ಆತನು ಹೇಳಿದ ಸಾಮ್ಯಗಳ ಮತ್ತು ಗಾದೆ ಒಗಟುಗಳ ಸಂಕ್ಷಿಪ್ತವಾದ ಸಂಗ್ರಹಗಳು. ಇದಕ್ಕೆ ದೃಷ್ಟಾಂತವಾಗಿ, ಪರಲೋಕದಿಂದ ಇಳಿದುಬಂದ ರೊಟ್ಟಿಯು ನಾನೇ; ಇದನ್ನು ಯಾವನಾದರೂ ತಿಂದರೆ ಅವನು ಎಂದಿಗೂ ಸಾಯುವುದಿಲ್ಲ ವೆಂದು ಆತನು ಸಾರಿ ಹೇಳಿರುವುದನ್ನು ಗಮನಿಸಿ. ಇದನ್ನು ಕೇಳಿದ ಅನೇಕರು–ಇದು ಒಂದು ಕಠಿಣವಾದ ಮಾತು ಎಂದು ಹೇಳಿ ಆತನೊಡನೆ ಸಂಚಾರ ಮಾಡುವುದನ್ನು ಬಿಟ್ಟರು. ನಮಗೆ ದೊರೆತಿರುವ ಸುವಾರ್ತೆಯ ಬೋಧನೆಗಳಲ್ಲಿನ ಪ್ರಮುಖವಾದ ಅಂಶಗಳಾದ ಈಡು ನೀಡಿರುವ ವಿಷಯ, (ಯೇಸುವಿನ) ರಕ್ತದ ಮೇಲಿನ ನಂಬಿಕೆಯ ಮೂಲಕವಾಗಿ ನಮಗೆ ಉಂಟಾಗುವ ನೀತಿ ನಿರ್ಣಯ, ನಮಗೆ ದೊರೆಯುವ ಪುತ್ರರ ಪದವಿ, ಹೊಸದಾಗಿ ಹುಟ್ಟುವಿಕೆ (ಅಂಕುರಿಸುವಿಕೆ), ಪುನರುತ್ಥಾನ ಹಾಗು ಮೊದಲನೆ ಪುನರುತ್ಥಾನ ಮತ್ತು ನಂತರದಲ್ಲಾಗುವ ಬೇರೆ ಪುನರುತ್ಥಾನಗಳಿಗಿರುವ ವ್ಯತ್ಯಾಸಗಳು, ಮುಂತಾದವುಗಳು, ಅಪೋಸ್ತಲರು ಬರೆದ ಪತ್ರಿಕೆಗಳ ಮೂಲಕವಾಗಿಯೂ ಮತ್ತು ಅಪೋಸ್ತಲರ ಕೃತ್ಯಗಳಲ್ಲಿ ನೀಡಿರುವ ಅವರ ಉಪದೇಶದ ವಿವರಗಳ ಮೂಲಕವಾಗಿಯೂ ಬಂದಿರುವಂಥವುಗಳು.

ಇದು ಹೀಗಿರುವುದು ಏಕೆ, ಮುಂದಿನ ಜೀವಿತಕ್ಕೂ ಭಕ್ತಿಗೂ ಬೇಕಿರುವ ಪ್ರಾಮುಖ್ಯವಾದ ಆಜ್ಞೋಪದೇಶಗಳನ್ನು ನಮ್ಮ ಕರ್ತನ ಮಾತಿನ ಮೂಲಕವಾಗಿ ಏಕೆ ನಮಗೆ ದೊರಕ ಬಾರದು ಎಂದು ನಾವು ಮೊದಮೊದಲಲ್ಲಿ ವಿಸ್ಮಯ ಪಡುತ್ತಿದ್ದೆವು. ಆದರೆ ಮಾನವ ಕುಲದಲ್ಲಿ ಯಾರಾದರೂ ಪುತ್ರರಾಗಿ ತಂದೆಯಿಂದ ಅಂಗೀಕರಿಸಲ್ಪಟ್ಟು ಪುತ್ರಭಾವವನ್ನು ಪಡೆಯು ವುದಕ್ಕೆ ಮೊದಲು ನಮ್ಮ ಕರ್ತನು ಈಡು ಬೆಲೆಯನ್ನು ನೀಡಬೇಕಾ ಗಿದ್ದುದು ಅಗತ್ಯವಾಗಿತ್ತೆಂಬುದು ಗ್ರಹಿಕೆಗೆ ಬಂದಂದಿನಿಂದ ನಮಗೆ ಈ ವಿಷಯವು ಸ್ಪಷ್ಟವಾಗಿ ಅರ್ಥವಾಯಿತು. ಈ ಸನ್ನಿವೇಶವನ್ನು ಇದು ಪೂರ್ಣವಾಗಿ ವಿವರಿಸುತ್ತದೆ, ಏನೆಂದರೆ ಅದು ಪುತ್ರಭಾವವನ್ನು ಪಡೆಯದೆ ನಮಗೆ ಆತ್ಮಿಕ ಸಂಗತಿಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ ಮತ್ತು ಹೀಗಾಗಿಯೇ ಅಂದು ಯೇಸುವು ತಿಳಿಸಿದಂತೆ ತನ್ನ ಕಾಲದಲ್ಲಿ ಪರಲೋಕದ ಕಾರ್ಯಗಳ ವಿಷಯವಾಗಿ ಕೇಳಿದವರಿಗೆ ಅವುಗಳು ಸಾಮ್ಯಗಳು ಹಾಗೂ ಗಾದೆಒಗಟುಗಳಂತೆ ಮರೆಯಾಗಿದ್ದವು ಎಂಬುದು. ದೃಷ್ಟಾಂತವಾಗಿ ಹೇಳುವುದಾದರೆ, ಹೊಸದಾಗಿ ಹುಟ್ಟುವಿಕೆಯ ವಿಷಯವಾಗಿ ನಿಕೋದೇಮನಿಗೆ ಯೇಸುವು ಮಾಡಿದ ಉಪದೇಶವು ಅವನಿಗೆ ಅರ್ಥಮಾಡಿಕೊಳ್ಳಲಾಗಲಿಲ್ಲ. ಈ ಸಂಬಂಧದಲ್ಲಿ ನಮ್ಮ ಕರ್ತನು ಆ ವಿಷಯವನ್ನು ಗಮನಿಸಿ, ತಾನು ಬೋಧಿಸಿದುದು ಭೂಲೋಕದ ಕಾರ್ಯಗಳ ವಿಷಯವಾಗಿ ಪರಲೋಕದ ಕಾರ್ಯಗಳ ವಿಷಯವಾಗಿ ಅಲ್ಲವೆಂದು ಹೀಗೆ ಹೇಳಿದ್ದನು, "ನಾನು ಭೂಲೋಕದಲ್ಲಿ ನಡೆಯುವ ಕಾರ್ಯಗಳನ್ನು ಕುರಿತು ಹೇಳುವಾಗ ನೀವು ನಂಬದೆಹೋದರೆ ಪರಲೋಕದ ಕಾರ್ಯಗಳನ್ನು ಕುರಿತು ನಿಮಗೆ ಹೇಳಿದರೆ ಹೇಗೆ ನಂಬೀರಿ?" (ಯೋಹಾನ 3:12) ತನ್ನನ್ನು ಕೇಳುತ್ತಿರುವವರು ಪರಲೋಕದ ಕಾರ್ಯಗಳ ವಿಷಯವಾಗಿ ಅರ್ಥಮಾಡಿಕೊಳ್ಳಲು ಸಿದ್ಧರಿಲ್ಲವೆಂಬುದನ್ನು ಕಂಡ ನಮ್ಮ ಕರ್ತನು ತನ್ನ ಉಪದೇಶಗಳನ್ನು, ಮುಖ್ಯವಾಗಿ ಭೂಲೋಕದ ಕಾರ್ಯಗಳ ವಿಷಯವಾಗಿ, ಸಾಮ್ಯಗಳ ಮತ್ತು ಗಾದೆಒಗಟುಗಳ ರೂಪದಲ್ಲಿ ಹೇಳಿದ್ದನು. ನಂತರದಲ್ಲಿ ಪವಿತ್ರಾತ್ಮನು ಆತನ ನಂಬಿಗಸ್ತರಿಗೆ ಇವುಗಳನ್ನು ಪ್ರಕಟಪಡಿಸಿದನು.

### ಪ್ರಾಕೃತ ಮನುಷ್ಯನು ಆತ್ಮಿಕ ಸಂಗತಿಗಳನ್ನು ಗ್ರಹಿಸಲಾರನು.

ಇದು ನಮ್ಮ ಕರ್ತನ ಸೇವೆಯ ವಿಷಯವಾಗಿ ಒಂದು ವಿಶಾಲ ನೋಟವನ್ನು ನೀಡುತ್ತದೆ: ಅದೇನೆಂದರೆ, ಮೊದಲನೆಯದಾಗಿ, ಪ್ರಾಕೃತ (ಪ್ರಾಪಂಚಿಕ) ಮನುಷ್ಯನಿಗೆ ಅವನು

ಅರ್ಥಮಾಡಿಕೊಳ್ಳುವ ವಿಷಯಗಳನ್ನು ಬೋಧಿಸುವುದು; ಎರಡನೆಯದಾಗಿ, ಪ್ರಾಕೃತ ಮನುಷ್ಯನ ವ್ಯಾಧಿಗಳನ್ನು ಗುಣಪಡಿಸುವುದು ಮತ್ತು ಹೀಗೆ ಪಂಚಾಶತ್ತಮ ದಿನದಲ್ಲಿ ಆರಂಭವಾಗಲಿರುವ ಆತ್ಮಿಕವಾದ ಕಾರ್ಯಗಳಿಗೆ ವಿಶಾಲವಾದ ಒಂದು ತಳಹದಿಯನ್ನು ಹಾಕುವುದು ಹಾಗು ಅದನ್ನು ಸುವಾರ್ತಾಯುಗದಲ್ಲಿ ತನ್ನ ಪ್ರತಿನಿಧಿಗಳಾದ ಅಪೋಸ್ತಲರ ಮೂಲಕವಾಗಿ ಮತ್ತು ಅವರ ಮುಖಾಂತರವಾಗಿ ತನ್ನ ಮಾತನ್ನು ನಂಬಿದವರ ಮೂಲಕವಾಗಿ ಈ ಕಾರ್ಯಗಳನ್ನು ನಡೆಸಿ ಪೂರ್ಣಗೊಳಿಸುವುದು. ಈ ಸುವಾರ್ತಾಯುಗದ ಪರ್ಯಂತರ ಕರ್ತನು ತಾನೇ "ತನ್ನ ದೇಹವೂ" "ತನ್ನ ಸಹೋದರರೂ" ಎನಿಸಿಕೊಳ್ಳುವ ಸಭೆಗೆ ಬೋಧಕನಾಗಿರುವನು. ನಮಗೆ ಬೇಕಿರುವ ಆಜ್ಞೋಪದೇಶಗಳ ಪ್ರತಿಯೊಂದು ಅಂಶಗಳಿಗೂ ಅತನೇ ಲಕ್ಷ್ಯಕೊಟ್ಟು ದಯಪಾಲಿಸುತ್ತಿರುವನು. ಅಂದರೆ ಸತ್ಯವೆಂಬ (ಬೊಕ್ಕಸದೊಳಗಿಂದ) "ಹೊಸ ಮತ್ತು ಹಳೆಯ ಸಂಗತಿಗಳನ್ನು" ಆಹಾರವಾಗಿ ಉಣಬಡಿಸುತ್ತಿರುವನು. ಆತನು ಇನ್ನೂ ಬೋಧಕನಾಗಿಯೇ ಇರುವನು. ನಾವು ಯಾವುದನ್ನು ಅಪೋಸ್ತಲರ ಮೂಲಕವಾಗಿ ಪಡೆದಿರುವೆವೋ ಅದು ಕೇವಲ ಆತನ ಸಂದೇಶವೇ ಆಗಿರುವುದು, ಅದು ಅಪೋಸ್ತಲರದಲ್ಲ. ಹಾಗೂ ಯಾರಾರು ಕರ್ತನ ಹೆಸರಿನಲ್ಲಿ ಮಾತನಾಡುವರೋ ಅವರು ಕೇವಲ ಆತನ ಪ್ರತಿನಿಧಿಗಳು ಮತ್ತು ರಾಯಭಾರಿಗಳಾಗಿ ಮಾತನಾಡಲು ಅಪ್ಪಣೆಯನ್ನು ಹೊಂದಿದವರು. ಅವರು ಮಾತನಾಡುವಾಗ ಕರ್ತನ ಮಾತಿನ ಅಧಿಕಾರವನ್ನು ಸೂಚಿಸಿ ಇಲ್ಲವೇ ಯಾರ ಮಾತುಗಳನ್ನು ಹೇಳಲು ತಾನು ಪ್ರೇರಿತನಾಗಿ ಅಥವಾ ಮಾರ್ಗದರ್ಶನ ಪಡೆದಿರುವನೋ ಅದನ್ನು ಒಟ್ಟಾರೆ ಸೂಚಿಸಿ ಹೇಳಬೇಕು; ಅಂದರೆ ಯೂದನ ಸ್ಥಾನವನ್ನು ತೆಗೆದುಕೊಂಡ ಪೌಲನು ಸಹಿತವಾಗಿ ಹನ್ನೆರಡು ಅಪೋಸ್ತಲರ ಅಧಿಕಾರವನ್ನು ಸೂಚಿಸಿ ಹೇಳಬೇಕು.

ಈ ನಮ್ಮ ಪಾಠದ ವಿಷಯವು ಆರಂಭವಾಗುವ ಸಮಯದಲ್ಲಿ ನಮ್ಮ ಕರ್ತನು ಒಂದು ವರುಷಗಳ ಕಾಲ, ಮೊದಲು ಯೂದಾಯದಲ್ಲಿಯೂ ಹಾಗು ನಂತರದಲ್ಲಿ ಗಲಿಲಾಯದಲ್ಲಿಯೂ, ಬೋಧಿಸುವುದರಲ್ಲಿ ತೊಡಗಿದ್ದ ಸಂಭವವಿದೆ. ಆತನಿಗೆ ಆಗಲೇ ನಮ್ಮ ಪಾಠದಲ್ಲಿ ತಿಳಿಸಲಾದ ಪೇತ್ರ ಅಂದ್ರೆಯ ಯಾಕೋಬ ಮತ್ತು ಯೋಹಾನರೆಂಬ ಈ ಬೆಸ್ತರ ಪರಿಚಯವಿದ್ದುದು ಸ್ಪಷ್ಟ. ಇದಕ್ಕೆ ಮುಂಚಿನ ಒಂದು ಸಂದರ್ಶನದಲ್ಲಿ ನಮ್ಮ ಕರ್ತನು ಸೀಮೋನನಿಗೆ ಪೇತ್ರನೆಂಬ ಅಡ್ಡಹೆಸರನ್ನು ನೀಡಿದ್ದ ಸಂಭವವಿರುವುದು ಈ ಪಾಠದಿಂದ ಕಂಡುಬರುತ್ತದೆ. ಬೆಸ್ತರಾದ ಈ ಮನುಷ್ಯರು ಇತರ ಸಂದರ್ಭದಲ್ಲಿ ಯೇಸುವನ್ನು ಸಂಧಿಸಿ ಆತನ ಉಪದೇಶವನ್ನು ಕೇಳಿ ಸಾಮಾನ್ಯವಾದ ಒಂದು ಅರ್ಥದಲ್ಲಿ ಅವರು ಆತನ ಶಿಷ್ಯರಾಗಿದ್ದಿರುವ ಅಂದರೆ ಆತನ ಹಿಂಬಾಲಕರಾಗಿ ಅತನನ್ನು ನಂಬಿ ಆತನ ಬೋಧನೆಗಳನ್ನು ಪ್ರತಿಪಾದಿಸುವವರಾಗಿದ್ದ ಸಂಭವವಿದೆ. ಹೀಗಿರಲು ಈಗ ನಮ್ಮ ಕರ್ತನಿಗೆ ಹನ್ನೆರಡು ಅಪೋಸ್ತಲರನ್ನು ಆದುಕೊಳ್ಳುವ ಸಮಯ ಬಂದಿತ್ತು. ಅವರು ಸದಾಕಾಲವೂ ಆತನೊಡನಿದ್ದು ಆತನು ಮಾಡಿದ ಅದ್ಭುತಗಳನ್ನು ನೋಡಿ ಆತನ ಬೋಧನೆಗಳನ್ನು ಕೇಳಿ ಆತನು ನುಡಿದ ಮತ್ತು ನಡೆಸಿದ ಎಲ್ಲಾ ಸಂಗತಿಗಳಿಗೆ ಅವರು ಸಾಕ್ಷಿಯಾಗಬೇಕಿತ್ತು. ಇದಾದ ನಂತರ ಮುಂದೆ ಅವರು ಸೂಕ್ತವಾದ ಸಮಯದಲ್ಲಿ ಅತನ ವಿಶೇಷ ಪ್ರತಿನಿಧಿಗಳಾಗಿ ಸೇವೆಮಾಡಿ ನಮಗೂ ಮತ್ತು ಮುಂದೆ ಆತನ ಹಿಂಬಾಲಕರಾಗುವವರಿಗೂ ಆತನ ಸೇವೆಯ ವಿಷಯವಾಗಿ ಖಚಿತವಾಗಿಯೂ ಸತ್ಯಭರಿತವಾಗಿಯೂ ಇರುವ ವಿವರಗಳನ್ನು ನೀಡಲು ಸಮರ್ಥರಾಗಿರಬೇಕಿತ್ತು.

ದಡದ ಮೇಲಿದ್ದ ಗುಂಪಿಗೆ ದೋಣಿಯಲ್ಲಿ ಕುಳಿತು ಬೋಧಿಸಿದ ನಂತರ ಆ ದೋಣಿಯ ಮಾಲಿಕರಾದ ಸೀಮೋನ ಅಂದ್ರೆಯರಿಗೆ ಯೇಸುವು ದೋಣಿಯನ್ನು ಆಳವಾದ ಸ್ಥಳಕ್ಕೆ ನಡೆಸಿಕೊಂಡು ಹೋಗಿ ಮೀನಿಗಾಗಿ ಬಲೆಬೀಸಲು ಸಲಹೆ ಮಾಡಿದನು. ಆದರೆ ಆ ದಿನವು ಅವರಿಗೆ ಪ್ರಯೋಜನ ಕಾರಿಯಲ್ಲವಾಗಿದ್ದರಿಂದ ಅಥವಾ ಆ ಸಮಯದಲ್ಲಿ ಕೆರೆಯ ಆ ಭಾಗದಲ್ಲಿ ಕೆಲವು ಕಾರಣಗಳಿಂದ ಮೀನುಗಳು ಇಲ್ಲದಿರಲಾಗಿ ತಾನೂ ಮತ್ತು ತನ್ನ ಜೊತೆಗಾರರು ರಾತ್ರಿಯೆಲ್ಲಾ ಕಷ್ಟಪಟ್ಟರೂ ಏನೂ ಸಿಕ್ಕಲಿಲ್ಲವಾದ್ದರಿಂದ ಪೇತ್ರನು ಕರ್ತನಿಗೆ ಇದು ಉಪಯೋಗವಾಗಲಾರದೆಂದು ತಿಳಿಸಿದನು. ಹೀಗಿದ್ದರೂ ಕರ್ತನನ್ನು ಮೆಚ್ಚಿಸುವುದಕ್ಕಾಗಿ ಆತನ ಸಲಹೆಯಂತೆ ಮಾಡಿದರು. ಆವರು ಬಲೆಯಲ್ಲಿದ್ದುದನ್ನು ಕೂಡಿಸಿಕೊಳ್ಳಲು ಪ್ರಾರಂಬಿಸಿದಾಗ ಅದು ಬಾರವಾಗಿ ದೋಣಿ ಹಿಡಿಸಲಾರದಷ್ಟು ಮೀನುಗಳಿದ್ದುದು ಅವರಿಗೆ ಕಂಡುಬಂತು. ಬೇರೆ ದೋಣಿಯಲ್ಲಿದ್ದ ಅವರ ಪಾಲುಗಾರರಿಗೆ ಸನ್ನೆಮಾಡಿ ಅವರು ಬಂದು ಕೆಲವು ಮೀನುಗಳನ್ನು ಸಂರಕ್ಷಿಸಿಕೊಳ್ಳಲು ತಮಗೆ ಸಹಾಯ ಮಾಡುವಂತೆ ಬೇಡಿಕೊಂಡರು. ಆ ಪಾಠದ ಉದ್ದೇಶವು ಪರಿಣಾಮಕಾರಿಯಾಗಿ ನೆರವೇರಿತ್ತು; ಇಂಥ ಸಂದರ್ಭಗಳಲ್ಲಿ ಈ ಪರಿಣಾಮ ಉಂಟಾಗುವಂತೆ ಮಾಡುವುದು ಸಾಮಾನ್ಯವಾದ ಮನುಷ್ಯನಿಗೆ ಸಾಧ್ಯವಾಗದೆಂದು ಅರಿತು ಸೀಮೋನ ಪೇತ್ರನು ಆ ಕ್ಷಣವೇ ಕರ್ತನ ಮುಂದೆ ತನ್ನ ಮೋಣಕಾಲಿನ ಮೇಲೆ ಬಿದ್ದನು.

## ಉತ್ಸಾಹಬಲಗಳು ಕರ್ತನಿಗೆ ಪ್ರಿಯ

ಸೀಮೋನನ ಬಗ್ಗೆ ಬಹು ಆದರ್ಶವಾದ ಸಂಗತಿ ಯೊಂದಿದೆ: ಆತನಲ್ಲಿರುವ ಉತ್ಸಾಹಪ್ರವೃತಿಯೇ ಒಂದು ವಿಶೇಷ ಗುಣ. ತನ್ನ ಗಮನ ಸೆಳೆಯಬಲ್ಲ ಯಾವ ಸಂಗತಿಯನ್ನಾದರೂ ಅತನು ಹಿಡಿದು ನಿರ್ವಹಿಸುವಲ್ಲಿ ತೋರುವ ಆತನ ಉತ್ಸಾಹ ಬಲಗಳು ಪ್ರಸಂಶನೀಯ. ಪೇತ್ರ ಯಾಕೋಬ ಹೋಹಾನರೆಂಬ ಈ ಮೂವರನ್ನು ಕರ್ತನು ಆ ಹನ್ನೆರಡು ಮಂದಿಯಲ್ಲಿ ವಿಶೇಷ ವಾಗಿ ಪ್ರೀತಿಸಿದ್ದನೆಂಬುದನ್ನು ನಾವು ನಿಶ್ಚಯವಾಗಿ ತಿಳಿದಿರುವೆವು. ಈ ಮೂವರಲ್ಲಿದ್ದ ಉತ್ಸಾಹ ಬಲಸಾಮರ್ಥ್ಯ ಹಾಗು ಹುರುಪುಗಳು ಕರ್ತನಿಗೆ ಮೆಚ್ಚಿಕೆಯಾಗಿದ್ದವು. "ನಿನ್ನ ಕೈಗೆ ಸಿಕ್ಕಿದ ಕೆಲಸವನ್ನೆಲ್ಲಾ ನಿನ್ನ ಪೂರ್ಣ ಶಕ್ತಿಯಿಂದ ಮಾಡು." ಎಂಬ ಬುದ್ಧಿಮಾತಿಗೆ ಅವರು ಕಾರ್ಯರೂಪದ ದೃಷ್ಟಾಂತವಾಗಿದ್ದರು. "ಸ್ವಾಮೀ, ನಾನು ಪಾಪಾತ್ಮನು; ನನ್ನನ್ನು ಬಿಟ್ಟುಹೋಗಬೇಕು" ಎಂದು ಪೇತ್ರನು ಕರ್ತನಿಗೆ ಹೇಳಿದ್ದು ತನಗೂ ಮತ್ತು ಆ ಒಡೆಯನಿಗೂ ಮಹತ್ತರ ವಾದ ವ್ಯತ್ಯಾಸವಿರುವುದನ್ನು ಆತನು ಒಪ್ಪಿಕೊಂಡು ಹೇಳಿರುವುದನ್ನು ಸೂಚಿಸುತ್ತದೆ. ತಾನು ಪಾಪದಿಂದ ಕೂಡಿರು ವನೂ ಅಪರಿಪೂರ್ಣನೂ ಆದ ಮನುಷ್ಯನೆಂಬುದನ್ನೂ ತನ್ನ ಮುಂದೆ ಇರುವವ ಒಡೆಯನಾದರೋ ಪರಿಪೂರ್ಣನೂ

ತಂದೆಯೊಡನೆ ಪೂರ್ಣವಾಗಿ ಹೊಂದಾಣಿಕೆಯಲ್ಲಿರುವವನೆಂಬ ನಿಜ ಸ್ಥಿತಿಯನ್ನು ಗ್ರಹಿಸಿಕೊಂಡಿದ್ದನು. ಆದುದರಿಂದ ಆತನು ತಂದೆಯ ಕರುಣೆಯನ್ನು ವಿತರಣೆ ಮಾಡಲು ಅನುಮತಿ ನೀಡಲಾಯಿತು.

ಪೇತ್ರನ ನಿಜವಾದ ಮನೋಭಾವವು ಆತನ ಹೇಳಿಕೆಗೆ ವ್ಯತಿರಿಕ್ತವಾಗಿದ್ದ ಸಂಭವವಿತ್ತು. "ಸ್ವಾಮಿಯೇ ನಾನು ಪಾಪದಿಂದ ತುಂಬಿದ ಮನುಷ್ಯನಾಗಿದ್ದರೂ ನಿನ್ನ ಬಳಿಯಲ್ಲಿದ್ದು ನಿನ್ನ ಸಂಪರ್ಕದಿಂದ ಆಶೀರ್ವಾದ ಪಡೆಯುವುದಕ್ಕೆ ಅನುಮತಿ ನೀಡು" ಇದು ಆತನ ಹೃದಯದ ಸರಿಯಾದ ಮನೋಭಾವವೂ ಮತ್ತು ನಿಜವಾದ ಪ್ರಾರ್ಥನೆಯೂ ಆಗಿತ್ತು; ಇದಕ್ಕೆ ಉತ್ತರವಾಗಿ ಯೇಸುವು ತಾನು ಆದುಕೊಂಡ ಹನ್ನೆರಡು ಮಂದಿಯಲ್ಲಿ ಆತನನ್ನು ಒಬ್ಬನನ್ನಾಗಿ ಮಾಡಿಕೊಂಡನು.

ಈ ಕಥನವು ಕೂಡಲೇ ಕೊನೆಗೊಳ್ಳುತ್ತದೆ. ಮತ್ತು ಪೇತ್ರ ಅಂದ್ರೆಯ ಯಾಕೋಬ ಮತ್ತು ಯೋಹಾನರು ಅದೇ ಗಳಿಗೆಯಲ್ಲಿಯೋ ಅಥವಾ ಮರು ದಿನವೋ ಮೀನು ಹಿಡಿಯುವ ತಮ್ಮ ಉದ್ಯೋಗವನ್ನು ತ್ಯಜಿಸಿ ಅಂದರೆ ತಮ್ಮ ದೋಣಿ ಮತ್ತು ಬಲೆಗಳನ್ನು ಬಿಟ್ಟು ನಮ್ಮ ಕರ್ತನಿಗೆ ವಿಶೇಷವಾದ ಜೊತೆಗಾರರಾಗಿ ಕಡೆಯಲ್ಲಿ ಅಪೋಸ್ತಲರಾಗಿ ಆತನ ಪ್ರತಿನಿಧಿಗಳಾದರೆಂಬುದನ್ನು ನಮಗೆ ಅದು ತಿಳಿಸುವುದಿಲ್ಲ. ನಾವು ಸೂಕ್ತವಾಗಿ ಊಹಿಸಬಹುದೆಂದರೆ, ಮೀನು ಹಿಡಿಯುವುದರಲ್ಲಿ ಪಾಲುಗಾರಿಕೆಯು ತಮ್ಮ ಕುಟುಂಬದ ಕಸುಬಾಗಿರಲಾಗಿ ಪೇತ್ರನು ತನ್ನ ದೋಣಿ ಹಾಗು ಉಪಕರಣಗಳನ್ನು ತನ್ನ ಸಹೋದರರ ಅಥವಾ ಮಕ್ಕಳ ಅಥವಾ ಇತರ ಪಾಲುದಾರರ ಇಲ್ಲವೇ ಜೊತೆಗಾರರ ಕೈಗೆ ಒಪ್ಪಿಸಿರುವನೆಂಬುದು ಮತ್ತು ಇದೇ ರೀತಿಯಲ್ಲಿ ಜೆಬೆದಾಯನ ಮಕ್ಕಳು ತಮ್ಮ ಉಪಕರಣಗಳನ್ನು ತಮ್ಮ ತಂದೆಯ ಕೈಗೋ ಇಲ್ಲವೇ ತಮ್ಮ ಉದ್ಯೋಗದಲ್ಲಿ ಹಿಂದೆ ಆಸಕ್ತರಾಗಿದ್ದವರ ಕೈಗೋ ಒಪ್ಪಿಸಿರುವರೆಂಬುದು. ಈ ಮನುಷ್ಯರು ಎರಡು ವರುಷಗಳ ತರುವಾಯ ನಮ್ಮ ಕರ್ತನ ಮರಣದ ನಂತರ ಮೀನು ಹಿಡಿಯುವ ಉದ್ಯೋಗಕ್ಕೆ ಹಿಂದಿರುಗಲು ಮಾಡಿದ್ದ ಸಲಹೆಯಲ್ಲಿ ಆಗಲೂ ಅವರಿಗೆ ದೋಣಿ ಬಲೆ ಮತ್ತು ಅದನ್ನು ನಿಭಾಯಿಸುವುದರಲ್ಲಿ ಆಸಕ್ತಿಯಿತ್ತೆಂಬ ಆಂಶವು ನಿಜವಾಗಿಯೂ ಈ ಆಲೋಚನೆಯಲ್ಲಿನ ಸತ್ಯತೆಯನ್ನು ರುಜುವಾತುಪಡಿಸುತ್ತದೆ. ಕಡೆಯದಾಗಿ ತಿಳಿಸಲಾದ ಸಂದರ್ಭದಲ್ಲಿ ಯೇಸುವು ಮತ್ತೆ ಮೀನಿನ ಒಂದು ದೊಡ್ಡ ರಾಶಿಯನ್ನು ಒದಗಿಸಿಕೊಟ್ಟದ್ದರಲ್ಲಿ ಸೀಮೋನ ಪೇತ್ರನು ಈ ಅದ್ಭುತವನ್ನು ಮಾಡುವ ಸಾಮರ್ಥ್ಯವಿರುವುದು ಶಿಲುಬೆಗೆ ಹಾಕಲ್ಪಟ್ಟು ಎದ್ದು ಬಂದ ಕರ್ತನಿಗೆ ಹೊರತು ಬೇರೆ ಯಾರಿಗೂ ಇದು ಸಾಧ್ಯವಿಲ್ಲವೆಂಬುದನ್ನು ಗುರುತಿಸುವುದರಲ್ಲಿ ಪುನಃ ಮೊದಲಿಗನಾಗಿದ್ದನು. ಆ ದಡದ ಮೇಲೆ ಇರುವವನು ಆತನೇ ಎಂಬುದನ್ನು ಆಗ ಅವನು ಗುರುತು ಹಿಡಿದಿದ್ದನು.

## ಒಂದು ಉನ್ನತ ವೃತ್ತಿಗೆ ಕರೆ

ನಮ್ಮ ಕರ್ತನು ಪೇತ್ರನಿಗೆ ಹೇಳಿದ ಮಾತು, "ಇಂದಿನಿಂದ ನೀನು ಮನುಷ್ಯರನ್ನು ಹಿಡಿಯುವವನಾಗಿರುವಿ...." ಈ ಮಾತುಗಳು ಪೇತ್ರನ ಜೊತೆಗಾರರಿಗೂ ಸಹ ಅನ್ವಯವಾಗಿತ್ತು ಮತ್ತು ನಿಸ್ಸಂದೇಹವಾಗಿಯೂ ಅದು ಮುಂದೆ ಅವರು ಪೇತ್ರನೊಡನೆ ಕರ್ತನನ್ನು ಕೂಡಿಕೊಂಡು ಆತನ ಶಿಷ್ಯರು ಅಥವಾ ಅಪೋಸ್ತಲರು ಆಗಿರುವುದಕ್ಕೆ ಅವರಿಗೆ ಆಹ್ವಾನವು ಅದರಲ್ಲಿ ಅನ್ವಯವಾಗಿತ್ತು. ಮಾರ್ಕ 1:17ರಲ್ಲಿನ ವಿವರವು ತಿಳಿಸುವುದೆಂದರೆ, ಪೇತ್ರನ ತಮ್ಮನಾದ ಅಂದ್ರೆಯನು ತನ್ನ ವೃತ್ತಿಯಲ್ಲಿ ಪಾಲುಗಾರನೂ ಸಹ ಆಗಿದ್ದನೆಂದು ಹೇಳಿ ಆ ಆಹ್ವಾನವನ್ನು ಸ್ವಲ್ಪ ಭಿನ್ನವಾದ ಮಾತಿನಲ್ಲಿ ಕೊಟ್ಟಿರುವುದನ್ನು ಅಂದರೆ "ನನ್ನ ಹಿಂದೆ ಬನ್ನಿರಿ; ಮನುಷ್ಯರನ್ನು ಹಿಡಿಯುವ ಬೆಸ್ತರನ್ನಾಗಿ ನಿಮ್ಮನ್ನು ಮಾಡುವೆನು" ಎಂದು ತಿಳಿಸುತ್ತದೆ. ಬಹುಶಃ ಕರ್ತನು ಈ ಎರಡು ವಿಧದಲ್ಲಿಯೂ ಇದನ್ನು ವ್ಯಕ್ತಪಡಿಸಿರಬಹುದು ಆದರೂ ಇವು ಒಂದೇ ತೆರನಾದ ಅರ್ಥವನ್ನು ಕೊಡುವಂಥವುಗಳು.

ಜೀವನದ ಎಲ್ಲಾ ಸಂಗತಿಗಳು, ನಾವು ಅವುಗಳನ್ನು ಪಡೆಯಬಯಸುವುದಾದರೆ, ಮುಂದೆ ಬರುವ ಕಾಲದ ಪರ್ಯಂತರ ಪ್ರಯೋಜನವಾಗುವ ಪಾಠಗಳನ್ನು ಕಲಿಸಿ ಕೊಡುತ್ತವೆ. ಸಾಧಾರಣವಾದ ವಿಷಯಗಳು ಹಾಗೂ ಪ್ರತಿಯೊಂದು ವ್ಯವಹಾರಗಳನ್ನು ಶ್ರದ್ಧೆಯಿಂದಲೂ ಸಮಂಜಸವಾಗಿಯೂ ಮತ್ತು ಸೂಕ್ತವಾಗಿಯೂ ನಡೆಸಿದಷ್ಟೂ ಅವು ನಮಗೆ ಅಮೂಲ್ಯವಾದ ಶಿಕ್ಷಣವನ್ನು ನೀಡುತ್ತವೆ ಮತ್ತು ಅವುಗಳನ್ನು ಸಮಂಜಸವಾಗಿ ಅಂಗೀಕರಿಸಿ ವಿವೇಕದಿಂದ ವೃದ್ಧಿಪಡಿಸಿಕೊಂಡಲ್ಲಿ ಅವು ನಮ್ಮನ್ನು ಕರ್ತನ ಸೇವೆಗೆ ಆತ್ಮಿಕವಾಗಿ ಪ್ರಯೋಜನಕಾರಿಗಳಾಗಿರಲು ಸಿದ್ಧಪಡಿಸುತ್ತವೆ. ಹೀಗಿರಲು ಬಹುಶಃ ಮೀನು ಹಿಡಿಯುವ ಉದ್ಯೋಗದಲ್ಲಿ ಕೆಲವೊಂದು ವಿಶಿಷ್ಟವಾದ ಸಂಗತಿಯಿದ್ದಿರಬಹುದು; ಅಂದರೆ ಅಪೋಸ್ತಲರು ತಮ್ಮ ಜೀವಿತದ ಉಳಿದ ಭಾಗದಲ್ಲಿ ನಿರ್ವಹಿಸಬೇಕಿದ್ದ ಆ ಮಹತ್ತರವಾದ ಕಾರ್ಯಗಳಿಗೆ ಅನುಕೂಲವಾಗುವಂಥ ಕೆಲವೊಂದು ವಿಶಿಷ್ಟ ಸಂಗತಿಗಳಿದ್ದಿರಬಹುದು. ನಮ್ಮ ಕರ್ತನು ತನ್ನ ಕರೆಯಲ್ಲಿ ಇದನ್ನು ತಿಳಿಸಿರುವನು. ಮೀನು ಹಿಡಿಯುವಿಕೆಗೆ ಸಾಮರ್ಥ್ಯ, ಯುಕ್ತಿ, ಗಾಳಕ್ಕೆ ಬೇಕಿರುವ ಸರಿಯಾದ ಹುಳು, ಮತ್ತು ಮೀನು ಹಿಡಿಯುವವನು ಮೀನಿನ ದೃಷ್ಟಿಗೆ ಮರೆಯಾಗಿರುವುದು ಇವುಗಳು ಬೇಕಿರುವುದು. ಮತ್ತು ಈ ನಾಲ್ಕು ವಿಷಯಗಳು ಕರ್ತನು ನಮಗೆ ತೊಡಗಿಸಿಕೊಳ್ಳಲು ಸವಲತ್ತು ಮಾಡಿಕೊಟ್ಟಿರುವ ಆತ್ಮಿಕವಾದ ಮೀನುಗಳ ಹಿಡಿಯುವಿಕೆಗೂ ಅವಶ್ಯಕವಾಗಿರುವುದು. ಆತನು ಬುದ್ಧಿಮಾತಾಗಿ ಹೀಗೆ ಹೇಳಿರುವನು, "ನೀವು ಸರ್ಪಗಳಂತೆ ಜಾಣರೂ ಪಾರಿವಾಳಗಳಂತೆ ನಿಷ್ಕಪಟಿಗಳೂ ಅಗಿರ್ರಿ." ಅಪೋಸ್ತಲನಾದ ಪೌಲನು ಸುವಾರ್ತೆಯನ್ನು ಯುಕ್ತಿಯಿಂದ ಪ್ರಸ್ತುತಪಡಿಸಲು ತಾನು ಬಳಸಿದ ಜ್ಞಾನದ ವಿಷಯವಾಗಿ ಮಾತನಾಡುವಾಗ ಇದರಂತೆಯೆ ಹೇಳಿರುವನು; ಅವನು ಹೇಳಿರುವುದು, "...ಯುಕ್ತಿಯುಳ್ಳವನಾಗಿದ್ದು (ಜ್ಞಾನದಿಂದ) ನಮ್ಮನ್ನು ಉಪಾಯದಿಂದ ಸುಲುಕೊಂಡೆನೆಂದು....." ಅಂದರೆ ಗಾಳದ ಹುಳುವಿನ ಮೂಲಕ (ಆಮಿಷವನ್ನು ತೋರಿಸಿ) ಸೆಳೆದುಕೊಂಡುದು. ಅಪೋಸ್ತಲನು ತನ್ನನ್ನು ಕೇಳುವವರ ಸಹಜ ಪ್ರವೃತಿ ಹಾಗೂ ಅವರಲ್ಲಿದ್ದ ಒಲವುಗಳ ಲಾಭವನ್ನು ತೆಗೆದುಕೊಂಡು ಅತ್ಯಂತ ಕಾರ್ಯ ಸಾಧಕವಾದ ರೀತಿಯಲ್ಲಿ ಸುವಾರ್ತೆಯನ್ನು ಪ್ರಸ್ತುತಪಡಿಸಿದನು. ಹೀಗಾಗಿ ಆತನು ಅದರ ಒಂದು ಗುಣಲಕ್ಷಣವನ್ನಾದರೂ ಉದ್ದೇಶಪೂರ್ವಕವಾಗಿ

ಹಿಡಿದಿಟ್ಟುಕೊಳ್ಳದೆ ಅಥವಾ ಅದನ್ನು ಪ್ರಕಟಿಸಲು ನಿರಾಕರಿಸದೆ ಎಲ್ಲವನ್ನು ಪೂರ್ಣವಾಗಿ ಪ್ರಕಟಿಸಿದನು. ಈ ವಿಷಯವಾಗಿ ಅತನು ಅನುಸರಿಸಿದ ವಿಧಾನದಲ್ಲಿ ನಮಗೆ ಒಂದು ಮಾದರಿಯಿದೆ. ನಾವು ನೆನಪಿನಲ್ಲಿಡಬೇಕಿರುವುದೆಂದರೆ, ಮೀನುಗಳು ತಮ್ಮನ್ನು ಯಾರಾದರೂ ಹಿಡಿಯಲು ಬಯಸಿದರೆ ಅವು ಸುಲಭವಾಗಿ ಎಚ್ಚೆತ್ತುಕೊಳ್ಳುತ್ತವೆ. ಹಾಗೆಯೇ ಮಾನವರು ಯಾವುದಕ್ಕಾದರೂ ತಾವು ಸ್ವಾಧೀನವಾಗಲು ಸಂಕೋಚಪಡುತ್ತಾರೆ. ಅದರಲ್ಲೂ ವಿಶೇಷವಾಗಿ ತಮ್ಮ ಸ್ವಾತಂತ್ರ್ಯವು ಕಳೆದು ಹೋಗುವುದೆಂಬ ಸಣ್ಣ ಸಂಶಯ ಬಂದರೂ ಅದಕ್ಕೆ ಸಂಕೋಚಪಡುವರು. ಹೀಗೆ ಪ್ರತಿಷ್ಠೆಯೆಂಬುದು ಲೋಕಕ್ಕೆ ಕಾಣತೊಡಗಿರುವುದು.

ಮನುಷ್ಯರನ್ನು ಹಿಡಿಯುವ ಬೆಸ್ತರಾಗಿ ಅಪೋಸ್ತಲರು ಮಾನವರನ್ನಾಗಲೀ ಅಥವಾ ಮಾನವ ಸ್ಥಾಪಿತ ಸಂಸ್ಥೆಗಳ ನ್ನಾಗಲೀ ಪ್ರತಿನಿಧಿಸುತ್ತಿರಲಿಲ್ಲ. ಅವರು ಶಿಷ್ಯರನ್ನು ಕೆಲವು ಪಂಗಡ ಗಳೆಂಬ ದಾಸತ್ವಕ್ಕೆ ಒಳಗಾಗಲು ಪ್ರಯತ್ನಿಸುತ್ತಿರಲಿಲ್ಲ. ಅವರು ಕರ್ತನ ಪ್ರತಿನಿಧಿಗಳಾಗಿ ಆತನಿಗಾಗಿ ಮನುಷ್ಯರನ್ನು ಹಿಡಿಯುವ ಬೆಸ್ತರಾಗಿದ್ದರು. ಅದು ದೇವರೇ ಅವರ ಮೂಲಕವಾಗಿ ಮನುಷ್ಯನನ್ನು ಬೇಡಿಕೊಳ್ಳುವಂತಾಗಿತ್ತು. ಅವರ ಕಾರ್ಯಭಾರವು ಸುವಾರ್ತೆಯಲ್ಲಿರುವ ಪ್ರಭಾವದಿಂದ ಕೂಡಿದ ನಿರೀಕ್ಷೆಗಳ ಹಾಗೂ ಅದರಲ್ಲಿ ನೀಡಲಾಗಿರುವ ಭರವಸೆಗಳ ಮೂಲಕವಾಗಿ ಮನುಷ್ಯರನ್ನು ಹಿಡಿದು ಅವರು ತಾವಾಗಿಯೇ ತಮ್ಮದೆಲ್ಲವನ್ನೂ ಪೂರ್ಣವಾಗಿ ದೇವರಿಗೆ ಸಂತೋಷದಿಂದ ಒಪ್ಪಿಸುವಂತಾಗುವ ದೇವರೊಡನೆಯ ಸಂಬಂಧಕ್ಕೆ ಅವರನ್ನು ಕೊಂಡುತರುವ ದಾಗಿರುವುದು. ಈ ದಿನದಲ್ಲಿ ಕರ್ತನ ಪ್ರತಿನಿಧಿಗಳ ಮುಂದಿರುವ ಸರಿಯಾದ ವಿಧಾನವು ಇದೇ. ನಾವು ಕರ್ತನಿಗಾಗಿ ಮತ್ತು ಆತನ ಸೇವೆಗಾಗಿ ಜನರನ್ನು ಹಿಡಿದುತರಬೇಕಾಗಿರುವುದು; ಅದು ನಮ್ಮ ಸ್ವಂತ ಲಾಭಕ್ಕಾಗಲೀ ಅಥವಾ ಗಳಿಕೆಗಾಗಲೀ ಅಂದರೆ ಪಂಗಡಗಳನ್ನು ಕಟ್ಟಿಬೆಳೆಸುವುದಕ್ಕಾಗಲೀ ಅಲ್ಲ. ನಮ್ಮಲ್ಲಿನ ಸ್ವಾತಂತ್ರ್ಯವನ್ನು ಮನುಷ್ಯರಿಗೆ ಒಪ್ಪಿಸುವುದಕ್ಕಾಗಲೀ ಅಥವಾ ಮನುಷ್ಯರ ಅಥವಾ ಪಂಗಡಗಳ ಆಜ್ಞಾನುಸಾರ ಇತರರ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದಕ್ಕೆ ಪ್ರಯತ್ನಿಸುವದಾಗಲೀ ಅಲ್ಲ. ಹೀಗಿದ್ದರೂ ಮನುಷ್ಯರನ್ನು ಹಿಡಿಯುವ ಕಾರ್ಯಭಾರವನ್ನು ಕರ್ತನಿಂದ ಪಡೆದಿರುವ ನಿಜವಾದ ಬೆಸ್ತರ ಮೂಲಕವಾಗಿ ಹೊರಟುಬರುವ ಸಂದೇಶವು ಸಫಲವಾದ ರೀತಿಯಲ್ಲಿ ಹಿಡಿಯಲ್ಪಟ್ಟವರ ಸ್ವಾತಂತ್ರ್ಯ ಕಳೆದುಹೋಗುವುದನ್ನು ಹಾಗೂ ಅವರ ಜೀವ ಕಳೆದುಕೊಳ್ಳುವುದನ್ನು ಒಳಗೊಂಡಿರುವ ಒಂದು ಸಂದೇಶವಾಗಿರುವುದು. ಆದರೂ ಮೀನು ಹಿಡಿಯುವ ಸಂಗತಿಯ ನಿದರ್ಶನವು ಈ ವಿಷಯವನ್ನು ಪೂರ್ಣವಾಗಿ ಸ್ಪಷ್ಟಪಡಿಸುವುದಿಲ್ಲ ಯಾಕೆಂದರೆ ಕರ್ತನಿಗಾಗಿ ಹಿಡಿಯಲ್ಪಟ್ಟ ವರೆಲ್ಲರೂ ಮನಃಪೂರ್ವಕವಾಗಿ ಅತನವರಾಗಬೇಕು ಇಲ್ಲವಾದಲ್ಲಿ ಅವರು ಹಿಡಿಯಲ್ಪಟ್ಟವರಾಗಿ ಉಳಿದುಕೊಳ್ಳಲಾಗದು ಅವರು ಬಿಸಾಡಲ್ಪಡುವರು; ಹಾಗೂ ಅವರ ವೈಯುಕ್ತಿಕ ಸ್ವಾತಂತ್ರ ಮತ್ತು ಅವರ ಜೀವ ಕಳೆದುಕೊಳ್ಳುವುದೆಂಬುದರ ಅರ್ಥವು ಪ್ರಭಾವ ಮಾನ ನಿತ್ಯಜೀವಗಳನ್ನು ಗಳಿಸಿಕೊಳ್ಳುವುದಾಗಿರುವುದು.

ನಮ್ಮ ಕರ್ತನು ತನ್ನ ಸಾಮ್ಯಗಳಲ್ಲಿ ಒಂದನ್ನು ಮೀನು ಹಿಡಿಯುವ ಈ ಸಂಗತಿಯನ್ನು ಆಧಾರವಾಗಿ ತೆಗೆದುಕೊಂದು ಹೀಗೆ ಹೇಳಿರುವನು: ಅದೇನೆಂದರೆ ಪರಲೋಕ ರಾಜ್ಯವು ಒಂದು ಬಲೆಗೆ ಹೋಲಿಕೆಯಾಗಿದ್ದು ಅದನ್ನು ಸಮುದ್ರದಲ್ಲಿ ಹಾಕಿ ಅದರಲ್ಲಿ ಎಲ್ಲಾ ಬಗೆಯ ಮೀನುಗಳು ತುಂಬಿಕೊಂಡಾಗ ಅದನ್ನು ದಡಕ್ಕೆ ಎಳೆದುತರುವದು. ಆ ಬಲೆಯು ನಿಸ್ಸಂದೇಹವಾಗಿ ಈ ಸುವಾರ್ತಾ ಯುಗವನ್ನು ಸೂಚಿಸುತ್ತದೆ ಮತ್ತು ಎಲ್ಲಾ ಬಗೆಯ ಮೀನುಗಳು ಎಲ್ಲಾ ಬಗೆಯ ಜನರನ್ನು ಅಂದರೆ ಆ ರಾಜ್ಯದ ವಿಷಯವಾಗಿರುವ ಕರ್ತನ ಉದ್ದೇಶಕ್ಕೆ ಹೊಂದಿಕೊಳ್ಳುವ ಮತ್ತು ಹೊಂದಿಕೊಳ್ಳಲಾಗ ದವರನ್ನು ಸೂಚಿಸುತ್ತದೆ. ಆ ಬಲೆಯನ್ನು ದಡಕ್ಕೆ ಎಳೆದು ತರುವುದು ಸುವಾರ್ತಾಯುಗದ "ಸುಗ್ಗಿಯನ್ನು" ಅಂದರೆ ಮೀನು ಹಿಡಿಯುವಿಕೆಯು ಪೂರ್ಣಗೊಂಡು ಮೀನುಗಳ ಲೆಕ್ಕವನ್ನು ತೆಗೆದುಕೊಳ್ಳುವ ಕಾಲವನ್ನು ಸೂಚಿಸುತ್ತದೆ. ಆ ಸಾಮ್ಯವು ಮುಂದುವರಿದು ಸೂಕ್ತವಾದ ಮೀನುಗಳನ್ನು ಪುಟ್ಟಿಗೆ ತುಂಬಿಕೊಂಡು ಸೂಕ್ತವಲ್ಲದ ಮೀನುಗಳನ್ನು ಪುನಃ ಸಮುದ್ರಕ್ಕೆ ಬಿಸಾಡುವುದನ್ನು ಹೇಳುತ್ತದೆ. ಹೀಗೆಯೇ ಸುವಾರ್ತೆಯ ಕರೆಯೆಂಬ ಬಲೆಯಲ್ಲಿ ಸುವಾರ್ತೆ ಸಾರುವವರೆಂಬ ಬೆಸ್ತರು ಲೋಕಸಾಗರದೊಳಗಿಂದ ಕರ್ತನ ರಾಜ್ಯದ ಉದ್ದೇಶಗಳಿಗೆ ಸರಿಬೀಳುವವ ಒಂದು ವಿಶಿಷ್ಟವಾದ ವರ್ಗದ ಜನರನ್ನು ಕೂಡಿಸುತ್ತಿರುವರು. ಆದರೂ ಬೇರೆಯವರು ಅದರೊಳಗೆ ಕೂಡಿಬಂದರೂ ಅಪೇಕ್ಷಿತರಲ್ಲದ ಅವರು ಲೌಕಿಕ ಸ್ಥಿತಿಗೆ ಮತ್ತೆ ಹಿಂದಿರುಗುವರು. ಮುಂದಿನ ಕಾಲದಲ್ಲಿನ ಮೀನು ಹಿಡಿಯುವಿಕೆಯು ಬೇರೆ ರೀತಿಯಾಗಿದ್ದು ಅದು ಒಂದು ಬಹು ದೊಡ್ಡದಾದ ಪ್ರಮಾಣದಲ್ಲಿರುವುದು.

## ಅಪೋಸ್ತಲತನವು ಶಿಷ್ಯತನಕ್ಕಿಂತಲೂ ಹೆಚ್ಚಿನದು

ಅಪೋಸ್ತಲತನ ಮತ್ತು ಶಿಷ್ಯತನದ ನಡುವೆ ಒಂದು ವ್ಯತ್ಯಾಸವಿದೆ. ಇರುವುದು ಕೇವಲ "ಯಜ್ಞದ ಕುರಿಯ ಹನ್ನೆರಡು ಅಪೊಸ್ತಲರು" ಮಾತ್ರ (ಪ್ರಕಟನೆ 21:14) ಆದರೆ ಶಿಷ್ಯರ ಸಂಖ್ಯೆಯು ಗಣನೀಯವಾಗಿ ದೊಡ್ಡದಾಗಿರುವುದು. ಶಿಷ್ಯರೆಂಬ ಶಬ್ದವು ವಿದ್ಯಾರ್ಥಿ ಅಥವಾ ಕಲಿಯುವವನೆಂಬುದನ್ನು ಸೂಚಿಸುತ್ತದೆ ಮತ್ತು ಈಗಿನ ಏರ್ಪಾಟಿನ ಮೂಲಕವಾಗಿ ಅಂಗೀಕಾರಯೋಗ್ಯವಾದ ಮೀನುಗಳಾಗಿ ಹಿಡಿಯಲ್ಪಟ್ಟವರಾಗಿ ಕರ್ತನಿಂದ ಕರೆಯಲ್ಪಟ್ಟಿರವವರೆಲ್ಲರೂ ಕರ್ತನಿಂದ ಕಲಿತು ಕೊಳ್ಳುವ ಬಯಕೆಯುಳ್ಳವರಾಗಿದ್ದು ಮನಃಪೂರ್ವಕವಾಗಿ ಆತನ ಉಪದೇಶಗಳಿಗೆ ಸ್ಪಂದಿಸಿರುವವರು. ನಮ್ಮ ಸ್ವರ್ಣಮಯ ಪಠ್ಯಭಾಗವು ನಾವು ಶಿಷ್ಯರಾಗಲು ಬೇಕಿರುವ ಷರತ್ತುಗಳನ್ನು ನಿಗಧಿಪಡಿಸಿರುವುದು. ಅದು ನಾವು ಕರ್ತನನ್ನು ಅಂಗೀಕರಿಸು ವುದು ಮಾತ್ರವಲ್ಲದೆ ಆತನ ವಾಕ್ಯದಲ್ಲಿ ನೆಲೆಗೊಂಡು ಆತನಿಂದ ಕೇಳಿ ಕಲಿತು ಮುಂದುವರಿಯುವುದನ್ನು ಅಂದರೆ ಕ್ರಿಸ್ತೀಯ ಅನುಭವಶಾಲೆಯಲ್ಲಿ ಕಲಿತುಕೊಳ್ಳುತ್ತಾ ಮುಂದುವರೆಯುವುದು. ಈ ಶಾಲೆಗೆ ಸೇರುವುದಕ್ಕೆ ಮೊದಲು ನಾವು ಸ್ವಭಾವತಃ ಪಾಪಿ ಗಳೆಂಬುದನ್ನು ಕಲಿತುಕೊಳ್ಳಬೇಕು ಮತ್ತು ಕೇವಲ ಆತನು ಆದೇಶಿಸಿರುವ ರೀತಿಯಲ್ಲಿ ಅವುಗಳನ್ನು ತೊಳೆದುಕೊಳ್ಳುವುದು ಅಥವಾ ಶುದ್ಧಮಾಡಿಕೊಳ್ಳುವುದು ಆತನ ಶಾಲೆಗೆ ಸೇರುವ ಅಥವಾ ಆತನ ಶಿಷ್ಯರಾಗುವ ಮೊದಲು ನಮಗೆ ಅವಶ್ಯವಾಗಿರುವ

ವಿಷಯ. ಆ ಅಮೂಲ್ಯ ರಕ್ತದಿಂದ ತೊಳೆದುಕೊಳ್ಳುವ ಅಗತ್ಯ ವಿರುವುದರ ವಿಷಯವಾಗಿ ದೇವವಾಕ್ಯದಲ್ಲಿನ ಬುದ್ಧಿ ಮಾತನ್ನು ಅಂಗೀಕರಿಸಿಕೊಂಡು ನಂಬಿಕೆಯ ಮೂಲಕವಾಗಿ ಪಾಪ ಶುದ್ಧೀಕರಣವನ್ನು ಪೂರ್ಣಗೊಳಿಸಿ ಆತನ ಶಿಷ್ಯರಾಗಿ ನಾವು ಕಾರ್ಯಾರಂಭಿಸಿದ ನಂತರ ನಮಗೆ ಕಲಿತುಕೊಳ್ಳಲು ಹಲವಾರು ಪಾಠಗಳಿರುವುದನ್ನು ಕಂಡುಕೊಳ್ಳುತ್ತೇವೆ. ಇವೆಲ್ಲವೂ ನಮ್ಮ ಬೆಳವಣಿಗೆಗೆ ಅಗತ್ಯ.

ನಮಗೆ ಯಾವ ವಿಧವಾದ ಪಾಠಗಳು ಅವಶ್ಯ; ಹಾಗೂ ಯಾವ ವಿಧವಾದ ಅನುಭವಗಳು, ಯಾವ ವಿಧವಾದ ಪರಿಶೋಧನೆಗಳು, ಯಾವ ವಿಧವಾದ ಕಷ್ಟಗಳು, ಯಾವ ವಿಧವಾದ ಪ್ರೋತ್ಸಾಹಗಳು, ಯಾವ ವಿಧವಾದ ಸಹಾಯಗಳು ಅವಶ್ಯವೋ ಅದನ್ನು ನಿರ್ಧರಿಸುವವನು ನಮ್ಮ ಬೋಧಕನು. ವಾಗ್ದಾನವಿರುವುದಾದರೋ ಯಾವ ಒಳ್ಳೆಯ ಸಂಗತಿಯನ್ನೂ ಹಿಡಿದಿಟ್ಟುಕೊಳ್ಳಲಾಗದೆಂಬುದು. ನಮಗೆ ಅಗತ್ಯವಿರುವ ಹಾಗೂ ಪ್ರಯೋಜನಕಾರಿಯಾಗಿ ಅವುಗಳನ್ನು ಬಳಸಿಕೊಳ್ಳಲು ನಮ್ಮಲ್ಲಿನ ಸ್ಥಿತಿಯ ಅನುಸಾರವಾದ ಎಚ್ಚರಿಕೆಗಳು ತಿದ್ದುಪಾಟುಗಳು ಪ್ರೋತ್ಸಾಹಗಳು ಆಶೀರ್ವಾದಗಳು ಮತ್ತು ವಾಗ್ದಾನಗಳು ಇವುಗಳನ್ನು ಆತನು ನೀಡುವನು. ಶಿಷ್ಯರಾಗಿ ಕಾರ್ಯಾರಂಭ ಮಾಡಿದ ಪ್ರತಿಯೊಬ್ಬನೂ ಕ್ರಿಸ್ತೀಯ ಅನುಭವಶಾಲೆಯಲ್ಲಿ ಪದವಿಯನ್ನು ಪಡೆದು ಆ ಪ್ರಭಾವವುಳ್ಳ ರಾಜ್ಯದಲ್ಲಿ ಸೇರಿ ಆ ಒಡೆಯನೊಂದಿಗೆ ಸಹ–ಬಾಧ್ಯರಾಗುವ ಆ ಶ್ರೇಷ್ಠ ಬಹುಮಾನ ವನ್ನು ಗೆಲ್ಲಲಾರನು; ಆದರೆ ಯಾವಾತನು ನಂಬಿಗಸ್ತನಾಗಿ ತಾಳ್ಮೆಯಿಂದ ಶಿಷ್ಯನಾಗಿ ಮುಂದುವರಿಯುವನೋ ಅಂದರೆ ಆ ಶ್ರೇಷ್ಠನಾದ ಗುರುವು ಕಲಿಸುವ ಪಾಠಗಳನ್ನು ಕಲಿಯುವುದನ್ನು ತನ್ನ ಜೀವಿತಾವಧಿಯು ಪೂರ್ಣಗೊಳ್ಳುವವರೆಗೂ ಮುಂದು ವರೆಸುವನೋ ಅವನು ಖಂಡಿತವಾಗಿ ಕರ್ತನ ಹಸ್ತದಿಂದ ತನ್ನ ಜೀವಕಿರೀಟವನ್ನು ಪಡೆದುಕೊಳ್ಳುವನು.

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 30 | ಕಪೆರ್ನೌಮ್ | ದೆವ್ವ ಹಿಡಿದವನನ್ನು ಸ್ವಸ್ಥಮಾಡುವುದು, ಪೇತ್ರನ ಅತ್ತೆ ಹಾಗು ಇತರರನ್ನು ಸಹ | 8:14–17 | 1:21–34 | 4:31–41 | –– |

## ಮತ್ತಾಯ 8:14–17

ತರುವಾಯ ಯೇಸು ಪೇತ್ರನ ಮನೆಗೆ ಬಂದು ಅವನ ಅತ್ತೆ ಜ್ವರದಲ್ಲಿ ಬಿದ್ದಿರುವುದನ್ನು ಕಂಡು ಆಕೆಯ ಕೈಯನ್ನು ಮುಟ್ಟಿದನು. ಮುಟ್ಟಿದಾಗಲೇ ಜ್ವರವು ಆಕೆಯನ್ನು ಬಿಟ್ಟುಹೋಯಿತು; ಆಕೆ ಎದ್ದು ಆತನಿಗೆ ಉಪಚಾರ ಮಾಡಿದಳು. ಸಂಜೆಯಾಗಲು ದೆವ್ವಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು. ಇದರಿಂದ––ನಮ್ಮ ಬೇನೆಗಳನ್ನು ತಾನೇ ತೆಗೆದುಕೊಂಡು ನಮ್ಮ ರೋಗಗಳನ್ನು ಹೊತ್ತುಕೊಂಡನು ಎಂದು ಯೆಶಾಯನೆಂಬ ಪ್ರವಾದಿಯು ಹೇಳಿರುವ ಮಾತು ನೆರವೇರಿತು.

## ಮಾರ್ಕ 1:21–34

ಬಳಿಕ ಅವರು ಕಪೆರ್ನೌಮೆಂಬ ಊರಿಗೆ ಸೇರಿದರು. ಕೂಡಲೆ ಸಬ್ಬತ್ ದಿನದಲ್ಲಿ ಯೇಸು ಸಭಾಮಂದಿರಕ್ಕೆ ಹೋಗಿ ಉಪದೇಶ ಮಾಡಿದನು. ಜನರು ಆತನ ಉಪದೇಶಕ್ಕೆ ಅತ್ಯಾಶ್ಚರ್ಯಪಟ್ಟರು; ಯಾಕಂದರೆ ಆತನು ಶಾಸ್ತ್ರಿಗಳಂತೆ ಉಪದೇಶಮಾಡದೆ ಅಧಿಕಾರವಿದ್ದವನಂತೆ ಅವರಿಗೆ ಉಪದೇಶ ಮಾಡುತಿದ್ದನು. ಆಗ ಅವರ ಸಭಾಮಂದಿರದಲ್ಲಿ ದೆವ್ವಹಿಡಿದ ಒಬ್ಬ ಮನುಷ್ಯನಿದ್ದನು. ಆ ದೆವ್ವವು––ನಜರೇತಿನ ಯೇಸುವೇ, ನಮ್ಮ ಗೊಡವೆ ನಿನಗೇಕೆ? ನಮ್ಮನ್ನು ನಾಶಮಾಡುವದಕ್ಕೆ ಬಂದೆಯಾ? ನಿನ್ನನ್ನು ಬಲ್ಲೆನು; ನೀನು ದೇವರು ಪ್ರತಿಷ್ಠಿಸಿದವನೇ ಎಂದು ಕೂಗಿ ಹೇಳಿತು. ಯೇಸು ಅದನ್ನು ಗದರಿಸಿ––ಸುಮ್ಮನಿರು, ಇವನನ್ನು ಇಟ್ಟು ಹೋಗು ಎನ್ನಲಾಗಿ ಆ ದೆವ್ವವು ಅವನನ್ನು ಒದ್ದಾಡಿಸಿ ಅಬ್ಬರಿಸಿ ಕೂಗಿ ಬಿಟ್ಟುಹೋಯಿತು. ಅದಕ್ಕೆ ಎಲ್ಲರೂ ಬೆರಗಾಗಿ–ಇದೇನಿರಬಹುದು? ಇದು ಹೊಸ ಉಪದೇಶ. ಈತನು ಅಧಿಕಾರದಿಂದ ದೆವ್ವಗಳಿಗೂ ಅಪ್ಪಣೆ ಕೊಡುತ್ತಾನೆ; ಅವು ಆತನ ಮಾತನ್ನು ಕೇಳುತ್ತವೆ ಎಂದು ತಮ್ಮತಮ್ಮೊಳಗೆ ವಿಚಾರಮಾಡಿ ಕೊಂಡರು. ಕೂಡಲೇ ಆತನ ಸುದ್ದಿಯು ಗಲಿಲಾಯ ಸೀಮೆಯಲ್ಲಿ ಎಲ್ಲೆಲ್ಲಿಯೂ ಹಬ್ಬಿತು. ಆ ಮೇಲೆ ಅವರು ಸಭಾಮಂದಿರದಿಂದ ಹೊರಟು ಯಾಕೋಬ ಯೋಹಾನರ ಸಂಗಡ ಸೀಮೋನ ಅಂದ್ರೆಯರ ಮನೆಗೆ ಬಂದರು. ಅಲ್ಲಿ ಸೀಮೋನನ ಅತ್ತೆ ಜ್ವರ ಬಂದು ಮಲಗಿರಲಾಗಿ ಅವರು ಆಕೆಯ ಸಂಗತಿಯನ್ನು ಆತನಿಗೆ ತಿಳಿಸಿದರು. ಆತನು ಹತ್ತರಕ್ಕೆ ಬಂದು ಆಕೆಯ ಕೈಯನ್ನು ಹಿಡಿದು ಎಬ್ಬಿಸಲು ಜ್ವರವು ಆಕೆಯನ್ನು ಬಿಟ್ಟುಹೋಯಿತು; ಆಕೆಯು ಅವರಿಗೆ ಉಪಚಾರಮಾಡಿದಳು. ಸಂಜೆಯಾಗಿ ಹೊತ್ತು ಮುಳುಗಿದ ಮೇಲೆ ಜನರು ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನೂ ದೆವ್ವಹಿಡಿದವರನ್ನೂ ಆತನ ಬಳಿಗೆ ಕರತಂದರು. ಊರೆಲ್ಲಾ ಬಾಗಲಿನ ಮುಂದೆ ಒಟ್ಟುಗೂಡಿತ್ತು. ಆಗ ಆತನು ತರತರವಾದ ರೋಗಗಳಿಂದ ಮೈಯಲ್ಲಿ ನೆಟ್ಟಗಿಲ್ಲದ ಬಹು ಜನರನ್ನು ವಾಸಿಮಾಡಿ ಅನೇಕ ದೆವ್ವಗಳನ್ನು ಬಿಡಿಸಿದನು. ಮತ್ತು ತಾನು ಇಂಥವನೆಂದು ಅವುಗಳಿಗೆ ತಿಳಿದದ್ದರಿಂದ ಆತನು ಅವುಗಳನ್ನು ಮಾತಾಡಗೊಡಸಲಿಲ್ಲ.

## ಲೂಕ 4:31–41

ಬಳಿಕ ಆತನು ಗಟ್ಟಾ ಇಳಿದು ಗಲಿಲಾಯಕ್ಕೆ ಸೇರಿದ ಕಪೆರ್ನೌಮೆಂಬ ಊರಿಗೆ ಬಂದನು. ಅಲ್ಲಿ ಸಬ್ಬತ್ ದಿನದಲ್ಲಿ ಅವರಿಗೆ ಉಪದೇಶಮಾಡುತ್ತಿರಲು ಆತನ ಮಾತು

ಅಧಿಕಾರವುಳ್ಳದ್ದಾಗಿದ್ದರಿಂದ ಅವರು ಆತನ ಉಪದೇಶಕ್ಕೆ ಅತ್ಯಾಶ್ಚರ್ಯಪಟ್ಟರು. ಆ ಸಭಾಮಂದಿರದಲ್ಲಿ ದೆವ್ವಹಿಡಿದ ಒಬ್ಬ ಮನುಷ್ಯನಿದ್ದನು. ಆ ದೆವ್ವವು––ಹಾ! ನಜರೇತಿನ ಯೇಸುವೇ, ನಮ್ಮ ಗೊಡವೆ ನಿನಗೇಕೆ? ನಮ್ಮನ್ನು ನಾಶಮಾಡುವುದಕ್ಕೆ ಬಂದೆಯಾ? ನಿನ್ನನ್ನು ಬಲ್ಲೆನು. ನೀನು ದೇವರು ಪ್ರತಿಷ್ಠಿಸಿದವನೇ ಎಂದು ಅಬ್ಬರಿಸಿ ಹೇಳಿತು. ಯೇಸು ಅದನ್ನು ಗದರಿಸಿ–– ಸುಮ್ಮನಿರು, ಇವನನ್ನು ಬಿಟ್ಟು ಹೋಗು ಎನ್ನಲಾಗಿ ಆ ದೆವ್ವವು ಅವನನ್ನು ನಡುವೆ ಕೆಡವಿ ಅವನಿಗೆ ಯಾವ ಕೇಡನ್ನೂ ಮಾಡದೆ ಬಿಟ್ಟು ಹೋಯಿತು. ಅದಕ್ಕೆ ಎಲ್ಲರೂ ಬೆರಗಾಗಿ–ಇದೆಂಥ ಮಾತಾಗಿರಬಹುದು? ಈತನು ಅಧಿಕಾರದಿಂದಲೂ ಬಲ ದಿಂದಲೂ ದೆವ್ವಗಳಿಗೆ ಅಪ್ಪಣೆಕೊಡುತ್ತಾನೆ, ಅವು ಬಿಟ್ಟು ಹೋಗು ತ್ತವೆ ಎಂದು ತಮ್ಮತಮ್ಮೊಳಗೆ ಮಾತಾಡಿಕೊಂಡರು. ಮತ್ತು ಆತನ ಸುದ್ದಿಯು ಸುತ್ತಲಿರುವ ಪ್ರಾಂತ್ಯದ ಊರುಗಳಲ್ಲೆಲ್ಲಾ ಹಬ್ಬಿತು. ಆತನು ಸಭಾಮಂದಿರದಿಂದೆದ್ದು ಸೀಮೋನನ ಮನೆಗೆ ಬಂದನು. ಅಲ್ಲಿ ಸೀಮೋನನ ಅತ್ತೆಯು ಕಠಿನ ಜ್ವರದಿಂದ ಬಹಳ ಕಷ್ಟ ಪಡುತ್ತಿರಲಾಗಿ ಆಕೆಯ ವಿಷಯದಲ್ಲಿ ಆತನನ್ನು ಬೇಡಿಕೊಂಡರು. ಆತನು ಆಕೆಯ ಬಳಿ ನಿಂತು ಬಾಗಿ ಆ ಜ್ವರವನ್ನು ಗದರಿಸಲು ಅದು ಆಕೆಯನ್ನು ಬಿಟ್ಟುಹೋಯಿತು. ಕೂಡಲೇ ಆಕೆಯು ಎದ್ದು ಅವರಿಗೆ ಉಪಚಾರ ಮಾಡಿದಳು. ಹೊತ್ತು ಮುಣುಗುವಾಗ ಆದದ್ದೇನೆಂದರೆ ಯಾರಾರ ಮನೆಯಲ್ಲಿ ತರ ತರದ ರೋಗ ಗಳಿಂದ ಅಸ್ವಸ್ಥವಾದವರಿದ್ದರೋ ಅವರೆಲ್ಲರು ಆ ರೋಗಿಗಳನ್ನು ಆತನ ಹತ್ತರಕ್ಕೆ ಕರಕೊಂಡು ಬಂದರು; ಆತನು ಪ್ರತಿಯೊಬ್ಬನ ಮೇಲೆಯೂ ಕೈಯಿಟ್ಟು ಅವರನ್ನು ವಾಸಿಮಾಡಿದನು. ದೆವ್ವಗಳು ಸಹ––ನೀನು ದೇವರ ಕುಮಾರನು ಎಂದು ಅಬ್ಬರಿಸಿ ಅನೇಕರನ್ನು ಬಿಟ್ಟುಹೋದವು. ತಾನು ಕ್ರಿಸ್ತನೆಂದು ಅವುಗಳಿಗೆ ತಿಳಿದಿದ್ದರಿಂದ ಆತನು ಅವುಗಳನ್ನು ಮಾತಾಡದಂತೆ ಗದರಿಸಿದನು.

# ಕಪೆರ್ನೌಮು ಪರಲೋಕಕ್ಕೆ ಏರಿಸಲ್ಪಟ್ಟಿರುವುದು

**ರಿಪ್ರಿಂಟ್ಸ್, ಪುಟ 3726**

## ಮಾರ್ಕ 1:21–34

**“ಆತನು ಬಹು ಜನರನ್ನು ಅವರ ರೊಗಗಳಿಂದ ವಾಸಿಮಾಡಿದನು”**

ಕಪೆರ್ನೌಮು ಪರಲೋಕಕ್ಕೆ ಏರಿಸಲ್ಪಟ್ಟಿರಲಾಗಿ ಅದು ಪಾತಾಳಕ್ಕೆ ಇಳಿಸಲ್ಪಡಬೇಕೆಂದು ನಮ್ಮ ಕರ್ತನು ಪ್ರಕಟಪಡಿಸಿದನು. (ಮತ್ತಾಯ 11:23) ನಮ್ಮ ಪಾಠವು ಅದು ಹೇಗೆ ಪರಲೋಕಕ್ಕೆ ಏರಿಸಲ್ಪಟ್ಟಿತೆಂದು ನಮಗೆ ತಿಳಿಸುತ್ತದೆ. ರೋಗಗಳನ್ನು ವಾಸಿಮಾಡುವ ನಮ್ಮ ಕರ್ತನ ಸೇವೆಯ ಮೊದಲಲ್ಲಿ ಅದರ ಜನರಿಗೆ ಮಹಾ ಕರುಣೆ ಆಶೀರ್ವಾದ ಸೌಭಾಗ್ಯಗಳನ್ನು ದೊರೆಯ ಮಾಡಲಾಗಿತ್ತು. ಆದರೂ ಅಲ್ಲಿ ಯಾರೂ ಆತನನ್ನು ಮೆಸ್ಸೀಯನೆಂದು ಅಂಗೀಕಾರ ಮಾಡಲಿಲ್ಲ ಮತ್ತು ಆತನು ಮುಂತಿಳಿಸಿದ ಹಾಗೆ ಆ ಊರು ಪಾತಾಳಕಕ್ಕೆ ಇಳಿಸಲ್ಪಟ್ಟಿತು ಅಂದರೆ ಅದು ಉರಿಯುವ ಅಥವಾ ಯಾತನೆಯ ಸ್ಥಳಕ್ಕೆ ಅಲ್ಲ ಆದರೆ "ಹೇಡ್ಸ್" (hades) ಎಂಬ ಒಂದು ಸಮಾಧಿಯಲ್ಲಿರುವಂಥ ಸ್ಥಿತಿಗೆ, ಒಂದು ಮರಣಕ್ಕೊಳಗಾದಂಥ ಸ್ಥಿತಿಗೆ ತರಲಾಗಿತು. ಎಷ್ಟು ಸಂಪೂರ್ಣವಾಗಿ ಆ ಊರು ಕಾಣಿಸ ದಂತಾಯಿತೆಂದರೆ ಅದರ ಸ್ಥಳವನ್ನು ಈಗಲೂ ನಿರ್ದಿಷ್ಟವಾಗಿ ತಿಳಿಯಲಾಗಲಿಲ್ಲ. ಕೆಲವು ಕಲ್ಲುಗಳಿರುವ ಒಂದು ಕುಪ್ಪೆಯನ್ನು ಹಿಂದಿದ್ದ ಅದರ ಸ್ಥಳವೆಂದು ಗುರುತಿಸಲಾಗಿರುವುದು.

ನಮ್ಮ ಹಿಂದಿನ ಪಾಠದಲ್ಲಿ ಗಮನಿಸಿರುವಂತೆ, ಕಪೆರ್ನೌಮು ಗಲಿಲಾಯ ಸಮುದ್ರದ ದಡದ ಮೇಲೆ, ಅದ್ಭುತವಾಗಿ ಮೀನುಗಳ ರಾಶಿ ದೊರೆತ ಸ್ಥಳದ ಹತ್ತಿರದಲ್ಲಿತ್ತು. ಮುಂದಿನ ಸಬ್ಬತ್ ದಿನದಲ್ಲಿ ತನ್ನ ಶಿಷ್ಯರಾಗಲು ತಮ್ಮದೆಲ್ಲವನ್ನೂ ತೊರೆದ ಆ ನಾಲ್ಕು ಬೆಸ್ತರೊಡನೆ ಯೇಸುವು ಕಪೆರ್ನೌಮಿನಲ್ಲಿದ್ದ ಸಭಾಮಂದಿರದೊಳಗೆ ಹೋದನು. ಯೆಹೂದ್ಯರ ಸಭಾಮಂದಿರವು ಬಹು ಉದಾರವಾದ ರೀತಿಯ ಆಡಳಿತ ವ್ಯವಸ್ಥೆಗಳಿಂದ ಕೂಡಿದ್ದಾಗಿದ್ದು ಬಹುತೇಕವಾಗಿ ಭಯಭಕ್ತಿಯಿಂದ ಕೂಡಿದ ಪ್ರತಿಯೊಬ್ಬನಿಗೂ ಮೋಶೆಯ ಧರ್ಮಶಾಸ್ತ್ರದ ಮತ್ತು ಪ್ರವಾದಿಗಳ ಗ್ರಂಥಗಳ ವಿಷಯವಾಗಿ ತನ್ನ ಅಭಿಪ್ರಾಯಗಳನ್ನು ಹೇಳುವ ಅವಕಾಶವನ್ನು ಒದಗಿಸಲಾಗುತ್ತಿತ್ತು. ನಮ್ಮ ಕರ್ತನು ಅ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಉಪದೇಶ ಮಾಡುತ್ತಿದ್ದನು. ಜನರು ಆತನ ಬೋಧನೆ ಆತನ ಉಪದೇಶಗಳಿಗೆ ಆಶ್ಚರ್ಯಪಡುತ್ತಿದ್ದರು. ಅವರು ಶಾಸ್ತ್ರವಚನಗಳ ಅರ್ಥದ ಬಗ್ಗೆ ತಮ್ಮ ಊಹಾಪೋಹಗಳಿಂದ ಗೊಂದಲಮಯ ಮಾಡುವುದರ ಮೂಲಕ ಅವುಗಳನ್ನು ಸಾಮಾನ್ಯವಾಗಿ ಮರ್ಮಗಳನ್ನಾಗಿ ಮಾಡುತಿದ್ದ ಶಾಸ್ತ್ರಿಗಳ ಹಾಗೂ ಫರಿಸಾಯರ ಉಪದೇಶಗಳ ಜುಗ್ಗಾಟಕ್ಕೆ ಒಗ್ಗಿಹೋಗಿದ್ದರು. ಆದರೆ ಯೇಸುವು ವಿಷಯಗಳನ್ನು ಕೂಲಂಕುಷವಾಗಿ ಅರಿತಿದ್ದ ಒಬ್ಬ ಒಳ್ಳೆಯ ಬೋಧಕನಾಗಿ “ಅಧಿಕಾರವುಳ್ಳವನಂತೆ” ಅವರಿಗೆ ಉಪದೇಶ ಮಾಡುತ್ತಿದ್ದನು.

ನಿಜ, ನಮ್ಮ ಕರ್ತನು ಪರಲೋಕದಿಂದ ಇಳಿದು ಬಂದವನಾಗಿದ್ದು ಇತರರಿಗೆ ತಿಳಿಯದಿದ್ದ ವಿಷಯಗಳ ಬಗ್ಗೆಯೂ ಆತನಿಗೆ ತಿಳುವಳಿಕೆಯಿತ್ತು. ಆದರೆ ಆತನು ಉಪದೇಶ ಮಾಡಿದ ಸಂಗತಿಗಳ ಬಗ್ಗೆ ಹಾಗೆ ಇರಲಿಲ್ಲ. ನಾವು ಇದನ್ನು–“ನಾನು ಭೂಲೋಕದಲ್ಲಿ ನಡೆಯುವ ಕಾರ್ಯಗಳನ್ನು ಕುರಿತು ನಿಮಗೆ ಹೇಳುವಾಗ ನೀವು ನಂಬದೆಹೋದರೆ ಪರಲೋಕದ ಕಾರ್ಯಗಳನ್ನು ಕುರಿತು ನಿಮಗೆ ಹೇಳಿದರೆ ಹೇಗೆ ನಂಬೀರಿ?” ಎಂದು ನಿಕೋದೇಮನನ್ನು ಟೀಕಿಸಿ ಹೇಳಿದ ಮಾತಿನಿಂದ ಖಚಿತಪಡಿಸಿಕೊಳ್ಳಬಹುದು. ಇದಕ್ಕೆ ಬದಲಾಗಿ ನಮ್ಮ ಕರ್ತನ ವಾಕ್ಯಸಂದೇಶಗಳು ಮೋಶೆಯ ಧರ್ಮಶಾಸ್ತ್ರ ಹಾಗೂ

ಪ್ರವಾದಿಗಳ ವಿಷಯವಾಗಿ ಅವುಗಳು ನೆರವೇರಿದ ಬಗೆಗಿನ ದೇವರ ಪ್ರಕಟನೆಯ ವಿಷಯವಾಗಿದ್ದವು. ಇದು ಆತನು ಸಾರಿ ಹೇಳಿದ ಈ ಮುಂದಿನ ಮಾತಿನಲ್ಲಿ ಸ್ಪಷ್ಟವಾಗಿ ಸೂಚಿತವಾಗಿದೆ: "ಯಾಕೆಂದರೆ ನನ್ನಷ್ಟಕ್ಕೆ ನಾನೇ ಮಾತಾಡಿದವನಲ್ಲ; ನನ್ನನ್ನು ಕಳುಹಿಸಿಕೊಟ್ಟ ತಂದೆಯೇ––ನೀನು ಇಂಥಿಂಥದ್ದನ್ನು ಹೇಳಬೇಕು ಹೀಗೆ ಹೀಗೆ ಮಾತಾಡಬೇಕು ಎಂದಾಗಿ ನನಗೆ ಆಜ್ಞೆಕೊಟ್ಟಿದ್ದಾನೆ." (ಯೋಹಾನ 12:49) ಮತ್ತೆ ಆತನು ಹೇಳಿದ್ದು, "ನಾನು ಹೇಳುವ ಬೋಧನೆಯು ನನ್ನದಲ್ಲ, ನನ್ನನ್ನು ಕಳುಹಿಸಿದಾತನದು." (ಯೋಹಾನ 7:16)

ನಾವು ಇಲ್ಲಿ ಸ್ವಲ್ಪ ನಿಂತು ಗಮನಿಸಲಿರುವ ಸಂಗತಿ ಯೆಂದರೆ: ಕರ್ತನ ಪ್ರತಿನಿಧಿಗಳೆಲ್ಲರ ಬೋಧನೆಗಳು ಈ ಮಾದರಿಯಲ್ಲೇ ಇರಬೇಕು; ಅವುಗಳು ಮಾನವ ಕಲ್ಪಿತವಾದ ವುಗಳ ವಿಷಯವಾಗಲೀ ತತ್ವಬೋಧನೆಗಳ ವಿಷಯವಾಗಲೀ ಆಗಿರಬಾರದು, ಆದರೆ ಅದು ದೇವರ ವಾಕ್ಯದ ವಿಷಯ ವಾಗಿರಬೇಕು–"ಕನಸು ಕಂಡ ಪ್ರವಾದಿಯು ಕನಸನ್ನು ತಿಳಿಸಿದರೆ ತಿಳಿಸಲಿ; ನನ್ನ ಮಾತನ್ನು ಕೇಳಿದವನೋ ನನ್ನ ಮಾತನ್ನು ಯಥಾರ್ಥವಾಗಿ ನುಡಿಯಲಿ." (ಯೆರೆಮೀಯ 23:28) "ದೇವರ ಉಪದೇಶವನ್ನೂ ದೇವರ ಬೋಧನೆಯನ್ನು ವಿಚಾರಿಸುವ ಎಂದು ಅವರು ಹೇಳದಿದ್ದರೆ ಅವರಿಗೆ ಎಂದಿಗೂ ಬೆಳಗಾಗುವುದಿಲ್ಲ." (ಯೆಶಾಯ 8:20) "ದೇವರ ವಾಕ್ಯವನ್ನು ಸಾರು, ಅನುಕೂಲವಾದ ಕಾಲದಲ್ಲಿಯೂ ಅನುಕೂಲವಿಲ್ಲದ ಕಾಲದಲ್ಲಿಯೂ ಅದರಲ್ಲಿ ಆಸಕ್ತನಾಗಿರು..." (2 ತಿಮೋಥೆ 4:2) "...ದೇವರ ವಾಕ್ಯವು ಸಜೀವವಾದದ್ದು, ಕಾರ್ಯಸಾಧಕ ವಾದದ್ದು,....ಯಾವ ಇಬ್ಬಾಯಿಕತ್ತಿಗಿಂತಲೂ ಹದವಾದದ್ದು...." (ಇಬ್ರಿಯ 4:12) "ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆ ಪಡಿಸು;" (ಯೋಹಾನ 17:17) "ಇವರು ಯೇಸುವಿನ ಸಂಗಡ ಇದ್ದವರೆಂದು ಗುರುತು ಹಿಡಿದರು;" (ಅಪೋಸ್ತಲರ ಕೃತ್ಯಗಳು 4:13) ಮತ್ತು ಆತನಿಂದ ಕಲಿತವರಾಗಿದ್ದರು. ಹೀಗೆ ಕರ್ತನಿಗೂ ಆತನ ಸತ್ಯಸಾಕ್ಷಿಯ ನುಡಿಗಳಿಗೂ ಯಾರು ನಂಬಿಗಸ್ತರೂ ನಿಷ್ಠೆಯುಳ್ಳವರೂ ಆಗಿರುವರೋ ಅವರು ಆ ನುಡಿಗಳ ವಿಷಯವಾಗಿ ಅಸ್ಪಷ್ಟವಾಗಿಯೂ ಅನಿಶ್ಚಿತವಾಗಿಯೂ ನುಡಿಯರು, ಆದರೆ ದೇವರ ಸಂದೇಶವನ್ನು ಅಂದರೆ "ಜನರೆಲ್ಲರಿಗೂ ಮಹಾ ಸಂತೋಷವನ್ನುಂಟು ಮಾಡುವ ಶುಭ ಸಮಾಚಾರವನ್ನು" "ತಕ್ಕ ಸಮಯದಲ್ಲಿ" ಪ್ರಕಟಪಡಿಸುವರು.

## "ನೀನು ಯಾರೆಂಬುದನ್ನು ನಾನು ಬಲ್ಲೆನು"

ಯೇಸು ಮಾತನಾಡುತ್ತಿರುವಾಗಲೋ ಅಥವಾ ಬಹುಶಃ ಆತನ ವಾಕ್ಯೋಪದೇಶದ ಅಂತ್ಯದಲ್ಲಿಯೋ ಸಭಾಮಂದಿರದಲ್ಲಿ ದ್ದವರಿಗೆ ಮುಂದಿನ ಮಾತುಗಳನ್ನು ಕೇಳಿ ಆಶ್ಚರ್ಯವಾಯಿತು "ಹಾ! ನಜರೇತಿನ ಯೇಸುವೇ, ನಮ್ಮ ಗೊಡವೆ ನಿನಗೇಕೆ? ನಮ್ಮನ್ನು ನಾಶಮಾಡುವುದಕ್ಕೆ ಬಂದೆಯಾ? ನಿನ್ನನ್ನು ಬಲ್ಲೆನು. ನೀನು ದೇವರು ಪ್ರತಿಷ್ಠಿಸಿದವನೇ .." ಹೀಗೆ ಮಾತಾಡಿದವನು ಒಬ್ಬ ದೆವ್ವಹಿಡಿದವನಾಗಿದ್ದನು; ಈ ದಿನದಲ್ಲಿ ಅವನು ಹುಚ್ಚು ಹಿಡಿದ ಮನುಷ್ಯನೆಂದು ಕರೆಯಲ್ಪಟ್ಟು ಅವನು ಬುದ್ಧಿಭ್ರಮಣರ ಆಶ್ರಮದಲ್ಲಿ ಇರಬೇಕಾದವನೆಂದು ಹೇಳಲ್ಪಡುವನು. ಎಲ್ಲಾ ವಿಧವಾದ ಮಾನಸಿಕ ಅಸ್ವಸ್ಥತೆಯು ದೆವ್ವಪೀಡಿತವೆಂದು ನಾವು ಹೇಳುವುದಿಲ್ಲ. ಈಗ ನಾವು ಪರಿಶೀಲನೆ ಮಾಡುತ್ತಿರುವ ವಿಷಯ ದಲ್ಲಿದ್ದಂತೆ ಮಾನಸಿಕ ಅಸ್ವಸ್ಥರೆಲ್ಲರೂ ದುರಾತ್ಮ ಪೀಡಿತರಲ್ಲ. ಮೆದುಳಿಗೆ ರೋಗ ತಗಲಿದವರ ಸಂಗತಿಗಳೂ ಇವೆ; ಆದರೆ ಬದ್ಧಿಭ್ರಮಣೆಯಾಗಿರುವುದೆಂದು ನಡೆಸಿಕೊಳ್ಳುತ್ತಿರುವವರಲ್ಲಿ ಅರ್ಧಭಾಗದ ಜನರು ಪೂರ್ಣವಾಗಿ ಅಥವಾ ಅದಕ್ಕಿಂತಲೂ ಹೆಚ್ಚಿನ ಭಾಗದವರು ದೆವ್ವ ಪೀಡಿತರಾಗಿರುವುದು ಅಂದರೆ ಅವರ "ಮನಸ್ಸನ್ನು ಆವರಿಸಿ ಕಾಡುತ್ತಿರುವದು" ಬಹು ಸ್ಪಷ್ಟವಾಗಿದೆ.

ನಾವು ಬೇರೆ ಲೇಖನಗಳಲ್ಲಿ ತೋರಿಸಿಕೊಟ್ಟಿರುವ ಹಾಗೆ ಮನುಷ್ಯರನ್ನು ಹೀಗೆ ವಶಮಾಡಿಕೊಳ್ಳುವ ದುರಾತ್ಮಗಳು ಅಥವಾ ದೆವ್ವಗಳು ಒಂದು ಕಾಲದಲ್ಲಿದ್ದ ದೇವದೂತರುಗಳಾಗಿದ್ದರು, ಅಂದರೆ "ತಮ್ಮ ದೊರೆತನವನ್ನು ಕಾಪಾಡದೆ ತಮಗೆ ತಕ್ಕ ವಾಸಸ್ಥಾನವನ್ನು ಬಿಟ್ಟ ದೇವದೂತರು..." (ಯೂದ 1:6). ಆದರೆ ಅವರು ನೋಹನ ದಿನಗಳಲ್ಲಿ ಪಾಪಮಾಡಿ ದೇವಾನುಗ್ರಹದಿಂದ ಬಿದ್ದುಹೋದರು ಮತ್ತು ಅಲ್ಲಿಂದೀಚೆಗೆ ಅವರು ನ್ಯಾಯತೀರ್ಪಿನ ಮಹಾ ದಿನದವರೆಗೆ ಕತ್ತಲೆಯೊಳಗೆ ಇಡಲ್ಪಟ್ಟಿರುವರು. ಆ ಸಾವಿರ ವರುಷದ (ಆಳ್ವಿಕೆಯ) ದಿನದಲ್ಲಿ ಯೇಸುವು ಮತ್ತು ಮಹಿಮೆ ಯಲ್ಲಿರುವ ಸಭೆಯು ಕೂಡಿ ಕ್ರಿಸ್ತನೆಂಬ ಹೆಸರನ್ನು ಪಡೆದವರಾಗಿ ಮನುಷ್ಯರಿಗೆ ನ್ಯಾಯವಿಚಾರಣೆಯ ಅಥವಾ ನ್ಯಾಯತೀರ್ಪಿನ ಅವಕಾಶ ಅನುಗ್ರಹಿಸುವುದು ಮಾತ್ರವಲ್ಲದೆ ಆ ಬಿದ್ದುಹೋದ ದೇವದೂತರಿಗೂ ಅವಕಾಶವನ್ನು ಅನುಗ್ರಹಿಸುವರು. (1 ಕೊರಿಂಥ 6:3) ಈ ಮಧ್ಯದಲ್ಲಿ ಅವರು (ಬಿದ್ದು ಹೋದ ದೇವದೂತರು) ಮಾನವರ ಸಂಪರ್ಕಮಾಡಿ ಅವರ ಮನಸ್ಸುಗಳನ್ನು ವಶಮಾಡಿಕೊಂಡು ಅವರನ್ನು ತಮ್ಮ ಅಧೀನ ದಲ್ಲಿಟ್ಟುಕೊಳ್ಳುವ ಪ್ರಯತ್ನವು ಸತತವಾಗಿ ನಡೆಯುತ್ತಿರುವಂತೆ ಕಾಣುತ್ತದೆ. ಸತ್ಯವೇದದ ಹಳೆ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯ ಎರಡೂ ಭಾಗಗಳ ಪರ್ಯಂತರವಾಗಿ ದೇವರಲ್ಲಿ ಭಯಭಕ್ತಿಯುಳ್ಳವರು ಬೇತಾಳಿಕರಲ್ಲಿ ವಿಚಾರಿಸವುದು, ಸತ್ತವರ ಆತ್ಮಗಳನ್ನು ಸಂಪರ್ಕಿಸುವುದು, ಮುಂತಾದ ಎಲ್ಲಾ ವಿಧವಾದ ದುರಾತ್ಮ ಸಂಪರ್ಕಗಳ ವಿರುದ್ಧವಾಗಿ (ಅವುಗಳನ್ನು ಮಾಡದಂತೆ) ಎಚ್ಚರಿಕೆ ನೀಡಲಾಗಿರುವುದು. ಏಕೆಂದರೆ ಅವು ದೆವ್ವಗಳಿಗೆ ಅಂದರೆ ಸೈತಾನನಿಗೆ ಸಂಬಂಧಪಟ್ಟವುಗಳು. ಇದನ್ನು ಮತ್ತೆ ಹೇಳುವುದು ನಮ್ಮ ಕರ್ತವ್ಯವಾಗಿದೆ ಯಾಕೆಂದರೆ ಇವುಗಳ ಪ್ರಭಾವಗಳು ಹಿಂದೆ ಇದ್ದುದಕ್ಕಿಂತಲೂ ಈ ದಿನದಲ್ಲಿ ಬಹು ಅಧಿಕವಾಗಿ ಕಾರ್ಯನಡೆಸುತ್ತಿರುವುದು. ಇದು ಮಾತ್ರವಲ್ಲದೆ ಈ ನಮ್ಮ ದಿನಗಳಲ್ಲಿ ಕ್ರೈಸ್ತಸಮುದಾಯದ ಮೇಲೆ ಬರಲಿರುವ ಮಹಾ ದಂಡನೆಯ ತೀರ್ಪಿನ ಒಂದು ಭಾಗವಾಗಿ ಇಂಥವುಗಳ ಪ್ರಭಾವಗಳು ಹೆಚ್ಚುಹೆಚ್ಚಾಗಿ ಕಾರ್ಯಮಾಡುತ್ತಾ ಮುಂದಿನ ಹತ್ತಿರದ ದಿನಗಳಲ್ಲಿ ಅಧಿಕವಾಗಿ ಬಲಗೊಳ್ಳುತಾ ಹೋಗುವು ದೆಂದು ಸತ್ಯವೇದದಲ್ಲಿ ತೋರಿಸಲಾಗಿರುವುದು. ಅಮೇರಿಕದಲ್ಲಿ ಯಾಗಲೀ ಅಥವಾ ಯೂರೋಪಿನಲ್ಲಿಯಾಗಲೀ ಇರುವುದ ಕ್ಕಿಂತಲೂ ಆತ್ಮಿಕವಾದವು ಆಸ್ಟ್ರೇಲಿಯಾದಲ್ಲಿ ಹೆಚ್ಚು ಪ್ರಗತಿಹೊಂದಿ ಪ್ರಬಲವಾಗಿರುವುದಾದರೂ ಅದು ಎಲ್ಲೆಲ್ಲಿಯೂ ರಭಸವಾಗಿ ದಾಪುಗಾಲನ್ನು ಹಾಕುತ್ತಾ ಬರುತ್ತಿರುವುದಾಗಿ ನಮಗೆ ತಿಳಿದು ಬಂದಿದೆ.

ನಮ್ಮ ಪಾಠದಲ್ಲಿ ತಿಳಿಸಲಾದ ದೆವ್ವಕ್ಕೆ ಮೆಸ್ಸೀಯನ ಬರುವಿಕೆಯಲ್ಲಿ ಎಲ್ಲಾ ದುಷ್ಟತನವನ್ನು ರದ್ದುಪಡಿಸಿ ನಾಶಗೊಳಿಸ ಲಾಗುವುದೆಂಬ ಆಲೋಚನೆಯಿದ್ದಂತೆ ಕಾಣುತ್ತದೆ. ದೆವ್ವಗಳಿಗೆ ಮೆಸ್ಸೀಯನ ಅಧಿಕಾರ ತೋರ್ಪಡಿಸುವ ಸಮಯವು ಇನ್ನೂ ಮುಂದಿರುವದೆಂಬ ಸ್ವಲ್ಪಮಟ್ಟಿನ ತಿಳುವಳಿಕೆ ಅಥವಾ ಮುನ್ಸೂಚನೆ ಇದ್ದಂತೆ ಒಂದು ವಿವರಣೆ ಹೇಳುವುದು, **"ಕಾಲಕ್ಕೆ ಮೊದಲೇ ನಮ್ಮನ್ನು ನಾಶಮಾಡುವುದಕ್ಕೆ ಬಂದೆಯಾ?"** ಒಂದು ದುರಾತ್ಮವು **"ನಮ್ಮನ್ನು ಕಾಡುವುದಕ್ಕೆ ಬಂದೆಯಾ?"** ಎಂದು ಕೂಗಿಕೊಂಡಂತೆ ಸತ್ಯವೇದದ ಬೇರೊಂದು ಭಾಗದಲ್ಲಿ ಸೂಚಿತವಾಗಿರುವುದು. ಕಾಡುವುದು ಎಂಬ ಶಬ್ಧವು ಈ ಸಂದರ್ಭದಲ್ಲಿ ಶಿಕ್ಷೆನೀಡಲು ತ್ವರೆಪಡುವುದು ಎಂಬುದನ್ನು ಸೂಚಿಸುತ್ತದೆ. ಆ ಸಮಯದವರೆಗಿದ್ದ ಪವಿತ್ರಾತ್ಮ ಪ್ರೇರಿತರಾದ ಲೇಖಕರು ಬಿದ್ದುಹೋದ ದೇವದೂತರಿಗೆ ವಿಧಿಸಲಾಗುವ ಶಿಕ್ಷೆಯ ಸ್ವರೂಪವನ್ನು ತಿಳಿಸಿರಲಿಲ್ಲವೆಂಬುದನ್ನು ಹಾಗು ಮುಂದಿನ ಲೇಖಕರು ಅದು ಅವರ ನಾಶನವೆಂಬುದನ್ನು ಕೇವಲ ಊಹಿಸಿ ಬರೆದಿರುವರೆಂಬುದನ್ನು ನಾವು ಖಚಿತ ಮಾಡಿಕೊಳ್ಳಬಹುದು.

ಅಪೋಸ್ತಲನಾದ ಪೇತ್ರನು ಪರೋಕ್ಷವಾಗಿ ಸೂಚಿಸಿ ರುವಂತೆ, ಪಾಪ ಪರಿಹಾರ ಸಂಬಂಧದ ಯಜ್ಞಾರ್ಪಣೆಯಾದ ನಮ್ಮ ಕರ್ತನ ಮರಣ ಮತ್ತು ದೈವ ಶಕ್ತಿಯ ಮೂಲಕವಾದ ಅತನ ಪುನರುತ್ಥಾನಗಳನ್ನು ಬಿದ್ದುಹೋದ ದೇವದೂತರು ಸಾಕ್ಷಿಯಾಗಿದ್ದು ನೋಡಿದಾಗ, ಅವರು ಹಿಂದೆ ಅರಿಯಲಾಗದಿದ್ದ ಮಾನವರ ಪರವಾಗಿ ತೋರಿಬಂದ ದೇವರ ಪ್ರೀತಿ ಮತ್ತು ಶಕ್ತಿಯನ್ನು ಅರ್ಥಮಾಡಿಕೊಳ್ಳುವರು. ಮನುಷ್ಯರಿಗೆ ನಿಗದಿತವಾದ ಸಮಯದಲ್ಲಿ ದೇವರ ಕರುಣೆಯು ತೋರಿಸಲಾಗುವುದೆಂಬ ಆಲೋಚನೆಯು ತಮ್ಮವರಲ್ಲಿ ಮಾನಸಾಂತರಪಟ್ಟ ಕೆಲವರೂ ಸಹ ಕ್ರಿಸ್ತನ ಮೂಲಕವಾಗಿ ದೇವರ ಕರುಣೆಯಲ್ಲಿ ಪಾಲನ್ನು ಹೊಂದುವರೆಂಬ ನಿರೀಕ್ಷೆಗೆ ಆಧಾರವನ್ನು ನೀಡಿದ್ದಿತು. ಮತ್ತು ಇದು ನಿಜವಾಗಿಯೂ ದೇವರ ಯೋಜನೆಯಲ್ಲಿನ ಒಂದು ಭಾಗವಾಗಿರುವುದು; ಏಕೆಂದರೆ, ಕೇವಲ (ಪರಿಪೂರ್ಣತೆಯಿಂದ) ಬಿದ್ದು ಹೋದ ಮನುಷ್ಯರು ಮಾತ್ರವಲ್ಲದೆ ಬಿದ್ದು ಹೋದ ದೇವದೂತರೂ ಸಹ ಆತನ (ಕರ್ತನ) ಪ್ರತ್ಯಕ್ಷತೆಯ ಆ ರಾಜ್ಯದಲ್ಲಿ ನ್ಯಾಯತೀರ್ವಿಕೆಗೆ ಅಥವಾ ಪರೀಕ್ಷೆಗೆ ಒಳಗಾಗಬೇಕಿರುವುದು – 1 ಕೊರಿಂಥ 6:3.

ನಮ್ಮ ಕರ್ತನು ಆ ದೆವ್ವಕ್ಕೆ ಆ ಮನುಷ್ಯನನ್ನು ಬಿಟ್ಟು ಹೋಗಬೇಕೆಂದು ಅಂದರೆ ಆತನ ಮನಸ್ಸು ಮತ್ತು ದೇಹಗಳ ಮೇಲಿನ ತನ್ನ ಹಿಡಿತವನ್ನು ಬಿಡಬೇಕೆಂದು ಆಜ್ಞಾಪಿಸಿದನು. ಯೇಸುವು ಹೊಂದಿದ್ದ ಅಧಿಕಾರವನ್ನು ಪ್ರತಿರೋಧಿಸಲು ಆ ದೆವ್ವಕ್ಕೆ ಶಕ್ತಿಯಿರಲಿಲ್ಲ; ಆದರೂ ಆ ಮನುಷ್ಯನನ್ನು ಬಿಟ್ಟು ಹೋಗುವಾಗ ಅವನನ್ನು ಬಹುವಾಗಿ ಒದ್ದಾಡಿಸಿ ಯಾತನೆ ನೀಡಲು ಅದಕ್ಕೆ ಅಡ್ಡಿಯಿರಲಿಲ್ಲ. ದೆವ್ವವು ಆ ಮನುಷ್ಯನನ್ನು ಗುಂಪಿನ ಮಧ್ಯದಲ್ಲಿ ನೆಲಕ್ಕುರುಳಿಸಿತೆಂದು ಲೂಕನು ಹೇಳಿರುವನು (4:35). ಹೀಗೆ ಪ್ರತಿಯೊಂದು ರೀತಿಯಲ್ಲೂ ಈ ದುರಾತ್ಮಗಳ ಕೆಟ್ಟಗುಣಗಳು ವ್ಯಕ್ತವಾಗಿರುವವು. ಈ ವಿಧವಾಗಿ ಮನಸ್ಸನ್ನು ಆವರಿಸುವುದಾಗಲೀ ಅಥವಾ ವಶೀಕರಿಸಿಕೊಳ್ಳುವುದಾಗಲೀ ಪವಿತ್ರಾತ್ಮನಲ್ಲಿ ಇರುವುದಿಲ್ಲ. ದೇವರು ಮಾನವಕುಲದ ಪ್ರತಿಯೊಬ್ಬನಲ್ಲಿರುವ ವ್ಯಕ್ತಿತ್ವಗಳಿಗೆ ಮನ್ನಣೆ ನೀಡಿದ್ದು ಅವುಗಳಲ್ಲಿ ಮಧ್ಯೆ ಪ್ರವೇಶಿಸುವುದಿಲ್ಲ; ಇಲ್ಲವೇ ಪರಿಶುದ್ಧರಾದ ದೇವದೂತರೂ ಸಹ ಹೀಗೆ ಮಧ್ಯೆ ಪ್ರವೇಶಿಸುವುದಿಲ್ಲ. ದೇವರು ತನ್ನ ಪರಿಶುದ್ಧಾತ್ಮನ ಮೂಲಕ ಕಾರ್ಯನಡೆಸುವನು; ದೆವ್ವಗಳಂತೆ ಮನಸ್ಸನ್ನು ಅಧೀನಮಾಡಿಕೊಂಡು ವಿವೇಚನಾಶಕ್ತಿಯನ್ನು ಕಿತ್ತುಹಾಕುವುದಿಲ್ಲ, ಆದರೆ ಅದಕ್ಕೆ ಬದಲಾಗಿ ಮನಸ್ಸಿಗೆ ಒಪ್ಪುವ ಹಾಗೆ ವಿವೇಚನಾಶಕ್ತಿಯ ಅನುಸಾರವಾಗಿ ಕಾರ್ಯನಡೆಸುವನು. ಯೇಸುವಿನಲ್ಲಿ ಪೂರ್ಣವಾಗಿ ಪ್ರತಿಷ್ಠಿತನಾಗಿ ನಂಬಿಕೆ ಯಲ್ಲಿರುವವನು ಪವಿತ್ರಾತ್ಮವನ್ನು ಪಡೆಯಬಹುದು; ಮತ್ತು ಅವನು ತನ್ನ ನಡೆ ನುಡಿ ಆಲೋಚನೆಗಳ ಮೂಲಕವಾಗಿ ಕರ್ತನಲ್ಲಿ ಬಳಕೆಯಾಗಿ ಆತನ ಮಹಿಮೆಯುಳ್ಳ ಸಂಬಂಧದಲ್ಲಿ ಮುಂದುವರೆದಷ್ಟೂ ಇದನ್ನು ಹೆಚ್ಚುಹೆಚ್ಚು ಅಧಿಕವಾಗಿ ಪಡೆಯ ಬಹುದು. ಆದರೆ ದೇವರ ಮಾನ್ಯವಾದ ಚಿತ್ತಕ್ಕೆ ವಿರೋಧವಾಗಿ ತನ್ನ ಸ್ವಯಿಚ್ಛೆಯಾನುಸಾರ ನಡೆಯುತ್ತಾ ದೈವೋಪದೇಶ ಗಳನ್ನಾಗಲೀ ಅಥವಾ ದೈವನಿಯಮಗಳನ್ನಾಗಲೀ ಯಾವುದೇ ಪ್ರಮಾಣದಲ್ಲಿ ಅಲಕ್ಷ್ಯಮಾಡುವುದಾದರೆ ಅದೇ ಪ್ರಮಾಣದಲ್ಲಿ ದೇವರ ಆತ್ಮನೂ ಸ್ವಸ್ಥಬುದ್ಧಿಯುಳ್ಳ ಆತ್ಮನೂ ಆಗಿರುವ ಪವಿತ್ರಾತ್ಮ ವನ್ನು ನಂದಿಸಿಕೊಳ್ಳುವುದು ಖಚಿತವಾಗುತ್ತದೆ. ಆತ್ಮವನ್ನು ಬಲವಂತವಾಗಿ ಹೇರಲಾಗುವುದಿಲ್ಲ ಆದರೆ ಇದು ಒಬ್ಬರಲ್ಲಿ ನೆಲೆಯಾಗಿದ್ದು ವೃದ್ಧಿಯಾಗಬೇಕಿದ್ದರೆ ಅದನ್ನು ಆದರದಿಂದ ಸ್ವೀಕರಿಸಿ ಹಿಡಿದಿಟ್ಟುಕೊಂಡು ಅದನ್ನು ಇಷ್ಟಪಡುವವರಾಗಬೇಕು.

## ಆ ಉಪದೇಶಕ್ಕೆ ಆಶ್ಚರ್ಯಚಕಿತರಾದುದು.

ನಮ್ಮ ಕರ್ತನ ಉಪದೇಶದಲ್ಲಿ ಆತನು ಪಾಪ ದುಃಖ ನೋವು ಮರಣಗಳಿಗೆ ಕಾರಣವನ್ನು ವಿವರಿಸಿದ್ದುದರಲ್ಲಿ ಸಂದೇಹ ವಿಲ್ಲ. ಇವು ಮೊಟ್ಟಮೊದಲ (ಆದಿ ತಂದೆತಾಯಿಗಳ) ಅವಿಧೇಯ ತೆಯಿಂದಾದ ಶಾಪದ ಫಲವಾಗಿದ್ದು ಅವುಗಳನ್ನು ದೇವರ ನಿಗದಿತ ವೇಳೆಯಲ್ಲಿ ಹಾಗೂ ನೇಮಿತ ವಿಧಾನದಿಂದ ಈ ಶಾಪವನ್ನು ಲೋಕದೊಳಗಿಂದ ತೆಗೆದುಹಾಕಲಾಗುವುದು. ಮರುಳು ಗೊಳಿಸುವ ಹಾಗು ಪೀಡಿಸುವ ಅಧಿಕಾರ ಸಾಮರ್ಥ್ಯಗಳು ಮುಂದೆಂದಿಗೂ ದುರಾತ್ಮಗಳಿಗೆ ಇರುವುದಿಲ್ಲ. ಮತ್ತು ವ್ಯಾದಿ ನೋವು ಮರಣಗಳೆಲ್ಲವನ್ನು ಆ ಭವ್ಯವಾದ ಉದಯಕಾಲದಲ್ಲಿನ ಆಶೀರ್ವಾದದ ಮೂಲಕವಾಗಿ ಅಳಿಸಿಹಾಕಲಾಗುವುದು. ಇದನ್ನು ದೇವರು ಮೆಸ್ಸೀಯನ ಮೂಲಕವಾಗಿ ವಾಗ್ದಾನ ಮಾಡಿರುವನು. ತಮ್ಮ ಶಾಸ್ತ್ರಿಗಳಿಂದ ಎಂದೂ ಕೇಳರಿಯದಿದ್ದ ಇಷ್ಟು ಅಧಿಕ ಸ್ಪಷ್ಟ ಹಾಗೂ ವಿಭಿನ್ನವಾದ ಈ ಸ್ತಬ್ಧರನ್ನಾಗಿಸುವ ಉಪದೇಶಗಳು ದುರಾತ್ಮಗಳ ಮೇಲೆ ಪ್ರದರ್ಶಿತವಾದ ಕರ್ತನ ಅಧಿಕಾರಗಳ ಬೆಂಬಲ ಪಡೆದಾಗ ಅವು ಪೂರ್ಣ ಸ್ಫೂರ್ತಿದಾಯಕವಾಗಿ ನಿರೀಕ್ಷೆ ಉಂಟುಮಾಡಿ ಜನರೆಲ್ಲರಿಗೆ ಅಚ್ಚರಿಯನ್ನುಂಟು ಮಾಡಿತು. ತಮ್ಮ ಸಮುದ್ರ ದಡದ ಮೇಲೆ ಉಪದೇಶ ಮಾಡುತ್ತಿದ್ದವನು ತಾನೇ ಮೆಸ್ಸೀಯನಲ್ಲದಿದ್ದರೂ ಒಬ್ಬ ಮಹಾ ಬೋಧಕನೂ ಒಬ್ಬ ದೊಡ್ಡ ಪ್ರವಾದಿಯೂ ಆಗಿರುವನು ಎಂಬುದನ್ನು ಅವರು ಸಾಕಷ್ಟು ಮನಗಂಡಿದ್ದರು.

ಯೇಸುವು ತನ್ನ ಸೇವೆಯನ್ನು ಆರಂಭಿಸಿ ಒಂದು ವರುಷಕ್ಕೂ ಹೆಚ್ಚಿನ ಸಮಯ ಕಳೆದಿದ್ದರೂ, ಗಲಿಲಾಯದ

ಕಾನಾದಲ್ಲಿ ನಡೆದ ಅದ್ಭುತವು ಹಿಂದೆ ನಡೆದಿದ್ದ ಸಂಗತಿಯಾಗಿದ್ದರೂ ಮತ್ತು ಆತನು ಆ ಪ್ರದೇಶದಲ್ಲಿ ಬಹು ಕಾಲದಿಂದ "ಪರಲೋಕ ರಾಜ್ಯವು ಸಮೀಪವಾಯಿತು" ಎಂದು ಉಪದೇಶ ಮಾಡುತ್ತಾ ಬಂದಿದ್ದರೂ, ಇದು ಅವರಿಗೆ ನಮ್ಮ ಕರ್ತನಿಗೆ ರೋಗದ ಹಾಗು ದುರಾತ್ಮಗಳ ಮೇಲಿದ್ದ ಅದ್ಭುತವಾದ ಅಧಿಕಾರ ಶಕ್ತಿಗಳಿಗೆ ಮೊದಲ ನಿದರ್ಶನವಾಗಿದ್ದಂತೆ ಕಾಣುತ್ತದೆ. ಇಲ್ಲದಿದ್ದಲ್ಲಿ ಯೇಸುವಿನ ಉಪದೇಶವನ್ನು ಕೇಳಿದ್ದ ಆ ಊರಿನ ಜನರು ಅಷ್ಟು ಆಶ್ಚರ್ಯಪಡುತ್ತಿರಲಿಲ್ಲ. ತಮ್ಮದೆಲ್ಲವನ್ನು ಬಿಟ್ಟು ಬಂದಿದ್ದ ಆ ನಾಲ್ವರು ಬೆಸ್ತರಿಗೆ ಬೇರೆಯವರಿಗಿಂತಲೂ ಕಡಿಮೆ ಆಶ್ಚರ್ಯವಾಗಿತ್ತೆಂಬುದು ನಮಗೆ ಖಚಿತ; ಏಕೆಂದರೆ ಈ ದೆವ್ವವನ್ನು ಹೊರಡಿಸುವ ಮೊದಲೇ ಅವರಿಗೆ ಕಾನಾದಲ್ಲಿ ದ್ರಾಕ್ಷಾರಸವನ್ನು ಹೆಚ್ಚಿಗೆಯಾಗಿ ಉಂಟುಮಾಡಿದ್ದ ಮತ್ತು ಕೆಲವು ದಿನಗಳ ಹಿಂದೆಯೇ ಮೀನುಗಳ ರಾಶಿಯನ್ನು ಅದ್ಭುತವಾಗಿ ದೊಕಿಸಿಕೊಟ್ಟಿದುದರ ವಿಷಯವಾಗಿ ತಿಳುವಳಿಕೆ ಹೊಂದಿದ್ದರು.

ಸಭಾಮಂದಿರವನ್ನು ಬಿಟ್ಟು ಯೇಸು ಮತ್ತು ಆ ನಾಲ್ವರು ಶಿಷ್ಯರು ಪೇತ್ರನ ಮನೆಗೆ ಹೋದರು. ಅಲ್ಲಿ ಆತನ ಅತ್ತೆಯು ಜ್ವರದಿಂದ ಬಿದ್ದುಕೊಂಡಿದ್ದಳು. ಅವರು ಆಕೆಯ ಪರವಾಗಿ ಯೇಸುವನ್ನು ಬೇಡಿಕೊಳ್ಳಲು (4:38) ಆತನು ಅವಳನ್ನು ಸ್ವಸ್ಥ ಮಾಡಿದನು. ದೆವ್ವವನ್ನು ಹೊರಹಾಕಿದ್ದ ವಿಷಯವು ನಮ್ಮ ಕರ್ತನಿಗೆ ರೋಗ ಗುಣಪಡಿಸಲು ಇರುವ ಅಧಿಕಾರದ ಬಗ್ಗೆ ಶಿಷ್ಯರ ಮನಸ್ಸುಗಳಿಗೆ ಸೂಚನೆ ನೀಡಿತ್ತೆಂಬುದು ಸ್ಪಷ್ಟ; ಇಲ್ಲದಿದ್ದಲ್ಲಿ ಅವರು ಸಭಾಮಂದಿರಕ್ಕೆ ಹೋಗುವ ಮೊದಲೇ ಕರ್ತನನ್ನು ಆಕೆಯ ವಿಷಯವಾಗಿ ಬೇಡಿಕೊಳ್ಳುತ್ತಿದ್ದರು. ನಮ್ಮ ಕರ್ತನು ಆ ಸ್ತ್ರೀಯ ಕೈಯನ್ನು ಹಿಡಿದು ಎಬ್ಬಿಸಲು ಆ ಕ್ಷಣವೇ ಜ್ವರವು ಆಕೆಯನ್ನು ಬಿಟ್ಟುಹೋಗಿತ್ತು. ಇದನ್ನು ಬಿಟ್ಟರೆ, ಜ್ವರನಿಂತ ನಂತರ ಜ್ವರ ರೋಗಿಗಳು ಸಾಮಾನ್ಯವಾಗಿ ಇರುವಂತೆ, ಆಕೆಯು ಬಲಹೀನಳಾಗಿಯಾಗಲೀ ಉತ್ಸಾಹವಿಲ್ಲದಂತವಳಾಗಲೀ ಆಗಿರಲಿಲ್ಲ. ಬದಲಾಗಿ ಆಕೆಯು ವಾಡಿಕೆಯನ್ನನುಸರಿಸಲು ಬೇಕಾದ ಬಲಹೊಂದಿ ಆ ಕ್ಷಣವೇ ಮನೆಯಲ್ಲಿನ ಅತಿಥಿಗಳನ್ನು ಊಟ ಮುಂತಾದವುಗಳಿಂದ ಉಪಚರಿಸಲು ಸಮರ್ಥಳಾದಳು.

## "ನಮ್ಮ ಬೇನೆಗಳನ್ನು ತಾನೇ ತೆಗೆದುಕೊಂಡನು"

ಸಾಯಂಕಾಲ ಹೊತ್ತು ಮುಳುಗಲು ಆಗ ದಿನ ಮುಗಿಯುವುದು ಮಾತ್ರವಲ್ಲದೆ, ಯೆಹೂದ್ಯರ ಪದ್ಧತಿಯ ಪ್ರಕಾರ ಹೊತ್ತು ಮುಳುಗುವಾಗ ಸಬ್ಬತ್ತು ಮುಕ್ತಾಯವಾಗಲು ಜನರ ದೃಷ್ಟಿಯಲ್ಲಿ ಅದು ಸರಿಯಾದ ಸಮಯವಾಗಿದ್ದ ಕಾರಣ, ಅವರು ವ್ಯಾಧಿಯುಳ್ಳವರನ್ನು ಮತ್ತು ದೆವ್ವಹಿಡಿದವರನ್ನು ಗುಣಪಡಿಸಿಕೊಳ್ಳಲು ಯೇಸುವಿನ ಬಳಿಗೆ ಕರೆತಂದರು. ತನ್ನಲ್ಲಿದ ಶಕ್ತಿಯನ್ನು ವ್ಯಯಮಾಡಿಕೊಂಡು ಆತನು ಇದನ್ನು ಮಾಡಿದ್ದನು ಎಂಬುದು ನಮಗೆ ಖಚಿತ. ಆತನು ನಮ್ಮ ಬೇನೆಗಳನ್ನು ತಾನೇ ತೆಗೆದುಕೊಂಡು ನಮ್ಮ ಕಷ್ಟಗಳನ್ನು ತಾನೇ ಹೊತ್ತುಕೊಂಡನೆಂದು ಅಪೋಸ್ತಲನು ಪ್ರಕಟಿಸಿರುವುದರಲ್ಲಿ ಈ ವಿಷಯವಾಗಿ ಸೂಚಿತವಾಗಿರುವುದು ಮಾತ್ರವಲ್ಲದೆ ರೋಗವನ್ನು ಗುಣಪಡಿಸಿದ ಒಂದು ದೃಷ್ಟಾಂತದ ಸಂಬಂಧದಲ್ಲಿ "ಆತನಿಂದ ಶಕ್ತಿ (ಸತ್ವ, ಬಲ, ತ್ರಾಣ) ಹೊರಟು ಎಲ್ಲರನ್ನು ವಾಸಿಮಾಡಿತು" (ಮತ್ತಾಯ 8:17; ಲೂಕ 6:19) ಎಂದು ಇದನ್ನು ನೇರವಾಗಿ ಹೇಳಲಾಗಿರುವುದು. ನಮ್ಮ ಕರ್ತನು ತನ್ನ ಪ್ರತಿಷ್ಠೆಯ ಮೂಲಕವಾಗಿ ಮಾಡಿಕೊಂಡ ಒಡಂಬಡಿಕೆಯನ್ನು ಹೀಗೆ ನೆರವೇರಿಸುತ್ತಾ ತನ್ನ ಪ್ರಾಣವನ್ನು ಇತರರಿಗಾಗಿ ಕೊಡಲು ಆರಂಭಿಸಿದ್ದನು. ಇತರರ ಪರವಾಗಿ ತನ್ನ ಶಕ್ತಿಯನ್ನು ಹೀಗೆ ವಿನಿಯೋಗಿಸುವುದನ್ನು ತನ್ನ ಸೇವೆಯ ಕಡೆಯ ಭಾಗದವರೆಗೂ ಅಂದರೆ ತಂದೆಯ ಚಿತ್ತಕ್ಕೆ ತನ್ನನ್ನು ಯಾವ ಪ್ರತಿರೋಧವನ್ನೂ ಮಾಡದೆ (ಪೂರ್ಣವಾಗಿ) ಒಪ್ಪಿಸಿಕೊಡುವವರೆಗೂ ಮುಂದುವರೆಸಿದನು. ನೀತಿವಂತನಾಗಿ ಅನೀತಿವಂತರಿಗೋಸ್ಕರ, ತನ್ನ ರಕ್ತದ ಮೂಲಕ ನಮ್ಮನ್ನು ಬಿಡುಗಡೆಮಾಡಲು, ಯಜ್ಞಾರ್ಪಿತವಾದ ತನ್ನ ಪ್ರಾಣವನ್ನು ಪಾಪಿಗಳ ಸಲುವಾಗಿ ಶಿಲುಬೆಗೆ ಹಾಕಲ್ಪಡಲು ತನ್ನನ್ನು ತಾನೇ ಒಪ್ಪಿಸಿಕೊಟ್ಟನು.

ಆ ವಿವರಣೆಯಲ್ಲಿ ಹೇಳಿರುವುದು, "ತಾನು ಕ್ರಿಸ್ತನೆಂದು ಅವುಗಳಿಗೆ ತಿಳಿದಿದ್ದರಿಂದ ಆತನು ಅವುಗಳನ್ನು ಮಾತನಾಡದಂತೆ ಗದರಿಸಿದನು." ಈ ಹೇಳಿಕೆಯಲ್ಲಿ ಮಾತ್ರವಲ್ಲದೆ ಗಾರುಡಗಾತಿಯಾದ ಹುಡುಗಿಯು "ಈ ಮನುಷ್ಯರು ಪರಾತ್ಪರನಾದ ದೇವರ ದಾಸರು; ನಿಮಗೆ ರಕ್ಷಣೆಯ ಮಾರ್ಗವನ್ನು ಸಾರುತ್ತಾರೆ" ಎಂದು ಕೂಗಿದ ಸಂದರ್ಭದಲ್ಲಿ ಪೌಲನು ಆಕೆಯನ್ನು ಗದರಿಸಿದಾಗಲೂ ಕರ್ತನು ತನ್ನ ವಿಷಯವಾಗಿ ದೆವ್ವಗಳಿಂದ ಸಾಕ್ಷಿಯನ್ನು ಬಯಸುವುದಿಲ್ಲವೆನ್ನುವುದು ಇದು ಎಷ್ಟು ಸತ್ಯ. ಇದು ಹೊಸದಾಗಿ ಹುಟ್ಟದವರ ವಿಷಯದಲ್ಲಿಯೂ ಸತ್ಯ. ಇಂಥವರ ವಿಷಯವಾಗಿ ಕರ್ತನು ನುಡಿದಿರುವುದೇನೆಂದರೆ, "ನನ್ನ ನಿಬಂಧನೆಗಳನ್ನು ಉಚ್ಚರಿಸುವುದು ನಿಮಗೇನು ಕೆಲಸ? ನೀವೋ ನನ್ನ ಸುಶಿಕ್ಷಣವನ್ನು ಹಗೆ ಮಾಡುತ್ತೀರಲ್ಲಾ; ನನ್ನ ಆಜ್ಞೆಗಳನ್ನು ಉಲ್ಲಂಘಿಸುತ್ತೀರಿ." (ಕೀರ್ತನೆ 50:16–17) ಕರ್ತನಿಗೆ ರಾಯಭಾರಿಗಳಾಗಲು ಆತನಿಗೆ ಪ್ರತಿಷ್ಠಿಸಿಕೊಂಡವರಿಗೆ ಇದು ವಿಶೇಷವಾದ ಸೌಭಾಗ್ಯ, ಅಂದರೆ ನೀಡಲಾದ ಒಂದು ವಿಶೇಷ ಗೌರವ. ಆದುದರಿಂದ ಮತ್ತೆ ಪ್ರಕಟಿಸಿರುವುದೆಂದರೆ, "ಅವರಲ್ಲಿ (ದುಷ್ಟರು) ಯಾರಿಗೂ (ಅರ್ಥಮಾಡಿಕೊಳ್ಳುವ) ವಿವೇಕವಿರದು; ಜ್ಞಾನಿಗಳಿಗೆ ವಿವೇಕವಿರುವುದು."–ದಾನಿಯೇಲ 12:10

ಕೇವಲ ದೇವರ ಬಗ್ಗೆ ಜ್ಞಾನವಿರುವರು ಮತ್ತು ಆತನ ಚಿತ್ತದ ಅನುಸಾರ ಜೀವಿಸಲು ಯತ್ನಿಸುವವರು ಮಾತ್ರ ದೇವರ ನಿಜವಾದ ಯೋಜನೆಯನ್ನು ಸ್ಪಷ್ಟವಾಗಿ ಗ್ರಹಿಸುವರೆಂಬುದನ್ನು ನಿರೀಕ್ಷಿಸಬಹುದು. ಬೇರೆ ಎಲ್ಲರು ಗೊಂದಲ ಮಾಡಿಕೊಂಡು ಹೆಚ್ಚುಕಡಿಮೆ ಕತ್ತಲೆಯಲ್ಲಿರುವರು. ಇದಕ್ಕೆ ಅನುಸಾರವಾಗಿಯೇ ಪ್ರವಾದಿಯು ಅಭಿಷಕ್ತರೆಂದು ಕರೆಯಲ್ಪಡುವ ಕ್ರಿಸ್ತನ ಪೂರ್ಣ ದೇಹಾಂಗಗಳಿಗೆ (ಶಿರಸ್ಸು ಮತ್ತು ದೇಹ) ಅನ್ವಯವಾಗುವಂತೆ ಪ್ರಕಟಿಸಿರುವುದು, "ಕರ್ತನ ಆತ್ಮವು ನನ್ನ ಮೇಲೆ ಅದೆ; ಆತನು ಶುಭವರ್ತಮಾನವನ್ನು ಸಾರುವುದಕ್ಕೆ ನನ್ನನ್ನು ಅಭಿಷೇಕಿಸಿದನು." ಪ್ರತಿಷ್ಠಿತರಲ್ಲದ ಹೊರತು ಯಾರನ್ನೂ ದೇವರ ಸಂದೇಶವನ್ನು ಸಾರುವ ಬೋಧಕರೆಂದು ಪರಿಗಣಿಸಲಾಗದು. ಮತ್ತು ಅಭಿಷೇಕ ಹೊಂದಿದವರೆಲ್ಲರು ತಮಗೆ ದೊರೆತ ಅವಕಾಶಗಳಾನುಸಾರವಾಗಿ ದೇವರ ವಾಕ್ಯದಲ್ಲಿ ಸೂಚಿಸಿರುವ ನ್ಯಾಯಸಮ್ಮತವಾದ ಮಿತಿಯೊಳಗೆ ಅವರ ಇಚ್ಛಾನುಸಾರ ತಾವು ಹೊಂದಿರುವ ಅಭಿಷೇಕದ ಪ್ರಮಾಣದ ಮೇರೆಗೆ ಕರ್ತನ ಪ್ರತಿನಿಧಿಗಳಾಗಿ ಆತನಿಗೆ ಬಾಯಾಗಿರುವರು.

ಮರುದಿನ ಬೆಳಿಗ್ಗೆ ಜನರ ಗುಂಪು ಒಬ್ಬ ಮಹಾ ಬೋಧಕನು ಹಾಗೂ ಸ್ವಸ್ಥಪಡಿಸುವಾತನು ತಮ್ಮ ಮಧ್ಯದಲ್ಲಿರುನೆಂಬ ಉತ್ಸಾಹದಲ್ಲಿ ಮತ್ತೆ ಯೇಸುವನ್ನು ಹುಡುಕುತ್ತಿದ್ದರು, ಆದರೆ ತಾನು ಬೇರೆ ಊರುಗಳಲ್ಲಿಯೂ ಸುವಾರ್ತೆಯನ್ನು ಸಾರಬೇಕೆಂದು ಹೇಳಿ ಆತನು ಮುಂಜಾನೆಯಲ್ಲಿ ಅಡವಿಯ ಸ್ಥಳಕ್ಕೆ ತೆರಳಿದ್ದನು. ಆತನು ತನ್ನ ತಂದೆಯ ಕಾರ್ಯಗಳಲ್ಲಿ ತೊಡಗಿಸಿಕೊಂಡು ಇಡೀ ಮಂದೆಯ ಅಗತ್ಯತೆಗಳು ಮತ್ತು ಹಿತಾಸಕ್ತಿಗಳನ್ನು ಗಮನಿಸುತ್ತಿರಬೇಕಿತ್ತು. ತಾನು ಮೆಸ್ಸೀಯನಾಗಿ ತಂದೆಯ ಪ್ರತಿನಿಧಿಯಾಗಿರುವೆನೆಂಬುದು ಕೇವಲ ನಿಜವಾದ ಇಸ್ರಾಯೇಲ್ಯರಿಗೆ ಮನವರಿಗೆಯಾಗಲು ತನ್ನಲ್ಲಿರುವ ನಿಜವಾದ ಗುಣಗಳ ಹಾಗೂ ಕಾರ್ಯಗಳ ಮೂಲಕ ಸೂಕ್ತವಾದಂಥ ದೇವಾನುಗ್ರಹವಾದ ಸಾಕ್ಷ್ಯಾಧಾರಗಳನ್ನು ನೀಡುವುದು ಆತನ ಸ್ಪಷ್ಟ ಉದ್ದೇಶವಾಗಿತ್ತು. ಆದುದರಿಂದ ಈ ಅದ್ಭುತಗಳ ಮೂಲಕ ಕುರುಹುಗಳನ್ನು ನೀಡಿದ ನಂತರ ತಾನು ಹೊರಟು ಹೋಗುವವನು. ಹೀಗೆ ಆತನು ಬಿಟ್ಟುಹೋಗುವುದು ಯಾರಾರ ಹೃದಯವು ಸರಿಯಾದ ಸ್ಥಿತಿಯಲ್ಲಿರುವುದಿಲ್ಲವೋ ಅವರು ತಮ್ಮಲ್ಲಿರುವ ಆಸಕ್ತಿಯನ್ನು ಕಳಕೊಂಡು ತಮ್ಮ ಉತ್ಸಾಹ ತಣ್ಣಗಾಗಿ ಇದನ್ನು ಮರೆತುಹೋಗುವದಕ್ಕಾಗಿರುವುದು. ಅದೇ ಸಮಯದಲ್ಲಿ ಇದು ಮೋಶೆಯ ಧರ್ಮಶಾಸ್ತ್ರ ಹಾಗು ಪ್ರವಾದಿಗಳ ಮೂಲಕ ವಾಗ್ದಾನ ಮಾಡಲ್ಪಟ್ಟಿರುವ ದೇವರ ಸಂತೈಸುವಿಕೆಗಾಗಿ ಕಾಯುತ್ತಿರುವ ನಿಜವಾದ ಇಸ್ರಾಯೇಲ್ಯರು ಆತನು ಸಾರಿಹೇಳಿರುವ ಆ ರಾಜ್ಯವನ್ನು ನಿರೀಕ್ಷಿಸಿ ಎದುರು ನೋಡುತ್ತಾ ಅದಕ್ಕಾಗಿ ಪ್ರಾರ್ಥಿಸುತ್ತಾ ಕಾಯುವುದನ್ನು ಮುಂದುವರೆಸುವ ಸಲುವಾಗಿರುವುದು.

ಪ್ರತಿಯೊಬ್ಬರ ವಿಷಯದಲ್ಲೂ ಹೀಗೆಯೇ: ಕರ್ತನು ಹುಡುಕುತ್ತಿರುವುದು ತನ್ನನ್ನು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸುವವರಾದ ಕೇವಲ ಆ ಆಯಲ್ಪಟ್ಟ ವರ್ಗವನ್ನು; ಆತನು ದೊಡ್ಡ ಸಮೂಹವನ್ನು ಹುಡುಕುತ್ತಿಲ್ಲ, ಅವರ ಸಮಯವು ಇನ್ನೂ ಬಂದಿಲ್ಲ. ಕ್ಲುಪ್ತ ಕಾಲದಲ್ಲಿ ಕುರುಡರೆಲ್ಲರ ಕಣ್ಣು ತೆರೆಯಲ್ಪಡುವುದು ಕಿವುಡರ ಕಿವಿ ಕೇಳಿಸತೊಡಗುವುದು ಮತ್ತು ಮಾನವಕುಲದ ಪ್ರತಿಯೊಬ್ಬನಿಗೂ ಕರ್ತನ ವಿಷಯವಾದ ಪರಿಜ್ಞಾನವನ್ನು ನೀಡಲಾಗುವುದು. ಆದರೆ ಈಗ ಕರ್ತನು ಹುಡುಕುತ್ತಿರುವುದು ಯಜ್ಞದಕುರಿಯ ಹೆಂಡತಿಯಾಗಲಿರುವ ಮದಲಗಿತ್ತಿಯೆಂಬ ಒಂದು ವಿಶೇಷ ವರ್ಗದ ಜನರನ್ನು.

## ಅನೇಕರನ್ನು ಆತನು ಸ್ವಸ್ಥಪಡಿಸಿದನು

ನಿಸ್ಸಂಶಯವಾಗಿ, ನಮ್ಮ ಕರ್ತನು ಈ ಪಾಠದಲ್ಲಿ ತಿಳಿಸಿರುವ ಸಂಗತಿಗಳಾದ ನಂತರದಲ್ಲಿ ಎರಡು ವರುಷ ಮೂರು ತಿಂಗಳುಗಳವರೆಗೆ ಅನೇಕ ರೋಗಿಗಳನ್ನು ಗುಣಪಡಿಸಿದ್ದನಾದರೂ ಪ್ಯಾಲೆಸ್ತೀನಾದ ಎಲ್ಲಾ ರೋಗಿಗಳನ್ನು ಗುಣಪಡಿಸಲಿಲ್ಲ. ಆತನ ಸೇವಾಕಾರ್ಯವು ರೋಗಿಗಳನ್ನು ಗುಣಪಡಿಸುವುದಾಗಿರಲಿಲ್ಲ; ಅದರೆ ಸುವಾರ್ತೆಯನ್ನು ಸಾರುವುದಾಗಿತ್ತು. ರೋಗಿಗಳ ಗುಣಪಡಿಸುವಿಕೆಯು ಕೇವಲ ಸಾಂದರ್ಭಿಕವಾಗಿದ್ದು ಅದು ಜನರ ಗಮನ ಸೆಳೆಯುವುದಕ್ಕಾಗಿ ಅವರು ತನ್ನನ್ನು ನಂಬಲು ಸಹಾಯ ಮಾಡುವುದಕ್ಕಾಗಿ ತಾನು ದೇವರ ಹಸ್ತವಾಗಿದ್ದೇನೆಂಬುದನ್ನು (ಕರ್ತನ ಬಾಹು) ತೋರಿಸಿ ಕೊಡುವುದಕ್ಕಾಗಿತ್ತು. ಉದಾಹರಣೆಗಾಗಿ, ಬೇತ್ಸಥಾ ಎಂಬ ಕೊಳದ ಬಳಿಯಲ್ಲಿ ಅಸ್ವಸ್ಥನಾಗಿ ಬಿದ್ದುಕೊಂಡಿದ್ದ ಮನುಷ್ಯನನ್ನು ಗುಣಪಡಿಸಿದ ಸಂದರ್ಭದಲ್ಲಿ ಅನೇಕ ಮಂದಿ ರೋಗಿಗಳು ಅಲ್ಲಿದ್ದರು ಅದರೆ ಅವರಲ್ಲಿ ಒಬ್ಬನೇ ಗುಣಮಾಡಲ್ಪಟ್ಟನು. (ಯೋಹಾನ 5:1–9) ಕಪೆರ್ನೌಮಿನಲ್ಲಿದ್ದ ರೋಗಿಗಳೆಲ್ಲರೂ ಗುಣಹೊಂದಲಿಲ್ಲವಾದರೂ ಅನೇಕರು ಗುಣ ಹೊಂದಿದ್ದರೆಂಬುದು ಆ ವಿವರಣೆಯಲ್ಲಿ ಅಡಕವಾಗಿರುವಂತೆ ತೋರುತ್ತದೆ; ಆದರೆ ಕಪೆರ್ನೌಮ್ ಒಂದು ಸಣ್ಣ ಊರು. ಅದಲ್ಲದೆ, ನಮಗೆ ಹೇಳಲಾಗಿರುವಂತೆ, ಬೇರೆ ಊರುಗಳಿಗಿಂತಲೂ ಇದಕ್ಕೆ ಅಧಿಕವಾಗಿ ಅದ್ಭುತವಾದ ಆಶೀರ್ವಾದಗಳು ಸೌಭಾಗ್ಯಗಳು ಅವಕಾಶಗಳು ಮತ್ತು ಅನುಗ್ರಹಗಳನ್ನು ಒದಗಿಸಲಾಗಿತ್ತು. ಅದಕ್ಕೆ ದೊರೆತ ಸೌಭಾಗ್ಯ ಆಶೀರ್ವಾದಗಳು ಮತ್ತು ಸದಾವಕಾಶಗಳ ಸಂಬಂಧದಲ್ಲಿ ಅದು ಪರಲೋಕದವರೆಗೂ ಏರಿಸಲ್ಪಟ್ಟಿತ್ತು. ಹಾಗು ಬಹುವಾಗಿ ಅದು ರೋಗಿಗಳನ್ನು ಗುಣಪಡಿಸುವ ಮತ್ತು ದೆವ್ವಹಿಡಿದವರನ್ನು ಸ್ವಸ್ಥಪಡಿಸುವ ಸಾಮಾನ್ಯವಾದ ಒಂದು ವಿಷಯದ ಮೂಲಕವಾಗಿತ್ತು.

## “ಈ ಸೂಚಕಕಾರ್ಯಗಳು ಹಿಂಬಾಲಿಸಿ ಹೋಗುವವು”

ಈ ಪಾಠವನ್ನು ಅಧ್ಯಯನ ಮಾಡುವಾಗ, ನಿಸ್ಸಂದೇಹವಾಗಿ, ಕರ್ತನ ಮೇಲೆ ಭರವಸವಿಟ್ಟಿರುವ ಆತನ ಜನರು ತಮ್ಮಲ್ಲಿ ಒಬ್ಬರಿಗೋಸ್ಕರ ಒಬ್ಬರು ಪ್ರಾರ್ಥಿಸಿ ತಮ್ಮಲ್ಲಿರುವ ರೋಗಗಳನ್ನು ಗುಣಪಡಿಸಿಕೊಳ್ಳಬೇಕು ಮತ್ತು ಇದಕ್ಕೆ ಬೇಸರಪಡಬಾರದು ಎಂದು ಕೆಲವರು ವಾದಿಸುವುದನ್ನು ಹಲವರು ನೆನಪಿಗೆ ತಂದುಕೊಳ್ಳವರು. ಹೀಗೆ ವಾದಿಸುವವರು ಈ ವಾಕ್ಯಗಳನ್ನು ಉಲ್ಲೇಖಿಸುವರು: “ಇದಲ್ಲದೆ ನಂಬುವವರಿಂದ ಈ ಸೂಚಕಕಾರ್ಯಗಳು ಉಂಟಾಗುವವು; ನನ್ನ ಹೆಸರನ್ನು ಹೇಳಿ ದೆವ್ವಗಳನ್ನು ಬಿಡಿಸುವರು; ಹೊಸಭಾಷೆಗಳಿಂದ ಮಾತಾಡುವರು; ಹಾವುಗಳನ್ನು ಎತ್ತುವರು; ವಿಷಪದಾರ್ಥವನ್ನೇನಾದರೂ ಕುಡಿದರೂ ಅವರಿಗೆ ಯಾವ ಕೇಡೂ ಆಗುವುದಿಲ್ಲ; ಅವರು ರೋಗಿಗಳ ಮೇಲೆ ಕೈಯಿಟ್ಟರೆ ಇವರಿಗೆ ಗುಣವಾಗುವದು ಎಂದು ಹೇಳಿದನು.” – ಮಾರ್ಕ 16:17–18

ಈ ಪ್ರಿಯ ಮಿತ್ರರು ಎರಡು ಸಂಗತಿಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು: (1) ವಾಸ್ತವದಲ್ಲಿ ಈ ಮಾತುಗಳು ಮತ್ತು ಮಾರ್ಕನ ಸುವಾರ್ತೆಯ ಹದಿನಾರನೇ ಅದ್ಯಾಯದ ವಚನ ಒಂಭತ್ತರಿಂದ ಕೊನೆಯವರೆಗೆ ಪೂರ್ಣವಾಗಿ ಸತ್ಯವೇದದ ಪುರಾತನ ಪ್ರತಿಗಳಲ್ಲಿ ಕಂಡುಬರುವುದಿಲ್ಲ ಮತ್ತು ಇವುಗಳು ಮಾರ್ಕನು ಬರೆದಿರುವುದಕ್ಕೆ ಹೆಚ್ಚಿಗೆಯಾಗಿ ಸೇರಿಸಿರುವುದೆಂದು ಗುರುತಿಸಲಾಗಿರುವುದು ಮತ್ತು ಹೀಗಾಗಿ ಇವುಗಳು ಪೂರ್ಣವಾಗಿ ಪವಿತ್ರಾತ್ಮ ಪ್ರೇರಿತವಲ್ಲವುಗಳು. ಇದನ್ನು ಸತ್ಯವೇದದ ವಿದ್ವಾಂಸರುಗಳೆಲ್ಲರೂ ಬಲ್ಲರು, ಹಾಗು ಈ ವಚನಗಳನ್ನು ಉಲ್ಲೇಖಿಸುವ ಅನೇಕರು ಇವುಗಳನ್ನು ತಿಳಿದಿರುವಷ್ಟು ಬುದ್ಧಿಯುಳ್ಳವರೆಂದು ನಾವು ಭಾವಿಸುವೆವು. ಇವುಗಳು ಸತ್ಯವೇದದಲ್ಲಿರುವ ವಾಕ್ಯಗಳಲ್ಲವೆಂದು ತಿಳಿದಿರುವಾಗ ಅವರು ಇವುಗಳನ್ನು ಸತ್ಯವೇದವಾಕ್ಯಗಳೆಂದು ಉಲ್ಲೇಖಿಸುವುದೇಕೆ?

(2) ಈ ವಚನಗಳು ಕರ್ತನ ಹಿಂಬಾಲಕರ ವಿಷಯದಲ್ಲಿ ನಿಜವಾಗಿರುವುದಿಲ್ಲ ಮತ್ತು ಇವುಗಳು ತಮಗೆ ಅನ್ವಯವಾಗುವುದೆಂದು ಉಲ್ಲೇಖಿಸಿ ಹೇಳುವವರು ಅವುಗಳನ್ನು ತಾವು ನಂಬುವುದಿಲ್ಲವೆಂದು ತೋರಿಸಿಕೊಡುತ್ತಾರೆ. ಹೇಗೆಂದರೆ ಅವರು ಸರ್ಪಗಳನ್ನು ಕೈಗಳಲ್ಲಿ ಎತ್ತಿಕೊಳ್ಳುವುದಿಲ್ಲ, ಅವರು ವಿಷವಸ್ತುಗಳನ್ನು ಕುಡಿಯಲು ಅಂಜುವರು, ಅವರಿಗೆ ದೆವ್ವಗಳನ್ನು ಬಿಡಸಲು ಸಾಧ್ಯವಾಗದು ಇಲ್ಲವೆ ತಮ್ಮ ಕೈಗಳನ್ನು ಇಡುವುದರ ಮೂಲಕ ರೋಗಿಗಳನ್ನು ಸ್ವಸ್ಥಪಡಿಸಲು ಅವರಿಗೆ ಸಾಧ್ಯವಾಗದು.

ನಮ್ಮ ಕರ್ತನು ಅದ್ಭುತಕಾರ್ಯಗಳನ್ನು ಜನರಿಗೆ ತಿಳುವಳಿಕೆ ನೀಡುವುದಕ್ಕಾಗಿ ಬಳಸಿಕೊಳ್ಳುತ್ತಿದ್ದುದು ಮಾತ್ರವಲ್ಲದೆ ಆತನು ಕಡೆಯಲ್ಲಿ ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸುವದಕ್ಕೆ ಉಪಯೋಗಿಸುವ ಶಕ್ತಿಯ ಉನ್ನತವಾದ ಹಾಗು ಭವ್ಯವಾದ ಪ್ರಮಾಣಗಳಿಗೆ ಛಾಯರೂಪವಾಗಿ ಅಥವಾ ನಿದರ್ಶನವಾಗಿತ್ತು. ದಾಖಲೆಗಳಲ್ಲಿ ತೋರಲಾಗಿರುವ ಮಟ್ಟಿಗೆ, ಅತನು ಈ ಅಧಿಕಾರವನ್ನು ತನ್ನ ಹಿಂಬಾಲಕರ ಅಥವಾ ತನ್ನ ಶಿಷ್ಯರ ಮೇಲೆ ಬಳಸಿರಲಿಲ್ಲ. ಅವರಿಗಾದ ಕರೆಯಲ್ಲಿ ಆತನ ಹೆಜ್ಜೆಯ ಜಾಡನ್ನು ಅನುಸರಿಸುವುದು ಅಡಕವಾಗಿರುವುದು ಮತ್ತು ಪುನರುದ್ಧಾರವಾಗುವುದಕ್ಕೆ ಹಾಗೂ ಶಾರೀರಿಕವಾದ ಆರೋಗ್ಯವನ್ನು ಪುನಃಪಡೆದುಕೊಳ್ಳುವುದಕ್ಕೆ ಯತ್ನಿಸುವ ಬದಲು ಅವರು ಸತ್ಯದ ವಿಷಯವಾದ ಸೇವೆಯಲ್ಲಿ ಸಹೋದರರಿಗೋಸ್ಕರ ತಮ್ಮ ಪ್ರಾಣವನ್ನು ಕೊಡಬಯಸುವರು. ಕರ್ತನ ಹಿಂಬಾಲಕರು ದೇಹಾರೋಗ್ಯವನ್ನು ಪಡೆಯುವುದಕ್ಕಾಗಿ ಹಾಗು ಪರಿಶೋಧನೆಗಳು ಕಷ್ಟಗಳು ಬೇನೆಗಳು ನೋವುನರಳಾಟ ಇವುಗಳಿಂದ ಬಿಡುಗಡೆ ಹೊಂದುವುದಕ್ಕಾಗಿ ಕರೆಯಲ್ಪಟ್ಟಿರು ವರೆಂದು ಯಾರಾರು ಆಲೋಚನೆಯುಳ್ಳವರಾಗಿರುವರೋ ಅವರು ತಪ್ಪಾದ ಅಭಿಪ್ರಾಯವನ್ನು ಹೊಂದಿರುವರು. ಭಯಭಕ್ತಿಯುಳ್ಳ ಜೀವಿತ ಹಾಗು ಕರ್ತನೊಡನೆ ಹೃದಯದಲ್ಲಿ ಹೊಂದಿರುವ ಸಮಾಧಾನ ಇವುಗಳು ಶಾರೀರಿಕವಾದ ಆರೋಗ್ಯಕ್ಕೆ ಸಹಾಯಕವಾಗಿರುತ್ತದೆಂಬುದು ಸತ್ಯ. ಆದರೆ ಅನುಕೂಲವಾದ ಸಮಯಗಳಲ್ಲಿಯೂ ಅನುಕೂಲವಲ್ಲದ ಸಮಯಗಳಲ್ಲಿಯೂ ಆ ಅರಸನ ಸೇವೆಯಲ್ಲಿ ತೊಡಗಿಸಿಕೊಳ್ಳುವುದು ಗಣನೀಯವಾದ ಪ್ರಮಾಣದಲ್ಲಿ ಶಾರೀರಿಕವಾಗಿ ಜೀವ ಸವೆದು ಹೋಗುವುದನ್ನು ಅರ್ಥೈಸುತ್ತದೆಂಬುದೂ ಸತ್ಯ. ಮತ್ತು ಕೆಲವು ಸಮಯಗಳಲ್ಲಿ ಒಂದು ಪ್ರಮಾಣದಲ್ಲಿನ ಶಾರೀರಿಕವಾದ ಅಸೌಖ್ಯತೆಗಳು ಉಂಟಾಗುವುದೆಂಬುದು ಇಲ್ಲಿ ಅಡಕವಾಗಿರುವುದು. ಮತ್ತು ಒಂದಲ್ಲಾ ಇನ್ನೊಂದು ವಿಧದಲ್ಲಿ ಉಂಟಾಗಲಿರುವ ಈ ಹಾನಿಗಳು ನಮ್ಮ ಯಜ್ಞಾರ್ಪಣೆಯ ಒಂದು ಭಾಗವೆಂದು ಅದನ್ನು ಪರಿಗಣಿಸಬೇಕು. ಇವು ನಮ್ಮ ಜೀವಿತಾನುಭವಕ್ಕೆ ಅವಶ್ಯವಿರುವ ಆ **"ಎಲ್ಲಾ ಸಂಗತಿಗಳ"** (ಅಂದರೆ ಕಾರ್ಯಗಳ: ರೋಮಾ 8:29) ಒಂದು ಭಾಗವಾಗಿದ್ದು ಇವುಗಳನ್ನು ದೇವರು ನಮಗೆ ಅನುಕೂಲಕರವಾಗುವಂತೆ ಮಾರ್ಪಡಿಸಲು ಸಮರ್ಥನು.

ಕರ್ತನ ಜನರಲ್ಲಿ ಹಲವಾರು ಮಂದಿ ಆತನ ಹಸ್ತದಲ್ಲಿರುವ ಶಿಕ್ಷಾದಂಡದ ಮೂಲಕವಾಗಿ ರೋಗಬಾಧೆಗಳ ರೂಪದಲ್ಲಿ ನಿಜವಾಗಿಯೂ ಅತಿ ಅದ್ಭುತವಾದ ಆಶೀರ್ವಾದ ಗಳನ್ನು ಹೊಂದಿರುವರು. ಹೀಗೆ ಕರ್ತನನ್ನು ಪ್ರೀತಿಸುವವರಾಗಿ ತಮಗುಂಟಾದ ಜೀವಿತಾನುಭವಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡವರಾದಲ್ಲಿ ಶಾಪಕ್ಕೆ ಸಂಬಂಧಿಸಿದ ಅಂಶವಾಗಿರುವ ಒಂದು ಕೆಟ್ಟ ವಿಷಯವು ಹಲವು ಸಂದರ್ಭಗಳಲ್ಲಿ ಅವರಿಗೆ ಹಿತಕರವಾಗಿ ಮಾರ್ಪಡುತ್ತದೆ. ನಿಜ, ಪರಲೋಕದಲ್ಲಿ ಅಸ್ವಸ್ಥತೆಯೆಂಬುದು ಇರುವುದಿಲ್ಲ ಮತ್ತು ಭೂಮಿಯ ಮೇಲೆ ಸಾವಿರ ವರುಷದ ಆಳ್ವಿಕೆಯಲ್ಲಿ ಶಾಪವನ್ನು ಪೂರ್ಣವಾಗಿ ಕಿತ್ತೊಗೆಯಲ್ಪಟ್ಟ ನಂತರ ಅಲ್ಲಿ ಅಸ್ವಸ್ಥತೆಯೆಂಬುದಿರುವುದಿಲ್ಲ. ಯಾಕೆಂದರೆ ಯಾರು ದೇವರ ವಿಧಿನಿಯಮಗಳನ್ನು ಅಂಗೀಕರಿಸಿ ಅವುಗಳಿಗೆ ವಿಧೇಯರಾಗುವರೋ ಅವರಿಗೆ (ಶಾಪದ ಮೂಲಕ ವಾಗಿ) ತಾವು ಕಳೆದುಕೊಂಡದ್ದೆಲ್ಲವನ್ನು ಪುನರ್ವಶಪಡಿಸಿ ಅವರನ್ನು ಪರಿಪೂರ್ಣರನ್ನಾಗಿ ಮಾಡಿಲಾಗಿರುತ್ತದೆ ಮತ್ತು (ದೇವರಿಗೆ ಅವಿಧೇಯರಾಗದ) ಮಾನವ ಕುಲದ ಇತರರೆಲ್ಲರನ್ನು ನಾಶಪಡಿಸಲಾಗಿರುತ್ತದೆ. ಆದರೆ ಆ ಕಾಲ ಇನ್ನೂ ಬಂದಿಲ್ಲ; ಕಾರಣ ನಾವು ಇನ್ನೂ ನೋಡುವವರಾಗಿ ನಡೆಯದೆ ನಂಬುವವ ರಾಗಿಯೇ ನಡೆಯುತ್ತಿದ್ದೇವೆ; ನಾವು ಇನ್ನೂ ಮಾನಸಿಕ ವಾಗಿಯೂ ನೈತಿಕವಾಗಿಯೂ ಶಾರೀರಿಕವಾಗಿಯೂ ಬಲಹೀನತೆ ಯಲ್ಲಿದ್ದೇವೆ ಮತ್ತು ಅದು (ಆದಾಮನ ಅವಿಧೇಯತೆಯ ಮೂಲಕವಾಗಿ ಪರಿಪೂರ್ಣತೆ ಯಿಂದ) ಬಿದ್ದುಹೋಗಿರುವ ಮಾನವರಿಗೆ ಸಾಮಾನ್ಯವಾಗಿ ಬಂದಿರುವ ನಮ್ಮ ಪಾಲು. ಕರ್ತನು ತನ್ನ ಜ್ಞಾನುಸಾರವಾಗಿ, ನಾವು ಮಾಡಬೇಕಿರುವ ಕಾರ್ಯಗಳ ಅಗತ್ಯತೆಗಳ ವಿಷಯವಾಗಿ ತನಗಿರುವ ತಿಳುವಳಿಕೆಯಾನುಸಾರ, ನಮಗೆ ವಿಶೇಷವಾದ ರಿಯಾಯಿತಿಗಳನ್ನು ಅಥವಾ ವಿಶೇಷವಾದ ಪುನಶ್ಚೇತನವನ್ನು ದಯಪಾಲಿಸಬಹುದು. ಆದರೆ ಭೂಸಂಬಂಧ ವಾದ ಸವಲತ್ತುಗಳನ್ನು ಮತ್ತು ರಿಯಾಯಿತಿಗಳನ್ನು ಕೇಳಿ ಕೊಳ್ಳುವದರ ಮೂಲಕ ವಾಗಿ ನಾವು ಅರ್ಪಿಸುತ್ತಿ ರುವ ನಮ್ಮ ಯಜ್ಞಾರ್ಪಣೆಯನ್ನು ಹಿಂದೆಗೆದುಕೊಳ್ಳುವ ಪ್ರಯತ್ನ ಮಾಡುವಂತಿಲ್ಲ. ಭೂಸಂಬಂಧ ವಾದ ತಂದೆತಾಯಿಗಳು ತಮ್ಮ ಮಕ್ಕಳಿಗೆ ಭೂಲೋಕದ ವಸ್ತುಗ ಳನ್ನು ನೀಡುವುದಕ್ಕಿಂತಲೂ ಅಧಿಕವಾಗಿ ನಮ್ಮ (ಪರಲೋಕದ) ತಂದೆಯು ತನ್ನ ಮಕ್ಕಳಿಗೆ ಪವಿತ್ರಾತ್ಮನ ವರಗಳನ್ನು ದಯಪಾಲಿಸಲು ಹೆಚ್ಚು ಬಯಸುತ್ತಾನೆಂಬುದನ್ನು ಅರಿತವರಾದ ನಾವು ಆತ್ಮೀಯ ವರಗಳನ್ನು ಕೇಳಿಕೊಳ್ಳಬೇಕಿರುವುದು.

ನಮಗೆ ಪವಿತ್ರಾತ್ಮವನ್ನು ನೀಡುವುದೆಂದರೆ, ನಮಗೆ ನೀತಿಯ ಮತ್ತು ಶಾರೀರಿಕ ಸಂಬಂಧವಾಗಿ ಬರುವ ಶ್ರಮಸಂಕಟ ಪರಿಶೋಧನೆಗಳ ಮೂಲಕ ತಾಳ್ಮೆ, ಸಾತ್ವಿಕತ್ವ ಹಾಗು ಪ್ರೀತಿಯ ವಿಷಯವಾಗಿ ಪಾಠಗಳನ್ನು ಹೊಂದಿ ಅವುಗಳನ್ನು ವೃದ್ಧಿಪಡಿಸಿಕೊಳ್ಳುವುದು ಸಾಮಾನ್ಯವಾಗಿ ಅಡಕವಾಗಿರುವುದು. ದೇವರಿಗೆ ವಿಧೇಯನಾದ ಮಗನು ದೇವವಾಕ್ಯದ ವಿಷಯವಾದ ತಿಳುವಳಿಕೆಯನ್ನು ಪಡೆದು ಹಾಗೂ ಅದರ ಭಾವಾರ್ಥಗಳನ್ನು ಗ್ರಹಿಸುವುದರ ಮೂಲಕ ಅಭಿವೃದ್ಧಿಯಾಗಿ, ಕರ್ತನ ಜ್ಞಾನಾನು ಸಾರವಾಗಿ ತಾನು ನಡೆಸಲ್ಪಡುವುದನ್ನು ಅಂಗೀಕರಿಸುವುದ ರಲ್ಲಿಯೂ ಹಾಗು ತನಗೆ ಅತ್ಯುತ್ತಮವಾದುದೆಂದು ತೋರುವ ಲೌಕೀಕವಾದ ಆಶೀರ್ವಾದಗಳನ್ನು ಪಡೆಯುವ ವಿಷಯವಾಗಿ ಕರ್ತನ ಚಿತ್ತವನ್ನು ಭರವಸದಿಂದ ಎದುರುನೋಡುವುದ ರಲ್ಲಿಯೂ ಉಲ್ಲಾಸಗೊಳ್ಳುವನು. ನಮಗೆ ವಿಶೇಷವಾಗಿ ಲಾಭಕರ ವಾಗಿರುವಂಥವುಗಳೆಂದರೆ ಅವು ಆತ್ಮಿಕವಾದ ಸಂಗತಿಗಳು. ಅವು

ಕಪೆರ್ನೌಮಿನಲ್ಲಿಯಾಗಲಿ ಅಥವಾ ನಮ್ಮ ಕರ್ತನ ಸೇವಾಕಾಲದಲ್ಲಿ ಎಲ್ಲಾಗಲೀ ದೊರೆಯಲು ಪ್ರಾರಂಭವಾಗಲಿಲ್ಲ; ಬದಲಾಗಿ, ಆತನು ಪರಲೋಕಕ್ಕೇರಿ ತಂದೆಯಿಂದ ತನ್ನ ಬಹುಮಾನವನ್ನು ಪಡೆದು ತನ್ನ ಹಿಂಬಾಲಕರಿಗೆ ಆತ್ಮನಿಂದ ಹುಟ್ಟಿದವರಾಗಿ ನೂತನ ಸ್ವಭಾವವನ್ನು ಹೊಂದುವಂತೆ ಮಾಡುವ ಅಧಿಕಾರವನ್ನು ಪಡೆದ ನಂತರ ಪಂಚಾಶತ್ತಮ ದಿನದಂದು ಅವುಗಳು ದೊರೆಯಲು ಪ್ರಾರಂಭವಾಯಿತು.

ನಾವು ರೊಟ್ಟಿಯನ್ನಾಗಲೀ ಮೀನನ್ನಾಗಲೀ ಶಾರೀರಿಕ ಸ್ವಸ್ಥತೆಯನ್ನಾಗಲೀ ಪಡೆಯಲು ಬಯಸದೇ ಇರೋಣ. ಇವೆಲ್ಲವುಗಳಿಗಾಗಿ ಅನ್ಯಜನರು ಆತುರಪಡುತ್ತಾರೆ. ಆದರೆ ನಾವು ಆತ್ಮಿಕವಾದ ಸ್ವಸ್ಥತೆ ಬಲ ಹಾಗೂ ಉತ್ಸಾಹಗಳನ್ನು ಹೊಂದಲು ಬಯಸುವವರಾಗೋಣ; ಮತ್ತು ಆಗ ಲೌಕಿಕವಾಗಿ ಬೇಕಾದವುಗಳನ್ನು ದೈವಜ್ಞಾನ ಮತ್ತು ಪ್ರೀತಿಯನುಸಾರ ಇವುಗಳ ಜೊತೆಯಲ್ಲಿ ಸೇರಿಸಿ ಕೊಡಲಾಗುವುದು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 30 | ಗಲಿಲಾಯ | ಆಗಷ್ಟೇ ಕರೆಯಲ್ಪಟ್ಟ ನಾಲ್ವರೊಂದಿಗೆ ಗಲಿಲಾಯದಲ್ಲಿ ಮಾಡಿದ ಮೊದಲನೇ ಪ್ರಯಾಣ | 4:23–25 | 1:35–39 | 4:42,43 | –– |
| | ಗಲಿಲಾಯ | ಕುಷ್ಠರೋಗಿಯು ಸ್ವಸ್ಥವಾದುದು; ಜನರು ಗುಂಪುಗುಂಪಾಗಿ ಯೇಸುವಿನ ಬಳಿಯಲ್ಲಿದ್ದುದು | 8:1–4 | 1:40–45 | 5:12–16 | –– |

## ಮತ್ತಾಯ 4:23–25

ಬಳಿಕ ಯೇಸು ಗಲಿಲಾಯದಲ್ಲೆಲ್ಲಾ ತಿರುಗಾಡಿ ಅಲ್ಲಿಯವರ ಸಭಾಮಂದಿರಗಳಲ್ಲಿ ಉಪದೇಶ ಮಾಡುತ್ತಾ, ಪರಲೋಕ ರಾಜ್ಯದ ಸುವಾರ್ತೆಯನ್ನು ಸಾರಿಹೇಳುತ್ತಾ ಜನರ ಎಲ್ಲಾತರದ ರೋಗಗಳನ್ನೂ ಎಲ್ಲಾತರದ ಬೇನೆಗಳನ್ನೂ ವಾಸಿಮಾಡುತ್ತಾ ಬಂದನು. ಆತನ ಸುದ್ದಿಯು ಸಿರಿಯ ದೇಶದಲ್ಲೆಲ್ಲಾ ಹಬ್ಬಿದ್ದರಿಂದ ಮೈಯಲ್ಲಿ ನೆಟ್ಟಗಿಲ್ಲದವರನ್ನು, ಅಂದರೆ ತರತರದ ರೋಗಬಾಧೆಗಳಿಂದ ಕಷ್ಟಪಡುವವರನ್ನೂ ದೆವ್ವಹಿಡಿದ ವರನ್ನೂ ಮೂರ್ಛಾರೋಗಿಗಳನ್ನೂ ಪಾರ್ಶ್ವವಾಯುವಿನವರನ್ನೂ ಆತನ ಬಳಿಗೆ ಕರತಂದರು; ಆತನು ಅವರನ್ನು ಸ್ವಸ್ಥಮಾಡಿದನು. ಮತ್ತು ಗಲಿಲಾಯ ದೆಕಪೊಲಿ ಯೆರೂಸಲೇಮ್ ಯೂದಾಯ ಎಂಬೀ ಸ್ಥಳಗಳಿಂದಲೂ ಯೋರ್ದನ್ ಹೊಳೆಯ ಆಚೇಕಡೆಯಿಂದಲೂ ಜನರು ಗುಂಪುಗುಂಪಾಗಿ ಆತನ ಹಿಂದೆ ಹೋದರು.

## ಮಾರ್ಕ 1:35–45

ಮುಂಜಾನೆ ಇನ್ನೂ ಮೊಬ್ಬಿರುವಾಗ ಆತನು ಎದ್ದು ಹೊರಟು ಅಡವಿಯ ಸ್ಥಳಕ್ಕೆ ಹೋಗಿ ದೇವರನ್ನು ಪ್ರಾರ್ಥಿಸುತ್ತಿದ್ದನು. ಸೀಮೋನನೂ ಅವನ ಸಂಗಡ ಇದ್ದವರೂ ಆತನನ್ನು ಹಿಂದಟ್ಟಿ ಕಂಡು–ಎಲ್ಲರು ನಿನ್ನನ್ನು ಹುಡುಕುತ್ತಾರೆ ಅನ್ನಲಾಗಿ ಆತನು ಅವರಿಗೆ––ನಾವು ಸಮೀಪದಲ್ಲಿರುವ ಬೇರೆ ಊರುಗಳಿಗೆ ಹೋಗೋಣ; ಅಲ್ಲಿಯೂ ನಾನು ಸುವಾರ್ತೆಯನ್ನು ಸಾರಬೇಕು; ಇದಕ್ಕಾಗಿಯೇ ನಾನು ಹೊರಟುಬಂದಿದ್ದೇನೆ ಎಂದು ಹೇಳಿದನು. ಬಳಿಕ ಆತನು ಗಲಿಲಾಯದಲ್ಲೆಲ್ಲಾ ಹೋಗಿ ಅವರ ಸಭಾಮಂದಿರಗಳಲ್ಲಿ ಸುವಾರ್ತೆಯನ್ನು ಸಾರುತ್ತಾ ದೆವ್ವಗಳನ್ನು ಬಿಡಿಸುತ್ತಾ ಇದ್ದನು. ಒಬ್ಬ ಕುಷ್ಠರೋಗಿಯು ಯೇಸುವಿನ ಬಳಿಗೆ ಬಂದು ಆತನ ಮುಂದೆ ಮೊಣಕಾಲೂರಿಕೊಂಡು––ನಿನಗೆ ಮನಸ್ಸಿದ್ದರೆ ನನ್ನನ್ನು ಶುದ್ಧಮಾಡ ಬಲ್ಲೆ ಎಂದು ಬೇಡಿಕೊಳ್ಳಲು ಆತನು ಕನಿಕರಪಟ್ಟು ಕೈನೀಡಿ ಅವನನ್ನು ಮುಟ್ಟಿ––ನನಗೆ ಮನಸ್ಸುಂಟು; ಶುದ್ಧನಾಗು ಅಂದನು. ಕೂಡಲೆ ಅವನ ಕುಷ್ಠವು ಹೋಗಿ, ಅವನು ಶುದ್ಧನಾದನು. ಆಗ ಯೇಸು ಅವನಿಗೆ–ಯಾರಿಗೂ ಏನೂ ಹೇಳಬೇಡ ನೋಡು; ಆದರೆ ಹೋಗಿ ಯಾಜಕನಿಗೆ ನಿನ್ನ ಮೈ ತೋರಿಸಿ ಮೋಶೆಯು ನೇಮಕ ಮಾಡಿರುವುದನ್ನು ಅರ್ಪಿಸಿ ನಿನ್ನ ಶುದ್ಧಾಚಾರವನ್ನು ನೆರವೇರಿಸು, ಅದು ಜನರಿಗೆ ಸಾಕ್ಷಿಯಾಗಲಿ ಎಂದು ಖಂಡಿತವಾಗಿ ಹೇಳಿ ಅವನನ್ನು ಕಳುಹಿಸಿಬಿಟ್ಟನು. ಆದರೆ ಅವನು ಹೊರಟುಹೋಗಿ ಆ ಸಂಗತಿಯನ್ನು ಬಹಳವಾಗಿ ಸಾರಿ ಹಬ್ಬಿಸಿದ್ದರಿಂದ ಯೇಸು ಬಹಿರಂಗವಾಗಿ ಇನ್ನೂ ಯಾವ ಊರೊಳಕ್ಕೂ ಹೋಗಲಾರದೆ ಹೊರಗೆ ಅಡವಿಯ ಸ್ಥಳಗಳಲ್ಲಿ ಇದ್ದನು. ಮತ್ತು ಜನರು ನಾಲ್ಕು ಕಡೆಯಿಂದಲೂ ಆತನ ಬಳಿಗೆ ಬರುತ್ತಿದ್ದರು.

## ಲೂಕ 4:42–43

ಬೆಳಗಾದ ಮೇಲೆ ಆತನು ಹೊರಟು ಅಡವಿಯ ಸ್ಥಳಕ್ಕೆ ಹೋದನು; ಜನರು ಗುಂಪುಗುಂಪಾಗಿ ಆತನನ್ನು ಹುಡುಕಿಕೊಂಡು ಆತನಿದ್ದಲ್ಲಿಗೆ ಬಂದು––ನೀನು ನಮ್ಮನ್ನು ಬಿಟ್ಟುಹೋಗಬೇಡ ಎಂದು ಆತನನ್ನು ತಡೆದರು. ಆದರೆ ಆತನು ಅವರಿಗೆ––ನಾನು ದೇವರ ರಾಜ್ಯದ ಸುವಾರ್ತೆಯನ್ನು ಬೇರೆ ಊರುಗಳಿಗೂ ಸಾರಿಹೇಳಬೇಕಾಗಿದೆ; ಇದಕ್ಕಾಗಿಯೇ ಕಳುಹಿಸಲ್ಪಟ್ಟಿದ್ದೇನೆ ಎಂದು ಹೇಳಿದನು. (5:12–16) ಆತನು ಒಂದಾನೊಂದು ಊರಿನಲ್ಲಿದ್ದಾಗ ಮೈಯೆಲ್ಲಾ ಕುಷ್ಠರೋಗ ತುಂಬಿದ್ದ ಒಬ್ಬ ಮನುಷ್ಯನು ಯೇಸುವನ್ನು ಕಂಡು ಅಡ್ಡಬಿದ್ದು––ಸ್ವಾಮೀ, ನಿನಗೆ ಮನಸ್ಸಿದ್ದರೆ ನನ್ನನ್ನು ಶುದ್ಧಮಾಡ ಬಲ್ಲೆ ಎಂದು ಬೇಡಿಕೊಂಡನು. ಆತನು ಕೈನೀಡಿ ಅವನನ್ನು ಮುಟ್ಟಿ––ನನಗೆ ಮನಸ್ಸುಂಟು; ಶುದ್ಧನಾಗು ಅಂದನು. ಕೂಡಲೇ ಅವನ ಕುಷ್ಠವು ಹೋಯಿತು. ಆಗ ಆತನು ಅವನಿಗೆ––ನೀನು ಯಾರಿಗೂ ಹೇಳಬೇಡ; ಆದರೆ ಹೋಗಿ ಯಾಜಕನಿಗೆ ನಿನ್ನ ಮೈ ತೋರಿಸಿ ಮೋಶೆಯು ನೇಮಕ ಮಾಡಿರುವುದನ್ನು ಅರ್ಪಿಸಿ ನಿನ್ನ ಶುದ್ಧಾಚಾರವನ್ನು ನೆರವೇರಿಸು, ಅದು ಜನರಿಗೆ ಸಾಕ್ಷಿಯಾಗಲಿ ಎಂದು ಅಪ್ಪಣೆಕೊಟ್ಟನು. ಆದರೂ ಆತನ ಸುದ್ದಿಯು ಮತ್ತಷ್ಟು ಹಬ್ಬಿತು; ಮತ್ತು ಜನರು ಆತನ ಉಪದೇಶವನ್ನು ಕೇಳುವುದಕ್ಕೂ ತಮ್ಮತಮ್ಮ ಜಾಡ್ಯಗಳನ್ನು ವಾಸಿಮಾಡಿಸಿಕೊಳ್ಳುವುದಕ್ಕೂ ಗುಂಪುಗುಂಪಾಗಿ ನೆರೆದರು. ಆತನಾದರೋ ಅರಣ್ಯಪ್ರದೇಶಗಳಿಗೆ ಹೋಗಿ ದೇವರ ಪ್ರಾರ್ಥನೆಯನ್ನು ಮಾಡುತ್ತಿದ್ದನು.

# ಆತನು ಅವರ ರೋಗಗಳನ್ನು ವಾಸಿಮಾಡುವನು

**ರಿಪ್ರಿಂಟ್ಸ್, ಪುಟ 4979**

## ಮಾರ್ಕ 1:29–45

**"ನಮ್ಮ ಬೇನೆಗಳನ್ನು ತಾನೇ ತೆಗೆದುಕೊಂಡು ನಮ್ಮ ರೋಗಗಳನ್ನು ಹೊತ್ತುಕೊಂಡನು." – ಮತ್ತಾಯ 8:17**

ಈ ದಿನದ ಅಧ್ಯಯನವು ಒಂದು ವಾರದ ಹಿಂದಿನದನ್ನು ನಿಕಟವಾಗಿ ಅನುಸರಿಸಿಕೊಂಡು ಹೋಗುವುದು. ಯೇಸುವು ಕಪೆರ್ನೌಮಿನ ಸಭಾಮಂದಿರವನ್ನು ಬಿಟ್ಟುಹೊರಟಾಗ, ಆತನು ಭಕ್ತನಾದ ಪೇತ್ರನ ಮನೆಗೆ ಹೋದನು. ಅಲ್ಲಿ ಭಕ್ತನಾದ ಪೇತ್ರನ ಅತ್ತೆಯು ಜ್ವರದಿಂದ ಅಸ್ವಸ್ಥಳಾಗಿ ಬಿದ್ದುಕೊಂಡಿದ್ದಳು. ಆಕೆಯ ಕೈಯನ್ನು ಹಿಡಿದು ಆಕೆಯನ್ನು ಆರೋಗ್ಯವಂತಳನ್ನಾಗಿ ಎಬ್ಬಿಸುವುದು ರಕ್ಷಕನಿಗೆ ಒಂದು ಕ್ಷಣದ ಕೆಲಸವಾಗಿತ್ತು. ಯೇಸುವಿನ ಕೀರ್ತಿಯು ಹಬ್ಬಿತ್ತು ಮತ್ತು ಸಾಯಂಕಾಲವಾದಾಗ ಅಲ್ಲಿ ಆತನ ಸ್ವಸ್ಥತೆಯನ್ನು ಉಂಟುಮಾಡುವ ಮಾತುಗಳಿಗೂ ಆತನ ಮುಟ್ಟುವಿಕೆಗೂ ಬೇಡಲು ಗುಂಪು ಕೂಡಿಬಂದಿತ್ತು.

ಆದರೆ ತಾನು ಮೂಡಿಸಿದ್ದ ಸೌಹಾರ್ದ ಭಾವನೆಯು ವೃದ್ಧಿಯಾಗಿ ಗಾಢವಾಗಿಸಲು ಆತನು ಅಲ್ಲಿ ನೆಲೆಗೊಳ್ಳಲಿಲ್ಲ. ಮಾರಣೆಯ ದಿನ ಬೆಳಿಗ್ಗೆ ಹೊತ್ತು ಮೂಡುವುದಕ್ಕೆ ಮೊದಲು ಆತನು ಕಪೆರ್ನೌಮಿನಿಂದ ಹೊರಟು ಪ್ರಾರ್ಥನೆಮಾಡಿ ದೇವರ ಅನ್ಯೋನ್ಯತೆಯಲ್ಲಿರಲು ಅಡವಿಯ ಸ್ಥಳಕ್ಕೆ ಹೋದನು. ಶಿಷ್ಯರಾಗುವುದಕ್ಕೆ ಕರೆಯಲ್ಪಟ್ಟ ಭಕ್ತನಾದ ಪೇತ್ರನು ಮತ್ತು ಆತನ ಸಂಗಡಿಗರು ಹಿಂಬಾಲಿಸಿಕೊಂಡು ಹೋಗಿ ನಂತರದಲ್ಲಿ ಯೇಸುವನ್ನು ಕಂಡುಕೊಂಡು "ಎಲ್ಲರೂ ನಿನ್ನನ್ನು ಹುಡುಕುತ್ತಿರುವರು" ಎಂದು ಹೇಳಿ ಆತನು ಹಿಂದಿರುಗಲು ಒತ್ತಾಯಿಸಿದರು. ಆದರೆ ಯೇಸು "ನಾವು ಸಮೀಪದಲ್ಲಿರುವ ಬೇರೆ ಊರುಗಳಿಗೆ ಹೋಗೋಣ; ಅಲ್ಲಿಯೂ ನಾನು ಸುವಾರ್ತೆಯನ್ನು ಸಾರಬೇಕು." ಎಂದು ಉತ್ತರವಾಗಿ ಹೇಳಿದನು. ಹಾಗೂ ಆತನು ಗಲಿಲಾಯದಲ್ಲಿ ಎಲ್ಲಾ ಕಡೆಯಲ್ಲಿರುವ ಸಭಾಮಂದಿರಗಳಿಗೆ ಹೋಗಿ ಸುವಾರ್ತೆ ಸಾರಿ ದೆವ್ವಗಳನ್ನು ಬಿಡಿಸುತ್ತಿದ್ದನು. ರೋಗಗಳನ್ನು ಗುಣಪಡಿಸುವ ಅದ್ಭುತ ಶಕ್ತಿಗಿಂತಲೂ ಹೆಚ್ಚು ಆಕರ್ಷಕವಾಗಿ ಬೇರೆ ಯಾವುದೂ ಮಾನವ ಮನಸ್ಸುಗಳಿಗೆ ತೋಚಲಾರದು. ರೋಗ ಬಾಧೆ ನರಳಾಟಗಳಲ್ಲಿ ಯಾರೂ ಸಂತೋಷಿಸುವುದಿಲ್ಲ. ತಮಗೆ ಗುಣವಾದದ್ದು ಸ್ವತಃ ಸೈತಾನನ ಶಕ್ತಿಯಿಂದಲೇ ಎಂಬುದನ್ನು ಖಚಿತಮಾಡಲ್ಪಟ್ಟರೂ ಜನರು ರೋಗಗಳಿಂದ ಗುಣಹೊಂದಲು ಹರ್ಷಿಸುವರು. ಈ ದಿನಗಳಲ್ಲೂ ದೇವರ ವಾಕ್ಯಗಳಿಗೆ ಪೂರ್ಣವಾಗಿ ಸರಿಹೊಂದದ ಹಲವಾರು ತಪ್ಪಾದ ಬೋಧನೆಗಳು ನಿಸ್ಸಾಯಕರಾಗಿ ನರಳುತ್ತಿರುವ ಜಗತ್ತಿನ ಸೃಷ್ಟಿಗಳಿಗೆ ಔಷಧೋಪಚಾರವಿಲ್ಲದೆಯೇ ಶಾರೀರಿಕ ಬಾಧೆಗಳಿಂದ ಗುಣಮುಕ್ತರನ್ನಾಗಿಸುವ ವಾಗ್ದಾನಗಳನ್ನು ನೀಡುತ್ತಿರುವವು. ಮತ್ತು ಹೀಗೆ ಆ ರೋಗಗುಣಪಡಿಸುವವರು ದೇವರ ಕೃಪಾಶಕ್ತಿಗಳನ್ನು ತಾವು ಪ್ರಚಾರಮಾಡುವ ಬೋಧನೆಗಳಿಗೆ ಸಾಕ್ಷ್ಯಾಧಾರವನ್ನಾಗಿ ಭಾವಿಸಿಕೊಂಡು ಸೈದ್ಧಾಂತಿಕವಾಗಿ ಹೇಳುವರು.

ಆದರೆ ಈ ರೀತಿಯಲ್ಲಿ ರೋಗಗುಣಪಡಿಸುವವರು ನಾನಾ ಬಗೆಯ ಹಾಗು ಪರಸ್ಪರ ತದ್ವಿರುದ್ಧವಾದ ಬೋಧನೆಗಳನ್ನು ಹಿಡಿದುಕೊಂಡಿರುವುದರಿಂದ ಇವೆಲ್ಲವುಗಳಲ್ಲಿ ಒಂದಾದರೂ ದೇವರಿಂದ ಬಂದದ್ದಲ್ಲವೆಂಬುದನ್ನು ತೋರ್ಪಡಿಸುತ್ತವೆ. ನಮ್ಮ ಗ್ರಹಿಕೆಗೆ ಬಂದಿರುವಂತೆ, ಈಗಿನ ಕಾಲದಲ್ಲಿ ರೋಗಗುಣಪಡಿಸಲು ಮಾಡುವ ಯಾವ ಅದ್ಭುತಗಳೂ ದೇವರ ವಾಕ್ಯದಿಂದ ಅಧಿಕಾರ ಹೊಂದಿರುವುದಿಲ್ಲವೆಂಬುದನ್ನು ಸತ್ಯವೇದವು ಬೋಧಿಸುವುದು. ಆದಿ ಸಭೆಗೆ ಅನುಗ್ರಹಿಸಲ್ಪಟ್ಟ ಪವಿತ್ರಾತ್ಮವರಗಳು ಮತ್ತು ಯೇಸು ಅಪೋಸ್ತಲರು ಹಾಗು ಅವರ ಮೂಲಕವಾಗಿ ವೈಯಕ್ತಿಕವಾಗಿ ಹೊಂದಿದವರು ಉಪಯೋಗಿಸಿದ ವರಗಳೂ ನಿಂತು ಹೋಗುವವೆಂದು ಭಕ್ತನಾದ ಪೌಲನು (ಪವಿತ್ರಾತ್ಮ) ಪ್ರೇರಿತನಾಗಿ ಪ್ರಕಟಿಸಿ ಹೇಳಿರುವನು. ಅವುಗಳು ನಿಂತುಹೋಗಿ ತರುವಾಯ ಅದರ ಸ್ಥಾನದಲ್ಲಿ ಉತ್ತಮವಾದವುಗಳು ದೇವಾನುಗ್ರಹಗಳಾಗಿ ಕಾಣಿಸಿಕೊಂಡವೆಂಬುದನ್ನು ನಾವು ನಂಬುತ್ತೇವೆ. ಅವುಗಳು ಯಾವುವೆಂದರೆ ಸಾಧುತ್ವ ದಯೆ ದೀರ್ಘಶಾಂತಿ ಪ್ರೀತಿ ಮುಂತಾದ ಪವಿತ್ರಾತ್ಮನ ಫಲಗಳು. ಇವುಗಳು ಚೊಚ್ಚಲ ಮಕ್ಕಳ ಸಭೆಯ ಅಂಗಗಳಾಗಿ ದೇವರ ಅನುಗ್ರಹಕ್ಕೆ ಪಾತ್ರರೆಂಬುದಕ್ಕೆ ಪ್ರಮಾಣವಾಗಿದ್ದವು. ಯೇಸು ಮತ್ತು ಅಪೋಸ್ತಲರು ನಡೆಸಿದ ಅದ್ಭುತಗಳು ಕೇವಲ ಆದಿ ಸಭೆಯನ್ನು ಸ್ಥಾಪಿಸುವಸಲುವಾಗಿದ್ದವುಗಳು. ಈ (ಸುವಾರ್ತಾಯುಗದ) ಕಾಲದಲ್ಲಿ ಜನರೆಲ್ಲರೂ ರೋಗಗಳಿಂದ ಗುಣಪಡಿಸಲ್ಪಡಬೇಕೆಂದು ಎಲ್ಲಿಯೂ ತಿಳಿಸಲಾಗಿಲ್ಲ.

ರೋಗಗಳೆಲ್ಲವುಗಳ ಗುಣಪಡಿಸುವಿಕೆಯು ಮೆಸ್ಸೀಯನ ವೈಭವವುಳ್ಳ ರಾಜ್ಯವು ಸ್ಥಾಪನೆಯಾದ ನಂತರ ಅಲ್ಲಿ ನಡೆಯುವ ಕಾರ್ಯಗಳಲ್ಲಿ ಪ್ರಾಮುಖ್ಯವಾದುದೆಂಬುದರಲ್ಲಿ ಸಂದೇಹವಿಲ್ಲ. ಇದು ಶಾರೀರಿಕವಾದ ಅಸ್ವಸ್ಥತೆಗಳನ್ನು ತೆಗೆದುಹಾಕುವುದು ಮಾತ್ರವಲ್ಲದೆ ಪುನರುದ್ಧಾರ ಕಾರ್ಯವು ಹಂತಹಂತವಾಗಿ ಮುಂದುವರೆದು ಅದು ಮಾನವರನ್ನು ಪಾಪ ರೋಗಬಾಧೆ ಮತ್ತು ಕುಂದು ಕೊರತೆಗಳಿಂದ ಮೇಲೆತ್ತಿ ಅವರನ್ನು ಸಂಪೂರ್ಣವಾಗಿ ಪರಿಪೂರ್ಣರನ್ನಾಗಿಸುವುದು. ಆದರೆ ದೇವರ ಏರ್ಪಾಟುಗಳನ್ನು ಮನಃಪೂರ್ವಕವಾಗಿ ಬೇಕೆಂದು ವಿರೋಧಿಸುವವರ ಜೀವವನ್ನು ನಿಗದಿತ ಕಾಲದಲ್ಲಿ ಎರಡನೇ ಮರಣದಲ್ಲಿ ತೆಗೆದುಹಾಕಲಾಗುವುದು. ಉಳಿದವರೆಲ್ಲರೂ ಕಡೆಯದಾಗಿ ಸತ್ಯವೇದದಲ್ಲಿ ತಿಳಿಸಲಾಗಿರುವ ಪರಿಪೂರ್ಣತೆಯೆಂಬ ವೈಭವವಾದ ಸ್ಥಿತಿಗೆ ತಲುಪುವರು. ಅಲ್ಲಿ ನಿಟ್ಟುಸಿರಾಗಲೀ ಗೋಳಾಟವಾಗಲೀ ಮರಣವಾಗಲೀ ಇರುವುದಿಲ್ಲ ಯಾಕೆಂದರೆ ಮೊದಲಿದ್ದ ಸಂಗತಿಗಳಾದ ಪಾಪ ಮತ್ತು ಮರಣಗಳು ಇಲ್ಲದೇ ಹೋಗುವವು; ಯಾಕೆಂದರೆ ಸಿಂಹಾಸನದ ಮೇಲೆ ಕುಳಿತಿರುವಾತನು ಎಲ್ಲವನ್ನು ಹೊಸದು ಮಾಡುವನು. –– ಪ್ರಕಟನೆ 21:4–5.

## ಪ್ರಕಾಶರೂಪದ ವೇಷ ಧರಿಸಿರುವ ಒಬ್ಬ ದೇವದೂತನಾಗಿರುವ ಸೈತಾನನು

ಸೈತಾನನು ಹಾಗು ಆತನ ಸೇವಕರಾಗಿರುವ ಬಿದ್ದು ಹೊದ ದೇವದೂತರುಗಳು "ಪ್ರಕಾಶರೂಪವುಳ್ಳ ದೇವದೂತರಾಗಿ" ಮಾರ್ಪಡಿಸಿಕೊಂಡವರಾಗಿ ಕಾಣಿಸಿಕೊಳ್ಳುವುದಕ್ಕೆ ಯತ್ನಿಸುವರೆಂದು ಭಕ್ತನಾದ ಪೌಲನು ತಿಳಿಸಿರುವನು. ಹೀಗೆ ಅವರು ಮಾನವರ ಮೇಲೆ ಅಧಿಕ ಪ್ರಭಾವವನ್ನು ಬೀರಿ ಆ ಮೂಲಕವಾಗಿ ಮಾನವರು ದೇವರ ಹಾಗೂ ಆತನ ವಾಕ್ಯಗಳ ಮೇಲಿನ ನಿಜವಾದ ನಂಬಿಕೆಯನ್ನು ಬುಡಮೇಲುಮಾಡುವಂಥ ಸುಳ್ಳು ಬೋಧನೆಗಳನ್ನು ಮೈಗೂಡಿಸಿಕೊಳ್ಳುವಂತೆ ಮಾಡುವುದರಲ್ಲಿ ಹೆಚ್ಚು ಸಫಲರಾಗುವುದಕ್ಕೆ ಯತ್ನಿಸುವರು. ಅಪೋಸ್ತಲನ ಮಾತುಗಳು ವಿಶೇಷವಾಗಿ ನಮ್ಮ ದಿನಗಳಿಗೆ ಅನ್ವಯವಾಗುವಂಥವುಗಳೆಂದು ನಾವು ನಂಬುತ್ತೇವೆ. ಹೀಗೆ ಜಾಗೃತರಾದ ಒಳ್ಳೆಯ ಜನರಲ್ಲಿ ಅನೇಕರು ಮರುಳಾಗುತ್ತಿರುವರು. ರೋಗಗುಣಪಡಿಸುವ ಅದ್ಭುತವು ವಿರೋಧಿಯಾದ ಸೈತಾನನು ಗಾಳವಾಗಿ ಉಪಯೋಗಿಸುವ ಆಮಿಷಗಳಲ್ಲಿ ಒಂದು. ಈ ರೀತಿಯಲ್ಲಿ ಗಾಳಗಳಾಗಿ ಮಾಡಲ್ಪಟ್ಟಿರುವ ವಿವಿಧ ಬೋಧನೆಗಳನ್ನು ಪಟ್ಟಿಮಾಡಿ ತೋರಿಸುವುದು ನಮಗೆ ಯುಕ್ತವಾಗಿರುವುದಿಲ್ಲ. ದೇವರಿಂದ ರೋಗಗುಣಪಡಿಸುವ ಯಾವ ಅದ್ಭುತವನ್ನು ನಿರೀಕ್ಷಿಸಬಾರದೆಂಬುದಕ್ಕೆ ಸತ್ಯವೇದದಲ್ಲಿ ಹೇಳಿರುವ ಕಾರಣಗಳನ್ನು ತೋರಿಸಿ ಕೊಡುವುದರಲ್ಲಿ ನಾವು ತೃಪ್ತರಾಗುವೆವು.

## "ಆತನು ಅವರ ರೋಗಗಳನ್ನು ಗುಣಪಡಿಸುವನು."

ಇಸ್ರಾಯೇಲ್ಯರೊಡನೆ ದೇವರು ಧರ್ಮಶಾಸ್ತ್ರದ ಮೂಲಕವಾಗಿ ಮಾಡಿಕೊಂಡ ಒಡಂಬಡಿಕೆಯ ಪ್ರಕಾರ, ನಿಯಮೋಲ್ಲಂಘನೆಗೆ ಶಿಕ್ಷೆಯಾಗಿ ವ್ಯಾಧಿ ಬರಮಾಡುವುದನ್ನೂ ಹಾಗೂ ವಿಧೇಯತೆಯ ಫಲವಾಗಿ ಅರೋಗ್ಯ ದಯಪಾಲಿಸುವುದನ್ನೂ ದೇವರು ಅನುಮೋದಿಸಿದ್ಧನೆಂಬುದು ಬಹು ಸತ್ಯ. "ಆತನು ನಿನ್ನ..... ಸಮಸ್ತ ರೋಗಗಳನ್ನು ವಾಸಿಮಾಡುವವನು" ಎಂಬ ಪ್ರವಾದಿಯ ಹೇಳಿಕೆಯು ಧರ್ಮಶಾಸ್ತ್ರದ ಮೂಲಕವಾದ ಒಡಂಬಡಿಕೆಯ ಪ್ರಕಾರ ಇಸ್ರಾಯೇಲ್ಯರಿಗೆ ಶಾರೀರಿಕವಾಗಿ ಅನ್ವಯವಾಗುವದು. ನೂತನ ಸೃಷ್ಟಿಯಾದ ಸಭೆಗೆ ಅದು ಆತ್ಮಿಕವಾಗಿಯೂ ಸಹ ಅನ್ವಯವಾಗುವದು.

ಆದರೆ ನೂತನ ಸೃಷ್ಟಿಯನ್ನು ಗುಣಪಡಿಸುವುದು ಮತ್ತು ಆತನ ಶರೀರವನ್ನು ಗುಣಪಡಿಸುವುದು ಬೇರೆಬೇರೆ ವಿಷಯಗಳಾಗಿರುವುದು. ನೂತನ ಸೃಷ್ಟಿಯ ಶರೀರವು ನೋವನ್ನು ಅನುಭವಿಸುತ್ತಾ ಮರಣಕ್ಕೆ ಇಳಿದು ಹೋಗುವುದಾದರೂ ಆತನ ಆತ್ಮಿಕ ರೊಗಗಳನ್ನು ಮತ್ತು ಹೃದಯದ ಬೇನೆಗಳನ್ನು ಗುಣಪಡಿಸಲಾಗುವುದು. ನಾವು ಪವಿತ್ರಾತ್ಮನಿಂದ ಅಂಕುರಿಸಲ್ಪಟ್ಟು ನೂತನ ಸೃಷ್ಟಿಗಳಾಗಿ ಹುಟ್ಟಿದ್ದಕ್ಕೆ ಇದ್ದ ಶರತ್ತು ಏನೆಂದರೆ, ನಮ್ಮ ವಿವೇಕಪೂರ್ವಕವಾದ ಆರಾಧನೆಯಾಗಿ ನಾವು ನಮ್ಮ ದೇಹ ಮತ್ತು ಅದರ ಇಚ್ಛೆ ಆಸಕ್ತಿಗಳನ್ನು (ದೇವರಿಗೆ) ಮೆಚ್ಚಿಕೆಯಾಗಿಯೂ ಮೀಸಲಾಗಿಯೂ ಇರುವ ಸಜೀವ ಯಜ್ಞವನ್ನಾಗಿ ಪೂರ್ಣ ಒಪ್ಪಿಸಿಕೊಡುವುದೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.–ರೋಮಾ 12:1

ಇದು ಕರ್ತನು ಸಭೆಯೊಂದಿಗೆ ಬಹು ಪ್ರಾರಂಭದಿಂದಲೂ ನಡಕೊಂಡ ರೀತಿಯಲ್ಲಿ ಉಂಟಾದ ಬದಲಾವಣೆಯಲ್ಲ. ದಾಖಲೆಗಳು ತೋರಿಸಿರುವಷ್ಟರ ಮಟ್ಟಿಗೆ ಅಥವಾ ಬಹುಮಟ್ಟಿಗೆ, ಯೇಸುವು ಮತ್ತು ಅಪೋಸ್ತಲರಿಂದ ಗುಣಮಾಡಲ್ಪಟ್ಟವರೆಲ್ಲರೂ "ಪಾಪಿಗಳಾಗಿದ್ದರು." ಅಪೋಸ್ತಲರಲ್ಲಿ ಯಾರಾದರೂ ಯಾವುದೇ ಒಂದು ರೋಗದಿಂದ ಗುಣಮಾಡಲ್ಪಟ್ಟಿದ್ದರೆನ್ನುವದಕ್ಕೆ ಯಾವ ಒಂದು ದಾಖಲೆಗಳೂ ಇರುವುದಿಲ್ಲವೆಂಬುದು ಖಚಿತ. ಭಕ್ತನಾದ ಪೌಲನು ಅನೇಕ ರೋಗಿಗಳನ್ನು ಗುಣಪಡಿಸಿದ್ದನಾದರೂ ಎಪಫ್ರೊದೀತನು ರೋಗದಲ್ಲಿ ಬಿದ್ದು "ಸಾಯುವ ಹಾಗಿದ್ದಾಗ" ಅವನನ್ನು ಅದ್ಭುತವಾಗಿ ಗುಣಪಡಿಸುವ ಯಾವ ಪ್ರಯತ್ನವಾದರೂ ನಡೆದಿತ್ತೆನ್ನುವುದು ನಮಗೆ ತಿಳಿಸಲಾಗಿಲ್ಲ.

ಇದರಂತೆಯೇ ತಿಮೋಥೆಯನ ಸಂಗತಿಯು. ಭಕ್ತನಾದ ಪೌಲನು ಆತನಿಗೆ ತನ್ನ ಉಡಿವಸ್ತ್ರಗಳನ್ನು ಮತ್ತು ಕರವಸ್ತ್ರಗಳನ್ನು ಆತನ ಗುಣಪಡಿಸುವಿಕೆಗಾಗಿ ಕಳುಹಿಸಿರುವ ಅಥವಾ ತನ್ನನ್ನು ಸ್ವಸ್ಥಪಡಿಸಿಕೊಳ್ಳಲು ಪ್ರಾರ್ಥಿಸುವುದಕ್ಕೆ ಸೂಚಿಸಿರುವುದಾಗಲೀ ಇಲ್ಲವೇ ತಾನು ಅವನಿಗಾಗಿ ಪ್ರಾರ್ಥಿಸುವನೆಂದು ಹೇಳಿರುವುದಾಗಲೀ ಅಥವಾ ತನಗಾಗಿ ಪ್ರಾರ್ಥಿಸಲು ಇತರರನ್ನು ಕೇಳಿಕೊಳ್ಳಲು ಸೂಚಿಸಿರುವುದಾಗಲೀ ನಮಗೆ ಕಂಡುಬಂದಿಲ್ಲ. ಬದಲಾಗಿ "ಅವನ ಹೊಟ್ಟೆಯಲ್ಲಿನ ಅಜೀರ್ಣತೆಯ ಸಲುವಾಗಿ" ಕೆಲವು ಔಷಧಿಗಳನ್ನು ತೆಗೆದುಕೊಳ್ಳಲು ಆತನು ಸಲಹೆ ಮಾಡಿರುವನು, ನಿಜವಾಗಿಯೂ, ದೇವರಿಗೆ ಪ್ರತಿಷ್ಠಿತರಾದ ಜನರು ಶಾರೀರಿಕವಾಗಿ ಗುಣಹೊಂದಲು ಕೇಳಿಕೊಳ್ಳುವುದು ತಾವು ಯಾವುದನ್ನು ನಿರ್ದಿಷ್ಟವಾಗಿ "ಮರಣದ ಪರ್ಯಂತರ" ಪ್ರತಿಷ್ಠೆ ಮಾಡಿ ಅರ್ಪಿಸಿಕೊಂಡಿರುವರೋ ಅದನ್ನು ಮತ್ತೆ ಹಿಂದೆ ಪಡೆಯುವ ಪ್ರಯತ್ನ ಮಾಡುವುದನ್ನು ಸೂಚಿಸುತ್ತದೆ. ತನ್ನ ಜನರು ತನ್ನ ಸೇವೆಯಲ್ಲಿ ಪರಿಶ್ರಮಿಸಲು ಅವರಿಗೆ ಅಸಾಧಾರಣವಾದ ಆರೋಗ್ಯ ಬಲಗಳನ್ನು ನೀಡುವಂತಾಗಲು, ಅವರು ಕೇಳಿಕೊಳ್ಳದೆಯೇ, ಅವರ ಸಂಗತಿಗಳಲ್ಲಿ ವಿಶೇಷವಾಗಿ ಕರ್ತನು ತನ್ನ ಅಧಿಕಾರ ಸಾಧಿಸುವನು ಎಂಬುದು ಪೂರ್ಣವಾಗಿ ಬೇರೊಂದು ವಿಷಯವಾಗಿರುವುದು. ಹೀಗಿರಲು ಶೀಘ್ರದಲ್ಲೇ ಸ್ಥಾಪನೆಯಾಗಲಿರುವ ಮೆಸ್ಸೀಯನ ರಾಜ್ಯದಲ್ಲಿ ಮಾನವರಿಗೆ ಸಾಮಾನ್ಯವಾಗಿ ಬರಲಿರುವ ಆಶೀರ್ವಾದಗಳ ಮುನ್ಸೂಚನೆಯಾಗಿ ದೇವರು ಹೊರಗಿನವರ ಮಧ್ಯದಲ್ಲಿ ಅಂದರೆ ಪ್ರತಿಷ್ಠಿರಲ್ಲದ ಜನರ ಮಧ್ಯದಲ್ಲಿ ಅದ್ಭುತಗಳನ್ನು ಮಾಡುವನೆಂಬ ಅಂಶಕ್ಕೆ ಇದು ಯಾವ ವಿಧವಾಗಿಯೂ ವಿರೋಧವಾಗಿರುವುದಿಲ್ಲ.

ಇದಲ್ಲದೆ, ಯೇಸು ಮತ್ತು ಅಪೋಸ್ತಲರು ನಡೆಸಿದ ಅದ್ಭುತಗಳು ರೋಗ ಹಿಡಿದವರೆಲ್ಲರನ್ನೂ ಗುಣಪಡಿಸಿ ನೋವು ದುಃಖಗಳನ್ನು ಹೊರಗಟ್ಟುವ ಪ್ರಯತ್ನಗಳಾಗಿರಲಿಲ್ಲವೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳೋಣ. ಅವು ಕೇವಲ ಸುವಾರ್ತೆಯ ಸಂದೇಶದ ಕಡೆಗೆ ಗಮನ ಸೆಳೆಯುವ ಉದ್ದೇಶಕ್ಕಾಗಿದ್ದವು. ದೇವರು ಎಲ್ಲರ ಕಣ್ಣೀರುಗಳನ್ನು ಒರೆಸಿ ಅಲ್ಲಿ ನಿಟ್ಟುಸಿರಾಗಲೀ ಗೋಳಾಟವಾಗಲೀ ಮರಣವಾಗಲೀ ಇಲ್ಲದಿರುವಂತೆ ಮಾಡುವುದು ಮೆಸ್ಸೀಯನ ಸಾವಿರ ವರುಷದ ಕಾಲದಲ್ಲಿ ಮತ್ತು ಅದು ಆ ಆಳ್ವಿಕೆಯ ಫಲವಾಗಿರುವುದು.–– ಪ್ರಕಟನೆ 21:4

ಇಂದಿನ ಅಧ್ಯಯನವು ಈ ಅಭಿಪ್ರಾಯಕ್ಕೆ ಒಂದು ಪುರಾವೆಯನ್ನು ಒದಗಿಸುತ್ತದೆ. ಯೇಸುವು ಕಪೆರ್ನೌಮಿನಲ್ಲಿ ಅನೇಕ ಮಹತ್ಕಾರ್ಯಗಳನ್ನು ಮಾಡಿದ್ದನು; ಆದರೆ ಅದು ಕೇವಲ ಗಮನ ಸೆಳೆಯುವ ಸಲುವಾಗಿತ್ತು. ಆತನು ಕಪೆರ್ನೌಮಿನಲ್ಲಿದ್ದ ಅನೇಕ ರೋಗಿಗಳನ್ನು ತನ್ನ ಹಿಂದೆ ಬಿಟ್ಟು ಅವರನ್ನು ನಿರಾಶೆಗೊಳಿಸಿ ಬೇರೆ ಊರುಪಟ್ಟಣಗಳಿಗೆ ಹೋದನು. ಹೀಗೆಯೇ ಆತನು ಸಿಲೋವ ಕೊಳವನ್ನು ದಾಟಿಹೋಗುತ್ತಿದ್ದಾಗ, ಅಲ್ಲಿ ನೀರಿಗಿಳಿದು ಗುಣಹೊಂದುವ ಅವಕಾಶವನ್ನು ಕಾಯುತ್ತಿದ್ದ ಅಶಕ್ತರ ಒಂದು ದೊಡ್ಡ ಗುಂಪಿತ್ತು. ಯೇಸು ಆ ಗುಂಪಿನಲ್ಲಿದ್ದ ಕೇವಲ ಒಬ್ಬನನ್ನು ಗಮನಿಸಿ ಅವನಿಗೆ "ನಿನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆ" ಎಂದು ಹೇಳಿದ್ದನು.–ಯೋಹಾನ 5:1–9

## ಶುದ್ಧನಾದ ಒಬ್ಬ ಕುಷ್ಠರೋಗಿಯ ಕೃತಜ್ಞತಾಭಾವ

ಈ ದಿನದ ಅಧ್ಯಯನವು ಮತ್ತೊಂದು ಗುಣಪಡಿಸುವಿಕೆಯ ಸಂಗತಿಯ ಬಗ್ಗೆ ತಿಳಿಸುತ್ತದೆ. ಕುಷ್ಠವು ಪಾಪದ ಒಂದು ವಿಧವಾಗಿದ್ದು, ಅದು ಗುಣಪಡಿಸಲಾಗದ ಒಂದು ರೋಗವೆಂದು ಯೆಹೂದ್ಯರಿಂದ ಪರಿಗಣಿಸಲ್ಪಟ್ಟಿತ್ತು. ಈ ಪಾಠದಲ್ಲಿನ ಕುಷ್ಠರೋಗಿಯು ಯೇಸುವಿನ ಶಕ್ತಿಯಲ್ಲಿ ನಂಬಿಕೆ ಇಟ್ಟಿದ್ದನು; ಮತ್ತು ಅವನು ಬಂದು ಆತನ ಮುಂದೆ ಮೊಣಕಾಲೂರಿ ಕುಷ್ಠದಿಂದ ಗುಣವಾಗಲು ಬೇಡಿಕೊಂಡನು. ಆತನ ವಿಜ್ಞಾಪನೆಗೆ ಉತ್ತರ ದೊರೆಯಿತು; ಇದು ಆತನು ಯೇಸುವಿನ ಶಿಷ್ಯರಲ್ಲಿ ಒಬ್ಬನಾಗಿದ್ದನೆಂಬ ಕಾರಣಕ್ಕಾಗಿಯಲ್ಲ, ಅಥವಾ ಅವನು ಶಿಷ್ಯರಲ್ಲಿ ಒಬ್ಬನಾಗುವೆನೆಂದು ಮಾತುಕೊಟ್ಟಿದ್ದನೆಂಬ ಕಾರಣಕ್ಕಾಗಿಯಲ್ಲ, ಆದರೆ ಆತನು ತನ್ನ ನಂಬಿಕೆಯನ್ನು ತೋರ್ಪಡಿಸಿದ್ದ ಕಾರಣಕ್ಕಾಗಿತ್ತು. ಮತ್ತು ಅವನ ಈ ಸಂಗತಿಯು ಯೇಸುವು ದೇವರ ಶಕ್ತಿಯನ್ನು ಪ್ರಯೋಗಿಸಿದ್ದನೆಂಬುದಕ್ಕೆ ಯಾಜಕರಿಗೆ ಒಂದು ಸಾಕ್ಷಿಯಾಗಿರುವಂತೆ ಮಾಡುವ ಸಲುವಾಗಿತ್ತು. ಶುದ್ಧನಾದ ಆ ಕುಷ್ಠರೋಗಿಗೆ ತಾನು ಹೋಗಿ ಮೋಶೆಯ ನಿಯಮದ ಪ್ರಕಾರ ನೇಮಕವಾದ ಕಾಣಿಕೆಗಳನ್ನು ಅರ್ಪಿಸಿ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಿ ಯಾಜಕರಿಗೆ ತಾನು ಗುಣವಾದುದರ ಬಗ್ಗೆ ಸಾಕ್ಷಿ ನೀಡಿ ನೇಮದ ಪ್ರಕಾರ ತನ್ನನ್ನು ಅವರಿಂದ ಪರೀಕ್ಷಿಸಿಕೊಳ್ಳುವದಕ್ಕಾಗಿ ಹೇಳಲಾಗಿತ್ತು.

ಬಹು ವಿಶೇಷವಾದ ಈ ಅದ್ಭುತವನ್ನು ಇತರರಿಗೆ ತಿಳಿಸಬಾರದೆಂದು ಆ ಕುಷ್ಠರೋಗಿಗೆ ಯೇಸುವು ಬುದ್ಧಿಹೇಳಿ ಕಳುಹಿಸಿದ್ದನು; ಅದರೆ ಅತನಲ್ಲಿದ್ದ ಕೃತಜ್ಞತಾಭಾವವು ತನ್ನಲ್ಲಿ ಇದನ್ನು ಹಿಡಿದಿಟ್ಟುಕೊಳ್ಳಲು ಬಿಡಲಿಲ್ಲ; ಆತನು ಹೋಗಿ ಎಲ್ಲಾ ಕಡೆಯಲ್ಲಿಯೂ ಇದನ್ನು ಹೇಳುತ್ತಾ ಬಂದಿದ್ದನು. ಇದರ ಪರಿಣಾಮವಾಗಿ ಯೇಸುವಿಗೆ ಆನಂತರ ದೊಡ್ಡ ಊರುಗಳನ್ನು ಭೇಟಿಮಾಡಲು ಸಾಧ್ಯವಾಗಲಿಲ್ಲ, ಏಕೆಂದರೆ ತನ್ನಿಂದ ಗುಣಪಡಿಸಿಕೊಳ್ಳಲು ಕರತಂದ ಬಹು ಮಂದಿ ರೋಗಿಗಳು ಆತನ ಮೇಲೆ ಒತ್ತಾಗಿ ಬಿದ್ದುಕೊಂಡಿರುತ್ತಿದ್ದರು. ಆದುದರಿಂದ ಆತನು ಪದೇಪದೇ ಹಳ್ಳಿಯ ಪ್ರದೇಶಗಳಿಗೆ ಬೇಟಿ ನೀಡುತ್ತಿದ್ದನು; ಆದರೆ ಆಗಲೂ ಜನರು ಆತನಿಂದ ಗುಣಪಡಿಸಿಕೊಳ್ಳಲು ಎಲ್ಲಾ ಕಡೆಯಿಂದಲೂ ಕೂಡಿಬರುತ್ತಿದ್ದರು.

ಆದರೆ ಅಯ್ಯೋ! ಅವರು ನಮ್ಮ ಕರ್ತನು ತನ್ನ ಹೆಜ್ಜೆಯ ಜಾಡನ್ನು ಅನುಸರಿಸುವ ಹಿಂಬಾಲಕರಾಗಿ ತನ್ನ ರಾಜ್ಯದಲ್ಲಿ ತನಗೆ ಸಹಬಾಧ್ಯರಾಗಲು ಅವರಿಗೆ ವಿಶೇಷವಾಗಿ ನೀಡಿದ ಮಹಾ ಭಾಗ್ಯಕ್ಕಿಂತಲೂ ಸಮಸ್ತವನ್ನು ಸರಿಮಾಡುವ ಕಾಲದಲ್ಲಿ ಬರುವ ಆಶೀರ್ವಾದಗಳನ್ನು ಅವರು ಅಧಿಕವಾಗಿ ಮೆಚ್ಚುವವರಾಗಿದ್ದರು. ಕಾಲ ಕ್ರಮೇಣ ಆದಾಮನು (ಪರಿಪೂರ್ಣತೆಯಿಂದ) ಬಿದ್ದುಹೋದ ಫಲವಾಗಿ ಉಂಟಾದ ದಂಡನೆಯಲ್ಲಿರುವ ಮತ್ತು ಕಲ್ವಾರಿಯಲ್ಲಿ ಸುರಿಸಲ್ಪಟ್ಟ ಅಮೂಲ್ಯವಾದ ರಕ್ತದಿಂದ ವಿಮೋಚಿತರಾದ ಆತನ ಸಂತತಿಯವರಲ್ಲಿ ದೂರವಾಗಿ ಹಾಗೂ ಸಮೀಪವಾಗಿರುವ ಪ್ರತಿಯೊಬ್ಬನಿಗೂ ಆತನ ರಾಜ್ಯದಲ್ಲಿ ಸಮಸ್ತವನ್ನು ಸರಿಮಾಡುವ ಆಶೀರ್ವಾದಗಳನ್ನು ಮತ್ತು ಸ್ವಸ್ಥತೆಯನ್ನು ದೊರಕಿಸಲಾಗುವುದು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 30 | ಕಪೆರ್ನೌಮ್ | ಪಾರ್ಶ್ವಾಯುರೋಗಿಯನ್ನು ಗುಣಪಡಿಸಿದುದು | 9:1–8 | 2:1–12 | 5:17–26 | –– |

## ಮತ್ತಾಯ 9:1–8

ಅಲ್ಲಿಗೆ ಬಂದಾಗ ಹಾಸಿಗೆಯ ಮೇಲೆ ಬಿದ್ದುಕೊಂಡಿರುವ ಒಬ್ಬ ಪಾರ್ಶ್ವಾಯುರೋಗಿಯನ್ನು ಆತನ ಬಳಿಗೆ ಹೊತ್ತುಕೊಂಡು ಬಂದರು. ಯೇಸು ಅವರ ನಂಬಿಕೆಯನ್ನು ನೋಡಿ ಪಾರ್ಶ್ವಾಯುರೋಗಿಗೆ–ಮಗನೇ, ಧೈರ್ಯವಾಗಿರು, ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂದು ಹೇಳಿದನು. ಅಲ್ಲಿದ್ದ ಶಾಸ್ತ್ರಿಗಳಲ್ಲಿ ಕೆಲವರು–ಇವನು ದೇವದೂಷಣೆ ಮಾಡುತ್ತಾನೆಂದು ತಮ್ಮತಮ್ಮೊಳಗೆ ಮಾತಾಡಿಕೊಂಡರು. ಯೇಸು ಅವರ ಆಲೋಚನೆಗಳನ್ನು ತಿಳಿದು––ನೀವು ಯಾಕೆ ನಿಮ್ಮ ಮನಸ್ಸಿನಲ್ಲಿ ಕೆಟ್ಟ ಆಲೋಚನೆಯನ್ನು ಮಾಡುತ್ತೀರಿ? ಯಾವುದು ಸುಲಭ? ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ ಅನ್ನುವದೋ? ಎದ್ದು ನಡೆ ಅನ್ನುವುದೋ? ಆದರೆ ಪಾಪಗಳನ್ನು ಕ್ಷಮಿಸಿಬಿಡುವದಕ್ಕೆ ಮನುಷ್ಯಕುಮಾರನಿಗೆ ಭೂಲೋಕದಲ್ಲಿ ಅಧಿಕಾರ ಉಂಟೆಂಬದು ನಿಮಗೆ ತಿಳಿಯಬೇಕು ಎಂದು ಹೇಳಿ ಪಾರ್ಶ್ವಾಯುರೋಗಿಯನ್ನು ನೋಡಿ–ಎದ್ದು ನಿನ್ನ ಹಾಸಿಗೆಯನ್ನು ಎತ್ತಿಕೊಂಡು ಮನೆಗೆ ಹೋಗು ಅಂದನು. ಅವನು ಎದ್ದು ಮನೆಗೆ ಹೋದನು. ಜನರು ಇದನ್ನು ನೋಡಿ ಭಯಪಟ್ಟು ದೇವರು ಮನುಷ್ಯರಿಗೆ ಅಂಥ ಅಧಿಕಾರವನ್ನು ಕೊಟ್ಟದ್ದಕ್ಕೆ ಆತನನ್ನು ಕೊಂಡಾಡಿದರು.

## ಮಾರ್ಕ 2:1–12

ಕೆಲವು ದಿನಗಳಾದ ಮೇಲೆ ಆತನು ಕಪೆರ್ನೌಮಿಗೆ ತಿರಿಗಿ ಬಂದನು. ಮನೆಯಲ್ಲಿದ್ದಾನೆಂಬ ವರ್ತಮಾನವು ಹಬ್ಬಿದಾಗ ಬಹು ಜನರು ಕೂಡಿಬಂದದ್ದರಿಂದ ಬಾಗಲಿನ ಬಳಿಯಲ್ಲಾದರೂ ಸ್ಥಳವಿರಲಿಲ್ಲ. ಆತನು ಅವರಿಗೆ ದೇವರ ವಾಕ್ಯವನ್ನು ಹೇಳುತ್ತಿದ್ದನು. ಅಷ್ಟರಲ್ಲಿ ಕೆಲವರು ಒಬ್ಬ ಪಾರ್ಶ್ವವಾಯು ರೋಗಿಯನ್ನು ನಾಲ್ಕು ಮಂದಿಯಿಂದ ಹೊರಿಸಿಕೊಂಡು ಆತನ ಬಳಿಗೆ ತಂದರು. ಜನರು ಗುಂಪಾಗಿದ್ದದರಿಂದ ಅವರು ಆತನ ಹತ್ತರಕ್ಕೆ ಸೇರಲಾರದೆ ಆತನಿದ್ದ ಮನೆಯ ಮೇಲ್ಚಾವಣಿಯನ್ನು ಬಿಚ್ಚಿ ದ್ವಾರಮಾಡಿ ಪಾರ್ಶ್ವಾಯುರೋಗಿಯು ಮಲಗಿದ್ದ ಹಾಸಿಗೆಯನ್ನು ಇಳಿಸಿದರು. ಯೇಸು ಅವರ ನಂಬಿಕೆಯನ್ನು ನೋಡಿ ಆ ಪಾರ್ಶ್ವಾಯುರೋಗಿಗೆ–ಮಗನೇ, ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂದು ಹೇಳಿದನು. ಆದರೆ ಶಾಸ್ತ್ರಿಗಳಲ್ಲಿ ಕೆಲವರು ಅಲ್ಲಿ ಕೂತುಕೊಂಡಿದ್ದು–ಇವನು ಯಾಕೆ ಹೀಗೆ ಮಾತಾಡುತ್ತಾನೆ? ಇದು ದೇವದೂಷಣೆ. ದೇವರೊಬ್ಬನೇ ಹೊರತು ಮತ್ತಾರು ಪಾಪಗಳನ್ನು ಕ್ಷಮಿಸಬಲ್ಲರು? ಎಂದು ತಮ್ಮ ತಮ್ಮ ಮನಸ್ಸಿನಲ್ಲಿ ಅಂದುಕೊಂಡರು. ಹೀಗೆ ಅಂದುಕೊಳ್ಳುವುದನ್ನು ಕೂಡಲೆ ಯೇಸು ತನ್ನ ಆತ್ಮದಲ್ಲಿ ತಿಳಿದುಕೊಂಡು ಅವರಿಗೆ––ನೀವು ನಿಮ್ಮ ಮನಸ್ಸಿನಲ್ಲಿ ಯಾಕೆ ಹೀಗೆ ಅಂದುಕೊಳ್ಳುತ್ತೀರಿ? ಯಾವದು ಸುಲಭ? ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ ಅನ್ನುವದೋ? ಎದ್ದು ನಿನ್ನ ಹಾಸಿಗೆಯನ್ನು ತೆಗೆದುಕೊಂಡು ನಡೆ ಅನ್ನುವದೋ? ಆದರೆ ಪಾಪಗಳನ್ನು ಕ್ಷಮಿಸಿಬಿಡುವದಕ್ಕೆ ಮನುಷ್ಯಕುಮಾರನಿಗೆ ಭೂಲೋಕದಲ್ಲಿ ಅಧಿಕಾರ ಉಂಟೆಂಬದು ನಿಮಗೆ ತಿಳಿಯಬೇಕು ಎಂದು ಹೇಳಿ ಪಾರ್ಶ್ವಾಯುರೋಗಿಯನ್ನು ನೋಡಿ–ಎದ್ದು ನಿನ್ನ ಹಾಸಿಗೆಯನ್ನು ಎತ್ತಿಕೊಂಡು ಮನೆಗೆ ಹೋಗೆಂದು ನಿನಗೆ ಹೇಳುತ್ತೇನೆ ಅಂದನು. ಅವನು ಎದ್ದು ಕೂಡಲೆ ತನ್ನ ಹಾಸಿಗೆಯನ್ನು ತೆಗೆದುಕೊಂಡು ಎಲ್ಲರ ಮುಂದೆ ಹೊರಟುಹೋದನು. ಅದಕ್ಕೆ ಎಲ್ಲರೂ ಬೆರಗಾಗಿ–ಇದುವರೆಗೆ ನಾವು ಇಂಥದನ್ನು ಎಂದಿಗೂ ನೋಡಿದ್ದೇ ಇಲ್ಲವೆಂದು ಹೇಳುತ್ತಾ ದೇವರನ್ನು ಕೊಂಡಾಡಿದರು.

## ಲೂಕ 5:17–26

ಒಂದಾನೊಂದು ದಿನದಲ್ಲಿ ಅತನು ಉಪದೇಶ ಮಾಡುತ್ತಿರಲು ಗಲಿಲಾಯ ಯೂದಾಯಗಳ ಎಲ್ಲಾ ಗ್ರಾಮಗಳಿಂದಲೂ ಯೆರೂಸಲೇಮಿನಿಂದಲೂ ಬಂದಿದ್ದ ಫರಿಸಾಯರೂ ನ್ಯಾಯಶಾಸ್ತ್ರಿಗಳೂ ಆತನ ಹತ್ತರ ಕೂತುಕೊಂಡಿದ್ದರು. ಗುಣಮಾಡುವುದಕ್ಕೆ ಕರ್ತನ ಶಕ್ತಿಯು ಆತನಲ್ಲಿತ್ತು. ಹೀಗಿರುವಲ್ಲಿ ಕೆಲವು ಮಂದಿ ಗಂಡಸರು ಒಬ್ಬ ಪಾರ್ಶ್ವಾಯುರೋಗದವನನ್ನು ದೋಲಿಯಲ್ಲಿ ಹೊತ್ತುಕೊಂಡು ಬಂದರು; ಆದರೆ ಅವನನ್ನು ಒಳಗೆ ತೆಗೆದುಕೊಂಡುಹೋಗಿ ಆತನ ಮುಂದೆ ಇಡಬೇಕೆಂದು ಪ್ರಯತ್ನಿಸಿದರೂ ಜನರು ಗುಂಪಾಗಿದ್ದದರಿಂದ ಅವನನ್ನು ಒಳಗೆ ತೆಗೆದುಕೊಂಡು ಹೋಗುವ ಮಾರ್ಗವನ್ನು ಕಾಣದೆ ಮನೆಯ ಮೇಲೆ ಹತ್ತಿ ಹಂಚುಗಳನ್ನು ತೆಗೆದು ಅವನನ್ನು ಹಾಸಿಗೆಯ ಸಹಿತ ನಡುವೆ ಯೇಸುವಿನ ಮುಂದೆ ಇಳಿಯಬಿಟ್ಟರು. ಆತನು ಅವರ ನಂಬಿಕೆಯನ್ನು ನೋಡಿ–ಅಪ್ಪಾ, ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ ಅಂದನು. ಅದಕ್ಕೆ ಆ ಶಾಸ್ತ್ರಿಗಳೂ ಪರಿಸಾಯರೂ–ದೇವದೂಷಣೆಯ ಮಾತನ್ನಾಡುವ ಇವನು ಎಷ್ಟರವನು? ಪಾಪಗಳನ್ನು ಕ್ಷಮಿಸಿಬಿಡುವುದು ದೇವರೊಬ್ಬನಿಂದ ಹೊರತು ಮತ್ತಾರಿಂದಾದೀತು ಎಂದು ಅಂದುಕೊಳ್ಳುತಿದ್ದರು. ಆದರೆ ಅವರು ಹಾಗಂದುಕೊಳ್ಳುವದನ್ನು ಯೇಸು ತಿಳಿದುಕೊಂಡು ಅವರಿಗೆ––ನೀವು ನಿಮ್ಮ ಮನಸ್ಸಿನಲ್ಲಿ ಅಂದುಕೊಳ್ಳುವದೇನು? ಯಾವದು ಸುಲಭ? ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ ಅನ್ನುವದೋ? ಎದ್ದು ನಡೆ ಅನ್ನುವದೋ? ಆದರೆ ಪಾಪಗಳನ್ನು ಕ್ಷಮಿಸಿಬಿಡುವದಕ್ಕೆ ಮನುಷ್ಯಕುಮಾರನಿಗೆ ಭೂಲೋಕದಲ್ಲಿ ಅಧಿಕಾರ ಉಂಟೆಂಬದು ನಿಮಗೆ ತಿಳಿಯಬೇಕು ಎಂದು ಹೇಳಿ ಆ ಪಾರ್ಶ್ವವಾಯುರೋಗದವನನ್ನು ನೋಡಿ–ಎದ್ದು ನಿನ್ನ ಹಾಸಿಗೆಯನ್ನು ಎತ್ತಿಕೊಂಡು ಮನೆಗೆ ಹೋಗೆಂದು ನಿನಗೆ ಹೇಳುತ್ತೇನೆ ಅಂದನು. ಅಂದ ಕೂಡಲೆ ಅವನು ಅವರ ಮುಂದೆ ಎದ್ದು ತಾನು ಮಲಗಿದ್ದ ಹಾಸಿಗೆಯನ್ನು ಎತ್ತಿಕೊಂಡು ದೇವರನ್ನು ಕೊಂಡಾಡುತ್ತಾ ಮನೆಗೆ ಹೋದನು. ನೋಡಿದವರೆಲ್ಲರೂ ಬೆರಗಾಗಿ ದೇವರನ್ನು ಕೊಂಡಾಡಿದರು; ಮತ್ತು ಅವರು ಭಯದಿಂದ ತುಂಬಿದವರಾಗಿ––ನಾವು ಈ ಹೊತ್ತು ಅಪೂರ್ವ ಸಂಗತಿಯನ್ನು ಕಂಡೆವು ಅಂದರು.

# ಪಾಪಗಳ ಕ್ಷಮಿಸುವಿಕೆ

### ರಿಪ್ರಿಂಟ್ಸ್, ಪುಟ 3728

## ಮಾರ್ಕ 2:1-12

**"ಆದರೆ ಪಾಪಗಳನ್ನು ಕ್ಷಮಿಸಿಬಿಡುವದಕ್ಕೆ ಮನುಷ್ಯಕುಮಾರನಿಗೆ ಭೂಲೋಕದಲ್ಲಿ ಅಧಿಕಾರ ಉಂಟೆಂಬದು ನಿಮಗೆ ತಿಳಿಯಬೇಕು"**

ನಮ್ಮ ಹಿಂದಿನ ಪಾಠದಲ್ಲಿ ತಿಳಿಸಿರುವ ಘಟನೆಗಳು ನಡೆದ ಸ್ವಲ್ಪ ಸಮಯದ ನಂತರ ನಮ್ಮ ಕರ್ತನು ಮುಂದೆ ಗಲಿಲಾಯದಲ್ಲಿನ ಬೇರೆ ಊರುಗಳಲ್ಲಿ ಉಪದೇಶಮಾಡಿ ಆನಂತರ ಕಪೆರ್ನೌಮಿಗೆ ಹಿಂದಿರುಗಿದ್ದನು. ಆಗ ಅದು ಆತನ ಊರಾಗಿತ್ತು; ಏಕೆಂದರೆ ಆತನು ನಜರೇತನ್ನು ಬಿಟ್ಟು ಕಪೆರ್ನೌಮಿಗೆ ಬಂದು ಅಲ್ಲಿ ವಾಸಿಸಿದನೆಂದು ಮತ್ತಾಯನು ತಿಳಿಸಿದ್ದಾನೆ. (ಮತ್ತಾಯ 4:13) ಆತನು ಮನೆಯಲ್ಲಿದ್ದಾನೆಂದು ಜನರು ಕೇಳಿ ಆ ಮನೆಗೆ ಜನರು ಗುಂಪಾಗಿ ಕೂಡಿಬಂದಿದ್ದರು. ಆಗಿನ ಕಾಲದಲ್ಲಿನ ಮಧ್ಯಮ ವರ್ಗದ ಜನರ ಮನೆಗಳು ಸಾಮಾನ್ಯವಾಗಿ ಒಂದೇ ಕೊಠಡಿಯುಳ್ಳದ್ದಾಗಿದ್ದವೆಂದು ತಿಳಿದುಬಂದಿದ್ದು ಅವುಗಳು ಸುಮಾರು 20x40 ಅಡಿ ಅಳತೆಯುಳ್ಳವುಗಳಾಗಿ ಅವುಗಳ ಮೇಲ್ಛಾವಣಿಯು ಚಪ್ಪಟೆಯಾಗಿದ್ದು ಎರಡು ಅಡಿ ಅಗಲದ ಅಂತರದಲ್ಲಿ ದಪ್ಪನಾದ ಮರದ ದಿಮ್ಮಿಗಳನ್ನು ಇರಿಸಿ ಅವುಗಳ ಮೇಲೆ ಮರದ ಅಥವಾ ಕಲ್ಲಿನ ಹಲಗೆಗಳನ್ನು ಹಾಸಿದ ನಂತರ ಮೇಲೆ ಮಣ್ಣಿನಿಂದಾಗಲಿ ಅಥವಾ ಗಾರೆಯಿಂದಾಗಲಿ ಸಂಪೂರ್ಣವಾಗಿ ಹರವಿ ಮುಚ್ಚಲಾಗಿರುತ್ತಿತ್ತು. ಮೇಲೆ ಚಾವಣಿಗೆ ಹೋಗಲು ಹೊರಗಿನಿಂದ ಮೆಟ್ಟಲುಗಳಿದ್ದು ಬೇಸಿಗೆಯ ಸಮಯದಲ್ಲಿ ಅದು ಮಲಗುವ ಸ್ಥಳವಾಗಿ ಉಪಯೋಗಿಸಲ್ಪಡುತ್ತಿತ್ತು.

ತಾನು ಒಬ್ಬ ಮಹಾ ಪ್ರವಾದಿಯಾಗಿದ್ದು ಅದ್ಭುತಗಳನ್ನು ಮಾಡುವ ಶಕ್ತಿಯನ್ನು ಹೊಂದಿರುವನೆಂಬುದನ್ನು ಆಗತಾನೇ ಅರಿತಿದ್ದ ತನ್ನ ಊರಿನ ನಿವಾಸಿಗಳ ಗುಂಪಿಗೆ ಆತನು ಉಪದೇಶಮಾಡುತ್ತಿದ್ದನು. ನಿಸ್ಸಂದೇಹವಾಗಿ ಆ ಉಪದೇಶವು ಬಹು ಕಾಲದಿಂದ ವಾಗ್ದಾನಮಾಡಲ್ಪಟ್ಟ ದೇವರ ರಾಜ್ಯದ ವಿಷಯವಾಗಿದ್ದು ಜನರು ಆ ಸಂದೇಶವನ್ನು ಅಂಗೀಕರಿಸಿ ಆಶೀರ್ವಾದವನ್ನು ಹೊಂದಲು ಇಚ್ಛಿಸಿದ್ದೇಯಾದಲ್ಲಿ ಅದು ಅವರ ಸಮೀಪದಲ್ಲಿಯೇ ಇರುವುದು, ಅದು ಬಾಗಿಲಿನಲ್ಲಿಯೇ ಇರುವುದಾಗಿ ಸಾರುವುದರ ವಿಷಯವಾಗಿತ್ತು. ಈ ಮಧ್ಯದಲ್ಲಿ ನಾಲ್ಕು ಜನರು ಒಂದು ದೋಲಿಯಲ್ಲಿ ಪಾರ್ಶ್ವಾಯು ರೋಗಿಯಾಗಿ ತೀವ್ರವಾಗಿ ನಿಸ್ಸಹಾಯಕನಾಗಿದ್ದ ಒಬ್ಬ ಯುವಕನನ್ನು ಗುಣಪಡಿಸಿಕೊಳ್ಳ ಸಲುವಾಗಿ ಆ ಮನೆಗೆ ಹೊತ್ತು ತಂದರು. ಕಪೆರ್ನೌಮಿನ ಹಲವಾರು ರೋಗಿಗಳು ಬಂದು ಗುಣಹೊಂದಿದ ದಿನದಂದು ತಾನೂ ಯೇಸುವಿನ ಬಳಿಗೆ ಬಂದು ಗುಣಹೊಂದಲು ತನ್ನ ನಿಸ್ಸಹಾಯಕ ಸ್ಥಿತಿಯೇ ನರಳುತ್ತಿದ್ದ ತನಗೆ ಅಡ್ಡಿಯಾಗಿದ್ದ ಸಂಭವವಿತ್ತು. ಈಗ ಅವನಿಗೆ ಸಹಾಯಕರಾದ ಸ್ನೇಹಿತರು ದೊರಕಿದ್ದು ಅವರ ಮೂಲಕ ತಾನು ಆ ಗುರುವಿನ ಧ್ವನಿ ಕೇಳುವಷ್ಟು ಅಂತರಕ್ಕೆ ಬಂದಾಗ್ಯೂ ಗುಂಪಿನಲ್ಲಿದ್ದವರು ಬಿಡಲಿಲ್ಲವಾದ ಕಾರಣ ಆತನ (ಯೇಸುವಿನ) ಸಮಕ್ಷಮಕ್ಕೆ ದಾರಿಮಾಡಿಕೊಳ್ಳಲು ತನಗೆ ಸಾಧ್ಯವಾಗಲಿಲ್ಲ.

ಆದರೆ ಹೀಗೆ ತನ್ನನ್ನು ಇಲ್ಲಿಯವರೆಗೆ ಕೊಂಡುತಂದಿದ್ದ ಆ ನಂಬಿಕೆಯು ಯೇಸುವಿನ ಮುಂದೆ ತನ್ನ ಸಂಗತಿಯನ್ನು ತರಲು ಯಾವುದಾದರೂ ಒಂದು ವಿಧಾನವನ್ನು ಕಂಡುಕೊಳ್ಳುವ ಬಗ್ಗೆ ಒತ್ತಿಹೇಳಿತು. ಕಡೆಯದಾಗಿ ಆತನನ್ನು ಮನೆಯ ಚಾವಣಿಯ ಮೇಲೆ ಹೊತ್ತುತಂದು ಮೇಲಿನ ಆ ಭಾಗದಲ್ಲಿ ಮುಚ್ಚಿಹೊದಿಸಲಾದ ಮಣ್ಣನ್ನು ಅಗೆದು ಹಲಗೆಗಳನ್ನು ತೆಗೆದು ತುರ್ತಾಗಿ ಮಾಡಿದ ಹಗ್ಗಗಳಿಂದ ಆತನನ್ನು ಯೇಸುವಿನ ಮುಂದೆ ಇಳಿಬಿಡಲಾಯಿತು. ಯೇಸುವಿನ ಶಕ್ತಿಯಲ್ಲಿ ಮಾತ್ರವಲ್ಲದೆ ಈ ಒಂದು ಒರಟಾದ ರೀತಿಯಲ್ಲಿ ಮಧ್ಯಪ್ರವೇಶಿಸಿದವನ ಬಗ್ಗೆ ತಾಳ್ಮೆಯುಳ್ಳವನಾಗಿ ತನಗೆ ಬಹಳ ಅವಶ್ಯವಾಗಿರುವುದನ್ನು ಗ್ರಹಿಸುವುದರಲ್ಲಿಯೂ ಯೇಸುವಿಗಿರುವ ನಯವಿನಯ ಹಾಗೂ ಒಳ್ಳೇತನದ ಬಗ್ಗೆಯೂ ಬಲವಾದ ಆತನಿಗೆ ನಂಬಿಕೆಯಿತ್ತು.

ಮತ್ತು ಅಲ್ಲಿ ಹೀಗೆಯೇ ನಡೆದಿತ್ತು; ಅವರ ಒರಟುತನ ಮುಂತಾದವುಗಳ ಬಗ್ಗೆ ದೊಷಾರೋಪಣೆ ಮಾಡಿ ತಪ್ಪನ್ನು ಕಂಡುಹಿಡಿದು ಅವರನ್ನು ಬಂಧಿಸುವ ಬೆದರಿಕೆ ಹಾಕುವ ಬದಲು ನಮ್ಮ ಕರ್ತನು ಅಲ್ಲಿ ತೋರಿಬಂದ ನಂಬಿಕೆಯ ವಿಷಯದಲ್ಲಿ ಬಹು ಹರ್ಷವುಳ್ಳವನಾಗಿ ಮಧ್ಯಪ್ರವೇಶಿಸಿದುದನ್ನು ಪೂರ್ಣವಾಗಿ ನಿರ್ಲಕ್ಷಿಸಿ "ಮಗನೇ, ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ" ಎಂದು ಹೇಳುವುದರ ಮೂಲಕ ತನ್ನ ಅನಿರೀಕ್ಷಿತ ಅತಿಥಿಯನ್ನು ಸ್ವಾಗತಿಸಿದನು. ಬಹುಶಃ ಆ ಯುವಕನು ತನ್ನ ಪಾಪಗಳು ಮತ್ತು ಅವುಗಳ ಕ್ಷಮಾಪಣೆಯ ಬಗ್ಗೆ ಹೆಚ್ಚು ಆಲೋಚಿಸುವುದಕ್ಕಿಂತಲೂ ತಾನು ಗುಣಹೊಂದುವುದನ್ನು ನಿರೀಕ್ಷಿಸುತ್ತಿದ್ದನು. ಆದರೆ ಸಂಗತಿ ಏನಿದ್ದರೂ ನಮ್ಮ ಕರ್ತನು ಅತಿ ಮುಖ್ಯವಾದ ವಿಷಯಕ್ಕೆ ಪ್ರಾಮುಖ್ಯತೆ ನೀಡಿದ್ದನು. ಆತನು ಮೂಲತಃ ಪಾಪಗಳನ್ನು ಹೊತ್ತುಕೊಳ್ಳುವನೂ ಹಾಗೂ ಬೋಧಕನೂ ಆಗಿದ್ದು ರೋಗಗಳನ್ನು ಗುಣಪಡಿಸುವ ತನ್ನ ಕಾರ್ಯವು ಆ ಸಮಯದಲ್ಲಿ ಎರಡನೆಯ ವಿಷಯವಾಗಿದ್ದು ತಾನು ನೀಡುತ್ತಿದ್ದ ಪಾಠಗಳಿಗೆ ಒತ್ತುಕೊಡಲು ಕೇವಲ ಅದನ್ನು ಬಳಸುತ್ತಿದ್ದನು.

## ವಿವೇಕ ಮತ್ತು ಅವಿವೇಕವುಳ್ಳ ಜಾಗರೂಕತೆ

ಅಲ್ಲಿ ಕೂಡಿಬಂದಿದ್ದ ಜನರು ಯೇಸುವು ಮಾಡಿದುದನ್ನು ಮತ್ತು ಹೇಳಿದುದನ್ನು ಜಾಗರೂಕತೆಯಿಂದ ಗಮನಿಸುತ್ತಿದ್ದರು ಮತ್ತು ಅಲ್ಲಿದ್ದವರಲ್ಲಿ ಕೆಲವರು ಕಲಿತವರಾಗಿದ್ದ ಶಾಸ್ತ್ರಿಗಳಿದ್ದು ಅವರು ಧರ್ಮಶಾಸ್ತ್ರದ ಬಗ್ಗೆ ಚೆನ್ನಾಗಿ ಪಾಂಡಿತ್ಯ ಹೊಂದಿದ್ದು ಜನರಿಂದ ಅವರು ಶಾಸ್ತ್ರಜ್ಞರೆಂದು ಎಣಿಸಲ್ಪಟ್ಟಿದ್ದರು. ಇವರುಗಳು ಇತರರೊಂದಿಗೆ ಸೇರಿ ಯೇಸುವಿನ ಆಶ್ಚರ್ಯವನ್ನುಂಟು ಮಾಡುವ ಅದ್ಭುತಗಳು ಹಾಗೂ ಉಪದೇಶಗಳಿಗೆ ಆಕರ್ಷಿತರಾಗಿ ಆತನ ನಡೆನುಡಿಗಳನ್ನು ಎಚ್ಚರಿಕೆಯಿಂದ ಗಮನಿಸುತಿದ್ದರು. ಈಗ

ಅವರು ಆತನಲ್ಲಿ ಒಂದು ದೋಷ ಕಂಡುಕೊಂಡೆವೆಂದು ಅಂದು ಕೊಂಡರು; ಅದೇನೆಂದರೆ ದೇವರೊಬ್ಬನಿಗೇ ಇರುವ ಅಧಿಕಾರ ಸಾಮರ್ಥ್ಯಗಳು ತನಗೂ ಇರುವುದೆಂಬ ಹೆಮ್ಮೆ ಯೇಸುವಿಗಿರುವು ದೆಂಬುದು. ನಿಜವಾಗಿಯೂ ಸ್ವಲ್ಪಮಟ್ಟಿಗೆ ಈ ವಿಚಾರವನ್ನು ಆರಂಭಿಸಲೆಂದೇ ನಮ್ಮ ಕರ್ತನು ತನ್ನ ವಿಷಯವಾಗಿ ಹೀಗೆ ಹೇಳಿದ್ದನೆಂದು ನಾವು ಭಾವಿಸಬಹುದು. ಆನಂತರ ಅವರ ಮನಸ್ಸುಗಳಲ್ಲಿರುವುದನ್ನು ತಿಳಿದುಕೊಂಡು ಅವರ ಆಕ್ಷೇಪಣೆಗೆ ಆತನು ಉತ್ತರಿಸಿ ಹೀಗೆ ಹೇಳಿದನು "ನಿಮಗೆ ನಂಬಲು ಯಾವುದು ಸುಲಭ: ನಾನು ಪಾಪಗಳನ್ನು ಕ್ಷಮಿಸಬಲ್ಲೆ ನೆಂಬುದೋ? ಅಥವಾ ಈ ಮನುಷ್ಯನಿಗೆ ಪಾಪದ ಫಲವಾದ ರೋಗವನ್ನು ಗುಣಪಡಿಸಬಲ್ಲೆನೆಂಬುದೋ? ಆದರೆ ನನಗೆ ಪಾಪಗಳನ್ನು ಕ್ಷಮಿಸುವ ಅಧಿಕಾರವಿದೆ ಎಂಬುದನ್ನು ತೋರಿಸಿ ಕೊಡಲು ನಾನು ಈ ಗುಣಪಡಿಸುವಿಕೆಯನ್ನು ಮಾಡುವೆನು ಮತ್ತು ಇದರ ನೆರವೇರಿಕೆಯೇ ನಾನು ದೇವದೂಷಣೆ ಮಾಡಲಿಲ್ಲ ವೆಂಬುದಕ್ಕೆ ಸಾಕ್ಷಿಯಾಗಿದೆ; ಸೂಕ್ತವಾಗಿ ನನ್ನ ಅಧೀನದಲಿಲ್ಲದ ಅಧಿಕಾರದ ವಿಷಯದಲ್ಲಿ ನಾನು ಗರ್ವಪಡುವುದಿಲ್ಲ; ನಾನು ತಂದೆಯ ವಿಶೇಷ ರಾಯಭಾರಿಯೂ ಪ್ರತಿನಿಧಿಯೂ ಆಗಿದ್ದೇನೆಂದು ಪ್ರಕಟಿಸುವಲ್ಲಿ ನಾನು ಆತನನ್ನು ತಪ್ಪಾಗಿ ಪ್ರತಿನಿಧಿಸುತ್ತಿಲ್ಲ." ಆ ಮೇಲೆ ಯೇಸು ಆ ಪಾರ್ಶ್ವಾಯು ರೋಗದ ಮನುಷ್ಯನಿಗೆ ಹೇಳಿದ್ದು, "ಎದ್ದು ನಿನ್ನ ದೋಲಿಯನ್ನು ಹೊತ್ತುಕೊಂಡು ನಿನ್ನ ಮನೆಗೆ ಹೋಗು."

ಅವನು ಎದ್ದು ತಾನು ಮಲಗಿದ್ದ ತನ್ನ ದೋಲಿಯನ್ನು ಎತ್ತಿಕೊಂಡು ಹೋದಾಗ ಜನರು ಬೆರಗಾಗಿ "ಇದುವರೆಗೆ ನಾವು ಇಂಥದನ್ನು ಎಂದಿಗೂ ನೋಡಿದ್ದೇ ಇಲ್ಲವೆಂದು" ದೇವರನ್ನು ಕೊಂಡಾಡುತ್ತಾ ಹೇಳಿದರು. "ನಾವು ಈ ಹೊತ್ತು ಅಪೂರ್ವ ಸಂಗತಿಯನ್ನು ಕಂಡೆವು" ಎಂದು ಅವರು ಹೇಳಿದರೆಂದು ಲೂಕನು ಹೀಗೆ ಇದಕ್ಕೆ ಸೇರಿಸಿ ಹೇಳಿರುವನು. ಮೆಸ್ಸೀಯನು ತನ್ನ ರಾಜ್ಯದ ಬಗ್ಗೆ ವಿವರಿಸಿ ಹೇಳುವನೆಂದೂ ತನಗಿರುವ ಪಾಪಕ್ಷಮೆಯ ಅಧಿಕಾರದ ವಿಷಯವಾಗಿ ಸಾರಿಹೇಳಿ ಒಂದು ಅದ್ಭುತವನ್ನು ಮಾಡಿ ತನ್ನ ಆ ಅಧಿಕಾರವನ್ನು ತೋರ್ಪಡಿಸುವನೆಂದು ಅವರು ಕೇಳಿದ್ದರು. ದೇವರ ರಾಜ್ಯವು ಕೂಡಲೇ ಆರಂಭವಾಗುವುದೆಂದೂ ಹಾಗೂ ದೇವಾನುಗ್ರಹವು ಇಡೀ ಲೋಕವನ್ನು ಆವರಿಸಿಕೊಂಡು ಕಳೆದುಹೊದದ್ದನ್ನೆಲ್ಲವನ್ನು ಮಾನವಕುಲಕ್ಕೆ ಪುನರ್ವಶಪಡಿಸಲಿರುವ ಆಶೀರ್ವಾದವು ಹೆಚ್ಚುತ್ತಾ ಬಂದು ಅಲ್ಲಿ ವ್ಯಾದಿ ನೋವು ಗೋಳಾಟ ಸಾಯುವಿಕೆ ಪಾಪ ಮರಣಗಳು ಇನ್ನೆಂದಿಗೂ ಇಲ್ಲದಂತೆ ಮಾಡುವು ದೆಂಬುದನ್ನು ಆಶಿಸುವುದನ್ನು ಬಿಟ್ಟು ಅವರಿಗೆ ಬೇರೆ ಇನ್ನೇನು ಬಯಸಲು ಸಾಧ್ಯ. ಹೀಗಿದ್ದರೂ ದೇವರ ರಾಜ್ಯವು ಸ್ಥಾಪನೆಯಾಗುವುದಕ್ಕೆ ಮೊದಲು ಒಂದು ನಿರ್ದಿಷ್ಟವಾದ ಕಾರ್ಯವು ನೆರವೇರಬೇಕಾಗಿರುವುದು: ಅದೇನೆಂದರೆ, ದೇವರಾದುಕೊಂಡ ಚಿಕ್ಕ ಹಿಂಡಾದ ಕ್ರಿಸ್ತನ ಮದಲಗಿತ್ತಿಯೆಂಬ ಒಂದು ಗುಂಪು ಮೊದಲು ಆಯಲ್ಪಡಬೇಕು. ಪಾಲೆಸ್ತಿನಾ ದೇಶವು ದೇವಾನುಗ್ರಹಹೊಂದಿದ ಜನಾಂಗವಾಗಿ ದೇವರ ಏರ್ಪಾಡಿನ ಮೇರೆಗೆ ಪೂರ್ಣಗೊಳ್ಳಬೇಕಿರುವ ಆ ಗುಂಪಿಗೆ ಸಾಕಾಗುವಷ್ಟು ಸಂಖ್ಯೆಯಲ್ಲಿ ಜನರನ್ನು ಒದಗಿಸಲಿಲ್ಲ. ಈ ಕಾರಣವಾಗಿ ನಿಜವಾಗಿ ಇಸ್ರಾಯೇಲ್ಯರಾಗಿದ್ದವರೆಲ್ಲರನ್ನು ಆದುಕೊಂಡ ನಂತರ ವಂಶಪಾರಂಪರ್ಯವಾಗಿ ಬಂದ ಇಸ್ರಾಯೇಲ್ಯರಿಂದ ದೇವಾನುಗ್ರಹವು ಅನ್ಯಜನರ ಕಡೆಗೆ ತಿರುಗಿಸಲ್ಪಟ್ಟಿತು. ಹೀಗೆ ಆಯಲ್ಪಡಲಿರುವವರ ಸಂಖ್ಯೆಯು ಪೂರ್ಣಗೊಳ್ಳುವುದಕ್ಕಾಗಿ ಅನ್ಯಜನರೊಳಗಿಂದ ಆದುಕೊಳ್ಳ ಲಾಗುವುದು.

ಈ ಆದುಕೊಳ್ಳುವಿಕೆಯು ಬಹು ಸಮೀಪದಲ್ಲೇ ಪೂರ್ಣ ಗೊಳ್ಳುವುದೆಂಬುದು ನಮ್ಮ ವಿಶ್ವಾಸಪೂರ್ಣವಾದ ಭರವಸೆ; ಕ್ರಿಸ್ತನ ಎರಡನೇ ಬರೋಣವು ಕೂಡಲೇ ತನ್ನ ಸಭೆಯನ್ನು ಮೊದಲನೇ ಪುನರುತ್ಥಾನದಲ್ಲಿ ಎಬ್ಬಿಸಿ ಅವರಿಗೆ ಪ್ರಭಾವ ಮಾನ ನಿರ್ಲಯತ್ವಗಳನ್ನು ದೊರಕುವಂತೆ ಮಾಡಿ ಅವರು ಆ ರಾಜ್ಯದಲ್ಲಿ ಕ್ರಿಸ್ತನೊಂದಿಗೆ ಸಹಬಾಧ್ಯರನ್ನಾಗಿ ಮಾಡುವುದು; ಆನಂತರ ಸಮಸ್ತವನ್ನು ಸರಿಪಡಿಸಲಿರುವ ಆ ರಾಜ್ಯದ ಆಶೀರ್ವಾದವು ಶರೀರ ಸಂಬಂಧವಾಗಿರುವ ಅಬ್ರಹಾಮನ ಸಂತತಿಗೆ ಒದಗುವುದು, ಹೌದು, ಆ ಮೂಲಕವಾಗಿ ಭೂಲೋಕದ ಎಲ್ಲಾ ಕುಲಗಳಿಗೂ ಅದು ತಲುಪುವುದು.

ಪಾಪ ಮತ್ತು ಅವುಗಳ ಕ್ಷಮಿಸುವಿಕೆಯನ್ನು ಈ ಪಾಠದಲ್ಲಿನ ಪ್ರಮುಖ ಅಂಶವೆಂದು ಪರಿಗಣಿಸಬಹುದು; ಆದುದರಿಂದ ಈ ವಿಷಯದ ಕಡೆಗೆ ನಮ್ಮ ಗಮನವನ್ನು ಹರಿಸುವೆವು.

ಸತ್ಯವೇದವು ವಿವರವಾಗಿ ಪ್ರಕಟಿಸಿ ಹೇಳಿರುವಂತೆ ಪಾಪವು ಲೋಕದ ಜನರಲ್ಲಿ ಸರ್ವೇಸಾಮಾನ್ಯ ಮಾತ್ರವಲ್ಲದೆ ಪಾಪಪ್ರಜ್ಞೆಯು ಸಾಧಾರಣವಾಗಿ ಎಲ್ಲರಲ್ಲಿಯೂ ಸಾಮಾನ್ಯ. ಸತ್ಯವೇದವು ಒತ್ತಿಹೇಳುವಂತೆ ನೀತಿಗೆ ವಿರುದ್ಧವಾದುದೆಲ್ಲವೂ ಪಾಪವಾಗಿರುವುದು ಅಲ್ಲದೆ ದೋಷಪೂರಿತವೆಲ್ಲವೂ ಪಾಪವೆಂದು ಲೋಕವು ಸಾಧಾರಣವಾಗಿ ಗ್ರಹಿಸಕೊಂಡಿರುವುದು. ಧರ್ಮಶಾಸ್ತ್ರಾಧೀನರಾದ ಯೆಹೂದ್ಯರೆಲ್ಲರು ನೇಮವಿಧಿಗಳನ್ನು ಕೈಗೊಳ್ಳಲು ತಾವು ಅಸಮರ್ಥರೆಂಬುನ್ನು ಮನಗಂಡು ತಾವು ಪಾಪಿಗಳೆಂಬುದನ್ನೂ ನೇಮಗಳನ್ನು ಉಲ್ಲಂಘಿಸಿದವರೆಂದೂ ಪ್ರಾಮಾಣಿಕರಾಗಿ ಒಪ್ಪಿಕೊಳ್ಳುವರು. ದೇವರ ನಿಯಮಗಳು ಇನ್ನೂ ಉನ್ನತ ಮಟ್ಟದ್ದೆಂದು ಗ್ರಹಿಸಿರುವ ಕ್ರೈಸ್ತರು ತಮ್ಮ ದೋಷಗಳನ್ನು ಇನ್ನು ಹೆಚ್ಚು ಪೂರ್ಣವಾಗಿ ಗ್ರಹಿಸಿರುವವರಾಗಿದ್ದು "ನಿನ್ನ ದೇವರಾದ ಯೇಹೋವನನ್ನು ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ನಿನ್ನ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು ಹಾಗೂ ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು" ಎಂಬ ಪರಿಪೂರ್ಣವಾದ ಆಜ್ಞೆಯನ್ನು ಕೈಗೊಂಡು ನಡೆಯಲು ತಮ್ಮಲ್ಲಿರುವ ನ್ಯೂನ್ಯತೆಗಳನ್ನು ಮನಗಂಡಿರುವರು. ಆದರೆ ಯೆಹೂದ್ಯರ ಧರ್ಮವಿಧಿಗಳನ್ನಾಗಲೀ ಅಥವಾ ಕ್ರೈಸ್ತರ ಧರ್ಮವಿಧಿಗಳನ್ನಾಗಲೀ ಹೊಂದಿಲ್ಲದ ಇತರರು ತಮ್ಮ ಮನುಷ್ಯ ಸ್ವಭಾವದ ರಚನೆಯಲ್ಲಿಯೇ ಮೂಲ ಆಜ್ಞೆಗಳು ಬರೆಯಲ್ಪಟ್ಟಿದ್ದು ಅದರ ವಿಷಯದಲ್ಲಿ ಸಾಕಷ್ಟು ರೀತಿಯಲ್ಲಿ ಮನಸ್ಸಾಕ್ಷಿಪ್ರೇರಿತ ರಾಗಿರುವರು. ಆದರೂ ಆರು ಸಾವಿರ ವರುಷಗಳ ಪರ್ಯಂತರವಾಗಿ (ಪರಿಪೂರ್ಣತೆಯಿಂದ) ಬಿದ್ದುಹೋಗಿರು ವುದರ ಪರಿಣಾಮವಾಗಿ ಈ ಮನಸ್ಸಾಕ್ಷಿ ಪ್ರೇರಣೆಯು ಬಹು ಕ್ಷೀಣವಾಗಿ ಹೋಗಿರುವುದು. ಈ ಮೂಲಕವಾಗಿ ಅವರು ತಮ್ಮಲ್ಲಿರುವ ನ್ಯೂನ್ಯತೆಗಳನ್ನು ಮನಗಂಡವರಾಗಿರುವರು ಮತ್ತು ಅಪೋಸ್ತಲನು ತೋರಿಸಿಕೊಟ್ಟಿರುವಂತೆ ತಮ್ಮಲ್ಲಿರುವ

ಆದರ್ಶನೀತಿಗಳಿಗೆ ವಿರೋಧವಾಗಿ ಪಾಪಮಾಡಿದವರೆಂದು ತಾವು ಒಪ್ಪಿಕೊಳ್ಳುವರು. ಈ ಮೂಲಕವಾಗಿ ಅವರು ಕೆಲವು ಸಮಯಗಳಲ್ಲಿ ತಮ್ಮ ನಡತೆನ್ಯೂನ್ಯತೆಗಳನ್ನು ಒಪ್ಪಿಕೊಳ್ಳದೆ ಅವುಗಳನ್ನು ಸಮರ್ಥಿಸಿಕೊಳ್ಳುವರಾದೂ ಬೇರೆ ಸಮಯಗಳಲ್ಲಿ ಅವುಗಳನ್ನು ಸರಳಮನಸ್ಸಿನಿಂದ ಸ್ಪಷ್ಟವಾಗಿ ಒಪ್ಪಿಕೊಳ್ಳುವರು.

ಗಮನಾರ್ಹವಾದ ಸಂಗತಿಯೆಂದರೆ, ಕ್ರಿಸ್ತೀಯ ಅನುಭವಶಾಲೆಯಲ್ಲಿ ನಮ್ಮ ಕಲಿಯುವಿಕೆಯು ಹೆಚ್ಚಿದಷ್ಟೂ ನಮ್ಮಲ್ಲಿರುವ ಪಾಪಪ್ರಜ್ಞೆಯು ಹೆಚ್ಚುತ್ತಾಬರುವುದು; ಅಂದರೆ ನಾವು ಕೆಟ್ಟದ್ದನ್ನು ನಡೆಸುವುದನ್ನು ನಿಲ್ಲಿಸಿ ಒಳ್ಳೆಯದು ಮಾಡುವದನ್ನು ಕಲಿತಷ್ಟೂ ಈ ಪಾಪಪ್ರಜ್ಞೆಯು ಅಧಿಕವಾಗುವುದು. ಇದರ ಅನುಸಾರವಾಗಿ ಬಹು ಕೀಳುಮಟ್ಟದ ಪಾಪಿಗಿಂತಲೂ ಬಹು ಮುಂದುವರಿದ ಭಕ್ತನು ಪಾಪದ ವಿಷಯವಾಗಿ ಸ್ಪಷ್ಟವಾದ ಗ್ರಹಿಕೆಯನ್ನು ಹಾಗೂ ಬಹುವಾದ ಜಿಗುಪ್ಸೆಯನ್ನು ಪಡೆದಿರುವನು. ಪಾಪವನ್ನು ದ್ವೇಷಿಸುವ ದೇವರ ವಿಷಯದಲ್ಲೂ ಹೀಗೆಯೇ; ಅದರ ಬಗ್ಗೆ ರಿಯಾಯಿತಿಯುಳ್ಳವನಾಗಿರಲು ಆತನಿಗೆ ಸಾಧ್ಯವಾಗದು. ಆತನು ಅದರ ಮೇಲೆ ತನ್ನ ನಿಷೇಧವನ್ನು ಹಾಕಿ ಅದಕ್ಕೆ ವಿರೋಧವಾಗಿ ತನ್ನ ತೀರ್ಪನ್ನು ನೀಡಿ ಅದನ್ನು ಶಾಸನವನ್ನಾಗಿ ಮಾಡಿರುವನು ಮತ್ತು ಅದನ್ನು ಬೇರು ಸಹಿತವಾಗಿ ಕಿತ್ತೊಗೆಯಲಾಗುವುದೆಂದು ಹಾಗೂ ಇದರ ವಿಷಯದಲ್ಲಿ ಬುದ್ಧಿಪೂರ್ವಕವಾಗಿಯೂ ಮನಃಪೂರ್ವಕವಾಗಿಯೂ ಸಹಾನುಭೂತಿಯುಳ್ಳವರನ್ನು ಇದರ ಅಂಗಗಳೆಂದು ಪರಿಗಣಿಸಬೇಕೆಂದು ಮತ್ತು ಇದರೊಂದಿಗೆ ಅವರನ್ನೂ ನಾಶಮಾಡಬೇಕೆಂದು ಪ್ರಕಟಿಸಿರುವನು.

ಪಾಪದ ವಿಷಯವನ್ನು ಅಧಿಕವಾಗಿ ದೃಷ್ಟಿಸಿದಷ್ಟೂ ಮತ್ತು ಕಲುಶಿತಗೊಳಿಸುವ ಅದರ ಸ್ವಭಾವವನ್ನೂ ಅದರ ವಿನಾಶಕಾರಿ ಪ್ರವೃತ್ತಿಯನ್ನೂ ಅಧಿಕವಾಗಿ ಅರಿತಷ್ಟೂ ಮಾನವರಲ್ಲಿರುವ ಪಾಪವನ್ನು ಖಂಡಿಸಿರುವ ದೇವರ ನೀತಿನ್ಯಾಯಗಳ ಬಗ್ಗೆ ಅಷ್ಟು ಅಧಿಕವಾಗಿ ಗ್ರಹಿಕೆಮಾಡಿಕೊಳ್ಳುವೆವು. ನೀತಿ ಸತ್ಯತೆ ಪರಿಶುದ್ಧತೆ ಪವಿತ್ರತೆಯ ವಿಷಯವಾಗಿ ನಮ್ಮ ಗ್ರಹಿಕೆಯು ಪ್ರಗತಿಹೊಂದಿದಷ್ಟೂ ನಾವು ಪಾಪದ ವಿಷಯವಾಗಿರುವ ದೇವರ ದೃಷ್ಟಿಯ ಬಗ್ಗೆ ಅಧಿಕವಾಗಿ ಗ್ರಹಿಸಲು ಶಕ್ತರಾಗಿ ದೇವರ ವಿಷಯವಾಗಿಯೂ ಮತ್ತು ಪಾಪದ ಮತ್ತು ಪಾಪಿಗಳ ವಿರುದ್ಧವಾಗಿರುವ ಆತನ ತೀರ್ಪಿನ ಬಗ್ಗೆ ಹೀಗೆ ಹೇಳುವವರಾಗುವೆವು: "ದೇವರಾದ ಕರ್ತನೇ, ಸರ್ವಶಕ್ತನೇ, ನಿನ್ನ ... ಮಾರ್ಗಗಳು ನ್ಯಾಯವೂ ಸತ್ಯವೂ ಆಗಿವೆ;" ಪ್ರಕಟನೆ 15:3

## ದೇವರ ಕನಿಕರದ ಕಾರ್ಯನಿರ್ವಹಣೆ

ನಮ್ಮ ಮಾನವಕುಲದ ಮೇಲಿರುವ ಮರಣದಂಡನೆಯ ಹಿಂದಿರುವ ದೇವರ ನ್ಯಾಯನೀತಿಗಳ ಬಗ್ಗೆ ನಾವು ಹೆಚ್ಚು ಮನವರಿಕೆಮಾಡಿಕೊಳ್ಳುತ್ತಾ ಬಂದಷ್ಟೂ ನಮ್ಮ ಕಡೆಗೆ ದೇವರು ತೋರಿರುವ ಪ್ರೀತಿ ಕನಿಕರದ ಬಗ್ಗೆಯೂ ಸಹ ಮನವರಿಕೆ ಮಾಡಿಕೊಳ್ಳುತ್ತಾ ಬರುವೆವು. ಹಾಗೂ ಒಬ್ಬನಾದರೂ ನಾಶವಾಗುವುದರಲ್ಲಿ ಆತನಿಗೆ ಸಂತೋಷವಿಲ್ಲವೆಂಬುದನ್ನೂ ಅದುದರಿಂದ ಆತನು ಎಲ್ಲರೂ ತನ್ನ ಕಡೆಗೆ ತಿರುಗಿಕೊಂಡು ನಿತ್ಯಜೀವ ಪಡೆದುಕೊಂಡು ಬದುಕಲು ಸಾಧ್ಯವಾಗುವಷ್ಟು ವಿಶಾಲವಾಗಿಯೂ ಉನ್ನತವಾಗಿಯೂ ಆಳವಾಗಿಯೂ ಇರುವ ಏರ್ಪಾಡನ್ನು ಮಾಡಿರುವನು ಎಂಬುದಕ್ಕೆ ಹರ್ಷಿಸುವವರಾಗುತ್ತೇವೆ. ಕನಿಕರದ ಸಂಬಂಧದ ಈ ಏರ್ಪಾಡಿಗೆ ಪಾಪದ ವಿಷಯದ ಬಗ್ಗೆ ಅಲಕ್ಷ್ಯವಾಗಿರಲು ಸಾಧ್ಯವಾಗದು ಅಲ್ಲದೆ ಇದರ ಬಗ್ಗೆ ಅಲಕ್ಷ್ಯತೋರಲು ಪಾಪಿಯನ್ನು ಅದು ಬಿಡುವುದಿಲ್ಲ. (ಪರಿಪೂರ್ಣತೆಯಿಂದ) ಬಿದ್ದುಹೋದ ತಮ್ಮ ಸ್ಥಿತಿಯನ್ನೂ ತಮ್ಮ ಮೇಲಿರುವ ಮರಣದಂಡನೆಯ ತೀರ್ಪಿನ ನ್ಯಾಯಬದ್ದತೆಯ ವಿಷಯವಾಗಿಯೂ ಮತ್ತು ಇದರಿಂದ ತಾವು ಮರಳಿ ಹೊರಬರುವಿಕೆಯು ಪೂರ್ಣವಾಗಿ ದೇವರ ಕನಿಕರಕ್ಕೆ ಸಂಬಂಧಿಸಿದ ವಿಷಯವೆಂಬುದನ್ನೂ ತಿಳಿದುಕೊಳ್ಳುವುದು ಹಾಗೂ ಇದರ ವಿಷಯವಾಗಿ ಮನವರಿಕೆಮಾಡಿಕೊಳ್ಳುವುದು ವಿಮೋಚಿಸಲ್ಪಟ್ಟವರಿಗೆ ಅಗತ್ಯ. ಅವರು ಈ ಪಾಠವನ್ನು ಕಲಿತುಕೊಳ್ಳದಿದ್ದರೆ ದೇವರು ಅವರಿಗೆ ನಿತ್ಯಜೀವವನ್ನು ಅನುಗ್ರಹಿಸಲು ವಿಧಿರುವ ಆ ಒಂದೇ ಷರತ್ತಿನ ಬಗ್ಗೆ ಅಂದರೆ ದೇವರ ಕೃಪೆಯನ್ನು ಮತ್ತು ಆತನು ನೀಡುವ ಕ್ಷಮಾಪಣೆಯನ್ನು ಅಂಗೀಕರಿಸಿ ಆತನಿಗೂ ಹಾಗೂ ಆತನ ನೀತಿತತ್ವಗಳಿಗೆ ವಿಧೇಯರಾಗುವುದರ ವಿಷಯವಾದ ದೇವರ ಏರ್ಪಾಟಿನ ಬಗ್ಗೆ ಮನವರಿಕೆಯಾಗಲು ಸಾಧ್ಯವಾಗದು.

## ಬೇರೆ ಯಾವ ಹೆಸರಿನಿಂದಲೂ (ರಕ್ಷಣೆಯು) ಸಾಧ್ಯವಾಗದು

ಈ ಉದ್ದೇಶಕ್ಕಾಗಿಯೇ ಪರಲೋಕದ ತಂದೆಯು ನಮ್ಮ ಮಾನವ ಕುಲವನ್ನು ಸುಸ್ಥಿತಿಗೆ ತರುವ ತನ್ನ ಯೋಜನೆಯನ್ನು ಏರ್ಪಡಿಸಿರುವನು. ಆತನು ತನ್ನ ವಾಕ್ಯದಲ್ಲಿ ತಿಳಿಯಪಡಿಸಿರುವ ಹಾಗೆ ಆ ಒಂದು ಯೋಜನೆಯ ಮೂಲಕ ಆತನು ಎಲ್ಲರಿಗೂ ಕನಿಕರವನ್ನು ತೋರಿಸುವನು, ಆದರೂ ಅದಕ್ಕೆ ಯೇಸುವಿನ ಮೂಲಕವಾಗಿ ತೋರ್ಪಡಿಸಲಾಗಿರುವ ಆ ಕನಿಕರವನ್ನು ಎಲ್ಲರೂ ಅಂಗೀಕರಿಸಬೇಕು; ಅದು "ಆತನ ರಕ್ತದ ಮೇಲಿನ ನಂಬಿಕೆಯ ಮೂಲಕವಾಗಿ" ಅಥವಾ ಇದರ ಹೊರತಾಗಿ ಅದು ಸಾಧ್ಯವೇ ಇರುವುದಿಲ್ಲ. (ರೋಮಾ. 3:25) ತಂದೆಯ ಬಳಿಗೆ ಬರುವ ಪ್ರತಿಯೊಬ್ಬನೂ ತಾನು ಒಬ್ಬ ಪಾಪಿಯೆಂಬುದನ್ನು ಒಪ್ಪಿಕೊಳ್ಳಬೇಕು; ತಾನು ತನ್ನ ಪಾಪಕ್ಕೆ ಶಿಕ್ಷೆಯನ್ನು ಅನುಭವಿಸಿದ ನಂತರದಲ್ಲಿ ಜೀವಿಸಲು ತನಗೆ ಸಾಧ್ಯವಾಗದೆಂಬುದನ್ನು ಒಪ್ಪಿಕೊಳ್ಳಬೇಕು; ತನ್ನ ರಕ್ಷಣೆಯು ಕ್ರಿಸ್ತನ ಮೂಲಕವಾಗಿರುವುದೆಂದು ಒಪ್ಪಿಕೊಂಡು ದೃಢಪಡಿಸಬೇಕೆಂದು ಅದು ಅಪೇಕ್ಷಿಸುತ್ತದೆ. ವಿಮೋಚಕನಾದ ಯೇಸುವು ದೇವರ ಮತ್ತು ಪಾಪಿಗಳ ನಡುವೆ ಮಧ್ಯಸ್ಥನಾಗಿ ನಿಲ್ಲುವದಕ್ಕೆ ಇರುವ ಷರತ್ತುಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡು ಅದನ್ನು ಅಂಗೀಕರಿಸಿ ಅದಕ್ಕೆ ಅನುಸಾರವಾಗಿ ನಡೆಯಬೇಕೆಂಬುದನ್ನು ದೃಢಪಡಿಸಲು ಅದು ಅಪೇಕ್ಷಿಸುತ್ತದೆ. (ತಮ್ಮ) ಪಾಪಗಳಿಗೆ ಪ್ರಾಮಾಣಿಕವಾಗಿ ಪಶ್ಚಾತಾಪಪಟ್ಟು ದೇವರ ಕಡೆಗೆ ತಿರುಗಿಕೊಳ್ಳಲು ಆತನ ಮಾರ್ಗದರ್ಶನ ಆದೇಶ ಹಾಗು ಸಹಾಯಗಳನ್ನು ಪಡೆದು ಅದಕ್ಕಾಗಿ ಅತ್ಯುತ್ತಮವಾದ ರೀತಿಯಲ್ಲಿ ಪ್ರಯತ್ನಿಸುವವರಿಗೆ ಮತ್ತೆ ಅವರು ಪರಿಪೂರ್ಣತೆಯನ್ನು ತಲುಪಿ ತಂದೆಯ ಅನ್ಯೋನ್ಯತೆಗೆ

ಪೂರ್ಣವಾಗಿ ಸೇರಿಸಲು ಸಹಾಯಮಾಡುವುದಾಗಿ ಹೇಳುವ ಪ್ರಸ್ತಾಪವನ್ನು ಆತನು ಮಾಡಿದ್ದಾನೆ. ಇಂಥವರಿಗೆ, ಕೇವಲ ಇಂಥವರಿಗೇ ಪರಿಪೂರ್ಣತೆ ಹೊಂದುವಂತೆ ಅನುಗ್ರಹಿಸಲಾಗುವುದು. ಕೇವಲ ಇಂಥವರೇ ನಮ್ಮನ್ನು ತನ್ನ ಅಮೂಲ್ಯ ರಕ್ತದಿಂದ ಕೊಂಡುಕೊಂಡಾತನಿಂದ ಸಹಾಯ ಪಡೆದು ಆತನ ವಿಮೋಚನಾ ಕಾರ್ಯದ ಮೂಲಕ ನಿತ್ಯಜೀವವನ್ನು ಪಡೆದುಕೊಳ್ಳುವರು.

## ಪಾಪಗಳು ಅಳಿಸಲ್ಪಡುವುದು

ಸತ್ಯವೇದವು ನಮಗೆ ಭರವಸೆ ನೀಡಿ ಹೇಳಿರುವಂತೆ ಕ್ರಿಸ್ತನ ಎರಡನೆಯ ಬರೋಣದಲ್ಲಿ ನೆರವೇರಲಿರುವ ಪಾಪದ ಅಳಿಸುವಿಕೆ ವಿಷಯವಾಗಿಯೂ ಹಾಗೂ ಈಗ ಅಗತ್ಯವಾದ ನಂಬಿಕೆ ವಿಧೇಯತೆಗಳನ್ನು ಅನುಸರಿಸಿ ನಡೆಯುವವರೆಲ್ಲರೂ ಈಗ ಕೂಡಲೇ ಹೊಂದುವ ಪಾಪಕ್ಷಮೆಯ ವಿಷಯವಾಗಿಯೂ ಇರುವ ಒಂದು ಗಾಢವಾದ ವ್ಯತ್ಯಾಸವನ್ನು ನಾವು ಗುರುತುಮಾಡಿ ಇಟ್ಟುಕೊಳ್ಳುವುದು ಒಳ್ಳೆಯದು. ಪಾಪಗಳ ಅಳಿಸುವಿಕೆಯನ್ನು ಕ್ರಿಸ್ತನ ಎರಡನೆ ಬರೋಣದಲ್ಲಿ ಮೊದಲು ಸಭೆಗೆ ನೀಡಲಾಗುವುದು; ಮೊದಲನೆಯ ಪುನರುತ್ಥಾನ ಹೊಂದಿ ಮಹಿಮೆಯುಳ್ಳ ಆಶೀರ್ವಾದಗಳಲ್ಲಿ ಪಾಲುಗಾರರಾಗುವವರಿಗೆ ಆನಂತರ ಅವರಲ್ಲಿ ಯಾವ ವಿಧದಲ್ಲಿಯಾದರೂ ಅಥವಾ ಯಾವ ಪ್ರಮಾಣದಲ್ಲಿಯಾದರೂ ಪಾಪದ ಒಂದು ಸುಳಿವೂ ಇರುವುದಿಲ್ಲ. ಈಗಿನ ಸಮಯದಲ್ಲಿ ಅವರು ನಿಜವಾಗಿಯೂ ಅಪರಿಪೂರ್ಣರೂ ದೋಷಪೂರಿತರೂ ಪಾಪದ ಕಲೆಯಿಂದ ಅಂದಗೆಟ್ಟವರೂ ಆಗಿದ್ದು ಈಗ ಅವರಿಗೆ ಕ್ರಿಸ್ತನಲ್ಲಿ ಉಚಿತವಾಗಿ ಅನುಗ್ರಹಿಸಿರುವ ನೀತಿವಸ್ತ್ರವನ್ನು ಸತತವಾಗಿ ಧರಿಸಿಕೊಳ್ಳುವ ಅಗತ್ಯತೆಯಿರುವುದು. ಆದರೆ ಪುನರುತ್ಥಾದಲ್ಲಿ ಮಾರ್ಪಾಟಾದ ನಂತರ ಅವರ ದೋಷಗಳೆಲ್ಲವೂ ಇಲ್ಲವಾಗಿ ಹೋಗುವವು. ಆಪೋಸ್ತಲನು ವರ್ಣಿಸಿ ಹೇಳಿರುವಂತೆ ದೇಹವು ಲಯಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ ನಿರ್ಲಯಾವಸ್ಥೆಯಲ್ಲಿ ಎದ್ದು ಬರುವುದು; ಹೀನಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ ಮಹಿಮೆಯಲ್ಲಿ ಎದ್ದು ಬರುವುದು; ಪ್ರಾಕೃತ ದೇಹವಾಗಿ ಬಿತ್ತಲ್ಪಡುತ್ತದೆ, ಆತ್ಮಿಕದೇಹವಾಗಿ ಎದ್ದು ಬರುವುದು. ಅವರಿಗೆ ಆನಂತರದಲ್ಲಿ ನೀತಿವಂತರೆಂಬ ನಿರ್ಣಯವನ್ನು ಹೊಂದಿಕೊಳ್ಳುವ ಅಗತ್ಯವಿರುವುದಿಲ್ಲ; ಯಾಕೆಂದರೆ ಅವರಲ್ಲಿ ಪ್ರತಿಯೊಬ್ಬರೂ ಸ್ವತಃ ಸಂಪೂರ್ಣವಾದ ಪರಿಪೂರ್ಣತೆಯಲ್ಲಿಯೂ ಸಂಪೂರ್ಣವಾಗಿ ನೀತಿವಂತರಾಗಿಯೂ ಇರುವರು. – 1 ಕೊರಿಂಥ 15:42–44.

ಲೋಕದ ಪಾಪವನ್ನು ಅಳಿಸಿಹಾಕುವುದು ಕೂಡಲೇ ಒಂದು ಕ್ಷಣದಲ್ಲಿ ರೆಪ್ಪೆಬಡಿಯುವಷ್ಟರೊಳಗೆ ನಡೆಯುವ ಸಂಗತಿಯಲ್ಲ ಆದರೆ ಅದು ಸಾವಿರ ವರುಷದ ಪರ್ಯಂತರ ಹಂತಹಂತವಾಗಿ ಮುಂದುವರಿಯುವಂಥದ್ದು. ಪ್ರತಿಯೊಬ್ಬ ವ್ಯಕ್ತಿಯು ಪಾಪವನ್ನು ಗುರುತಿಸಿಕೊಂಡು ಆ ರಾಜ್ಯದ ನಿಯಮಗಳಿಗೆ ಅನುಸಾರವಾಗಿ ಹೊಂದಿಕೊಂಡಷ್ಟೂ ದೃಢವಾಗಿ ಬೆಳೆಯುತ್ತಾ ಹೋಗುವನು. ಇದು ಆತನು ನೀತಿಮಾರ್ಗದಲ್ಲಿ ಅಂದರೆ ಪರಿಶುದ್ಧವಾದ ರಾಜಮಾರ್ಗದಲ್ಲಿ ನಡೆಯಲು ಪರಿಶ್ರಮಿಸಿದುದರ ಪ್ರತಿಫಲವಾಗಿ ದೊರೆಯುವದು. ದಿನದಿನವೂ ವರುಷವರುಷವೂ ಆತನು ಮಾನಸಿಕವಾಗಿ ನೈತಿಕವಾಗಿ ಶಾರೀರಿಕವಾಗಿ ವೃದ್ಧಿಯಾಗುವನು ಅಥವಾ ಆ ಕಾಲದಲ್ಲಿನ ಹೇರಳವಾದ ಅವಕಾಶ ಹೊಂದಿದ ನಂತರವೂ ಇದನ್ನು ಮಾಡುವುದರಲ್ಲಿ ವಿಫಲನಾದಲ್ಲಿ ಮುಂದೆ ವಿಮೋಚಕನ ರಾಜ್ಯದ ಮೂಲಕವಾಗಿ ನಿತ್ಯಜೀವ ಪಡೆಯುವ ಯಾವುದೇ ಅವಕಾಶವನ್ನು ಹೊಂದಲು ಆತನು ಅನರ್ಹನೆಂದು ಪರಿಗಣಿಸಲ್ಪಟ್ಟವನಾಗಿ ಎರಡನೆ ಮರಣದಲ್ಲಿ ನಾಶವಾಗುವನು. ಯಾರು ಆ ಕಾಲದಲ್ಲಿ ದೊರೆಯುವ ಸವಲತ್ತುಗಳನ್ನು ಸದುಪಯೋಗಮಾಡಿಕೊಳ್ಳಲು ಇಚ್ಛಿಸುವರೋ ಅವರ ಪಾಪಗಳು ಸಂಪೂರ್ಣವಾಗಿ ಅಳಿಸಿಹಾಕಲ್ಪಡುವುದು. ಅವರು ಸಾವಿರ ವರುಷದ ಅಂತ್ಯದಲ್ಲಿ ಮಾನಸಿಕವಾಗಿಯೂ ಶಾರೀರಿಕವಾಗಿಯೂ ಸಂಪೂರ್ಣವಾದ ಪರಿಪೂರ್ಣತೆಗೆ ತಲುಪುವರು ಮತ್ತು ಆನಂತರದಲ್ಲಿ ಪ್ರಕಟನೆ 20:10 ರಲ್ಲಿ ತೋರಿಸಿ ಕೊಟ್ಟಿರುರುವಂತೆ ನೀತಿಯುಳ್ಳ ತತ್ವಗಳಿಗೆ ತಮ್ಮ ಹೃದಯದಲ್ಲಿರುವ ಪ್ರಾಮಾಣಿಕತೆಯ ವಿಷಯವಾಗಿ ಅವರು ಪರೀಕ್ಷಿಸಲ್ಪಡುವರು. ಆ ಕೊನೆಯ ಪರಿಕ್ಷೆಯು ಮಾನವಕುಲದವರೆಲ್ಲರಿಗೂ ಸಮಾನ್ಯವಾಗಿರುವುದು. ಪಾಪದ ಹಾಗೂ ಅದರ ಫಲವಾಗಿವಾಗಿ (ಪರಿಪೂರ್ಣತೆಯಿಂದ) ಬಿದ್ದುಹೋದುದರ ಅನುಭವ ಹೊಂದಿರುವುದರ ಮತ್ತು ನೀತಿಯ ಆಳ್ವಿಕೆಯ ಮೂಲಕವಾಗಿ ಮರಳಿಪಡೆದ ತಮ್ಮ ಪರಿಪೂರ್ಣತೆಯ ಹೊರತಾಗಿ ಅವರ ಆ ಪರೀಕ್ಷೆಯು ಆದಾಮನಿಗೆ ಏದೇನಿನಲ್ಲಿ ನೀಡಿದ ಪರೀಕ್ಷೆಗೆ ಹೋಲಿಕೆಯಾಗಿರುವುದು. ಆದುದರಿಂದ ಆ ಪರೀಕ್ಷೆಯಲ್ಲಿ ತೃಪ್ತಿಕರವಾಗಿ ತೇರ್ಗಡೆಯಾಗಲು ಅವರು ಸರಿಯಾದ ಮನೋಭಾವವನ್ನು ಪಡೆದವರಾಗಿರುವರು; ಅಲ್ಲದೆ ಇದನ್ನು ಮಾಡುವುದರಲ್ಲಿ ವಿಫಲರಾದವರು ಅನುಕೂಲವಾದ ಸನ್ನಿವೇಶದಲ್ಲಿಯೂ ದೇವರೊಂದಿಗೆ ಹೊಂದಾಣಿಕೆಯಾಗಿ ನಿತ್ಯಜೀವ ಪಡೆಯಲು ಅನಿವಾರ್ಯವಾದ ಮನೋಭಾವಕ್ಕೆ ಬರಲಾಗದವರೆಂಬುದನ್ನು ತೋರ್ಪಡಿಸುವರು. ಸತ್ಯವೇದವು ತೋರಿಸಿಕೊಟ್ಟಿರುವಂತೆ ಅಂಥವರು ಸೈತಾನನ ಮನೋಭಾವದಲ್ಲಿ ಕನಿಷ್ಠವೆಂದರೂ ಕೆಲವು ಅಂಶಗಳನ್ನು ಪಡೆದವರೆಂದು ಎಣಿಸಲ್ಪಟ್ಟವರಾಗಿ ಆತನೊಡನೆ ನಾಶಮಾಡಲ್ಪಡುವರು.

## ಪಾಪಗಳ ಕ್ಷಮಾಪಣೆ

ಯಾರ ವಿರುದ್ಧವಾಗಿ ಆಜ್ಞೆಮೀರೋಣವಾಗುತ್ತದೆಯೋ ಕೇವಲ ಅವರಿಗೇ ಆ ಒಂದು ಪಾಪವನ್ನು ಕ್ಷಮಿಸಲು ಸಾಧ್ಯವೆಂಬುವ ವಿಚಾರವನ್ನು ಪ್ರತಿಪಾದಿಸುವರೆಂಬಂತೆ ಶಾಸ್ತ್ರಿಗಳನ್ನು ನಮ್ಮ ಪಾಠದಲ್ಲಿ ಪ್ರತಿನಿಧಿಸಲಾಗಿದೆ. 'ಅ' ಎಂಬುವವರು 'ಆ' ಎಂಬುವವರಿಗೆ ವಿರೋಧವಾಗಿ ಒಂದು ತಪ್ಪನ್ನು ಮಾಡಿದರೆ ಅದನ್ನು ಕ್ಷಮಿಸುವ ಅಧಿಕಾರವು 'ಇ' ಎಂಬುವವರಿಗೆ ಇರುವುದಿಲ್ಲ. 'ಆ' ಎಂಬುವವರಿಗೆ ಮಾತ್ರ ಮನನೊಂದವನೆಂದು ಭಾವಿಸಿಕೊಳ್ಳುವ ಹಕ್ಕನ್ನು ಹೊಂದಿದವನಾಗಿರಲು ಅವನೊಬ್ಬನಿಗೇ ಅದನ್ನು ಕ್ಷಮಿಸಲು ಸಾಧ್ಯವಿರುವುದು. ಶಾಸ್ತ್ರಿಗಳು ಸರಿಯಾದ ರೀತಿಯಲ್ಲಿ ವಿವೇಚಿಸುವವರಾಗಿದ್ದರು: ನಾವು ಒಂದು ಸಮಯದಲ್ಲಿ ವೈಯುಕ್ತಿಕವಾಗಿ ಮತ್ತೊಬ್ಬರ ಹಕ್ಕುಬಾಧ್ಯತೆಗಳಿಗೆ ವಿರೋಧವಾಗಿ ತಪ್ಪನ್ನು ಮಾಡುವವರಾಗಿದ್ದು ಮತ್ತು ಹೀಗೆ ಮತ್ತೊಬ್ಬರಿಗೆ ವಿರುದ್ಧವಾಗಿ ಪಾಪಮಾಡಿ ಮತ್ತೊಬ್ಬರಿಂದ ಕ್ಷಮೆಯನ್ನು ಕೇಳಿಕೊಂಡವರಾದಾಗ್ಯೂ

ಪಾಪಗಳೆಲ್ಲವೂ ಪ್ರಥಮವಾಗಿ ದೇವರಿಗೆ ವಿರೋಧವಾಗಿದ್ದು ಅವು ದೇವರ ನೀತಿವಿಧಿಯ ಉಲ್ಲಂಘನೆಯಾಗಿರುವುದು. ನೀತಿಗೆ ವಿರುದ್ಧವಾದುದೆಲ್ಲವೂ ಪಾಪವಾಗಿದ್ದು ಅವು ದೇವರಿಗೆ ವಿರುದ್ಧವಾಗಿ ಅಂದರೆ ಆತನ ನಿಯಮಗಳಿಗೆ ವಿರುದ್ಧವಾಗಿ ಮಾಡಿದ್ದಾಗಿರುವುದು. ಕೇವಲ ಆತನೊಬ್ಬನೇ ಸರಿತಪ್ಪುಗಳ ಅಳತೆಮಟ್ಟವನ್ನು ನೇಮಿಸಿದಾತನಾಗಿದ್ದು ಅದರ ಮೂಲಕ ವಾಗಿಯೇ ತನ್ನ ಸೃಷ್ಟಿಯ ಗುಣಮಟ್ಟಗಳನ್ನು ಅಳೆದು ನಿರ್ಧರಿಸುವವನೂ ಆಗಿರುವ ದೇವರೊಬ್ಬನೇ ನ್ಯಾಯಾಧಿಪತಿ ಯಾಗಿರುವನು. ಹೀಗಿರುವಲ್ಲಿ:

## ಯೇಸುವಿಗೆ ಪಾಪಗಳನ್ನು ಕ್ಷಮಿಸಲು ಹೇಗೆ ಸಾಧ್ಯ?

ನಾವು ಉತ್ತರಿಸುವುದೇನೆಂದರೆ: ನಮ್ಮ ಸೃಷ್ಟಿಕರ್ತನು ಪಾಪ ಮತ್ತು ಅದರ ಕ್ಷಮಾಪಣೆಯ ವಿಷಯವನ್ನು ಹೇಗೆ ನಿಗಧಿಪಡಿಸಿದ್ದಾನೆಂದರೆ ಯೇಸು ಒಬ್ಬನಿಂದಲೇ, ಅಥವಾ ಪರಲೋಕದ ತಂದೆಯು ಆತನ ಮೂಲಕವಾಗಿ, ಅದನ್ನು ಕ್ಷಮಿಸಲು ಸಾಧ್ಯವಿರುವುದು. ದೇವರು ಮಾಡಿರುವ ಏರ್ಪಾಟು ಎಷ್ಟು ನಿಶ್ಚಯವಾಗಿತ್ತೆಂದರೆ ತಂದೆ ದೇವರೂ ಸಹ ಪಾಪಗಳನ್ನು ಕ್ಷಮಿಸುವ ಅಧಿಕಾರದಿಂದ ತಾನೂ ಕೈಯನ್ನು ಹಿಂದೆಗೆದುಕೊಂಡಿರುವನು; ಏಕೆಂದರೆ ಆತನು ಆದಾಮನ ಹಾಗು ಆತನ ಸಂತತಿಯ ವಿಷಯದಲ್ಲಿ ಪಾಪಕ್ಕೆ ಒಂದು ಖಚಿತವಾದ ಸಂಪೂರ್ಣವಾದ ಬದಲಿಸಲಾಗದ ಶಿಕ್ಷೆಯನ್ನು ವಿಧಿಸಿದ್ದಾನೆ. ಆತನು ಇದನ್ನು ಬೇರೆ ವಿಧದಲ್ಲಿ ಮಾಡಬಹುದಿತ್ತು: ಬಿದ್ದುಹೋದ ದೇವದೂತರ ವಿಷಯದಲ್ಲಿ ನಡಕೊಂಡಂತೆ ಆತನು ಮಾನವಕುಲದವರ ವಿಷಯದಲ್ಲೂ ನಡಕೊಂಡು ಅವರಿಗೆ ನೇರವಾಗಿ ಮರಣದಂಡನೆಯನ್ನು ವಿಧಿಸದೆಯೇ ಕೆಲವು ರೀತಿಯ ನಿರ್ಬಂಧಗಳನ್ನು ಹಾಕಬಹುದಿತ್ತು. ಆದರೆ ಒಂದು ಸಾರಿ ಮರಣದಂಡನೆ ವಿಧಿಸಿದಲ್ಲಿ ಯಾವುದರಿಂದಲೂ ಅದನ್ನು ಬದಲಿಸುವುದಾಗಲೀ ಅಥವಾ ರದ್ದುಪಡಿಸುವುದಾಗಲೀ ಆಗದು. ತನ್ನ ಸ್ಥಿರವಾದ ಆಜ್ಞಾವಿಧಿಗಳನ್ನು ಬದಲಿಸಲು ದೇವರಿಗೂ ಸಾಧ್ಯವಾಗದು.

ಆದರೆ ಮಾನವಕುಲದ ಮೇಲಿರುವ ನಿಶ್ಚಲವಾದ ತೀರ್ಪನ್ನು ನಿಗದಿತ ಸಮಯದಲ್ಲಿ ಹೇಗೆ ನಿಷೇದಿಸಬಹುದೆಂಬ ಅಥವಾ ರದ್ದುಗೊಳಿಸಬಹುದೆಂಬ ಪೂರ್ಣ ಅರಿವಿನಿಂದಲೇ ಸೃಷ್ಟಿಕರ್ತನು ಅದನ್ನು ನೀಡಿದ್ದನು. ಅಂದರೆ ಅದನ್ನು ಹಿಂದೆಗೆದುಕೊಳ್ಳುವ ಮೂಲಕವಾಗಿಲ್ಲದೆ ಅದಕ್ಕೆ ವಿಮೋಚಕನ ಮುಖಾಂತರ ಅದರಲ್ಲಿ ವಿಧಿತವಾದವುಗಳನ್ನು ಈಡೇರಿಸುವುದರ ಮೂಲಕವಾಗಿ ಅದನ್ನು ನೆರವೇರಿಸುವನು. ಹೀಗೆ ದೇವರ ಯೋಜನೆಯಲ್ಲಿ ಕರ್ತನಾದ ಯೇಸುವು ಜಗದುತ್ಪತ್ತಿಗೆ ಮೊದಲೇ ಕೊಯ್ಯಲ್ಪಟ್ಟ ಕುರಿಯಾಗಿ ಮಾಡಲ್ಪಟ್ಟಿದ್ದನು. ಇನ್ನೊಂದು ಮಾತಿನಲ್ಲಿ ಹೇಳುವದಾದರೆ, ದೇವರು ಮರಣದಂಡನೆಯ ತೀರ್ಪನ್ನು ವಿಧಿಸುವ ಮೊದಲೇ ತನ್ನ ಮನಸ್ಸಿನಲ್ಲಿ ಅದರಿಂದ ವಿಮೋಚಿಸುವ ಯೋಜನೆಯನ್ನು ಹಾಕಿಕೊಂಡಿದ್ದನು. ಆ ಯೋಜನೆಯು ವಿಮೋಚನಾಕಾರ್ಯವನ್ನು ಅನಿವಾರ್ಯ ಗೊಳಿಸಿತು.

## ದೇವಾನುಗ್ರಹವು ಮುಂಚಿತವಾಗಿ ತೋರಿಬಂದಿರುವುದು

ನಮ್ಮ ಕರ್ತನಾದ ಯೇಸುವು ಲೋಕಕ್ಕೆ ಬಂದು ಮನುಷ್ಯನ ಪರವಾಗಿ ಈಡು ಬೆಲೆಯನ್ನು ಕೊಡುವ ಮೊದಲೇ ದೇವರು ತನ್ನ ಅನುಗ್ರಹವನ್ನು ಅಬ್ರಹಾಮನಿಗೆ ತೋರ್ಪಡಿಸಿದ್ದನೆಂದು ಇತರರು ನಮಗೆ ಒತ್ತಾಯಿಸಿ ಹೇಳಬಹುದು. ನಮ್ಮ ಉತ್ತರವೆಂದರೆ, ಅದು ಹಾಗೆಯೇ ಇರುವುದು ಅಂದರೆ ದೇವಾನುಗ್ರಹವನ್ನು ಅಲ್ಲಿ ತೋರ್ಪಡಿಸಲಾಗಿತ್ತು; ಆದರೆ ಅದನ್ನು ಹಾಗೆ ತೋರ್ಪಡಿಸಲಾದುದು ಮುಂದೆ ಒಂದು ನಿಗದಿತ ಕಾಲದಲ್ಲಿ ಪಾಪಿಗಳ ಪರವಾಗಿ ಈಡನ್ನು ಕೊಡುವ ಉದ್ದೇಶವಿದ್ದ ಕಾರಣದಿಂದ. ಹೀಗಿದ್ದರೂ ಅಲ್ಲಿ ಅನುಗ್ರಹವಾದುದು ಪಾಪಗಳನ್ನು ಅಳಿಸಿಬಿಡುವ ವಿಷಯವಾಗಿರಲಿಲ್ಲ. ಇಲ್ಲ! ಈಡನ್ನು ಕೊಡುವುದಕ್ಕೆ ಮುಂಚಿತವಾಗಿ ಇದನ್ನು ಮಾಡಲು ಸಾಧ್ಯವಿರಲಿಲ್ಲ; ಮಹಿಮೆ ಹೊಂದಿದ ವಿಮೋಚಕನ ಮೂಲಕವಾಗಿ ದೇವರು ಇದನ್ನು ನೆರವೇರಿಸುವನು. ಪೂರ್ವಕಾಲದಲ್ಲಿ ಯೋಗ್ಯರಾಗಿ ನಡೆದವರೆಲ್ಲರೂ ದೇವರಲ್ಲಿರುವ ತಮ್ಮ ನಂಬಿಕೆಯು ತಮ್ಮನ್ನು ಯೋಗ್ಯರೆಂದು (ಸಮರ್ಥನೆ ಮಾಡಿ) ನಿರ್ಣಯಿಸಿದ ಪ್ರಮಾಣದಲ್ಲಿ ದೇವಾನುಗ್ರಹವನ್ನು ಹೊಂದಿರುವ ಸಂಭವವಿತ್ತು. ಅಲ್ಲದೆ ತಾನು ವಿಮೋಚಕನ ಮೂಲಕವಾಗಿ ಈಡೇರಿಸಲಿರುವ ತನ್ನ ಉದ್ದೇಶಕ್ಕೆ ಕೇವಲ ಸಮ್ಮತವಾಗುವಂಥ ಅನುಗ್ರಹಗಳನ್ನೇ ದೇವರು ಅವರಿಗೆ ಅಂದು ದಯಪಾಲಿಸಲು ಸಾಧ್ಯವಿತ್ತು.

## ಮೋಶೆಯ ಧರ್ಮಶಾಸ್ತ್ರದಲ್ಲಿ ಸೂಚಿತವಾಗಿರುವ ಪಾಪಗಳು

ದೇವರು ಇಸ್ರಾಯೇಲ್ ಜನಾಂಗದವರಿಗೆ ಧರ್ಮಶಾಸ್ತ್ರದ ಮೂಲಕವಾದ ಒಡಂಬಡಿಕೆಯಲ್ಲಿ ಕೆಲವು ರೀತಿಯಲ್ಲಿ ಹಾಗು ಕೆಲವು ಪ್ರಮಾಣದಲ್ಲಿ ಕ್ಷಮೆಯನ್ನು ಏರ್ಪಡಿಸಿ ಆ ಒಡಂಬಡಿಕೆಯ ಮಧ್ಯಸ್ಥನಾದ ಮೋಶೆಯ ಮೂಲಕ ಮರುಸಂಧಾನವಾಗುವಂತೆ ಮಾಡಿದ್ದನು. ಈ ಏರ್ಪಾಡಿನಲ್ಲಿ ವರುಷ ವರುಷವೂ ಅರ್ಪಣೆಯಾಗುವ ದೋಷಪರಿಹಾರ ಯಜ್ಞವು ಹೊಸ ಒಡಂಬಡಿಕೆಯ ಹಾಗು ಅದರ ಮಧ್ಯಸ್ಥನಾದ ಕ್ರಿಸ್ತನ ಮೂಲಕವಾಗಿ ಮುಂದೆ ಬರಲಿರುವ ಆಶೀರ್ವಾದಗಳಿಗೆ ಒಂದು ಸಂಕೇತವೂ, ಒಂದು ಛಾಯೆಯೂ ಹಾಗು ಒಂದು ನಿದರ್ಶನವೂ ಆಗಿತ್ತು. ಒಂದು ಜನಾಂಗವಾಗಿ ಇಸ್ರಾಯೇಲ್ಯರು, ತಮ್ಮ ಪಿತೃಗಳು ಮಾಡಿದಂತೆ, ನಂಬಿಕೆಯ ಮೂಲಕವಾಗಿ ಒಂದು ನಿಗದಿತ ಪ್ರಮಾಣದಲ್ಲಿ ದೇವರ ಅನುಗ್ರಹಗಳನ್ನು ಅನುಭವಿಸುತ್ತಿದ್ದರು. ಆದರೂ ಆ ಮೂಲಕವಾಗಿ ಅವರು ತಮ್ಮ ಪಾಪಗಳನ್ನು ಅಳಿಸಿಕೊಳ್ಳುವಂತಾಗಲು ಸಾಧ್ಯವಾಗಲಿಲ್ಲ. ಬದಲಾಗಿ, ಅಪೋಸ್ತಲನು ಸೂಚಿಸಿ ಹೇಳಿರುವಂತೆ ಇಸ್ರಾಯೇಲ್ಯರ ಯಜ್ಞಗಳು ಹಾಗು ದೋಷಪರಿಹಾರದ ಅರ್ಪಣೆಗಳ ಮೂಲಕವಾಗಿ ಎಂದೂ ನಿಜವಾದ ರೀತಿಯಲ್ಲಿ ಪಾಪಗಳನ್ನು ತೆಗೆದುಹಾಕಲಾಗಲಿಲ್ಲ ಆದರೆ ಅವುಗಳು ಮುಂದೆ ಬರುವ ಉತ್ತಮವಾದ ಯಜ್ಞಾರ್ಪಣೆಗಳಿಗೆ ಕೇವಲ ಛಾಯೆಗಳಾಗಿದ್ದವು. ಆ ಉತ್ತಮವಾದ ಯಜ್ಞಾರ್ಪಣೆಗಳ ಮೂಲಕವಾಗಿ ಪಾಪಗಳು ನಿಜವಾದ ರೀತಿಯಲ್ಲಿ ರದ್ದು ಮಾಡಲ್ಪಟ್ಟು ಕಡೆಯದಾಗಿ ಅದನ್ನು ಅಳಿಸಿಹಾಕಲಾಗುವುದು. ಇಬ್ರಿಯ 10:1–4; ಅಪೋಸ್ತಲರ ಕೃತ್ಯಗಳು 3:19.

## ಯೇಸುವಿನಲ್ಲಿ ದೊರಕುವ ಕ್ಷಮಾಪಣೆಯ ಪ್ರಮಾಣಗಳು

ಪರಲೋಕದ ತಂದೆಯು ತಾನೇ ವಿಧಿಸಿದ ತನ್ನ ಆಜ್ಞೆಗಳಿಗೆ ತನ್ನನ್ನು ಒಳಪಡಿಸಿಕೊಂಡವನಾಗಿದ್ದು ಈಡು ಬೆಲೆಯನ್ನು ನೀಡದೆಯೇ ಪಾಪಗಳನ್ನು ಅಳಿಸಿಹಾಕಲು ಆತನಿಗೆ ಸಾಧ್ಯವಾಗದಿದ್ದಲ್ಲಿ, ಯೇಸುವು ಇದನ್ನು ಮಾಡಿರಬಹುದಾದರೂ ಹೇಗೆ? ಈ ವಿಷಯದಲ್ಲಿ ಅತನಿಗೆ ತಂದೆಗಿಂತಲೂ ಹೆಚ್ಚಿನ ಅಧಿಕಾರವಿತ್ತೋ? ನಮ್ಮ ಉತ್ತರ, ಇಲ್ಲ! ಈ ಪಾಠದಲ್ಲಿ ಪಾರ್ಶ್ವವಾಯುರೋಗದ ಮನುಷ್ಯನಿಗೆ ಆತನು ಹೇಳಿದ ಮಾತುಗಳು ಮನುಷ್ಯನ ಪಾಪಗಳನ್ನು ಅಳಿಸಿಹಾಕುವುದರ ವಿಷಯಕ್ಕೆ ಅನ್ವಯಿಸುವುದಾಗಿರಲಿಲ್ಲ; ಆದರೆ ಅದು ಅಬ್ರಹಾಮ ಹಾಗು ಇತರ ಹಿಂದಿನವರಿಗೆ ಈಗಾಗಲೇ ತಂದೆಯು ನೀಡಿದಂಥ ಪಾಪಕ್ಷಮೆಗೆ ಹೋಲುವಂತದ್ದಾಗಿತ್ತು. "ನಿನ್ನ ಪಾಪಗಳು ನಿನಗೆ ಕ್ಷಮಿಸಲ್ಪಟ್ಟಿವೆ" ಎಂದು ಈ ಮಾತುಗಳನ್ನು ಕರ್ತನು ಹೇಳಿದಾಗ ಆ ಮನುಷ್ಯನು ಆಗಲೂ ನಿಸ್ಸಹಾಯಕನಾಗಿ ಬಿದ್ದುಕೊಂಡಿದ್ದನು; ಆತನ ಪಾಪಗಳು ಕ್ಷಮಿಸಲ್ಪಟ್ಟಿದ್ದವಾದರೂ ಅವುಗಳು ಇನ್ನೂ ಅಳಿಸಿಹಾಕಲ್ಪಟ್ಟಿರಲಿಲ್ಲ; ಆಗಲೂ ಅತನು ಪಾಪದ ಘೋರ ಪರಿಣಾಮಗಳಿಗೆ ಒಂದು ಸಚಿತ್ರವಾದ ನಿದರ್ಶನವಾಗಿದ್ದನು. "ಎದ್ದು ನಿನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆ" ಎಂದು ನಮ್ಮ ಕರ್ತನು ಆನಂತರದಲ್ಲಿ ಹೇಳಿದ ಮಾತುಗಳೂ ಪುನರುದ್ಧಾರ ಹೊಂದುವ ಬಗೆಯದ್ದಾಗಿದ್ದರೂ ಅವುಗಳು ಪಾಪಗಳನ್ನು ಅಳಿಸಿಹಾಕುವಂಥವುಗಳಾಗಿರಲಿಲ್ಲ. ಆತನ ಪಾಪಗಳನ್ನು ಸಂಪೂರ್ಣವಾಗಿ ಅಳಿಸಿಹಾಕುವುದೆನ್ನುವುದರ ಅರ್ಥವು ಆತನನ್ನು ಬಿದ್ದುಹೋದುದರ ದೆಸೆಯಿಂದಾದ ಸಕಲ ವಿಧವಾದ ಆಪರಿಪೂರ್ಣತೆಗಳಿಂದ ಸಂಪೂರ್ಣವಾಗಿ ಮೇಲೆತ್ತಿ ಮಾನಸಿಕವಾಗಿ ನೈತಿಕವಾಗಿ ಮತ್ತು ಶಾರೀರಿಕವಾಗಿ ಸಂಪೂರ್ಣತೆಯುಳ್ಳ ಮನುಷ್ಯನ ಸ್ಥಿತಿಗೆ ಆತನನ್ನು ಕೊಂಡೊಯ್ಯುವುದಾಗಿದೆ; ಆದರೆ ಯೇಸುವು ಇದನ್ನು ಆತನಿಗೆ ಮಾಡಿರಲಿಲ್ಲ; ಕೇವಲ ಆತನಲ್ಲಿದ್ದ ಒಂದು ಪ್ರಮಾಣದ ವಿಶೇಷ ಸಂಕಷ್ಟದಿಂದ ಆತನನ್ನು ಗುಣಪಡಿಸಿದ್ದನು.

ಅದಲ್ಲದೆ ಈ ಮಾತುಗಳಲ್ಲಿ ನಮ್ಮ ಕರ್ತನು (ಆದಾಮನ) ಮೂಲ ಪಾಪದ ಹಾಗು ಅದಕ್ಕೆ ಉಂಟಾದ ಮರಣ ಶಿಕ್ಷೆಯ ವಿಷಯವಾಗಿ ಸೂಚಿಸಿರಲಿಲ್ಲ. ಆತನು ಪಾಪಗಳು ಎಂದು ಬಹು ವಚನದಲ್ಲಿ ಹೇಳುವಾಗ ಆ ಮನುಷ್ಯನ ಸ್ವಂತ ಪಾಪಗಳು ಹಾಗು ಇದರ ಜೊತೆಯಲ್ಲಿ ತಂದೆಯಾದ ಆದಾಮನ ಪಾಪದಲ್ಲಿನ ಮತ್ತು ತಂದೆಯಾದ ಆದಾಮನಿಗುಂಟಾದ ದಂಡನೆಯಲ್ಲಿನ ಆತನ ಪಾಲುಗಳಿಗೆ ಅನ್ವಯವಾಗಿತ್ತು. ಆ ಮನುಷ್ಯನು ಯೆಹೂದ್ಯ ನಾಗಿದ್ದು ಮೋಶೆಯ ಒಡಂಬಡಿಕೆಗೆ ಒಳಗಾಗಿದ್ದನು. ಎಲ್ಲಾ ಯೆಹೂದ್ಯರಿಗೆ ಸಾಮಾನ್ಯವಾಗಿದ್ದಂತೆ (ಆದಾಮನ) ಮೂಲ ಪಾಪದಲ್ಲಿನ ಆತನ ಪಾಲು ಪ್ರತಿ ವರುಷವೂ ಅರ್ಪಣೆಯಾಗುತ್ತಿದ್ದ ದೋಷಪರಿಹಾರಕ ಯಜ್ಞದ ಮೂಲಕವಾಗಿ (ಮುಚ್ಚಲ್ಪಟ್ಟು) ಸಂಧಾನವಾಗುತ್ತಿತ್ತು. ಮತ್ತು ಆತನು ಒಬ್ಬ ಯೆಹೂದ್ಯನಾಗಿ ಈ ಸಂಧಾನದ ಆಧಾರದ ಮೇಲೆ ದೇವರ ಅನ್ಯೋನ್ಯತೆಯಲ್ಲಿ ನಿಲ್ಲುವಂತಾಗುತ್ತಿತ್ತು. ತಮ್ಮ ಒಡಂಬಡಿಕೆಯಲ್ಲಿ ದೇವರು ಮಾಡಿ ಕೊಂಡ ಒಪ್ಪಂದದ ಪ್ರಕಾರ ಅವರು ದೇವರಿಗೆ ವಿಧೇಯ ರಾಗಿವಷ್ಟು ಕಾಲವೂ ವ್ಯಾಧಿ ಮುಂತಾದವುಗಳಿಂದ ಅವರು ಮುಕ್ತವಾಗಿರಬೇಕಿತ್ತು. ಆದುದರಿಂದ ಪ್ರತಿಯೊಬ್ಬ ಯೆಹೂದ್ಯನಿಗೆ ವ್ಯಾಧಿ ಉಂಟಾಗುವುದೆಂದರೆ ಅದು ತಾನು ವೈಯುಕ್ತಿಕವಾಗಿ ಮಾಡಿರುವ ನಿಯಮೋಲ್ಲಂಘನೆಯಿಂದಾಗಿ ಆತನಲ್ಲಿ ಅಡಕ ವಾಗಿರುವ ಪಾಪದ ಅರಿವಿನ ಫಲವೆನ್ನುವುದರ ಅರ್ಥಬರುತ್ತಿತ್ತು. ಯಾಕೆಂದರೆ ದೇವರು ಅವರೊಡನೆ ಈ ರೀತಿಯಾಗಿ ಒಡಂಬಡಿಕೆ ಮಾಡಿಕೊಂಡಿದ್ದನು. ಈ ರೀತಿಯಲ್ಲಿ ಆತನು ಬೇರೆ ಜನರೊಂದಿಗಾಗಲೀ ಜನಾಂಗದೊಂದಿಗಾಗಲೀ ನಡೆದು ಕೊಂಡಿರಲಿಲ್ಲ.

## ನಮ್ಮ ಕರ್ತನು ಆಗಲೇ ಯಜ್ಞಾರ್ಪಿತನಾಗಿರುವುದು

ಆದರೆ ಆದಾಮನ ಪಾಪ ಹಾಗೂ ಅದರ ದಂಡನೆಯ ವಿಷಯವಾಗಿ ಹೇಳುವುದಾದರೆ, ನಮ್ಮ ಕರ್ತನು ಪಾಪಕ್ಷಮೆ ಮತ್ತು ಸಮಾಧಾನದ ವಿಷಯವಾಗಿ ಮಾತನಾಡುವ ಮತ್ತು ಅವುಗಳನ್ನು ಅಂತಿಮವಾಗಿ ಅಳಿಸಿಹಾಕುವುದರ ವಿಷಯವಾಗಿ ಭರವಸೆ ನೀಡುವ ಹಕ್ಕನ್ನು ಆತನು ಪಡೆದುಕೊಂಡಿರಬಹುದು; ಯಾಕೆಂದರೆ ತಾನು ಮಾಡಬೇಕಿದ್ದ ಕೆಲಸವನ್ನು ಅಂದರೆ ಈಡು ಬಲಿಯ ಯಜ್ಞವನ್ನು ಇನ್ನೂ (ಪೂರ್ಣವಾಗಿ) ನೆರವೇರಿಸದೆ ಇದ್ದಾಗ್ಯೂ ಆ ಕಾರ್ಯವನ್ನು ಆತನು ಆಗಲೇ ಆರಂಭಿಸಿದ್ದನು. ದೀಕ್ಷಾಸ್ನಾನದಲ್ಲಿ ತನ್ನ ಜೀವವನ್ನು ಪ್ರತಿಷ್ಠೆಮಾಡಿಕೊಂಡು ಅದನ್ನು ತಂದೆಗೆ ಯಜ್ಞವನ್ನಾಗಿ ಆರ್ಪಿಸಿಕೊಳ್ಳುತ್ತಾ ಬಂದಿದ್ದನು. ಮತ್ತು ತಂದೆಯು ಅದನ್ನು ಒಂದು ಪ್ರಮಾಣದಲ್ಲಿ ಅಂಗೀಕರಿಸಿ ನಮ್ಮ ಕರ್ತನಿಗೆ ಪ್ರಥಮ ಫಲವಾಗಿರುವ ಪವಿತ್ರಾತ್ಮದಾನವನ್ನು ನೀಡುವುದರ ಮೂಲಕ ಆ ಒಪ್ಪಂದಕ್ಕೆ ತನ್ನ ಅಂಗೀಕಾರವನ್ನು ಸೂಚಿಸಿದ್ದನು. ಪ್ರಥಮ ಫಲವಾದ ಈ ಪವಿತ್ರಾತ್ಮದಾನವು ಆತನು ಪುನರುತ್ಥಾನದಲ್ಲಿ ಹೊಂದುವ ಮಹಿಮಾಶೀರ್ವಾದಗಳಿಗೆ ಒಂದು ಸೂಚನೆಯಾಗಿತ್ತು.

ತಾನು ಆಗಲೇ ತನ್ನನ್ನು ಯಜ್ಞವನ್ನಾಗಿ ಅರ್ಪಿಸಿಕೊಂಡು ಅದನ್ನು ಪೂರ್ಣವಾಗಿ ನೆರವೇರಿಸುವ ಉದ್ದೇಶವುಳ್ಳವ ನಾಗಿದ್ದುದರ ಫಲವಾಗಿ ಆತನು ತನ್ನನ್ನು ನಂಬಿದವರಿಗೆ ಹೀಗೆ ಅರ್ಹನಾಗಿ ಹೇಳುವ ಅಧಿಕಾರವನ್ನು ಹೊಂದಿದ್ದನು: "ಆತನ ಮಗನನ್ನು ನಂಬುವವನಿಗೆ ನಿತ್ಯಜೀವ ಉಂಟು; ಮಗನಿಗೆ ಒಳಗಾಗದವನು ಜೀವವನ್ನು ಕಾಣುವದೇ ಇಲ್ಲ;" "ನನ್ನ ಮಾಂಸವನ್ನು ತಿಂದು ನನ್ನ ರಕ್ತವನ್ನು ಕುಡಿಯುವವನು (ನನ್ನನ್ನು ನಂಬುವವನು) ನಿತ್ಯಜೀವವನ್ನು ಹೊಂದಿದ್ದಾನೆ; ಮತ್ತು ನಾನು ಅವನನ್ನು ಕಡೆಯ ದಿನದಲ್ಲಿ ಎಬ್ಬಿಸುವೆನು" (ಯೋಹಾನ 3:36; 6:54) ಅಂದರೆ ಯಾರು ನನ್ನನ್ನು ನಂಬುವವನಾಗಿ ನಿಜವಾಗಿ ನನ್ನ ನಂಬಿಗಸ್ತನಾದ ಹಿಂಬಾಲಕನಾಗುನೋ ಅವನು ಆಗಲೇ ನನ್ನಲ್ಲಿರುವ ನೂತನ ಜೀವದಲ್ಲಿ ತಾನು ಹುಟ್ಟಿದವನಾಗಿದ್ದೇನೆಂದು ತನ್ನನ್ನು ಎಣಿಸಿಕೊಳ್ಳಬಹುದು ಮತ್ತು ನಾನು ಅವನಿಗೆ ಸಹಾಯಕನಾಗಿ ಅವನನ್ನು ಕಡೆಯವರೆಗೂ ಪೂರ್ಣವಾಗಿ ಕಾಪಾಡುವೆನು. ಹೀಗೆ ಅವನು ಸಾವಿರ ವರುಷದ ಆಳ್ವಿಕೆಯ ಉದಯದಲ್ಲಿ ಮೊದಲನೆಯ ಪುನರುತ್ಥಾನದಲ್ಲಿ ಭಾಗಿಯಾಗಿ ನಿತ್ಯಜೀವವನ್ನು ಪಡೆದು ಪರಿಪೂರ್ಣವಾದ ಸ್ಥಿತಿಗೆ ತಲುಪುವನು.

ಸಭೆಯ ವಿಷಯದಲ್ಲಿ ಈ ಸುವಾರ್ತಾಯುಗದ ಪರ್ಯಂತರವಾಗಿ ನಂಬಿಕೆಯ ಮೂಲಕ ಕಾರ್ಯ ನಿರ್ವಹಿಸಲಾಗುವದು. "ನಾವು ನೋಡುವವರಾಗಿ ನಡೆಯದೆ ನಂಬುವವರಾಗಿ ನಡೆಯುವವರಾಗಿದ್ದೇವೆ." ನಮ್ಮ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂದೂ ಹಾಗೂ ಮೊದಲನೆಯ ಪುನರುತ್ಥಾನದಲ್ಲಿ ನಾವು ನಮ್ಮ ಒಡೆಯನ ಪ್ರಭಾವ ಮಾನ ನಿರ್ಲಯತ್ವಗಳಲ್ಲಿ ಪಾಲನ್ನು ಹೊಂದುವೆವೆಂದೂ ನಂಬಿಕೆಯ ಮೂಲಕವಾಗಿ ಗ್ರಹಿಸುವವರಾಗಿದ್ದೇವೆ. ನಂಬಿಕೆಯ ಮೂಲಕವಾಗಿ (ಪ್ರಭಾವದ) ನಿರೀಕ್ಷೆಯನ್ನು ಪಡೆದು ವಿಶ್ರಾಂತಿ ಹೊಂದಿದವರಾಗಿ ನಾವು ತೃಪ್ತರಾಗಿರುವೆವು. ಹೌದು, ನಿಜವಾಗಿಯೂ ನಾವು ಆತನ ಸ್ವರೂಪದಲ್ಲಿ ಎಚ್ಚೆತ್ತಾಗ ತೃಪ್ತಾರಾಗುವೆವು. ಕೀರ್ತನೆ 17:15

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 30 | ಕಪೆರ್ನೌಮ್ | ಮತ್ತಾಯನನ್ನು ಕರೆದದ್ದು; ಸುಂಕದವರೊಂದಿಗೆ ಔತಣ | 9:9–17 | 2:13–22 | 5:27–39 | –– |
| | ಯೂದಾಯ | ಯೂದಾಯದ ಸಭಾಮಂದಿರಗಳಲ್ಲಿ ಉಪದೇಶ | –– | –– | 4:44 | –– |

## ಮತ್ತಾಯ 9:9–17

ಯೇಸು ಅಲ್ಲಿಂದ ಹೋಗುತ್ತಿರುವಾಗ ಸುಂಕಕ್ಕೆ ಕೂತಿದ್ದ ಮತ್ತಾಯನೆಂಬ ಒಬ್ಬ ಮನುಷ್ಯನನ್ನು ನೋಡಿ––ನನ್ನನ್ನು ಹಿಂಬಾಲಿಸು ಎಂದು ಅವನನ್ನು ಕರೆಯಲು ಅವನು ಎದ್ದು ಆತನನ್ನು ಹಿಂಬಾಲಿಸಿದನು. ಅನಂತರ ಆತನು ಅವನ ಮನೆಯಲ್ಲಿ ಊಟಕ್ಕೆ ಕೂತಿರುವಾಗ ಬಹು ಮಂದಿ ಸುಂಕದವರೂ ಪಾಪಿಗಳೂ ಬಂದು ಯೇಸುವಿನ ಮತ್ತು ಆತನ ಶಿಷ್ಯರ ಪಂಕ್ತಿಯಲ್ಲೇ ಕೂತುಕೊಂಡರು. ಫರಿಸಾಯರು ಅದನ್ನು ನೋಡಿ ಆತನ ಶಿಷ್ಯರನ್ನು––ನಿಮ್ಮ ಗುರುವು ಸುಂಕದವರ ಮತ್ತು ಪಾಪಿಗಳ ಸಂಗಡ ಯಾಕೆ ಊಟಮಾಡುತ್ತಾನೆ ಎಂದು ಕೇಳಿದರು. ಆತನು ಅದನ್ನು ಕೇಳಿ––ಕ್ಷೇಮದಿಂದಿರುವವರಿಗೆ ವೈದ್ಯನು ಬೇಕಾಗಿಲ್ಲ, ಕ್ಷೇಮವಿಲ್ಲದವರಿಗೆ ಬೇಕು. ನೀವು ಹೋಗಿ––ನನಗೆ ಯಜ್ಞವು ಬೇಡ, ಕರುಣೆಯೇ ಬೇಕು ಎಂಬ ಮಾತಿನ ಅರ್ಥವನ್ನು ಕಲಿತುಕೊಳ್ಳಿರಿ. ನಾನು ನೀತಿವಂತರನ್ನು ಕರೆಯುವುದಕ್ಕೆ ಬಂದವನಲ್ಲ, ಪಾಪಿಗಳನ್ನು ಕರೆಯುವುದಕ್ಕೆ ಬಂದವನು ಅಂದನು. ಆ ಮೇಲೆ ಯೋಹಾನನ ಶಿಷ್ಯರು ಆತನ ಬಳಿಗೆ ಬಂದು––ಫರಿಸಾಯರೂ ನಾವೂ ಉಪವಾಸಮಾಡುತ್ತೇವಲ್ಲ; ನಿನ್ನ ಶಿಷ್ಯರು ಯಾಕೆ ಉಪವಾಸಮಾಡುವುದಿಲ್ಲ ಎಂದು ಕೇಳಲು ಯೇಸು ಅವರಿಗೆ–ಮದುವೆಯ ಜನರು ತಮ್ಮ ಸಂಗಡ ಮದಲಿಂಗನು ಇರುವ ತನಕ ದುಃಖ ಪಟ್ಟಾರೋ? ಆದರೆ ಮದಲಿಂಗನನ್ನು ಅವರ ಬಳಿಯಿಂದ ತೆಗೆದುಕೊಂಡು ಹೋಗುವ ಕಾಲ ಬರುತ್ತದೆ; ಆಗ ಉಪವಾಸಮಾಡುವರು. ಯಾರೂ ಹೊಸ ಬಟ್ಟೆಯ ತುಂಡನ್ನು ಹಳೆಯ ವಸ್ತ್ರಕ್ಕೆ ತ್ಯಾಪೆಹಚ್ಚುವದಿಲ್ಲ; [ಹಚ್ಚಿದರೆ] ಆ ತ್ಯಾಪೆಯು ವಸ್ತ್ರವನ್ನು ಹಿಂಜುವದರಿಂದ ಹರಕು ಹೆಚ್ಚಾಗುವದು. ಇದಲ್ಲದೆ ಹಳೆಯ ಬುದ್ದಲಿಗಳಲ್ಲಿ ಹೊಸ ದ್ರಾಕ್ಷಾರಸವನ್ನು ಹಾಕಿಡುವದಿಲ್ಲ; ಇಟ್ಟರೆ ಬುದ್ದಲಿಗಳು ಒಡೆದು ದ್ರಾಕ್ಷಾರಸವು ಚೆಲ್ಲಿ ಹೋಗುವದು, ಬುದ್ದಲಿಗಳು ಕೆಟ್ಟುಹೋಗುವವು; ಆದರೆ ಹೊಸ ದ್ರಾಕ್ಷಾರಸವನ್ನು ಹೊಸ ಬುದ್ದಲಿಗಳಲ್ಲಿ ಹಾಕಿಡುತ್ತಾರೆ, ಆಗ ಎರಡೂ ಉಳಿಯುತ್ತವೆ ಎಂದು ಹೇಳಿದನು.

## ಮಾರ್ಕ 2:13–22

ಆತನು ಹೊರಟು ತಿರಿಗಿ ಸಮುದ್ರದ ಬಳಿಗೆ ಹೋದನು. ಜನರ ಗುಂಪೆಲ್ಲಾ ಆತನ ಬಳಿಗೆ ಬಂದಾಗ ಆತನು ಅವರಿಗೆ ಉಪದೇಶಮಾಡಿದನು. ಆತನು [ಅಲ್ಲಿಂದ] ಹೋಗುತ್ತಿರುವಾಗ ಸುಂಕಕ್ಕೆ ಕೂತಿದ್ದ ಅಲ್ಫಾಯನ ಮಗನಾದ ಲೇವಿಯನ್ನು ನೋಡಿ––ನನ್ನನ್ನು ಹಿಂಬಾಲಿಸು ಎಂದು ಅವನನ್ನು ಕರೆಯಲು ಅವನು ಎದ್ದು ಆತನ ಹಿಂದೆ ಹೋದನು. ಅನಂತರ ಆತನು ಅವನ ಮನೆಯೊಳಗೆ ಊಟಕ್ಕೆ ಕೂತಿರುವಲ್ಲಿ, ಬಹು ಮಂದಿ ಸುಂಕದವರೂ ಪಾಪಿಗಳೂ ಯೇಸುವಿನ ಮತ್ತು ಆತನ ಶಿಷ್ಯರ ಪಂಕ್ತಿಯಲ್ಲೇ ಕೂತುಕೊಂಡರು. ಅಂಥವರು ಬಹುಮಂದಿ ಇದ್ದರು. ಫರಿಸಾಯರಾದ ಶಾಸ್ತ್ರಿಗಳು ಆತನ ಹಿಂದೆ ಹೋಗಿ ಆತನು ಪಾಪಿಗಳ ಮತ್ತು ಸುಂಕದವರ ಸಂಗಡ ಊಟಮಾಡುವದನ್ನು ಕಂಡು ಆತನ ಶಿಷ್ಯರಿಗೆ––ಈತನು ಸುಂಕದವರ ಮತ್ತು ಪಾಪಿಗಳ ಸಂಗಡ ಊಟಮಾಡುತ್ತಾನೆ ನೋಡಿರಿ ಎಂದು ಹೇಳಿದರು. ಯೇಸು ಅದನ್ನು ಕೇಳಿ––ಕ್ಷೇಮದಿಂದಿರುವವರಿಗೆ ವೈದ್ಯನು ಬೇಕಾಗಿಲ್ಲ; ಕ್ಷೇಮವಿಲ್ಲದವರಿಗೆ ಬೇಕು. ನಾನು ನೀತಿವಂತರನ್ನು ಕರೆಯುವುದಕ್ಕೆ ಬಂದವನಲ್ಲ, ಪಾಪಿಗಳನ್ನು ಕರೆಯುವದಕ್ಕೆ ಬಂದವನು ಅಂದನು. ಇದಲ್ಲದೆ ಯೋಹಾನನ ಶಿಷ್ಯರೂ ಫರಿಸಾಯರೂ ಉಪವಾಸವಾಗಿದ್ದರು. ಅವರು ಆತನ ಬಳಿಗೆ ಬಂದು–ಯೋಹಾನನ ಶಿಷ್ಯರೂ ಫರಿಸಾಯರ ಶಿಷ್ಯರೂ ಉಪವಾಸಮಾಡುತ್ತಾರಲ್ಲ? ನಿನ್ನ ಶಿಷ್ಯರು ಯಾಕೆ ಉಪವಾಸಮಾಡುವದಿಲ್ಲ? ಎಂದು ಕೇಳಲು ಯೇಸು ಅವರಿಗೆ–ಮದುವೆಯ ಜನರು ತಮ್ಮ ಸಂಗಡ ಮದಲಿಂಗನು ಇರುವಲ್ಲಿ ಉಪವಾಸಮಾಡುವುದುಂಟೇ? ಮದಲಿಂಗನು ತಮ್ಮ ಸಂಗಡ ಇರುವ ತನಕ ಅವರು ಉಪವಾಸಮಾಡಲಾಗದು. ಆದರೆ ಮದಲಿಂಗನನ್ನು ಅವರ ಬಳಿಯಿಂದ ತೆಗೆದುಕೊಂಡು ಹೋಗುವ ಕಾಲ ಬರುತ್ತದೆ; ಆ ಕಾಲದಲ್ಲೇ ಉಪವಾಸ ಮಾಡುವರು. ಯಾರೂ ಹೊಸ ಬಟ್ಟೆಯ ತುಂಡನ್ನು ಹಳೆಯ ವಸ್ತ್ರಕ್ಕೆ ತ್ಯಾಪೆಹಚ್ಚುವದಿಲ್ಲ; ಹಚ್ಚಿದರೆ ಆ ಹೊಸ ತ್ಯಾಪೆಯು ಹಳೆಯ ವಸ್ತ್ರವನ್ನು ಹಿಂಜುವದರಿಂದ ಹರಕು ಹೆಚ್ಚಾಗುವದು.

ಮತ್ತು ಹಳೆಯ ಬುದ್ದಲಿಗಳಲ್ಲಿ ಹೊಸ ದ್ರಾಕ್ಷಾರಸವನ್ನು ಯಾರೂ ಹಾಕಿಡುವುದಿಲ್ಲ; ಇಟ್ಟರೆ ಆ ದ್ರಾಕ್ಷಾರಸವು ಬುದ್ದಲಿಗಳನ್ನು ಒಡೆದು ದ್ರಾಕ್ಷಾರಸವು ಬುದ್ದಲಿಗಳು ಎರಡೂ ಕೆಟ್ಟುಹೋಗುವವು. ಆದರೆ ಹೊಸ ದ್ರಾಕ್ಷಾರಸವನ್ನು ಹೊಸ ಬುದ್ದಲಿಗಳಲ್ಲಿ [ಹಾಕಿಡತಕ್ಕದ್ದು] ಎಂದು ಹೇಳಿದನು.

## ಲೂಕ 5:27–39

ಇದಾದ ಮೇಲೆ ಆತನು ಹೊರಟು ಸುಂಕಕ್ಕೆ ಕೂತಿದ್ದ ಲೇವಿಯೆಂಬ ಒಬ್ಬ ಸುಂಕದವನನ್ನು ಕಂಡು––ನನ್ನನ್ನು ಹಿಂಬಾಲಿಸು ಎಂದು ಅವನನ್ನು ಕರೆಯಲು ಅವನು ಎಲ್ಲವನ್ನೂ ಬಿಟ್ಟು ಎದ್ದು ಆತನ ಹಿಂದೆ ಹೋದನು. ತರುವಾಯ ಲೇವಿಯು ತನ್ನ ಮನೆಯಲ್ಲಿ ಆತನಿಗೆ ಒಂದು ದೊಡ್ಡ ಔತಣವನ್ನು ಮಾಡಿಸಲು ಸುಂಕದವರೂ ಇತರರೂ ಗುಂಪಾಗಿ ಅವರ ಸಂಗಡ ಊಟಕ್ಕೆ ಕೂತುಕೊಂಡಿದ್ದರು. ಅದನ್ನು ಕಂಡು ಫರಿಸಾಯರೂ ಅವರಲ್ಲಿದ್ದ ಶಾಸ್ತ್ರಿಗಳೂ ಆತನ ಶಿಷ್ಯರ ಮೇಲೆ ಗುಣಗುಟ್ಟುತ್ತಾ–– ನೀವು ಸುಂಕದವರ ಮತ್ತು ಪಾಪಿಗಳ ಸಂಗಡ ಊಟಮಾಡುವದೇಕೆ ಎಂದು ಕೇಳಿದರು. ಅದಕ್ಕೆ ಯೇಸು– ಕ್ಷೇಮದಿಂದಿರುವವರಿಗೆ ವೈದ್ಯನು ಬೇಕಾಗಿಲ್ಲ, ಕ್ಷೇಮವಿಲ್ಲದವರಿಗೆ ಬೇಕು; ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ನೀತಿವಂತರನ್ನು ಕರೆಯುವದಕ್ಕೆ ನಾನು ಬಂದವನಲ್ಲ, ಪಾಪಿಗಳನ್ನು ಕರೆಯುವುದಕ್ಕೆ ಬಂದವನು ಎಂದು ಅವರಿಗೆ ಉತ್ತರಕೊಟ್ಟನು. ಅವರು ಆತನಿಗೆ– ಯೋಹಾನನ ಶಿಷ್ಯರು ಪದೇಪದೇ ಉಪವಾಸಗಳನ್ನೂ ವಿಜ್ಞಾಪನೆಗಳನ್ನೂ ಮಾಡುತ್ತಾ ಇದ್ದಾರೆ; ಅದರಂತೆ ಫರಿಸಾಯರ ಶಿಷ್ಯರೂ ಮಾಡುತ್ತಾರೆ; ಆದರೆ ನಿನ್ನ ಶಿಷ್ಯರು ಊಟಮಾಡುತ್ತಾರೆ, ಕುಡಿಯುತ್ತಾರೆ ಎಂದು ಹೇಳಲು ಯೇಸು ಅವರಿಗೆ– ಮದಲಿಂಗನು ಮದುವೆ ಜನರ ಸಂಗಡ ಇರುವಲ್ಲಿ ಅವರಿಗೆ ಉಪವಾಸವಮಾಡಿಸುವದಕ್ಕೆ ನಿಮ್ಮಿಂದಾದೀತೆ? ಆದರೆ ಮದಲಿಂಗನನ್ನು ಅವರ ಬಳಿಯಿಂದ ತೆಗೆದುಕೊಂಡುಹೋಗುವ ಕಾಲ ಬರುತ್ತದೆ. ಆ ಕಾಲದಲ್ಲೇ ಉಪವಾಸಮಾಡುವರು ಎಂದು ಉತ್ತರಕೊಟ್ಟನು. ಅವರಿಗೆ ಒಂದು ಸಾಮ್ಯವನ್ನು ಸಹ ಹೇಳಿದನು, ಅದೇನೆಂದರೆ–ಯಾರೂ ಹೊಸ ವಸ್ತ್ರದಿಂದ ಒಂದು ತುಂಡನ್ನು ಹರಕೊಂಡು ಹಳೇ ವಸ್ತ್ರಕ್ಕೆ ತ್ಯಾಪೆ ಹಚ್ಚುವುದಿಲ್ಲ; ಹಚ್ಚಿದರೆ ಆ ಹೊಸದನ್ನು ಹರಿದು ಕೆಡಿಸಿದ ಹಾಗಾಗುವದಲ್ಲದೆ ಹೊಸದರಿಂದ ಹರಿದು ಹಚ್ಚಿದ ತ್ಯಾಪೆಯು ಹಳೇದಕ್ಕೆ ಒಪ್ಪುವುದೂ ಇಲ್ಲ. ಮತ್ತು ಹಳೇ ಬುದ್ದಲಿಗಳಲ್ಲಿ ಹೊಸ ದ್ರಾಕ್ಷಾರಸವನ್ನು ಯಾರೂ ಹಾಕಿಡುವುದಿಲ್ಲ; ಇಟ್ಟರೆ ಆ ಹೊಸ ದ್ರಾಕ್ಷಾರಸವು ಬುದ್ದಲಿಗಳನ್ನು ಒಡೆದು ತಾನೂ ಚೆಲ್ಲಿಹೋಗುವದಲ್ಲದೆ ಬುದ್ದಲಿಗಳೂ ಕೆಟ್ಟುಹೋಗುವವು. ಆದರೆ ಹೊಸ ದ್ರಾಕ್ಷಾರಸವನ್ನು ಹೊಸ ಬುದ್ದಲಿಗಳಲ್ಲಿ ಹಾಕಿಡತಕ್ಕದ್ದು. ಇದಲ್ಲದೆ ಹಳೇ ದ್ರಾಕ್ಷಾರಸವನ್ನು ಕುಡಿದವನು ಹೊಸದು ಬೇಕು ಅನ್ನುವದಿಲ್ಲ; ಹಳೆಯದೇ ಉತ್ತಮ ಅನ್ನುವನು. [4:44] ಬಳಿಕ ಆತನು ಯೂದಾಯ ದೇಶದ ಸಭಾಮಂದಿರಗಳಲ್ಲಿ ಸುವಾರ್ತೆಯನ್ನು ಸಾರುತ್ತಾ ಇದ್ದನು.

# ಯೇಸು ಅವನಿಗೆ ನನ್ನನ್ನು ಹಿಂಬಾಲಿಸು ಎಂದು ಹೇಳಿದನು

**ರಿಪ್ರಿಂಟ್ಸ್, ಪುಟ 2590**

## ಮಾರ್ಕ 2:13–22

ನಮ್ಮ ಕರ್ತನು ಉಪದೇಶಿಸುತ್ತಿದ್ದ ಹಾಗೂ ರೋಗ ಗುಣಪಡಿಸುತ್ತಿದ್ದ ಸ್ಥಳವಾದ ಕಪೆರ್ನೌಮ್ ಎಂಬುದು ಗಲಿಲಾಯ ಸಮುದ್ರದ ಅಥವಾ ನಾವು ಈ ದಿನದಲ್ಲಿ ಹೇಳುವ ಹಾಗೆ ಗಲಿಲಾಯ ಕೆರೆಯ ಬಳಿಯ ಸ್ಥಳದಲ್ಲಿತ್ತು. ಅದು ವ್ಯಾಪಾರ ವಹಿವಾಟುಗಳಿಗೆ ವಿಶೇಷವಾಗಿ ಮೀನುಗಳ ವ್ಯಾಪಾರಗಳಿಗೆ ಪ್ರಾಮುಖ್ಯತೆ ಹೊಂದಿದ್ದು ಅದರ ಸಮೀಪದ ಕೆರೆಯ ದಡವು ಜನಸಂದಣಿಯುಳ್ಳದ್ದಾಗಿತ್ತು. ಆ ಸಮುದ್ರದ ದಡದಲ್ಲಿ ನಮ್ಮ ಕರ್ತನು ಓಡಾಡುತ್ತಾ ಅಲ್ಲಲ್ಲಿ ನಿಂತು ಜನರಿಗೆ ಉಪದೇಶಿಸುತ್ತಿರಲಾಗಿ ಆತನಿಂದ ಕೇಳಲು ಜನರು ಗುಂಪಗುಂಪಾಗಿ ಕೂಡಿಬರುತ್ತಿದ್ದರೆಂದು ಗ್ರೀಕ್ ಭಾಷೆಯಲ್ಲಿ ಬಳಸಿರುವ ಕಾಲವನ್ನು ಸೂಚಿಸುವ ಕ್ರಿಯಾಪದದ ಮೂಲಕ ಸೂಚಿಸಿದಂತೆ ಕಾಣುತ್ತದೆ. ಹೀಗೆ ಓಡಾಡುವಾಗ ಆತನು ಮತ್ತಾಯನ ಬಳಿಯಲ್ಲಿ ಹಾದು ಹೋಗಿದ್ದನು. ಹಿಂದೆ ಲೇವಿ ಎಂದು ಪರಿಚಿತನಾಗಿದ್ದ ಈ ಮತ್ತಾಯನು ರೋಮ್ ಸರಕಾರದವರಿಂದ ನೇಮಿತವಾದ ಸುಂಕವೆತ್ತುವ ಕಾರ್ಯದಲ್ಲಿ ಒಬ್ಬ ಸುಂಕ ವಸೂಲಿ ಮಾಡುವವನಾಗಿ ತನ್ನ ಕಾರ್ಯದಲ್ಲಿ ತೊಡಗಿದ್ದಾಗ ನಮ್ಮ ಕರ್ತನು ಅವನನ್ನು ಸಂಭೋದಿಸಿ “ನನ್ನನ್ನು ಹಿಂಬಾಲಿಸು” ಎಂದು ಹೇಳಿದ್ದನು ಮತ್ತು ಶಿಷ್ಯನಾಗುವುದಕ್ಕೆ ಮಾಡಿದ ಆ ಕರೆಗೆ ಆತನು ವಿಧೇಯನಾದನು.

ಲೇವಿಯು (ಮತ್ತಾಯನು) ಹಿಂದೆಂದೂ ನಮ್ಮ ಕರ್ತನ ವಿಷಯವಾಗಿ ಕೇಳಿರಲಿಲ್ಲವೆಂದೂ ಅವನ ಬಳಿಯಲ್ಲಿ ಹಾದು ಹೋಗುವಾಗ ಕರ್ತನು ಒಂದು ವಿಧವಾದ ಮಾತಿನ ಮೋಡಿಯನ್ನು ಅವನಿಗೆ ಹಾಕಿದಾಗ ಅವನು ಕೂಡಲೇ ತನಗೆ ಅರಿವಿಲ್ಲದೆಯೇ ತನ್ನ ವಹಿವಾಟನ್ನು ತ್ಯಜಿಸಿದ್ದನೆಂದು ಇಲ್ಲಿನ ಈ ವಿವರಣೆಯ ಸಂಕ್ಷಿಪ್ತತೆಯ ಮೂಲಕವಾಗಿ ಹಲವರು ಒಂದು ತಪ್ಪಾದ ಆಲೋಚನೆಯನ್ನು ಮಾಡುವವರಾಗಿದ್ದಾರೆ. ಬದಲಾಗಿ ನೆನಪುಮಾಡಿಕೊಳ್ಳಬೇಕಿರುವುದೆಂದರೆ, ಕರ್ತನು ಮತ್ತು ಆತನ ಶಿಷ್ಯರು ಅಲ್ಲಿನ ಸುತ್ತುಮುತ್ತಲ ಪ್ರದೇಶದಲ್ಲಿ ವರುಷಗಳಿಂದಲೂ ಬಹು ಪರಿಚಿತರಾಗಿದ್ದು ಮತ್ತಾಯನು ನಮ್ಮ ಕರ್ತನನ್ನು ತಿಳಿದಿದ್ದು ಮಾತ್ರವಲ್ಲದೆ ಆತನು ಮೇಸ್ಸೀಯನೆಂದು ಆತನಲ್ಲಿ ನಂಬಿಕೆಯನ್ನು ಸಹ ಇಟ್ಟಿರುವ ಸಂಭವವಿತ್ತು. ಹೀಗಿರಲಾಗಿ ಅವರೆಗೆ ಯೇಸುವು

ಅವನನ್ನು ತನ್ನ ಶಿಷ್ಯನಾಗಿ ತನ್ನೊಡನೆ ಬರಬೇಕೆಂದು ಕರೆದಿರಲಿಲ್ಲ; ಆದುದರಿಂದ ಮತ್ತಾಯನಿಗೆ ಹೀಗೆ ಪ್ರಯತ್ನ ಮಾಡಲು ಸಾಧ್ಯವಾಗಿರಲಿಲ್ಲ. ಅಲ್ಲಿ ಕರ್ತನ ಉಪದೇಶವನ್ನು ಮತ್ತೆ ಮತ್ತೆ ಕೇಳುತ್ತಿದ್ದವರು ಬಹು ಮಂದಿಯಿದ್ದು ಅವರು ಆತನ ಮಿತ್ರರೆಂದು ಎಣಿಸಲ್ಪಟ್ಟಿದ್ದರೆಂಬುದು ಸ್ಪಷ್ಟವಾಗಿತ್ತು; ಆದರೆ ಅವರೆಲ್ಲರೂ ಯಾವ ವಿಧದಲ್ಲಿಯೂ ಆ ಹನ್ನೆರಡು ಮಂದಿಯಂತೆ ವಿಶೇಷ ಹಿಂಬಾಲಕರಾಗಿ ಸುವಾರ್ತಾಸೇವೆಯಲ್ಲಿ ಜೊತೆಯಲ್ಲಿದ್ದು ಸಹಕಾರಿಗಳಾಗಬೇಕೆಂದು ಆಹ್ವಾನಿಸಲ್ಪಟ್ಟಿರಲಿಲ್ಲ.

ಮತ್ತಾಯನು ಆ ಒಡೆಯನನ್ನು ಕೂಡಲೇ ಹಿಂಬಾಲಿಸುವುದಕ್ಕಾಗಿ ರೋಮಾಯರ ಸರಕಾರದೊಡನೆ ತನ್ನ ಲೆಕ್ಕವನ್ನು ಇತ್ಯರ್ಥಮಾಡದೇ ಹಣವಿದ್ದ ತನ್ನ ಮೇಜನ್ನು ಹಾಗೇ ಬಿಟ್ಟು ಬಂದನೆಂದು ನಾವು ಕಲ್ಪನೆ ಮಾಡಿಕೊಳ್ಳಬೇಕಿಲ್ಲ. ತನ್ನ ವ್ಯವಹಾರಗಳನ್ನೆಲ್ಲಾ ಸರಿಪಡಿಸಿಕೊಂಡು ಅಪೋಸ್ತಲನಾಗಲು ಕರ್ತನು ನೀಡಿದ ಕರೆಗೆ ಸ್ಪಂದಿಸಲು ಸಾಧ್ಯವಾಗಿಸಿಕೋಳ್ಳುವುದಕ್ಕೆ ವಾಸ್ತವವಾಗಿ ಆತನಿಗೆ ಹಲವಾರು ದಿನಗಳು, ಅವಶ್ಯವಿದ್ದಲ್ಲಿ ವಾರಗಳು, ತೆಗೆದುಕೊಂಡಿರಬಹುದೆಂದು ನಾವು ಭಾವಿಸಬಹುದು. ಸುವಾರ್ತೆಯ ವಿವರಣೆಯಲ್ಲಿ ಅನೇಕ ವರುಷಗಳ ಚರಿತ್ರೆ, ಅನೇಕ ವಾಕ್ಯಸಂದೇಶಗಳು, ಅನೇಕ ಸಂಭಾಷಣೆಗಳು, ಹಾಗೂ ಅನೇಕ ಘಟನೆಗಳನ್ನು ಅತಿ ಸಂಕ್ಷಿಪ್ತ ಸ್ಥಳಾವಕಾಶದಲ್ಲಿ ಒತ್ತಾಗಿ ತುಂಬಲಾಗಿರುವುದು ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.

ಸೀಮೋನನ ಹೆಸರನ್ನು ಪೇತ್ರನೆಂದು ಕರ್ತನು ಬದಲಿಸಿದ ಹಾಗೆಯೇ ಲೇವಿಯ ಹೆಸರನ್ನೂ ಮತ್ತಾಯ ಅಂದರೆ "ದೇವರ ಕೊಡುಗೆ" ಎಂದು ಬದಲಿಸಿರುವ ಸಾಧ್ಯತೆಗಳಿರುವುದಾಗಿ ತೋರುತ್ತದೆ. ಅವನು ಒಬ್ಬ ಸುಂಕದವನಾಗಿದ್ದು ತೆರಿಗೆಯ ದರವನ್ನು ನಿರ್ಧರಿಸಿ ಸಾರ್ವಜನಿಕ ವರಮಾನವನ್ನು ನಿಗಧಿಮಾಡುವವನಾಗಿದ್ದನು. ರೋಮಾಯರ ತೆರಿಗೆ ನಿಯಮಗಳಿಗೆ ಇಷ್ಟವಿಲ್ಲದೆಯೇ ತಮ್ಮನ್ನು ಒಳಪಡಿಸಿಕೊಂಡ ಯೆಹೂದ್ಯರಿಗೆ "ಸುಂಕದವನು" ಎಂಬ ಹೆಸರು ಹಾಗು ಅದರ ಕಸುಬು ಈ ಎರಡೂ ಅತಿ ಹೇಯವಾಗಿದ್ದವು. ತಮ್ಮ ಸ್ವಜನರ ವಿಷಯವಾಗಿ ನಿಷ್ಠೆಯಿಲ್ಲದ ಸುಂಕದರು ದೇಶದ್ರೋಹಿಗಳೆಂದು ಎಣಿಸಲ್ಪಟ್ಟಿದ್ದರು. ಅನ್ಯದೇಶದ ಆಡಳಿತವನ್ನು ಅಂಗೀಕರಿಸಿಕೊಂಡು ತಮ್ಮ ದೇಶದ ಹಾಗೂ ತಮ್ಮ ಜನರ ವಿಷಯವಾಗಿ ತಮಗಿರುವ ತಿಳುವಳಿಕೆಯಿಂದ ಕಂದಾಯ ವಸೂಲಿಗಾಗಿ ಅವರಿಗೆ ಸಹಕರಿಸುವುದು ಅನೀತಿಯೆಂದು ಪರಿಗಣಿಸಲಾಗಿತ್ತು. ಸುಲಭವಾಗಿ ಗ್ರಹಿಸಲಿರುವ ಹಾಗೆ, ಈ ಕಾರ್ಯಸ್ಥಾನವು ಅಪ್ರಮಾಣಿಕತೆ ಸುಲಿಗೆ ಲಂಚಗುಳಿತನ ಮುಂತಾದವುಗಳಿಗೆ ಹಲವು ಅವಕಾಶಗಳನ್ನು ಒದಗಿಸುತ್ತಿತ್ತು. ಆದರೆ ಲೇವಿಯು ಒಬ್ಬ ಅಪ್ರಮಾಣಿಕನಾದ ಸುಂಕದವನಾಗಿದ್ದನೆಂದು ನಾವು ಒಂದು ಕ್ಷಣವೂ ಭಾವಿಸಲು ಸಾಧ್ಯವಿಲ್ಲ, ಏಕೆಂದರೆ ಹಾಗಾಗಿದ್ದಲ್ಲಿ ಆತನು ಅಪೋಸ್ತಲನಾಗಲು ಕರೆಯಲ್ಪಡುತ್ತಿರಲಿಲ್ಲ, ಆ ಕರೆಗೆ ಅವನು ಸ್ಪಂದಿಸುತ್ತಿಲೂ ಇರಲಿಲ್ಲ; ಕಾರಣ "ನನ್ನನ್ನು ಕಳುಹಿಸಿಕೊಟ್ಟ ತಂದೆಯು ಎಳೆದ ಹೊರತು ಯಾವನೂ ನನ್ನ ಬಳಿಗೆ ಬರಲಾರನು" (ಯೋಹಾನ 6:44) ಎಂದು ಬರೆಯಲ್ಪಟ್ಟಿರುವುದನ್ನು ನಾವು ಮರೆಯಬಾರದು.

## ಪ್ರತಿಷ್ಠಿತವಾದ ಆ ಮನೆ ಗೌರವ ಪಡೆದದ್ದು

ಮತ್ತಾಯನು ಒಬ್ಬ ಪ್ರಭಾವೀ ಮನುಷ್ಯನಾಗಿದ್ದನು ಮತ್ತು ಆತನು ಕರ್ತನ ಕರೆಯನ್ನು ಅಂಗೀಕರಿಸಿದ ಕೂಡಲೇ ತನ್ನನ್ನೂ ಹಾಗೂ ತನ್ನ ಮನೆಯವರೆಲ್ಲರನ್ನೂ ಪ್ರತಿಷ್ಠೆ ಮಾಡಿಕೊಂಡು ತನಗಿರುವ ಪ್ರಭಾವವನ್ನು ಕರ್ತನ ಬಳಿಗೆ ಇತರರನ್ನು ಎಳೆಯಲು ಉಪಯೋಗಿಸಿಕೊಳ್ಳಲು ಮುಂದಾದನು. ತನ್ನಲ್ಲಿರುವ ಶ್ರದ್ಧಾ ಭಕ್ತಿಯನ್ನು ಪ್ರಕಟಿಸಲು ಅನುಕೂಲಕರ ಸನ್ನಿವೇಶ ಮತ್ತು ಅನುಕೂಲಕರ ವಿಧಾನವನ್ನು ಬಳಸಿಕೊಂಡು ಆ ಮೂಲಕವಾಗಿ ಸಾಧ್ಯವಾದಲ್ಲಿ ಕೆಲವರನ್ನು ಗಳಿಸಿಕೊಳ್ಳುವುದಕ್ಕಾಗುವಂತೆ ಮಾಡುವವನಿದ್ದನು. ಈ ಉದ್ದೇಶಕ್ಕಾಗಿ ಕರ್ತನಿಗೂ ಆತನ ಶಿಷ್ಯರಿಗೂ ತನ್ನ ಮನೆಯಲ್ಲಿ ಒಂದು ಔತಣವನ್ನು ಏರ್ಪಡಿಸಿ ಅದಕ್ಕೆ ತನ್ನ ಅನೇಕ ಸ್ನೇಹಿತರನ್ನು ಹಾಗು ವಾಣಿಜ್ಯವಹಿವಾಟಿನ ಜೊತೆಗಾರರನ್ನು ಸಹ ಕರೆದಿದ್ದನು. ನಮ್ಮ ಪಾಠದಲ್ಲಿ ಅವರನ್ನು "ಅನೇಕ ಸುಂಕದವರು ಮತ್ತು ಪಾಪಿಗಳು" ಎಂದು ಕರೆಯಲಾಗಿದೆ.

ಫರಿಸಾಯರು ಮತ್ತು ಶಾಸ್ತ್ರಿಗಳಿಂದ ಸುಂಕದವರು ಏಕೆ ಬಹಿಷ್ಕರಿಸಲ್ಪಟ್ಟಿದ್ದರೆಂದು ನಾವು ನೋಡಿದ್ದೇವೆ; ಅದು ಅವರು ಕೆಟ್ಟವರೆಂಬ ಕಾರಣಕ್ಕಾಗಿರಲಿಲ್ಲ ಆದರೆ ಅವರ ವೃತ್ತಿಯನ್ನು ಕೀಳಾಗಿ ಕಾಣುತ್ತಿದ್ದ ಕಾರಣಕ್ಕಾಗಿತ್ತು. ಹೀಗೆ ಸಾಮಾಜಿಕವಾಗಿ ಮತಾಂಧರಿಂದ ಬೇರ್ಪಟ್ಟವರಾದ ಸುಂಕದವರು "ಪಾಪಿಗಳು" ಎಂದು ವಿಭಿನ್ನವಾಗಿ ಕರೆಯಲ್ಪಡುವ ಅಧರ್ಮಿಗಳೊಂದಿಗೆ ಬಹು ತೇಕವಾಗಿ ಸಾಮಾಜಿಕ ಸಂಪರ್ಕ ಹೊಂದಿರುವ ಒತ್ತಾಯ ಕ್ಕೊಳಗಾಗಿದ್ದರು. ಪಾಪಿಗಳು ಎಂಬ ಪದವನ್ನು ನಾವು ದುಷ್ಟವ್ಯಕ್ತಿಗಳು ಅಥವಾ ಕೆಟ್ಟದ್ದನ್ನು ಮಾಡುವವರೆಂದು ತಿಳಿದುಕೊಳ್ಳುವ ಅಗತ್ಯವಿಲ್ಲ. ಆದರೆ ಅವರು ಫರಿಸಾಯರು ಹೇಳಿಕೊಳ್ಳುವಂಥ ಪರಿಶುದ್ಧತೆಯನ್ನು ಪಡೆಯಲು ಯತ್ನಿಸದವರು ಇಲ್ಲವೆ ಹಾಗೆ ತೋರ್ಪಡಿಸಿಕೊಳ್ಳದವರು, ದೈವನಿಯಮಗಳನ್ನು ಪೂರ್ಣವಾಗಿ ಕೈಗೊಳ್ಳುವವರೆಂದು ಹೇಳಿಕೊಳ್ಳದವರು, ಪಾತ್ರೆಬಟ್ಟಲುಗಳನ್ನು ಹೊರಗೆ ಪೂರ್ಣವಾಗಿ ಶುಚಿಮಾಡುವವರೆಂದು ತೋರಿಸಿಕೊಳ್ಳದವರೂ ಆಗಿದ್ದರು. ಆದರೂ ಅವರು ಹಲವು ಸಂದರ್ಭಗಳಲ್ಲಿ ತಮ್ಮನ್ನು ಪೂರ್ಣ ಶುದ್ಧರೆಂದು ತೋರ್ಪಡಿಸಿಕೊಳ್ಳುವ ಫರಿಸಾಯರಿಗಿಂತಲೂ ಆಂತರ್ಯದಲ್ಲಿ ಬಹುಶಃ ಹೆಚ್ಚು ಶುದ್ಧತೆಯುಳ್ಳವರಾಗಿದ್ದರು. ಇದನ್ನು ನಮ್ಮ ಕರ್ತನು ಅನೇಕ ಸಂದರ್ಭಗಳಲ್ಲಿ ತಿಳಿಸಿದ್ದಾನೆ. ನಮ್ಮ ಕರ್ತನು ಸಂಕದವರ ಮತ್ತು ಪಾಪಿಗಳ ಗೆಳೆಯನೆಂಬುದನ್ನು ಓದುವಾಗ ಆತನು ತನ್ನ ಕಾಲದಲ್ಲಿದ್ದ ಪುಂಡರ ಹಾಗು ನೈತಿಕವಾಗಿ ಕುಷ್ಠ ಹತ್ತಿದವರ ಸಂಗಡಿಗನಾಗಿದ್ದನೆಂದು ಅರ್ಥ ಮಾಡಿಕೊಳ್ಳಬೇಕಿಲ್ಲ. ನಾವು ನಿಜವಾಗಿಯೂ ತಿಳಿಯಬೇಕಿರುವುದೆಂದರೆ, ಆ ಕಾಲದಲ್ಲಿ ಬಳಕೆಯಲ್ಲಿದ್ದಂತೆ ಒಂದು ವರ್ಗದ ಯೆಹೂದ್ಯರನ್ನು ಪರಿಶುದ್ಧ ಜನರೆಂದು (ಫರಿಸಾಯರುಗಳು) ಹಾಗು ಇನ್ನೊಂದು ವರ್ಗದ ಜನರನ್ನು ಪೂರ್ಣವಾಗಿ ಪರಿಶುದ್ಧರೆಂದು ತೋರ್ಪಡಿಸಿಕೊಳ್ಳದವರೆಂದು (ಪಾಪಿಗಳು) ಹೆಸರಿಸುತ್ತಿದ್ದರು.

ತನ್ನ ಸ್ನೇಹಿತರನ್ನು ಹಾಗೂ (ವೃತ್ತಿಯ) ಜೊತೆಗಾರರನ್ನು ಒಡೆಯನ ಮತ್ತು ಆತನ ಉಪದೇಶಗಳ ಸಂಪರ್ಕಕ್ಕೆ ತರುವ

ಮತ್ತಾಯನ ಪ್ರಯತ್ನವು ನಿಜವಾಗಿಯೂ ಪ್ರಸಂಶನೀಯವೂ ಹಾಗೂ ಅದು ಕರ್ತನ ಹಿಂಡಿಗೆ ಸೇರಿರುವ ಪ್ರತಿಯೊಬ್ಬನಿಗೂ ತಾನು ಏನು ಮಾಡಬೇಕೆಂಬುದಕ್ಕೆ ಒಂದು ಒಳ್ಳೆಯ ನಿದರ್ಶನವೂ ಆಗಿರುವುದು. ತನ್ನ ಪ್ರಭಾವು ಎಲ್ಲಿ ವಿಶೇಷವಾಗಿರುವುದೋ ಅಲ್ಲಿ ಅದನ್ನು ವಿನಿಯೋಗಿಸಲು ಪ್ರತಿಯೊಬ್ಬನೂ ಯತ್ನಿಸಬೇಕು. ತನಗೆ ತಿಳಿದಿರುವವರಲ್ಲಿ ಹಾಗೂ ತನ್ನನ್ನು ತಿಳಿದಿರುವವರಲ್ಲಿ ಅಲ್ಲದೆ ತನ್ನ ಹಿಂದಿನ ಪ್ರಾಮಾಣಿಕತೆ ಮತ್ತು ಒಳ್ಳೆಯ ನಡತೆಗಳಿಂದ ಒಳ್ಳೆಯ ಪರಿಣಾಮ ಹೊಂದಿದ್ದ ಇತರರಲ್ಲಿ ಅಥವಾ ತನ್ನ ಜೀವನದಲ್ಲಾದ ಆಮೂಲಾಗ್ರವಾದ ಬದಲಾವಣೆಗಳು ಬಹುವಾಗಿ ವ್ಯಕ್ತವಾದುದನ್ನು ಕಂಡವರಲ್ಲಿ ತಾನು ಪ್ರಭಾವ ಬೀರಲು ಯತ್ನಿಸಬೇಕು. ನಮಗಿರುವ ಮತ್ತೊಂದು ಪಾಠವೆಂದರೆ ಅತಿಥಿಸತ್ಕಾರವನ್ನು ಸತ್ಯ ಪ್ರಚಾರಮಾಡುವ ಸಾಧನವನ್ನಾಗಿ ಉಪಯೋಗಿಸಿಕೊಳ್ಳುವುದರ ಔಚಿತ್ಯ. ಕರ್ತನಿಗೆ ತಮ್ಮನ್ನು ಪ್ರತಿಷ್ಠೆಮಾಡಿಕೊಂಡವರ ಮನೆಯೂ ಪ್ರತಿಷ್ಠಿತವಾದ ಮನೆಯಾಗಬೇಕು. ಅಲ್ಲಿ ಒಡೆಯನ ಸೇವೆಗೆ ಪ್ರಥಮವಾಗಿ ಗಮನಕೊಡಬೇಕು. ಅದರ ಪ್ರಭಾವವು ಕರ್ತನಿಂದ ಕೇಳಿಕಲಿಯುವುದಕ್ಕಾಗಿ ಆತನಿಗೆ ಸ್ನೇಹಿತರನ್ನು ಕರೆ ತರುವಂತಾಗಬೇಕು. ಆನೇಕ ಸಾರಿ ಮನೆಯನ್ನು ಪ್ರತಿಷ್ಠಿಸುವುದು ನಿರ್ಲಕ್ಷ್ಯವಾಗಿ ಅಲ್ಲಿ ವ್ಯತಿರಿಕ್ತವಾದ ಪ್ರಭಾವಗಳು ಬೆಳೆಯುವುದಕ್ಕೆ ಬಿಟ್ಟು ಅದರ ಫಲವಾಗಿ ಅಲ್ಲಿ ಕರ್ತನನ್ನಾಗಲೀ ಅಥವಾ ಕರ್ತನ ಜನರನ್ನಾಗಲೀ ಸತ್ಕರಿಸಲಾಗದೆ ಆ ಮನೆಯವರಲ್ಲಿ ಆತನ ಧ್ಯೇಯೋದ್ದೇಶವು ಈಡೇರಲು ಸಾಧ್ಯವಿಲ್ಲದಂತಾಗುತ್ತದೆ. ಅಂಥ ಮನೆಯಾಗಲೀ ನಿವಾಸವಾಗಲೀ ಒಂದು ಶ್ರೇಷ್ಠವಾದ ಆಶೀರ್ವಾದವನ್ನು ಕಳಕೊಳ್ಳುತ್ತದೆ ಹಾಗೂ ಅಂಥ ಮನೆಯ ಯಜಮಾನನ ವಿಷಯವಾಗಿ ಆತನು (ಲೋಕವನ್ನು) ಜಯಿಸುವವನಾಗಿರುವನೋ ಇಲ್ಲವೋ ಮತ್ತು ಹೀಗಾಗಿ ಅವನು "ಜಯಶಾಲಿ" ಆಗಿರುವನೋ ಅಥವಾ ಪ್ರತಿಕೂಲ ಪ್ರಭಾವಗಳು ಆತನನ್ನು ಜಯಿಸಿವೆಯೋ ಎಂಬ ಗಾಢವಾದ ಪ್ರಶ್ನೆ ಏಳಲು ಕಾರಣವಾಗುತ್ತದೆ. ಜಯಶಾಲಿಗೆ ಮಾತ್ರವೇ ಬಹುಮಾನವು ವಾಗ್ದಾನ ಮಾಡಲ್ಪಟ್ಟಿರುವುದು.

ಕರ್ತನು ಬಯಸುವುದು ನೀತಿಯ ನಿಮಿತ್ತವಾಗಿ ಪ್ರತಿಕೂಲ ಪ್ರಭಾವಗಳನ್ನು ಜಯಿಸುವ, ಪೂರ್ಣ ನಂಬಿಕೆಯುಳ್ಳವರಾಗಿ ಆತನನ್ನು ಹಾಗೂ ಆತನ ಜನರನ್ನು ಪ್ರೀತಿಸುವ ಧೀರರಾದ ಜನರನ್ನು. ಮತ್ತಾಯನು ಕರ್ತನಿಗೆ "ಗುರುವೇ, ನನ್ನ ಕೆಲವು ಮಿತ್ರರನ್ನು ನಿನಗೆ ಪರಿಚಯಮಾಡಿ ಸತ್ಯದ ವಿಷಯದಲ್ಲಿ ಅವರ ಮೇಲೆ ಪ್ರಭಾವ ಉಂಟಾಗುವಂತೆ ಮಾಡಲು ನನ್ನ ಮನೆಯಲ್ಲಿ ಔತಣವನ್ನು ಮಾಡಿಸಿ ಅದಕ್ಕಾಗಿ ಅವರನ್ನು ಕರೆಯಲು ನನಗೆ ಬಹು ಇಷ್ಟವಾಗುತ್ತದೆ. ಆದರೆ ನನ್ನ ಮನೆಯಲ್ಲೇ ನನಗೆ ಸ್ವಾತಂತ್ರ್ಯವಿಲ್ಲ; ನನ್ನ ಹೆಂಡತಿಯು ಇದನ್ನು ಕೇಳುವುದಿಲ್ಲ ನನ್ನ ಮಕ್ಕಳು ಕ್ರಮವಿಲ್ಲದವರು ತಂದೆಯೆಂದು ನನ್ನನ್ನು ಗೌರವಿಸುವುದಿಲ್ಲ; ನಾನು ಈ ಔತಣದ ವಿಷಯವಾಗಿ ಮತ್ತು ನನ್ನ ಈ ಲಾಭದಾಯಕ ವೃತ್ತಿಯನ್ನು ಬಿಟ್ಟುಬಿಡುವುದನ್ನು ಅವರಿಗೆ ಹೇಳಿದ್ದೇಯಾದರೆ ಅವರು ಸಮಾಜದಲ್ಲಿ ತಮಗಿದ್ದ ಸ್ಥಿತಿಗತಿಗಳು ಇಲ್ಲವಾಗಿ ದುಂದುಗಾರಿಕೆಯ ಕೆಲವು ಸವಲತ್ತುಗಳನ್ನು ಕಳಕೊಳ್ಳುವೆವೆಂಬ ಭಯದಿಂದ ಅವರು ಮನನೊಂದವರಾಗಿ ದೊಡ್ಡ ಗಲಾಟೆಯೆಬ್ಬಿಸುವರೆಂದು ಮತ್ತಾಯನು ಕರ್ತನಿಗೆ ಹೇಳಿದ್ದೇಯಾದರೆ ನಾವು ಅವನ ವಿಷಯವಾಗಿ ಏನನ್ನು ಯೋಚನೆ ಮಾಡಬಹುದು?

ಆತನು ಅಪೋಸ್ತಲನಾಗಲು ಇಲ್ಲವೇ ಸಭೆಯ ಹಿರಿಯನಾಗಲು ಅಥವಾ ಸಭಾಸೇವಕನಾಗಲು ಪೌಲನು ವಿಧಿಸಿರುವ ಷರತ್ತುಗಳ ಪ್ರಕಾರ (1 ತಿಮೋಥೆ 3:4,5) ಬಹು ಅನರ್ಹವಾದ ಮನುಷ್ಯನಾಗುವನೆಂದು ನಾವು ಎಣಿಸುವೆವು. ಅಂಥವನು ಸಭೆಯಲ್ಲಿ ಯಾವುದೇ ಜವಾಬ್ದಾರಿಯುತ ಸ್ಥಾನವನ್ನು ಹೊಂದಲು ಯೋಗ್ಯನಲ್ಲವೆಂದು ಆತನನ್ನು ಕಡೆಗಣಿಸುವವರಾಗುವೆವು. ಒಬ್ಬ "ಜಯಶಾಲಿ" ಎನ್ನಿಕೊಳ್ಳುವುದಕ್ಕೆ ಆತನಲ್ಲಿ ಬಹು ಅಲ್ಪವಾದ ಲಕ್ಷಣಗಳಿದ್ದು, ತನ್ನ ಗುಣಗಳನ್ನು ಪ್ರಾಮಾಣಿಕವಾಗಿ ತಿದ್ದುಕೊಂಡು ಸರಿಪಡಿಸಿಕೊಳ್ಳದೇ ಹೋದಲ್ಲಿ ಆತನು ಬಿರುದನ್ನು ಕಳೆದುಕೊಳ್ಳುವ ದೊಡ್ಡ ಅಪಾಯದಲ್ಲಿರುವನು. ಮತ್ತಾಯನ ವಿಷಯದಲ್ಲಿ ನಾವು ಬೇರೆ ವಿಧವಾಗಿ ನಿರೀಕ್ಷಿಸಿ ಆತನು ಬಹು ದೃಢವಾದ ಗುಣವುಳ್ಳವನೆಂಬುದನ್ನು ಕಂಡುಕೊಳ್ಳಬೇಕಾಗುತ್ತದೆ. ಮತ್ತಾಯನಿಗೆ ತನ್ನ ಒಡೆಯನ ಹೆಜ್ಜೆಯಜಾಡಿನಲ್ಲಿ ನಡೆಯುವಂಥ ಗುಣಗಳು ಇಲ್ಲದಿದ್ದಲ್ಲಿ ಒಡೆಯನು ಆತನಿಗೆ "ನನ್ನನ್ನು ಹಿಂಬಾಲಿಸು" ಎಂದು ಹೇಳುತ್ತಿರಲಿಲ್ಲವೆಂದು ನಾವು ನಿರೀಕ್ಷಿಸುತ್ತೇವೆ. ಏಕೆಂದರೆ ನಮ್ಮ ಕರ್ತನಾದ ಯೇಸುವು ವಿನಯವುಳ್ಳವನೂ ಕರುಣೆಯೂ ಪ್ರೀತಿಯೂ ಉಳ್ಳವನಾದರೂ ಆತನು ಎಂದೂ ಬಲಹೀನನಾಗಲೀ ಅಥವಾ ಗುಣಹೀನನಾಗಲೀ ಅಗಿರಲಿಲ್ಲ.

ಮತ್ತಾಯನ ಹೆಂಡತಿ ಮತ್ತು ಆತನ ಕುಟುಂಬದ ವಿಷಯವಾಗಿ ನಾವು ಏನನ್ನು ಯೋಚಿಸುವೆವು, ಅವರು ಔತಣ ಮಾಡಿಸುವುದಕ್ಕೆ ಆಕ್ಷೇಪಿಸಿದ್ದರೆನ್ನುವುದೋ? ಭಯಭಕ್ತಿಯ ವಿಷಯದಲ್ಲಿ ಅವರು ನಿರೀಕ್ಷೆಯಿಲ್ಲದವರೆಂದು ಮತ್ತು ಆತನ ಹೆಂಡತಿಯು ಪತ್ನಿತ್ವದ ಮುಖ್ಯ ಲಕ್ಷಣಗಳನ್ನು ತಿಳಿಯದಿದ್ದು ಆಕೆಯು ಆತನಿಗೆ ಸಹಾಯಕಳಾಗುವ ಬದಲು ಅಡ್ಡಿಮಾಡುವವಳಾಗಿದ್ದಳೆಂದು ನಾವು ನಿಜವಾಗಿಯೂ ಪರಿಗಣಿಸಬಹುದಿತ್ತು. ಹೇಗಿದ್ದರೂ ಕರ್ತನೊಂದಿಗೆ ಒಂದು ವಿಶೇಷವಾದ ಆಶೀರ್ವಾದವು ಆ ಮನೆಗೆ ಬಂದಿತ್ತು.

## ಔತಣದಲ್ಲಿ ದೊರೆತ ಆತ್ಮಿಕ ಆಹಾರ

ಔತಣದಲ್ಲಿ ಭಾಗಿಯಾದವರನ್ನು ಬಿಟ್ಟು ಅಲ್ಲಿ ಬೇರೆ ಜನರ ಒಂದು ದೊಡ್ಡ ಗುಂಪೇ ಸೇರಿತ್ತೆಂದು ಔತಣದ ವಿಷಯವಾಗಿ ನೀಡಿರುವ ಬೇರೆ ವಿವರಣೆಯಿಂದ ಕಾಣಬರುತ್ತದೆ (ಇದು ಮತ್ತಾಯನನ್ನು ಕರೆದ ಕೆಲವು ವಾರಗಳ ಬಳಿಕ ನಡೆದಿರುವ ಸಂಭವವಿತ್ತು) (ಲೂಕ 5:29). ಆ ವಿವರಣೆಗಳಿಗೆ ಸಂಬಂಧಿಸಿದ ಸಂಗತಿಗಳ ಮೂಲಕವಾಗಿ ನಾವು ಕಲ್ಪಿಸಿಕೊಳ್ಳುವುದೆಂದರೆ ಅಂದು ಫರಿಸಾಯರು ಕ್ರಮವಾಗಿ ಮಾಡುವ ಉಪವಾಸದ ದಿನಗಳಲ್ಲಿ ಒಂದಾಗಿತ್ತೆಂಬುದು. ಈ ಅಂಶಗಳು ಮುಂದಿನ ಎರಡು ಪ್ರಶ್ನೆಗಳಿಗೆ ದಾರಿ ಮಾಡಿಕೊಡುತ್ತವೆ:

(1) ಏಕೆ ನಿಮ್ಮ ಬೋಧಕನು ಪವಿತ್ರತೆಯನ್ನು ತೋರ್ಪಡಿಸದ ಜನರ ಜೊತೆ ಸೇರುತ್ತಾನೆ? ಈ ಆಕ್ಷೇಪಣೆಯು ನಮ್ಮ ಕರ್ತನು ಸುಂಕದವರಿಗೆ ಮತ್ತು ಪಾಪಿಗಳಿಗೆ ಬೋಧಿಸಬಾರದೆನ್ನುವ ವಿಷಯಕ್ಕಾಗಿರಲಿಲ್ಲ; ಆದರೆ ಅದು ಅವರ ಜೊತೆಯಲ್ಲಿ ಊಟಮಾಡಬಾರದೆನ್ನುವದಕ್ಕಾಗಿತ್ತು. ಹಾಗೆ

ಮಾಡುವುದು ಸಾಮಾಜಿಕವಾಗಿ ಅವರೊಡನೆ ಸಮನಾಗಿರುವುದನ್ನು ಅದು ಸೂಚಿಸುವುದು. ಮತ್ತು ಹೀಗೆ ನಮ್ಮ ಕರ್ತನು ಹಾಗೂ ಆತನ ಅಪೋಸ್ತಲರು ತೋರಿಕೆಗೆ ದೇವರಿಗೆ ಪೂರ್ಣವಾಗಿ ಪ್ರತಿಷ್ಠಿತವಾದ ಜೀವನ ನಡೆಸುತ್ತಿದ್ದಾರೆಂದು ಫರಿಸಾಯರು ಸ್ಪಷ್ಟವಾಗಿ ಗ್ರಹಿಸಿಕೊಂಡರು.

ಈ ಪ್ರಶ್ನೆಗೆ ಉತ್ತರವಾಗಿ ನಮ್ಮ ಕರ್ತನು ಹೇಳಿದ್ದು, "ಕ್ಷೇಮದಿಂದಿರುವವರಿಗೆ ವೈದ್ಯನು ಬೇಕಾಗಿಲ್ಲ; ಕ್ಷೇಮವಿಲ್ಲದವರಿಗೆ ಬೇಕು." ವೈದ್ಯನು ಯಾರಿಗೆ ಉಪಶಮನ ನೀಡಲು ಬಯಸುವನೋ ಅವರ ಕೂಡ ಬೆರೆಯಲು ಆತನಿಗೆ ಹಕ್ಕಿರುವುದು; ಅವರನ್ನು ಗುಣಪಡಿಸಲು ಸೂಕ್ತವೆಂದು ತೋರುವ ಯಾವ ವಿಧದಲ್ಲಾದರೂ ಅವರೊಂದಿಗೆ ಬೆರೆಯಬಹುದು ಎಂಬುದು ಇದರಲ್ಲಿ ಅಡಕವಾಗಿರುವ ಒಳಾರ್ಥ. ಫರಿಸಾಯರಲ್ಲಿ ಅಸ್ವಸ್ಥತೆ ಇರಲಿಲ್ಲ ಹಾಗೂ ಕರ್ತನ ಸೇವೆಯ ಅಗತ್ಯ ಅವರಿಗೆ ಇರಲಿಲ್ಲವೆಂಬುದು ಈ ಮಾತಿನಲ್ಲಿ ಅಡಕವಾಗಿರಲಿಲ್ಲ. ನಿಜವಾದ ಸಂಗತಿಯೆಂದರೆ, ತಾವು ಪಾಪದಿಂದ ಅಸ್ವಸ್ಥರಾಗಿದ್ದೇವೆಂಬುದನ್ನು ಹಾಗೂ ತಮಗೆ ಒಳ್ಳೆಯ ಬೋಧನೆಯೆಂಬ ಔಷಧವನ್ನು ತೆಗೆದುಕೊಳ್ಳುವ ಮನೋಭಾವವಿಲ್ಲವೆಂಬುದನ್ನು ಅವರು ಒಪ್ಪಿಕೊಂಡಿರಲಿಲ್ಲ. ನಮ್ಮ ಕರ್ತನು ಇದೇ ಅಂಶವನ್ನು ಇದೇ ಸಂಬಂಧವಾಗಿ ಇನ್ನೊಂದು ವಿಧದಲ್ಲಿ ವ್ಯಕ್ತಪಡಿಸಿ ಹೀಗೆ ಹೇಳಿರುವನು, "ನಾನು ನೀತಿವಂತರನ್ನು ಕರೆಯುವುದಕ್ಕೆ ಬಂದವನಲ್ಲ, ಪಾಪಿಗಳನ್ನು ಕರೆಯುವುದಕ್ಕೆ ಬಂದವನು." ಯಾವನೇ ಒಬ್ಬನು ತನ್ನನ್ನು ತಾನೇ ನೀತಿವಂತನೆಂದು ಎಣಿಸಿಕೊಳ್ಳುತ್ತಾನೋ ಅವನು ಮಾನಸಾಂತರ ಹೊಂದುವ ಕರೆಗೆ ಹೊರತಾಗಿರುತ್ತಾನೆ. ಆತನು ನೀಡಿದ ಮೊದಲನೇ ಪಾಠವೆಂದರೆ ತಾನು ಪರಿಪೂರ್ಣನಲ್ಲ, ನೀತಿವಂತನೂ ಅಲ್ಲವೆಂಬುದನ್ನು ಕಲಿಯಬೇಕಿತ್ತು. ಆದುದರಿಂದ ಯಾರು ತಾವು ನೀತಿವಂತರಲ್ಲವೆನ್ನುವುದನ್ನು ಒಪ್ಪಿಕೊಂಡಿರುತ್ತಿದ್ದರೋ ಮತ್ತು ಹೀಗೆ ಯಾರ ಹೃದಯವು ಸತ್ಯವನ್ನು ಬಿತ್ತಲು ಇತರರಿಗಿಂತಲೂ ಉತ್ತಮವಾದ ನೆಲವಾಗಿತ್ತೋ ಮುಖ್ಯವಾಗಿ ಅವರ ಬಳಿಗೆ ನಮ್ಮ ಕರ್ತನು ಹೋಗುತ್ತಿದ್ದನು. ಸುಂಕದವನು ಮತ್ತು ಫರಿಸಾಯನು ಮಾಡಿದ ಪ್ರಾರ್ಥನೆಯ ವಿಷಯವಾಗಿ ಹೇಳಿದ ತನ್ನ ಸಾಮ್ಯದಲ್ಲಿ ನಮ್ಮ ಕರ್ತನು ಇದನ್ನು ತಿಳಿಸಿದ್ದಾನೆ. ಸುಂಕದವನು ತಾನು ಅಪೂರ್ಣನೆಂಬುದನ್ನು ಒಪ್ಪಿಕೊಂಡು ಕರುಣೆಗಾಗಿ ಬೇಡಿಕೊಂಡಿದ್ದ ಕಾರಣ ಅವನು ದೇವರ ದೃಷ್ಟಿಯಲ್ಲಿ ಉತ್ತಮವಾದ ಸ್ಥಿತಿಯಲ್ಲಿದ್ದನು ಎಂಬುದನ್ನು ಭರವಸೆಯಾಗಿ ಹೇಳಿದ್ದಾನೆ. ಸೌವಾರ್ತಿಕರಲ್ಲಿ ಮತ್ತೊಬ್ಬನು ನಮ್ಮ ಕರ್ತನ ಬೇರೊಂದು ಮಾತನ್ನು ಸೇರಿಸಿ ಹೀಗೆ ಹೇಳಿರುವನು, "ನೀವು ಹೋಗಿ––ನನಗೆ ಯಜ್ಞವು ಬೇಡ, ಕರುಣೆಯೇ ಬೇಕು ಎಂಬ ಮಾತಿನ ಅರ್ಥವನ್ನು ಕಲಿತುಕೊಳ್ಳಿರಿ." (ಮತ್ತಾಯ 9:13) ನಮ್ಮ ಕರ್ತನು ಇಲ್ಲಿ ಹೊಶೇಯ 6:6 ರಲ್ಲಿ ಇರುವುದನ್ನು ಸ್ಪಷ್ಟವಾಗಿ ಉಲ್ಲೇಖಿಸಿದ್ದನು. ಫರಿಸಾಯರು ಕಲಿಯಬೇಕಿದ್ದ ಪಾಠವೆಂದರೆ, ಅವರು ವಿಶೇಷವಾಗಿ ಮಾನ್ಯತೆ ನೀಡುತ್ತಿದ್ದ ಯಜ್ಞಗಳು, ತಮ್ಮನ್ನು ತಾವು ನಿರಾಕರಿಸಿಕೊಳ್ಳುವಿಕೆ, ಮರುಗ ಸೋಪು ಜೀರಿಗೆಗಳಲ್ಲಿ ಕೊಡುತ್ತಿದ್ದ ಹತ್ತರಲ್ಲೊಂದು ಪಾಲು ಹಾಗೂ ಈ ವಿಷಯಗಳು ತಾವು ಪರಿಶುದ್ಧರೆಂಬುದಕ್ಕೆ ಪುರಾವೆಗಳಾಗಿರುವುದೆಂದು ಇವುಗಳಲ್ಲಿ ಅವರು ಹೆಚ್ಚಳ ಪಡುತ್ತಿದ್ದುದು ಆದರೆ ದೇವರು ಕರುಣೆಯನ್ನು ಮೆಚ್ಚುವಂತೆ ಇವುಗಳನ್ನು ಮೆಚ್ಚುವುದಿಲ್ಲವೆಂಬುದು. ಅವರು ತಮ್ಮ ಜೊತೆಗಾರರಾದ ಯೆಹೂದ್ಯರ ವಿಷಯದಲ್ಲಿ ಅನುಕಂಪವುಳ್ಳವರಾಗಿರಬೇಕು. ಪಾಪದ ಸ್ಥಿತಿಯಿಂದ ಮೇಲೆತ್ತಿ ಅವರನ್ನು ಕರ್ತನ ಮತ್ತು ನೀತಿಯ ಪ್ರಭಾವಗಳ ಬಳಿಗೆ ತರುವುದರಲ್ಲಿ ಹರ್ಷಿಸುವುದನ್ನು ಉಂಟುಮಾಡುವ ಅನುಕಂಪಕ್ಕಾಗಿ ಹಂಬಲಿಸಬೇಕು. ದೇವರ ದೃಷ್ಟಿಯಲ್ಲಿ ಬಹು ಮೆಚ್ಚಿಕೆಯಾಗಿರುವ ಹಾಗೂ ತಾವು ಆತನಿಂದ ಕನಿಕರ ಹೊಂದುವುದಕ್ಕೆ ತಮ್ಮನ್ನು ಸಿದ್ಧಮಾಡುವಂಥ ಈ ಕನಿಕರ ಭಾವವನ್ನು ಹೊಂದಿಕೊಳ್ಳುವುದಕ್ಕೆ ಬದಲು ಅವರು ಇತರರನ್ನು ಕಡೆಗಣಿಸಿ ತಮ್ಮನ್ನು ಹೆಚ್ಚಿಸಿಕೊಳ್ಳುವ ಪ್ರೀತಿಯಿಲ್ಲದ ಮನೋಭಾವವನ್ನು ಹೊಂದಿದ್ದರು. ತಮ್ಮ ಸ್ವಸಾಮರ್ಥ್ಯದಲ್ಲಿ ಹಾಗೂ ತಮ್ಮ ಸ್ವಂತ ಸಾಧನೆಗಳ ಬಗ್ಗೆ ಸಂತೃಪ್ತರಾಗಿರುವ ಮನೋಸ್ಥಿತಿಯು ಕರ್ತನ ದೃಷ್ಟಿಯಲ್ಲಿ ಬಹು ನಿಂದನೀಯವಾಗಿರುವುದು. ಆ ಮನೋಸ್ಥಿತಿಯು ದೇವರ ಕನಿಕರದ ಮೂಲಕವಾಗಿ ಆಶೀರ್ವಾದ ಹೊಂದುವುದಕ್ಕೆ ಸಿದ್ಧವಾಗಿರುವುದಿಲ್ಲ.

## ಔತಣ ಉಪವಾಸ––ಛಾಯೆಗಳು ಹಾಗೂ ನಿಜರೂಪಗಳು

(2) ಮುಂದಿನ ಪ್ರಶ್ನೆಯು ಇದಾಗಿತ್ತು: ಫರಿಸಾಯರಾದ ನಾವು "ವಾರಕ್ಕೆ ಎರಡು ಸಾರಿ ಉಪವಾಸ ಮಾಡುವಲ್ಲಿ" ಮತ್ತು ಯೋಹಾನನ ಬೋಧನೆಗಳನ್ನು ಅನುಸರಿಸುವವರೂ ಸಹ ಉಪವಾಸ ಮಾಡುವಲ್ಲಿ ನಿಮ್ಮ ಗುರುವು ಮತ್ತು ಆತನೊಡನೆ ಇರುವವರು ಏಕೆ ಔತಣವನ್ನು ಉತ್ಸವವನ್ನು ಉಲ್ಲಾಸಗಳನ್ನು ಮಾಡುವರು? ನೀವು ಮತ್ತು ನಿಮ್ಮ ಗುರುವು ನಮ್ಮಂತೆ ಶ್ರದ್ಧೆಭಕ್ತಿಯುಳ್ಳವರಲ್ಲ ಎಂಬುದಕ್ಕೆ ಇದು ಸೂಚನೆಯಲ್ಲವೇ?

ಕರ್ತನ ಉತ್ತರವು ಸವಿಸ್ತಾರವಾಗಿಯೂ ಮತ್ತು ವಿಶಾಲ ಅರ್ಥವ್ಯಾಪ್ತಿಯುಳ್ಳದ್ದಾಗಿದ್ದು ಅದನ್ನು ಮನವರಿಕೆಮಾಡಿಕೊಳ್ಳಬೇಕಿದ್ದಲ್ಲಿ ಬಹುವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಆತನು ವಿವರಿಸಿ ಹೇಳಿದ್ದು;

(ಅ) ತನ್ನ ಶಿಷ್ಯರು ಅದ್ಭುತವಾದ ಆಶೀರ್ವಾದಗಳನ್ನು ಹೊಂದುತ್ತಿರುವ ಆ ಒಂದು ಸಮಯದಲ್ಲಿ ಅವರು ದುಃಖದಿಂದ ಶೋಕಿಸುವುದು ಸೂಕ್ತವಾಗಿರುವುದಿಲ್ಲ. ಅದು ಮದಲಿಂಗನು ಬಳಿಯಲ್ಲಿದ್ದು ಅವರ ಹೃದಯಗಳಲ್ಲಿ ಹರ್ಷವನ್ನುಂಟುಮಾಡಿ ಅವರನ್ನು ಪುನಶ್ಚೇತನಗೊಳಿಸಿ ಬಲಪಡಿಸುತ್ತಾ ಅವರ ಮನೋನೇತ್ರಗಳನ್ನು ಬೆಳಗಿಸಿ ತಮಗೆ ಲಭಿಸುತ್ತಿದ್ದ ದೇವಾನುಗ್ರಹವನ್ನು ಅರಿತುಕೊಳ್ಳುವಂತೆ ಅವರ ಕಿವಿಗಳನ್ನು ತೆರೆಯಲಾಗುವ ಒಂದು ಸಮಯ. ಇಂಥ ಒಂದು ಸಮಯವು ಉಪವಾಸ ಮಾಡುವುದು ಮತ್ತು ಶೋಕಿಸುವುದಕ್ಕೆ ಸೂಕ್ತವಲ್ಲ. ಇಷ್ಟರಲ್ಲೇ ಮದಲಿಂಗನು ದೂರ ಹೋಗುವನು; ಆ ಸಮಯದಲ್ಲಿ ಬಹು ದಿಗ್ಭ್ರಾಂತಿ ದುಃಖ ಉಂಟಾಗುವದು. ಆಗ ಉಪವಾಸ ಮಾಡುವುದು ಸೂಕ್ತವಾಗಿರುವುದು. ಮತ್ತು ಇದು ಖಂಡಿತವಾಗಿ ನೆರವೇರಿತ್ತು; ಅಂಧಕಾರ ವಿಪತ್ತಿನ ಸಮಯದಲ್ಲಿ ಶಾರೀರಿಕವಾಗಿ ತಮ್ಮನ್ನು ಕುಗ್ಗಿಸಿಕೊಂಡು ಕರ್ತನಿಗೆ ಬಹು ಸಮೀಪವಾಗಿರುವುದಕ್ಕೆ ಬಯಸಲು ಕರೆಯಲ್ಪಟ್ಟಿರುವದಾಗಿ ಕರ್ತನ ಜನರಿಗೆ ಸುವಾರ್ತಾಯುಗದ ಪರ್ಯಂತರ ಆಗಿಂದಾಗ್ಗೆ

ಅನ್ನಿಸುತ್ತಿರುವುದು. ಈ ಉದ್ದೇಶಕ್ಕಾಗಿ ಉಪವಾಸ ಮಾಡುವುದು ಒಂದು ಅಮೂಲ್ಯವಾದ ವಿಧಾನವೆಂಬುದನ್ನು ಕಂಡು ಕೊಂಡಿರುವರು.

ಆದರೆ ಉಪವಾಸವೆನ್ನುವುದಕ್ಕೆ ತಮ್ಮನ್ನು ನಿರಾಕರಿಸಿ ಕೊಳ್ಳುವುದು ಎಂಬ ಅರ್ಥವಿದ್ದು ಛಾಯಾರೂಪದಲ್ಲಿ ಅದಕ್ಕೆ ಒಂದು ಮಹತ್ವವಿರುವುದು. ಒಡೆಯನು ತನ್ನ ಜನರೊಂದಿಗೆ ಇರುವಷ್ಟು ಕಾಲ, ವಿಶೇಷವಾಗಿ ಆತನು ಜನಸಮೂಹದವರಿಂದ ಗೌರವಿಸಲ್ಪಡುತ್ತಿದ್ದಾಗ, ಹೋಲಿಸಿ ನೋಡಿದ್ದಲ್ಲಿ ಆತನ ಶಿಷ್ಯರಾಗಲು ಅವರಿಗೆ ಅಲ್ಪ ಪ್ರಮಾಣದಲ್ಲಿ ತಮ್ಮನ್ನು ನಿರಾಕರಿಸಿಕೊಳ್ಳುವ ಅಗತ್ಯವಿತ್ತು. ಆತನ್ನು ಹಿಂಬಾಲಿಸಲು ಕರೆಯಲ್ಪಡುವುದು ಹಲವು ವಿಧದಲ್ಲಿ ಒಂದು ಗೌರವವಾಗಿತ್ತು. ಮತ್ತು ಆತನನ್ನು ಹಿಂಬಾಲಿಸುವುದಕ್ಕಾಗಿ ಲೌಕೀಕ ವಿಷಯಾಸಕ್ತಿಗಳನ್ನು ತ್ಯಾಗಮಾಡುವುದು ಒಂದು ಗೌರವವಾಗಿತ್ತು. ಈ ವಿಧವಾಗಿ ತಮ್ಮನ್ನು ನಿರಾಕರಿಸಿಕೊಳ್ಳುವುದು ಅಥವಾ ಉಪವಾಸಮಾಡುವುದು ನಿಜವಾಗಿಯೂ ಅವರಿಗೆ ಉಲ್ಲಾಸದ ಒಂದು ಔತಣವನ್ನಾಗಿ ಮಾಡಿತ್ತು. ಆದರೆ ನಂತರದಲ್ಲಿ ಒಡೆಯನು ತನ್ನ ಶತ್ರುಗಳ ಬಂಧಗಳಿಗೆ ಸಿಲುಕಿದವನಾಗಿ ಅತನ ಧ್ಯೇಯೋದ್ದೇಶಗಳು ಜನಪ್ರಿಯತೆಯನ್ನು ಕಳಕೊಂಡು ಜನಸಮೂಹವು ಆತನ ಮರಣಕ್ಕಾಗಿ ಕೂಗಾಡುವಾಗ ಅವರಿಗೆ ಪರಿಶೋಧನೆಗಳು ಉಂಟಾದವು. ಆಗ ಆತನನ್ನು (ಕ್ರಿಸ್ತನೆಂದು) ಅರಿಕೆಮಾಡಿ ಆತನನ್ನು ಹಿಂಬಾಲಿಸಲು ಅವರಿಗೆ ತಮ್ಮನ್ನು ನಿರಾಕರಿಸಿಕೊಳ್ಳುವುದು (ಅಂದರೆ ನಿಜರೂಪದ ಉಪವಾಸ) ಅಗತ್ಯವಾಯಿತು. ಮತ್ತು ಸುವಾರ್ತಾಯುಗದ ಪರ್ಯಂತರವೂ ಹೀಗೆಯೇ; ಯಾರೂ ತಮ್ಮ ಶಾರೀರಿಕ ಇಚ್ಛೆಹಸಿವುಗಳನ್ನು ತಿರಸ್ಕರಿಸಿ ತಮ್ಮನ್ನು ನಿರಾಕರಿಸಿಕೊಳ್ಳದೆಯೇ ಅಂದರೆ ಉಪವಾಸ ಮಾಡದೆಯೇ ಯಜ್ಞದ ಕುರಿಯನ್ನು ಹಿಂಬಾಲಿಸಲು ಅಸಾಧ್ಯವಾಗತೊಡಗಿತು. ನೂತನ ಸೃಷ್ಟಿಯ ಹಿತಕ್ಕಾಗಿ ಹಾಗೂ ಅದರ ಆತ್ಮಿಕ ಅಭಿವೃದ್ಧಿಯ ಸಲುವಾಗಿ ಶಾರೀರಿಕ ಇಚ್ಛೆಗಳಲ್ಲಿ ಕೆಲವನ್ನು ತ್ಯಜಿಸುವುದು ಹಾಗೂ ಬೇರೆಯದನ್ನು ನಿಗ್ರಹಿಸುವುದು ಅಗತ್ಯ.

ಈಗ ಅಂದರೆ ಕರ್ತನ ಎರಡನೆಯ ಪ್ರತ್ಯಕ್ಷತೆಯಲ್ಲಿ ಔತಣ ಉಲ್ಲಾಸಗಳು ಪ್ರಾರಂಭವಾಗಿವೆಯೆಂದು ನಾವು ಹೇಳಬಹುದು. ಆತ್ಮಿಕ ದೃಷ್ಟಿಯಿಂದ ಬಹು ವಿಶೇಷವಾದ ಆಶೀರ್ವಾದಗಳು, ಬಹು ಹೇರಳವಾಗಿರುವ ರುಚಿರುಚಿಯಾದ ಆತ್ಮಿಕ ಆಹಾರಗಳು ದೊರೆಯಲಾಗುತ್ತಿದ್ದು ಯಾರು ಕರ್ತನ ಔತಣದ ಗೃಹಕ್ಕೆ ಆಹ್ವಾನಿಸಲ್ಪಟ್ಟಿರುವರೋ ಮತ್ತು ಯಾರನ್ನು ಊಟಕ್ಕೆ ಕೂತುಕೊಳ್ಳುವಂತೆ ಮಾಡಲಾಗಿದೆಯೋ ಮತ್ತು ಯಾರಿಗೆ ಅತನು (ತನ್ನ ಬೊಕ್ಕಸದೊಳಗಿಂದ) ಹೊಸ ಮತ್ತು ಹಳೆಯ ವಸ್ತುಗಳನ್ನು ತೆಗೆದು ಹಂಚುತ್ತಿದ್ದಾನೋ, ಅಂದರೆ ಯಾರಿಗೆ ಹೊಸದಾಗಿ ಸಿದ್ಧಮಾಡಿದ ಹಾಗೂ ಪುನಶ್ಚೇತನಗೊಳಿಸುವ ಆಹಾರವನ್ನು ನೀಡಲಾಗುತ್ತಿದೆಯೋ ಅವರಿಗೆ ಉಪವಾಸ ಕಾಲಗಳು ಹೋಗಿ ಕರ್ತನ ಸೌಭಾಗ್ಯದಲ್ಲಿ ಸೇರಿ ಉಲ್ಲಾಸಿಸುವ ಕಾಲಗಳು ಆರಂಭವಾದಂತೆ ಕಾಣುತ್ತಿದೆ. ಆಂದರೆ ಶಾರೀರಿಕವಾದ ಕಷ್ಟಪರಿಶೋಧನೆಗಳು ಇಲ್ಲವೆಂದಲ್ಲ; ಆದರೆ ಆತನ ಜನರು ಹೊಸ ಸೃಷ್ಟಿಗಳಾಗಿ ಕಾಲಕಾಲಕ್ಕೆ ನೀಡಲಾಗುತ್ತಿರುವ (ಆತ್ಮಿಕ) ಆಹಾರದಿಂದ ಹೇಗೆ ಪುನಶ್ಚೇತನಗೊಂಡು ಉಲ್ಲಾಸವಾಗಿರುವರೆಂದರೆ ಅವರಿಗೆ ಆ ಮಾರ್ಗದಲ್ಲಿ ಸಾಂಧರ್ಬಿಕವಾಗಿ ಬರುತ್ತಿರುವ ಕಷ್ಟಪರಿಶೋಧನೆಗಳು ಮತ್ತು ತಮ್ಮನ್ನು ನಿರಾಕರಿಸಿಕೊಳ್ಳುವುದನ್ನು (ಉಪವಾಸಗಳು) ತಾವು ಅನುಭವಿಸುತ್ತಿರುವ ಚೈತನ್ಯ ದಾಯಕವಾದ ಆತ್ಮಿಕ ವಿಷಯಗಳಿಗೆ ಹೋಲಿಸಿ ನೋಡಿದಲ್ಲಿ ಅವರಿಗೆ ಈ ಮಾರ್ಗದಲ್ಲಿ ಸಾಂಧರ್ಭಿಕವಾಗಿ ಉಂಟಾಗುತ್ತಿರುವ ಕಷ್ಟ ಪರಿಶೋಧನೆಗಳು ಮತ್ತು ತಮ್ಮನ್ನು ನಿರಾಕರಿಸಿ ಕೊಳ್ಳುವಿಕೆಗಳು (ಉಪವಾಸಗಳು) ಈಗ ಬಹು ಹಗುರವೆಂದು ಕಾಣಬರುತ್ತಿದೆ. ಆದಾಗ್ಯೂ ಇವು ಮುಂದೆ ಸ್ವಲ್ಪ ಸಮಯದಲ್ಲೇ ಆನಂದಿಸಲಿರುವ ಆ ದೊಡ್ಡ ವಿವಾಹದ ಔತಣಕೂಟದ ಮುನ್ನೋಟಗಳು.

(ಆ) ತನ್ನ ಶಿಷ್ಯರೊಡನೆ ನಮ್ಮ ಕರ್ತನು ಪ್ರತ್ಯಕ್ಷನಾಗಿರುವಾಗ ದುಃಖವು ಪರಿಹಾರವಾಗುವುದೆಂಬ ಸತ್ಯ ಸಂಗತಿಯ ಜೊತೆಯಲ್ಲಿ ಇರುವ ಮತ್ತೊಂದು ಸತ್ಯ ಸಂಗತಿಯನ್ನು ಫರಿಸಾಯರು ಗ್ರಹಿಸಲಾರರು. ಅದೇನೆಂದರೆ ನಮ್ಮ ಕರ್ತನ ಕಾರ್ಯವು ಯೆಹೂದ್ಯರ ಧಾರ್ಮಿಕ ಏರ್ಪಾಡು ವ್ಯವಸ್ಥೆಯನ್ನು ತಿದ್ದಿಸರಿಪಡಿಸುವ ಸ್ನಾನಿಕನಾದ ಯೋಹಾನನ ಮತಸುಧಾರಣೆಯ ಕಾರ್ಯದಂತದ್ದಲ್ಲ. ಯೋಹಾನನ ಕಾರ್ಯಭಾರವು ಆತನಿಗೆ ಸಾಧ್ಯವಾದಲ್ಲಿ ನೆರವೇರಿಸುವಂಥ ದ್ದಾಗಿತ್ತು, ಆದರೆ ಆತನು ಅದರಲ್ಲಿ ವಿಫಲನಾಗಿ ತಲೆಹೊಯ್ಯಿಸಿ ಕೊಂಡನು; ಹಾಗೂ ಯೇಸುವು ಮಾಡುತ್ತಿದ್ದುದು ಪೂರ್ಣವಾಗಿ ಹೊಸರೀತಿಯದ್ದಾಗಿತ್ತು. ಆತನು ತನ್ನ ಉಪದೇಶದಿಂದ ಯೆಹೂದ್ಯ ಮತವನ್ನು ಸುಧಾರಣೆ ಮಾಡಲು ಪ್ರಯತ್ನಿಸದೆ ತಾನು ಪೂರ್ಣವಾದ ಒಂದು ಹೊಸ ವ್ಯವಸ್ಥೆಯನ್ನು ಸಂಸ್ಥಾಪನೆ ಮಾಡುತ್ತಿದ್ದನು, ಅದೇನೆಂದರೆ ಸಭೆಯನ್ನು ಆದುಕೊಂಡು ಕೂಡಿಸಿಕೊಳ್ಳುತ್ತಿದ್ದುದು; ಅದು ಯೆಹೂದ್ಯ ಮತದ ಸಭೆಯಾಗಿರಲಿಲ್ಲ ಇಲ್ಲವೇ ಸುಧಾರಣೆ ಹೊಂದಿದ ಯೆಹೂದ್ಯರ ಸಭೆಯಾಗಿರಲಿಲ್ಲ ಆದರೆ ಅದು ಕ್ರೈಸ್ತರ ಸಭೆಯಾಗಿತ್ತು. ಈ ಕಾರಣಕ್ಕಾಗಿಯೇ ಆತನು ಫರಿಸಾಯರೊಡನೆ ಸಂಭಾಷಿಸಲು, ಅವರ ಪದ್ಧತ್ತಿಯ ಯುಕ್ತಾಯುಕ್ತತೆಯನ್ನು ಪುನರ್ವಿಮರ್ಶೆಮಾಡಿ ಅದನ್ನು ಸರಿಪಡಿಸುವುದಕ್ಕಾಗಿ ಪ್ರಯತ್ನಿಸುತ್ತಿರಲಿಲ್ಲ. ಸವೆದು ಹೋಗಿ ತೇಗೆದು ಹಾಕಲಾದ ವಸ್ತ್ರವನ್ನು ಆತನು ಹಾಗೆಯೇ ಬಿಟ್ಟು ಒಂದು ಹೊಸ ವಸ್ತ್ರವನ್ನು ದೊರಕಿಸಿ ಕೊಡುತ್ತಿದ್ದನು. ಅದು ಧರ್ಮಶಾಸ್ತ್ರವು ಬಯಸುವ, ದೊರೆಯಲು ಅಸಾಧ್ಯವಾದ ನೀತಿಯಂಥದ್ದಲ್ಲ; ಆದರೆ ಅದು ತಾನು ಪಾಪ ಪರಿಹಾರಕ್ಕಾಗಿ ಅರ್ಪಿಸಿದ ಯಜ್ಞದ ಫಲವಾಗಿ ನಂಬಿಕೆಯ ಮೂಲಕ ಪಡೆಯಲಾಗುವ ನೀತಿಯ ವಿಷಯದ್ದಾಗಿತ್ತು.

ಆತನು ಕ್ರೈಸ್ತಧರ್ಮವನ್ನು ಯೆಹೂದ್ಯ ಮತದೊಂದಿಗೆ ಸೇರಿಸುವ ಪ್ರಯತ್ನಮಾಡಿದ್ದೇ ಆಗಿದ್ದಲ್ಲಿ ಅದರ ಫಲವು ಇಬ್ಬರಿಗೂ ವಿನಾಶಕಾರಿಯಾಗಿ ಪರಿಣಮಿಸುತ್ತಿತು. ಯಾಕೆಂದರೆ ಅವುಗಳೆರಡೂ ಒಂದಕ್ಕೊಂದು ತದ್ವಿರುದ್ಧವಾದವುಗಳು; ಒಂದರ ಬೇಡಿಕೆಯು ಪಾಪಿಗಳಿಗೆ ಅಸಾಧ್ಯವಾಗಿರುವ ಪರಿಪೂರ್ಣವಾದ ನೀತಿ; ಮತ್ತೊಂದರ ಬೇಡಿಕೆಯು ಸ್ವನೀತಿಯು ಅಸಾಧ್ಯವೆಂಬುದನ್ನೂ ಪಾಪಕ್ಷಮೆ ಮತ್ತು ಕರುಣೆ ಹೊಂದುವುದಕ್ಕೆ ಕೇವಲ ನಂಬಿಕೆಯೊಂದೇ ಅದಕ್ಕಿರುವ ಷರತ್ತೆಂಬುದನ್ನೂ ಒಪ್ಪಿಕೊಳ್ಳುವುದು.

(ಇ) ಈ ದಿನಗಳಲ್ಲಿ ಉಪಯೋಗಿಸುವ ಪೀಪಾಯಿ ಹಾಗೂ ಬಾಟಲುಗಳಿಗೆ ಬದಲಾಗಿ ಆಗಿನ ಕಾಲದಲ್ಲಿ ಉಪಯೋಗಿಸುತ್ತಿದ್ದ ಪ್ರಾಣಿ ಚರ್ಮದಿಂದ ಮಾಡಿದ ಬುದ್ದಲಿಗಳ ದೃಷ್ಟಾಂತದ ಮೂಲಕವಾಗಿ ಇದೇ ಪಾಠವನ್ನು ವಿವರಿಸಿ ಹೇಳಲಾಗಿತ್ತು. ಬಾಟಲುಗಳು ಎಂದು ಕರೆಯಲ್ಪಡುವ ಇಂಥ ಚರ್ಮದ ವಸ್ತುಗಳು ಈಗಿನ ಕಾಲದಲ್ಲೂ ಪ್ರಪಂಚದ ಹಲವು ಭಾಗಗಳಲ್ಲಿ ಬಳಕೆಯಾಗುತ್ತಿರುವುದು ನಿಜವೇ. ಇಂಥ ಚರ್ಮದ ಬಾಟಲುಗಳಲ್ಲಿ ಹೊಸ ದ್ರಾಕ್ಷಾರಸವನ್ನು ತುಂಬಿದರೆ ಹುಳಿಮದ್ಯವಾಗುವಾಗ ಅದು ಒಡೆದು ಹೋಗುವ ಮಟ್ಟಿಗೆ ಉಬ್ಬುತ್ತಾಬರುತ್ತದೆ. ಆದುದರಿಂದ ಅಂಥ ಚರ್ಮದ ಬಾಟಲುಗಳಲ್ಲಿ ಹೊಸ ದ್ರಾಕ್ಷಾರಸವನ್ನು ತುಂಬಿಡುವುದಿಲ್ಲ, ಏಕೆಂದರೆ ಆ ಚರ್ಮದ ಬಾಟಲುಗಳಲ್ಲಿ ಹಿಗ್ಗುವ ಗುಣವು ಹೋಗಿರಲಾಗಿ ಹೊಸ ದ್ರಾಕ್ಷಾರಸವು ಅದನ್ನು ಹಿಗ್ಗಿಸಿ ಒಡೆದುಹಾಕುತ್ತದೆ. ನಮ್ಮ ಕರ್ತನು ಇಲ್ಲಿ ಕಲಿಸುತ್ತಿದ್ದ ಪಾಠವೆಂದರೆ, ಯೆಹೂದ್ಯಮತವು ತನ್ನ ಕಾರ್ಯವನ್ನು ಮುಗಿಸಿರಲಾಗಿ, ಆತನನ್ನು ಕೇಳುತ್ತಿದ್ದವರು ನಿರೀಕ್ಷಿಸಿದ್ದಂತೆ, ಅದನ್ನು ಸುಧಾರಣೆಮಾಡುವುದು ದೇವರ ಉದ್ದೇಶವಾಗಿರಲಿಲ್ಲ. ಆ ಮತಪದ್ಧತಿಯು ಸತ್ವವನ್ನು ಕಳೆದುಕೊಂಡಿತ್ತು ಮತ್ತು ಈ ಯೆಹೂದ್ಯಮತಕ್ಕೆ ಹೊಸ ಬೋಧನೆಗಳನ್ನು ಸೇರಿಸುವ ಅಂದರೆ ಹೊಸ ದ್ರಾಕ್ಷಾರಸವನ್ನು ತುಂಬುವ ಪ್ರಯತ್ನ ಮಾಡಿದ್ದಲ್ಲಿ ಯೆಹೂದ್ಯ ಜನಾಂಗವು ಅದರ ಸೆಳವಿನಿಂದ ಛಿದ್ರವಾಗುತ್ತಿದ್ದುದು ಮಾತ್ರವಲ್ಲದೆ ಆ ಹೊಸ ಬೋಧನೆಗಳೂ ಸಹ ಆ ಜನಾಂಗದೊಂದಿಗೆ ಛಿದ್ರವಾಗಿ ಹೋಗುತ್ತಿದ್ದವು. ಆದುದರಿಂದ ಆಗ ಬರಲಿದ್ದ ಹೊಸದಾದ ಕೃಪೆ ಮತ್ತು ಸತ್ಯವನ್ನು ಸ್ವೀಕರಿಸಬೇಕಿದ್ದ "ಒಂದು ಪರಿಶುದ್ಧ ಜನಾಂಗವೂ, ಸ್ವಕೀಯ ಜನರೂ" ಆಗುವುದಕ್ಕಾಗಿ ಒಂದು ಹೊಸ ಇಸ್ರಾಯೇಲು ಪ್ರಾರಂಭವಾಗ ಬೇಕೆಂಬುದು ದೇವರ ಯೋಜನೆಯಾಗಿತ್ತು.

ಇದೇ ರೀತಿ ಈಗಲೂ ಸುವಾರ್ತಾಯುಗದ ಅಂತ್ಯದಲ್ಲಿ ಒಡೆಯನು ಈಗ ಒದಗಿಸುತ್ತಿರುವ ಹೊಸ ದ್ರಾಕ್ಷಾರಸವನ್ನು ಕ್ರೈಸ್ತಪಂಗಡಗಳೆಂಬ ಹಳೆಯ ಚರ್ಮದ ದ್ರಾಕ್ಷಾರಸಬುದ್ದಲಿಗಳಲ್ಲಿ ತುಂಬಿಸುವುದು ಅಸಾಧ್ಯವೆಂಬುದನ್ನು ನಾವು ಗ್ರಹಿಸಿದ್ದೇವೆ. ಕ್ರೈಸ್ತಪಂಗಡದವರೆಲ್ಲರೂ ಸಹ ಇದನ್ನು ಮನಗಂಡಿರುವರು. ಈಗ ಪ್ರಕಟವಾಗುತ್ತಿರುವ ಪ್ರಸ್ತುತಕಾಲದ ಸತ್ಯವನ್ನು ಅವರ ಪಂಗಡಗಳು ಪಡೆದುಕೊಂಡಲ್ಲಿ ಅದರ ಅರ್ಥ ನಿಸ್ಸಂಶಯವಾಗಿ ತಮ್ಮ ಪಂಗಡಗಳ ಸಂಪೂರ್ಣ ವಿನಾಶವೆಂಬುದು ಅವರ ಗ್ರಹಿಸಿಕೆಗೆ ಬಂದಿದೆ. ಆದುದರಿಂದ ದೇವರು ಯೆಹೂದ್ಯರ (ಧರ್ಮಶಾಸ್ತ್ರ) ಯುಗದ ಅಂತ್ಯದಲ್ಲಿ ಮಾಡಿದಂತೆ ತನ್ನ ಕೈಯಲ್ಲಿರುವ ನೂತನವಾದ ದೈವಾನುಗ್ರಹವ್ಯವಸ್ಥೆಯೆಂಬ ದ್ರಾಕ್ಷಾರಸವನ್ನು (ಬೋಧನೆಗಳನ್ನು) ಪಡಕೊಳ್ಳಲು ಈ ಕ್ರೈಸ್ತಮತದ ಎಲ್ಲಾ ಪಂಗಡಗಳೊಳಗಿಂದ ನಿಜವಾದ ಇಸ್ರಾಯೇಲ್ಯರನ್ನು ಹೊರಗೆ ಕರೆಯುತ್ತಿದ್ದಾನೆ. ಹಳೆಯ ಕ್ರೈಸ್ತಪಂಗಡದ ಸಂಸ್ಥೆಗಳ ಬಗ್ಗೆ ಹೇಳುವುದಾದರೆ, ದೇವರ ಯೋಜನೆಯ ವಿಷಯವಾದ ಒಂದು ಉದ್ದೇಶವನ್ನು ಇವು ಸ್ವಲ್ಪಮಟ್ಟಿಗೆ ಒಳ್ಳೆಯ ರೀತಿಯಲ್ಲಿ ಸ್ವಲ್ಪಮಟ್ಟಿಗೆ ಕೆಟ್ಟ ರೀತಿಯಲ್ಲಿ ಈಡೇರಿಸಿವೆ. ದೇವರ ಯೋಜನೆಯ ಸಂಬಂಧವಾಗಿ ಹೇಳುವುದಾದರೆ ಇವುಗಳ ಕಾರ್ಯವು ಮುಕ್ತಾಯವಾಗುತ್ತಿದೆ. ಬಾಬೆಲಿನಲ್ಲಿ ವಧುವರರ ಸ್ವರವು ಇನ್ನು ಕೇಳಿಸುವುದಿಲ್ಲ. (ಪ್ರಕಟನೆ 18:23) ಅದನ್ನು ಕೇಳಿಸಿಕೊಳ್ಳಲು ಬಾಬೆಲು ಬಿಡುವುದಿಲ್ಲ. ಇದರ ಪರಿಣಾಮವಾಗಿ ಆ ಸ್ವರವು ಅಂದರೆ ಪ್ರಸ್ತುತ ಸತ್ಯದ ವಿಷಯವಾದ ಬೋಧನೆಗಳು ಅದರ ಗೋಡೆಗಳ ಹೊರಗೆ ಕೇಳತೊಡಗಿದೆ. ಮತ್ತು ಯಾರಿಗೆ ಸತ್ಯವನ್ನು ಕೇಳುವ ಕಿವಿಗಳು ಇರುವವೋ, ಯಾರು ಪ್ರಸ್ತುತ ಸತ್ಯವನ್ನು ಹಿಡಿದಿಟ್ಟುಕೊಳ್ಳಲು ಇಚ್ಛಿಸುವರೋ ಅವರು ಅದನ್ನು ತುಂಬಿಕೊಂಡು ಆಶೀರ್ವಾದ ಹೊಂದಲು ಆ ಪಂಗಡಗಳಿಂದ ಹೊರಗೆ ಬರುವವರಾಗಬೇಕು. ಹೀಗಾದಲ್ಲಿ ಅವರು ಆ ಆಶೀರ್ವಾವನ್ನು ಇತರರಿಗೆ ನೀಡುವ ಸಾಧನಗಳಾಗಿ ಉಪಯೋಗಿಸಲ್ಪಡಬಹುದು. –– ಪ್ರಕಟನೆ 18:4,23

## ಟಿಪ್ಪಣಿ



"ವಧಿತನಾದ ಕುರಿಯಾದಾತನು
ಬಲ ಐಶ್ವರ್ಯ ಜ್ಞಾನ ಸಾಮರ್ಥ್ಯ
ಮಾನ ಪ್ರಭಾವ ಸ್ತೋತ್ರಗಳನ್ನು
ಹೊಂದುವದಕ್ಕೆ ಯೋಗ್ಯನು
ಎಂದು ಹೇಳಿದರು.

ಇದಲ್ಲದೆ ಆಕಾಶದಲ್ಲಿಯೂ
ಭೂಮಿಯ ಮೇಲೆಯೂ
ಭೂಮಿಯ ಕೆಳಗೂ ಸಮುದ್ರದ
ಮೇಲೆಯೂ ಇರುವ ಎಲ್ಲಾ ಸೃಷ್ಟಿಗಳು
ಅಂದರೆ ಭೂಮ್ಯಾಕಾಶಸಮುದ್ರಗಳೊಳಗೆ
ಇರುವುದೆಲ್ಲವೂ ಸಿಂಹಾಸನಾಸೀನನಿಗೂ ಯಜ್ಞದ ಕುರಿಯಾದಾತನಿಗೂ
ಸ್ತೋತ್ರ ಮಾನ ಪ್ರಭಾವ ಆಧಿಪತ್ಯಗಳು ಯುಗಯುಗಾಂತರಗಳಲ್ಲಿಯೂ
ಇರಲಿ ಎಂದು ಹೇಳುವುದನ್ನು ಕೇಳಿದೆನು."

**ಪ್ರಕಟನೆ 5:12, 13**